ಡಿಯಾರದಲ್ಲಿ ವೇಳೆಯನ್ನು ನೋಡಿಕೊಂಡು ಗಂಟೆ ರುನ್ನು ಬಾರಿಸಿದರು. ಆಗ ಎಲ್ಲ ಬಾಲಕ ಬಾಲಿಕೆಯರು ನಾವಾಗಿ ಪ್ರಾರ್ಥನಾ ಮಂದಿರಕ್ಕೆ ಬಂದು ಸಾಲಿನಲ್ಲಿ ಸಿಳಿತುಕೊಂಡರು. ಆಗ ಮುಖ್ಯ ಮಂತ್ರಿ ಮತ್ತು ಸಂಸ್ಕೃತಿ ಮಂತ್ರಿಯವರು ಬಂದು ಸಂಪತರಾಯರಿಗೆ ಂದನೆ ಅರ್ಪಿಸಿ, ಪ್ರಾರ್ಥನೆ ಮಾಡುವದಕ್ಕೆ ಬರಬೇಕೆಂದು ನಂತಿ ಮಾಡಿಕೊಂಡರು. ಆಗ ಪ್ರಧಾನ ಗುರೂಜಿಯ ರು ಸಂಪತರಾಯರನ್ನು ಕರೆದುಕೊಂಡು ಪ್ರಾರ್ಥನಾ ುಂದಿರಕ್ಕೆ ಹೋದರು. ಎಲ್ಲ ಗುರೂಜಿಯವರು ಸಹಿತ ಲ್ಲಿಗೆ ಬಂದು ತಮ್ಮ ತಮ್ಮ ಸ್ಥಳಗಳನ್ನು ವ್ಯಾಪಿಸಿದರು.

ಪಾರ್ಥನಾಮಂದಿರದಲ್ಲಿ ಸಂಸ್ಕೃತಿ ಮಂತ್ರಿಯವರು ಸಾವಧಾನ" ಎಂದು ಅಂದರು. ೨ ನಿಮಿಷಗಳಾದ ಮೇಲೆ ಶಾಂತಿ" ಅಂದರು. ಕೆಲಹೊತ್ತು ಎಲ್ಲರು ಸ್ತಬ್ಧವಾಗಿ ುತ್ತು ಮೌನವಾಗಿ ಕುಳಿತರು. ಆ ಮೇಲೆ ಪ್ರಾರ್ಥನೆ ಪ್ರಾರಂಭಿಸಿದರು. ಎಲ್ಲರೂ ಕೂಡಿ ಒಂದೇ ಸ್ವರದಲ್ಲಿ ಂಭೀರವಾಗಿ 'ಹೇ ಜಗತ್ಪಾತಾ" ಹಾಡಿದರು. ಆ ಮೇಲೆ ುರಾಣ ಪಠಣ ಮತ್ತು ಬಾಯಿಬಲ್ಲಗಲ್ಲಿದ್ದ ಪಾರ್ಥನೆ ಗಳನ್ನು ಕ್ರಮವಾಗಿ ಅಂದರು. ಆ ಮೇಲೆ ಒಬ್ಬ ುಡಿಗೆ ವಚನ ಅಂದಳು. ಅನಂತರ ಒಬ್ಬ ವಿದ್ಯಾರ್ಥಿಯು ಪಂಚಾಂಗ ಹೇಳಿದನು. ಆ ಮೇಲೆ ಒಬ್ಬನು"ಸಮಾಧಾನವೇ ುಖ" ಎಂದು ಅಮರವಾಣಿ ವಿವರಿಸಿ ಹೇಳಿದನು. ುಪತ್ಸ್ವದ ಸುದ್ದಿಗಳನ್ನು ಹೇಳಿದ ನಂತರ ಪ್ರಧಾನ ುರೂಜಿಯವರು ಸಂಪತರಾಯರ ಗುರುತು ಮಾಡಿ ಕೊಟ್ಟರು. ಆರೋಗ್ಯ ಮಂತ್ರಿ ಸಫಾಯಿ ವಿವರ ಹೇಳಿದ ನಂತರ ಮಂತ್ರಿಯವರು ಮರುದಿನ ಜರುಗಲಿರುವ ವರ್ಧಂತಿ ಸಮಾರಂಭದಲ್ಲಿಯ ಕಾರ್ಯಕ್ರಮ ಮತ್ತು ಮಂತ್ರಿಮಂಡಳ ದವರು ನಿರ್ಧರಿಸಿದ ಕೆಲಸದ ವಿವರವನ್ನು ಗೊತ್ತುಪಡಿಸಿ ದರು. ವಿವರವಾದ ಸೂಚನೆಗಳಿಗಾಗಿ ಸೂಚನಾ ಫಲಕ ಗಳನ್ನು ನೋಡಿರೆಂದು ವಿನಂತಿಸಿದರು. ಆ ಮೇಲೆ ವರ್ಗದ ಸ್ವಚ್ಛತಾ ಮಂತ್ರಿಗಳು ವರ್ಗದ ಬಾಲಬಾಲಿಕೆಯರ ವೈಯಕ್ತಿಕ ಆರೋಗ್ಯ ಪರೀಕ್ಷೆಯನ್ನು ಮಾಡಿ ಹಲ್ಲು ತಿಕ್ಕದೆ ಬಂದ ಬಾಲಕ ಬಾಲಿಕೆಯರಿಗೆ ಸಾಲಿನಿಂದ ಕಳಿಸಿದರು. ಅವರಿಗಾಗಿ ಸ್ವಚ್ಛತಾಮಂತ್ರಿಯವರು ಒಂದು ಬಕೆಟು ನೀರು ಮತ್ತು ೪ ನೆಯ ವರ್ಗದವರು ಮಾಡಿದ ಹಲ್ಲು ಪುಡಿಕೊಟ್ಟು ಹಲ್ಲು ತಿಕ್ಕಲಿಕ್ಕೆ ಹಚ್ಚಿದರು. ಕೂದಲು ಹಿಕ್ಕಿ ಕೊಳ್ಳದೇ ಬಂದ ಬಾಲಿಕೆಯರಿಗೆ ಒಂದು ಕೋಣೆ ಯಲ್ಲಿ ಕಳಿಸಿದರು. ಅಲ್ಲಿ ಅವರು ಹಣಿಗೆಯಿಂದ ಕೂದಲ ಗಳನ್ನು ಹಿಕ್ಕಿಕೊಂಡರು. ಆ ಮೇಲೆ ಎಲ್ಲ ವಿದ್ಯಾರ್ಥಿಯರ ಹಾಜರ ಸಂಖ್ಯೆ ವರ್ಗವಾರ ವರ್ಗಮಂತ್ರಿಯವರು ಹೇಳಿ ದರು. ಮುಖ್ಯಮಂತ್ರಿಯವರು ಅದರ ಟಿಪ್ಪಣಿಮಾಡಿ ಕೊಂಡು ಜೇರೀಜ ಮಾಡಿ ಪ್ರಧಾನ ಗುರೂಜಿಯವರಿಗೆ ಪಾರ್ಥನೆಗೆ ಹಾಜರಿದ್ದ ಬಾಲ-ಬಾಲಿಕೆಯರ ಹಾಜರ ಸಂಖ್ಯೆಯ ವರದಿ ಒಪ್ಪಿಸಿದರು. ಆ ಮೇಲೆ ಸಾಲಿನಲ್ಲಿ ಎಲ್ಲ ಬಾಲಕ ಬಾಲಿಕೆಯರು ಸಫಾಯಿ ಕೆಲಸವನ್ನು ಮಾಡಲಿಕ್ಕೆ ಹೋದರು. ಪ್ರಧಾನ ಗುರೂಜಿಯವರು ಸಂಪತರಾಯರ ಕೂಡ ಸಫಾಯ ಕೆಲಸದ ನಿರೀಕ್ಷಣೆ ಮಾಡಲಿಕ್ಕೆ ಹೋದರು. ಎಲ್ಲ ವರ್ಗದ ಬಾಲಕ ಬಾಲಕೆ ಯರು ಗೂರುಜಿಯವರ ಸಂಗಡ ಸಫಾಯಿ ಕೆಲಸವನ್ನು ಆಸ್ಥೆಯಿಂದ ಮಾಡುತ್ತಿದ್ದರು. ಆ ಮೇಲೆ ಎಲ್ಲ ಕಸವನ್ನು ತುಂಬಿಕೊಂಡು ಗೊಬ್ಬರ ಕುಣಿಯಲ್ಲಿ, ಹಾಕಿದರು. ಕೆಲ ಬಾಲಿಕೆಯರು ರಂಗವಲ್ಲಿ ಹಾಕಿದರು. ಕೆಲವರು ವರ್ಗದಲ್ಲಿ ಇಟ್ಟ ಹೂಜಿಯನ್ನು ತೊಳೆದು ಅದರಲ್ಲಿ ಸ್ವಚ್ಛವಾದ ಕುಡಿಯುವ ನೀರು ತಂದು ಇಟ್ಟರು, ಆಗ ಸಾಲೆಯ ವೇಳಾ ಮಂತ್ರಿ ಗಂಟೆಯನ್ನು ಕೊಟ್ಟನು. ಆ ಮೇಲೆ ಎಲ್ಲ ಬಾಲಕ ಬಾಲಿಕೆಯರು ಸಾಲಿನಲ್ಲಿ ಸರಿಯಾಗಿ ಕುಳಿತುಕೊಂಡರು. ಮತ್ತು ದೈನಂದಿನ ಅಭ್ಯಾಸ ಪ್ರಾರಂಭವಾಯಿತು. ಅನಂತರ ಸಂಪತರಾಯರು ಪ್ರಧಾನ ಗುರೂಜಿಯವರಿಗೆ ಹೇಳಿ ಮನೆಗೆ ಹೊರಟರು. ಆಗ ಗೋಡೆಯ ಮೇಲೆ ತೂಗ ಹಾಕಿದ ಸೂಚನಾಫಲಕದ ಮೇಲೆ ಕೆಳಗಿನಂತೆ ಮರುದಿವಸ ಜರುಗಲಿರುವ ಕಾರ್ಯ ಕ್ರಮದ ಪತ್ರಿಕೆ ನೋಡಿದರು.

ಬಾಳಾಪೂರ ಸಾಲೆಯ ವರ್ಧಂತಿ ಸಮಾರಂಭದ ಕಾರ್ಯಕ್ರಮ

೧. ಮುಂಜಾವಿನಲ್ಲಿ ೭-೩೦ ರಿಂದ ೮-೩೦ ನಗರದಲ್ಲಿ ಪ್ರಭಾತಫೇರಿ.

೮-೩೦ ರಿಂದ ೯-೦೦ ಸಾಲೆಯ ಧ್ವಜವಂದನೆ.

೯-೦ ರಿಂದ ೧೦-೦ ಸಾಂಘಿಕ ಕವಾಯತು.

(೧) ಸರ್ವಾಂಗಸುಂದರ ವ್ಯಾಯಾಮ
(೨) ಲೇಝಿಮ ೩) ಡಂಬೆಲ್ಸ
(೪) ಕೋಲಾಟ (೫) ಅಭಿನಯ ಗೀತೆ.
(೬) ಸಾಂಘಿಕ ಗೀತೆ.

೩-೦ ರಿಂದ ೫-೦ ಪ್ರದರ್ಶನದ ಉದ್ಘಾಟನೆ ಮತ್ತು ಹಸ್ತಲಿಖಿತ ಪತ್ರಿಕೆಯ ಉದ್ಘಾಟನೆ, ಮೂಲೋದ್ಯೋಗದ ಕೆಲಸದ ದಿಗ್ದರ್ಶನ.

೫-೦ ರಿಂದ ೭-೩೦ ವರ್ಧಂತಿ ಸಮಾರಂಭ.

ರಾತ್ರಿ:-೯-೦ ರಿಂದ ೧೦-೩೦ ಸಾಂಸ್ಕೃತಿಕ ಕಾರ್ಯಕ್ರಮ. ವಂದೇ ಮಾತರಮ್.

(ಪ್ರಧಾನ ಗುರೂಜಿಯವರ ಅಪ್ಪಣೆಯಿಂದ)

ಗೋವಿಂದ ಗೋಪಾಳ ಸರ್ವದೆ.

ದಿನಾಂಕ ೧೫-೩-೧೯೬೦ ಮುಖ್ಯಮಂತ್ರಿ
ಜೀವನ ಶಿಕ್ಷಣ ಸಾಲೆ ಬಾಳಾಪೂರ

ಕೆಳಗೆ ಕೆಲಸದ ವಿವರ ತೋರಿಸುವ ಇನ್ನೊಂದು ಸೂಚನೆಯು ಇತ್ತು.

"ಸಾಲೆಯ ಮಂತ್ರಿಮಂಡಳದ ಸಭೆಯಲ್ಲಿ ಗೊತ್ತು ಮಾಡಿಕೊಂಡಂತೆ"

(೧) ಸ್ವಾಗತಪದ ೫ ನೇ ವರ್ಗದ ಬಾಲಿಕೆಯರು. (ಸುನಂದಾದೇವಿಯವರ ಮಾರ್ಗದರ್ಶನದಲ್ಲಿ)
(೨) ಪ್ರಾರ್ಥನೆ.....ಸಾಮೂಹಿಕ.....ಸಂಸ್ಕೃತಿ ಮಂತ್ರಿ,
(೩) ವರದಿ ವಾಚನ.....ಪ್ರಧಾನ ಗುರೂಜಿ
(೪) ಅಧ್ಯಕ್ಷರ ಪರಿಚಯ....ಪ್ರಧಾನ ಗುರೂಜಿ ಯವರು,
(೫) ಶಾರೀರಿಕ ಶಿಕ್ಷಣದ ಕಾರ್ಯಕ್ರಮ....ಆಟದ ಮಂತ್ರಿ,
(೬) ಆಭಾರ ಮನ್ನಣೆ....ಸಾಂಸ್ಕೃತಿಕ ಮಂತ್ರಿ,
(೭) ಮನರಂಜನೆಯ ಕಾರ್ಯಕ್ರಮ....ಸಾಂಸ್ಕೃತಿಕ ಮಂತ್ರಿ,
(೮) ಸ್ವಾಗತ ಮಾಡುವವರು....ಬಾಲವೀರ ಪಥಕ
(೯) ಪ್ರದರ್ಶನ .... ಮೂಲೋದ್ಯೋಗ ಮಂತ್ರಿ.

ಬಾಳಾಪೂರ ೧೫-೩-೧೯೬೦. ಗೋ. ಗೋ. ಸರ್ವದೆ

ಗೊತ್ತುಪಡಿಸಿದಂತೆ ಗುರೂಜಿಯವರ ಮಾ ದರ್ಶನದಲ್ಲಿ ಪ್ರಧಾನ ಗುರೂಜಿಯವರ ಮೇಲ್ವಿಚಾ ಯಲ್ಲಿ ಸಮಾರಂಭದ ಸಿದ್ಧತೆಯನ್ನು ಸರಿಯಾಗಿ ಮಾ ಕೊಂಡರು.

ಸಂಜೆಯಲ್ಲಿ ಸಾಲೆಯ ಎಲ್ಲ ಬಾಲಕರು ಗುರು ಯವರ ಮಾರ್ಗದರ್ಶನದಲ್ಲಿ ಮರುದಿನಸದ ವರ್ಧ ಸಮಾರಂಭದ ಪೂರ್ಣಸಿದ್ಧತೆಯಲ್ಲಿ ತೊಡಗಿದರು. ಸಾಲೆ ಸಫಾಯಿ ಮಾಡಿ ಮುಂದಿನ ಭಾಗದಲ್ಲಿ ಮಾವಿನ ಎಲೆ ತಳಿರು ತೋರಣಗಳನ್ನು ಕಟ್ಟಿದ್ದರು. ಎಲ್ಲ ವರ್ಗಗ ಪರಪಟಿಗಳನ್ನು ಹಚ್ಚಿದರು. ಸಮಾರಂಭಕ್ಕಾಗಿ ಸಾರ್ವ ಹಾಲಿನಲ್ಲಿ ಎಲ್ಲ ವ್ಯವಸ್ಥೆ ಸಿದ್ಧಮಾಡಿ ಕೊಂಡರು. ಮು ಮಂತ್ರಿ ಮತ್ತು ಸಂಸ್ಕೃತಿ ಮಂತ್ರಿಯವರು ಎಲ್ಲ ಕಡೆ ಹೋಗಿ ವ್ಯವಸ್ಥೆಯ ಬಗ್ಗೆ ವಿಚಾರಿಸಿ ಸಲಹೆ ಸೂಚ ಗಳನ್ನು ಕೊಟ್ಟರು. ಸಂಜೆಗೆ ಪ್ರಧಾನ ಗುರೂಜಿಯವ ಅವರಿಗೆ ಮಾರ್ಗದರ್ಶನ ಮಾಡಿದರು.

ಸಮಾರಂಭದ ದಿವಸ ಎಲ್ಲ ಬಾಲಕ ಬಾಲಿಕೆಯರು ಉತ್ಸಾಹದಿಂದ ಬೇಗನೆ ಎದ್ದು ವೈಯಕ್ತಿಕ ಸ್ವಚ್ಛ ಯನ್ನು ಮುಗಿಸಿ ಸಾಲೆಗೆ ಬಂದರು, ಆಟದ ಮಂ ಯವರು ವರ್ಗ ಮಂತ್ರಿಗಳ ಸಹಾಯದಿಂದ ಎಲ್ಲ ಬಾಲ ಬಾಲಿಕೆಯರನ್ನು ಸಾಲಿನಲ್ಲಿ ನಿಲ್ಲಿಸಿದರು. ಆ ಮೇಲೆ ಪ್ರಭಾತ ಫೇರಿ ಹೊರಟಿತು. ಬಾಲಕರು ಕೂಚ, ಗೀ ಹಾಡುತ್ತ ಹೋಗುತ್ತಿದ್ದರು. ಸಾಲೆಯ ಬ್ಯಾಂ ಮುಂದಕ್ಕೆ ಬಾರಿಸುತ್ತ ಹೊರಟಿತ್ತು. ಕೆಲವು ಬಾಲಕ ಕೈಯಲ್ಲಿ ಫಲಕವನ್ನು ಹಿಡಿದಿದ್ದರು. "ಇಂದಿನ ಬಾಲಕ ನಾಳೆಯ ನಾಗರಿಕರು", "ಬಾಲಕರನ್ನು ಸಾಲೆಗೆ ಕಳಿಸಿ "ಉದ್ಯೋಗವೇ ಸ್ವರ್ಗ ಆಲಸ್ಯವೇ ನರಕ"; "ಸತ್ಯ ಧರ್ಮ," ಒಕ್ಕಟ್ಟೇ ರಾಷ್ಟ್ರದ ಸಾಮರ್ಥ್ಯ. ನಡುವೆ ಮುಖ ಮಂತ್ರಿಯವರು ಮೇಲಿನ ಒಂದೊಂದು ಮಾತು ಕೂಗು ಮತ್ತು ಎಲ್ಲ ಬಾಲಕ ಬಾಲಿಕೆಯರು ಪುನಃ ಹೇಳು ದ್ದರು. ಪ್ರಭಾತ ಫೇರಿ ಮುಗಿಸಿ ಎಲ್ಲ ಬಾಲಕ ಬಾಲಿ ಯರು ಸಾಲೆಗೆ ಬಂದು ವರ್ತುಲದಲ್ಲಿ ಶಿಸ್ತಿನಿಂದ ನಿಂತರ ನುದಿಗೌಡರ ಹಸ್ತದಿಂದ ಧ್ವಜವಂದನೆ ಆಯಿತ ಎಲ್ಲರೂ ವಂದನೆ ಮಾಡಿ ವಂದೇ ಮಾತರಂ ಗೀತೆಯನ ಸಾಮೂಹಿಕವಾಗಿ ಅಂದರು. ಆ ಮೇಲೆ ಆಟದ ಬಯ ನಲ್ಲಿ ಬಾಲಕ ಬಾಲಿಕೆಯರು ಶಿಸ್ತಿನಿಂದ ಗೊತ್ತು ಪಡಿ ದಂತೆ ಎಲ್ಲ ಚಟುವಟಿಕೆಗಳನ್ನು ಉತ್ತಮ ರೀತಿಯಿಂ

ಮಾಡಿ ತೋರಿಸಿದರು. ಎಲ್ಲರೂ ಸಾಮೂಹಿಕವಾಗಿ ಸಾಂಘಿಕ ಗೀತೆ ಹಾಡಿದರು. ಕೊನೆಗೆ ಮುಖ್ಯ ಮಂತ್ರಿಯವರು ಎಲ್ಲರಿಗೆ ಸಂಜೆಯ ಕಾರ್ಯಕ್ರಮಗಳ ಬಗೆಗೆ ಸೂಚನೆಗಳನ್ನು ಕೊಟ್ಟ ಮೇಲೆ ಕೂಗು ಅದನಂತರ ಎಲ್ಲರೂ ಮನೆಗೆ ಹೋದರು.

ಮಧ್ಯಾಹ್ನದಲ್ಲಿ ಮೂರು ಗಂಟೆಗೆ ಎಲ್ಲರೂ ಪ್ರಾರ್ಥನಾ ಮಂದಿರದಲ್ಲಿ ಕೂಡಿದ್ದರು. ಸಂಪತರಾಯರ ಅಮೃತ ಹಸ್ತದಿಂದ ಸಾಲೆಯ ಹಸ್ತಲಿಖಿತ ಪತ್ರಿಕೆಯ ಉದ್ಘಾಟನೆ ಜರುಗಿತು. ಆ ಮೇಲೆ ಕೈಕೆಲಸದ ಪ್ರತ್ಯಕ್ಷಿಕೆಕ್ಕೆ ಪ್ರಾರಂಭಿಸಿದರು. ಮೊದಲನೆ ವಿಭಾಗದಲ್ಲಿ ಕಾಗದದ ಕೆಲಸ, ಮತ್ತು ರಟ್ಟಿನ ಕೆಲಸವು ನಡೆಯಿತು. ಬಾಲಕರು ಮಾಡಿದ ಅಮೃತ-ಶಿಲೆಯ ಕಾಗದಗಳು, ತುಷಾರ ಬಣ್ಣದ ಪದ್ಧತಿ, ಅವರು ತಯಾರಿಸಿದ ಹೂಮಾಲೆ ನೋಡಿ ನಾಗರಿಕರಿಗೆ ತುಂಬಾ ಆನಂದವಾಯಿತು. ಎರಡನೆಯ ವಿಭಾಗದಲ್ಲಿ ಬಾಲಕರು ಕೈತೋಟದ ಕೆಲಸವನ್ನು ಸಹಕಾರದಿಂದ ಮಾಡುತ್ತಿದ್ದರು. ಮೂರನೆಯ ವಿಭಾಗದಲ್ಲಿ ಹತ್ತಿಯಿಂದ ಅರಿವೆಯ ವರೆಗಿನ ಎಲ್ಲ ಕ್ರಿಯೆಗಳನ್ನು ಬೇರೆ ಬೇರೆ ಪದ್ಧತಿಯಿಂದ ಮಾಡುತ್ತಿದ್ದರು. ಒಂದು ಕೋಣೆಯಲ್ಲಿ ಪ್ರೌಢ ವಿದ್ಯಾರ್ಥಿಗಳು ಅಂಬರ ಚರಖಾದ ಮೇಲೆ ನೂಲುತ್ತಿದ್ದರು. ತಮ್ಮ ತಮ್ಮ ಬಾಲಕರು ಗುಡಾರ, ಆಸನ, ಜಮಖಾನ, ಕೋಟಿಂಗ, ಕೈವಸ್ತ್ರ ಮೊದಲಾದ ವಸ್ತುಗಳನ್ನು ಪ್ರತ್ಯಕ್ಷ ಮಾಡುವದನ್ನು ನೋಡಿ ಪಾಲಕರು ಆನಂದದಿಂದ ಹಿಗ್ಗಿದರು. ಆ ಮೇಲೆ ಪ್ರದರ್ಶನದ ಕಡೆಗೆ ಹೋದರು. ಅಲ್ಲಿ ಬಾಲ ಬಾಲಿಕೆಯರು ಮಾಡಿದ ಎಲ್ಲ ವಸ್ತುಗಳನ್ನು ಇಟ್ಟಿದ್ದರು. ಪ್ರತಿಯೊಂದರ ಮೇಲೆ ವಸ್ತುಗಳ ಬೆಲೆ ಕಾಣಿಸಿದ್ದರು. ನಾಗರಿಕರು ಕೆಲವು ವಸ್ತುಗಳ ಕಿಮ್ಮತ್ತು ಕೊಟ್ಟು ಕೊಂಡರು. ಬಾಲಿಕೆಯರು ಹಾಕಿದ ರಂಗವಲ್ಲಿಯನ್ನು ನೋಡಿ ಅವರ ತಾಯಿ ತಂದೆಯವರಿಗೆ ತುಂಬಾ ಆನಂದ ಮತ್ತು ಆಶ್ಚರ್ಯವಾಯಿತು. ಸಾಲೆಯ ಸ್ವಯಂ ಸೇವಕರು ಎಲ್ಲ ಜನರಿಗೆ ಪ್ರದರ್ಶನದ ವಸ್ತುಗಳ ಬಗ್ಗೆ ಮಾಹಿತಿಯನ್ನು ಕೊಡುತ್ತಿದ್ದರು. ಬಾಲವೀರರು ಮತ್ತು ಮಾರ್ಗದರ್ಶಿಕೆಯರು ಒಬ್ಬೊಬ್ಬರನ್ನು ಒಳಗೆ ಬಿಡುತ್ತಿದ್ದರು. ಈ ಪ್ರಕಾರ ೫ ಘಂಟೆಗೆ ಪ್ರದರ್ಶನದ ಕೆಲಸವನ್ನು ಮುಕ್ತಾಯ ಮಾಡಿಕೊಂಡು ವರ್ಧಂತಿ ಕೆಲಸಕ್ಕೆ ಎಲ್ಲರೂ ಪ್ರಾರ್ಥನಾ ಮಂದಿರಕ್ಕೆ ತೆರಳಿದರು. ಪ್ರಾರ್ಥನಾ ಮಂದಿರದಲ್ಲಿ ಕರೇ ಹಲಿಗೆಯ ಮೇಲೆ ಸಮಾರಂಭದ ಕಾರ್ಯಕ್ರಮದ ಯೋಜನೆಯನ್ನು ಸಂಸ್ಕೃತಿ ಮಂತ್ರಿಗಳು ಒಳ್ಳೆಯ ಅಕ್ಷರಗಳಿಂದ ಉತ್ತಮವಾಗಿ ಬರೆದಿಟ್ಟಿದ್ದರು.

ಸಾಮೂಹಿಕವಾಗಿ ಪ್ರಾರ್ಥನೆ ಮುಗಿಸಿದ ಮೇಲೆ ಮುಖ್ಯ ಮಂತ್ರಿಯವರು ಸಂಪತರಾಯರು ಅಧ್ಯಕ್ಷರಾಗಬೇಕೆಂದು ಸೂಚನೆಯನ್ನು ತಂದರು. ಈ ಸೂಚನೆಗೆ ಸಂಸ್ಕೃತಿ ಮಂತ್ರಿಯವರು ಅನುಮೋದನೆ ಇತ್ತರು. ಆ ಮೇಲೆ ಬಾಲಕ ಬಾಲಿಕೆಯರು ಜಪ್ತಾಳಿ ಬಾರಿಸಿದರು. ನಂತರ ೫ ನೇ ವರ್ಗದ ಬಾಲಕೆಯರಿಂದ ಸ್ವಾಗತ ಗೀತೆಯಾದನಂತರ ಪ್ರಧಾನ ಗುರೂಜಿಯವರು ಸಂಪತರಾಯರ ಬಗ್ಗೆ ಮಾಹಿತಿ ಹೇಳಿ ಅವರು ಆಮಂತ್ರಣಕ್ಕೆ ಮನ್ನಣೆ ಕೊಟ್ಟು ಬಂದದ್ದಕ್ಕಾಗಿ ಅವರಿಗೆ ಅಭಿನಂದಿಸಿ ಅವರ ಆಭಾರ ಮನ್ನಿಸಿದರು. ಅವರು ಸಾಲೆಯಲ್ಲಿ ಕಲೆಯುತ್ತಿದ್ದಾಗ ಅವರ ಹಸ್ತಾಕ್ಷರವು ಎಷ್ಟು ಚೆಂದವಾಗಿತ್ತು ಮತ್ತು ಅವರು ತಮ್ಮ ಇಡೀ ಶಾಲಾಜೀವನದಲ್ಲಿ ಒಪ್ಪೆ ಸಹಿತ ಸಾಲೆಗೆ ತಡವಾಗಿ ಬಂದಿದ್ದಿಲ್ಲ. ಹಾಗು ಸಾಲೆಯನ್ನು ತಪ್ಪಿಸುತ್ತಿದಿಲ್ಲವೆಂದರು. ಅವರ ಕರ್ತವ್ಯ ನಿಷ್ಠೆಗೆ ಮೆಚ್ಚಿ ಅವರಿಗೆ ಉಚ್ಚ ಜವಾಬದಾರಿಯ ನೌಕರಿ ಸಿಕ್ಕಿದೆಯೆಂದು ಹೇಳಿದರು. ಆ ಮೇಲೆ ಮುಖ್ಯ ಮಂತ್ರಿಗಳು ಸಾಲೆಯ ವರದಿಯನ್ನು ಓದಿದರು. ಊರವರು ಸಾಲೆಗಾಗಿ ಪ್ರಯತ್ನದಿಂದ ಕಟ್ಟಿಸಿದ ಇಮಾರತಿ ಮತ್ತು ನೇಯಿಗೆಯ ಮಂದಿರದ ಬಗ್ಗೆ ಅವರಿಗೆ ಅಭಿನಂದನೆ ಸಲ್ಲಿಸಿದರು. ಆ ಮೇಲೆ ಊರವರ ವತಿಯಿಂದ ಸಿದ್ಧಪ್ಪಗೌಡರು ಭಾಷಣ ಮಾಡಿ ಜೀವನ ಶಿಕ್ಷಣದಿಂದ ಆದ ಪ್ರಗತಿಯ ಬಗ್ಗೆ ಪ್ರಧಾನ ಗುರೂಜಿ ಮತ್ತು ಇತರ ಉಪಗುರೂಜಿಯವರಿಗೆ ಅಭಿನಂದನೆ ಇತ್ತರು. ಮತ್ತು ಸರಕಾರದಿಂದ ಪಂಚವಾರ್ಷಿಕ ಯೋಜನೆಗಳಲ್ಲಿ ಮಾಡಿದ ಸುಧಾರಣೆಯ ಬಗ್ಗೆ ನಾಲ್ಕು ಮಾತುಗಳನ್ನು ಹೇಳಿ ಸಾಲೆಯ ಯಾವತ್ತೂ ಕೆಲಸದ ಅಭಿವೃದ್ಧಿಯಾಗಲಿ ಎಂದು ಕೋರಿದರು. ಆ ನಂತರ ಸಾಲೆಯ ವತಿಯಿಂದ ಬಾಲ ಬಾಲಿಕೆಯರು ಸೂತ್ರ ಯಜ್ಞದಲ್ಲಿ ಮಾಡಿದ ನೂಲಿನ ಮಾಲೆ ಮತ್ತು ಕೈತೋಟದಲ್ಲಿಯ ಹೂಗಳ ಗುಚ್ಛಗಳನ್ನು ಮುಖ್ಯಮಂತ್ರಿಗಳು ಸಂಪತರಾಯರಿಗೆ ಕೊಟ್ಟರು. ಮತ್ತು ನಾಲ್ಕು ಉಪದೇಶಪರ ಮಾತುಗಳನ್ನು ಆಡಲಿಕ್ಕೆ ವಿನಂತಿಸಿದರು. ಸಂಪತರಾಯರು ಸಾಲೆಯ ಮುಖ್ಯಮಂತ್ರಿಯವರು ಕೊಟ್ಟ ಆಮಂತ್ರಣದ ಬಗ್ಗೆ ಆನಂದವನ್ನು ವ್ಯಕ್ತಮಾಡಿ

ಅಭಿನಂದನೆ ಸಲ್ಲಿಸಿದರು. ಶಾಲೆಯಲ್ಲಿ ನಡೆಯುತ್ತಿರುವ ಚಟುವಟಿಕೆಗಳನ್ನು ಹೊಗಳಿದರು. ಮತ್ತು ಬಾಲಬಾಲಿಕೆಯರಿಗೆ "ಓದಿ ಕಲಿ" ಈ ಹಳೆಯ ಪದ್ಧತಿ ಬಿಟ್ಟು "ನೂಡಿ ಕಲಿ" ಯುವದು ಮೇಲು ಎಂದು ಹೇಳಿದರು. ಈಗಿನ ಕಾಲೇಜದಲ್ಲಿಯ ವಿದ್ಯಾರ್ಥಿಗಳಿಂದ ನಗರದಲ್ಲಿ ಹಾದಿಯ ಮೇಲೆ ಚೆಲ್ಲಿದ ಬಾಳೆಯ ಕಣ್ಣುಗಳ ಸಿಪ್ಪೆಯ ಮೇಲೆ ಕಾಲು ಜಾರಿಬಿದ್ದದರಿಂದ ಆದ ತೊಂದರೆಗಳನ್ನು ವಿವರಿಸಿ ಈಗಿನ ಬಾಲಕರು ಇಂಥ ಜೀವನ ಶಿಕ್ಷಣ ಕೊಡುವ ಶಿಕ್ಷಣದಿಂದ ಒಳ್ಳೆಯ ಜ್ಞಾನವನ್ನು ಪಡೆದ್ದರಿಂದ ಜೀವಾಬಾದಾರ ರೀತಿಯಿಂದ ನಡೆಯಲಿಕ್ಕೆಸಾಧ್ಯವೆಂದು ಭಾವಿಸಿದರು. ಅಧ್ಯಕ್ಷರು ಬಾಲಬಾಲಿಕೆಯರಿಗೆ ಅರ್ಧ ಗಂಟೆಯವರೆಗೆ ಉಪದೇಶಪರ ಮಾತುಗಳನ್ನು ಹೇಳಿ ತಮ್ಮ ಭಾಷಣವನ್ನು ಮುಗಿಸಿದರು. ಆ ನಂತರ ಸಂಸ್ಥೆಯ ಮಂತ್ರಿಯವರು ಆಭಾರ ಮನ್ನಣೆಯ ಭಾಷಣವನ್ನು ಮಾಡಿದರು. ಕೊನೆಗೆ ವಂದೇಮಾತರಂ ಗೀತೆಯಿಂದ ವ್ಯಾಖ್ಯಾನದ ಕಾರ್ಯಕ್ರಮವು ಮುಕ್ತಾಯವಾಯಿತು.

ರಾತ್ರಿ ೪ ಗಂಟೆಗೆ ಬಾಲಕ ಬಾಲಿಕೆಯರು ಮತ್ತು ಅವರತಾಯಿ ತಂದೆಯವರು ಸುತ್ತ ಕೂಡಿದರು. ೧೦ ಗಂಟೆಯವರೆಗೆ ಉತ್ತಮ ಮನರಂಜನೆಯ ಸಾಂಸ್ಕೃತಿಕ ಕಾರ್ಯಕ್ರಮವನ್ನು ಮಾಡಿ ತೋರಿಸಿದರು. ಬಾಲಿಕೆಯರ ಕೋಲಾಟ, ಪಾನಸ್ರತಿಬಂಧದ ಬಗ್ಗೆ ನಾಟ್ಯ ವೈಶ್ಯರ ಬಾಲಕರ ಅಭಿನಯಗೀತ, ಕೊಳಲು ಬಾರಿಸುವದು ಮೊದಲಾದ ಕಾರ್ಯಕ್ರಮಗಳನ್ನು ಆಕರ್ಷಕವಾಗಿ ಮಾಡಿ ತೋರಿಸಿದರು. ಸಂಪತರಾಯರ ಅನುಭವ ಹನ್ನೆರಡ ಹಳೆ ವಿದ್ಯಾರ್ಥಿ ಸಂಘದವರು ಇಟ್ಟಿದ್ದ ಬಕ್ಷೀಸಗಳನ್ನು ಹಂಚಲಾಯಿತು. ಕೊನೆಗೆ ನಾಡಗೀತೆಯಿಂದ ಕಾರ್ಯಕ್ರಮವು ಮುಕ್ತಾಯವಾಯಿತು.

—: ಜಯ ಜಗತ್ :—

ಗಳಿಗೆಯ ಇಸವಿಯಿಂದ ಪ್ರಾರಂಭವಾಗುವ
ಸಾಮಾನ್ಯ ಪ್ರಾ. ಶಾ. ಪ್ರ. ಪರೀಕ್ಷೆಯ
ಅಭ್ಯಾಸ ಕ್ರಮವನ್ನು ಅನುಸರಿಸಿ ಬರೆದ

ಶೇಲಾರ ಕೃತ

ಪ್ರಾಥಮಿಕ ಭೂಮಿತಿ

[ಕ್ಷೇತ್ರಫಲ ಘನಫಲ ಸಹಿತ]

೪ ರಿಂದ ೭ ನೇಯ ವರ್ಗದ ವರೆಗಿನ
ವಿಷಯವನ್ನೆಲ್ಲ ಒಳಗೊಂಡಿದೆ

ಬೆಲೆ: ೧ರೂ. ೮ಆಣೆ ಮಾತ್ರ

ದೊರೆಯುವ ಸ್ಥಳ:—

ಸಾಯಿ ಪಬ್ಲಿಸಿಂಗ್ ಹೌಸ್,
ಹೂಡ. ಧಾರವಾಡ.

ಪ್ರಾಥಮಿಕ ಶಾಲಾ ಪ್ರವೇಶಪತ್ರ ಪರೀಕ್ಷೆ, ಟ್ರೇನಿಂಗ ಕಾಲೇಜು ಎಲಿಮೆಂಟರಿ ಮತ್ತು ಇಂಟರಮೀಡಿಯೆಟ್ ಗ್ರೇಡ ಮುಂ. ಡ್ರಾಯಿಂಗ ಪರೀಕ್ಷೆಗಳಿಗೆ—

ಜನಪ್ರಿಯವಾದ ಮತ್ತು ಸರಕಾರದಿಂದ ಮಂಜೂರಾದ ಒಂದೇ ಒಂದು ಪುಸ್ತಕ

ಆದರ್ಶ ಚಿತ್ರಕಲಾ

(Ideal Drawing)

ಶ್ರೀ ಎಸ್. ಕೆ. ಜೋಶಿ ಮತ್ತು ಶ್ರೀ ಜಿ. ಡಿ. ವಾಲಿ.

ಎಲ್ಲ ಸೊಡ್ಡ ಪುಸ್ತಕ ವ್ಯಾಪಾರಸ್ಥರಲ್ಲಿ ದೊರೆಯುವದು.
ಬೆಲೆ ೧—೧೫—೨ ಅಂಚೆವೆಚ್ಚ ಪ್ರತ್ಯೇಕ. ಐದು ಮತ್ತು ಐದಕ್ಕಿಂತ ಹೆಚ್ಚು ಪ್ರತಿ ತರಿಸಿಕೊಳ್ಳುವರಿಗೆ ಅಂಚೆ ವೆಚ್ಚವಿಲ್ಲ. ಇದು ಕನ್ನಡದಲ್ಲಿಯೂ ಸಿಗುತ್ತದೆ.

ಜೆ. ಎಸ್. ಕೆ. ಬ್ರದರ್ಸ್
ಪುಸ್ತಕಕರು, ಬಿಳಿಹಿ, ಕಸಬಾ ಪೇಟೆ ಪುಣೆ.

ಸಮಾಜ ಶಿಕ್ಷಣ

ಲೇಖಕರು:— ಶ್ರೀ ಎಸ್. ಎಸ್. ಭೂಸರಡ್ಡಿ, T.C.M. Kumta

ಜನತೆಯ ಜೀವನವನ್ನು ಸಾಮಾಜಿಕವಾಗಿ, ಆರ್ಥಿಕವಾಗಿ, ರಚಿಸುವ ತಾಗೂ ರೂಪಿಸುವ ಶಕ್ತಿ ಇಂದು ಜನತೆಯ ಕೈಗೆ ಬಂದಿದೆ. ನಮ್ಮ ಒಳಿತು ಕೆಡಕುಗಳು, ಹಿತಾಹಿತಗಳು ನಮ್ಮನ್ನೇ ಅವಲಂಬಿಸಿವೆ. ನಮ್ಮದೇ ಆದ ಸರಕಾರದ ಯೋಜನೆಗಳ ಪ್ರಯೋಜನಗಳನ್ನು ಜನತೆ ತಿಳಿಯಬೇಕಾಗಿದೆ. ಈ ತಿಳಿವು ಅರಿವು ಜನತೆಗೆ ಗೊತ್ತಾಗಬೇಕಾದರೆ ಅವರಲ್ಲಿ ಜ್ಞಾನವಿರಬೇಕು. ಬಹು ದಿನಗಳ ದಾಸ್ಯದಲ್ಲಿ ಬೆಳೆದ ನಮ್ಮ ಜನರಲ್ಲಿ ಅಜ್ಞಾನ, ದಾರಿದ್ರ್ಯ, ಮೂಢನಂಬಿಕೆ, ಬಡತನಗಳು ಹೆಮ್ಮರವಾಗಿ ಬೆಳೆದು ನಿಂತಿವೆ. ಸಮಾಜವಾದೀ ಸಮಾಜ ರಚನೆಯ ಸಮಾಜವನ್ನು ಬೆಳೆಯಿಸಬೇಕೆಂದು ಸರಕಾರ ಹೇಳುತ್ತಿದೆ. ಸರಕಾರದ ಕೆಲಸಗಳು ಸುಲಭವಾಗಿ ಯಶಸ್ವಿಯಾಗಿ, ಸರಾಗವಾಗಿ ನಡೆಯಬೇಕಿದ್ದರೆ ಎಲ್ಲರಿಗೂ ಓದು ಬರಹದ ಪ್ರಾಥಮಿಕ ಜ್ಞಾನ ಅವಶ್ಯವಷ್ಟೇ? ಅದಕ್ಕಾಗಿ ಎಲ್ಲರಿಗೂ ಶಿಕ್ಷಣ ದೊರೆಯಬೇಕೆಂದು ಜನತಾ ಸರಕಾರ ಲೋಕ ಶಿಕ್ಷಣ ಕಾರ್ಯವನ್ನು ಕೈಕೊಂಡಿದೆ; ಅದರ ಯಶಸ್ವಿಗಾಗಿ ಕಳಕಳಿಯಿಂದ ಶ್ರಮಿಸುತ್ತಿದೆ; ಅಪಾರ ಹಣ ಖರ್ಚು ಮಾಡುತ್ತಿದೆ. ಜನತೆಯು ಸರ್ವತೋಮುಖ ಏಳ್ಗೆ ಹೊಂದಿ ಸುಖೀರಾಜ್ಯವಾಗಬೇಕೆಂದೇ ಸರಕಾರದ ಮನೀಷೆ.

ವಿಜಾರಕ್ರಾಂತಿಯ ವಿಜ್ಞಾನಯುಗದಲ್ಲಿ ಭರದಿಂದ ಸಾಗಿರುವ ಇತರ ಪ್ರಗತಿಪರ ರಾಷ್ಟ್ರಗಳಿಗೆ ಸರಿಜೊತೆಯಾಗಿ ನಮ್ಮ ಭಾರತ ನಿಲ್ಲಬೇಕಾಗಿದೆ. ಭದ್ರ ಬುನಾದಿಯ ಮೇಲೆ ಕಟ್ಟಬೇಕಾಗಿದೆ. ಜನತೆಯ ಸಾಮುದಾಯಿಕ ಶಕ್ತಿ ಸಾಮರ್ಥ್ಯಗಳನ್ನು ಬೆಳೆಯಿಸಬೇಕಾಗಿದೆ. ಈ ನೂತನ ಸಮಾಜ ರೂಪಿಸುವ ಮಹಾಕಾರ್ಯದಲ್ಲಿ ಜನತೆಗೆ ತಕ್ಕ ಜ್ಞಾನಕೊಡುವ ಮಹಾಹೊಣೆ ಸಮಾಜಶಿಕ್ಷಣ ಕಾರ್ಯಕರ್ತರ ಮೇಲಿದೆ. ಪ್ರಜಾ ಪ್ರಭುತ್ವದ ಮಹಾಸಾಧನೆಯ ಪ್ರಯೋಗ ಯಶಸ್ವಿಯಾಗಲು ಸರ್ವರ ಸಹಾಯ ಸಹಕಾರ ಸಕ್ರಿಯ ಸಹಾನುಭೂತಿ ಎಂದಿಗಿಂತಲೂ ಇಂದು ಅವಶ್ಯವಾಗಿದೆ. ಸರಕಾರದ ಅಧಿಕಾರದ ವಿಕೇಂದ್ರೀಕರಣದ ಫಲವಾಗಿ ಗ್ರಾಮ ಪಂಚಾಯತಿಗಳು ಉದಯಿಸಿ, ಅವುಗಳಿಗೆ, ಸರಕಾರದ ಅನೇಕ ಜವಾಬ್ದಾರಿ ಹೊಣೆ ದೊರೆಯಲಿದೆ. ಅದಕ್ಕಾಗಿ ಜನರು ಸುಶಿಕ್ಷಿತರೂ, ಸುಸಂಸ್ಕೃತರೂ, ಆದಲ್ಲಿ ಸರಕಾರದ ಕಾರ್ಯ ಸುಲಭವಾಗಿ ಸರಿಯಾಗಿ ನಡೆಯುವದು. ಈ ದೃಷ್ಟಿಯಲ್ಲಿ ವಿಚಾರಿಸಿದಾಗ ಸಮಾಜ ಶಿಕ್ಷಣದ ಉದ್ದೇಶವೆಷ್ಟು ಎನ್ನುವುದು ಸ್ಪಷ್ಟವಾಗಿದೆ, ಉದಾತ್ತವಾಗಿದೆ ಎಂಬುದು ತಿಳಿಯುವದು.

ಈಗಿನ ಜನಸಂಖ್ಯೆಯ ಪ್ರಮಾಣದಂತೆ ನಮ್ಮ ದೇಶದಲ್ಲಿ ೧೦೦ಕ್ಕೆ ೭೦ ರಂತೆ ನಿರಕ್ಷರರ ಸಂಖ್ಯೆ ಇದೆಯೆಂದ ಮೇಲೆ, ನಾವು ವೈಕ್ಷಣಿಕ ದೃಷ್ಟಿಯಿಂದ ಎಷ್ಟೊಂದು ಹಿಂದುಳಿದಿದ್ದೇವೆ! ಅಂದ ಮೇಲೆ ನಾವು ಸಾಧಿಸುವ ಕಾರ್ಯ ಸಾಗರದಷ್ಟಿದೆ ಎಂಬುದು ತಿಳಿಯದೇ ಇರಲಾರದು. ಜನಸಾಮಾನ್ಯರ ಜೀವನಮಟ್ಟ ಸುಧಾರಿಸಬೇಕಾಗಿದೆ. ನಮ್ಮ ಭಾರತದ ಹೃದಯ ಹಳ್ಳಿಯಲ್ಲಿದೆ. ಹಳ್ಳಿಗರ ಮುಖ್ಯ-ಉದ್ಯೋಗ ಒಕ್ಕಲುತನವಾಗಿದೆ. ಹಳ್ಳಿಗಳು ಘೋರ ಬಡತನ, ಅಜ್ಞಾನ, ದಾರಿದ್ರ್ಯ, ಅಸ್ಪೃಶ್ಯತೆ, ರೋಗರುಜಿನಗಳ ಬೀಡಾಗಿ, ಜನತೆಯ ಜೀವನದಲ್ಲಿಯೇ ಅಸ್ಥಿ ಇಲ್ಲದಾಗಿವೆ. ನಿರಾಶ ಒಡಮೂಡಿದೆ. ಆತ್ಮವಿಶ್ವಾಸ ಅಳಿವು ಹೊಗಿದೆ. ಏಗಾಗಿ ಸರಕಾರದ ಕಾರ್ಯಗಳಲ್ಲಿ ತಾವು ಮಾಡಬೇಕಾದ ಪಾಲನ್ನು ಅವರು ತರಿಯುವ ಬಗೆಯಂತು, ಅದೇಕೆ? ಅನೇಕರು ನಮ್ಮ ದೇಶದ ಹೆಸರನ್ನು ಕೂಡಾ ತರಿಯರು? ತಾವು ರಾಷ್ಟ್ರಪ್ರಜೆಗಳಾಗಿರುವ ಅರಿವೆಯಲ್ಲಿ ತಮಗೂ ಮಕ್ಕಳ ಬಾಧ್ಯತೆಗಳಿವೆ, ಮಾಡುವ ಕರ್ತವ್ಯ ಕರ್ಮಗಳು ಹೊಣೆಯಿವೆ ಎಂಬ ವಿಚಾರ ಅವರ ಹತ್ತಿರ ಸುಳಿಯುವಾರದು. ಇಂಥ ಕರುಣಾಜನಕ ಹೃದಯಸ್ಪರ್ಶಿ ವಾತಾವರಣದಲ್ಲಿ ಕೆಲಸ ಮಾಡುವ ಸಮಾಜ ಶಿಕ್ಷಣ ಕಾರ್ಯಕರ್ತರು ತಾಳ್ಮೆ-ಚಾತುರ್ಯದಿಂದ ಅಜ್ಞಾನ ಜನತೆಯ ನೊಂದ-ಬೆಂದ ಬಳಲಿದ ಮನಸ್ಸಿನಲ್ಲಿ ಜೀವಕಳೆ-ತುಂಬಿ ಅವರ ಹೃದಯ ವಿಕಾಸ ಮಾಡುವ ಅರುಹು ಪವಿತ್ರ ಕರ್ತವ್ಯ ಅವರದಾಗಿದೆ. 'ಜನತೆಯ ಸೇವೆಯೇ ಜನಾರ್ಧನ ಸೇವೆ' ಎಂದು ಪೂಜ್ಯ ಬಾಪೂಜಿಯವರ ಅಮರವಾಣಿಯನ್ನು ಅರಿತು ಕಾರ್ಯರೂಪಿಯಬೇಕು. ಜನತೆಯ ಹೃದಯ ಮಂದಿರದಲ್ಲಿ ಜ್ಞಾನ ಜ್ಯೋತಿ ಬೆಳಗಿ ರಾಷ್ಟ್ರ ನಿರ್ಮಾಣಕಾರ್ಯದಲ್ಲಿ ತನುಮನಧನ

ಗಳಿಂದ ಭಾಗವಹಿಸುವಂತೆ ಪ್ರೇರೇಪಿಸಬೇಕಾಗಿದೆ. ಅವರು ಸುಜ್ಞಾನಿಗಳೂ, ಸ್ವಾಭಿಮಾನಿಗಳೂ, ರಾಷ್ಟ್ರಪ್ರೇಮಿಗಳೂ ಆಗಿ ಎಲ್ಲರೊಡನೆ ಸಮತಾಭಾವದಿಂದ ಕೂಡಿ ನಡೆದು ಬಾಳುವ ಯೋಗ್ಯ ನಾಗರಿಕರನ್ನಾಗಿ ಮಾಡುವದೇ ಸಮಾಜ ಶಿಕ್ಷಣದ ಮುಖ್ಯ ಗುರಿಯಾಗಿದೆ.

ಈ ಮಹಾಕಾರ್ಯ ಅತ್ಯಂತ ಯಶಸ್ವಿಯಾಗಿ, ಫಲಕಾರಿಯಾಗಿ, ಪರಿಣಾಮಕಾರಿಯಾಗಬೇಕಾದರೆ. ಸಮಾಜ ಶಿಕ್ಷಣ ಕ್ಷೇತ್ರದಲ್ಲಿ ದುಡಿಯುವ ಕಾರ್ಯಕರ್ತರಲ್ಲಿ ನಿಷ್ಠೆ, ಪ್ರಾಂಜಲ-ಮನಸ್ಸು, ಪ್ರಾಮಾಣಿಕತೆ, ದುಡಿಯಬೇಕೆನ್ನುವ ಕಳಕಳಿ ರಾಷ್ಟ್ರೀಯ ಭಾವನೆ ಬೆಳೆದು ಬರಬೇಕು. ಅನುಭವಿಕರ ಮಾರ್ಗದರ್ಶನದಲ್ಲಿ ನಡೆದ ಶಿಬಿರದಲ್ಲಿ ಭಾಗವಹಿಸಿ ನವೀನ, ಸುಲಭವಾದ, ಕಲಿಸುವ ವಿಧಾನಗಳನ್ನು ತಿಳಿದುಕೊಂಡು ಅವುಗಳನ್ನು ನಿರಕ್ಷರಿಗಳಿಗೆ ಕಲಿಸುವದರಲ್ಲಿ ಪ್ರಯೋಗಮಾಡುವ ಕಲೆಯನ್ನು ಅವಗತ ಮಾಡಿಕೊಳ್ಳಬೇಕು. ಪಾಠವು ಒಳ್ಳೇ ಮನೋರಂಜಕ ಹಾಗೂ ಆಕರ್ಷಕವಾಗಿರಬೇಕು. ಅಂದರೆ ಅನೇಕ ಚಿಂತೆಗಳ ಸಂತೆಯಲ್ಲಿ ಬೆಂಪ ಮನಸ್ಸನ್ನು ಉಲ್ಲಾದಗೊಳಿಸಿ ಅಪ್ರತ್ಯಕ್ಷವಾಗಿ ಜ್ಞಾನ ಬೋಧನೆಯ ಕಾರ್ಯವು ನಡೆಯಬೇಕು. ಅವರ ಮನೋಭೂಮಿಕೆಗೆ ಅನುಗುಣವಾಗಿ. ಅವರೇ ಸಂತೋಷದಿಂದ ಕಲಿಯುವಂಥವರಾಗಬೇಕು. ಓದು ಬರಹ ಕಲಿಯುವ ಉಪಯುಕ್ತತೆ ಹಾಗೂ ಅವಶ್ಯಕತೆಗಳ ಅರಿವು ಸ್ವಾಭಾವಿಕವಾಗಿ ಅವರ ಮನದಲ್ಲಿ ಮೂಡಬೇಕು. ನಿತ್ಯ ಜೀವನದಲ್ಲಿ ಅಜ್ಞಾನದ ದುರುಪಯೋಗ ಪಡೆದು ಜನರನ್ನು ಶೋಷಿಸುವ ಅನೇಕ ಉದಾಹರಣೆಗಳನ್ನು ಕಥಾರೂಪದಿಂದ ಪರಿಣಾಮಕಾರಿಯಾಗಿ ತಿಳಿಸಬೇಕು. ಮನೋರಂಜನೆಗಾಗಿ ಲಾವಣಿಗಳನ್ನು, ಭಜನೆಗಳನ್ನು, ತತ್ವಪದಗಳನ್ನು ಕಲಿಸಬೇಕು. ಆಗಾಗ ಸರಕಾರವು ಸಿದ್ಧಪಡಿಸಿದ ಅನೇಕ ಹೊಸ ಉಪಕರಣಗಳನ್ನು ಅವರಿಗೆ ತೋರಿಸಬೇಕು. ಶಾಸ್ತ್ರೀಯವಾಗಿ ತಯಾರಿಸುವ ಗೊಬ್ಬರಗಳ ಮಾಹಿತಿ, ಸುಧಾರಿಸಿದ ಬೀಜಗಳ ಉಪಯೋಗ, ಅವರ ಬಾಳಿನಲ್ಲಿ ಬೆಳಕು ಬೀರುವ ಉಪಯುಕ್ತ ವಿಷಯವನ್ನು ಸಮಯಾನುಸಾರವಾಗಿ ತಿಳಿಸಿಹೇಳಬೇಕು. ಸರಕಾರದ ಪ್ರಕಟನೆ ಶಾಖೆಯು ಪ್ರಚುರ ಪಡಿಸುವ ಸಾಕ್ಷಿಚಿತ್ರಗಳ. ಶ್ರವ್ಯದೃಶ್ಯೋಪಕರಣಗಳ, (Audio Visual aids) ಬಾನುಲಿ ಕೇಂದ್ರಗಳ ಮುಖಾಂತರ ಅನೇಕ ಉಪಯುಕ್ತ ಮಾಹಿತಿಯನ್ನು ಕೊಡಿಸಬೇಕು. ಇದರಿಂದ ನಿರಕ್ಷರಿಗಳು ಮನಸಾನಂದ ಹೊಂದಿ ಅವರಲ್ಲಿ ಕಲಿಯಬೇಕೆನ್ನುವ ಪ್ರವೃತ್ತಿ ಸ್ವಾಭಾವಿಕವಾಗಿ ಬೆಳೆಯುವದಲ್ಲದೇ ತಮ್ಮ ಮಕ್ಕಳು ಮರಿಗಳ ಶಿಕ್ಷಣದಲ್ಲಿ ಅಭಿರುಚಿ ತೋರಿಸುವರು. ಹೀಗೆ ಅವರಿಗೆ ಜ್ಞಾನವಿತ್ತರೆ ಪ್ರೌಢರು ಕಲಿಯುವದರಲ್ಲಿ ಆಸಕ್ತಿ ವಹಿಸಿ ಸರಕಾರದ ಸಾಮೂಹಿಕ ಅಭಿವೃದ್ಧಿ ಕಾರ್ಯಗಳಲ್ಲಿ ಸಂತೋಷದಿಂದ ಭಾಗವಹಿಸಿ ಭಾರತವ ಸರ್ವತೋಮುಖದ ಏಳ್ಗೆಗಾಗಿ ಶ್ರಮಿಸುವರು. ಸಮಾಜ ಶಿಕ್ಷಣ ಕಾರ್ಯಕರ್ತರು ಇತ್ತ ಲಕ್ಷವಹಿಸಿ ಜನತೆಯ ಉದ್ಧಾರಕ್ಕೆ ದುಡಿಯುವರೆಂದು ಆಶಿಸುತ್ತೇವೆ.

ಅಂಕಗಣಿತ ಶಿಕ್ಷಣ

ಲೇಖಕರು : ಡಿ. ಶಟ್ಟಿ ಶಾಮರಾಯರು, ಎಮ್. ಎ.

ಮಕ್ಕಳಿಗೆ ಅಂಕಗಣಿತವನ್ನು ಕಲಿಸುವಾಗ ಶಿಕ್ಷಕರು ಅವರ ನಿರೀಕ್ಷಣಶಕ್ತಿ ಮತ್ತು ವಿಮರ್ಶಾತ್ಮಕ ಬುದ್ಧಿ ಇವು ಬೆಳೆಯುವಂತೆ ಗಮನವೀಯಬೇಕು. ಇದು ವೈಜ್ಞಾನಿಕ ಯುಗವು. ಗಣಿತಶಾಸ್ತ್ರದ ಕಲ್ಪನೆ ಇಲ್ಲದವರು ವಿಜ್ಞಾನ ವಿಷಯಗಳನ್ನು ತಿಳಿದುಕೊಳ್ಳಲಾರರು. ಪ್ರಾಥಮಿಕ ಅಂಕಗಣಿತ ಜ್ಞಾನವು ಸುಲಭ ವ್ಯವಹಾರದ ಲೆಕ್ಕಗಳನ್ನು ಮಾಡುವ ಪ್ರಸಂಗಗಳಲ್ಲಿ, ಕೆಲಸಗಳಲ್ಲಿ, ಬೇಕಾಗುವದಾದರೂ ಅದು ಸಾಮಾನ್ಯ ಗಣಿತದ ತಳಪಾಯವಾಗಿದೆ. ಸಾಮಾನ್ಯ ಗಣಿತದ ತಂತ್ರ, ಪರಿಭಾಷೆ. ಬೀಜಗಣಿತದಲ್ಲಿ ಅಡಕವಾಗಿದೆ.

ವಿದ್ಯಾಭ್ಯಾಸದಲ್ಲಿ ಅಂಕಗಣಿತ ಶಿಕ್ಷಣವು ಎರಡು ಹಂತಗಳನ್ನು ದಾಟಿ ಈಗ ಮೂರನೆಯ ಹಂತದಲ್ಲಿ ಕಾಲಿಟ್ಟಿದೆ. ಮೊದಲನೆಯ ಹಂತದಲ್ಲಿ ಕೇವಲ ಸಂಖ್ಯೆಗಳ ಹೆಚ್ಚು ಹೆಚ್ಚು ಕಠಿಣವಾದ ಕೃತಿಗಳನ್ನು ಮಾಡಲಿಕ್ಕೆ ಕಲಿಸುವದೇ

ಗುರಿಯಾಗಿತ್ತು. ಎರಡನೇಯ ಹಂತದಲ್ಲಿ ಬ್ಯಾಂಕಿನ ವ್ಯವಹಾರ, ವ್ಯಾಪಾರ ಜಮಾಖರ್ಚಿನ ಲೆಕ್ಕಪತ್ರಗಳನ್ನು ಇಡುವದು ಇದನ್ನೇ ಮುಖ್ಯ ಸಾಧ್ಯವಾಗಿ ಇಟ್ಟುಕೊಳ್ಳಲಾಗಿತ್ತು. ಮೂರನೆಯ ಹಂತದಲ್ಲಿ ನಾವು ಬ್ಯಾಂಕಿನ ವ್ಯವಹಾರ, ವ್ಯಾಪಾರೋದ್ಯೋಗಗಳು, ಕೃಷಿ, ಇನ್ಸುರನ್ಸ್ ಮುಂತಾದ ವ್ಯವಹಾರ ಜ್ಞಾನಕ್ಕೆ ಪ್ರಾಶಸ್ತ್ಯ ಕೊಟ್ಟರೂ ಬುದ್ಧಿಶಕ್ತಿಯನ್ನು ಪ್ರಚೋದಿಸುವಂತಹ ಗಣಿತಶಾಸ್ತ್ರದ ತತ್ವಗಳೂ, ಸಂಶೋಧನ ಬುದ್ಧಿ, ವೈಜ್ಞಾನಿಕ ದೃಷ್ಟಿ, ಭೂಮಿತಿಯಲ್ಲಿ ಕಲಿಯುವಂತೆ ಹೊಸ ಹೊಸ ಸಿದ್ಧಾಂತಗಳನ್ನು ಸ್ಥಾಪಿಸುವ ಕ್ರಮ-ಇವಕ್ಕೂ ಪ್ರಾಶಸ್ತ್ಯ ಕೊಡಬೇಕಾಗಿದೆ— ಮುಖ್ಯವಾಗಿ ಜೀವನ ಶಿಕ್ಷಣದಲ್ಲಿ ಯಾವ ಚಟುವಟಿಕೆಯನ್ನೂ ಕೇವಲ ಯಾಂತ್ರಿಕವಾಗಿ ಮಾಡಿಸದೆ ಇದೇಕೆ? ಹೀಗೇಕೆ ಎಂದು ಕೇಳಿ ತಿಳಕೊಳ್ಳಲಿಕ್ಕೆ ಪ್ರೋತ್ಸಾಹನವೀಯಬೇಕು.

ಟ್ರೇನಿಂಗ್ ಕಾಲೇಜುಗಳಲ್ಲಿ ವಿದ್ಯಾರ್ಥಿ ಶಿಕ್ಷಕರಿಗೆ ಈ ಗಣಿತ ಶಿಕ್ಷಣತಂತ್ರದ ಪರಿಚಯವಾಗಬೇಕು. ಲೆಕ್ಕಗಳನ್ನು ಬಿಡಿಸಲಿಕ್ಕೆ ವಿದ್ಯಾರ್ಥಿಗಳು ಕೊಳ್ಳುವಂತಹ ಬರಿಯ ಪಠ್ಯಪುಸ್ತಗಳಿಂದೇ ಅಲ್ಲದೆ ಶಿಕ್ಷಕರಿಗೆ ಕಲಿಸುವ ವಿಧಾನದ ಸೂಕ್ಷ್ಮ ವಿಮರ್ಶೆಯನ್ನು ತಿಳಿಸುವ ಒಳ್ಳೆಯ ಪುಸ್ತಕಗಳೂ ಬೇಕು. ಇಂಗ್ಲಿಷಿನಲ್ಲಿ ಇಂತಹ ಒಂದೆರಡು ಪುಸ್ತಕಗಳ ಹೆಸರನ್ನೂ ಹೇಳುವೆನು:

1. Easy Mathematics or Arithmetic & Algebra for general readers-by Sir Oliver Lodge (Mac Millan & Co)

2. The Art of Teaching Arithmetic by him Thompson (Longmans Green & Co.)

3. In art of teaching arithmetic by Inner Book.

4. Caporis History of Elementary Mathematics. ಇತ್ಯಾದಿ ಹತ್ತಿಪ್ಪತ್ತು ಪುಸ್ತಕಗಳ ಹೆಸರುಗಳನ್ನೂ ಹೇಳಬಹುದು. ಇಂತಹ ಪುಸ್ತಕಗಳು ನಮ್ಮ ದೇಶಭಾಷೆಗಳಲ್ಲಿ ಇನ್ನೂ ವಿಶೇಷ ಪ್ರಸಿದ್ಧಿಗೆ ಬಂದಿಲ್ಲ. —ಕನ್ನಡದಲ್ಲಂತೂ ಇಲ್ಲವೇ ಇಲ್ಲ.

ಇನ್ನು ಗಣಿತದ ಅಭ್ಯಾಸದಲ್ಲಿ ಮೂರು ಮುಖ್ಯ ಮಟ್ಟಗಳು ಇವೆ– ೧. ಪ್ರಾಥಮಿಕ ಮಟ್ಟ ೨. ಮಾಧ್ಯಮಿಕ ಮಟ್ಟ. ೩, ಕಾಲೇಜ್ ಮಟ್ಟ. ಮೇಲೆ ನಾವು ಉಲ್ಲೇಖಿಸಿದ ಸಂಶೋಧನಾತ್ಮಕ, ವಿಮರ್ಶಾತ್ಮಕ ವಿಧಾನವು ಕಾಲೇಜ್ ಅಥವಾ ವಿಶ್ವವಿದ್ಯಾಲಯದ ಮಟ್ಟದಲ್ಲಿ ಮಾತ್ರ ಸಾಧ್ಯವೆಂದು ತಿಳಿಯಕೂಡದು. ಬುದ್ಧಿಯನ್ನು ಉಪಯೋಗಿಸಿ ಹೇಳದೆ ಇದ್ದ ಮಾತುಗಳನ್ನು ಕಂಡುಕೊಳ್ಳಲು ಹತ್ತು ಹನ್ನೆರಡು ವರ್ಷದ ಮಕ್ಕಳೂ ಸಮರ್ಥರಿರುವರು. ಈ ಗುರಿ ಇಟ್ಟುಕೊಂಡು ಕಲಿಸಲಿಕ್ಕೆ ಶಿಕ್ಷಕರು ವಿಶೇಷ ಪರಿಶ್ರಮವನ್ನು ವಹಿಸಬೇಕಾಗುವದು. ಅವರಲ್ಲಿ ಎರಡು ಮುಖ್ಯ ಗುಣಗಳೂ ಬೇಕು. ಗ. ವಿಷಯದ ಸುಸ್ಪಷ್ಟ ಸಮನ್ವಿತಜ್ಞಾನ ಮತ್ತು ಕಲಿಸುವ ಕಲೆಯ ಬಗ್ಗೆ ಉತ್ಸಾಹ ಮತ್ತು ಅಭಿಮಾನ. ಶಿಕ್ಷಕರ ಶಿಕ್ಷಣಾಲಯಗಳಲ್ಲಿಯ ಅಧ್ಯಾಪಕರಿಗೆ ಮೇಲೆ ಹೇಳಿದ ಮಾತುಗಳ ಅರಿವಿಲ್ಲವೆಂತಲ್ಲ. ಆದರೆ ಅವರಿಗೆ ಈಗಿನ ಶಿಕ್ಷಣದಲ್ಲಿ ಬಹಳ ಭಾರವಾದ ಕೆಲಸವಿರುವದರಿಂದ ಹೀಗೆ ಒಂದೊಂದೇ ಸೂಕ್ಷ್ಮ ವಿಷಯದ ಕಡೆ ಲಕ್ಷ್ಯವನ್ನು ಸಾಕಷ್ಟು ಅವರು ಹಾಕಲಾರರು; ಅಲ್ಲದೇ, ಅವರಿಗೆ ಈ ಕೆಲಸದಲ್ಲಿ ಸಹಾಯ ಮಾಡಲಿಕ್ಕೆ ತಕ್ಕ ಪುಸ್ತಕಗಳೂ ಸಿಕ್ಕುವದಿಲ್ಲ.

ಇತ್ತೀಚಿನ ಶಿಕ್ಷಣದಲ್ಲಿ ಬುದ್ಧಿಪ್ರಚೋದನೆಯ ಪ್ರಶ್ನೆಗಳೂ, ಪಠ್ಯ ಪುಸ್ತಕಗಳ ಪ್ರಯೋಜನವೂ ಸಾಕಷ್ಟು ಮೊರೆಯುತ್ತಿವೆ; ಇನ್ನೂ ದೀರ್ಘವಾದ ಪ್ರಯತ್ನವೂ ಮಾರ್ಗದರ್ಶನವೂ ಬೇಕು. ಎರಡು ಮೂರು ವಿಧಾನಗಳು ಈಗಾಗಲೆ ರೂಢಿಯಲ್ಲಿ ಬಂದಿವೆ. ೧. ಬಾಯಿಲೆಕ್ಕಗಳು ೨. ನಿರೀಕ್ಷಣೆಗೆ ಸಹಾಯ ಮಾಡುವ ನಾನಾವಿಧದ ಉಪಕರಣಗಳು ೩. ಯಾವದೊಂದು ವಿಷಯದ ರೀತಿಯನ್ನು ಏಕೆ ಕಲಿಯಬೇಕೆಂಬುದಕ್ಕೆ ಒಂದು ವ್ಯವಹಾರದ

ಕೆಲಸದ ಹಿನ್ನೆಲೆ. ಇವಕ್ಕೆ ಇನ್ನೆರಡು ವಿಘಾನಗಳನ್ನು ಜೋಡಿಸಬಹುದು. ೪. ತಾಳೆ ಮಾಡಿ ನೋಡುವದು. ೫. ಒಟ್ಟಿನಮೊತ್ತ, ಉಳಿಯುವ ಬಾಕಿ, ಗುಣ ಭಾಗಗಳ ಕೃತಿಗಳಿಗೆ ಬೇಕಾಗುವ ಕೆಲವು ಮೂಲತತ್ವಗಳು.

ಈ ವಿಘಾನಗಳನ್ನು ಕೆಲವು ಉದಾಹರಣೆಗಳಿಂದ ತಿಳಿಸಿ ಹೇಳುವೆವು :

೧. ಒಂದು ನಿಯಮಕ್ಕೆ ಉಪಪ್ರಮೇಯವಾಗಿರುವಂತೆ ಕೆಲವು ಬಾಯಿಲೆಕ್ಕಗಳು.

೨ ತಾಸು = ಎಷ್ಟು ನಿಮಿಷಗಳು ?; ೪ ತಾಸು = ಎಷ್ಟು ನಿಮಿಷ ?; ೬ ತಾಸು = ಎಷ್ಟು ನಿಮಿಷ ?

೨ ತಾಸು, ೪ ತಾಸು, ೬ ತಾಸು – ಇವುಗಳಲ್ಲಿ ಯಾವದು ಎಲ್ಲಕ್ಕೂ ದೊಡ್ಡದು? ಅಥವಾ ಈ ಎಲ್ಲ ಅಪೂರ್ಣಾಂಕಗಳು ಒಂದೇ ಅಳತೆಯನ್ನು ತೋರಿಸುವವೋ ?

೨ = ೪ = ೬ =.... = ...=.... ಈ ಸಾಲನ್ನು ಇನ್ನೂ ೩ ಅಪೂರ್ಣಾಂಕಗಳ ವರೆಗೆ ಬೆಳೆಸಿರಿ.

೨ ಕ್ಕೆ ಸರಿ ಇರುವ ಮತ್ತು ೬ ಛೇದವಿರುವ ಅಪೂರ್ಣಾಂಕವನ್ನು ಹೇಗೆ ತೆಗೆಯುವಿರಿ ?

೪ ಕ್ಕೆ ಸರಿ ಇರುವ ಮತ್ತು ೯ ಛೇದವಿರುವ ಅಪೂರ್ಣಾಂಕವನ್ನು ಹೇಗೆ ತೆಗೆಯುವಿರಿ ?

೪ ಕ್ಕೆ ೩ ರಿಂದ ಗುಣಿಸಿದರೆ ಎಷ್ಟು ಬರುವದು ? ೫ ಕ್ಕೆ ೨ರಿಂದ ಅಥವಾ ೫ ರಿಂದ ಗುಣಿಸಿದರೆ ಎಷ್ಟು ಬರುವದು ?

೪ ದ ಅಂಶಕ್ಕೂ ಛೇದಕ್ಕೂ (೩ಕ್ಕೂ ೫ಕ್ಕೂ) ೨ ರಿಂದ ಗುಣಿಸಿದರೆ ಎಷ್ಟು ಬರುವದು ?

೪ ಕ್ಕೆ ಸರಿಯಿರುವ ಮತ್ತು ೬ ಛೇದವಿರುವ ಅಪೂರ್ಣಾಂಕವನ್ನು ತೆಗೆಯುವ ರೀತಿಯನ್ನು ಸ್ವಲ್ಪದರಲ್ಲಿ ಹೇಳಿರಿ.

೨. ಸೊಟ್ಟಗುಣಂತಹ ಉಪಕರಣಗಳು :

(ಅ)



(ಬ)



ಏಳು ಮೂರಲು ಎಷ್ಟು ? (ಬ) ದಲ್ಲಿ ತೋರಿಸಿದಂತೆ ೭ ಚಿಕ್ಕಿಗಳನ್ನು ೭ ಕುಣಿಗಳಲ್ಲಿ ಮೂರು ಸಾಲುಗಳಾಗಿ ಇಡಿರಿ. ಆ ಮೇಲೆ ೩ನೆಯ ಸಾಲಿನ ಕಡೆಯ ಚಿಕ್ಕಿಯಿಂದ ಹಿಂಬದಿಗೆ ಹೋಗಿ ಒಂದೊಂದನ್ನೆ ಎತ್ತಿ ೧ನೆಯ, ೨ನೆಯ ಸಾಲಿನ ತೆರವಿದ್ದ ಸ್ಥಳಗಳನ್ನು ತುಂಬುತ್ತಾ ಬನ್ನಿರಿ. ಎರಡೂ ಸಾಲುಗಳು ತುಂಬಿ ಹೆಚ್ಚಾದುವನ್ನು ೩ನೆಯ ಸಾಲಿನಲ್ಲಿ ಇಡಿರಿ; (ಅ) ದಲ್ಲಿದ್ದಂತೆ ಆಗುವದೋ ಹೇಗೆ ನೋಡಿರಿ. ಈಗ ಒಟ್ಟು ಚಿಕ್ಕಿಗಳು ಎಷ್ಟಾದವು ಎಂಬುದನ್ನು ಥಟ್ಟನೆ ನೋಡಿ ಹೇಳಿರಿ. ಒಂದೊಂದನ್ನೇ ಎಣಿಸಬೇಡಿರಿ. ಒಂದು ಪೂರ್ಣ ಸಾಲಿನಲ್ಲಿ ಎಷ್ಟು ಚಿಕ್ಕಿಗಳಿವೆ ?

ಹಾಗಾದರೆ ೭ × ೩ = ?

೩. ನಮ್ಮ ಸಾಲೆಯ ಹಿತ್ತಲಲ್ಲಿ ೫ ಘೂಟು ಉದ್ದ, ೪ ಘೂಟು ಅಗಲ ಇರುವ ಒಂದು ಜಾಗಾದಲ್ಲಿ ೧ ಘೂಟು ಉದ್ದ, ೧ ಘೂಟು ಅಗಲ ಇರುವ ಸಣ್ಣ ಮಡಿಗಳನ್ನು ಮಾಡಬೇಕಾದರೆ ಎಷ್ಟು ಮಡಿಗಳನ್ನು ಮಾಡಬಹುದು ?

ಈ ಪ್ರಸಂಗಕ್ಕನುಸರಿಸಿ, ಈ ಚಟುವಟಿಕೆಗೆ ಸಮನ್ವಯಿಸಿ ಕ್ಷೇತ್ರಫಲದ ಅಳತೆಯ ರೀತಿಯನ್ನು ಕಲಿಸಬಹುದು. ಅಡ್ಡಮಾಗಿ ಒಂದೊಂದು ಸಾಲಿನಲ್ಲಿ ಐದೈದು ಮಡಿಗಳು ಕಾಣುವವು. ಇಂಥ ಒಂದರ ಕೆಳಗೊಂದು ಎಷ್ಟು ಸಾಲುಗಳಿವೆ? ೫ ಮಡಿಗಳ ೪ ಸಾಲು ಆದರೆ ೫ ಮಡಿ × ೪ = ೨೦ ಮಡಿಗಳು ಆಗುವವು. ೫ ಮಡಿ × ೪ = ೨೦ ಮಡಿಗಳು ಆಗುವವು. ನಿಮಗೆ ಕಾಣುವ ಒಂದೊಂದು ಮಡಿಯ ಜಾಗವ ಅಳತೆಗೆ (೧ ಘೂಟು ಉದ್ದ ೧ ಘೂಟು ಅಗಲ) ಒಂದು ಚದುರ ಘೂಟು (ಚದುರ ಅಡಿ) ಅಥವಾ ಚೌರಸ ಘೂಟು ಅನ್ನುವೆವು. ಹಾಗಾದರೆ ನಮ್ಮ ಜಾಗದ ಒಟ್ಟು ಕ್ಷೇತ್ರ (ಸ್ಥಳ)ವೆಷ್ಟು ? ೨೦ ಚೌರಸ ಘೂಟು = ೫ ಚೌ. ಘೂ × ೪.

(ಎರನೆಯ ಪುಟದಿಂದ)

ರಾಜಕಾರಣಿ ಇತ್ಯಾದಿ ಪಾತ್ರಗಳ ವಿಡಂಬನೆ; ಪೌರಾಣಿಕ ಕಾಲದ ಯುದ್ಧೋತ್ಸಾಹದ ಕೂಗು- ಜಯಘೋಷ-ಚೀತ್ಕಾರ ನಂದಿಮಾಗಧರ ದರ್ಬಾರದ ಹೊಗಳಿಕೆ, ನಾಟಕದ ಮೊದಲು ಬರುವ ಸೂತ್ರಧಾರನ ಹಾಸ್ಯ ಮಾತುಗಳು,ಕೋಲ್‌ಕುದುರೆ, ಉಗಿಬಂಡಿ ಇತ್ಯಾದಿಗಳನ್ನು ವರ್ಗದ ಮಕ್ಕಳನ್ನ ನುಲಕ್ಷಿಸಿ ಅವರಿಂದ ಹೇಳಿಸಬಹುದು. ವಿದ್ಯಾರ್ಥಿಗಳಿಂದ " ಅಣಕ ಪಾರ್ಲಿಮೆಂಟ " ಮಾಡಿಸ ಬಹುದು. ಇವೆಲ್ಲವೂ ಶಿಕ್ಷಕರ ಜ್ಞಾನದಾಹ, ವ್ಯಕ್ತಿತ್ವ ನನ್ನು ಅವಲಂಬಿಸಿರುವ ಕಾರಣ ಶಿಕ್ಷಕರ ಬೌದ್ಧಿಕ ಪ್ರತಿಭೆ ಮೂಡಿ ಬರಬೇಕಾಗಿದೆ..

ಹೀಗೆ ಶಾಲೆಯ ಮಕ್ಕಳ ಸಾಂಘಿಕ ಪ್ರವೃತ್ತಿಯ ಉದಾತ್ತೀಕರಣ, ಮಕ್ಕಳಲ್ಲಿ ಸೌಂದರ್ಯ ಭಾವನೆಯ ವಿಕಸನ, ಲಲಿತ ಕಲೆಗಳ ಅವಿರ್ಭಾವ ಮತ್ತು ಮಕ್ಕಳ ವಿಚಾರಗಳನ್ನು ಪ್ರಕಟ ಮಾಡುವ ಅವಕಾಶಗಳನ್ನು ನಾವು ಒದಗಿಸಬಹುದು. ವರ್ಷದ ತುಂಬ ಬರುವ ಹಬ್ಬಗಳು-ದಿನಾಚರಣೆಗಳು-ಜಯಂತಿ-ಪುಣ್ಯತಿಥಿಗಳು ಮತ್ತು ಶಾಲಾ ಸಮಾರಂಭಗಳಲ್ಲಿ ಅವಕಾಶ ಮಾಡಿಕೊಂಡು ಕಾರ್ಯಕ್ರಮ ಏರ್ಪಡಿಸಬಹುದು.

ಈ ಎಲ್ಲ ಕಾರ್ಯಕ್ರಮಗಳನ್ನು " ಶಾಲೆಯ ಏಳ್ಗೋರ ಸಂಘವು " ಕಾರ್ಯಗತಗೊಳಿಸಬೇಕು. ಆಂದರೆ ಮಕ್ಕಳ ಸ್ವಪ್ರಕಾಶಕ್ಕೆ ಅನುವು ದೊರೆತು ಶಾಲೆ ಪಾಲಕರಲ್ಲಿ ಅನ್ಯೋನ್ಯ ಸಂಬಂಧ ಬೆಳೆದು ಇವು ಶಾಲೆಗಳು ಬೋಧನೆಯೊಂದಿಗೆ ಮನರಂಜನೆ ನೀಡುವ ಸಾಮಾಜಿಕ ಸುಧಾರಣಾ ಕೇಂದ್ರಗಳಾಗಬಹುದು. ಮಕ್ಕಳ ಸುಸ್ಫೋರಂಜನೆ ಹಾಗೂ ಸುಸ್ಫೋವಿಕಾಸಗಳು ಜೊತೆ ಜೊತೆಯಾಗಿ ಬೆಳೆದು ಬರಬಹುದು.

—೦—

(ಆನೆಯ ಪುಟದಿಂದ)

ಸಹಾಯಿಸಬಹುದಾಗಿದೆ. ಅದು ಕಾರಣ ಜನತೆಯ ಸಹಾಯ, ಸಹಕಾರ ಇತ್ತ ಹರಿದುಬರುವಂತಾಗಬೇಕು.

ವಾಚನಾಲಯಗಳ ಕಾರ್ಯಕ್ಷಮತೆ ಬೆಳೆದು ಬರಲು ತಕ್ಕಂಥ ಒಬ್ಬ ತಜ್ಞ ಗ್ರಂಥಭಾಂಡಾರಿ ಬೇಕು. ತಜ್ಞ ಗ್ರಂಥ ಭಾಂಡಾರಿಯಿದ್ದರೆ ಅವುಗಳ ಆಡಳಿತ ಸುಧಾರಿಸುವದಲ್ಲದೆ ಕಾರ್ಯಕ್ಷಮತೆಯೂ ಹೆಚ್ಚುವದು. ಅವನು ವಾಚನಾಲಯಗಳಿಗೆ ಬರುವ ಓದುಗರ ಮನಸ್ಥಿತಿಯನ್ನು ಅರಿತು ಅವರ ಆಶೆ ಆಕಾಂಕ್ಷೆಗಳನ್ನೂ, ಬೇಕು ಬೇಡ ಗಳನ್ನೂ ಗುರುತಿಸಿಕೊಂಡು ಅವರ ಕೂಡ ಆದರದಿಂದ ಆತ್ಮೀಯತೆಯಿಂದ ವರ್ತಿಸಿ ಅವರಲ್ಲಿಯ ವಾಚನಾಭಿರುಚಿಯನ್ನು ಕುದುರಿಸಬಲ್ಲನು. ಆದುದರಿಂದ ಗ್ರಂಥ ಭಾಂಡಾರಿಯ ಪಾತ್ರ ಹಿರಿದಾದುದು.

ವಾಚನಾಲಯವೆಂದರೆ ಜ್ಞಾನ ದೇಗುಲವೆಂದು ಜನರು ಭಾವಿಸುವಂತಾಗಬೇಕು. ಅಲ್ಲಿಯ ಪ್ರಶಾಂತ ವಾತಾವರಣವು ಅವರ ಮನವನ್ನು ಸೂರೆಗೊಳ್ಳುವಂತಹ ದಿರಬೇಕು. ತನ್ಮಯತೆಯಿಂದ ವಾಚನಮಂದಿರದಲ್ಲಿ ಕುಳಿತು ಗ್ರಂಥ ಪಠಣ ಮಾಡುವ ಪ್ರವೃತ್ತಿಯು ಎಲ್ಲರಲ್ಲಿಯೂ ಉಂಟಾಗಬೇಕು. ಆಗ ವಾಚನಾಲಯಗಳ ಕಾರ್ಯ ಫಲಿಸುವದು.

——

ಸ್ಕಾಲರಶಿಪ್ ಪರೀಕ್ಷೆಯ ಯಶಸ್ಸು ಕುರುಬಗೊಂಡ ಕಂ. ಗಂ. ಶಾಲೆ.

ಈ ಶಾಲೆಯ ೫ ವಿದ್ಯಾರ್ಥಿಗಳು ಈ ಸಲದ ಹೈಸ್ಕೂಲ ಸ್ಕಾಲರಶಿಪ್ ಪಡೆದಿದ್ದು, ಅದರಲ್ಲಿ ಕು. ಚಂದ್ರಕೇಮಿರ ಚಿನ್ನಪ್ಪ ಕೋಟಿ ಈತನು ಜಿಲ್ಲೆಗೆ ಪ್ರಥಮ ಸ್ಥಾನ ಪಡೆದು ಶಾಲೆಗೆ ವಿಶೇಷ ಕೀರ್ತಿ ತಂದಿದ್ದಾನೆ. ಇಷಲ್ಲದೆ ಮೂರು ವಿದ್ಯಾರ್ಥಿಗಳು ಮಿಡ್ಲ ಸ್ಕೂಲ ಸ್ಕಾಲರಶಿಪ್ ಪಡೆದಿದ್ದಾರೆ.

ಹೀಗೆ ಒಟ್ಟಿಗೆ ೮ ಸ್ಥಾನಗಳು ಈ ಶಾಲೆಗೆ ದೊರೆತಿವೆ. ಇಂಥ ಯಶಸ್ಸನ್ನು ಈ ಶಾಲೆ ಎಂದಿನಿಂದಲೂ ಗಳಿಸುತ್ತ ಬಂದಿದೆ.

——

Regd. No. B. 5375

ಭಾಗ ೧ ಕವಿತಾ ಸಂಕಲನ ೧೫೦ **ನಾವು ನಮ್ಮವರು** ಭಾಗ ೨ ಕಥಾ ಸಂಕಲನ ೧೫

(ಪ್ರಾಥಮಿಕ ಶಿಕ್ಷಕ ಸಾಹಿತಿಗಳ ಫೋಟೊ ಪರಿಚಯ ಕಥೆ ಕವನಗಳು)

ಮಾನ್ಯ ಎ. ಸಿ. ದೇವೇಗೌಡರು ಶಿಕ್ಷಣಾಧಿಕಾರಿಗಳು [D. P. I.] ಮೈಸೂರು ರಾಜ್ಯ ಅವರ ಮುನ್ನುಡಿ.

ಮಾನ್ಯ ಸಿದ್ಧಯ್ಯ ಪುರಾಣಿಕ 'ಕಾವ್ಯಾನಂದ'ರು ಡಿ. ಸೆಕ್ರೆಟರಿ ಶಿಕ್ಷಣ ವಿಭಾಗ ಇವರ ಹಿನ್ನುಡಿಗಳು.

- ಕೇವಲ ೩ ರೂಪಾಯಿ [ಅಂಚೆಸೇರಿ] ವಾರ್ಷಿಕ ಚಂದಾ ಹಣದಲ್ಲಿ ೩ನೆಯ ಮಾಲೆಯ ೧೫-೨೦ನೆಯ ಕುಸುಮ ಪಡೆಯಿರಿ.
- ಪ್ರಾಥಮಿಕ ಶಿಕ್ಷಕರ ಕಥೆ, ಕಾದಂಬರಿ, ಕವನ, ನಾಟಕಾದಿ ಕೃತಿಗಳು ೪೦೦ ಪುಟಗಳಲ್ಲಿ.
- ಅಗಸ್ಟ ದಿಂದ ಅಗಸ್ಟಕ್ಕೆ ಒಂದು ವರುಷ
- ಬಿಡಿ ಕುಸುಮ ಚಂದಾದಾರರಿಗೆ ೪ ಜೆಲೆಯಲ್ಲಿ [ಅಂಚೆಖರ್ಚ
- ವರ್ಷದ ಮಧ್ಯದಲ್ಲಿ ಚಂದಾದಾರರಾದರೂ ಆ ವರ್ಷದ ಎಲ್ಲ ಪುಸ್ತಕಗಳು ದೊರೆಯುವವು.
- ಇಂದೇ ಚಂದಾಹಣ ಕಳಿಸಿ ತಮ್ಮದೇ ಆದ ಶಿಕ್ಷಕರ ಬಳಗವು ಬೆಳೆವಂತೆ ನೆರವಾಗಿರಿ. ಈ ಅಲ್ಪ ಹಣ ತಮ್ಮ ಶಿಕ್ಷಕ ಮಿತ್ರ ಏಳ್ಗೆಗೆ ಮೀಸಲು. ಗೆಳೆಯರನ್ನು, ವಾಚನಾಲಯಗಳನ್ನು ಚಂದಾದಾರರನ್ನು ಮಾಡಿ ನೆರವಾಗಿರಿ.

ವಿವರಗಳಿಗೆ: **ಭಾರತೀ ಸಾಹಿತ್ಯ ಭಂಡಾರ** ಅಂಚೆ: **ಯರನಾಳ** ಜಿಲ್ಲೆ: **ವಿಜಾಪುರ**

ಕಲ್ಯಾಣ ಕನ್ನಡ ಗುಡಿಯ ಕಾಣಿಕೆ

ಸುವರ್ಣ ಸಂಧಿ! ಸಚಿತ್ರ ಗ್ರಂಥ!! ಸುಂದರ ಮುದ್ರಣ!

"ಶಿಕ್ಷಣ-ಶಿಕ್ಷಕ-ದರ್ಶನ"

ಶಿಕ್ಷಕರಿಗೂ, ಶಿಕ್ಷಕ ವಿದ್ಯಾರ್ಥಿಗಳಿಗೂ, ಶಿಕ್ಷಣಾಭಿಮಾನಿಗಳಿಗೂ, ಉಪಯುಕ್ತವಾಗುವಂಥ, ತನು-ಮನ ಸೆಳೆಸುವಂಥ, ಶಿಕ್ಷಣ ತಜ್ಞರಿಂದ ಪರಿಶೀಲಿಸಲ್ಪಟ್ಟಂಥ, ಭಾರತದಲ್ಲಿಯ ಮಾನ್ಯ ಮಂತ್ರಿವರ್ಯರಿಂದ, ರಾಜ್ಯಪಾಲರಿಂದ, ಶಿಕ್ಷಣಾಧಿಕಾರಿಗಳಿಂದ, ಪ್ರಿನ್ಸಿಪಾಲರಿಂದ, ಸಾಹಿತಿಗಳಿಂದ ಪ್ರಶಂಸೆ ಪಡೆದ ಅಭಿಪ್ರಾಯಗಳುಳ್ಳಂಥ, ಕರ್ನಾಟಕ ವಿಶ್ವವಿದ್ಯಾಲಯದ ಉಪ ಕುಲಪತಿಗಳಾದ ರ್ಯಾಂಗ್ಲರ್ @ೀ ಡಿ. ಸಿ. ಪಾವಟೆಯವರು ಮುನ್ನುಡಿ ಬರೆದ ಅಮೋಘ ಗ್ರಂಥ.

@ೀ ನಿಂಬಾಳ ಶಿಕ್ಷಕ ದಂಪತಿಗಳಿಂದ ಸಂಗ್ರಹಿಸಲ್ಪಟ್ಟಿದೆ. ಅಖಿಲ ಕರ್ನಾಟಕದ ಗಣ್ಯ ಶಿಕ್ಷಕ-ಶಿಕ್ಷಕಿ ಬಣ್ಣ ಬಣ್ಣಗಳಲ್ಲಿ ೪೧ ಫೋಟೊ ಬ್ಲಾಕ್, ಲೇಖನ, ಪರಿಚಯಗಳುಳ್ಳಂಥ ೪೭೫ ಪುಟಗಳ ಅಮರ ಸಾಹಿತ್ಯ ಗ್ರಂಥ **ಕನ್ನಡದಲ್ಲಿ ಒಂದು ಉತ್ತಮ ಮಾದರಿಯ ಶಿಕ್ಷಣಿಕ ಉದ್ಗ್ರಂಥ.**

ದಿ. ೧೫ ಅಗಸ್ಟ ಸ್ವಾತಂತ್ರ್ಯ ದಿನದಂದು ಮಾನ್ಯ @ೀ ಎ. ಎಚ್. ದಳವಾಯಿ, ಎ. ಓ. ಸಾಹೇಬರ ಅಧ್ಯಕ್ಷತೆಯಲ್ಲಿ ಪ್ರೊ. ಬಿ. ಟಿ. ಸಾಸನೂರ ಅವರ ಅಮೃತಹಸ್ತದಿಂದ ಈ ಗ್ರಂಥ ಪ್ರಕಾಶನಗೊಂಡಿದೆ.

ವಿವರಗಳಿಗೆ ಇಂದೇ ಈಗಲೇ ಬರೆಯಿರಿ.

ಸಾದಾ ಪ್ರತಿ ೩ ರೂ.] ವ್ಯಾಪಾರಸ್ಥರಿಗೆ ಧಾರಾಳವಾದ ಕಮೀಷನ್. [ಸುಂದರ ಪ್ರತಿ ೪

ವಿಳಾಸ :- @ೀ ನಿಂಬಾಳ ಕಲ್ಯಾಣಪ್ಪ, ಪೋಸ್ಟ:— ತಾಂಬಿ, ಜಿಲ್ಲಾ:— ವಿಜಾಪುರ.

Printed by Shri S. F. Kattimani, at Manohar Power Printing Press, Hubli.
Edited & Published by Sjts. G. M. Joshi, B. M. Shintri, S. R. Tatti & Smt. P. A. Bhat at the Kannada Jeevan Shikshan Office, Govt. Training College for Men, Dhar

ಜೀವನ ಶಿಕ್ಷಣ

ಪ್ರಧಾನ ಸಂಪಾದಕರು : ಶ್ರೀ ಜಿ. ಎಂ. ಜೋಶಿ

ತ್ರಿವಿಧ ದಾಸೋಹಮೂರ್ತಿಗಳಾದ
ಶ್ರೀ ಮ. ನಿ. ಪ್ರ. ಮೃತ್ಯುಂಜಯ ಮಹಾಸ್ವಾಮಿಗಳು, ಧಾರವಾಡ

ಪ್ರತಿ ಸಂಚಿಕೆ [illegible] ವಾ.ಚಂ. ೪ ರೂ.

ಜೀವನ ಶಿಕ್ಷಣ

— ಸಂಪಾದಕ ಮಂಡಲ —

ಸಂಚಾಲಕರು: ಶ್ರೀ ಎಮ್. ಜಿ. ಹಂದ್ರಾಳ, ಬಿ.ಎ.(ಆನರ್ಸ),ಎಮ್.ಈಡಿ.,ಡಿ.ಬಿ.ಈಡಿ.,
ಎಜ್ಯುಕೇಶನಲ್ ಇನಸ್ಪೆಕ್ಟರ್, ಧಾರವಾಡ.

ಪ್ರಧಾನ ಸಂಪಾದಕರು: ಶ್ರೀ ಜಿ. ಎಮ್. ಜೋಶಿ,
ಪ್ರಿನ್ಸಿಪಾಲ, ಗಂಡು ಮಕ್ಕಳ ಸರಕಾರಿ ಟ್ರೇನಿಂಗ ಕಾಲೇಜ, ಧಾರವಾಡ.

— ಸದಸ್ಯರು —

ಶ್ರೀಮತಿ ಪಿ. ಎ. ಭಾಸ್ಕರ, ಲೇಡಿ ಸುಪರಿಂಟೆಂಡೆಂಟ, ಹೆಣ್ಣು ಮಕ್ಕಳ ಸರಕಾರಿ ಟ್ರೇನಿಂಗ ಕಾಲೇಜ, ಧಾರವಾಡ.

ಶ್ರೀ ಬಿ. ಎಂ. ಶಿಂತ್ರಿ, ಬಿ.ಎ.,ಬಿ.ಟಿ., ನಿವೃತ್ತ ಅಸಿಸ್ಟಂಟ ಎಜ್ಯುಕೇಶನಲ್ ಇನಸ್ಪೆಕ್ಟರ ದಕ್ಷಿಣ ಭಾಗ. (ಮುಂಬಯಿ ಕರ್ನಾಟಕ) ಹಾಗು ಗೌ. ಕಾರ್ಯದರ್ಶಿ ಮತ್ತು ಲಾಯಬ್ರೇರಿಯನ್, ಸಾಹಿತ್ಯ ಸಮಿತಿ ಲಿಂಗಾಯತ ವಿದ್ಯಾಭಿವೃದ್ಧಿ ಸಂಸ್ಥೆ, ಧಾರವಾಡ.

ಶ್ರೀ ಎಸ್. ಆರ್. ಕಟ್ಟಿ, ರಿಟಾಯರ್ಡ ಪ್ರಿನ್ಸಿಪಾಲ, ಪ್ರಾಥಮಿಕ ಶಿಕ್ಷಕರ ಟ್ರೇನಿಂಗ ಕಾಲೇಜ, ನವಲಗುಂದ.

ಸಂಪುಟ ೯೫ ಎಪ್ರಿಲ್ ೧೯೬೦ ಸಂಚಿಕೆ ೧೧

— ಪರಿವಿಡಿ —

೧.	ಸಂಪಾದಕೀಯ	....	೧
೨.	ಶ್ರೀ ಶ್ರೀ ಮೃತ್ಯುಂಜಯ ಮಹಾ ಸ್ವಾಮಿಗಳು	ಶ್ರೀ ಎಮ್. ಜಿ. ಹಂದ್ರಾಳ	೩
೩.	ಶ್ರೀ ಮ. ನಿ. ಪ್ರ. ಮೃತ್ಯುಂಜಯ ಮಹಾ ಸ್ವಾಮಿಗಳು	ಶ್ರೀ ಶಿಂತ್ರಿ ಬಸಪ್ಪನವರು	೫
೪.	ನಾ ಕಂಡ ಗಾಂಧೀಗ್ರಾಮ	.... ಶ್ರೀ ಎಚ್. ಜಿ. ಜೋಶಿ	೯
೫.	ಶಿಕ್ಷಕನ ಮಿತ್ರ ಕರಿ ಹಲಿಗೆ	.... ಶ್ರೀ ಎಚ್. ಎಮ್. ಅತ್ತಿಕಟ್ಟಿ	೧೨
	ಶಿಕ್ಷಣದ ಸ್ವರೂಪ (ಕಲೆ ಹಾಕಿದ ಲೇಖ)	.... ಶ್ರೀ ಎಸ್. ಎಸ್. ನಾಡಕರ್ಣಿ	೧೫
೬.	ಜೀವನ ಶಿಕ್ಷಣದ ರೂಪರೇಷೆಯ ಮುಂಧೋರಣೆ (ಅನುವಾದಿತ ಲೇಖ)	.... ಶ್ರೀ ತಟ್ಟಿ ಶ್ಯಾಮರಾಯರು	೧೮
೮.	ಹೊಸ ಶಿಕ್ಷಣ	.... ಶ್ರೀ ಜಿ. ಎಸ್. ಗೋಕರ್ಣ	೨೧
೯.	ಪಾಶ್ಚಿಮಾತ್ಯರ ಸಾಮಾಜಿಕ ಪ್ರಜ್ಞೆ ಹಾಗೂ ಅವರ ಶೈಕ್ಷಣಿಕ ದೃಷ್ಟಿ	.... ಶ್ರೀ ಮ. ಗು. ಶಿವಾರಿ	೨೯
೧೦.	ಆನಂದಮಯ ಸಹಜ ಮುಖಮುದ್ರೆ ಶಿಕ್ಷಕನ ವ್ಯಕ್ತಿತ್ವದ ಬೆಳೆ	.... ಶ್ರೀ ಅನ್ನದಾನೀಶ್ವರ ವಿರಕ್ತಮಠ	೩೨

ಸಂಪಾದಕೀಯ

ಶ್ರೀ. ಮು. ನಿ. ಪ್ರ. ಮೃತ್ಯುಂಜಯ ಮಹಾಸ್ವಾಮಿಗಳು

ಜನಸೇವೆಯೇ ಈಶಸೇವೆಯೆಂದು ದುಡಿದವರ ದುಡಿತವನ್ನು ಜನತೆಯು ಬಹು ಪ್ರೇಮದಿಂದಲೂ ಆತ್ಮೀಯತೆಯಿಂದಲೂ ಕಾಣುವದುಂಟು. ಧಾರವಾಡ ದಲ್ಲಿಯ ಹಾವೇರಿಪೇಟೆಗೆ ಧಾರವಾಡ ನಗರ ಸಭೆಯವರು ದಿನಾಂಕ ೩೦-೧೨-೧೯೫೫ ರಂದು 'ಮೃತ್ಯುಂಜಯ ನಗರ' ಎಂದು ನಾಮಕರಣ ಮಾಡಿದ್ದು ಸರ್ವಶ್ರುತವಿದೆ ಯಷ್ಟೆ. ಹಾವೇರಿಪೇಟೆಯ ಕೊನೆಯ ಭಾಗವಾಗಿದ್ದ ನಿರ್ಜನ ಪ್ರದೇಶದಲ್ಲಿ ಹಾಳುಕೊಂಪೆಯಲ್ಲಿದ್ದ ಮುರುಘಾ ಮಠವು ಈಗ ಪುಣ್ಯಾಕ್ಷೇತ್ರವಾಗಿ ಪರಿಣಮಿಸಿದೆ. ಈ ಮಠವು ಸ್ವಾಮೀಜಿಯವರ ಕರ್ಮಭೂಮಿಯೂ ಆಹುದು, ತಪೋ ಭೂಮಿಯೂ ಆಹುದು, ಅವರ ದಿವ್ಯ ಪ್ರಭಾವದಿಂದ ಅದು ಈಗ ಧಾರವಾಡ ಶಹರದ ಹಾಗೂ ಕನ್ನಡ ನಾಡಿನ ಧಾರ್ಮಿಕ, ಸಾಮಾಜಿಕ, ಸಾಹಿತ್ಯಿಕ ಮತ್ತು ಸಾಂಸ್ಕೃತಿಕ ಕೇಂದ್ರವಾಗಿದೆ. ಅಂತಹ ಕಾರಣಿಕ ಪುರುಷರ ಜೀವನ ಚರಿತ್ರದ ಪರಿಚಯವನ್ನು ಇದೇ ಸಂಚಿಕೆಯಲ್ಲಿ ಕೊಡಲಾಗಿದೆ.

ಇದೇ ತಿಂಗಳು ದಿನಾಂಕ ೯-೪-೧೯೬೦ ಕ್ಕೆ ಮುಮ್ಮಾ ಸ್ವಾಮಿಗಳಿಗೆ ೭೨ ವರ್ಷಗಳು ತುಂಬಿವೆ. ೭೩ನೇ ವರ್ಷದಲ್ಲಿ ಕಾಲಿಟ್ಟಿದ್ದಾರೆ. ನಮ್ಮ ರಾಷ್ಟ್ರದ ಮತ್ತು ನಾಡಿನ ಮುಖಂಡರು ಈ ಪುಣ್ಯ ಕ್ಷೇತ್ರಕ್ಕೆ ಸಂದರ್ಶನವಿತ್ತು, ಅಲ್ಲಿಯ ವ್ಯವಸ್ಥೆಯನ್ನು ನೋಡಿ, ತಮಗುಂಟಾದ ಸಂತೃಪ್ತಿಯನ್ನು ಮುಕ್ತಕಂಠದಿಂದ ವ್ಯಕ್ತಪಡಿಸಿ, ಸ್ವಾಮೀಜಿಯವರಿಂದ ಆಶೀರ್ವಾದವನ್ನು ಪಡಕೊಂಡು ಹೋಗಿದ್ದಾರೆ. ಸ್ವಾಮೀಜಿಯವರಿಗೆ ಇನ್ನೂ ಹೆಚ್ಚಿನ ಆಯುರಾರೋಗ್ಯವನ್ನು ದಯಪಾಲಿಸೆಂದು ನಾವು ಪರಮಾತ್ಮನನ್ನು ಅನನ್ಯಭಾವನೆಯಿಂದ ಬೇಡಿಕೊಳ್ಳುತ್ತೇವೆ.

ಗೃಹಮಂತ್ರಿ ಹಂ. ಪಂತರ ಹೇಳಿಕೆ

ರಾಜ್ಯ ರಾಜ್ಯಗಳಲ್ಲಿ ಗಡಿ ತಂಟೆಗಳನ್ನು ಬಗೆಹರಿಸಲು ಸಂಬಂಧಿಸಿದ ರಾಜ್ಯಗಳಲ್ಲಿ ಒಮ್ಮತವಾಗುವದೇ ಮೂಲ ತತ್ವವಾಗಿದೆಯೆಂದು ಗೃಹಮಂತ್ರಿ ಪಂಡಿತ ಗೋವಿಂದ ವಲ್ಲಭ ಪಂತರು ಲೋಕಸಭೆಯಲ್ಲಿ ಸಾರಿದರು. ಪಂಡಿತ ಪಂತರು ಭಾಷಾವಿವಾದಕ್ಕೆ ಪೂರ್ಣ ವಿರಾಮ ಬೀಳಬೇಕೆನ್ನುವ ರೀತಿಯಲ್ಲಿ ಖಂಡತುಂಡಿತವಾಗಿ ಹೇಳಿದುದು ಅತಿ ಉಚಿತವಾಗಿದೆ. ಏನೇ ಬದಲಾವಣೆ ಆಗುವದಿದ್ದರೂ ಸಂಬಂಧಿಸಿದ ರಾಜ್ಯಗಳೇ ತೀರ್ಮಾನಕ್ಕೆ ಬರಬೇಕೆನ್ನುವುದನ್ನು ಪಂ. ಪಂತರು ಎತ್ತಿ ಹೇಳಿರುವದರಿಂದ, ರಾಜ್ಯಗಳ ಪರೋಕ್ಷದಲ್ಲಿ ಯಾವುದೂ ನಡೆಯಲಾರದೆಂಬುದು ದೃಢವಾಗಿದೆ. ಪಂ. ಪಂತರು ವ್ಯಕ್ತಪಡಿಸಿದ ದೃಢವಾದ ಧೋರಣೆ ಹಾಗೂ ನಿಲುಮೆಯಿಂದ, ಬೆಳಗಾವಿಯ ಭವಿಷ್ಯತ್ತು ನಿಶ್ಚಿತವಾಗಿದೆ ಎಂಬುದು ಖಂಡಿತವಾಗಿದೆ. ಒಂದೇ ತಾಯಿಯ ಮಕ್ಕಳಾದ ಬೆಳಗಾವಿಯು ಕನ್ನಡಿಗರೂ, ಮರಾಠಿಗರೂ ಒಂದೇ ಕಡೆಗೆ ಬಾಳಬೇಕಾಗುವದರಿಂದ, ಈ ತಾತ್ಕಾಲಿಕ ಅವಿಶ್ವಾಸ ಹಾಗೂ ಅಪಸ್ವರವನ್ನು ಕಳೆದು ಎರಡೂ ಭಾಷೆಯ ಜನರು ಹೊಂದಿಕೆಯಿಂದ ನಡೆದುಕೊಂಡು ಬೆಳಗಾವಿ ನಗರ ನಾಗರಿಕರ ಜೀವನವನ್ನು ಉಜ್ವಲವಾಗಿ ಕಟ್ಟಬೇಕಾಗಿ ಹಾರೈಸುವೆವು.

ನಮ್ಮ ಅಂಚೆ-ತಂತಿ ಸರ್ಕಲ್

ಕರ್ನಾಟಕದ ಆಡಳಿತ ವಿಕೇಂದ್ರೀಕರಣವಷ್ಟೇ ಕರ್ನಾಟಕದ ಅಂಚೆ-ತಂತಿ ವಲಯದ ನಿರ್ಮಾಣವು ಕನ್ನಡಿಗರ ಜೀವನದಲ್ಲಿ ಬಹು ಮುಖ್ಯವೆನಿಸಿದೆ. ಇದೇ ಏಪ್ರಿಲ್ ಒಂದನೆಯ ದಿನಾಂಕದಿಂದ ಆರಂಭವಾದ ಕರ್ನಾಟಕ ರಾಜ್ಯದ ಅಂಚೆ-ತಂತಿ ವಲಯವು ನಮ್ಮ ನಾಡಿನ ೭೨ ಸಾವಿರ ಚದರು ಮೈಲು ಪ್ರದೇಶದ ಸಂಪರ್ಕ ವ್ಯವಸ್ಥೆಯನ್ನು ನೋಡಿಕೊಳ್ಳುವದು. ೩೬೫೦ ಅಂಚೆ ಮತ್ತು ಕಚೇರಿಗಳು, ೩೧೮ ಅಂಚೆ ಮತ್ತು ತಂತಿ ಕಚೇರಿಗಳು, ೮ ಇಲಾಖೆಯ ತಂತಿ ಕಚೇರಿಗಳು, ೧೩೦ ಸಾರ್ವಜನಿಕ ಟೆಲಿಫೋನ್ ಕಚೇರಿಗಳು ಮತ್ತು ೭೬ ಟೆಲಿಫೋನ್ ವಿನಿಮಯ ಕೇಂದ್ರಗಳು ಈ ಹೊಸ ವಲಯದ ಆಡಳಿತಕ್ಕೊಳಪಟ್ಟಿವೆ. ಈಗ ಐದು ಸಾವಿರ ಜನಸಂಖ್ಯೆಗೆ ಒಂದರಂತೆ ಇರುವ ಪೋಸ್ಟ ಆಫೀಸನ್ನು

ಪ್ರತಿ ಎರಡು ಸಾವಿರ ಜನಸಂಖ್ಯೆಗೆ ಒಂದರಂತೆ ತೆರೆಯ ಬೇಕೆಂಬ ಯೋಜನೆಯನ್ನು ತಯಾರಿಸಲಾಗಿದೆ. ಈ ಹೊಸ ವಲಯವು ಜಾರಿಯಲ್ಲಿ ಬರುವದರಿಂದ ನಮ್ಮ ರಾಜ್ಯದಲ್ಲಿ ಅಂಚೆ ಮತ್ತು ತಂತಿ ಸೌಲಭ್ಯವು ಹೆಚ್ಚುತ್ತದೆ. ಆಡಳಿತವು ಸುಧಾರಿಸುತ್ತದೆ. ಕುಂದು ಕೊರತೆಗಳನ್ನು ಬೇಗ ಪರಿಹಾರ ಮಾಡಿಕೊಳ್ಳಲು ಸಹಾಯವಾಗುತ್ತದೆ. ಈ ವಲಯದ ನಿರ್ಮಾಣಕ್ಕಾಗಿ ನಾವು ಸರಕಾರವನ್ನು ಅಭಿನಂದಿಸದೆ ಇರಲಾರೆವು.

ದೇಶದಲ್ಲಿಯ ಅತ್ಯುತ್ತಮ ಗ್ರಾಮ ಸೇವಕ

ಗ್ರಾಮೀಣ ಪ್ರದೇಶದ ಜನತೆಯ ಜೀವನ ಮಟ್ಟವನ್ನು ಎತ್ತರಿಸಲು ಹಾಗು ಅವರನ್ನು ಸ್ವಾವಲಂಬಿ ಗಳನ್ನಾಗಿ ಪರಿವರ್ತಿಸಲು ಸಾಮುದಾಯಿಕ ಅಭಿವೃದ್ಧಿ ಮತ್ತು ಸಮಾಜ ವಿಕಾಸ ಕೇಂದ್ರಗಳ ಮುಖಾಂತರ ಪ್ರಯತ್ನ ನಡೆದಿದೆಯಷ್ಟೆ. ಪ್ರತಿಯೊಂದು ಅಭಿವೃದ್ಧಿ ಕೇಂದ್ರದಲ್ಲಿ ಗ್ರಾಮ ಮಟ್ಟದಲ್ಲಿ ಗ್ರಾಮ ಸೇವಕರು ಸಮಾಜ ವಿಕಾಸ ಕೇಂದ್ರಗಳ ಗುರಿಯನ್ನು ಸಾಧಿಸಲು ಪ್ರಯತ್ನಿಸುತ್ತಿರುವರು. ಈ ವರ್ಷ ಕರ್ನಾಟಕ ರಾಜ್ಯದ ಚಿತ್ರದುರ್ಗ ಜಿಲ್ಲೆಯ ದಾವಣಗೆರೆ ಬ್ಲಾಕಿನವರಾದ ಶ್ರೀ ವ್ಹಿ. ಎಸ್. ಕರಜಗಿಯವರು ದೇಶದಲ್ಲಿ ಅತ್ಯುತ್ತಮ ಗ್ರಾಮ ಸೇವಕರೆಂದು ಪಾರಿತೋಷಿಕವನ್ನು ಪಡೆದಿರುವರು. ಒಂದು ಸೈಕಲ್ಲು ಹಾಗೂ ೨೫೦೦ ರೂಪಾಯಿಗಳ ಪಾರಿತೋಷಿಕವನ್ನು ದಿನಾಂಕ ೭-೪-೧೯೬೦ ನೇ ದಿ ದಿಲ್ಲಿಯಲ್ಲಿ ಕೇಂದ್ರ ಮಂತ್ರಿ ಶ್ರೀ ಎಸ್. ಕೆ. ಡೇ ಇವ ಅಧ್ಯಕ್ಷತೆಯಲ್ಲಿ ಶ್ರೀ ವ್ಹಿ. ಎಸ್. ಕರಜಗಿ ಇವರಿ ಕೊಡಲಾಯಿತು. ನಾವು ಶ್ರೀ ವ್ಹಿ. ಎಸ್. ಕರಜ ಇವರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತೇವೆ.

ಅಮಾನುಷ ದೌರ್ಜನ್ಯ

ದಕ್ಷಿಣ ಆಫ್ರಿಕೆಯಲ್ಲಿ ಆಫ್ರಿಕನ್ ಜನ ಸಮೂಹ ಮೇಲೆ ಅಲ್ಲಿಯ ಬಿಳಿಯ ಸರಕಾರವು ಕೈಕೊಂ ಅಮಾನುಷ ದಬ್ಬಾಳಿಕೆಯನ್ನು ಎಲ್ಲ ರಾಷ್ಟ್ರಗಳು ಖಂಡಿಸಿವೆ. ದಕ್ಷಿಣ ಆಫ್ರಿಕನ್ ಸರಕಾರವು ತನ್ನ ವರ್ಣೀಯ ನೀತಿ ಕ್ರಮದನ್ವಯ ಮಾಡಿದ ಭಾರಿ ಪ್ರಮಾಣದ ಕೊಲೆಗಳು, ಕ್ರೂರ ಕೃತ್ಯಗಳ ಮತ್ತು ಆಫ್ರಿಕನ್ ಜನರನ್ನು ಹತ್ತಿಕ್ಕುತ್ತಿರುವದು ವಿಶ್ವ ಸಂಸ್ಥೆಯ ಪ್ರಣಾಲಿಕೆಯ ಉಲ್ಲಂಘನೆ ಹಾಗೂ ಅಕ್ಷಮ್ಯ ವಾಗಿದೆಯೆಂದು ಭದ್ರತಾ ಸಮಿತಿಯಲ್ಲಿ ಭಾರತದ ಪ್ರತಿನಿಧಿ ತಿಳಿಸಿರುವರು. ಕಪ್ಪು ಜನರ ಶಕ್ತಿಗ ಮಹಾಪೂರ ಬರುತ್ತಿರುವ ಈ ಕಾಲದಲ್ಲಿ ದಕ್ಷಿಣ ಆಫ್ರಿಕೆಯ ಅದೂರ ದೃಷ್ಟಿಯ ಬಿಳಿಯ ನಾಯಕತ್ವವು ಕೂಡಲೇ ತಮ್ಮ ತಪ್ಪನ್ನು ಸರಿಪಡಿಸಿಕೊಂಡು, ಪರಿಸ್ಥಿತಿ ಯನ್ನು ಪರಿಶಮನಗೊಳಿಸುವರೆಂದು ಹಾರೈಸದೆ ಇರಲಾರೆವು.

—೦—

ಶ್ರೀ ಶ್ರೀ ಮೃತ್ಯುಂಜಯ ಮಹಾಸ್ವಾಮಿಗಳವರು

ಬರೆದವರು:— **ಶ್ರೀ ಎಮ್. ಜಿ. ಹಂದ್ರಾಳ**

ಶ್ರೀ ಮನ್ನಿರಂಜನ ಪ್ರಣವ ಸ್ವರೂಪಿ ಶ್ರೀ ಮೃತ್ಯುಂಜಯ ಮಹಾಸ್ವಾಮಿಗಳವರ ಹೆಸರನ್ನು ಕೇಳದ ಕನ್ನಡಿಗರಿಲ್ಲವೆಂದರೆ ಅತ್ಯುಕ್ತಿಯಾಗಲಿಕ್ಕಿಲ್ಲ. ಅವರು ನಡೆಯಿಸುತ್ತಿದ್ದ ಪ್ರಸಾದ ನಿಲಯವು ಸಾವಿರಾರು ಬಡ ವಿದ್ಯಾರ್ಥಿಗಳಿಗೆ ವಿದ್ಯಾಭ್ಯಾಸ ಮಾಡಿಕೊಂಡು ಸಮಾಜದಲ್ಲಿ ಉತ್ತಮ ಸ್ಥಾನಮಾನ ಗಳಿಸಲು ಅನುವು ಮಾಡಿಕೊಟ್ಟಿದೆ. ಅನೇಕರು ತಮಗೆ ಇಷ್ಟವೆನಿಸಿದ ರೀತಿಯಲ್ಲಿ ಸಮಾಜ ಸೇವೆಯನ್ನು ಮಾಡುತ್ತಿರುವರು. ಶ್ರೀ ಮೃತ್ಯುಂಜಯ ಮಹಾಸ್ವಾಮಿಗಳು ಆಯ್ದುಕೊಂಡ ಸಮಾಜ ಸೇವೆ ಅತುಲವಾದುದು.

ಧಾರವಾಡದಲ್ಲಿ ೧೯೧೬ ರಲ್ಲಿ ಕರ್ನಾಟಕ ಆರ್ಟ್ಸ್ ಕಾಲೇಜು ಸ್ಥಾಪನೆಯಾಯಿತು; ಆದರೆ ಆಗಿನ ಪರಿಸ್ಥಿತಿ ಗನುಗುಣವಾಗಿ ಕೇವಲ ಶ್ರೀಮಂತರ ವಿದ್ಯಾರ್ಥಿಗಳಿಗೇ ಹೆಚ್ಚಾಗಿ ವಿದ್ಯಾಭ್ಯಾಸ ಮಾಡಲು ಸಾಧ್ಯವಿತ್ತು. ಇಂಥ ಪರಿಸ್ಥಿತಿಯಲ್ಲಿ ಬಡವರ ಮಕ್ಕಳಿಗೂ ಉಚ್ಚ ಶಿಕ್ಷಣವು ದೊರೆಯಬೇಕು; ಧಾರವಾಡದಲ್ಲಿ ಇದಕ್ಕೆ ತಕ್ಕ ಅನುಕೂಲತೆಗಳು ಬೇಕು ಎಂಬುದನ್ನು ಅರಿತು ಮಹಾಸ್ವಾಮಿಗಳು ಬೇರೆ ಬೇರೆ ಕಡೆಗಳಿಂದ ಧಾರವಾಡಕ್ಕೆ ಬಂದು ವಿದ್ಯಾಭ್ಯಾಸ ಮಾಡುವ ವಿದ್ಯಾರ್ಥಿಗಳಿಗೆ ಅನ್ನದ ಸಮಸ್ಯೆ ಪ್ರಪ್ರಥಮ ಎಂಬುದನ್ನು ನೆನೆದು, ಅವರ ಪರಮ ಗುರು ಶ್ರೀ ಶ್ರೀ ಅಥಣಿ ಮಹಾಶಿವಯೋಗಿಗಳ ಆಶೀರ್ವಾದ ಪಡೆದು ಧಾರವಾಡದಲ್ಲಿಯ ಹಾವೇರಿ ಪೇಟೆಯ ಭಕ್ತರ ಮುಂದೆ ಈ ಸಮಸ್ಯೆಯನ್ನು ಇಟ್ಟರು. ಅವರ ನಿರ್ಮಲ ಹೃದಯದ ಆಂತರಿಕ ಕರೆಗೆ ಅವರ ಭಕ್ತರೂ ಓಗೊಟ್ಟು ಪ್ರಸಾದ ನಿಲಯವನ್ನು ರೂಪಿಸಿದರು. ಅಂದು ಚಿಕ್ಕದಾಗಿ ಆರಂಭವಾದ ಈ ನಿಲಯವು ಇಂದು ಮಹಾಸಂಸ್ಥೆಯಾಗಿ ಬೆಳೆದಿದೆ. ನೂರಾರು ವಿದ್ಯಾರ್ಥಿಗಳಿಗೆ ಅನ್ನದಾನದ ಹಾಗೂ ವಿದ್ಯಾದಾನದ ಆದರ್ಶ ನಿಲಯವಾಗಿದೆ.

ಪರಮಾತ್ಮನ ಸ್ವರೂಪಿಯಾದ ಮಹಾಸ್ವಾಮಿಗಳು ಪರಮಾತ್ಮನ ಸುರೂಪವನ್ನು ದೀನ–ದರಿದ್ರರ ಸೇವೆಯಲ್ಲಿಯೇ ಕಾಣುತ್ತಿರುವರೆಂಬುದಕ್ಕೆ ಅವರ ದಿವ್ಯ ಜೀವನವೇ ಸಾಕ್ಷಿ. ವಿದ್ಯಾರ್ಥಿಗಳ ಮೇಲಿನ ಜವರ ವಾತ್ಸಲ್ಯ ಅಪಾರವಾದುದು. ಶಿಕ್ಷಣದ ಮೇಲಿನ ಅವರ ಪ್ರೇಮ ಅಗಮ್ಯವಾದುದು. ಭಕ್ತರ ಮೇಲಿನ ಮಮತೆ ಅಗಾಧವಾದುದು. "ನಕಲ ಜೀವಾತ್ಮರಿಗೂ ಲೇಸನ್ನೇ ಬಯಸುವ ನಮ್ಮ ಕೂಡಲ ಸಂಗನ ದೇವ" ಎಂಬ ಬಸವಣ್ಣನವರ ಮುತ್ತಿನಂತಹ ಮಾತು ಮಹಾಸ್ವಾಮಿಗಳ ನಡೆಯಲ್ಲಿ ಕೈದೀವಿಗೆಯಾಗಿದೆ.

ಶ್ರೀ ಶ್ರೀ ಶಿವಯೋಗಿಗಳ ರಥೋತ್ಸವದ ಸಮಯದಲ್ಲಿ ಎಲ್ಲ ಜಾತಿಗಳ ಜನರೂ ಸೇರುತ್ತಾರೆ. ಡೊಳ್ಳಿನ ಮೇಳಗಳು, ಭಜನಾ ಮಂಡಳಗಳು, ಲಾವಣಿ ಪದ ಹೇಳುವವರು, ಕೀರ್ತನಕಾರರು ಮೊದಲಾದ ಅನೇಕ ಭಕ್ತರು ಸ್ವಾಮಿಗಳ ದರ್ಶನದ ಲಾಭ ಪಡೆದು ತೃಪ್ತಿ ಹೊಂದುತ್ತಾರೆ. ಸ್ವಾಮಿಗಳು ಸ್ವತಃ ಭಜನೆ ಮಾಡಲು ಆರಂಭಿಸಿದರೆಂದರೆ ಅವರು ಪರಮಾತ್ಮನಲ್ಲಿ ತಲ್ಲೀನರಾಗುತ್ತಾರೆ. ಈ ದೃಶ್ಯವನ್ನು ಕಂಡು ಭಕ್ತರೂ ಮುಗ್ಧರಾಗಿ ಭಾಗ್ಯಶಾಲಿಗಳಾಗುತ್ತಾರೆ. ಈ ಸಮಯದ ಸವಿಯನ್ನು, ಅಮೃತದ ರುಚಿಯನ್ನು–ಅನುಭವಿಸಿಯೇ ಅರಿಯಬೇಕು. ಅವರು ತಮ್ಮ ಪ್ರಾರ್ಥನೆಯ ಕೊನೆಯಲ್ಲಿ ಸರ್ವಧರ್ಮಗಳ ಜನರಿಗೂ ಕುಶಲವನ್ನೇ ಕೋರುತ್ತಿರುವದು ಅವರ ಹೃದಯದ ವೈಶಾಲ್ಯವನ್ನೂ, ಅವರು ಸಂದಿಸಿದ ಉಚ್ಚ ಸಂಸ್ಕೃತಿಯನ್ನೂ ತೋರಿಸುತ್ತಿದೆ.

ಧಾರವಾಡದಲ್ಲಿಯ ಉಚಿತ ಪ್ರಸಾದ ನಿಲಯವು ಮಹಾಸ್ವಾಮಿಗಳವರ ಸತತ ಪ್ರಯತ್ನದಿಂದ ಅಭಿವೃದ್ಧಿ ಹೊಂದಿ, ನಮ್ಮ ನಾಡಿನಲ್ಲಿ ಮಾದರಿಯ ಸಂಸ್ಥೆಯಾಗಿ ಇಂಥ ಉಚಿತ ಪ್ರಸಾದ ನಿಲಯಗಳು ಬಹುವಾಗಿ ಬೇರೆ ಬೇರೆ ಸ್ಥಾನಗಳಲ್ಲಿ ಸ್ಥಾಪಿತವಾಗಲು ಸ್ಫೂರ್ತಿಯ ಸೆಲೆಯಾಗಿ ಪರಿಣಮಿಸಿತು. ತತ್‌ಪರಿಣಾಮವಾಗಿ, ಅಖಂಡ ಕರ್ನಾಟಕದಲ್ಲಿ ವಿದ್ಯಾ ಪ್ರಸಾರವು ಭರದಿಂದ ಸಾಗಲು ಅನುವಾಯಿತು.

ಮಹಾಸ್ವಾಮಿಗಳವರ ಆಶೀರ್ವಾದದ ಫಲವಾಗಿ ಹೆಸಬಾವಿಯ ಮಾಧ್ಯಮಿಕ ಶಾಲೆಯು ಇಂದು

ಮಾದರಿಯ ಶಾಲೆಯಾಗಿ ತಲೆಯೆತ್ತಿ ನೆರೆಯುತ್ತಿದೆ. ಶಿವಾನುಭವ ಸಂಸ್ಥೆಗಳನ್ನು ಸ್ಥಾಪಿಸಿ ಆಧ್ಯಾತ್ಮಿಕ ಜೀವನದ ಬೆಳಕನ್ನು ಬೀರುತ್ತಿರುವದೂ, ಗ್ರಂಥ ಮಾಲೆಯನ್ನು ಆರಂಭಿಸಿ ಸಾಹಿತ್ಯ ಸೇವೆ ಕೈಕೊಂಡಿರುವದೂ ಆದರ್ಶ ಪ್ರಾಯವಾಗಿವೆ.

ಇಂಥ ಘನವಾದ ಕಾರ್ಯವನ್ನು ಮಾಡುವ ಶಕ್ತಿ ಮಹಾಸ್ವಾಮಿಗಳು ಗಳಿಸಿದ ಗುರುಕೃಪೆಯಲ್ಲಿ ಅಡಗಿದೆ ಎಂದು ಬೇರೆ ಹೇಳಬೇಕಾಗಿಲ್ಲ; ಯಾಕಂದರೆ ಸಕಲವೂ ಶಿವಯೋಗಿಗಳ ಕೃಪೆಯಿಂದ ಸಾಗಿದೆ ಎಂಬ ಅವರ ಸದ್ಭಾವನೆಯು ಇದಕ್ಕೆ ಸಾಕ್ಷಿಯಾಗಿದೆ. ೫೯ ೫೯ ಅಥಣಿ ಮಹಾ ಶಿವಯೋಗಿಗಳ ಸೇವೆಯನ್ನು ಚಾಚೂ ತಪ್ಪದೆ ಸಲ್ಲಿಸಿ, ಅವರ ಅನುಗ್ರಹವನ್ನು ಪಡೆದಿದ್ದಾರೆ. ಅಂತೆಯೇ ಅವರು ಇಂದಿಗೂ ಯಾವ ಕಾರ್ಯವನ್ನು ಕೈಕೊಂಡರೂ, ಅದು ಸುಗಮವಾಗಿ ನೆರವೇರುತ್ತದೆ.

ಗುರುಕೃಪೆಗೆ ಪಾತ್ರರಾಗಿ, ಗುರುವಿನ ಆಜ್ಞೆ ಪಾಲಿಸಲು ಸದಾ ಸನ್ನದ್ಧರಾಗಿ, ಜನ ಸೇವೆಯಲ್ಲಿಯೆ ಶಿವನ ದರ್ಶನ ಪಡೆಯುವ ಹಂಬಲವುಳ್ಳವರಾಗಿ, ಶಿಕ್ಷಣ, ಸಾಹಿತ್ಯ, ಸಂಸ್ಕೃತಿಗಳ ರಕ್ಷಣೆ–ಪೋಷಣೆಗಾಗಿ ಹಗಲಿರುಳೂ ಚಿಂತಿಸುತ್ತಿರುವಂಥವರಾಗಿ, ತಮ್ಮ ಕೀರ್ತಿಯನ್ನು ಅಖಂಡ ಕರ್ನಾಟಕದಲ್ಲಿ ಅದೇಕೆ ಭಾರತದಲ್ಲಿ ಬೆಳೆಯಿಸಿ ಕೊಂಡ ಮಹಾಸ್ವಾಮಿಗಳವರ ಜನ್ಮೋತ್ಸವವು ಇದೇ ತಿಂಗಳು ಜರುಗುವದು. ಅಂದು ಧಾರವಾಡದಲ್ಲಿ ಒಂದು ದೊಡ್ಡ ಹಬ್ಬ. ಸಕಲ ಭಕ್ತರಿಗೂ ಅದೊಂದು ಪವಿತ್ರ ದಿನ. ಆ ಸುದಿನವು ಆಧ್ಯಾತ್ಮಿಕ ಜೀವಿಯ ಸಂಭ್ರಮದ ದಿನವು! ಆ ದಿನದ ಸವಿ ನೆನಹನ್ನೂ ಅನುಭವಿಸಲು ಸಕಲರಿಗೂ ಅನುವಾಗಲೆಂದು ಈ ಚಿಕ್ಕ ಲೇಖನದ ಮೂಲಕ ಅಳಿಲು ಸೇವೆ ಸಲ್ಲಿಸಿದ್ದೇನೆ.

ತ್ರಿವಿಧ ದಾಸೋಹಮೂರ್ತಿಗಳಾದ
ಶ್ರೀ. ಮ. ನಿ. ಪ್ರ. ಮೃತ್ಯುಂಜಯ ಮಹಾಸ್ವಾಮಿಗಳವರು

ಉಚಿತ ಪ್ರಸಾದನಿಲಯ

ಮೃತ್ಯುಂಜಯನಗರ (ಹಾವೇರಿ ಪೇಟೆ), ಧಾರವಾಡ.

ಲೇಖಕರು:— **ಶ್ರೀ ಶಿಂತ್ರಿ ಬಸಪ್ಪನವರು,** ಬಿ. ಎ.. ಬಿ. ಟಿ.

ಮೊದಲ ಮಾತು

ಧಾರವಾಡದಲ್ಲಿಯ ಹಾವೇರಿ ಪೇಟೆಗೆ ಧಾರವಾಡ ನಗರ ಸಭೆಯವರು ದಿನಾಂಕ ೩೦-೧೨-೧೯೫೯ ರಂದು "ಮೃತ್ಯುಂಜಯ ನಗರ" ವೆಂದು ನಾಮಕರಣ ಮಾಡಿದ್ದುದು ಸರ್ವಶ್ರುತವಿದೆಯಷ್ಟೇ. ಅಂದಿನಿಂದ ಎಲ್ಲರೂ ಅದಕ್ಕೆ ಆ ಹೆಸರಿನಿಂದಲೇ ಕರೆಯಲು ಪ್ರಾರಂಭಿಸಿರುವ ದೊಂದು ನಮ್ಮೆಲ್ಲರಿಗೆ ಹೆಮ್ಮೆಯ ಮಾತು. ಮಹಾ ಸ್ವಾಮಿಗಳವರು ಧಾರವಾಡಕ್ಕೆ ಬಿಜಯಂಗೈಸುವ ಮುನ್ನ ಹಾವೇರಿ ಪೇಟೆಯ ಕೊನೆಯ ಭಾಗವಾಗಿದ್ದ ನಿರ್ಜನ ಪ್ರದೇಶದಲ್ಲಿ ಮುರುಘಾಮಠವೆಂಬುದೊಂದು ಮಠವಿತ್ತು. ಅದು ಚಿತ್ರದುರ್ಗದ ಜಗದ್ಗುರುಗಳವರ ಶಾಖಾ ಮಠವು. ಅದು ಆಗ ಹೇಳಿಕೊಳ್ಳುವಷ್ಟು ಸುಸ್ಥಿತಿಯಲ್ಲಿರಲಿಲ್ಲ. ಮುಂಬಯಿ ಕರ್ನಾಟಕದ ವಿದ್ಯಾರ್ಥಿಗಳ ಉಚ್ಚ ಶಿಕ್ಷಣ ಕ್ಕೋಸ್ಕರ ಧಾರವಾಡದಲ್ಲಿ ೧೯೧೭ ರಲ್ಲಿ ಕರ್ನಾಟಕ ಕಾಲೇಜು ಸ್ಥಾಪಿಗೊಂಡಿತು. ಆಗ ಬಡ ವಿದ್ಯಾರ್ಥಿ ಗಳಿಗೋಸ್ಕರ ಉಚಿತ ಪ್ರಸಾದ-ವಸತಿಗಳ ಏರ್ಪಾಟಾಗು ವದು ಅತ್ಯವಶ್ಯವಾಗಿತ್ತು. ಹಾವೇರಿ ಪೇಟೆಯ ಸದ್ಭಕ್ತರು ಅಲ್ಲಿಯ ಮುರುಘಾಮಠದಲ್ಲಿ ಉಚಿತ ಪ್ರಸಾದ ನಿಲಯ ವನ್ನು ತೆರೆಯಲು ಚಿತ್ರದುರ್ಗದ ಜಗದ್ಗುರುಗಳವರ ದಿವ್ಯ ಸಮ್ಮುಖದಲ್ಲಿ ತಮ್ಮ ನಮ್ರ ಬೇಡಿಕೆಯನ್ನಿಟ್ಟರು. ಸದ್ಭಕ್ತರ ಈ ಪ್ರಬಲ ಬೇಡಿಕೆಯನ್ನು ಜಗದ್ಗುರುಗಳವರು ಶಾಂತತನದಿಂದ ಆಳವಾಗಿ ಆಲೋಚಿಸಿ ಆಗ ಡಾವಣಗೆರೆ ಯಲ್ಲಿ ಈ ಕಾರ್ಯವನ್ನು ಉತ್ತಮೋತ್ತಮವಾಗಿ ಸಾಗಿಸು ತ್ತಿದ್ದ ಶ್ರೀ ಮೃತ್ಯುಂಜಯ ಮಹಾ ಸ್ವಾಮಿಗಳವರಿಗೆ ಧಾರವಾಡದ ಮುರುಘಾಮಠಾಧ್ಯಕ್ಷತೆಯನ್ನು ವಹಿಸಿ ಕೊಟ್ಟು, ಸದ್ಭಕ್ತರ ಬೇಡಿಕೆಯನ್ನು ಈಡೇರಿಸಿ ಕೊಡಲು ಅವರಿಗೆ ಆಶೀರ್ವದಿಸಿದರು. ಜಗದ್ಗುರುಗಳವರ ಅಪ್ಪಣೆ ಯನ್ನು ಶಿರಸಾವಹಿಸಿ ೧೯೧೭ ರಲ್ಲಿ ಸ್ವಾಮೀಜಿಯವರು ಧಾರವಾಡಕ್ಕೆ ಆಗಮಿಸಿದರು. ಅವರು ಆಗಮಿಸಿದ ಆ ದಿನವು ಸಂಸ್ಮರಣೀಯವಿದ್ದು ಸುವರ್ಣಾಕ್ಷರಗಳಲ್ಲಿ ಬರೆದಿಡಲರ್ಹವಾಗಿದೆ. ಆಗ ಡಾಳು ಕೊಂಪೆಯಲ್ಲಿದ್ದ ಆ ಮಠವು ಈಗ ಪಂಪಾ ಕ್ಷೇತ್ರವಾಗಿ ಪರಿಣಮಿಸಿದೆ. ಧಾರವಾಡಕ್ಕೆ ಸಂದರ್ಶನವನ್ನಿತ್ತ ಪ್ರವಾಸಿಕರು ಈ ಮಠದ ದರ್ಶನ-ಲಾಭವನ್ನು ಪಡೆಯದೆ ಹೋಗಲಾರರು. ನಮ್ಮ ರಾಜ್ಯದ ದೂರ ದೂರಿನ ಪ್ರಾಥಮಿಕ ಶಾಲೆಗಳು ಧಾರವಾಡ-ಹುಬ್ಬಳ್ಳಿ ಶಹರಗಳಿಗೆ ಶೈಕ್ಷಣಿಕ ಪ್ರವಾಸವನ್ನು ಕೈಕೊಂಡಾಗ ಈ ಮಠವನ್ನು ಸಂದರ್ಶಿಸಿಯೇ ತೀರುವವು. ಅಂತಹ ಶಾಲೆಗಳಿಗೆ ಮಾರ್ಗದರ್ಶನವಾಗಲೆಂಬ ಸದುದ್ದೇಶ ದಿಂದ ನಮಗೆ ದೊರೆತ ವಿವರಗಳನ್ನು ಲೇಖನರೂಪಿಸಿ ಸುಸಂಬದ್ಧವಾಗಿ ಹೊಂದಿಸಿ ಈ ಲೇಖನವೊಂದನ್ನು ಬರೆಯಲಾಗಿದೆ. ಈ ಮಠವು ಸ್ವಾಮೀಜಿಯವರ ಕರ್ಮ ಭೂಮಿಯೂ ಆಹುದು, ತಪೋಭೂಮಿಯೂ ಆಹುದು, ಕೈವಲ್ಯ ಭೂಮಿಯೂ ಆಹುದು, ಅವರ ದಿವ್ಯ ಪ್ರಭಾವ ದಿಂದ ಅದು ಈಗ ಧಾರವಾಡ ಶಹರದ ಹಾಗೂ ಕನ್ನಡ ನಾಡಿನ ಧಾರ್ಮಿಕ, ಸಾಮಾಜಿಕ, ಸಾಹಿತ್ಯಿಕ ಮತ್ತು ಸಾಂಸ್ಕೃತಿಕ ಕೇಂದ್ರವಾಗಿದೆ. ಅಂತಹ ಕಾರಣಿಕ ಪುರುಷರ ಜೀವನ ಚರಿತ್ರೆಯ ಅಲ್ಪ ಪರಿಚಯವನ್ನಿಲ್ಲಿ ಮಾಡಿಕೊಡಲು ಪ್ರಯತ್ನಿಸಲಾಗಿದೆ.

ಬಾಲ್ಯ, ಶಿಕ್ಷಣ ಮತ್ತು ಗುರುಕೃಪೆ

ಧಾರವಾಡ ಜಿಲ್ಲೆಯ ಹುಬ್ಬಳ್ಳಿ ತಾಲೂಕಿನಲ್ಲಿ ಇಂಗಳಹಳ್ಳಿಯೆಂಬುದೊಂದು ಗ್ರಾಮವಿದೆ. ಪೀಠಾಸು ಭಾವಿಗಳಾದ ಧಾರವಾಡದ ಸಾಲೀಮಠದ ಸೇ. ಕಂತಯ್ಯ ನವರು ಅಲ್ಲಿ ವಾಸಿಸುತ್ತಿದ್ದರು. ಅವರ ಧರ್ಮ ಪತ್ನಿ ಯವರ ಹೆಸರು ಶ್ರೀಮತಿ ಚೆನ್ನವೀರಮ್ಮನವರು. ಆ ಆದರ್ಶ ದಂಪತಿಗಳ ಹೊಟ್ಟೆಯಿಂದ ನಮ್ಮ ಚರಿತ್ರ

ನಾಯಕರು ಸರ್ವಧಾರಿ ಸಂವತ್ಸರದ ಅಧಿಕ ಜ್ಯೈತ್ರ ಬಹುಳ ತ್ರಯೋದಶಿ ಸೋಮವಾರ ದಿನಾಂಕ ೯-೪-೧೮೫೫ ರಂದು ಜನಿಸಿದರು. ಅವರ ಪ್ರಾಥಮಿಕ ಶಿಕ್ಷಣವು ಇಂಗಳಹಳ್ಳಿಯಲ್ಲಿಯೇ ಸಾಗಿತು. ಮುಂದೆ ಸೊಲ್ಲಾಪುರದ ಶ್ರೀಮಂತ ವಾರದ ಅಪ್ಪಾಸಾಹೇಬರ ಸಂಸ್ಕೃತ ಪಾಠಶಾಲೆಯನ್ನು ಸೇರಿದರು. ಅಲ್ಲಿ ಬಹಳ ಕಾಲ ನಿಲ್ಲದೆ ವೈರಾಗ್ಯಶೀಲರಾದ ಹಾಗು ಸಾಹಸ ಪ್ರಿಯರಾದ ಅವರು ದೇಶಾಂತರಕ್ಕೆ ಹೊರಟರು. ಅನೇಕ ಕ್ಷೇತ್ರಗಳನ್ನು ಸಂದರ್ಶಿಸಿ ಕೊನೆಗೆ ೧೯೦೩ ರಲ್ಲಿ ಅಥಣಿ ಮಹಾ ತಪಸ್ವಿಗಳವರನ್ನು ಮೊರೆ ಹೊಕ್ಕರು. ಅಲ್ಲಿ ಅವರಿಂದ ಹೊರಹೊಮ್ಮಿದ ಸೇವಾ ಭಾವನೆಗೂ ಸದಾಚಾರಕ್ಕೂ ನಿಷ್ಕಲಂಕ ಭಕ್ತಿಗೂ ತಪಸ್ವಿಗಳು ಮೆಚ್ಚಿದ್ದರಿಂದ ಅವರಿಗೆ ಅಲ್ಲಿಯೇ ಗುರುಕೃಪೆಯಾಯಿತು. ಅಥಣಿ ಶಿವಯೋಗಿಗಳವರ ಕೃಪೆಯೆಂದರೆ ಸಾಕ್ಷಾತ್ ಶಿವನೇ ಮೆಚ್ಚಿದಂತೆ. ತತ್ಪರಿಣಾಮವಾಗಿ ಅವರಿಗೆ ೧೯೦೬ ರಲ್ಲಿ ಡಾವಣಗೆರೆಯಲ್ಲಿ ವಿರಕ್ತಮಠದ ಪಟ್ಟಾಧಿಕಾರವು ಪ್ರಾಪ್ತವಾದ ಕೂಡಲೆ ರಾಷ್ಟ್ರಪೋಷಕ ವಿಧಾಯಕ ಕಾರ್ಯಗಳಲ್ಲಿ ತೊಡಗಿದರು. ೧೯೦೭ ರಲ್ಲಿ ಅಲ್ಲಿ ವಿದ್ಯಾವರ್ಧಕ ಸಂಘವನ್ನು ಸ್ಥಾಪಿಸಿ ಜನತೆಯಲ್ಲಿ ಸಂಘಟನೆಯನ್ನುಂಟು ಮಾಡಿದರು. ಹಲವಾರು ಭಜನಾ ಮೇಳಗಳನ್ನು ಸ್ಥಾಪಿಸಿ ಅವುಗಳ ಮುಖಾಂತರ ತರುಣರ ಸಂಘಗಳನ್ನು ನಿರ್ಮಿಸಿ ಅವರಲ್ಲಿ ಸೇವಾಭಾವನೆಯನ್ನು ಚಿಗುರಿಸಿದರು. ಬಸವ ಜಯಂತಿಯ ಮಹೋತ್ಸವವನ್ನು ಪ್ರಾರಂಭಿಸಿದ ಮೂಲ ಪುರುಷರು ಅವರೇ.

ಧಾರವಾಡಕ್ಕೆ ಆಗಮನ

ಜನಸೇವೆಯೇ ಈಶ ಸೇವೆಯೆಂದು ದುಡಿದವರ ದುಡಿತವನ್ನು ಜನತೆಯು ಬಹು ಪ್ರೇಮದಿಂದಲೂ ಆತ್ಮೀಯತೆಯಿಂದಲೂ ಕಾಣುವದುಂಟು. ಡಾವಣಗೆರೆಯಲ್ಲಿ ಅವರಿಂದ ಆವಿರ್ಭವಿಸಿದ ಸೇವಾಭಾವನೆಯ ಕೀರ್ತಿಯು ಕರ್ನಾಟಕದ ತುಂಬೆಲ್ಲ ಮೊಳಗಿ ಪಸರಿಸಿತ್ತು. ೧೯೧೬ರಲ್ಲಿ ಧಾರವಾಡದಲ್ಲಿಯ ಮುರುಘಾ ಮಠದಲ್ಲೊಂದು ಉಚಿತ ಪ್ರಸಾದ ನಿಲಯವನ್ನು ಸ್ವಾಮೀಜಿಯವರು ತೆರೆಯುವರೆಂಬ ಸುದ್ದಿಯು ಬಡ ವಿದ್ಯಾರ್ಥಿಗಳಿಗೆ ಹತ್ತಿದ ಕೂಡಲೆ ಅವರೆಲ್ಲರು ಸ್ವಾಮೀಜಿಯವರ ಸುತ್ತಲೂ ಬೆಲ್ಲಕ್ಕೆ ನೊಣಗಳು ಮುಕುರುವಂತೆ ಮುಕರಿದರು. ಅವರನ್ನೆಲ್ಲ ಆ ಮಠದಲ್ಲಿರಿಸಿಕೊಂಡು ಜೋಳಿಗೆಯನ್ನು ಕೈಯಲ್ಲಿಹಿಡಿದುಕೊಂಡು ಮನೆಮನೆಗೆ ಊರೂರಿಗೆ ಅಲೆದಾಡಿ ಅವರಿಗೆಲ್ಲ ಉಚಿತ ಪ್ರಸಾದದ ವ್ಯವಸ್ಥೆಯನ್ನು ಮಾಡಿದರು. ಅವರ ಜೋಳಿಗೆಯೆಂದರೆ ಅಕ್ಷಯ ಪಾತ್ರೆಯೇ ಸೈ. ಎಲ್ಲಿಂದಲೋ ಅಕ್ಕಿ ಬಂದಿತು, ಎಲ್ಲಿಂದಲೋ ಜೋಳ ಬಂದಿತು, ಎಲ್ಲಿಂದಲೋ ಗೋದಿ ಬಂದಿತು, ಎಲ್ಲಿಂದಲೋ ಬೆಲ್ಲದ ಪೆಂಟಿಗಳು ಬಂದವು, ಎಲ್ಲಿಂದಲೋ ಉಳಿದ ಆಹಾರದ ಸಾಮಾನುಗಳು ಬಂದವು. ಹೀಗಾಗಿ ಪ್ರಸಾದದ ವ್ಯವಸ್ಥೆಯು ಸರಿಯಾಗಿ ಸಾಗಿತು. ಅವರ ಈ ನಿಸ್ಸ್ವಾರ್ಥ ಸೇವೆಯನ್ನು ಕಣ್ಣಾರೆ ಕಂಡ ನೋಡಿದ ಉದಾರ ಹೃದಯಿಗಳು ತಮ್ಮಷ್ಟಕ್ಕೆ ತಾವೇ ಮುಂದೆ ಬಂದು ಆ ಮಠದ ಒಂದೊಂದೇ ಭಾಗವನ್ನು ವಿಸ್ತರಿಸಿ ಕಟ್ಟಿಸಿ ಕೊಡಲು ಪ್ರಾರಂಭಿಸಿದರು. ವಿದ್ಯಾರ್ಥಿಗಳ ವಸತಿಗೋಸ್ಕರ ಪ್ರತ್ಯೇಕವಾದದ್ದೊಂದು ಹಾಸ್ಟೆಲ ತಯಾರಾಗಿದೆ. ಅದರಲ್ಲಿ ೬೩ ಕೋಣೆಗಳಿವೆ. ಒಂದೊಂದು ಕೋಣೆಗೆ ಒಬ್ಬೊಬ್ಬ ಪುರಾತನರ ಹೆಸರನ್ನು ಇಟ್ಟಿದ್ದಾರೆ; ಮಾತ್ರವಲ್ಲದೆ ಆಯಾ ಕೋಣೆಯ ಬಾಗಿಲದ ತಲೆಯಮೇಲೆ ಆಯಾ ದಾತೃವಿನ ಹೆಸರನ್ನು ಬರೆಯಿಸಿದ್ದಾರೆ. ಈಗ ಸುಮಾರು ೧೫೦ ವಿದ್ಯಾರ್ಥಿಗಳಿದ್ದಾರೆ. ಅವರಿಗೋಸ್ಕರ ಈಗ ಮಜ್ಜನಶಾಲೆ (ಸ್ನಾನದ ಮನೆ) ಇದೆ, ಶಿವಪೂಜೆಯ ಶಾಲೆಯಿದೆ, ಭೋಜನ ಶಾಲೆ ಇದೆ, ಪುಸ್ತಕಾಲಯವಿದೆ, ಪಾಚನಾಲಯವಿದೆ, ಸಭಾ ಮಂಟಪವಿದೆ ಮತ್ತು ಪ್ರಾರ್ಥನಾ ಮಂದಿರವಿದೆ. ಮಠಕ್ಕೆ ಆಗಮಿಸಿದ ಅತಿಥಿಗಳಿಗೋಸ್ಕರ ಪ್ರತ್ಯೇಕವಾದ ಇಮಾರತುಗಳ ವ್ಯವಸ್ಥೆ ಇದೆ. ಮಧ್ಯದಲ್ಲಿ ಈ ಎಲ್ಲ ಇಮಾರತುಗಳಿಗೆ ಕಳಸ ವಿಟ್ಟಂತೆ ಅಥಣಿ ಶಿವಯೋಗಿಗಳವರ ಶಿಲಾಪುತ್ಥಳಿಯ ಗರ್ಭ ಗುಡಿ ಇದೆ. ಆ ಸುಂದರ ಮೂರ್ತಿಯನ್ನು ವೀಕ್ಷಿಸಿದ ಕೂಡಲೆ ನೋಡಿದವರ ಹೃದಯಗಳು ಭಕ್ತಿ-ಪ್ರೇಮಗಳಿಂದ ತುಂಬಿ ತುಳಕುತ್ತಿವೆ. ಅಲ್ಲಿಯ ಪ್ರಶಾಂತ ವಾತಾವರಣವು ಸಂದರ್ಶಕರಿಗೆಲ್ಲ ನೆಮ್ಮದಿಯನ್ನೀಯುತ್ತಿದೆ. ಒಟ್ಟಿನಲ್ಲಿ ಆ ಮಠದ ವಿಸ್ತೀರ್ಣವಾದ ಆವಾರದಲ್ಲಿರುವ ಇಮಾರತುಗಳೆಲ್ಲ ಜನತೆಯು ಸ್ವಾಮೀಜಿಯವರಲ್ಲಿಟ್ಟ ಭಕ್ತಿ-ವಿಶ್ವಾಸಗಳ ಗೌರವಗಳ ಪ್ರೇಮಾಂತಃಕರಣಗಳ ಸ್ಮಾರಕಗಳಾಗಿವೆ.

ಸಾಂಘಿಕ ಜೀವನದ ಸಾಕ್ಷಾತ್ಕಾರ

ಮುಂಜಾವಿನಲ್ಲಿಯೂ ಸಂಜೆಯಲ್ಲಿಯೂ ಪ್ರತಿ-ದಿನ ನಡೆಯುವ ಸಾಮೂಹಿಕ ಪ್ರಾರ್ಥನೆಯಲ್ಲಿ ಪ್ರತಿಯೊಬ್ಬ

ವಿದ್ಯಾರ್ಥಿಯು ಕಡ್ಡಾಯವಾಗಿ ಭಾಗ ವಹಿಸಬೇಕು. ಮುಂಜಾನೆಯ ಪ್ರಾರ್ಥನೆಯು ನಸುಕಿನಲ್ಲಿ ೫ ಗಂಟೆಗೆ, ಸಾಯಂಪ್ರಾರ್ಥನೆಯು ೭ ½ ಗಂಟೆಗೆ ತಪ್ಪದೆ ಜರುಗುವವು. ನೀರು ಜಗ್ಗುವದು, ಅಡಿಗೆಯವರಿಗೆ ಸಹಾಯ ಮಾಡುವದು, ಉಟಕ್ಕೆ ಬಡಿಸುವದು, ಸ್ವಚ್ಛತೆಯನ್ನು ಕಾಯ್ದುಕೊಳ್ಳುವದು. ಶಿವಪೂಜೆಯ ಸಾಮುಗ್ರಿಗಳನ್ನು ಪೂರೈಸುವದು, ಸರತಿಯಂತೆ ಕೆಲಸ ಮಾಡುವದು, ಸಂತೆ-ಪೇಟೆ ಮಾಡುವದು, ಹಿಟ್ಟಿನ ಗಿರಣಿಗೆ ಹೋಗುವದು, ಗಂಟೆ ಬಾರಿಸುವದು, ಶಿಸ್ತನ್ನು ಪಾಲಿಸುವದು ಮುಂತಾದ ಕಾರ್ಯಗಳನ್ನೆಲ್ಲ ವಿದ್ಯಾರ್ಥಿಗಳು ತಮ್ಮತಮ್ಮೊಳಗೆ ವ್ಯವಸ್ಥಿತವಾಗಿ ಹಂಚಿಕೊಂಡು ಸದ್ದಿಲ್ಲದೆ ಮಾಡುವದುಂಟು. ಸೇವಾಭಾವನೆಯು ಅವರ ನಿತ್ಯದ ಕಾರ್ಯಕ್ರಮಗಳಲ್ಲಿ ಹಾಸು-ಹೊಕ್ಕಾಗಿ ಹೆಣೆಯಲ್ಪಟ್ಟಿದೆ. ಇದುವೇ ಸ್ವಾಮೀಜಿಯವರ ದಿವ್ಯ ಆದರ್ಶವು, ಇದುವೇ ಕೌಟುಂಬಿಕ ಜೀವನ (Community life)ದ ಸಾಕ್ಷಾತ್ಕಾರವು. ಈ ಪರಿಸರದಲ್ಲಿ ತಯಾರಾಗುವ ವಿದ್ಯಾರ್ಥಿಗಳು ಉತ್ತಮೋತ್ತಮ ನಾಗರಿಕರಾಗುವರೆಂಬುವದರಲ್ಲಿ ಸಂದೇಹವೇನಿದೆ? ಈ ಸದುದ್ದೇಶವನ್ನಿಟ್ಟುಕೊಂಡೇ ಪೂಜ್ಯ ಬಾಪೂಜಿಯವರು ಜೀವನ ಶಿಕ್ಷಣವೆಂಬ ಹೆಸರಿನಿಂದ ಕರೆಯಲ್ಪಡುವ ಈಗಿನ ನಮ್ಮ ಹೊಸ ಶಿಕ್ಷಣದಲ್ಲಿ ಸಾಂಘಿಕ ಜೀವನ (Community life) ಕ್ಕೂ ಸೇವಾ ಭಾವನೆ (Dignity of labour) ಗೂ ಅಷ್ಟೊಂದು ಹೆಚ್ಚಿನ ಮಹತ್ವವನ್ನು ಕೊಟ್ಟಿದ್ದುಂಟು. ಈ ಮಠದಲ್ಲಿಯ ವಿದ್ಯಾರ್ಥಿಗಳೆಲ್ಲರು ಪಾದಿವಸ್ತ್ರಧಾರಿಗಳಾಗಿ ತಮ್ಮ ನಿತ್ಯದ ಚಟುವಟಿಕೆಗಳನ್ನೆಲ್ಲ ಶಿಸ್ತಿನಿಂದ ನಿರ್ವಹಿಸುವದನ್ನು ಕಣ್ತುಂಬ ನೋಡಬೇಕು; ಮತ್ತು ನೋಡಿ ನೋಡಿ ನಲಿಯಬೇಕು. ಇಂತಪ್ಪ ಈ ಮಠವನ್ನು ನೋಡಿದರೆ, ಪುರಾತನ ಕಾಲದ ಗುರುಕುಲಗಳ ಮಾದರಿಯೊಂದನ್ನು ಕಣ್ಮುಟ್ಟಿ ನೋಡಿದಂತೆಯೇ ಸರಿ. ಇದೆಲ್ಲ ಸ್ವಾಮೀಜಿಯವರ ಪ್ರಯತ್ನಗಳ ಫಲವಲ್ಲದೆ ಮತ್ತೇನು? ಇದುವೇ ಶಿವಯೋಗಿ ವರ್ಗದವರ ಪರಂಪರೆಯು. ಈ ಪರಂಪರೆಯು ಕರ್ನಾಟಕದಲ್ಲಿ ಎಂದಿನಿಂದಲೋ ಸಾಗಿ ಬಂದಿದೆ. ಉಳಿದ ಸನ್ಯಾಸಿಗಳಂತೆ ಗುಡ್ಡಗಳಲ್ಲಿಯೋ ಗವಿಗಳಲ್ಲಿಯೋ ಏಕಾಕಿಯಾಗಿದ್ದುಕೊಂಡು ತಪಸ್ಸನ್ನಾಚರಿಸದೆ, ಈ ಶಿವಯೋಗಿಗಳು ಜನತೆಯ ಮಧ್ಯದಲ್ಲಿದ್ದುಕೊಂಡು ಲೋಕ ಕಲ್ಯಾಣಕ್ಕೋಸ್ಕರ ತಮ್ಮ ದೇಹವನ್ನು ಸವಿಸುವದುಂಟು. ಇದುವೇ ಧರ್ಮ ಪೀಠಗಳನ್ನಲಂಕರಿಸಿದವರ ಜೀವನದ ನೈಜವಾದ ಸಾಫಲ್ಯವು. ಇತಿಹಾಸದಲ್ಲಿ ಇಂತಹ ಶಿವಯೋಗೀಶ್ವರರ ಉಲ್ಲೇಖಗಳು ಸಾಕಷ್ಟಿವೆ. ಅಂತಹವರಲ್ಲಿ ಈ ನಮ್ಮ ಅಚ್ಚು-ಮೆಚ್ಚಿನ ಸ್ವಾಮೀಜಿಯವರೊಬ್ಬರು.

ಸಾಂಸ್ಕೃತಿಕ ಹಾಗೂ ಸಾಹಿತ್ಯಿಕ ಕಾರ್ಯಗಳು

ಅಥಣಿ ಶಿವಯೋಗೀಶ್ವರರ ಶಿಲಾಪುತ್ಥಳಿಯ ಪ್ರತಿಷ್ಠಾಪನೆಯು ದಿನಾಂಕ ೨೯-೮-೧೯೫೮ರಂದು ಶಾಸ್ತ್ರೋಕ್ತವಾಗಿ ವಿಜೃಂಭಣೆಯಿಂದ ಜರುಗಿತು. ಅಂದಿನಿಂದ ಪ್ರತಿವರುಷ ಮಾಘ ಶುದ್ಧ ಪಂಚಮಿಗೆ ಈ ಮಠದ ಜಾತ್ರೆಯು ಅತ್ಯಂತ ವೈಭವದಿಂದ ಸ್ವಾಮೀಜಿಯವರ ನೇತೃತ್ವದಲ್ಲಿ ಜರುಗುತ್ತಲಿದೆ. ಗೀಗೀಪದ, ಲಾವಣಿಪದ, ಕರಡಿಮಜಲು, ವಚನಗಾಯನ, ಭಜನಾಮೇಳ, ಸಭೆ-ಸಮ್ಮೇಲನ, ಗವಾಯಿಗಳ ಗಾಯನ, ಭಾಷಣ, ದಾಸರ ಪದಗಳ ಪ್ರದರ್ಶನ ಮುಂತಾದ ಸಾಂಸ್ಕೃತಿಕ ಚಟುವಟಿಕೆಗಳು ಒಂದು ವಾರದ ವರೆಗೆ ಬಿಟ್ಟೂಬಿಡದೆ ನಡೆಯುವವು. ಈ ಚಟುವಟಿಕೆಗಳಲ್ಲಿ ಭಾಗವಹಿಸುವವರಿಗೆ ಅಲ್ಲಿ ಉಚಿತ ಪ್ರಸಾದದ ವ್ಯವಸ್ಥೆಯಿರುವದಲ್ಲದೆ ಪ್ರಶಸ್ತಿಪತ್ರ-ಇನಾಮು ಸಹಾಯಧನಗಳನ್ನು ಸ್ವಾಮೀಜಿಯವರು ದಯಪಾಲಿಸಿ ಅವರನ್ನೆಲ್ಲ ಪ್ರೋತ್ಸಾಹಿಸುವದುಂಟು. ಅದರಂತೆ ವರ್ಷಂಪ್ರತಿ ಇಡಿಯ ಶ್ರಾವಣಮಾಸದಲ್ಲಿ ಪ್ರತಿದಿನ ಮುಂಜಾವಿನಲ್ಲಿಯೂ ಸಂಜೆಯಲ್ಲಿಯೂ ಪುರಾಣಶ್ರವಣವು ನಡೆಯುತ್ತಿದೆ. ಸಂಜೆಯಲ್ಲಿ ಪುರಾಣಶ್ರವಣದ ತರುವಾಯ ವಿದ್ವಜ್ಜನರ ಭಾಷಣ, ಗವಾಯಿಗಳ ಗಾಯನ, ವಚನಗಾಯನ ಮುಂತಾದ ಮೇಲೆ ಹೇಳಿದ ಸಾಂಸ್ಕೃತಿಕ ಚಟುವಟಿಕೆಗಳೆಲ್ಲ ಅವ್ಯಾಹತವಾಗಿ ಒಂದು ತಿಂಗಳ ವರೆಗೆ ನಡೆಯುವವು. ಉಳಿದ ಕಾಲದಲ್ಲಿಯೂ ಸಹ ಈ ತರಹದ ಚಟುವಟಿಕೆಗಳು ಪ್ರಸಂಗಾನುಸಾರವಾಗಿ ನಡೆಯುವದುಂಟು. ಸಾಹಿತ್ಯಿಕ ಚಟುವಟಿಕೆಗಳಿಗೂ ಸ್ವಾಮೀಜಿಯವರು ಅಲ್ಲಿ ಅವಕಾಶವನ್ನು ಕಲ್ಪಿಸಿಕೊಟ್ಟಿದ್ದಾರೆ. ಬಾಲಲೀಲಾ ಮಹಾಂತಶಿವಯೋಗಿಗಳವರ ಗ್ರಂಥಮಾಲೆಯ ಪೊತ್ತಿಗೆಗಳು ಪ್ರಕಟಗೊಳ್ಳುವದು ಈ ಮಠದಲ್ಲಿಯೇ. ಅಖಿಲಭಾರತ ಶಿವಾನುಭವ ಸಂಸ್ಥೆಯ ಕಾರ್ಯಾಲಯವು ಇಲ್ಲಿಯೇ ಇದೆ. ಅದು ದಿನಾಂಕ ೧೫-೮-೧೯೪೧ರಿಂದ ತನ್ನ ಕಾರ್ಯವನ್ನು ಪ್ರಾರಂಭಿಸಿದೆ. ಒಂದೇ ಮಾತಿನಲ್ಲಿ ಹೇಳುವದಾದರೆ, ಘಾರವಾಡದ ನಾಗರಿಕರಿಗೆ ಅದೇಕೆ ಸಮಸ್ತ ಕನ್ನಡಿಗರಿಗೆ

ಆದೊಂದು ಹಿರಿದಾದ ಧಾರ್ಮಿಕ, ಸಾಮಾಜಿಕ, ಸಾಹಿತ್ಯಿಕ ಹಾಗೂ ಸಾಂಸ್ಕೃತಿಕ ಕೇಂದ್ರವಾಗಿದೆ.

ಇನ್ನಿತರ ಜನಹಿತದ ಕಾರ್ಯಗಳು

ಉಚಿತ ಪ್ರಸಾದ ನಿಲಯಕ್ಕೋಸ್ಕರ ಸ್ವಾಮೀಜಿಯವರು ಕರ್ನಾಟಕದ ತುಂಬೆಲ್ಲ ಸುತ್ತಾಡುತ್ತಿರುವ ದುಂಟು. ಹಾಗೆ ಸಂಚಾರಕ್ಕೆ ಹೊರಟಾಗ ಅವರಿಂದೆಸಗಲ್ಪಟ್ಟ ಜನಹಿತದ ಕಾರ್ಯಗಳು ಅಸಂಖ್ಯವಿವೆ. ಅವುಗಳಲ್ಲಿ ಮಾದರಿಗೊಂದರಂತೆ ನಮ್ಮ ಜ್ಞಾಪಕಕ್ಕೆ ನಿಲುಕಿದಷ್ಟವುಗಳನ್ನು ಮಾತ್ರ ಇಲ್ಲಿ ವಿವರಿಸಲಾಗಿದೆ. ೧೯೧೯ರಲ್ಲಿ ಹೈದರಾಬಾದ ಸಂಸ್ಥಾನದ ವೀರಶೈವ ವಿದ್ಯಾಭಿವೃದ್ಧಿ ಸಂಸ್ಥೆಯನ್ನು ಸ್ಥಾಪಿಸಲು ಕಾರಣರಾದರು. ಅದೇ ವರುಷ ಪಾಂಸಭಾವಿಯಲ್ಲಿ 'ದುರ್ಗದ ಪಾಯಸ್ಕೂಲ'ನ್ನು ಪ್ರಾರಂಭಿಸಿ ತನ್ಮೂಲಕ ಗ್ರಾಮಾಂತರ ವಿದ್ಯಾರ್ಥಿಗಳಿಗೆ ಮಾಧ್ಯಮಿಕ ಶಿಕ್ಷಣದ ಅನುಕೂಲತೆಯನ್ನು ಒದಗಿಸಿಕೊಟ್ಟರು. ಉತ್ತರ ಹಿಂದುಸ್ತಾನದ ಪ್ರವಾಸವನ್ನು ಕೈಕೊಂಡಾಗ ಮುಂಬಯಿಗೆ ಆಗಮಿಸಿ ಅಲ್ಲಿ 'ಮುಂಬಯಿ ವೀರಶೈವ ಎಜ್ಯುಕೇಶನ್ ಫಂಡ'ನ್ನು ಸ್ಥಾಪಿಸಿದರು. ಮಡಗಾವ-ಗೋವಾಗಳಿಗೆ ಸಂದರ್ಶನವನ್ನಿತ್ತು ಅಲ್ಲಿಯ ವೀರಶೈವ ಹಿತಸಂವರ್ಧನೆಗೋಸ್ಕರ ಅವರದೊಂದು ಸಂಘವನ್ನು ರಚಿಸಿದರು. ೧೯೪೦ರಲ್ಲಿ ತಮ್ಮಿಂದ ಪ್ರಾರಂಭಿಸಲ್ಪಟ್ಟ ಉಚಿತ ಪ್ರಸಾದ ನಿಲಯದ ಬೆಳ್ಳಿಯ ಹಬ್ಬವನ್ನಾಚರಿಸಿದರು. ೧೯೪೭ರಲ್ಲಿ ತಮ್ಮ ಮಠದಲ್ಲಿ ಪದ್ಮಶ್ರೀ ಡಾ. ಮೋದಿಯವರಿಂದ ನೇತ್ರಯಜ್ಞವನ್ನು ಮಾಡಿಸಿ ಎಷ್ಟೋ ಬಡಕುಟುಂಬಗಳಿಗೆ ಸಹಾಯವನ್ನು ಸಲ್ಲಿಸಿದರು. ನಮ್ಮ ರಾಜ್ಯದ ಗಡಿಪ್ರದೇಶದಲ್ಲಿರುವ ನಿಡಸೋಸಿ ಮಠದಲ್ಲಿ ಅಖಿಲಭಾರತ ಶಿವಾನುಭವ ಸಮ್ಮೇಲನವನ್ನು ಜರುಗಿಸಿ ಆ ಭಾಗದ ಜನರಲ್ಲಿ ಜಾಗ್ರತಿಯನ್ನುಂಟುಮಾಡಿದರು. ೧೯೫೬ರಲ್ಲಿ ಅಖಿಲಭಾರತ ಉಚಿತ ಪ್ರಸಾದ ನಿಲಯಗಳ ಪರಿಷತ್ತೊಂದನ್ನು ಧಾರವಾಡದಲ್ಲಿ ನೆರವೇರಿಸಿ ಅವುಗಳ ಸುಗಮವಾದ ಕಾರ್ಯಾಚರಣೆಗೋಸ್ಕರ ಸರ್ವಸಮ್ಮತವಾದೊಂದು ಕಾರ್ಯಪದ್ಧತಿಯನ್ನು ಗೊತ್ತುಪಡಿಸಿದರು. ಇಂತಹ ಲೋಕ ಕಲ್ಯಾಣದ ಕೃತಿಗಳು ಅವರಿಂದ ಎಣಿಕೆಗೆ ನಿಲುಕದಷ್ಟು ಜರುಗಿವೆ. ಇಷ್ಟೆಲ್ಲ ಕಾರ್ಯಗಳನ್ನು ಅವರು ಮಾಡಿದಾಗ್ಯೂ ಸಹ ನಾನು ಮಾಡಿದೆನೆಂದು ಅವರು ಎಂದೂ ಅನ್ನುವದಿಲ್ಲ. ಅವರ ಹೃದಯವನ್ನೇ ಆವಾಗಲೂ ತುಂಬಿಕೊಂಡಿದ್ದ ಆ ಅಥಣಿ ಶಿವಯೋಗಿಯು ಮಾಡಿದ್ದಾನೆಂದು ಮಾತ್ರ ಅನ್ನುವದುಂಟು. ಇದರ ಮೇಲಿಂದ ಅವರು ಎಂತಹ ನಿರಾಡಂಬರ, ನಿರಹಂಕಾರ ಮತ್ತು ನಿಷ್ಕಲಂಕ ಮನೋವೃತ್ತಿಯ ವಿಭೂತಿಗಳೆರುವರೆಂಬುದನ್ನು ಓದುಗರು ತಮ್ಮ ಮನದಲ್ಲಿ ತಾವೇ ಊಹಿಸಿಕೊಳ್ಳುವದು ಲೇಸು.

ಕೊನೆಯ ಮಾತು

ಇದೇ ತಿಂಗಳು ೯ನೆಯ ದಿನಾಂಕಕ್ಕೆ ಅವರಿಗೆ ೭೨ವರ್ಷಗಳು ತುಂಬಿ ೭೩ನೆಯ ವರ್ಷದಲ್ಲಿ ಕಾಲಿಟ್ಟಿದ್ದಾರೆ. ಈ ಲೇಖನವನ್ನು ಈ ತಿಂಗಳಲ್ಲಿಯೇ ಬರೆದದ್ದರ ಔಚಿತ್ಯವು ಓದುಗರಿಗೆ ಈಗಾಗಲೇ ಹೊಳೆದಿರಲು ಸಾಕು. ಇಷ್ಟೊಂದು ಮುಪ್ಪಿನಲ್ಲಿಯೂ ಸಹ ಅವರು ಆವಾಗಲೂ ಲೋಕಹಿತದ ಕಾರ್ಯಗಳ ಚಿಂತನೆಯಲ್ಲಿ ಮಗ್ನರಾಗಿರುವದುಂಟು. ಅವರ ಪ್ರತಿಯೊಂದು ಕಾರ್ಯದಲ್ಲಿ ಸೂಕ್ತ ಸಲಹೆ-ಸೂಚನೆಗಳನ್ನು ಕೊಡುವ ಮತ್ತು ಅವರ ಬಲಗೈಯಾಗಿ ನಿಂತು ಕೆಲಸ ಮಾಡುವ ಸಹಾಯಕರೋರ್ವರನ್ನು ಅವರ ನಚ್ಚಿನ ಶಿವಯೋಗಿಯು ಸ್ವಾಮೀಜಿಯವರಿಗೆ ದಯಪಾಲಿಸಿದ್ದಾನೆ. ಅವರು ಎಲೆಯ ಮರೆಯಲ್ಲಿಯ ಕಾಯಿಯಂತಿದ್ದುಕೊಂಡು ಕೆಲಸ ಮಾಡುತ್ತಿರುವರು. ಅವರ ಶಾಂತ ಸ್ವಭಾವವೂ, ಸದಾಚಾರವೂ, ಪ್ರಸಂಗಾವಧಾನವೂ, ಕಾರ್ಯಕುಶಲತೆಯೂ, ಮೇಲ್ವಿಚಾರಣೆಯ ಹಿಡಿತವೂ ಎಲ್ಲರ ಮೆಚ್ಚುಗೆಯನ್ನು ಪಡೆದಿವೆಯಲ್ಲದೆ ಅವರಿಗೆ ಮಿಕ್ಕಿದ ಜನಾನುರಾಗವನ್ನು ಈಗಾಗಲೇ ತಂದುಕೊಟ್ಟಿವೆ. ಅವರೇ ಪೂಜ್ಯ ಮಹಾಂತ ಸುರಿದೇವರು. ಅವರನ್ನು ಸ್ವಾಮೀಜಿಯವರು ತಮ್ಮ ಉತ್ತರಾಧಿಕಾರಿಯನ್ನಾಗಿ ನೇಮಿಸಿಕೊಂಡಿದ್ದುದು ಎಲ್ಲ ದೃಷ್ಟಿಯಿಂದಲೂ ಯೋಗ್ಯವಾಗಿದೆ. ಸ್ವಾಮೀಜಿಯವರ ಉಜ್ವಲ ಪರಂಪರೆಯನ್ನು ಸಾಗಿಸಿಕೊಂಡು ಹೋಗಲು ಪೂಜ್ಯ ಮಹಾಂತ ಸ್ವಾಮಿಗಳು ಸಮರ್ಥರಿರುವರಲ್ಲದೆ ಅದನ್ನು ಇನ್ನೂ ಹೆಚ್ಚಿನ ಊರ್ಜಿತ ಸ್ಥಿತಿಗೆ ಒಯ್ಯುವರೆಂಬ ಭರವಸೆಯು ಜನತೆಗೆ ಇದೆ. ಧಾರವಾಡಕ್ಕೆ ಕಾರ್ಯವಶಾತ್ ಆಗಮಿಸಿದ ನಮ್ಮ ರಾಷ್ಟ್ರದ ಮತ್ತು ನಾಡಿನ ಮುಖಂಡರು ಈ ಪುಣ್ಯಕ್ಷೇತ್ರಕ್ಕೆ ಸಂದರ್ಶನವನ್ನಿತ್ತು, ಅಲ್ಲಿಯ ಸುವ್ಯವಸ್ಥೆಯನ್ನು ನೋಡಿ, ತಮಗುಂಟಾದ ಸಂತೃಪ್ತಿಯನ್ನು ಮುಕ್ತಕಂಠದಿಂದ ವ್ಯಕ್ತಪಡಿಸಿ, ಸ್ವಾಮೀಜಿಯವರಿಂದ ಭಸ್ಮ ಮಂತ್ರಾಕ್ಷತೆ, ಫಲಪುಷ್ಪಾದಿಗಳ ಆಶೀರ್ವಾದವನ್ನು ಪಡಕೊಂಡು ಹೋಗಿದ್ದಾರೆ, ಹೋಗುತ್ತಿದ್ದಾ

ಮುಂದೆಯೂ ಹೋಗುವರು. ಇಂತಪ್ಪ ಸ್ವಾಮಿಜಿಯವರಿಗೆ ಜನತೆಯನ್ನು ಉದ್ಧರಿಸಲೋಸುಗ ಇನ್ನೂ ಹೆಚ್ಚಿನ ಆಯುರಾರೋಗ್ಯವನ್ನು ದಯಪಾಲಿಸಲೆಂದು ಅವರ ಹೃದಯೇಶ್ವರನಾದ ಆ ಅಧಣಿಯ ಶಿವಯೋಗಿಯನ್ನು ನಾವು ಅನನ್ಯ ಭಾವನೆಯಿಂದ ಪ್ರಾರ್ಥಿಸುತ್ತೇವೆ.

ನಾ ಕಂಡ ಗಾಂಧೀಗ್ರಾಮ

ಲೇಖಕರು:— **ಶ್ರೀ ಹ. ಗ. ಜೋಶಿ,** ಬಿ. ಎ., (ಆನರ್ಸ) ಡಿ. ಬಿ. ಇ.

(ಕಳೆದ ಸಂಚಿಕೆಯಿಂದ ಮುಂದುವರಿದುದು.)

ಗಾಂಧೀ ಗ್ರಾಮದಲ್ಲಿಯೂ ಸಾರಣೆಯ, ಕಾರಣೆಯ, ಕೆಲಸಗಳು ನಡೆಯುವವು. ಒಂದು ಬೈಲಿನಲ್ಲಿ ನಾವು ಸತ್ಯನಾರಾಯಣ ಪೂಜೆಗೆ ರಚಿಸುವಂತೆ ಮಂಟಪವನ್ನು ರಚಿಸಿ, ಅಲ್ಲಿ ಒಲೆ ಹೂಡಿ, ಹುಗ್ಗಿಯನ್ನು ಸಿದ್ಧಗೊಳಿಸುತ್ತಾರೆ. ಸಾವಿರ ಜನರೆಲ್ಲರೂ ಅಂದು ರಾತ್ರಿ ಭಿನ್ನಭೇದ ಭಾವಗಳಿಲ್ಲದೆ ಸಹ ಭೋಜನವನ್ನು ಒತ್ತಟ್ಟಿಗೇ ಮಾಡುತ್ತಾರೆ. ಹುಗ್ಗಿಯ ಊಟವು ತಮಿಳರಿಗೆ ಮಹಾ ಪ್ರಸಾದವು. ಮಕರಸಂಕ್ರಮಣದ ಮರುದಿನವೂ ಕೂಡ ಅವರು ಒಳ್ಳೆ ಆನಂದದಿಂದ ಹಬ್ಬವನ್ನು ಆಚರಿಸುವರು. ಮಂಟಪದಲ್ಲಿ ಹುಗ್ಗಿಯನ್ನು ತಯಾರಿಸಿ, ಹಸುಗಳನ್ನು ತಂದು ಪೂಜೆ ಮಾಡುವರು. ಹುಗ್ಗಿಯ ನೈವೇದ್ಯವಿಡುವರು. ಹೆಣ್ಣು ಮಕ್ಕಳು ಸೂರ್ಯನ ಸ್ತವನ ಮಾಡುವರು. "ಭೂಮಿ ಅನ್ನಕೊಡುವದು ನಿನ್ನಿಂದ" ಎಂಬ ಭಾವದ ಪದ್ಯವನ್ನು ಸರಾಗವಾಗಿ ಹೇಳುವರು. ಹಿಂದಿನಿಂದ ಕೂಡಿದವರಲ್ಲಿ ಆ ಹುಗ್ಗಿಯನ್ನು ಪ್ರಸಾದವೆಂದು ಸ್ವಲ್ಪ ಹಂಚಿ, ಉಳಿದುದೆಲ್ಲವನ್ನೂ ಅಲ್ಲಿರುವ ಎಲ್ಲ ಹಸುಗಳಿಗೂ ತಿನಿಸುವರು. ಗಾಂಧೀಗ್ರಾಮದಲ್ಲಿ ಒಂದಿಲ್ಲೊಂದು ಸಾಂಸ್ಕೃತಿಕ ಚಟುವಟಿಕೆಗಳು ಇದ್ದೇ ಇರುತ್ತವೆ. ಒಂದು ದಿನ ನೃತ್ಯವಿದ್ದರೆ ಇನ್ನೊಂದು ಸಲ ವಿಚಾರಗೋಷ್ಠಿ ನಡೆಯುತ್ತದೆ. ಮತ್ತೊಂದು ಸಲ ವಿಚಾರ ಸಂಕೀರ್ಣ, ಹಬ್ಬ ಹುಣ್ಣಿವೆಗಳ ಆಚರಣೆಗಳು, ಸಂತರು, ಮಹಾ ಪುರುಷರ ಜಯಂತಿ, ಪುಣ್ಯತಿಥಿಗಳು ಆಚರಿಸಲ್ಪಡುವವು. ಗಾಂಧೀಜಿಯ ಪುಣ್ಯತಿಥಿಯಂದು ಮಧ್ಯಾಹ್ನದಲ್ಲಿ ಯಾರಿಗೂ ಊಟವಿರುವದಿಲ್ಲ. ಅಂದು ಇಡೀ ಗಾಂಧೀಗ್ರಾಮವೇ ಒಂದು ಹೊತ್ತು ಉಪವಾಸ ವ್ರತವನ್ನು ಕೈಕೊಳ್ಳುವದು. ಮಧ್ಯಾಹ್ನದಲ್ಲಿ ೧೫೦೦ ಜನರೆಲ್ಲ ಒತ್ತಟ್ಟಿಗೆ ಕುಳಿತು ಹಣ್ಣು-ಪಾನಕಗಳನ್ನು ಸೇವಿಸುವ ದೃಶ್ಯವು ರಮಣೀಯವಾಗಿರುವದು. ಅಖಂಡ ಸೂತ್ರಯಜ್ಞ, ಗಾಂಧೀಜಿಯ ಅಮರ ವಾಕ್ಯಗಳ, ಗೀತಾಶ್ಲೋಕಗಳ ಪಠನಗಳು ಆ ದಿನದ ಗಾಂಭೀರ್ಯವನ್ನೂ ಮಹತಿಯನ್ನೂ ಹೆಚ್ಚಿಸುತ್ತವೆ. ಎಲ್ಲ ಕಾರ್ಯಕಲಾಪಗಳ ಸಂಘಟನೆ ಯಾವ ಸದ್ದೂ ಇಲ್ಲದೆ ನಡೆದುಹೋಗುತ್ತದೆ. ಸೂತ್ರಧಾರರು ಹಿನ್ನೆಲೆಯಲ್ಲಿದ್ದುಕೊಂಡು ಸಂಘಟಿಸುವ ಕಾರ್ಯ ನೆರವೇರಿಸುವರು. ಆ ಎಲ್ಲ ಕಾರ್ಯಕಲಾಪಗಳಲ್ಲಿ ವೈಕ್ಷಣಿಕ ಸೂತ್ರವು ಪೋಣಿಸಿಕೊಂಡಿರುವದು.

ಡ] ಸೌಕರ್ಯಗಳು

ಪ್ರಶಾಂತವಾದ ಹಳ್ಳಿಯ ವಾತಾವರಣದಲ್ಲಿ ಹಬ್ಬಿಕೊಂಡಿದ್ದರೂ ಈ ಗ್ರಾಮಕ್ಕೆ ಪಟ್ಟಣದ ಎಲ್ಲ ಸೌಕರ್ಯಗಳಿವೆ. ಶಿಕ್ಷಣದ ಸೌಕರ್ಯದ ವಿಷಯವಾಗಿ ಪ್ರತ್ಯೇಕ ಹೇಳಬೇಕಿಲ್ಲ. ರಾಜಮಾರ್ಗದ ಮೇಲೆಯೆ ಇರುವದರಿಂದ ಪ್ರವಾಸ ಸೌಕರ್ಯವು ಸಾಕಷ್ಟಿದೆ. ತ್ರಿವೇಂದ್ರಂ ಎಕ್ಸಪ್ರೆಸ್ ಗಾಡಿಯೊಂದನ್ನು ಬಿಟ್ಟು, ಎಲ್ಲ ಗಾಡಿಗಳು ನಿಲ್ಲುವವು. ಬಸ್ಸುಗಳಂತೂ ಸಾಕಷ್ಟು ಓಡಾಡುತ್ತಿವೆ. "ರೋಡು ಬೆಳ್ಳಿ ಬಳೆದಿದ್ದಂಗೆ." ಪ್ರತಿಯೊಂದು ಟ್ರೀನೂ ಗಾಂಧೀ ಗ್ರಾಮದ ಹತ್ತಿರ 'ಸಿಳ್ಳು' ಹಾಕುತ್ತದೆ. ಗ್ರಾಮವಾಸಿಗಳು, ಉಗಿಬಂಡಿಗಳು ಗಾಂಧಿ ಗ್ರಾಮಕ್ಕೆ ಸಮಸ್ಕರಿಸಿ ತೆರಳುತ್ತಿವೆಯೆಂದು ಹೇಳುತ್ತಿರುವ ಮಾತಿನಲ್ಲಿ ಸತ್ಯವಿದೆಯೇನೋ! ವಿದ್ಯುತ್ತಿನ ಸೌಕರ್ಯವೂ ಉಂಟು. ಶೀಘ್ರದಲ್ಲಿಯೂ ವಿದ್ಯುತ್ತಿನ ಪೂರೈಕೆಯಾಗುತ್ತಿದೆ. ದೊಡ್ಡ ದೊಡ್ಡ ಬಾವಿಗಳನ್ನು ಅಗಿದು ವಿದ್ಯುತ್ತಿನ ನೆರವಿನಿಂದ ನೀರನ್ನು ಸಂಗ್ರಹಿಸಿ, ನಳಗಳನ್ನು ನಿರ್ಮಿಸಿರುವರು. ಯಾವಾಗಲೂ ನಲ್ಲಿಯಲ್ಲಿ ನೀರಿರುವದಲ್ಲದೆ ನೀರು ಶುದ್ಧವಾದುದೂ, ಆರೋಗ್ಯಕರವಾದುದೂ ಉಂಟು. ಗ್ರಾಮ

ಕ್ಕಾಗಿಯೇ ಒಂದು ಚಿಕ್ಕ ಆಫೀಸು ಇದೆ. ಆಫೀಸದಲ್ಲಿ "ಫೋನ" ಸೌಕರ್ಯವೂ ಕೂಡ ಉಂಟು. ತಂತಿಯ ವ್ಯವಸ್ಥೆಯು ಮಾತ್ರ ಅಲ್ಲಿರದೆ ಅಲ್ಲಿಯೇ ೧ ಮೈಲು ಅಂತರದ ಮೇಲಿರುವ 'ಚಿನ್ನಾಲಪಟ್ಟಿ'ಯಲ್ಲಿರುತ್ತದೆ. ಹೀಗಾಗಿ ತಂತಿ ಸೌಕರ್ಯದ ಅಭಾವವೂ ಅನಿಸದು. ದವಾಖಾನೆಯಿದೆ, ಹೆರಿಗೆಯ ಆಸ್ಪತ್ರೆಯಿದೆ, ಒಂದು ಚಿಕ್ಕದಾದ ನಾಟ್ಯಗೃಹವೂ ಉಂಟು. ಅಲ್ಲಿ ಸಂದರ್ಭಾನುಸಾರವಾಗಿ ಸಿನೆಮಾ ತೋರಿಸುವ ವ್ಯವಸ್ಥೆಯೂ ಇದೆ. ಹೀಗಾಗಿ ಗ್ರಾಮವು ಚಿಕ್ಕದಾಗಿದ್ದರೂ ಒಳ್ಳೇ ಜೊಕ್ಕಾಗಿ ಪಟ್ಟಣದ ಎಲ್ಲ ಸೌಕರ್ಯಗಳನ್ನೂ ಒಳಗೊಂಡಿರುವದು.

ತರಬೇತಿಗಳ ತವರೂರು

ಈ ಗ್ರಾಮವನ್ನು ತರಬೇತಿಗಳ ತವರೂರು ಎಂದು ಕರೆಯಬಹುದು. ಭಾರತದ ಮೂಲೆ ಮೂಲೆಗಳಿಂದ ಇಲ್ಲಿಗೆ ವಿಶಿಷ್ಟತರಹದ ತರಬೇತಿಗಾಗಿ ಜನರು ಬರುತ್ತಾರೆ. ಉಚ್ಚಶ್ರೇಣಿಯ ಅಧಿಕಾರಿಯಿಂದ ಹಿಡಿದು ಕೊನೆಯ ಹಂತದಲ್ಲಿ ಕೆಲಸ ಮಾಡುತ್ತಿರುವ ಸೇವಕನ ವರೆಗೂ ತರಬೇತಿಗಾಗಿ ಬರುತ್ತಿರುವರು. ಅಭಿವೃದ್ಧಿ ಕ್ಷೇತ್ರಗಳಲ್ಲಿ ದುಡಿಯುವವರಿಗೆ ಅವರವರ ಕಾರ್ಯಕ್ಷೇತ್ರಕ್ಕೆ ಅನುಸರಿಸಿ, ತರಬೇತಿ ಕೊಡಲಾಗುತ್ತದೆ. ಯಾರು ಮೂರು ದಿನಗಳ ತರಬೇತಿಗಾಗಿ ಬಂದರೆ, ಹಲವರು ೧೨ ಮಾಸಗಳ ತರಬೇತಿಗಾಗಿ ಬರುವರು. ಎರಡು ವರುಷಗಳ ತರಬೇತಿಯ ಯೋಜನೆಯೂ ಉಂಟು. ಸಮಾಜ ಶಿಕ್ಷಣಾಧಿಕಾರಿಗಳಾಗಲು ಬೇಕಾದ ಅರ್ಹತೆಯನ್ನು ತಂದುಕೊಡುವ ತರಬೇತಿ ವರ್ಗವೂ ಇಲ್ಲಿ ಉಂಟು. ಗ್ರಾಮಸೇವಕರ, ಗ್ರಾಮಸೇವಿಕೆಯರ, ಮುಖ್ಯ ಸೇವಿಕೆಯರ ತರಬೇತಿಯ ವರ್ಗಗಳು ನಡೆಯುವವು. ಅಭಿವೃದ್ಧಿ ಕ್ಷೇತ್ರದಲ್ಲಿ ದುಡಿಯುತ್ತಿರುವ ಅಧಿಕಾರಿಗಳೂ, ಡೆ. ಕಮೀಶನರ, R.D.O. ಮೊದಲಾದ ಅನೇಕ ಅಧಿಕಾರಿಗಳು ತರಬೇತಿಗಾಗಿ ಬರುವರು. ಜೀವನ ಶಿಕ್ಷಣದ ವಿವಿಧ ಹಂತಗಳ ತರಬೇತಿಯಂತೂ ಸರಿಯೇ! ಯಾವ ವರ್ಗದ ಅಧಿಕಾರಿಯೇ ಇರಲಿ, ಯಾವ ಕ್ಷೇತ್ರದ ವ್ಯಕ್ತಿಯೇ ಇರಲಿ, ಯಾವ ಶ್ರೇಣಿಯ ಮನುಷ್ಯನೇ ಇರಲಿ ಅವರೆಲ್ಲರಿಗೆ ಮೊದಲು ಇಲ್ಲಿ ಸಾಂಘಿಕ ಜೀವನದ ದೀಕ್ಷೆಯನ್ನು ಕೊಡಲಾಗುವದು. ದೇಶದ ಮೂಲೆ ಮೂಲೆಗಳಿಂದ ಜನರು ಬರುತ್ತಿರುತ್ತಾರೆ, ಹೋಗುತ್ತಿರುತ್ತಾರೆ. ಹೀಗಾಗಿ ಅದೊಂದು ತರಬೇತಿಗಳ ತವರೂರೆಂದು ಹೇಳಬಹುದು.

ಸೂತ್ರಧಾರರು

ಡಾ. ಸೌಂದರಮ್ಮ ಜಿ. ರಾಮಚಂದ್ರನ್ ಇವರನ್ನು ಈ ಗ್ರಾಮದ ತಾಯಿಯೆಂದೂ, ಶ್ರೀಮಾನ್ ಜಿ. ರಾಮಚಂದ್ರನ್ ಇವರನ್ನು ತಂದೆಯೆಂದೂ ಹೇಳಬಹುದು. ಈ ಗ್ರಾಮವನ್ನು ಮೊದಲು ಚಿಗುರಿಸಿದವರು ಶ್ರೀಮತಿ ಸೌಂದರಮ್ಮನವರು. ಅದನ್ನಿಂದು ಮುಖ್ಯ ಸೂತ್ರಧಾರರಾಗಿ ಶ್ರೀ ಜಿ. ರಾಮಚಂದ್ರನ್‌ರು ಕಟ್ಟುತ್ತಲಿದ್ದಾರೆ. ಇಂದು ಜಿ. ರಾಮಚಂದ್ರನ್‌ರು ಅದರ ಡಾಯರೆಕ್ಟರರು. ಸತಿ–ಪತಿಯರೀರ್ವರೂ ಅದನ್ನು ಬೆಳೆಸಿ, ಪರಿಪೋಷಿಸುವಲ್ಲಿ ಅವಿರತ ಶ್ರಮಪಡುತ್ತಲಿದ್ದಾರೆ. ಗ್ರಾಮವಾಸಿಗಳೆಲ್ಲರೂ ರಾಮಚಂದ್ರನ್‌ರನ್ನು 'ಮಾಮಾ' ಎಂದೂ ಡಾ. ಸೌಂದರಮ್ಮನವರನ್ನು 'ಅಮ್ಮಾ' ಎಂದೂ ಸಂಬೋಧಿಸುತ್ತಿರುವರು. ಡಾ.ಸೌಂದರಮ್ಮನವರ ತವರಮನೆಯು ಕುಬೇರನವಂಶಕ್ಕೆ ಸೇರಿದುದು. ತಮಿಳನಾಡಿನಲ್ಲೆಲ್ಲ T. V. S. ಎಂಬುದು ಅಂತ್ಯಂತ ಪ್ರಸಿದ್ಧವಾದ ಹೆಸರಾಗಿದೆ. ರಾಜ್ಯದ ತುಂಬೆಲ್ಲ ಓಡಾಡುವ ಮೋಟಾರ ವಾಹನಗಳನ್ನು ಓಡಾಡಿಸುವ ಸಂಸ್ಥೆಯದು. T. V. S. ಸಂಸ್ಥೆಯ ಮೋಟಾರುಗಳು ನಿಯಮಿತತನಕ್ಕೆ ಹೆಸರಾಗಿವೆ. ಪ್ರತಿಯೊಬ್ಬರು ತಮ್ಮ ಗಡಿಯಾರಗಳನ್ನು ಆ ಬಸ್ಸುಗಳ ಓಡಾಟದಿಂದ ಸರಿಪಡಿಸಿಕೊಳ್ಳಬಹುದೆಂದು ಹೇಳುತ್ತಾರೆ. ಎಲ್ಲಿ ನೋಡಿದಲ್ಲಿಲ್ಲ ಅವೇ ಮೋಟಾರುಗಳು ಕಣ್ಣಿಗೆ ಬೀಳುವವು. ಕೋಟ್ಯವಧಿ ರೂಪಾಯಿಗಳ ಜಮಾ-ಖರ್ಚು ಆ ಸಂಸ್ಥೆಯದು ಉಂಟೆಂದು ಹೇಳುವರು. ಆ ಮನೆತನದ ಹೆಣ್ಣುಮಗಳೇ ಡಾ. ಸೌಂದರಮ್ಮನವರು. ಅವರ ಹಿರಿಯ ಅಣ್ಣಂದಿರೇ ಆ T. V. S. ಸಂಸ್ಥೆಯ ಯಜಮಾನರು. ಇಂದು ಆ ಸಂಸ್ಥೆಯವರು ಪ್ರತಿವರುಷವೂ ಗಾಂಧೀ ಗ್ರಾಮಕ್ಕೆ ಸುಮಾರು ೫೦,೦೦೦ ರೂ. ಗಳಷ್ಟು ಹಣವನ್ನು ದೇಣಿಗೆಯೆಂದು ಕೊಡುತ್ತಿರುವರಂತೆ! ಅದೇನು ತಂಗಿಯ ಮೇಲಿನ ಮಮತೆಯೋ, ಮಾನವೀಯ ದೃಷ್ಟಿಕೋನವೋ ಹೇಳಲುಬಾರದು. ಡಾ. ಸೌಂದರಮ್ಮ ಅವರು ಎಸ್.ಬಿ.ಬಿ.ಎಸ್. ಪದವೀಧರರು. ಲಕ್ಷ್ಮೀ-ಸರಸ್ವತಿಯರೀರ್ವರ ಕೃಪೆಗೆ ಪಾತ್ರರಾಗಿದ್ದರೂ ಅವಳ ಮೈಸೋತುದು ಸಮಾಜ ಪುರುಷನ ಸೇವೆಗೆ. ಅವಳ ಜೀವನವೇ ಒಂದು ಸೇವೆ, ಇದಕ್ಕೆಲ್ಲ ಗಾಂಧೀಜಿಯ ಪ್ರಭಾವೆಂದು ಹೇಳುವರು.

ಶ್ರೀಯುತ ಜಿ. ರಾಮಚಂದ್ರನ್‌ರು ಶಿಕ್ಷಣವೇತ್ತರು. ಶಿಕ್ಷಣ ಪ್ರಪಂಚದಲ್ಲಿ ಇಂದು ಅವರ ಹೆಸರು ಮನೆಮಾತಾಗಿದೆ. ಜೀವನ ಶಿಕ್ಷಣದ ಬಗೆಗೆ ಅನರೊಬ್ಬ ಅಧಿಕೃತ ಅಧಿಕಾರವಂತ ಪುರುಷರು. ಡಾ. ಝಾಕೀರ್‌ಹುಸೇನ್, ಆಶಾದೇವಿ, ಆರ್ಯನಾಯಕಂ, ಡಾ. ಸೈಯ್ಯದ್ದೀನ ಇವರ ಮಾಲಿಕೆಯಲ್ಲಿಯ ಪುರುಷರಿಷಯೊಬ್ಬರು. ಭಾರತ ಸರ ಕಾರವು ಇವರ ನೇತೃತ್ವದಲ್ಲಿಯೇ ಅಖಿಲ ಭಾರತ ಜೀವನ ಶಿಕ್ಷಣ ಪರಿಶೀಲನಾ ಸಮಿತಿಯನ್ನು ನೇಮಿಸಿದ್ದಿತು. ಇಂದು ಗಾಂಧಿಸ್ಮಾರಕ ನಿಧಿಯ ಕಾರ್ಯದರ್ಶಿಯಾಗಿದ್ದಾರೆ. ಗಾಂಧೀಗ್ರಾಮವನ್ನು ಆದರ್ಶ ಗಾಂಧೀ ಶಿಕ್ಷಣಾಲಯವನ್ನಾಗಿ ಶಾಶ್ವತಗೊಳಿಸಲು ಅಹರ್ನಿಶ ದುಡಿಯುತ್ತಿರುವರು. ಒಂದು ಕಾಲು ದಿಲ್ಲಿಯಲ್ಲಿದ್ದರೆ, ಇನ್ನೊಂದು ಗಾಂಧೀಗ್ರಾಮದಲ್ಲಿ ಇರುತ್ತದೆ. ಇಂದು ಅರವತ್ತರ ಅಂಚನ್ನು ದಾಟಿದ್ದರೂ ಯೌವ್ವನದ ಹುರುಪು–ಹುಮ್ಮಸುಗಳೇ ಎದ್ದುಕಾಣುವವು. ಶಾಂತಿ ನಿಕೇತನದಲ್ಲಿ ನಿಂತು ಅಧ್ಯಯನ ಮಾಡಿದವರು. ಗುರು ದೇವನ ಕಾವ್ಯವಾಣಿ ಹೃದಯವನ್ನು ಹಣ್ಣಾಮಾಡಿದೆ. ಗಾಂಧೀಜಿಯ ಗರಡಿಯಲ್ಲಿ ಕಸರತ್ತು ಮಾಡಿ ಬೆಳೆದವರು. ಅತನ ಸತ್ಯನಿಷ್ಠ ನಡೆ, ಇವರ ಜೀವನವನ್ನು ಎತ್ತರಿಸಿದೆ. ಇವರ ವಾಣಿಯು ಒಮ್ಮೆ ಪ್ರಭುಸಮ್ಮಿತವಾದರೆ ಇನ್ನೊಂದು ಸಮಯದಲ್ಲಿ ರಸನಿಧಿಯಾಗುತ್ತದೆ. ಜೀವನದಲ್ಲಿ ತುಂಬಾ ರಸಿಕರು. ಭಾರತೀಯ ಸ್ವಾತಂತ್ರ್ಯ ಯುದ್ಧದಲ್ಲಿ ಯೋಧರಾಗಿ ದುಡಿದುದರಿಂದ ಅದರ ಇತಿಹಾಸನಿಂದು ಅವರ ನಾಲಿಗೆಯ ತುದಿಯ ಮೇಲೆ ಯಾವಾಗಲೂ ನರ್ತಿಸುತ್ತಿರುತ್ತದೆ. ಮೈಪುಲಕಿತವಾಗುವಂತೆ ಆ ತಾಯ ಮೈಸಿರಿಯ ಬಿಡಿಸಿದ ಕಥೆ ಹೇಳುತ್ತಾರೆ. ಜನ್ಮಿಸಿದ್ದು ಕೇರಳದಲ್ಲಿ, ಕಾಲೂರಿದ್ದು ತಮಿಳುನಾಡಿನಲ್ಲಿ, ಕಾರ್ಯಕ್ಷೇತ್ರ ನಿರ್ಮಿಸಿಕೊಂಡದ್ದು ಭಾರತದ ರಾಜಧಾನಿಯಲ್ಲಿ. ಈ ದಂಪತಿಗಳೀರ್ವರಿಗೆ ನೆರವಾಗಿ ನಿಂತು, ಅಣ್ಣತಮ್ಮಂದಿರೋಪಾದಿಯಲ್ಲಿ, ಅಕ್ಕ-ತಂಗಿಯರಾಗಿ, ಮಕ್ಕಳಾಗಿ, ಅನೇಕ ಕಾರ್ಯಕರ್ತರು ದುಡಿಯುತ್ತಲಿದ್ದಾರೆ. ಅಂಥ ಕಾರ್ಯಕರ್ತರಲ್ಲಿ ಉಲ್ಲೇಖನೀಯವಾದ ಅನೇಕ ಹೆಸರುಗಳಿವೆ. ಕಾರ್ಯದರ್ಶಿಗಳಾದ ಆರ್. ಶ್ರೀನಿವಾಸನ್ನರನ್ನು ಎಲ್ಲರೂ 'ಫೋಟಾ' ಎಂದೇ ಕರೆಯುವರು. 'ಯತ್ರ ಯೋಗಿಶ್ವರಃ ಕೃಷ್ಣೋ ತತ್ರ ಪಾರ್ಥೋ ಧನುರ್ಧರಃ" ಎನ್ನುವಂತೆ 'ಮಾಮಾ' ಇರುವಲ್ಲಿ 'ಫೋಟಾ' ಫೋಟಾ' ಇರುವಲ್ಲಿ 'ಮಾಮಾ' ಹೀಗಿವೆ ಅವರ ಸಂಬಂಧ. ಬಾಲ ಭವನದ ಕುಮಾರಿ ಸರಲಾ, ತಂಬೀ ತೋಟದ ಆರ್. ಶ್ರೀನಿವಾಸನ್ (ಫೋಟಾ) ಕೌಸಲ್ಯಾ, ಬೇಸಿಕ್ ಕಾಲೇಜಿನ ಶ್ರೀ ಬಾಲನೇತ್ರಂ, ಶಾಂತಿಸೇನೆಯ ಕುಮಾರಿ ಲಲಿತಾಂಬಿಕಾ, ಸಂಗೀತಗಾರ್ತಿ ಕು.ಶ್ಯಾಮಲಾ, ವಾಸನ್, ಕೃಷ್ಣಮೂರ್ತಿ, ನಂಜುಂಡರಾವ ಮೊದಲಾದ ಕಾರ್ಯಕರ್ತರು ಗಾಂಧೀಗ್ರಾಮವನ್ನು ಸಂದರ್ಶಿಸುವವರ ಮನಸ್ಸಲ್ಲಿ ನೆಲೆಯೂರಿ ನಿಲ್ಲುವರು.

ನಮ್ಮ ಪ್ರವಾಸಗಳು

ಗಾಂಧೀಗ್ರಾಮದ ಈ ಪರಿಚಯವನ್ನು ಮಾಡಿಕೊಡುವ ಈ ಸಂದರ್ಭದಲ್ಲಿ ನಮ್ಮ ಪ್ರವಾಸಗಳ ಬಗೆಗೆ ಒಂದೆರಡು ಮಾತುಗಳನ್ನು ಹೇಳದಿದ್ದರೆ ಇದು ಪೂರ್ತಿಯೆನಿಸದು. ನಮ್ಮ ಪ್ರಥಮ ಪ್ರವಾಸವು ಅಲ್ಲಿಯೇ ಪಕ್ಕದಲ್ಲಿಯಿದ್ದ ಚಿನ್ನಾಲಪಟ್ಟಿಯ ಸಂದರ್ಶನದಿಂದ ಪ್ರಾರಂಭವಾಯಿತೆಂದು ಹೇಳಬಹುದು. ತರಬೇತಿಗಾಗಿ ಮೈಸೂರ ರಾಜ್ಯದಿಂದ ನಾವು ೧೬ ಜನರು ಹೋಗಿದ್ದೆವು. ಎರಡನೆಯ ದಿನವೇ ಸಾಯಂಕಾಲ ತಿರುಗಾಡುತ್ತ ನಾವೆಲ್ಲ ಚಿನ್ನಾಲಪಟ್ಟಿಗೆ ಹೋದೆವು. ಚಿನ್ನಾಲಪಟ್ಟಿಯು ೮–೧೦ ಸಾವಿರ ಜನವಸತಿಯುಳ್ಳ ಒಂದು ಹಳ್ಳಿಯು, ಹಳ್ಳಿ ಎನ್ನುವದಕ್ಕಿಂತಲೂ ಒಂದು ಚಿಕ್ಕ ಪಟ್ಟಣವೆಂದೇ ಕರೆಯಬಹುದಾಗಿದೆ. ಇದು ನಮ್ಮ ಉತ್ತರ ಕರ್ನಾಟಕದಲ್ಲಿಯ 'ಬನಹಟ್ಟಿ' ಯನ್ನು ಹೋಲುತ್ತದೆ. ನೇಕಾರರೇ ಇಲ್ಲಿ ಹೆಚ್ಚಿಗೆ ಇರುವರು. 'ರೇಯಾನ್' ನೂಲನ್ನು ತಂದು, ಸುಂದರವಾದ ಸೀರೆಗಳನ್ನು ನೇಯ್ದು, ದೂರ ದೂರದ ವರೆಗೆ ಕಳಹುತ್ತಾರೆ. ಇಲ್ಲಿಯ ಕೆಲ ನೇಕಾರರಿಗೆ ಕನ್ನಡಭಾಷೆ ಬರುತ್ತಿರುವದನ್ನು ತಿಳಿದು ನಮಗೆ ಆಶ್ಚರ್ಯವಾಯಿತು! 'ಮದುರಾ' ಜಿಲ್ಲೆಯನ್ನು ತಮಿಳು ಭಾಷೆಯ ಹೃದಯವೆಂದು ಕರೆಯುವರು. ಇಂಥ ಹೃದಯ ಸಮುದ್ರದಲ್ಲಿ ಕನ್ನಡದ ಕುಸುಮವು ಹೇಗೆ ಸೇರಿಕೊಂಡಿತೋ ಎಂದು ನಮಗೆಲ್ಲ ಆಶ್ಚರ್ಯವಾಯಿತು. ಅವರ ಕನ್ನಡವು ಕನ್ನಡವೆಂದು ಗುರುತಿಸಲುಬಾರದ್ದು. ತಮಿಳುಮಯವಾಗಿದ್ದಿತು. ಆದರೂ ಕನ್ನಡ ನುಡಿಯನಾಡಿಯು ಅಲ್ಲಿ ಮಿಡಿಯುತ್ತಿತ್ತು. ವಿಚಾರಿಸಲು ಅಲ್ಲಿಯ ನೇಕಾರರು 'ನೀಲಗಿರಿ'ಯ ಕಡೆಯಿಂದ ಬಂದವರೆಂದೂ, ಅವರೆಲ್ಲರ ಮೂಲಭಾಷೆ ಕನ್ನಡವಾಗಿತ್ತೆಂದೂ, ಹೊಟ್ಟೆಹೊರೆದುಕೊಳ್ಳಲು ಅಲ್ಲಿಗೆ ಬಂದು ನೆಲೆಸಿದವರೆಂದೂ ತಿಳಿದುಬಂದಿತು. ಆ ಇತಿಹಾಸವನ್ನರಿತು ಕನ್ನ

ಡಿಗರಾವ ನನಗೆ ಏನೋ ಅನಿಸಿತು! ಆ ಚಿನ್ನಾಲ ಪಟ್ಟಿಯ ಸಂದರ್ಶನದಲ್ಲಿ 'ದ್ರವಿಡಕಳಗಂ'ದ ಪ್ರಚಾರದ ವೈಖರಿ, ಅದು ಬೆಳೆದುಬರುತ್ತಿರುವ ರೀತಿಯೂ ದೃಗ್ಗೋಚರವಾಯಿತು. ಎಲ್ಲೆಲ್ಲಿ ರಾಷ್ಟ್ರೀಯ ಧ್ವಜವು ಹಾರಾಡುತ್ತಿದ್ದಿತೋ ಅಲ್ಲಲ್ಲೆಲ್ಲಾ ಅದಕ್ಕೂ ಎತ್ತರವಾಗಿ ಸ್ಪರ್ಧೆ ನಡೆಸುತ್ತಿರುವಂತೆ 'ಕಳಗ'ದ ಪತಾಕೆಯೂ ಎದ್ದು ನಿಂತಿತ್ತು. ಮುಂದಿನ ನಮ್ಮ ಪ್ರವಾಸಗಳು, ತೀರ್ಥಯಾತ್ರಾ ಸ್ಥಳಗಳು, ನಿಸರ್ಗರಮಣೀಯ ಪ್ರದೇಶಗಳಾಗಿ ಮೀಸಲಾಗಿದ್ದವು.

ನಾವು ತರಬೇತಿ ಹೊಂದುತ್ತಿರುವ ಸಮಯದಲ್ಲಿ ರಾಮೇಶ್ವರವೂ, ಧನುಷ್ಕೋಟಿ, ಮಧುರೆ, ಟಿಕಲ್ಲುಪಟ್ಟಿ, ಕೊಡೈಕೆನಾಲ್ ಮೊದಲಾದ ಸ್ಥಳಗಳಿಗೆ ಸಂದರ್ಶನವನ್ನು ಏರ್ಪಡಿಸಿದ್ದರು. ರಾಮೇಶ್ವರವು ಗಾಂಧಿ ಗ್ರಾಮಕ್ಕೆ ೧೫೫ ಮೈಲು ದೂರವಾಗುವದು. 'ಪಂಬನ್' ಎಂಬುದು ಒಂದು ಚಿಕ್ಕ ಜಂಕ್ಷನ್ ಸ್ಥಳವು. ಅಲ್ಲಿಂದ ರಾಮೇಶ್ವರವು ಏಳು ಮೈಲು ದೂರಾಗುವದು. ಮುನಃ 'ಪಂಬನ'ಕ್ಕೆ ತಿರುಗಿ ಬಂದು ೧೨ ಮೈಲು ದೂರದಷ್ಟು ಧನುಷ್ಕೋಟಿಗೆ ಹೋಗಬೇಕು. ಈ ಎರಡೂ ಸ್ಥಳಗಳನ್ನು ನೋಡಿಕೊಂಡು ಸಮುದ್ರಸ್ನಾನ ಮಾಡಿ ದೇವರ ದರ್ಶನ ಪಡೆದುಕೊಂಡು ಬಂದೆವು. ಮರುದಿನ ದಾರಿಯಲ್ಲಿರುವ ಮಧುರೆಗೆ ತಿರುಗಿ ಬಂದು ಅಲ್ಲಿಯ ಮೀನಾಕ್ಷಿ ಗುಡಿಯನ್ನು, ಹೊಸದಾಗಿ ಸ್ಥಾಪಿಸಿದ 'ಗಾಂಧೀ ಸ್ಮಾರಕ ನಿಧಿಯ ಪ್ರದರ್ಶನಾಲಯ'ವನ್ನು, ರಾಮನಾಡ ಮಹಾರಾಜರ ಅರಮನೆಯನ್ನು ಸುತ್ತಾಡಿದೆವು. ನಾನು ಚಿಕ್ಕವನಿರುವಾಗ ನನ್ನ ತಾಯಿ 'ಕಂಚಿಯ ಕಾಮಾಕ್ಷಿ' 'ಮಧುರಾ ಮೀನಾಕ್ಷಿ' 'ಕಾಶೀ ವಿಶಾಲಾಕ್ಷಿ' ಎಂದು ಹಾಡುವದನ್ನು ಕೇಳಿದ್ದೆನು. ಆ ಮಾತು ಸ್ಮರಣೆಗೆ ಬಂದು ಧನ್ಯನೆಂದುಕೊಂಡೆ. ಮೀನಾಕ್ಷಿಯ ಗುಡಿಯು ಭವ್ಯವೂ, ದಿವ್ಯವೂ ಆಗಿದೆ. ದಾರಿಯಲ್ಲಿಯ 'ಶ್ರೀರಂಗಂ' (ತ್ರಿಚನಾಪಲ್ಲಿಯ ಹತ್ತಿರವಿರುವ) ದಲ್ಲಿಯ ರಂಗನಾಥ ದೇವಾಲಯವನ್ನು ಮೊದಲೇ ನೋಡಿದ್ದೆನು. ದಕ್ಷಿಣದವರಿಗೆ 'ಚಿಕ್ಕ' ಎಂಬ ಶಬ್ದವೇ ಗೊತ್ತಿಲ್ಲದಂತೆ ಕಾಣಲಿಲ್ಲ. ಯಾವ ಗುಡಿಯನ್ನೇ ಕಂಡರೂ ಅದ್ಭುತ ರಮ್ಯವಾಗಿದೆ. ಒಂದೊಂದು ಗುಡಿ ಒಂದೊಂದು ಊರಿನಷ್ಟಿದೆ. ವಾಸ್ತುಶಿಲ್ಪಿಗಳು ಕಲೆಯ ಬಲೆಯಾಗಿವೆ. ನಾನೆಲ್ಲಿಯೇ ಹೋಗಲಿ 'ಕುವೆಂಪು'ರವರ 'ಮೂಕ ವಿಸ್ಮಿತನಾಗಿ ನಿಲ್ಲು' ಎಂಬ ವಾಣಿ ಕವಿಯಲ್ಲಿ ಮಾರ್ದನಿಗೊಳ್ಳುತ್ತಿತ್ತು. ಅಂತೆಯೇ ನಾನೀಪ್ರಸಂಗವನ್ನು ಗುರುಬಲದ ಪ್ರಭಾವವೆಂದು ಕರೆದುದು.

ಶಿಕ್ಷಕನ ಮಿತ್ರ 'ಕರಿ ಹಲಿಗೆ'

ಲೇಖಕರು:– **ಶ್ರೀ ಎಚ್. ಎಮ್. ಅತ್ತಿಕಟ್ಟಿ,** ಟಿ. ಸಿ. ಎಮ್., ಧಾರವಾಡ

ಕಪ್ಪು ಹಲಿಗೆಯು ಶಿಕ್ಷಕರಿಗೆ ಅತ್ಯುತ್ತಮನಾದ ಸ್ನೇಹಿತನಂತೆ ಇರುವದೆಂದು ಹೇಳಬಹುದು, ಹಳೆಯ ಶಿಕ್ಷಣದಲ್ಲಿ ಕರೆಹಲಿಗೆಯ ಉಪಯೋಗ ಶಿಕ್ಷಕರಿಗೆ ಅಷ್ಟು ಆಕರ್ಷಕವಾಗಿದ್ದಿಲ್ಲ; ಅದು ಕೇವಲ ಹೆಸರಿಗಷ್ಟೇ ಇತ್ತೆಂದು ಹೇಳಬಹುದು. ಇಂದಿನ ಜೀವನ ಶಿಕ್ಷಣ ರಂಗದಲ್ಲಿ ಕರೆ ಹಲಿಗೆಗೆ ದೊಡ್ಡ ಸ್ಥಾನ ಮೊರೆತಿದೆಯೆಂದು ಹೇಳಿದರೆ ತಪ್ಪಾಗಲಿಕ್ಕಿಲ್ಲ. ಆದರೆ ಅದನ್ನು ಸರಿಯಾಗಿ ಉಪಯೋಗಿಸದಿದ್ದರೆ, ಅದೇ ಅವರ ಕೆಲಸಕ್ಕೆ ತೊಂದರೆಯನ್ನುಂಟು ಮಾಡುವ ಬಲವಾದ ಸಾಧನವಾಗಬಹುದು. ಕಪ್ಪು ಹಲಿಗೆಯನ್ನು ತಕ್ಕ ವೇಳೆಯಲ್ಲಿ ಯೋಗ್ಯ ರೀತಿಯಿಂದ ಉಪಯೋಗಿಸಿದರೆ ಅದರಿಂದ ಶಿಕ್ಷಕರು ವರ್ಗದಲ್ಲಿ ಮಾತನಾಡುವ ಎಲ್ಲ ಮಾತುಗಳೂ ಕೇವಲ ಹವೆಯಲ್ಲಿ ಬೆರೆತು ಹೋಗದೆ ಆ ಮಾತುಗಳಿಗೆ ಮೂರ್ತ ಸ್ವರೂಪ ಉಂಟಾಗುತ್ತದೆ. ಈ ರೀತಿ ಕರೆ ಹಲಿಗೆಯನ್ನು ಉಪಯೋಗಿಸುವದರಿಂದ ಒಂದು ಇಂದ್ರಿಯಕ್ಕೆ ಬದಲಾಗಿ ಎರಡು ಇಂದ್ರಿಯಗಳನ್ನು ಉಪಯೋಗಕ್ಕೆ ಹಚ್ಚಿದಂತೆ ಆಗುವದು, ಮತ್ತು ಜ್ಞಾನವು ಇಂದ್ರಿಯಗಳ ಉಪಯೋಗದಿಂದಲೇ ಆಗುವದು. ಆದಷ್ಟು ಹೆಚ್ಚು ಇಂದ್ರಿಯಗಳನ್ನು ಉಪಯೋಗಿಸುವದರಿಂದ ಜ್ಞಾನವು ಮಕ್ಕಳ ಮನಸ್ಸಿನಲ್ಲಿ

ಸ್ಥಿರವಾಗಿ ನೆಲೆಗೊಳ್ಳುವದು. ಕಪ್ಪು ಹಲಿಗೆಯ ಮೇಲೆ ಬರೆಯುವ ರೂಢಿಯು ಒಮ್ಮೆಲೇ ಬರಲಾರದು. ಅದು ಕೆಲವು ಕಾಲ ಗತಿಸಿದ ಮೇಲೆ ಬರುವದೆಂದು ಹೇಳ ಬಹುದು. ಎಷ್ಟೋ ಜನ ಶಿಕ್ಷಕರು ಈ ಕೆಲಸ ಸುಲಭ ವಾದದ್ದೆಂದು ಮನಗಂಡಿರುವರು. ಶಿಕ್ಷಕರು ಕಪ್ಪು ಹಲಿಗೆಯ ಮೇಲೆ ಬರೆಯುವಾಗ ಅದಕ್ಕೆ ಹೊಂದಿಕೊಂಡು ನಿಲ್ಲಬಾರದು. ತಮಗೆ ಸ್ಪಷ್ಟವಾಗಿ ಕಾಣಿಸುವಷ್ಟು ದೂರದಲ್ಲಿ ನಿಂತುಕೊಳ್ಳಬೇಕು. ಮತ್ತು ವರ್ಗದಲ್ಲಿ ತೀರ ಹಿಂದೆ ಕುಳಿತ ಹುಡುಗರಿಗೆ ಕಾಣಿಸುವಂತೆ ಶಬ್ದ ವಿಂಗಡಿಸಿ ಸಾಲುಗಳನ್ನು ಬಿಡಿಸಿ ದುಂಡಾಗಿ ಬಾಲಕರಿಗೆ ತಿಳಿಯುವಂತೆ ಬರೆಯಬೇಕು. ಕಪ್ಪುಹಲಿಗೆಯ ಮೇಲೆ ಬರೆಯುವಾಗ ಅಷ್ಟರಮಟ್ಟಿಗೆ ಪಾಠ ನಿಲ್ಲಿಸಬೇಕಾಗುವದ ರಿಂದ, ಆದಷ್ಟು ತೀವ್ರವಾಗಿ ಶುದ್ಧವಾಗಿ ಬರೆಯಲಿಕ್ಕೆ ರೂಢಿಮಾಡುವದು ಅವಶ್ಯವು. ಮತ್ತು ಕಪ್ಪು ಹಲಿಗೆಯ ಉಪಯೋಗವನ್ನು ಮಾಡುವಾಗ ನಾವು ಸಾಮಾನ್ಯ ವಾಗಿ ೬ ಮೆಟ್ಟಲುಗಳನ್ನು ಮಾಡಬಹುದು:—

(೧) ಕಪ್ಪು ಹಲಿಗೆಯ ಮೇಲೆ ಬೇಗನೆ ಚಿತ್ರ ಗಳನ್ನು ತೆಗೆಯುವ ರೂಢಿಯ ಅವಶ್ಯಕತೆ.

(೨) ಅಂಕಗಣಿತ ಪಾಠದಲ್ಲಿ ಕಪ್ಪು ಹಲಿಗೆಯ ಉಪಯೋಗ ಮಾಡುವ ರೀತಿ.

(೩) ವಾಚನ ಕಲಿಸುವಾಗ ಕಪ್ಪು ಹಲಿಗೆಯ ಉಪಯೋಗ.

(೪) ಡ್ರಾಯಿಂಗ ಪಾಠದಲ್ಲಿ ಕರೆ ಹಲಿಗೆಯ ಉಪಯೋಗ.

(೫) ಭೂಗೋಲ, ಇತಿಹಾಸ, ಆರೋಗ್ಯಶಾಸ್ತ್ರ ಮುಂತಾದ ಪಾಠಗಳಲ್ಲಿಯ ಟಿಪ್ಪಣಿ.

(೬) ಶಿಕ್ಷಕರು ಬರೆಯುವ ಟಿಪ್ಪಣಿಯು ಸಂಕ್ಷಿಪ್ತ ವಾಗಿರಬೇಕು.

(೧) ತರಬೇತಿ ಪಡೆದ ಹಾಗೂ ತರಬೇತಿ ಪಡೆ ಯದ ಎಷ್ಟೋ ಜನ ತರುಣ ಶಿಕ್ಷಕರೂ ಮತ್ತು ಶಿಕ್ಷಕಿ ಯರೂ ವರ್ಗದ ಮುಂದೆ ನಿಂತು ಚಿತ್ರ ತೆಗೆಯಲು ಹೆದರು ವರು, ಆದರೆ ಹೆದರುವ ಕಾರಣವಿಲ್ಲ. ಇಂತಹ ಹೆದರುವ ಶಿಕ್ಷಕರು ತಯಾರಿಸಿಟ್ಟ ಚಿತ್ರಗಳನ್ನು ಉಪಯೋಗಿಸ ಬಾರದು. ಯಾಕಂದರೆ:— ವಿವಿಧ ರೀತಿಯಿಂದ ಕಪ್ಪು ಹಲಿಗೆಯ ಮೇಲೆ ತೆಗೆಯಬೇಕಾಗುತ್ತದೆಯಲ್ಲದೇ ಬೇರೆ ಬೇರೆ ಚಿತ್ರಗಳಿಗೆ ಸಣ್ಣ ಸಣ್ಣ ಅವಯವಗಳನ್ನು ಗೀ ಗಳಿಂದ ತೀವ್ರವಾಗಿ ತೆಗೆದು ಚಿತ್ರಗಳನ್ನು ಪೂರ್ಣ ಮಾಡಬೇಕಾಗುತ್ತದೆ. ವರ್ಣಾತ್ಮಕ ದೃಷ್ಟಾಂತಗಳಿ ಸಹಾಯವಾಗುವಂತೆ ಕಪ್ಪು ಹಲಿಗೆಯ ಮೇಲಿನ ಚಿತ್ರ ಗಳು ಇರತಕ್ಕದ್ದು. ಬಾರ್ನೆಟನೆಂಬ ಶಿಕ್ಷಣ ಶಾಸ್ತ್ರಜ್ಞನು ಹೇಳುವದೇನೆಂದರೆ:— ಬಾಯಿ ಶಿಕ್ಷಣದ ಪ್ರಸಂಗದಲ್ಲಿ ಕಪ್ಪು ಹಲಿಗೆಯ ಮೇಲೆ ತೆಗೆದ ಚಿತ್ರಗಳು ಒಳ್ಳೆಯ ಪ್ರಯೋಜನಕಾರಕವಾದವುಗಳು. ಅವುಗಳನ್ನು ತೀವ್ರ ವಾಗಿಯೂ ಆಕಸ್ಮಿಕವಾಗಿಯೂ ತೆಗೆಯುವದರಿಂದ ಪ್ರಯೋಜನವು ಹೆಚ್ಚು ಪ್ರಮಾಣದಿಂದ ಆಗಬಹುದು ಆದರೆ ಮೊದಲೇ ಕಪ್ಪು ಹಲಿಗೆಯ ಮೇಲೆ ಚಿತ್ರ ತೆಗೆದಿಟ್ಟು ಕಲಿಸುವ ಕಾಲಕ್ಕೆ ಹೇಳುವದರಿಂದ ಸಾಕಷ್ಟು ಪ್ರಯೋಜನವಾಗುವದಿಲ್ಲ.

ಕಲಿಸುವಾಗ ಆಗಿಂದಾಗಲೇ ಒಂದೊಂದೇ ಭಾಗ ವನ್ನು ತಗೆಯುತ್ತ, ವಿವರಿಸುತ್ತ ಬಾಲಕರ ಮುಂದೆ ಆ ಚಿತ್ರವನ್ನು ಪೂರ್ಣ ಮಾಡಿದರೆ, ಚಿತ್ರದಂತೆ ಆ ವಸ್ತು ಇರಬಹುದೆಂದು ನಂಬಿ ಮನಸ್ಸಿನಲ್ಲಿ ತಿಳಿದುಕೊಳ್ಳುವರು. ಪಾಠ ಕಲಿಸುವಾಗ ತೆಗೆಯುವ ಚಿತ್ರಗಳಿಂದ ಪ್ರತ್ಯಕ್ಷ ವಸ್ತುಗಳಂತೆ ಉಪಯೋಗವಾಗುವದು. ಮೊದಲೇ ತೆಗೆ ದಿಟ್ಟ ಚಿತ್ರಗಳಿಂದ ವಸ್ತುಗಳ ಸಾಮಾನ್ಯ ಕಲ್ಪನೆಯಾ ಗುವದು. ಕಪ್ಪು ಹಲಿಗೆಯು ವರ್ಗದ ಎಲ್ಲ ಬಾಲಕರಿಗೂ ಕಾಣಿಸುವಂತೆ ಕೇಂದ್ರವಾಗಿಟ್ಟಿರಬೇಕು. ಕಪ್ಪು ಹಲಿ ಗೆಯು ಎಲ್ಲ ಬಾಲಕರ ಮನಸೆಳೆಯುವಂತಿದ್ದರೆ ಮಾತ್ರ ಬರೆದದ್ದು ಹುಡುಗರ ಕಣ್ಮನಗಳಲ್ಲಿ ಮೂಡುವದು. ಕಪ್ಪು ಹಲಿಗೆಯನ್ನು ಉಪಯೋಗಿಸುವ ರೂಢಿಯನ್ನು ಶಿಕ್ಷಕರು ಸಂಪಾದಿಸತಕ್ಕದ್ದು. ಯಾಕಂದರೆ:— ಕಪ್ಪು ಹಲಿಗೆ ಯನ್ನುಪಯೋಗಿಸುವ ಕೌಶಲ್ಯವು ಉತ್ತಮ ಶಿಕ್ಷಕರ ಒಂದು ಲಕ್ಷಣವಾಗಿದೆ. (೨) ಅಂಕಗಣಿತ ಉದಾಹರಣೆ ಯನ್ನು ಕಪ್ಪು ಹಲಿಗೆಯ ಮೇಲೆ ತಿಳಿಸುವಾಗ ಬಾಲಕರ ಸಂಗಡ ಪ್ರಶ್ನೆ ಮಾಡುತ್ತ ಉತ್ಕೃಷ್ಟವಾಗಿ ಲೆಕ್ಕವನ್ನು ತಿಳಿಸಲು ಪ್ರಯತ್ನ ಮಾಡಬೇಕು. ಅಂಕಿಗಳನ್ನು ದುಂಡಾಗಿ ಬರೆಯಬೇಕಲ್ಲದೇ ಚಿನ್ನಗಳು ಒಡೆದು ಕಾಣಿ ಸುವಂತೆ ಬರೆಯಬೇಕು. ವಿದ್ಯಾರ್ಥಿಗಳು ಅಂಕಗಣಿತದ ಉದಾಹರಣೆಗಳನ್ನು ತಪ್ಪದೇ ತೀವ್ರವಾಗಿ ಬಿಡಿಸಲಿಕ್ಕೆ ಸಮರ್ಥರಾಗಬೇಕು. ಅದೇ ರೀತಿ ಸ್ಲೇಟ, ಅಚ್ಚುಕಟ್ಟು ತನ ಇವುಗಳ ಕಡೆಗೆ ದುರ್ಲಕ್ಷ ಮಾಡತಕ್ಕದ್ದಲ್ಲ. ಒಂದ

ವೇಳೆ ಉದಾಹರಣೆ, ಉತ್ತರದಲ್ಲಿ ವಿಚಾರದಲ್ಲಿ ತಪ್ಪಿನದೂ ಅಡ್ಡಿಯಿಲ್ಲ. ಬಾಲಕರು ಒಂದು ವೇಳೆ ಚನ್ನಾಗಿ ಲೆಕ್ಕ ಬಿಡಿಸಬೇಕೆಂದಿದ್ದರೆ ಶಿಕ್ಷಕರು ಕಪ್ಪು ಹಲಗೆಯ ಮೇಲೆ ಬಿಡಿಸುವ ಲೆಕ್ಕವು ಒಳ್ಳೆಯ ಮಾದರಿಯಾಗುವಂತೆ ಇರಲಿಕ್ಕೇ ಬೇಕೆಂದು ಅವರು ಮರೆಯತಕ್ಕದ್ದಲ್ಲ. (೩) ವಾಚನದಲ್ಲಿ ಶಿಕ್ಷಕರು ಬಾಲಕರಿಗೆ ಪರಿಚಯವಿಲ್ಲದ ಶಬ್ದಗಳನ್ನು ಕಪ್ಪು ಹಲಗೆಯ ಮೇಲೆ ಬರೆಯತಕ್ಕದ್ದು; ಆದರೆ ವಿದ್ಯಾರ್ಥಿಗಳು ಓದುವಾಗ ಬರೆಯತಕ್ಕದ್ದಲ್ಲ. ಅವರ ಓದು ಮುಗಿದ ನಂತರ ಅವರ ಲಕ್ಷವನ್ನು ಇತ್ತ ಕಡೆ ಸೆಳೆದುಕೊಂಡು ಶಬ್ದಗಳನ್ನು ಬರೆಯಬೇಕು. ವ್ಯಾಕರಣ ಪಾಠದಲ್ಲಿ ಉದಾಹರಣೆ ತೆಗೆದುಕೊಂಡು ವಾಕ್ಯಗಳನ್ನು ಕಪ್ಪು ಹಲಗೆಯ ಮೇಲೆ ಬರೆಯಬೇಕು. (೪) ಡ್ರಾಯಿಂಗ ಪಾಠದಲ್ಲಿ ಕಪ್ಪು ಹಲಗೆಯ ಉಪಯೋಗವನ್ನು ಕೆಲವು ಪ್ರಸಂಗಗಳಲ್ಲಿ ಮಾಡಬಹುದು, ಅಥವಾ ಬಿಡಬಹುದು. ಪ್ರತ್ಯಕ್ಷ ವಸ್ತುವಿನ ಡ್ರಾಯಿಂಗ ತೆಗೆಯುವಾಗ (ಯಾವಾಗಲೂ ಹಾಗೆ ತೆಗೆಯತಕ್ಕದ್ದು); ಒಂದು ವೇಳೆ ಕಪ್ಪು ಹಲಿಗೆ ಉಪಯೋಗಿಸಬಹುದು. ಆದರೆ ಬಾಲಕರು ತೆಗೆಯುವಾಗಲಿ ಚಿತ್ರ ತಿಳಿಸುವದನ್ನು ಮರೆಯಬಾರದು. ಇಲ್ಲದಿದ್ದರೆ ಅದೇ ಚಿತ್ರವನ್ನು ಕಾಫೀ ಮಾಡುವರೇ ಹೊರತು ಪ್ರತ್ಯಕ್ಷ ವಸ್ತುವನ್ನು ನೋಡಿ ತೆಗೆದಂತೆ ಆಗಲಾರದು. (೫) ಇತಿಹಾಸ, ಆರೋಗ್ಯಶಾಸ್ತ್ರ, ಭೂಗೋಲ ಕಲಿಸುವಾಗ ಸಂಕ್ಷಿಪ್ತ ಟಿಪ್ಪಣಿಯನ್ನು ಮೊದಲೇ ತಯಾರಿಸಿಕೊಂಡು ಬರತಕ್ಕದ್ದು. ಈ ಸಂಕ್ಷಿಪ್ತ ಟಿಪ್ಪಣಿಗಳೇ ಮಹತ್ವವಾದವುಗಳು. ಯಾವದೊಂದು ಪಾಠದಲ್ಲಿ ಯಾವ ಸಂಗತಿ ಬರೆಯಬೇಕು ಯಾವ ಸಂಗತಿ ಬರೆಯಬಾರದು ಎಂಬ ಬಗ್ಗೆ ಶಿಕ್ಷಕರಿಗೆ ಬಹಳ ಅನುಭವ ಬೇಕು. ಪಾಠ ಸಾಧಾರಣ ತರವಾದಾದರೂ ಕಪ್ಪು ಹಲಿಗೆಯ ಟಿಪ್ಪಣಿ ಉತ್ಕೃಷ್ಟವಾದದ್ದಾದರೆ ಆತನಿಂದ ಎಷ್ಟೋ ಮಟ್ಟಿಗೆ ಪ್ರಯೋಜನವಾಗುವುದು. ಪಾಠವು ಚನ್ನಾಗಿ ಸಾಗಿದಂತೆ ಕಪ್ಪು ಹಲಿಗೆಯ ಮೇಲೆ ಉತ್ತಮ ಟಿಪ್ಪಣಿ ಬರೆಯುತ್ತ ಸಾಗಬೇಕು. ಕಲಿತ ಪಾಠದೊಳಗಿನ ವಿಷಯವು ಅದರ ಭಾಗ ಪ್ರಭಾವಗಳು ಬಾಲಕರ ಕಣ್ಣು ಮುಂದೆ ಕಟ್ಟಬೇಕು; ಅಂದರೆ ಇಡೀ ಪಾಠದ ಒಂದು ಕಲ್ಪನಾಚಿತ್ರವು ಅವರ ಮನಸ್ಸಿನಲ್ಲಿ ಮೂಡುವದು. ಪಾಠವು ಸಾಗಿದಂತೆ ಕಪ್ಪು ಹಲಿಗೆಯ ಮೇಲಿನ ಟಿಪ್ಪಣಿಯು ಸಾಮಕಾರವಾಗಿ ಸಾಗಲಿಕ್ಕೇ ಬೇಕು. ಕಪ್ಪು ಹಲಿಗೆಯ ಮೇಲೆ ಬಗೆಯುವಾಗ ಒಂದೇ ಸರತಿಗೆ ಬಹಳ ಹೊತ್ತಿನವರಗೆ ತೊಡಗಬಾರದು. ಬರೆಯುವಾಗ ಬಾಲಕರ ಲಕ್ಷವನ್ನು ಹಿಡಿತದಲ್ಲಿ ಇಟ್ಟುಕೊಳ್ಳುವದಕ್ಕಾಗಿ ಮಾತನಾಡುವದರಿಂದಾಗಲಿ ಬೇರೆ ಉಪಾಯಗಳಿಂದಾಗಲಿ ಪ್ರಯತ್ನ ಮಾಡತಕ್ಕದ್ದೆಂದು ಈ ಮೊದಲೇ ಹೇಳಿರುತ್ತದೆ. ಈ ವಿಚಾರಣೆ ಮಾಡುವಾಗ ಬಾಲಕರ ವಿಚಾರಣೆಗೆ ಅಡ್ಡಿಯಾಗದಂತೆ, ಅವರ ಲಕ್ಷವು ಒಮ್ಮೆಲ್ಲೇ ಪಾಠದಿಂದ ತಪ್ಪಿ ಹೋಗದಂತೆ ಎಚ್ಚರಪಡತಕ್ಕದ್ದು. ಬಣ್ಣದ ಖಡುಗಳು ಅತ್ಯಂತ ಉಪಯುಕ್ತ ವಾದವುಗಳು; ಆದರೆ ಬಿಳಿಯ ಖಡುಗಳಿಂದ ಬರೆದರೆ ಬಾಲಕರ ಮನಸ್ಸಿನ ಮೇಲೆ ಒಳ್ಳೆಯ ಪರಿಣಾಮವಾಗುತ್ತಿದ್ದರೆ ಬಣ್ಣದ ಖಡುಗಳ ಉಪಯೋಗ ಬೇಡ. ಬಣ್ಣದ ಖಡು ಆರಿಸುವಾಗ ಶಿಕ್ಷಕರು ಸ್ವಲ್ಪ ವಿಚಾರಿಸಬೇಕು. ಬಣ್ಣದ ಖಡುಗಳನ್ನು ಮಹತ್ವದ ಶಬ್ದಗಳ ಕೆಳಗೆ ಗೆರೆ ಹಾಕಲು, ಚಿತ್ರ ತೆಗೆಯಲು ಉಪಯೋಗಿಸಬೇಕು. ಶಕ್ಯವಿದ್ದರೆ ಯಾವದೊಂದು ಶಬ್ದವನ್ನು ಬಣ್ಣದ ಖಡುವಿನಿಂದ ಬರೆಯಬಹುದು. ಬರ್ಫದ ಪಾಠ ಕಲಿಸುವಾಗ ಶಬ್ದವನ್ನು ನೀಲಿ ಬಣ್ಣದಿಂದ ಎಂದೂ ಬರೆಯಬಾರದು. ಹೆಚ್ಚು ಬಣ್ಣ ಉಪಯೋಗಿಸುವದರಿಂದ ಬಾಲಕರ ಲಕ್ಷವು ಬಣ್ಣದ ಮೇಲೆ ಹೋಗುವದು. ಬಣ್ಣದಿಂದ ಬಾಲಕರ ಮನಸ್ಸು ಚಂಚಲವಾಗುವದು. ಬಾಲಕರ ಲಕ್ಷವು ಶಬ್ದಗಳ ಕಡೆಗೆ ಇರಬೇಕಲ್ಲದೆ ಬಣ್ಣದ ಕಡೆಗೆ ಇರಬಾರದು. ಚಿತ್ರವಿಚಿತ್ರವಾಗಿ ಅಕ್ಷರಗಳನ್ನು ಕಪ್ಪು ಹಲಿಗೆಯ ಮೇಲೆ ಬರೆದುದನ್ನು ಬಾಲಕರು ನೋಡಿ ಆಶ್ಚರ್ಯಪಡುವಂತೆ ಮಾಡುವದು ಶಿಕ್ಷಣದ ಉದ್ದೇಶವಿರುವದಿಲ್ಲ. ಕಪ್ಪು ಹಲಿಗೆಯ ಮೇಲೆ ಬರೆಯತಕ್ಕ ಟಿಪ್ಪಣಿಗಳನ್ನು ಅಚ್ಚ ಬಿಳಿಯ ಖಡುವಿನಿಂದಲೇ ಬರೆಯಬೇಕು.

ಕಪ್ಪು ಹಲಿಗೆಯ ಟಿಪ್ಪಣಿಯು ಬಾಲಕರ ವಯೋಮಾನಕ್ಕನುಸರಿಸಿ ಮತ್ತು ವಿಷಯಕ್ಕನುಗುಣವಾಗಿ ಬದಲಾಗಬೇಕು. ಚಿಕ್ಕಮಕ್ಕಳಿಗೆ ಕರೆಹಲಿಗೆಯ ಟಿಪ್ಪಣಿಯು ಸಂಕ್ಷಿಪ್ತವಾಗಿರಬಾರದು; ವಿಸ್ತಾರವಾಗಿರಬೇಕು. ಯಾಕಂದರೆ:— ಅವರಿಗೆ ವಿಚಾರ ಜ್ಞಾನವು ಕಡಿಮೆ ಇರುತ್ತದೆ. ಪ್ರೌಢರ ಸಲುವಾಗಿ ಸಂಕ್ಷಿಪ್ತ ಟಿಪ್ಪಣಿಗಳಿದ್ದರೆ ನಡೆಯುವದು. ಮೇಲೆ ಹೇಳಿದಂತೆ ಕಪ್ಪು ಹಲಿಗೆಯ ಮೇಲೆ ಬರೆಯತಕ್ಕ ಟಿಪ್ಪಣಿಯು ಪಾಠದ ವಿಷಯವನ್ನವಲಂಬಿಸಬೇಕಾಗುವದು. ವಿಷಯವು ಪಗುರಾಗಿದ್ದರೆ ಸ್ವಲ್ಪ ವೇಳೆ ಕಪ್ಪು-ಹಲಿಗೆಯನ್ನು

ಉಪಯೋಗಿಸಬೇಕು. ಒಂದುವೇಳೆ ಕಪ್ಪುಹಲಿಗೆಯ ಮೇಲೆ ಬರೆಯಲೇಬೇಕೆಂದು ತಿಳಿಯಬಾರದು. ಅವಶ್ಯವಿಲ್ಲದಿದ್ದರೆ ಬಿಡುವದುತ್ತಮವು. (೬) ಕಪ್ಪು ಹಲಿಗೆಯ ಮೇಲೆ ಬರೆಯತಕ್ಕ ಟಿಪ್ಪಣಿಯು ಬಹಳ ಉದ್ದವಾಗಿರಬಾರದು. ಉದ್ದವಾದ ಟಿಪ್ಪಣಿಯನ್ನು ಬರೆಯುವ ದೋಷಗಳು ಅನುಭವವಿಲ್ಲದ ಶಿಕ್ಷಕರಲ್ಲಿ ಕಂಡು ಬರುವವು. ಬಹುತರವಾಗಿ ಮೊದಲನೆಯ ಸಾರೆ ಬರೆದ ಟಿಪ್ಪಣಿಯು ಉದ್ದವಾಗಿರಬಹುದು. ಮುಂದೆ ಒಂದೆರಡು ಸಾರೆಯ ಪ್ರಯೋಗಗಳಿಂದ ಸುಧಾರಿಸುವದು. ಪಾಠದಲ್ಲಿಯ ಸಾರಾಂಶ ತೆಗೆಯುವದು ಮೊದಮೊದಲಿಗೆ ಶಿಕ್ಷಕರಿಗೆ ಬಹಳ ತೊಂದರೆಯಾಗುವದು; ಆದರೆ ರೂಢಿಯಿಂದ ಬರುವದು. ಕಷ್ಟಗಳಿಗಂಜಿ ಪ್ರಯತ್ನವನ್ನು ಬಿಡಕೂಡದು. ಒಳ್ಳೆಯ ಶಿಕ್ಷಕನಾಗಬೇಕೆಂಬ ಲವಲವಿಕೆಯು ಎಲ್ಲರಲ್ಲಿಯೂ ಇರುತ್ತದೆ. ಸತತ ಪ್ರಯತ್ನಗಳಿಂದ ತೊಂದರೆಗಳು ದೂರಾಗುವವು. ಯಾವದೊಂದು ಪಾಠ ಕಲಿಸುವಾಗ ಅನೇಕ ತರಹದ ದೃಷ್ಟಾಂತಗಳು ಬೇಕಾಗುವವು. ಅವುಗಳಲ್ಲಿ ಪ್ರತ್ಯಕ್ಷ ವಸ್ತುಗಳು, ಚಿತ್ರಗಳು, ನಕಾಶಗಳು, ಆಕೃತಿಗಳು, ಮಾದರಿಗಳು ಮುಖ್ಯವಾದವುಗಳು.

ಪ್ರಿಯ ಶಿಕ್ಷಕ–ಶಿಕ್ಷಕಿಯರೇ! ಅತ್ಯಂತ ಪ್ರೀತಿಯ ಈ ಕರಪತ್ರಿಕೆಗೆ ಎಂಬ ಮಿತ್ರನಿಗೆ ಎಂದೂ ಅನಾದರ ಮಾಡಬೇಡಿರಿ !!

ಶಿಕ್ಷಣದ ಸ್ವರೂಪ

(ಈ ಲೇಖನದಲ್ಲಿ ಅಮೇರಿಕೆಯ ಸುಪ್ರಸಿದ್ಧ ಶಿಕ್ಷಣತಜ್ಞರಾದ ಪ್ರೋ. ಜಾನ್‌ಡುಯಿಯವರ ಅತ್ಯಮೂಲ್ಯ ವಿಚಾರಗಳನ್ನು ಕಲೆಹಾಕಿದೆ.)

ಕಲೆಹಾಕಿದವರು:— **ಶ್ರೀ ಎಸ್. ಎಸ್. ನಾಡಕರ್ಣಿ,** B.Sc. (Hons), D·Ed· R B· Visharad

E ಇದರ ಅರ್ಥ ಹೊರಗೆ ಎಂದೂ, duco ಎಂದರೆ ನಾನು ತರುತ್ತೇನೆ ಎಂದೂ ಅರ್ಥವನ್ನು ಕೊಡುವ ಎರಡು ಶಬ್ದಗಳಿಂದ Education ಎಂಬ ಪದವು ರೂಪಿಸಲ್ಪಟ್ಟಿದೆ. ಆದುದರಿಂದ ಶಿಕ್ಷಣವೆಂದರೆ ಮಗುವಿನ ಮನಸ್ಸಿನಲ್ಲಿದ್ದ ಸುಪ್ತ ಶಕ್ತಿಗಳನ್ನು ಹೊರಗೆ ಎಳೆಯುವದು ಎಂದೂ ಆಗುತ್ತದೆ. ಆದರೆ ಲೆಟಿನ್ ಭಾಷೆಯಲ್ಲಿ Educare ಶಬ್ದವು ಹೆಚ್ಚಿಸು ಎಂಬ ಅರ್ಥವನ್ನು ಕೊಡುತ್ತಿದೆ. ನಾವು ಕ್ಷಣಕಾಲ ವಿಚಾರ ಮಾಡಿದರೆ ಎರಡನೇ ಅರ್ಥವೇ ಯೋಗ್ಯವೆಂದು ನಮಗೆ ಹೊಳೆಯುತ್ತದೆ. ಶಾರೀರಿಕ ಮತ್ತು ಇತರ ಶಿಕ್ಷಣದಿಂದ ಮಗುವಿನೊಳಗೆ ಹುದುಗಿದ್ದ ಶಕ್ತಿಗಳನ್ನು ಹೊರಗೆ ಪಾಕುವದು ಸಾಧ್ಯವಿದ್ದರೂ ಆ ಅರ್ಥವು ಬೌದ್ಧಿಕ ಶಿಕ್ಷಣಕ್ಕೆ ಅಷ್ಟು ಯೋಗ್ಯವಾಗಿ ಅನ್ವಯಿಸಲಾರದು. ಮಗುವಿನಲ್ಲಿ ಇದ್ದ ಬುದ್ಧಿಯ ಪ್ರಮಾಣವು ಸ್ವಲ್ಪ ಇರುತ್ತದೆಂದು, ಬುದ್ಧಿಯನ್ನು ಅಳೆಯುವ ಪರೀಕ್ಷಣಗಳಿಂದ ಕಂಡುಬಂದಿರುತ್ತದೆ. ಶಿಕ್ಷಣದ ನಿಜವಾದ ಉದ್ದೇಶವು ಬುದ್ಧಿಮತ್ತೆಯ ವೃದ್ಧಿಮಾಡುವದಿರುತ್ತದೆ. ಮಗುವನ್ನು ಸಮಾಜಕ್ಕೆ ಹೊಂದಿಕೆ ಆಗುವ ವ್ಯಕ್ತಿಯನ್ನು ತಯಾರು ಮಾಡಬೇಕಾದರೆ ಅವನಲ್ಲಿಯ ಸ್ವಾಭಾವಿಕ ಜೀವನವನ್ನು ಜಾಗ್ರತಗೊಳಿಸಬೇಕಲ್ಲದೆ ಅದರ ಮೂಲಕ ಅವನಲ್ಲಿ ಉಂಟಾಗುವ ವರ್ತನೆಯನ್ನು ನಾವು ತಿದ್ದಬೇಕಾಗುವದು. ಈ ವರ್ತನೆಯನ್ನು ತಿದ್ದಬೇಕಾದರೆ ಸಮಾಜದ ನೀತಿನೇಮಗಳನ್ನು ಅವನಿಗೆ ತಿಳಿಸಬೇಕಾಗುತ್ತದೆ. ಅಂತೆಯೇ ಶಿಕ್ಷಣದಿಂದ ಅವನಲ್ಲಿ ಉತ್ತಮ ವರ್ತನೆಯನ್ನು ಸೃಷ್ಟಿಸಬೇಕಾಗುತ್ತದೆ. ಬುದ್ಧಿವಂತ ವ್ಯಕ್ತಿಗಳ, ಪರಸ್ಪರಾವಲಂಬನದಿಂದ ಸಮಾಜವು ಮುಂದುವರಿಯುತ್ತಲಿರುತ್ತದೆ. ಶಿಕ್ಷಣವು ಸಾಮಾಜಿಕ ಸಂಬಂಧವನ್ನು ಕಾಯ್ದುಕೊಂಡು ಹೋಗುವ ಕ್ರಮವಾಗಿರುತ್ತದೆ. ಈ ಸಾಮಾಜಿಕ ಸಂಬಂಧಗಳಿಂದಲೇ ಮನುಷ್ಯನು ಸಮಾಜದ ಸ್ಥಿರತೆಗೆ ಕಾರಣವಾದ ಅನೇಕ ಕಲೆಗಳನ್ನೂ, ವಿಚಾರಗಳನ್ನೂ ಕಲಿಯುತ್ತಾನೆ. ಪ್ರಾಣಿಗಳು ಹುಟ್ಟುತ್ತಲೇ ತಮ್ಮ ಜೀವನದ ಕಾರ್ಯಕಲಾಪಗಳನ್ನು ಪ್ರಾರಂಭಿಸುತ್ತವೆ. ಆದರೆ ಮನುಷ್ಯನ ಬೆಳವಣಿಗೆಯಲ್ಲಿ ಮೊಟ್ಟಮೊದಲು ಶೈಶವಾವಸ್ಥೆ ಎಂಬುದು ಇರುತ್ತದೆ. ಈ ಅವಸ್ಥೆಯಲ್ಲಿ ಅವನಿಗೆ

ಹಿರಿಯರ ರಕ್ಷಣೆಯು ಅವಶ್ಯವಿರುತ್ತದೆ. ಈಗಿನ ನಾಗರಿಕತೆಯು ದಿನ ದಿನಕ್ಕೆ ಅನೇಕ ರೀತಿಯಿಂದ ಪರಿವರ್ತನೆ ಹೊಂದುತ್ತಿರುವದರಿಂದ ಸಮಾಜದಲ್ಲಿ ಅನುಸರಿಸುವ ರೀತಿ ನೀತಿಗಳನ್ನು ತಿಳಿದುಕೊಳ್ಳಲು ಮಗುವಿಗೆ ಶಿಕ್ಷಣವು ಅವಶ್ಯವಿರುತ್ತದೆ.

ಸಮಾಜದ ಸ್ಥಿರತೆಗೆ ಶಿಕ್ಷಣವು ಅತಿ ಅನಶ್ಯವಾದ ಸಂಗತಿಯಾಗಿರುತ್ತದೆ. ಪರಸ್ಪರ ಸಹಕಾರದಿಂದ ಸಾಗುವ ಜೀವನವೇ ಮಗುವಿಗೆ ಶಿಕ್ಷಣವನ್ನು ಕೊಡುತ್ತಿದೆ. ಸಂಘಜೀವನವು ಅನುಭವದ ಕ್ಷೇತ್ರವನ್ನು ವಿಸ್ತರಿಸುತ್ತದೆ. ಕಲ್ಪನೆಯನ್ನು ವಿಸ್ತೃತಗೊಳಿಸುತ್ತದೆ. ಹಾಗೂ ವರ್ತನೆಯ ತಳಹದಿಯನ್ನು ನಿರ್ಮಿಸುತ್ತದೆ. ಆದುದರಿಂದ ಶಿಕ್ಷಣವೆಂದರೆ ಕೇವಲ ಜೀವನಕ್ಕೆ ಅನಶ್ಯವಿರುವ ಒಂದು ಸಾಧನವಷ್ಟೇ ಅಲ್ಲ; ಮೂಲ ಅರ್ಥದಲ್ಲಿ ಶುದ್ಧ ಜೀವನವೇ ಶಿಕ್ಷಣವಾಗಿರುತ್ತದೆ. Life itself is education) ಶಿಕ್ಷಣವು ಜೀವನವನ್ನು ಸುಧಾರಿಸುವ ದಲ್ಲದೆ ಉತ್ತಮ ಸಂಸ್ಕೃತಿಯನ್ನು ಸಹ ನಿರ್ಮಾಣಮಾಡುತ್ತಿದೆ. ಜೀವನದುದ್ದಕ್ಕೂ ಆದ ಅನುಭವಗಳನ್ನು ಶಿಕ್ಷಣವು ಅನುಬಂಧಿಸುತ್ತಿದೆ. ಮನುಷ್ಯನು ತಾಯಿಯ ಗರ್ಭದಿಂದ ಹೊರಗೆ ಬಿದ್ದಾಗಿನಿಂದ ಪ್ರಾರಂಭವಾದ ಶಿಕ್ಷಣವು ಅವನ ಜೀವನದ ಮೂಲಕ ಜೀವನದುದ್ದಕ್ಕೂ ಸಾಗುತ್ತಿದೆ. ಶಿಕ್ಷಣ ಹಾಗೂ ಜೀವನ ಎಂದರೆ ಒಂದು ನಾಣ್ಯದ ಎರಡು ಮುಖಗಳಿದ್ದಂತೆ. ಶಿಕ್ಷಣ ಮತ್ತು ಜೀವನ ಇವೆರಡೂ ಪರ್ಯಾಯ ಪದಗಳು.

ಶಿಕ್ಷಣದಲ್ಲಿ ತರಬೇತಿಗೆ ಮಹತ್ವದ ಸ್ಥಾನವಿದೆ. ಶಾಸ್ತ್ರೀಯ ಯುಗದಲ್ಲಿ ಔದ್ಯೋಗಿಕ ತರಬೇತಿಯು ಬಹಳೇ ಮುಖ್ಯವಾಗಿದೆ. ಶಿಕ್ಷಣದ ಯಾವವೇ ಕ್ರಮದಲ್ಲಿ ಸುತ್ತಲಿನ ಪರಿಸ್ಥಿತಿಯು ಗಣನೀಯವಾದದ್ದಿರುತ್ತದೆ. ಪರಿಸ್ಥಿತಿ ಮತ್ತು ಮಾನವನ ಜೀವನಕ್ಕೆ ಅಭೇದ್ಯವಾದ ಸಂಬಂಧವಿರುತ್ತದೆ. ಪರಿಸ್ಥಿತಿಯು ಮನುಷ್ಯನನ್ನು ಕೆಲವು ಕ್ರಿಯೆಗಳನ್ನು ಮಾಡಲು ಹಚ್ಚುವದಲ್ಲದೆ ಅವನ ಮಾನಸಿಕ ರಚನೆಯಲ್ಲಿ ಸಹಿತ ಭಾಗವಹಿಸುತ್ತಿದೆ. ಭಾಷೆ, ಶಿಷ್ಟಾಚಾರ, ನೀತಿ ಮುಂತಾದವುಗಳು ಸುತ್ತಲಿನ ಪರಿಸ್ಥಿತಿ ಮೂಲಕ ಮಕ್ಕಳಿಗೆ ತಿಳಿಯುತ್ತವೆ. ಅಂತೆಯೇ ಶಿಕ್ಷಕನು ಮಗುವಿಗೆ ಕಲಿಸಬೇಕಾದರೆ ಪರಿಸ್ಥಿತಿಯನ್ನು ಅನುಸರಿಸಬೇಕಾಗುವದು. ಇಚ್ಛಿತ ವ್ಯಕ್ತಿತ್ವವನ್ನು ಮಗುವಿನಲ್ಲಿ ನಿರ್ಮಿಸಬೇಕಾದರೆ ಅದಕ್ಕೆ ಅನುಗುಣವಾದ ಪರಿಸ್ಥಿತಿಯನ್ನು ನಿರ್ಮಾಣಮಾಡಬೇಕು. ಹಾಗೂ ಪರಿಸ್ಥಿತಿಯೇ ಅವನಿಗೆ ಕೆಲವು ಕ್ರಿಯೆಗಳನ್ನು ಮಾಡಲು ಹಚ್ಚುವಂತಾಗಬೇಕು. ಅದುವೇ ನಿಜವಾದ ಶಿಕ್ಷಣ ಪದ್ಧತಿ. ಉದಾ:– ಮಗುವನ್ನು ಸಮಾಜದ ಉತ್ತಮ ನಾಗರಿಕನನ್ನಾಗಿ ಮಾಡಲು ನಾವು ಇಚ್ಛಿಸಿದುದಾದರೆ ಅಂತಹ ಸಮಾಜವನ್ನು ನಾವು ಶಾಲೆಯಲ್ಲಿ ಸ್ಥಾಪಿಸಬೇಕು. ಅಂದರೆ ಮಾತ್ರ ಮಗುವಿನ ಮೇಲೆ ಅದರ ಪರಿಣಾಮವಾಗಿ ಅವನ ವರ್ತನೆಯು ನಾಗರಿಕತೆಯ ದಿಕ್ಕಿನಲ್ಲಿ ರೂಪುಗೊಳ್ಳುತ್ತ ಸಾಗುತ್ತದೆ. ಸುತ್ತಲಿನ ಪರಿಸ್ಥಿತಿಯಲ್ಲಿದ್ದ ಮಗುವಿನ ಬೆಳವಣಿಗೆಗೆ ಪೋಷಕವಾಗಿರುವ ಸಂಗತಿಗಳನ್ನು ನಾವು ಉಪಯೋಗಿಸಿಕೊಳ್ಳಬೇಕು. ಹಾಗೂ ಅವನ ಬೆಳವಣಿಗೆಗೆ ಅಡ್ಡಿತರುವ ಸಂಗತಿಗಳನ್ನು ನಿರ್ಮೂಲಮಾಡಬೇಕು. ಮಗುವಿನ ಸುತ್ತಲಿನ ವಾತಾವರಣವನ್ನು ಹಿಡಿತದಲ್ಲಿಟ್ಟುಕೊಳ್ಳುವದೇ ಅತನ ಶಿಕ್ಷಣದ ಪ್ರಪ್ರಥಮ ಹೆಜ್ಜೆ. ಆದುದರಿಂದ ಕೇವಲ ಭವಿಷ್ಯದ ಮೇಲೆ ಕೈ ಊರಿ ಕೂಡ್ರದೆ ಮೊಟ್ಟಮೊದಲು ಮಗುವಿನ ಸುತ್ತಲಿನ ಪರಿಸ್ಥಿತಿಯಲ್ಲಿ ಉತ್ತಮ ಸನ್ನಿವೇಶಗಳನ್ನು ನಿರ್ಮಾಣ ಮಾಡಬೇಕು. ಅಂತೆಯೇ ಶಿಕ್ಷಕನು ಮಗುವಿನ ಬೇಡಿಕೆಗಳು ಅವನ ಅಭಿರುಚಿಗಳು ಮುಂತಾದವುಗಳನ್ನು ತಿಳಿದುಕೊಂಡು ಯೋಗ್ಯ ಸನ್ನಿವೇಶಗಳನ್ನು ನಿರ್ಮಿಸಬೇಕು.

ನಾಗರಿಕತೆಯು ವಿಕಾಸಗೊಂಡಂತೆ ಶಾಲೆಗೂ ಮತ್ತು ಸಮಾಜಕ್ಕೂ ನಿಕಟಸಂಬಂಧ ನಿರ್ಮಿತವಾಗುತ್ತಲಿದೆ. ಅಷ್ಟೇ ಅಲ್ಲ ಸಮಾಜದ ನಿರ್ಮಾಣದಲ್ಲಿ ಶಾಲೆಯೇ ಅಗ್ರಗಣ್ಯ ಪಾತ್ರವನ್ನು ವಹಿಸುತ್ತಿದೆ. ಅಂದ ಮೇಲೆ ಶಿಕ್ಷಕನಲ್ಲಿ ಕೇವಲ ವಿಷಯ ಪಾಂಡಿತ್ಯವಷ್ಟೇ ಇದ್ದರೆ ಸಾಲದು. ಅವನು ಪ್ರತಿಯೊಬ್ಬ ಮಗುವನ್ನು ಅಭ್ಯಸಿಸಿ ಅವನಿಗೆ ಬೇಕಾಗುವ ಪರಿಸ್ಥಿತಿಯನ್ನು ತಿಳಿದುಕೊಂಡು ಅದಕ್ಕೆ ಅನುಗುಣವಾದ ವಾತಾವರಣವನ್ನು ನಿರ್ಮಿಸಬೇಕಾಗುವದು. ಶಾಲೆಯಲ್ಲಿ ಬೇರೆ ಬೇರೆ ಜಾತಿಯ ವರ್ಗಗಳ ಅಭಿರುಚಿಗಳುಳ್ಳ ಮಕ್ಕಳು ಬಂದಿರುವದರಿಂದ ಸಮಾಜದ ಪ್ರತಿಬಿಂಬವೇ ಶಾಲೆ ಆಗುವದು. ಅಲ್ಲಿಯೇ ಉತ್ತಮ ಸಮಾಜದ ಮಾದರಿಯೊಂದನ್ನು ಶಿಕ್ಷಕನು ತಯಾರಿಸಿ ಆ ಪಡಿಯಚ್ಚಿನ ಮೂಲಕ ಎಲ್ಲ ಮಕ್ಕಳ ವ್ಯಕ್ತಿತ್ವವನ್ನು ರೂಪಿಸಬೇಕಾಗುವದು.

ಶಿಕ್ಷಣವು ಮಕ್ಕಳಿಗೆ ಅನುಭವಗಳನ್ನು ಸಂಪಾದಿಸಲು ಸಹಾಯಕಾರಿ ಆಗಬೇಕು. ಅಂತೆಯೇ ಶಾಲೆಯಲ್ಲಿ

ಅನೇಕ ಪ್ರಕಾರದ ಚಟುವಟಿಕೆಗಳನ್ನು ಮಕ್ಕಳಿಗೆ ಕಲ್ಪಿಸಿ ಕೊಟ್ಟು ಅವುಗಳ ಮೂಲಕ ಅನುಭವಗಳನ್ನು ಪಡೆಯಲು ಮಕ್ಕಳನ್ನು ಪ್ರಚೋದಿಸಬೇಕು. ಚಟುವಟಿಕೆಗಳೇ ಮಕ್ಕಳ ನಿಜವಾದ ಶಿಕ್ಷಕ ಎಂದರೆ ಅತಿಶಯೋಕ್ತಿಯಾಗಲಿಕ್ಕಿಲ್ಲ.

ಪ್ರೊ. ಜಾನ್ ಡುಯಿ ಅವರು ಅನುಭವಾತೀತ ಗುರಿಗಳ ವಿರೋಧಿ ಆಗಿದ್ದರು. ಅಂತೆಯೇ ಅವರು ಶಿಕ್ಷಣ ದಿಂದ ಯಾವುದೋ ದೂರದ ಒಂದು ಆಧ್ಯಾತ್ಮಿಕ ಗುರಿ ಯನ್ನು ಮುಟ್ಟಬೇಕು ಎಂಬ ವಿಚಾರಕ್ಕೆ ಅವರು ಮನ್ನಣೆ ಕೊಡಲಿಲ್ಲ. ಅವರ ದೃಷ್ಟಿಕೋನದಲ್ಲಿ ಅತಿ ಮಹತ್ವದ ಸಂಗತಿ ಎಂದರೆ ಮಗುವಿನ ಸದ್ಯದ ಜೀವನ. ಜೀವನವನ್ನು ಸಾಧ್ಯವಾದಷ್ಟು ಸುಖಮಯ ಮಾಡಬೇಕು. ಜೀವನ ದಲ್ಲಿ ಬರುವ ಸನ್ನಿವೇಶಗಳಿಂದ ಸಾಧ್ಯವಾದಷ್ಟು ಆನಂದ ವನ್ನು ಮಕ್ಕಳಿಗೆ ಒದಗಿಸಿಕೊಡಬೇಕು. ಮಕ್ಕಳ ಚಟು ವಟಿಕೆಗಳು ಸೃಷ್ಟಿಯ ಕ್ರಿಯೆಗಳಿಗೆ ಪ್ರತಿಕ್ರಿಯೆಗಳಾಗಿರ ಬೇಕು ಎಂದು ಅವರು ಭಾವಿಸಿದ್ದರು. ಅವರ ಶಿಕ್ಷಣ ತತ್ವ ಜ್ಞಾನದಲ್ಲಿ ಅನುಭವಕ್ಕೆ ಮಧ್ಯವರ್ತಿ ಸ್ಥಾನವನ್ನು ಕಲ್ಪಿಸಿ ಕೊಡಲಾಗಿದೆ. ಶಿಕ್ಷಣವನ್ನು ಅನುಭವದ ರೂಪದಲ್ಲಿ ಕೊಡಬೇಕು ಎನ್ನುವದು ಅವರ ವಿಚಾರ. ಕೇವಲ ಚಟುವಟಿಕೆಗಳನ್ನು ಮಾಡಿದರಷ್ಟೇ ಅನುಭವವನ್ನು ಮಾಡಿಕೊಟ್ಟಂತೆ ಆಗುವದಿಲ್ಲ. ಯಾವದೇ ಚಟುವಟಿಕೆ ಯನ್ನು ಮಾಡಿಸುವ ಮೊದಲು ಆ ಚಟುವಟಿಕೆಯಿಂದ ನಾವು ಏನನ್ನು ಸಾಧಿಸಬೇಕು ಎಂಬುದನ್ನು ವಿಚಾರಿಸ ಬೇಕು. ನಂತರ ಆ ಚಟುವಟಿಕೆಯಿಂದ ಸಿದ್ಧಿಸಿದ ಸಂಗತಿ ಗಳನ್ನು ತಿಳಿದುಕೊಳ್ಳಬೇಕು. ಇಚ್ಛಿತ ಹಾಗೂ ನಿರ್ಮಿತ ಸಂಗತಿಗಳ ನಡುವೆ ಯೋಗ್ಯ ಸಂಬಂಧವಿದ್ದರೆ ಮಾತ್ರ ಯಾವದೇ ಚಟುವಟಿಕೆಯಿಂದ ಬಂದಂಥ ಅನುಭವವು ಅಪ್ಪಟ ಅನುಭವವಾಗುವದು. ಜೀವನ ಶಿಕ್ಷಣ ಕ್ಷೇತ್ರದಲ್ಲಿ ದುಡಿಯುತ್ತಿರುವ ನಾವು ಈ ಸಂಗತಿಯನ್ನು ಗಮನ ದಲ್ಲಿಟ್ಟುಕೊಳ್ಳಬೇಕು. ಕೇವಲ ವಿಷಯಗಳ ಸಲುವಾಗಿ ಚಟುವಟಿಕೆ ಅಥವಾ ಕೇವಲ ಉತ್ಪಾದನೆಗಾಗಿ ಚಟುವ ಟಿಕೆಗಳನ್ನು ಮಾಡಿಸುವ ವಿಚಾರವು ಜೀವನ ಶಿಕ್ಷಣದ ಮೂಲ ತತ್ವವನ್ನೇ ಹಾಳುಮಾಡುವದು. ಯೋಗ್ಯ ಚಟುವಟಿಕೆಯಿಂದ ಮಕ್ಕಳಿಗೆ ಸ್ವಾಭಾವಿಕವಾಗಿ ಉಂಟಾದ ಅನುಭವದ ಸಹಾಯದಿಂದಲೇ ನಾವು ಶಿಕ್ಷಣ ವನ್ನು ಮುಂದುವರಿಸಿದರೆ ಮಾತ್ರ ಅನುಭವಕ್ಕೆ ಯೋಗ್ಯ ಬೆಲೆಯನ್ನು ಕೊಟ್ಟಂತಾಗುವದು.

ಮಕ್ಕಳಿಗೆ ನಾವು ಮಾಡಿಕೊಡುವಂತಹ ಅನುಭವ ಗಳು ಅವರ ಬೆಳವಣಿಗೆಗೆ ಸಹಾಯಮಾಡತಕ್ಕಂಥವಿರ ಬೇಕು. ಅವರಿಗೆ ಎದುರಾಗುವ ಸಮಸ್ಯೆಗಳು ಅವರ ಅನುಭವನಗಳ ಮೂಲಕ ನಿರ್ಮಿತವಾದವುಗಳಿರಬೇಕು. ಅರ್ಥಾತ್ ಸ್ವಾಭಾವಿಕ ಕುತೂಹಲದ ಪರಿಣಾಮವಾಗಿ ಅವರು ಸಮಸ್ಯೆಗಳನ್ನು ಬಿಡಿಸಲು ಉದ್ಯುಕ್ತರಾಗಬೇಕು. ಅಂದ ಮೇಲೆ ಮಕ್ಕಳ ಕುತೂಹಲವನ್ನು ನಾವು ಹತ್ತಿಕ್ಕ ಬಾರದು. ಮಗುವಿಗೆ ಉಂಟಾಗುವ ಪ್ರತಿಯೊಂದು ಅನುಭವವೂ ಅರ್ಥಪೂರಿತವಿರುತ್ತವೆ. ಆದುದರಿಂದ ಬೋಧನೆಯು ಪ್ರಾರಂಭವಾಗುವ ಮೊದಲು ಮಕ್ಕಳಲ್ಲಿದ್ದ ಪೂರ್ವ ಅನುಭವಗಳನ್ನು ನಾವು ತಿಳಿದುಕೊಳ್ಳಬೇಕು. ಶಿಕ್ಷಣವೆಂದರೆ ಅನುಭವಗಳ ಮೂಲಕ ಉಂಟಾಗುವ ಬೆಳವಣಿಗೆ. ಆದುದರಿಂದ ಹೆಚ್ಚು ಹೆಚ್ಚು ಅನುಭವಗಳನ್ನು ಕ್ರಮಬದ್ಧವಾಗಿ ಮಕ್ಕಳಿಗೆ ಮಾಡಿಕೊಡಬೇಕು. ಒಟ್ಟಾರೆ ಅನುಭವವು ಶಿಕ್ಷಣದ ತಳಹದಿಯಾಗಬೇಕು.

ಜೀವನ ಶಿಕ್ಷಣದ ರೂಪರೇಷೆಯ ಮುಂಧೋರಣೆ

ಲೇಖಕರು:— **ಶ್ರೀ ಜೆ. ಕೆ. ಶುಕ್ಲ** ಅನುವಾದಕರು:— **ಶ್ರೀ ತಟ್ಟಿ ಶ್ಯಾಮರಾಯರು**

ಪ್ರಾಥಮಿಕ ವಿದ್ಯಾಭ್ಯಾಸವೆಲ್ಲವನ್ನು ಆದಷ್ಟು ಬೇಗನೆ ಜೀವನ ಶಿಕ್ಷಣದ ಮಾದರಿಯಲ್ಲಿ ಸಂಘಟಿಸ ಬೇಕೆಂಬ ನಿರ್ಣಯದಿಂದ ಅದಕ್ಕೆ ಮೊದಲು ಬೇಕಾದ ಪೂರ್ವಸಿದ್ಧತೆಯ ಸಮಸ್ಯೆಯು ಎದ್ದಿದೆ. ೧೯೩೮ರಲ್ಲಿ ಕೇಂದ್ರ ಶೈಕ್ಷಣಿಕ ಸಲಹೆಗಾರ ಬೋರ್ಡಿನವರು ಸಾದಾ ಪ್ರಾಥಮಿಕ ಶಿಕ್ಷಣದ ಕ್ಷೇತ್ರದಲ್ಲಿಯೇ ಜೀವನ ಶಿಕ್ಷಣವು ಒಂದು ಸಂಯೋಜನೆಯಂತೆ ನಡೆಯಬೇಕೆಂದು ಮೊದಲು ಶಿಫಾರಸು ಮಾಡಿದರು. ಅದರಂತೆ ಶ್ರೀ ಜಿ. ರಾಮಚಂದ್ರನ್ ಇವರ ಅಧ್ಯಕ್ಷತೆಯಲ್ಲಿ ಭಾರತ ಸರಕಾರ ದವರು ಒಂದು ಮೌಲ್ಯಮಾಪನ ಸಮಿತಿಯನ್ನು ನೇಮಿಸಿ

ದಾಗ ಅದು ಈ ಪೂರ್ವಸಿದ್ಧತೆಯ ಅಗತ್ಯವನ್ನು ಒತ್ತಿ ಹೇಳಿತು. ಈ ಸಮಿತಿಯು. ಹೊಂದಾಣಿಕೆಯ ಕ್ಷೇತ್ರ ದಿಂದ ಜೀವನ ಶಿಕ್ಷಣವನ್ನು ವಿಸ್ತರಿಸುವ ಪದ್ಧತಿಯ ಬಗ್ಗೆ, ತನ್ನ ಸಂಪೂರ್ಣ ಅತೃಪ್ತಿಯನ್ನು ವ್ಯಕ್ತಪಡಿ ಸಿತು. ಹಾಗು ಎಲ್ಲ ಸಾದಾ ಪ್ರಾಥಮಿಕ ಶಾಲೆಗಳಲ್ಲಿ ಜೀವನ ಶಿಕ್ಷಣದ ವ್ಯಾಪಕವಾದ ಒಂದು ಸ್ತರವನ್ನು ರೂಢಿಯಲ್ಲಿ ತರುವ ಸೂಚನೆಯನ್ನು ಮಾಡಿತು.

ಈ ದೃಷ್ಟಿಕೋನವನ್ನು ಆ ಮೇಲೆ ಅನೇಕ ರಾಷ್ಟ್ರೀಯ ಸಮ್ಮೇಲನಗಳು ಸಮರ್ಥಿಸಿದವು. ಕೂಡಲೆ, ಜೀವನ ಶಿಕ್ಷಣ ಶಾಲೆಯ ಕೆಲವು ಕಾರ್ಯಕ್ರಮಗಳನ್ನು ಎಲ್ಲ ಕಡೆಗೂ ಪ್ರಾರಂಭ ಮಾಡಿ, ಜೀವನ ಶಿಕ್ಷಣದ ಶಾಲೆ ಗಳಿಗೂ ಇತರ ಶಾಲೆಗಳಿಗೂ ಇರುವ ಅಂತರವನ್ನು ಕಡಿಮೆ ಮಾಡಬೇಕೆಂದು ಈ ಸಭೆಗಳಲ್ಲಿ ಗೊತ್ತುವಳಿಯಾಯಿತು. ಸಂಬಂಧಪಟ್ಟಂತಹ ಎಲ್ಲ ಜನರಿಗೂ ಸರಕಾರದ ಈ ವಿಶಿಷ್ಟ ಘೋರಣೆಯ ಅರ್ಥವಾಗಿ, ಅದರ ಕಡೆಗೆ ಅವರ ಲಕ್ಷ್ಯವು ಹೊರಳಲಿಕ್ಕೆಂದು ಒಂದು ನಿಶ್ಚಿತವಾದ ಕಾರ್ಯ ಕ್ರಮವನ್ನು ಹಾಕಿಕೊಳ್ಳಬೇಕಾಯಿತು. ಶಿಕ್ಷಣ ಖಾತೆಯ ಕೇಂದ್ರ ಮಂತ್ರಿ ಮಂಡಲವು ಕೂಡಿಸಿದ ನಾಲ್ಕು ಶಿಕ್ಷಣಾ ಧಿಕಾರಿಗಳ ಪ್ರಾದೇಶಿಕ ವಿಚಾರ ಸಂಕಿರಣಗಳು—ಒಂದು ಗಾಂಧಿಗ್ರಾಮದಲ್ಲಿ, ಒಂದು ಚಂದೀಗಡದಲ್ಲಿ, ಒಂದು ಪುರಿ, ಒಂದು ಭೋಪಾಳ– ಈ ಊರುಗಳಲ್ಲಿ ನಡೆದವು. ಇದಾದ ನೇಲೆ ಹೋದ ವರ್ಷ ಅಲಹಾಬಾದದಲ್ಲಿ ರಾಜ್ಯಗಳ ವಿದ್ಯಾಖಾತೆಯ ಮುಖ್ಯಾಧಿಕಾರಿಗಳ ಒಂದು ರಾಷ್ಟ್ರೀಯ ವಿಚಾರ ಸಂಕಿರಣವು ನಡೆಯಿತು.

ಈ ವಿಚಾರ ಸಂಕಿರಣಗಳಲ್ಲಿ ಹೊರಟ ಹೊಸ ಮಾರ್ಗದರ್ಶನದಲ್ಲಿ ಎಲ್ಲ ಶಾಲೆಗಳಲ್ಲಿಯೂ ಕೆಲವು ಸಾಮಾನ್ಯ ಚಟುವಟಿಕೆಗಳನ್ನು ಪ್ರಾರಂಭಿಸಬೇಕೆಂಬ ಕಾರ್ಯಕ್ರಮವನ್ನು ಗೊತ್ತುಮಾಡಲಾಯಿತು. ಅವು ಯಾವವೆಂದರೆ, ಆರೋಗ್ಯದಿಂದ ಬಾಳುವದಕ್ಕೂ-ಸುತ್ತ ಲಿನ ಪರಿಸ್ಥಿತಿಯ ಜ್ಞಾನ ಮಾಡಿಕೊಳ್ಳುವದಕ್ಕೂ ಬೇಕಾ ಗುವ ಚಟುವಟಿಕೆಗಳು; ನಾಗರಿಕತೆಯ ತರಬೇತಿ ಮತ್ತು ಸಾಮಾಜಿಕ ಜೀವನ; ರಸಿಕತೆಯ ಹಾಗೂ ಸಾಂಸ್ಕೃತಿಕ ಚಟುವಟಿಕೆಗಳು; ಶಾಲೆಯನ್ನು ಮನೆಗೂ ಸಮಾಜಕ್ಕೂ ಜೋಡಿಸುವಂತಹ ಸಮಾಜ ಸೇವೆಯ ಚಟುವಟಿಕೆಗಳು. ಇದರ ಮೇಲಿಂದ ಮೇಲಿನ ಸಂಸ್ಥೆಗಳೂ ಸೂಚಿಸಿದ ಹೊಸ ದೃಷ್ಟಿಕೋನದ ರೂಪವನ್ನು ಹೆಚ್ಚು ವಿಸ್ತರಿಸಿ ಹೇಳುವ ಕಾರಣವಿಲ್ಲವೆಂದು ತಿಳಿದು ಬರುವದು.

ಎಲ್ಲ ಪ್ರಾಥಮಿಕ ಶಾಲೆಗಳನ್ನು ಜೀವನ ಶಿಕ್ಷಣ ಶಾಲೆಗಳಾಗಿ ಪರಿವರ್ತಿಸುವದು ಬೇರೆ; ಆ ಶಾಲೆಗಳಿಗೆ ಹೊಸ ದೃಷ್ಟಿಕೋನದ ರೂಪವನ್ನು ಕೊಡುವದು ಬೇರೆ; ಸಂಪೂರ್ಣ ಪರಿವರ್ತನೆಯಲ್ಲಿ ಮೂಲಶಿಕ್ಷಣ ಅಥವಾ ಜೀವನ ಶಿಕ್ಷಣದ ಎಲ್ಲ ಅಂಗಗಳನ್ನು ಸಮಾವೇಶ ಮಾಡ ಬೇಕಾಗುವದು. ಈ ಸಮಾವೇಶದಲ್ಲಿ ಗರ್ಭಿತವಾಗಿ ಅನೇಕ ಆಡಳಿತದ ಹಾಗು ಸಂಘಟನೆಯ ಕಾರ್ಯಗಳು ಇರುವವು. ಮುಖ್ಯವಾಗಿ ಉತ್ಪಾದಕ ದುಡಿತ, ಸುವ್ಯವ ಸ್ಥಿತವಾದ ಮೂಲೋದ್ಯೋಗದ ಕಲಿ, ಸಮುವಾಯ ಪದ್ಧತಿಯಿಂದ ಕಲಿಸುವ ತಂತ್ರ ಮತ್ತು ಜೀವನ ಶಿಕ್ಷಣದಲ್ಲಿ ತರಬೇತಿ ಪಡೆದ ಸಾಕಷ್ಟು ಶಿಕ್ಷಕ ಶಿಕ್ಷಕಿಯರ ಪೂರೈಕೆ.

ಹೊಸ ದೃಷ್ಟಿಕೋನದ ಮಾರ್ಗದರ್ಶನದಲ್ಲಿ ಹೆಚ್ಚಿನ ಖರ್ಚು ಬೇಕಾಗುವ ಹಾಗು ತರಬೇತಿ ಪಡೆದ ಶಿಕ್ಷಕರನ್ನು ನೇಮಿಸ ಬೇಕಾಗುವ ವಿಷಯಗಳನ್ನು ಬಿಟ್ಟು ಉಳಿದ ಜೀವನ ಶಿಕ್ಷಣದ ಸಾಮಾನ್ಯ ರೂಪರೇಷೆಯನ್ನು ಚಟುವಟಿಕೆಗಳನ್ನು ಸಮಾವೇಶಗೊಳಿಸಬಹುದು.

ಸಮಗ್ರ ಪರಿವರ್ತನೆಯ ಕಾರ್ಯಕ್ರಮಕ್ಕೆ ಹೆಚ್ಚು ಕಾಲಾವಧಿಯು ಹಿಡಿಯುವದು; ಅದು ಹಂತ ಹಂತದಿಂದ ನಿಧಾನವಾಗಿ ಸಾಗುವದು; ಆದರೆ ಈ ಹೊಸರೂಪ ಕೊಡುವ ಕಾರ್ಯಕ್ರಮವನ್ನು ಎಲ್ಲ ಶಾಲೆಗಳಲ್ಲಿ ಒಂದೇ ಕಾಲಕ್ಕೆ ಪರಿಮಿತವಾದ ಅವಧಿಯಲ್ಲಿಯೇ ಆಚರಣೆಗೆ ಬರುವಂತೆ ಇಟ್ಟುಕೊಳ್ಳಬಹುದು.

ಕೆಲವು ರಾಜ್ಯಗಳಲ್ಲಿದ್ದ ಅನನುಕೂಲತೆಗಳ ಮೂಲಕ ೧೯೬೧–೬೨ರಲ್ಲಿ ಈ ಹೊಸ ದೃಷ್ಟಿಕೋನದ ಕಾರ್ಯಕ್ರಮವು ಮುಗಿಯಬೇಕೆಂದೂ, ಇತರ ಎಲ್ಲ ರಾಜ್ಯಗಳಲ್ಲಿ ಅದು ೧೯೬೫–೬೬ರಲ್ಲಿ ಮುಗಿಯಬೇಕೆಂದೂ, ಅಲಹಾಬಾದದಲ್ಲಿ ನಡೆದ ವಿಚಾರ ಸಂಕಿರಣದಲ್ಲಿ ಶಿಫಾರಸು ಮಾಡಲಾಯಿತು. ಎಲ್ಲ ಸಾದಾ ಪ್ರಾಥಮಿಕ ಶಾಲೆಗಳ ದೃಷ್ಟಿಯನ್ನು ಜೀವನ ಶಿಕ್ಷಣ ಶಾಲೆಯ ಮಟ್ಟದ ಮಾದರಿ ಯಲ್ಲಿ ಬದಲಿಸುವ ವಿಶಿಷ್ಟ ಉದ್ದೇಶದಿಂದ ದೇಶದಾದ್ಯಂತ ಕೈಕೊಂಡ ದೊಡ್ಡ, ವಿಸ್ತೃತವಾದ, ರಾಷ್ಟ್ರೀಯ ಯೋಜನೆಯ ಸ್ವರೂಪವು ಈ ಹೊಸ ಕಾರ್ಯದಲ್ಲಿದೆ.

ಈ ನಿರ್ಣಯದಿಂದ ಆಡಳಿತದ ಹಾಗು ಸಂಘಟನೆಯ ಕೆಲವು ಬದಲಾವಣೆಗಳಾಗುವವು. ಅವು ಮುಖ್ಯವಾಗಿ ಯಾವವೆಂದರೆ (೧) ಕೆಲವೊಂದು ಅವಧಿಯವರೆಗೆ ಆಡಳಿತಗಾರರಿಗೆ, ಇನ್‌ಸ್ಪೆಕ್ಟರರಿಗೆ, ಮೇಲ್ವಿಚಾರಕರಿಗೆ, ಮುಖ್ಯಾಧ್ಯಾಪಕರಿಗೆ, ಅಧ್ಯಾಪಕರಿಗೆ ತರಬೇತಿಯನ್ನು ಕೊಡುವದು. (೨) ಸರಿಯಾದ ಮಾರ್ಗದರ್ಶನ ಮಾಡುವಂತಹ ತಕ್ಕ ಸಾಹಿತ್ಯವನ್ನು ನಿರ್ಮಿಸುವದು. (೩) ಸಾರ್ವಜನಿಕರಿಗೂ, ಪಾಲಕರಿಗೂ, ಶಿಕ್ಷಣ ಖಾತೆಯವರಿಗೂ ಈ ಕಾರ್ಯಕ್ರಮದ ಬಗ್ಗೆ ಮಾಹಿತಿಯನ್ನು ಪ್ರಸಿದ್ಧಿಸುವದು. (೪) ಜನತೆಯ ಸಹಕಾರದಿಂದ ಈ ಕಾರ್ಯಕ್ರಮಕ್ಕೆ ಹಣವನ್ನು ಕೂಡಿಸುವದು. ಮತ್ತು ವಿನಿಯೋಗಿಸುವದು. (೫) ಒಂದೊಂದೇ ಹಂತದಿಂದ ಶಿಕ್ಷಣವನ್ನು ಮುಂದುವರಿಸಿ ಅದರ ಮೌಲ್ಯಮಾಪನವನ್ನು ಶಾಸ್ತ್ರೋಕ್ತ ರೀತಿಯಿಂದ ಮಾಡಿಸುವದು.

ಈ ಕಾರ್ಯಕ್ರಮವು ಒಂದು ಸ್ವತಂತ್ರವಾದ ಯೋಗ್ಯ ಶಿಕ್ಷಣ ಪದ್ಧತಿಯಾಗಬಹುದು. ಅದು ಪ್ರಾಥಮಿಕ ಶಿಕ್ಷಣದ ಗುಣಾಂಶಗಳನ್ನು ಹೆಚ್ಚಿಸುವದೆಂದು ನಿರೀಕ್ಷಿಸಲಾಗಿದೆ. ಅದು ಶಿಕ್ಷಣಕ್ಕೆ ಒಂದು ಸಾಮಾಜಿಕ ಸ್ವರೂಪವನ್ನು ಕೊಡುವದು. ಇದು ಈಗ ನಮ್ಮ ದೇಶದಲ್ಲಿ ಮುಖ್ಯವಾಗಿ ಆಗಬೇಕಾಗಿದೆ, ಸ್ಥೂಲವಾಗಿ, ಸಾಮಾನ್ಯವಾಗಿ ಹೇಳುವುದಾದರೆ ಅದು ಜೀವನ ಶಿಕ್ಷಣದ ಅಂತರಂಗದ ಒಳ್ಳೆಯ ಅಂಶಗಳನ್ನು ತನ್ನಲ್ಲಿ ಅಂತರ್ಗತ ಮಾಡಿಕೊಳ್ಳುವ ದೃಷ್ಟಿಯುಳ್ಳದ್ದಾಗಿದೆ. ಅವು ಎಲ್ಲ ಸಾಲೆಗಳಲ್ಲಿಯೂ ಆರಂಭಿಸುವದಕ್ಕೆ ಸುಲಭವಾಗಿರಬೇಕು; ಅದಷ್ಟು ಕಡಿಮೆ ಖರ್ಚಿನದಾಗಿರಬೇಕು; ವಿಶೇಷ ತರಬೇತಿ ಪಡೆದ ಶಿಕ್ಷಕರೇ ಇದಕ್ಕೆ ಬೇಕೆಂಬುವ ಹಾಗಿರಬಾರದು; ಕೊನೆಯದಾಗಿ ಎಲ್ಲ ಸಾಲೆಗಳಿಗೂ ಅದು ಸ್ವೀಕಾರಾರ್ಹವಾಗಿರಬೇಕು.

ಈ ಹೊಸ ದೃಷ್ಟಿಯ ಕಾರ್ಯದಲ್ಲಿ ಕೆಳಗಿನ ಮುಖ್ಯ ಗುರಿಗಳಿರಬೇಕು:—

(೧) ಮಕ್ಕಳು ಅವರಿಂದ ಸ್ವಾವಲಂಬನವನ್ನು ಪರಿಶ್ರಮದ ಗೌರವವನ್ನು ತಿಳಿದು ಕಲಿಯಬೇಕು.

(೨) ಸರಳವಾದ, ಕಲಾತ್ಮಕವಾದ, ಅಗ್ಗವಾದ ಉತ್ಪಾದಕ ಉದ್ಯೋಗವನ್ನು ಕೈಕೊಂಡು ಕೈಬೆರಳುಗಳ ಸುಲಭವಾದ ತರಬೇತಿಯನ್ನು ಪಡೆದು, ಮಕ್ಕಳು ತಮ್ಮಲ್ಲಿ ಹುದುಗಿದ ನೂತನ ದೃಷ್ಟಿಯ ಪ್ರವೃತ್ತಿಯನ್ನು ಕಾರ್ಯಗತಮಾಡಿಕೊಳ್ಳುವದು. (೩) ವಿದ್ಯಾರ್ಥಿಗಳು ಮಂತ್ರಿಮಂಡಳದಂತಹ ಸ್ವತಂತ್ರ ಕಾರ್ಯಭಾರದಿಂದ ಸಾಲೆಯ ಮಕ್ಕಳ ಸಮಾಜದ ಚಟುವಟಿಕೆಗಳನ್ನು ಸಂಘಟಿಸಿ ಅದರಲ್ಲಿ ಪಾತ್ರವಹಿಸಿ ಹೊಣೆಗಾರಿಕೆಯನ್ನೂ ಸಹಕಾರ ಭಾವನೆಯನ್ನೂ ಬೆಳೆಯಿಸಿಕೊಳ್ಳುವಂತಾಗಬೇಕು. (೪) ವಿಶ್ರಾಂತಿ ಸಮಯದ ಸದುಪಯೋಗವಾಗುವಂತೆ ಜೀವನದಲ್ಲಿಯ ಕಲಾತ್ಮಕ ಹಾಗು ರಸಾತ್ಮಕ ಅಭಿರುಚಿಯನ್ನು ಬೆಳೆಸಿಕೊಂಡು ಜೀವನದ ಶ್ರೇಷ್ಠ ಪುರುಷಾರ್ಥಗಳ ಅರಿವನ್ನು ಮಾಡಿಕೊಳ್ಳುವಂತಾಗಬೇಕು. (೫) ಕೊನೆಯದಾಗಿ ಸುತ್ತಲಿನ ನೈಸರ್ಗಿಕ ಹಾಗು ಸಾಮಾಜಿಕ ಪರಿಸ್ಥಿತಿಯಲ್ಲಿ ಸಾಲೆಯ ಮಕ್ಕಳ ಅಭಿರುಚಿಯನ್ನು ಹೆಚ್ಚಿಸಬೇಕು.

ಎಲ್ಲ ಪ್ರಾಥಮಿಕ ಸಾಲೆಗಳಲ್ಲಿ ಈ ಹೊಸ ದೃಷ್ಟಿಕೋನದ ಶಿಕ್ಷಣ ಕ್ರಮವನ್ನು ನಿಷ್ಠೆಯಿಂದ ಕಾರ್ಯರೂಪಕ್ಕೆಳಿಸಿದರೆ ಅದು ನಾಗರಿಕ ಜೀವನದ ಮತ್ತು ಸಾಮಾಜಿಕ ಜೀವನದ ಸೂಕ್ತ ಅಭ್ಯಾಸವನ್ನುಂಟುಮಾಡಿ ಸಾಲೆಯ ಸಾಮಾಜಿಕ ಜೀವನದಲ್ಲಿ ಪ್ರತಿಯೊಬ್ಬನು ತನ್ನ ಪಕ್ಕನ್ನೂ ಹೊಣೆಯನ್ನೂ ತಿಳಿದು ಕೆಲಸ ಮಾಡುವಂತಾಗುವದು. ಮಕ್ಕಳು ಸಹಕಾರ, ಸ್ವತಂತ್ರಾಡಳಿತ, ಪ್ರಜಾಸತ್ತಾತ್ಮಕ ನಾಗರಿಕತೆ, ವೈಯಕ್ತಿಕ ಹಾಗೂ ಪರಿಸರದ ಸ್ವಚ್ಛತೆ, ಹಸ್ತಕೌಶಲ್ಯ, ಬೌದ್ಧಿಕ ತರಬೇತಿ, ಇವುಗಳನ್ನು ಪಡೆಯುವರು.

ಇದನ್ನೇ ಬೇರೆ ರೀತಿಯಿಂದ ಹೇಳುವದಾದರೆ ಮಕ್ಕಳು ಸಾಲೆಯಲ್ಲಿ ನಡೆಯುವ ಉತ್ಪಾದಕ ಹಾಗು ಶೋಧನೆಯ ಚಟುವಟಿಕೆಗಳಲ್ಲಿ ಸೇರಿಕೊಂಡು ಕೆಲಸ ಮಾಡುವ ಆನಂದವನ್ನು ಅನುಭವಿಸುವರು. ಸಾಲೆಯು ಹಳೆಯ ಸಾಲೆಯಂತೆ ಪುಸ್ತಕದ ಒಂದು ಅಂಗಡಿ ನಮೂನೆಯಂತೆ ಆಗದೆ ಅದು ಸದುದ್ದೇಶ ಪೂರ್ಣವಾದ ಸಮಾಜವಾಗಿ ಏರ್ಪಟ್ಟು ಅಲ್ಲಿ ಪ್ರತಿಯೊಬ್ಬ ವಿದ್ಯಾರ್ಥಿಯು ಜೀವನದ ಆನಂದವನ್ನು ಪಡೆಯುವನಲ್ಲದೆ ಆಕಾಂಕ್ಷಾಪೂರ್ವಕವಾಗಿ, ಉದ್ದೇಶಪೂರ್ವಕವಾಗಿ ದುಡಿಯುವ ಸಾಧನೆಯನ್ನು ಮಾಡುವನು.

ಹಾಗಾದರೆ ಈ ನೂತನ ದೃಷ್ಟಿಕೋನದ ಕಾರ್ಯಕ್ರಮವು ಕೆಳಗಿನ ಆರು ವಿಷಯಗಳಲ್ಲಿ ಬರುವ ಅನೇಕ ಚಟುವಟಿಕೆಗಳಿಗೆ ಅವಕಾಶವೀಯುವದು.

ದಾಗ ಅದು ಈ ಪೂರ್ವಸಿದ್ಧತೆಯ ಅಗತ್ಯವನ್ನು ಒತ್ತಿ ಹೇಳಿತು. ಈ ಸಮಿತಿಯು. ಹೊಂದಾಣಿಕೆಯ ಕ್ಷೇತ್ರ ದಿಂದ ಜೀವನ ಶಿಕ್ಷಣವನ್ನು ವಿಸ್ತರಿಸುವ ಪದ್ಧತಿಯ ಬಗ್ಗೆ, ತಮ್ಮ ಸಂಪೂರ್ಣ ಅತೃಪ್ತಿಯನ್ನು ವ್ಯಕ್ತಪಡಿ ಸಿತು. ಹಾಗು ಎಲ್ಲ ಸಾದಾ ಪ್ರಾಥಮಿಕ ಶಾಲೆಗಳಲ್ಲಿ ಜೀವನ ಶಿಕ್ಷಣದ ವ್ಯಾಪಕವಾದ ಒಂದು ಸ್ವರೂಪವನ್ನು ರೂಢಿಯಲ್ಲಿ ತರುವ ಸೂಚನೆಯನ್ನು ಮಾಡಿತು.

ಈ ದೃಷ್ಟಿಕೋನವನ್ನು ಆ ಮೇಲೆ ಅನೇಕ ರಾಷ್ಟ್ರೀಯ ಸಮ್ಮೇಲನಗಳು ಸಮರ್ಥಿಸಿದವು. ಕೂಡಲೆ, ಜೀವನ ಶಿಕ್ಷಣ ಶಾಲೆಯ ಕೆಲವು ಕಾರ್ಯಕ್ರಮಗಳನ್ನು ಎಲ್ಲ ಕಡೆಗೂ ಪ್ರಾರಂಭ ಮಾಡಿ, ಜೀವನ ಶಿಕ್ಷಣದ ಶಾಲೆ ಗಳಿಗೂ ಇತರ ಶಾಲೆಗಳಿಗೂ ಇರುವ ಅಂತರವನ್ನು ಕಡಿಮೆ ಮಾಡಬೇಕೆಂದು ಈ ಸಭೆಗಳಲ್ಲಿ ಗೊತ್ತುವಳಿಯಾಯಿತು. ಸಂಬಂಧಪಟ್ಟಂತಹ ಎಲ್ಲ ಜನರಿಗೂ ಸರಕಾರದ ಈ ವಿಶಿಷ್ಟ ಘೋರಣೆಯ ಅರ್ಥವಾಗಿ, ಅದರ ಕಡೆಗೆ ಅವರ ಲಕ್ಷ್ಯವು ಹೊರಳಲಿಕ್ಕೆಂದು ಒಂದು ನಿಶ್ಚಿತವಾದ ಕಾರ್ಯ ಕ್ರಮವನ್ನು ಹಾಕಿಕೊಳ್ಳಬೇಕಾಯಿತು. ಶಿಕ್ಷಣ ಖಾತೆಯ ಕೇಂದ್ರ ಮಂತ್ರಿ ಮಂಡಲವು ಕೂಡಿಸಿದ ನಾಲ್ಕು ಶಿಕ್ಷಣಾ ಧಿಕಾರಿಗಳ ಪ್ರಾದೇಶಿಕ ವಿಚಾರ ಸಂಕಿರಣಗಳು—ಒಂದು ಗಾಂಧಿಗ್ರಾಮದಲ್ಲಿ, ಒಂದು ಚಂದೀಗಡದಲ್ಲಿ, ಒಂದು ಪುರಿ, ಒಂದು ಭೋಪಾಳ— ಈ ಊರುಗಳಲ್ಲಿ ನಡೆದವು. ಇದಾದ ಮೇಲೆ ಹೋದ ವರ್ಷ ಅಲಹಾಬಾದದಲ್ಲಿ ರಾಜ್ಯಗಳ ವಿದ್ಯಾಖಾತೆಯ ಮುಖ್ಯಾಧಿಕಾರಿಗಳ ಒಂದು ರಾಷ್ಟ್ರೀಯ ವಿಚಾರ ಸಂಕಿರಣವು ನಡೆಯಿತು.

ಈ ವಿಚಾರ ಸಂಕಿರಣಗಳಲ್ಲಿ ಹೊರಟ ಹೊಸ ಮಾರ್ಗದರ್ಶನದಲ್ಲಿ ಎಲ್ಲ ಶಾಲೆಗಳಲ್ಲಿಯೂ ಕೆಲವು ಸಾಮಾನ್ಯ ಚಟುವಟಿಕೆಗಳನ್ನು ಪ್ರಾರಂಭಿಸಬೇಕೆಂಬ ಕಾರ್ಯಕ್ರಮವನ್ನು ಸೊತ್ತುಮಾಡಲಾಯಿತು. ಅವು ಯಾವವೆಂದರೆ, ಆರೋಗ್ಯದಿಂದ ಬಾಳುವದಕ್ಕೂ-ಸುತ್ತ ಲಿನ ಪರಿಸ್ಥಿತಿಯ ಜ್ಞಾನ ಮಾಡಿಕೊಳ್ಳುವದಕ್ಕೂ ಬೇಕಾ ಗುವ ಚಟುವಟಿಕೆಗಳು; ನಾಗರಿಕತೆಯ ತರಬೇತಿ ಮತ್ತು ಸಾಮಾಜಿಕ ಜೀವನ; ರಸಿಕತೆಯ ಬಾಗೂ ಸಾಂಸ್ಕೃತಿಕ ಚಟುವಟಿಕೆಗಳು; ಶಾಲೆಯನ್ನು ಮನೆಗೂ ಸಮಾಜಕ್ಕೂ ಜೋಡಿಸುವಂತಹ ಸಮಾಜ ಸೇವೆಯ ಚಟುವಟಿಕೆಗಳು. ಇದರ ಮೇಲಿಂದ ಮೇಲಿನ ಸಂಸ್ಥೆಗಳೂ ಸೂಚಿಸಿದ ಹೊಸ ದೃಷ್ಟಿಕೋನದ ರೂಪವನ್ನು ಹೆಚ್ಚು ವಿಸ್ತರಿಸಿ ಹೇಳುವ ಕಾರಣವಿಲ್ಲವೆಂದು ತಿಳಿದು ಬರುವದು.

ಎಲ್ಲ ಪ್ರಾಥಮಿಕ ಶಾಲೆಗಳನ್ನು ಜೀವನ ಶಿಕ್ಷಣ ಶಾಲೆಗಳಾಗಿ ಪರಿವರ್ತಿಸುವದು ಬೇರೆ; ಆ ಶಾಲೆಗಳಿಗೆ ಹೊಸ ದೃಷ್ಟಿಕೋನದ ರೂಪವನ್ನು ಕೊಡುವದು ಬೇರೆ; ಸಂಪೂರ್ಣ ಪರಿವರ್ತನೆಯಲ್ಲಿ ಮೂಲಶಿಕ್ಷಣ ಅಥವಾ ಜೀವನ ಶಿಕ್ಷಣದ ಎಲ್ಲ ಅಂಗಗಳನ್ನು ಸಮಾವೇಶ ಮಾಡ ಬೇಕಾಗುವದು. ಈ ಸಮಾವೇಶದಲ್ಲಿ ಗರ್ಭಿತವಾಗಿ ಅನೇಕ ಆಡಳಿತದ ಹಾಗು ಸಂಘಟನೆಯ ಕಾರ್ಯಗಳು ಇರುವವು. ಮುಖ್ಯವಾಗಿ ಉತ್ಪಾದಕ ದುಡಿತ, ಸುವ್ಯವ ಸ್ಥಿತವಾದ ಮೂಲೋದ್ಯೋಗದ ಕಲಿ, ಸಮವಾಯ ಪದ್ಧತಿಯಿಂದ ಕಲಿಸುವ ತಂತ್ರ ಮತ್ತು ಜೀವನ ಶಿಕ್ಷಣದಲ್ಲಿ ತರಬೇತಿ ಪಡೆದ ಸಾಕಷ್ಟು ಶಿಕ್ಷಕ ಶಿಕ್ಷಕಿಯರ ಪೂರೈಕೆ.

ಹೊಸ ದೃಷ್ಟಿಕೋನದ ಮಾರ್ಗದರ್ಶನದಲ್ಲಿ ಹೆಚ್ಚಿನ ಖರ್ಚು ಬೇಕಾಗುವ ಹಾಗು ತರಬೇತಿ ಪಡೆದ ಶಿಕ್ಷಕರನ್ನು ನೇಮಿಸ ಬೇಕಾಗುವ ವಿಷಯಗಳನ್ನು ಬಿಟ್ಟು ಉಳಿದ ಜೀವನ ಶಿಕ್ಷಣದ ಸಾಮಾನ್ಯ ರೂಪರೇಷೆಯನ್ನು ಚಟುವಟಿಕೆಗಳನ್ನು ಸಮಾವೇಶಗೊಳಿಸಬಹುದು.

ಸಮಗ್ರ ಪರಿವರ್ತನೆಯ ಕಾರ್ಯಕ್ರಮಕ್ಕೆ ಹೆಚ್ಚು ಕಾಲಾವಧಿಯು ಹಿಡಿಯುವದು; ಅದು ಹಂತ ಹಂತದಿಂದ ನಿಧಾನವಾಗಿ ಸಾಗುವದು; ಆದರೆ ಈ ಹೊಸರೂಪ ಕೊಡುವ ಕಾರ್ಯಕ್ರಮವನ್ನು ಎಲ್ಲ ಶಾಲೆಗಳಲ್ಲಿ ಒಂದೇ ಕಾಲಕ್ಕೆ ಪರಿಮಿತವಾದ ಅವಧಿಯಲ್ಲಿಯೇ ಆಚರಣೆಗೆ ಬರುವಂತೆ ಇಟ್ಟುಕೊಳ್ಳಬಹುದು.

ಕೆಲವು ರಾಜ್ಯಗಳಲ್ಲಿದ್ದ ಅನನುಕೂಲತೆಗಳ ಮೂಲಕ ೧೯೬೧–೬೨ರಲ್ಲಿ ಈ ಹೊಸ ದೃಷ್ಟಿಕೋನದ ಕಾರ್ಯಕ್ರಮವು ಮುಗಿಯಬೇಕೆಂದೂ, ಇತರ ಎಲ್ಲ ರಾಜ್ಯಗಳಲ್ಲಿ ಅದು ೧೯೬೦–೬೧ರಲ್ಲಿ ಮುಗಿಯಬೇಕೆಂದೂ, ಅಲಹಾಬಾದದಲ್ಲಿ ನಡೆದ ವಿಚಾರ ಸಂಕಿರಣದಲ್ಲಿ ಶಿಫಾರಸು ಮಾಡಲಾಯಿತು. ಎಲ್ಲ ಸಾದಾ ಪ್ರಾಥಮಿಕ ಶಾಲೆಗಳ ದೃಷ್ಟಿಯನ್ನು ಜೀವನ ಶಿಕ್ಷಣ ಶಾಲೆಯ ಪುಟ್ಟದ ಮಾದರಿ ಯಲ್ಲಿ ಬದಲಿಸುವ ವಿಶಿಷ್ಟ ಉದ್ದೇಶದಿಂದ ದೇಶವ್ಯಾಪ್ತ ಕೈಕೊಂಡ ದೊಡ್ಡ, ವಿಸ್ತೃತವಾದ, ರಾಷ್ಟ್ರೀಯ ಯೋಜನೆಯ ಸ್ವರೂಪವು ಈ ಹೊಸ ಕಾರ್ಯದಲ್ಲಿದೆ.

ಈ ನಿರ್ಣಯದಿಂದ ಆಡಳಿತದ ಹಾಗು ಸಂಘಟನೆಯ ಕೆಲವು ಬದಲಾವಣೆಗಳಾಗುವವು. ಅವು ಮುಖ್ಯವಾಗಿ ಯಾವವೆಂದರೆ (೧) ಕೆಲವೊಂದು ಅವಧಿಯವರೆಗೆ ಆಡಳಿತಗಾರರಿಗೆ, ಇನ್‌ಸ್ಪೆಕ್ಟರರಿಗೆ, ಮೇಲ್ವಿಚಾರಕರಿಗೆ, ಮುಖ್ಯಾಧ್ಯಾಪಕರಿಗೆ, ಅಧ್ಯಾಪಕರಿಗೆ ತರಬೇತಿಯನ್ನು ಕೊಡುವದು. (೨) ಸರಿಯಾದ ಮಾರ್ಗದರ್ಶನ ಮಾಡುವಂತಹ ತಕ್ಕ ಸಾಹಿತ್ಯವನ್ನು ನಿರ್ಮಿಸುವದು. (೩) ಸಾರ್ವಜನಿಕರಿಗೂ, ಪಾಲಕರಿಗೂ, ಶಿಕ್ಷಣ ಖಾತೆಯವರಿಗೂ ಈ ಕಾರ್ಯಕ್ರಮದ ಬಗ್ಗೆ ಮಾಹಿತಿಯನ್ನು ಪ್ರಸಿದ್ಧಿಸುವದು. (೪) ಜನತೆಯ ಸಹಕಾರದಿಂದ ಈ ಕಾರ್ಯಕ್ರಮಕ್ಕೆ ಹಣವನ್ನು ಕೂಡಿಸುವದು. ಮತ್ತು ವಿನಿಯೋಗಿಸುವದು. (೫) ಒಂದೊಂದೇ ಹಂತದಿಂದ ಶಿಕ್ಷಣವನ್ನು ಮುಂದುವರಿಸಿ ಅದರ ಪರೀಕ್ಷೆಯನ್ನು ಶಾಸ್ತ್ರೋಕ್ತ ರೀತಿಯಿಂದ ಮಾಡಿಸುವದು.

ಈ ಕಾರ್ಯಕ್ರಮವು ಒಂದು ಸ್ವತಂತ್ರವಾದ ಯೋಗ್ಯ ಶಿಕ್ಷಣ ಪದ್ಧತಿಯಾಗಬಹುದು. ಅದು ಪ್ರಾಥಮಿಕ ಶಿಕ್ಷಣದ ಗುಣಾಂಶಗಳನ್ನು ಹೆಚ್ಚಿಸುವದೆಂದು ನಿರೀಕ್ಷಿಸಲಾಗಿದೆ. ಅದು ಶಿಕ್ಷಣಕ್ಕೆ ಒಂದು ಸಾಮಾಜಿಕ ಸ್ವರೂಪನನ್ನು ಕೊಡುವದು. ಇದು ಈಗ ನಮ್ಮ ದೇಶದಲ್ಲಿ ಮುಖ್ಯವಾಗಿ ಆಗಬೇಕಾಗಿದೆ, ಸ್ಥೂಲವಾಗಿ, ಸಾಮಾನ್ಯವಾಗಿ ಹೇಳುವುದಾದರೆ ಅದು ಜೀವನ ಶಿಕ್ಷಣದ ಅಂತರಂಗದ ಒಳ್ಳೆಯ ಅಂಶಗಳನ್ನು ತನ್ನಲ್ಲಿ ಅಂತರ್ಗತ ಮಾಡಿಕೊಳ್ಳುವ ದೃಷ್ಟಿಯುಳ್ಳದ್ದಾಗಿದೆ. ಅವು ಎಲ್ಲ ಸಾಲೆಗಳಲ್ಲಿಯೂ ಆರಂಭಿಸುವದಕ್ಕೆ ಸುಲಭವಾಗಿರಬೇಕು; ಆದಷ್ಟು ಕಡಿಮೆ ಖರ್ಚಿನದಾಗಿರಬೇಕು; ವಿಶೇಷ ತರಬೇತಿ ಪಡೆದ ಶಿಕ್ಷಕರೇ ಇದಕ್ಕೆ ಬೇಕೆಂಬುವ ಹಾಗಿರಬಾರದು; ಕೊನೆಯದಾಗಿ ಎಲ್ಲ ಸಾಲೆಗಳಿಗೂ ಅದು ಸ್ವೀಕಾರಾರ್ಹವಾಗಿರಬೇಕು.

ಈ ಹೊಸ ದೃಷ್ಟಿಯ ಕಾರ್ಯದಲ್ಲಿ ಕೆಳಗಿನ ಮುಖ್ಯ ಗುರಿಗಳಿರಬೇಕು:—

(೧) ಮಕ್ಕಳು ಅದರಿಂದ ಸ್ವಾವಲಂಬನವನ್ನು ಪರಿಶ್ರಮದ ಗೌರವವನ್ನು ತಿಳಿದು ಕಲಿಯಬೇಕು.

(೨) ಸರಳವಾದ, ಕಲಾತ್ಮಕವಾದ, ಅಗ್ಗವಾದ. ಉತ್ಪಾದಕ ಉದ್ಯೋಗವನ್ನು ಕೈಕೊಂಡು ಕೈಬೆರಳುಗಳ ಸುಲಭವಾದ ತರಬೇತಿಯನ್ನು ಪಡೆದು, ಮಕ್ಕಳು ತಮ್ಮಲ್ಲಿ ಹುದುಗಿದ ನೂತನ ದೃಷ್ಟಿಯ ಪ್ರವೃತ್ತಿಯನ್ನು ಕಾರ್ಯಗತಮಾಡಿಕೊಳ್ಳುವದು. (೩) ವಿದ್ಯಾರ್ಥಿಗಳು ಮಂತ್ರಿಮಂಡಳದಂತಹ ಸ್ವತಂತ್ರ ಕಾರ್ಯಭಾರದಿಂದ ಸಾಲೆಯ ಮಕ್ಕಳ ಸಮಾಜದ ಚಟುವಟಿಕೆಗಳನ್ನು ಸಂಘಟಿಸಿ ಅದರಲ್ಲಿ ಪಾತ್ರವಹಿಸಿ ಹೊಣೆಗಾರಿಕೆಯನ್ನೂ ಸಹಕಾರ ಭಾವನೆಯನ್ನೂ ಬೆಳೆಯಿಸಿಕೊಳ್ಳುವಂತಾಗಬೇಕು. (೪) ವಿಶ್ರಾಂತಿ ಸಮಯದ ಸದುಪಯೋಗವಾಗುವಂತೆ ಜೀವನದಲ್ಲಿಯ ಕಲಾತ್ಮಕ ಹಾಗು ರಸಾತ್ಮಕ ಅಭಿರುಚಿಯನ್ನು ಬೆಳೆಸಿಕೊಂಡು ಜೀವನದ ಶ್ರೇಷ್ಠ ಪುರುಷಾರ್ಥಗಳ ಅರಿವನ್ನು ಮಾಡಿಕೊಳ್ಳುವಂತಾಗಬೇಕು. (೫) ಕೊನೆಯದಾಗಿ ಸುತ್ತಲಿನ ನೈಸರ್ಗಿಕ ಹಾಗು ಸಾಮಾಜಿಕ ಪರಿಸ್ಥಿತಿಯಲ್ಲಿ ಸಾಲೆಯ ಮಕ್ಕಳ ಅಭಿರುಚಿಯನ್ನು ಹೆಚ್ಚಿಸಬೇಕು.

ಎಲ್ಲ ಪ್ರಾಥಮಿಕ ಸಾಲೆಗಳಲ್ಲಿ ಈ ಹೊಸ ದೃಷ್ಟಿಕೋನದ ಶಿಕ್ಷಣ ಕ್ರಮವನ್ನು ನಿಷ್ಠೆಯಿಂದ ಕಾರ್ಯರೂಪಕ್ಕೆಳಿಸಿದರೆ ಅದು ನಾಗರಿಕ ಜೀವನದ ಮತ್ತು ಸಾಮಾಜಿಕ ಜೀವನದ ಸೂಕ್ತ ಅಭ್ಯಾಸವನ್ನುಂಟುಮಾಡಿ ಸಾಲೆಯ ಸಾಮಾಜಿಕ ಜೀವನದಲ್ಲಿ ಪ್ರತಿಯೊಬ್ಬನು ತನ್ನ ಹಕ್ಕನ್ನೂ ಹೊಣೆಯನ್ನೂ ತಿಳಿದು ಕೆಲಸ ಮಾಡುವಂತಾಗುವದು. ಮಕ್ಕಳು ಸಹಕಾರ, ಸ್ವತಂತ್ರಾಪೇಕ್ಷೆ, ಪ್ರಜಾಸತ್ತಾತ್ಮಕ ನಾಗರಿಕತೆ, ವೈಯಕ್ತಿಕ ಹಾಗೂ ಪರಿಸರದ ಸ್ವಚ್ಛತೆ, ಹಸ್ತಕೌಶಲ್ಯ, ಬೌದ್ಧಿಕ ತರಬೇತಿ, ಇವುಗಳನ್ನು ಪಡೆಯುವರು.

ಇದನ್ನೇ ಬೇರೆ ರೀತಿಯಿಂದ ಹೇಳುವದಾದರೆ ಮಕ್ಕಳು ಸಾಲೆಯಲ್ಲಿ ನಡೆಯುವ ಉತ್ಪಾದಕ ಹಾಗು ಬೋಧನೆಯ ಚಟುವಟಿಕೆಗಳಲ್ಲಿ ಸೇರಿಕೊಂಡು ಕೆಲಸ ಮಾಡುವ ಆನಂದವನ್ನು ಅನುಭವಿಸುವರು. ಸಾಲೆಯು ಹಳೆಯ ಸಾಲೆಯಂತೆ ಪುಸ್ತಕದ ಒಂದು ಅಂಗಡಿ ನಮೂನೆಯಂತೆ ಆಗದೆ ಅದು ಸದುದ್ದೇಶ ಪೂರ್ಣವಾದ ಸಮಾಜವಾಗಿ ಏರ್ಪಟ್ಟು ಅಲ್ಲಿ ಪ್ರತಿಯೊಬ್ಬ ವಿದ್ಯಾರ್ಥಿಯು ಜೀವನದ ಆನಂದವನ್ನು ಪಡೆಯುವನಲ್ಲದೆ ಆಕಾಂಕ್ಷಾಪೂರ್ವಕವಾಗಿ, ಉದ್ದೇಶಪೂರ್ವಕವಾಗಿ ದುಡಿಯುವ ಸಾಧನೆಯನ್ನು ಮಾಡುವನು.

ಹಾಗಾದರೆ ಈ ನೂತನ ದೃಷ್ಟಿಕೋನದ ಕಾರ್ಯಕ್ರಮವು ಕೆಳಗಿನ ಆರು ವಿಷಯಗಳಲ್ಲಿ ಬರುವ ಅನೇಕ ಚಟುವಟಿಕೆಗಳಿಗೆ ಅವಕಾಶವೀಯುವದು.

(೧) ದೇಹದ ಮತ್ತು ಸುತ್ತಲಿನ ವಾತಾವರಣದ ಆರೋಗ್ಯ. (೨) ನಾಗರಿಕನ ಕರ್ತವ್ಯವನ್ನರಿತ ಸಮಾಜದ ಜೀವನ. (೩) ಪರಿಸ್ಥಿತಿಯ ಸಮೂಹೀನ ಪರಿಚಯ (೪) ವಿಶ್ರಾಂತಿಯ ಸದುಪಯೋಗದಿಂದ ಕಲಾರಸಿಕತೆಯನ್ನು ಸಂಪಾದಿಸಿ ಸುಸಂಸ್ಕೃತ ಸದಾಚಾರದ ಜೀವನವನ್ನು ನಡೆಸುವದು. (೫) ಮನೆಯಲ್ಲಿಯೂ ಹೊರಗಿನ ಸಮಾಜದಲ್ಲಿಯೂ ಸೇವೆಯನ್ನು ಗೈಯ್ಯುವದು. (೬) ಸದಾ ಮೂಲೋದ್ಯೋಗದ ಕಾಯಕವನ್ನಿಟ್ಟುಕೊಳ್ಳುವದು.

ಮಕ್ಕಳಿಗೆ ಅಗತ್ಯವಿರುವ ಸಂಗತಿಗಳನ್ನು ಆಯಾ ಪರಿಸ್ಥಿತಿಯಲ್ಲಿ ಬೇಕಾಗಿರುವ ಕೆಲಸಗಳನ್ನು ಅಧರಿಸಿರುವ ಅನೇಕ ಚಟುವಟಿಕೆಗಳನ್ನು ಜಾಣನಾದ ಮತ್ತು ಪ್ರತಿಭಾನ್ವಿತನಾದ ಶಿಕ್ಷಕನು ಯೋಚಿಸಬಲ್ಲನು. ಇಷ್ಟೇ— ಈ ಚಟುವಟಿಕೆಗಳಲ್ಲಿ ಕಲಾಕೌಶಲ್ಯವನ್ನು ಅದಕ್ಕೆ ಸಂಬಂಧಿಸಿದ ಶಾಸ್ತ್ರೀಯಜ್ಞಾನವನ್ನು ತಂದುಕೊಡುವ ಮೌಲ್ಯಗಳು ಆ ಚಟುವಟಿಕೆಗಳಲ್ಲಿ ಅಂತರ್ಗತವಾಗಿರಬೇಕು.

ಈ ಎಲ್ಲ ಚಟುವಟಿಕೆಗಳನ್ನು ಶಾಲೆಯ ಅಭ್ಯಾಸ ಪತ್ರಿಕೆಯೊಂದಿಗೆ ಹೊಂದಿಸಿಕೊಂಡು ಶಿಕ್ಷಕನು ಅದರಲ್ಲಿ ಹೇಳಿದ ಎಲ್ಲ ಭಾಂಡಾರವನ್ನೂ ಅಳವಡಿಸಿಕೊಳ್ಳಲಾಗಿದೆ. ಅದು ಹಾಕಿಕೊಟ್ಟ ಅಭ್ಯಾಸದ ಮಟ್ಟಕ್ಕಿಂತ ಹುಡುಗರ ಶಿಕ್ಷಣದ ಪ್ರಗತಿಯು ಕಡಿಮೆಯಾಗಿಲ್ಲವೆಂಬುವನ್ನು ದಕ್ಷತೆಯಿಂದ ನೋಡಿಕೊಳ್ಳಬೇಕು.

ಈ ಚಟುವಟಿಕೆಗಳು ಯಾವದೋ ಒಂದು ಅವ್ಯವಸ್ಥಿತವಾದ ರೀತಿಯಿಂದ ಅಥವಾ ಕೇವಲ ಯಾಂತ್ರಿಕವಾಗಿ ಹಾಕಿಕೊಂಡಾಗಬಾರದು. ಸೂಕ್ತವಾದ ಒಂದು ಯೋಜನೆಯಲ್ಲಿ ಅವು ಕಾಣಿಸಿಕೊಳ್ಳಬೇಕು; ಅವನ್ನು ಅತ್ಯುತ್ತಮ ರೀತಿಯಿಂದ ವ್ಯವಸ್ಥೆಯಿಂದ ಮಾಡಬೇಕು; ಇಷ್ಟೇ ಅಲ್ಲದೆ ಅವು ಯಾವ ಪ್ರಗತಿಯ ಮಟ್ಟಕ್ಕೆ ಬಂದಿವೆ ಎಂಬುದನ್ನು ಮೌಲ್ಯಮಾಪನ ವಿಧಿಯಿಂದ ಆಗಾಗ್ಗೆ ಪರೀಕ್ಷಿಸಬೇಕು. ಈ ಚಟುವಟಿಕೆಗಳಿಂದ ಶಾಲೆಯಲ್ಲಿ ನಾವು ಅನೇಕ ಸಂಗತಿಗಳನ್ನು ಏತಕ್ಕೋಸ್ಕರ ಕಲಿಯಬೇಕು ಎಂಬದು ತಿಳಿಯಬೇಕು. ಕಾರ್ಯಕ್ರಮಗಳ ಯೋಜನೆಯಲ್ಲಿ ಚಟುವಟಿಕೆಗಳನ್ನು ಕೂಡಿಸುವದಲ್ಲದೆ ಶಿಕ್ಷಕರು ಅವನ್ನು ಸರಿಯಾಗಿ ಮಾಡಲಿಕ್ಕೆ ಬೇಕಾಗುವ ಸಾಹಿತ್ಯ ಸಲಕರಣೆಗಳು ಯಾವವು ಎಂಬದನ್ನು ನೋಡಿಕೊಳ್ಳಬೇಕು; ಮತ್ತು ಖರ್ಚನ್ನು ಎಷ್ಟೇ ಸ್ವಲ್ಪವಾದರೂ ಅವನ್ನು ಸಾಗಿಸಿಕೊಂಡು ಹೋಗುವ ಉಪಾಯವನ್ನು ಗೊತ್ತುಮಾಡಬೇಕು.

ಕೊನೆಯದಾಗಿ ಈ ಹೇಳಿದ ಹೊಸ ದೃಷ್ಟಿಕೋನದ ಆಚರಣೆಯು ಸಮನ್ವಯವಾದ ಜೀವನ ಶಿಕ್ಷಣವಲ್ಲ ಎಂಬದನ್ನು ಶಿಕ್ಷಕರು ಮರೆಯಬಾರದು. ಶಾಲೆಗಳು ಈ ಹೊಸ ಸಿದ್ಧತೆಗೆ ಹತ್ತಿದವೆಂದರೆ ಅವುಗಳ ಪ್ರಗತಿ ಸಾಗಿದಂತೆ. ಮುಂದೆ ಅವನ್ನು ಸಂಪೂರ್ಣ ಜೀವನ ಶಿಕ್ಷಣದ ಘಟ್ಟಕ್ಕೆ ಒಯ್ಯುವ ಯೋಜನೆಯ ರೂಪರೇಷೆಯನ್ನು ಹಾಕಿಕೊಳ್ಳಬಹುದು.

ಹೊಸ ಶಿಕ್ಷಣ

ಲೇಖಕರು:– **ಶ್ರೀ ಜಿ. ಎಸ್. ಗೋಕರ್ಣ,** ಕ್ರಾಫ್ಟ ಆರ್ಟನಾಯಿಝರ, ಧಾರವಾಡ

ಭಾರತದಲ್ಲಿ ಕೆಲವು ವರ್ಷಗಳ ಹಿಂದೆ ನಡೆಯುತ್ತಿರುವ; ಶಿಕ್ಷಣವು ನೌಕರರನ್ನು ತಯಾರಿಸುವ ಶಿಕ್ಷಣವಾಗಿತ್ತು. 'ಓದಿ ಕಲಿ, ಬರೆದುತೋರಿಸು' 'ಲೆಕ್ಕಮಾಡು' ಇದೆ ಶಿಕ್ಷಣದ ಪದ್ಧತಿಯಾಗಿತ್ತು. ಪಾಠಾಂತರಕ್ಕೆ ಬಹಳ ಮಹತ್ವವನ್ನು ಕೊಡುತ್ತಿದ್ದರು. ಜ್ಞಾನ, ಬಲ, ಶೀಲ ಸಂವರ್ಧನೆ ಈ ಉದ್ದೇಶವು ಹಳೆಯ ಶಿಕ್ಷಣದಿಂದ ಸಾಧ್ಯವಾಗುತ್ತಿದ್ದಿಲ್ಲ. ಆಗ ನಮಗೆ ಎರಡು ತರದ ಜನರು ಕಾಣುತ್ತಿದ್ದರು. (೧) ಸಜೀವ ತಲೆ– ನಿರ್ಜೀವ ದೇಹದವರು; ಅಂದರೆ ಬುದ್ಧಿ ಜೀವಿ ಮತ್ತು ಶ್ರಮದ ಕೆಲಸವನ್ನು ಮಾಡಲಿಕ್ಕೆ ಅಯೋಗ್ಯ. (೨) "ನಿರ್ಜೀವ ತಲೆ-ಸಜೀವ ದೇಹದವರು"— ವಿಚಾರ ಮಾಡದೆ (ತಿಳಿಯದೆ) ಶ್ರಮದ ಕೆಲಸ ಮಾಡುವವರು. ಹಳೆಯ ಶಿಕ್ಷಣದಿಂದ ನಮಗೆ ಸದೃಢ, ಸ್ವಾವಲಂಬಿ, ಸಮಾಜ ಜೀವಿ, ಬುದ್ಧಿಜೀವಿ ಉತ್ತಮ ನಾಗರಿಕ ಸಿಗುವದು ಅಸಾಧ್ಯವಾಗಿತ್ತು. ಈ ವಿಚಾರಗಳನ್ನು ಭಾರತದಲ್ಲಿಯ ಮುಂದಾಳುಗಳು ತಿಳಿದುಕೊಂಡು ಪೂಜ್ಯ ಬಾಪೂಜಿಯವರ ಆದೇಶದ ಪ್ರಕಾರ

೧೯೩೮ ರಲ್ಲಿ ಜೀವನ ಶಿಕ್ಷಣ ಪ್ರಾರಂಭಿಸಿದರು. ಮೊದಲು ಕೆಲವು ಭಾಗಗಳಲ್ಲಿ ಸೀಮಿತ ಕ್ಷೇತ್ರಗಳನ್ನು ಪ್ರಾರಂಭಿಸ ಲಾಯಿತು. ಧಾರವಾಡ ಸೀಮಿತ ಕ್ಷೇತ್ರದಲ್ಲಿ ೧೯ ಶಾಲೆ ಗಳಲ್ಲಿ ಮೂಲೋದ್ಯೋಗವನ್ನು ಪ್ರಾರಂಭಿಸಲಾಯಿತು, ಹಾಗು ಸಾಂಘಿಕ ಜೀವನದ ಚಟುವಟಿಕೆಗಳನ್ನು ಪ್ರಾರಂಭಿಸಿದರು.

ಜೀವನ ಶಿಕ್ಷಣ ಶಾಲೆಯಲ್ಲಿ ಕೆಲಸದ ಪ್ರಾರಂ ಭವು ಪ್ರಾರ್ಥನೆಯಿಂದ ಆಗುವದು. ಪ್ರಾರ್ಥನೆಯನ್ನು ಅರ್ಥಪೂರ್ಣವಾಗಿ ಮಾಡುವದು. ಯೋಗ್ಯ ಪ್ರಾರ್ಥನೆ ಯಲ್ಲಿ ಎಲ್ಲ ಧರ್ಮಗಳ ಮುಖ್ಯ ತತ್ವಗಳು ಒಳಗೊಂಡಿರ ಬೇಕು. ಪ್ರಾರ್ಥನೆ ಪ್ರಾರಂಭ 'ಸಾವಧಾನ— ಶಾಂತಿ ಯಿಂದ ಆಗುವದು. ಮಕ್ಕಳಿಗೆ ನಿಜವಾಗಿ ಒಂದು ಅಥವಾ ಎರಡು ನಿಮಿಷ ಶಾಂತ ಇರುವ ರೂಢಿಯನ್ನು ಯೋಗ್ಯ ತರಬೇತಿಯಿಂದ ಮಾಡಿದರೆ ಉತ್ತಮ. ಪ್ರಾರ್ಥನೆಯ ನಂತರ ಪಂಚಾಂಗ ಪಠಣ ಮಾಡುವರು. ಬಾಲ ಬಾಲಿಕೆ ಯರಿಗೆ ತಿಥಿ, ವಾರ, ಮಾಸ, ಪಕ್ಷ, ಋತು, ಆಯನ ಇವುಗಳನ್ನು ಪೂರ್ಣ ಮಾಹಿತಿ ಮಾಡಿ ಕೊಡತಕ್ಕದ್ದು; ಇಲ್ಲದಿದ್ದರೆ ಪಂಚಾಂಗ ಪಠಣವು ತಾಂತ್ರಿಕವಾಗುವದು. ಮತ್ತು ಅದರ ಉಪಯೋಗವಾಗುವದಿಲ್ಲ. ಪಂಚಾಂಗ ಪಠ ಣದ ನಂತರ ಅಮರವಾಣಿ ಹೇಳುವರು. ಮಹಾಪುರುಷರು ಹೇಳಿದ ಕೆಲವು ಪ್ರಚಲಿತ ನೀತಿ ಮಾತುಗಳನ್ನು ಮಕ್ಕ ಳಿಗೆ ಹೇಳಿ ಅವರ ಶೀಲಸಂವರ್ಧನೆ ಮಾಡುವದೇ ಇದರ ಉದ್ದೇಶ. ಮಕ್ಕಳಿಗೆ ಹೇಳಲು ಯೋಗ್ಯ ಅಮೃತವಾಣಿ ಗಳ ಸಂಗ್ರಹವನ್ನು ಶಿಕ್ಷಕರು ಮಾಡಿ ಇಡುವದು ಉತ್ತಮ. ಅಮೃತವಾಣಿಯ ವಾಕ್ಯವನ್ನು ಬಾಲಕ ಬಾಲಿಕೆಯರಿಗೆ ಉದಾಹರಣೆಗಳನ್ನು ಕೊಟ್ಟು ತಿಳಿಸಿ ಹೇಳುವದು ಉತ್ತಮ. ಅದರಂತೆಯೇ ಅವುಗಳನ್ನು ಶುದ್ಧ ವಾಗಿ ಕರೆ ಹಲಿಗೆಯ ಮೇಲೆ ಬರೆದು ಇಟ್ಟು ಬಾಲಕ ಬಾಲಿಕೆಯರಿಗೆ ಬರೆದುಕೊಳ್ಳಲಿಕ್ಕೆ ಹೇಳಬೇಕು. ಅಯೋಗ್ಯ ವಾಕ್ಯಗಳನ್ನು ಬಾಲಕ ಬಾಲಿಕೆಯರಿಗೆ ಹೇಳ ದಿದ್ದರೆ ಉತ್ತಮ. ಒಂದು ಶಾಲೆಯಲ್ಲಿ ಒಂದು ದಿವಸ "ಹಣವಿಲ್ಲದ ಜೀವನ ಹೆಣದಂತೆ" ಎಂದು ಅಮರವಾಣಿ ಹೇಳಿದರು. ಇದರಿಂದ ಮಕ್ಕಳಲ್ಲಿ ಯಾವುದಾದರೊಂದು ರೀತಿಯಿಂದ ಹಣವನ್ನು ಕೂಡಿ ಹಾಕತಕ್ಕದ್ದೆಂದು ಕಲ್ಪನೆಯಾಗುವದು ಮತ್ತು ಅವರ ನೀತಿಯ ಮಟ್ಟ ಸುಧಾರಿಸುವದಿಲ್ಲ. ಇನ್ನೊಂದು ಶಾಲೆಯಲ್ಲಿ "ಜಾತಿ ಬೇರೆಯಾದರೆ ನೀತಿ ಬೇರೆ?" ಎಂದು ಅಮರವಾಣಿ ಯನ್ನು "ಜಾತಿ ಬೇರೆಯಾದರೆ ನೀತಿ ಬೇರೆ." ಎಂದು ಕರೆ ಹಲಿಗೆಯ ಮೇಲೆ ಬರೆದು ಇಟ್ಟಿದ್ದರು. ಪ್ರಶ್ನಾ ರ್ಥಕ ಚಿನ್ಹದ ಬದಲು ಪೂರ್ಣವಿರಾಮ ಹಾಕಿದ್ದಕ್ಕಾಗಿ, ಮಕ್ಕಳಲ್ಲಿ ಜಾತೀಯ ಭಾವನೆ ದೃಢೀಕರಿಸುವ ಪ್ರಯತ್ನ ವಾದಂತಾಯಿತೋ ಏನೊ? ಇದಕ್ಕಾಗಿ ಶಿಕ್ಷಕರು ಜಾಗ ರೂಕತೆನಹಿಸತಕ್ಕದ್ದು. ಇದರ ನಂತರ ಬಾಲಕ ಬಾಲಿಕೆ ಯರಿಗೆ ಸುದ್ದಿಗಳನ್ನು ಹೇಳುವ ಕಾರ್ಯಕ್ರಮವು ಇರು ತ್ತದೆ. ಬಾಲಕರ ಜೀವನಕ್ಕೆ ಪರಿಣಾಮ ಮಾಡುವ ಯೋಗ್ಯ ಸುದ್ದಿಗಳನ್ನು ಓದಿ ಹೇಳತಕ್ಕದ್ದು ಮತ್ತು ಕರೆ ಹಲಿಗೆಯ ಮೇಲೆ ಸುಂದರ ಅಕ್ಷರದಿಂದ ಶುದ್ಧ ಭಾಷೆಯಲ್ಲಿ ಬರೆದು ಇಡಬೇಕು.

ಬಾಲಕ ಬಾಲಿಕೆಯರ ಬಲ ಸಂವರ್ಧನಕ್ಕಾಗಿ ಮತ್ತು ಆರೋಗ್ಯ ರಕ್ಷಣಕ್ಕಾಗಿ ಜೀವನ ಶಿಕ್ಷಣ ಶಾಲೆ ಗಳಲ್ಲಿ ಕೆಲವು ಚಟುವಟಿಕೆಗಳನ್ನು ಮಾಡುವದು ಅತ್ಯ ವಶ್ಯ. ಆದರೆ ಅವುಗಳ ಮಹತ್ವದ ಬಗೆಗೆ ಬಾಲಕ ಬಾಲಿಕೆ ಯರಿಗೆ ಸರಿಯಾಗಿ ಜ್ಞಾನವನ್ನು ಮಾಡಿಕೊಡತಕ್ಕದ್ದು. ಇಲ್ಲದಿದ್ದರೆ ಈ ಉದ್ದೇಶವು ಸಫಲವಾಗಲಾರದು. ಮುಂಜಾವಿನಲ್ಲಿ ಕೆಲವು ಸರ್ವಾಂಗ ಸುಂದರ ವ್ಯಾಯಾ ಮದ ಕವಾಯತು ಮಾಡಿಸಿದರೆ ಬಾಲಕ ಬಾಲಿಕೆಯರ ಮನಸ್ಸು ಬೌದ್ಧಿಕ ಅಭ್ಯಾಸ ಮಾಡಲಿಕ್ಕೆ ಅನುಕೂಲ ವಾಗುತ್ತದೆ. ಸಂಜೆಗೆ ಅವರಿಂದ ಕೆಲವು ಆಟಗಳನ್ನು ಆಡಿ ಸಿದರೆ ನಾಯಕರ ಆಜ್ಞೆಯಲ್ಲಿ ಕೂಡಿ ಆಡಿ ಜಯಗಳಿ ಸುವ ಬಗ್ಗೆ ಹೃತ್ಪೂರ್ವಕ ಪ್ರಯತ್ನ ಮಾಡುವ ರೂಢಿ ಯಾಗುವದು. ಸರ್ವಾಂಗ ಸುಂದರ ವ್ಯಾಯಾಮದಲ್ಲಿ ಕೈ, ಕಾಲು, ಸೊಂಟ ಇವುಗಳಿಗೆ ವ್ಯಾಯಾಮವಾಗುವಂತೆ ಯೋಜನೆ ಮಾಡತಕ್ಕದ್ದು. ಶಾರೀರಿಕ ಶಿಕ್ಷಣ ಈ ವಿಷ ಯದ ಬಾಲಕ ಬಾಲಿಕೆಯರಿಗೆ ಸಮುವಾಯ ಜ್ಞಾನವನ್ನು ಮಾಡಿಕೊಟ್ಟು ಆರೋಗ್ಯಶಾಸ್ತ್ರ ವಿಷಯವನ್ನು ಕಲಿಸ ಲಿಕ್ಕೆ ಅನಕೂಲವಾಗುವದು. ಆರೋಗ್ಯಕರ ಶರೀರ ಪಡೆ ಯುವದಕ್ಕಾಗಿ ಮತ್ತು ಶಾರೀರಿಕ ಬಲಸಂವರ್ಧನೆಗಾಗಿ ವ್ಯಾಯಾಮದ ಮಹತ್ವವನ್ನು ಬಾಲಕ ಬಾಲಿಕೆಯರಿಗೆ ತಿಳಿಸಿಕೊಡದಿದ್ದರೆ ಶಾರೀರಿಕ ಶಿಕ್ಷಣದ ಕೆಲಸವು ಸಾರ್ಥಕವಾಗಲಾರದು.

ವೈಯಕ್ತಿಕ ಹಾಗು ಸಾಮೂಹಿಕ ಸ್ವಚ್ಛತೆ ಇದು ಜೀವನ ಶಿಕ್ಷಣದ ಒಂದು ಪ್ರಮುಖ ಅಂಗವಾಗಿರುತ್ತದೆ.

ದಿನಾಲು ಪ್ರಾರ್ಥನೆ ಮುಗಿದ ನಂತರ ಬಾಲಕ ಬಾಲಿಕೆಯರ ಹಲ್ಲು, ಕಣ್ಣು ನೋಡತಕ್ಕದ್ದು. ಹಾಗೂ ಅವರಿಂದ ಸ್ವಚ್ಛಮಾಡಿಸತಕ್ಕದ್ದು. ಬಾಲಿಕೆಯರು ಕೂದಲುಗಳನ್ನು ಹಿಕ್ಕೆಕೊಂಡಿದ್ದಾರೋ ಅಥವಾ ಇಲ್ಲವೋ ಎಂಬುದನ್ನು ಪರೀಕ್ಷಿಸತಕ್ಕದ್ದು. ಆ ಮೇಲೆ ವರ್ಗದ ಸಫಾಯಿ ಮಾಡಿಸತಕ್ಕದ್ದು. ನೆಲದ ಮೇಲಿನ ಕಸವಷ್ಟೇ ಅಲ್ಲ ಗೋಡೆಯ ಮೇಲಿನ ಕಸ ಸಹಿತ ಸ್ವಚ್ಛ ಮಾಡಿಸತಕ್ಕದ್ದು. ಮೇಲಿಂದ ಮೇಲೆ ಜೇಡ ಹುಳದ ಬಲೆಗಳನ್ನು ಸಹಿತ ತಗೆಯತಕ್ಕದ್ದು. ಕಸವನ್ನು ಒಟ್ಟುಗೂಡಿಸಿ ಗೊಬ್ಬರದ ಕುಣಿಯಲ್ಲಿ ಹಾಕಿಸತಕ್ಕದ್ದು. ಬಾಲ-ಬಾಲಿಕೆಯರಿಗೆ ಸ್ವಚ್ಛತೆಯ ಮಹತ್ವವನ್ನು ತಿಳಿಸಿ ಹೇಳಿ ಅವರವರ ಜೀವನಕ್ಕೆ ಸಮನಾಯವಾಗುವಂತೆ ಜ್ಞಾನವನ್ನು ಮಾಡಿಕೊಡತಕ್ಕದ್ದು. ಅಂದರೆ ಅವರು ಸ್ವಚ್ಛ ಮಾಡಿದ ಕೋಣೆಯ ಸ್ವಚ್ಛತೆಯನ್ನು ಕಾಯ್ದುಕೊಳ್ಳುವರು. ಮತ್ತು ಅವರು ಕೆಡಿಗೇಡಿ ಸ್ವಭಾವದಿಂದ ಕೆಡಿಸಲಿಕ್ಕಿಲ್ಲ. ಮನೆಯಲ್ಲಿ ಸ್ವಚ್ಛತೆಯ ಕೆಲಸದಲ್ಲಿ ಅವರು ಯಾವ ಭಾಗವನ್ನು ವಹಿಸುತ್ತಾರೆ. ಇದರ ಬಗ್ಗೆ ವಿಚಾರಿಸಿ ಅವರಿಗೆ ಯೋಗ್ಯ ಮಾರ್ಗದರ್ಶನ ಮಾಡತಕ್ಕದ್ದು. ಬಾಲ ಬಾಲಿಕೆಯರ ಬಟ್ಟೆಗಳ ಸ್ವಚ್ಛತೆಯ ಬಗ್ಗೆ ಅವರಿಗೆ ಮಾಹಿತಿ ಹೇಳಿ ಮಾರ್ಗದರ್ಶನ ಮಾಡಿ ಸಮನಾಯ ಜ್ಞಾನವನ್ನು ಕೊಡತಕ್ಕದ್ದು. ಅದೇ ಪ್ರಕಾರ ಆಹಾರದ ಘಟಕಗಳು, ಸಮತೂಕ ಆಹಾರ, ಆಹಾರ ತೆಗೆದುಕೊಳ್ಳುವ ವೇಳೆ ಇದರ ಬಗ್ಗೆ ಅವರವರ ಜೀವನಕ್ಕೆ ಸಮನಾಯ ಮಾಡಿ ಮಾಹಿತಿಯನ್ನು ಕೊಡತಕ್ಕದ್ದು. ಮೇಲೆ ಹೇಳಿದ ಚಟುವಟಿಕೆಗಳು ಜೀವನಕ್ಕೆ ಸಮನಾಯವಾಗುವಂತೆ ಜ್ಞಾನ ಪಡೆಯದೇ ಮಾಡಿಸಿದರೆ ಅದರ ಲಾಭವು ಮಕ್ಕಳಿಗೆ ಸಾಕಷ್ಟು ಆಗಲಾರದು.

ನಮ್ಮ ಶಾಲೆಗಳಲ್ಲಿ ಜ್ಞಾನವನ್ನು ಪಡೆಯುವ ಬೇರೆ ಬೇರೆ ವಿಧಾನಗಳು ಇರುತ್ತವೆ. ಓದಿ, ಮತ್ತು ಕೇಳಿ ಪಡೆಯುವ ಜ್ಞಾನಕ್ಕಿಂತ ಚಟುವಟಿಕೆಗಳನ್ನು ಪ್ರತ್ಯಕ್ಷ ಮಾಡಿ ಅನುಭವವನ್ನು ಪಡೆದು ಪ್ರಾಪ್ತವಾದ ಜ್ಞಾನವು ಶ್ರೇಷ್ಠ ಇರುತ್ತದೆಯೆಂದು ಶಿಕ್ಷಣ ತಜ್ಞರ ಅಭಿಪ್ರಾಯ ವಿದೆ. ಆದುದರಿಂದ ಜೀವನ ಶಿಕ್ಷಣದಲ್ಲಿ ಚಟುವಟಿಕೆ ಮಾಡುವದಕ್ಕೆ ಪ್ರಾಧಾನ್ಯ ಕೊಡಲಾಗಿದೆ. ಚಟುವಟಿಕೆಗಳನ್ನು ಮಾಡುವದರಿಂದ ಕೆಳಗಿನಂತೆ ಉದ್ದೇಶಗಳನ್ನು ಸಾಧಿಸಬೇಕು. (೧) ಮಕ್ಕಳಲ್ಲಿ ಸ್ವಾವಲಂಬನೆ ಹಾಗು ಹೊಣೆಗಾರಿಕೆಗಳ ಅರಿವುಂಟಾಗಬೇಕು. (೨) ಚಟುವಟಿಕೆಗಳು ಉದ್ದೇಶಪೂರ್ಣವಾಗಿರತಕ್ಕದ್ದು. (೩) ಮಕ್ಕಳ ವ್ಯಕ್ತಿತ್ವದ ಬೆಳವಣಿಗೆಗಾಗಿ ಪ್ರೇರಣೆ, ಯೋಜನೆ ಮತ್ತು ಕಾರ್ಯನಿರ್ವಹಣೆ ಅವರಿಂದ ಆಗುಹಂತೆ ಮಂತ್ರಿ ಮಂಡಳದ ಯೋಜನೆ ಇರಬೇಕು. (೪) ಪರಿಸರದ ಪರಿಪೂರ್ಣ ಜ್ಞಾನವಾಗುವಂತೆ ಪ್ರಯತ್ನಿಸತಕ್ಕದ್ದು. (೫) ಮನರಂಜನೆ ಹಾಗು ಸಾಂಸ್ಕೃತಿಕ ಚಟುವಟಿಕೆಗಳ ಮುಖಾಂತರ ಮಕ್ಕಳ ಮತ್ತು ಸಮಾಜದ ಸುಖವನ್ನು ಹೆಚ್ಚಿಸುವ ಪ್ರಯತ್ನ ಮಾಡುವದು. (೬) ಸಾಮಾಜಿಕ ಜೀವನ ಮತ್ತು ರಾಷ್ಟ್ರೀಯ ಜೀವನದಗೂಡ ಸಂಪರ್ಕವನ್ನು ಬೆಳೆಯಿಸುವದು. ಇದಕ್ಕಾಗಿ ಮಕ್ಕಳಿಗೆ ಬೇರೆ ಬೇರೆ ಚಟುವಟಿಕೆಗಳನ್ನು ಮಾಡುವದಕ್ಕೆ ಅವಕಾಶ ದೊರಕಿಸಿ ಕೊಡಬೇಕು. ಮತ್ತು ಶಿಕ್ಷಕರು ಅವರಿಗೆ ಜಾಗರೂಕತೆಯಿಂದ ಮಾರ್ಗದರ್ಶನ ಮಾಡತಕ್ಕದ್ದು.

(೧) ಇಡೀ ಶಾಲೆಯ ಕೆಲಸವನ್ನು ಸ್ವಯಂಶಾಸಿತ ಪದ್ಧತಿಯಿಂದ ಸಾಗಿಸುವದಕ್ಕಾಗಿ ಒಂದು ಮಂತ್ರಿ ಮಂಡಳವನ್ನು ಹಾಗೂ ಪ್ರತಿಯೊಂದು ವರ್ಗಕ್ಕೆ ಒಂದು ವರ್ಗ ಮಂತ್ರಿ ಮಂಡಳವನ್ನು ಮಾಡಿಕೊಳ್ಳತಕ್ಕದ್ದು, ಶಾಲೆಯ ಮುಖ್ಯ ಮಂತ್ರಿ ವರ್ಗದ ಮುಖ್ಯ ಮಂತ್ರಿಗಳ ಸಹಾಯದಿಂದ ಇಡೀ ಶಾಲೆಯ ಕೆಲಸವು ಸುಗಮವಾಗಿ ಸಾಗುವಂತೆ ನೋಡಿಕೊಳ್ಳಬೇಕು. ಬಾಲಕ ಬಾಲಿಕೆಯರ ವೈಯಕ್ತಿಕ ಸ್ವಚ್ಛತೆ ಹಾಗು ಶಾಲೆಯ ಸ್ವಚ್ಛತೆ ಕಾಯ್ದುಕೊಳ್ಳುವ ಕೆಲಸವನ್ನು ಮಾಡಿಸಿಕೊಳ್ಳುವದಕ್ಕೆ ಶಾಲೆಗೆ ಆರೋಗ್ಯ ಮಂತ್ರಿ ಹಾಗು ವರ್ಗದ ಆರೋಗ್ಯ ಮಂತ್ರಿಗಳನ್ನು ಆಯ್ದುಕೊಳ್ಳಬೇಕು. ಮೂಲೋದ್ಯೋಗದ ವಿಷಯಗಳ ಯೋಜನೆಯ ಕಾರ್ಯನಿರ್ವಹಣೆ ಸುಗಮವಾಗಿ ಸಾಗಿಸುವದಕ್ಕಾಗಿ ಶಾಲೆಯ ಹಾಗು ವರ್ಗಗಳ ಮೂಲೋದ್ಯೋಗ ಮಂತ್ರಿಗಳನ್ನು ಆಯ್ದುಕೊಳ್ಳತಕ್ಕದ್ದು. ದೈನಂದಿನ ಪ್ರಾರ್ಥನೆ ಹಾಗು ಚಿಕ್ಕ ಪ್ರವಾಸ, ಮನರಂಜನೆಯ ಕಾರ್ಯಕ್ರಮಗಳನ್ನು ಸುಗಮವಾಗಿ ಸಾಗಿಸುವದಕ್ಕಾಗಿ ಸಾಂಸ್ಕೃತಿಕ ಮಂತ್ರಿಗಳನ್ನು ಆಯ್ದುಕೊಳ್ಳತಕ್ಕದ್ದು. ಶಾಲೆಯ ಕೆಲಸವು ಸಿದ್ಧಪಡಿಸಿದ ವೇಳೆಯಂತೆ ನಡೆಯಿಸುವದಕ್ಕಾಗಿ ಗಂಟೆ ಕೊಡುವದು; ಪ್ರಾರ್ಥನೆಯು ಮುಗಿದ ನಂತರ ಬಾಲಕರ ಹಾಜರಿ ಸಂಖ್ಯೆಯನ್ನು ಮುಖ್ಯ ಗುರೂಜಿಯವರಿಗೆ ತಿಳಿಸಿ ಹೇಳುವದು; ವರ್ಗಕ್ಕೆ ಅಧಿಕಾರಿಗಳು ಅಥವಾ

ಅತಿಥಿಗಳು ಭೆಟ್ಟಿ ಕೊಟ್ಟಾಗ ಅವರ ಸತ್ಕಾರವನ್ನು ಮಾಡಿ ಅವರಿಗೆ ವರ್ಗದ ಮಾಹಿತಿ ಕೊಡುವದು; ವರ್ಗ ಗುರುಜಿಯವರು ರಜೆಯ ಮೇಲೆ ಇದ್ದಾಗ ವರ್ಗದ ಶಿಸ್ತು ಕಾಯ್ದುಕೊಂಡು ಬಾಲಕ ಬಾಲಿಕೆಯರನ್ನು ಸ್ವಾಧ್ಯಾಯದಲ್ಲಿ ತೊಡಗಿಸುವದು; ಇದಕ್ಕಾಗಿ ಸಾಲೆಯ ಸಲುವಾಗಿ ಒಬ್ಬ ಗೃಹಮಂತ್ರಿ ಮತ್ತು ಪ್ರತಿಯೊಂದು ವರ್ಗಕ್ಕೆ ಒಬ್ಬ ವರ್ಗ ಮಂತ್ರಿಯನ್ನು ಆಯ್ದುಕೊಳ್ಳತಕ್ಕದ್ದು. ಸಾಲೆಯಲ್ಲಿ ಶಾರೀರಿಕ ಶಿಕ್ಷಣದ ಚಟುವಟಿಕೆಗಳನ್ನು ಸರಿಯಾಗಿ ಮಾಡಿಸುವದಕ್ಕಾಗಿ ಒಬ್ಬ ಶಾಲೆಯ ಆಟದ ಮಂತ್ರಿ ಮತ್ತು ಪ್ರತಿಯೊಂದು ವರ್ಗಕ್ಕೆ ಸಹಿತ ಒಬ್ಬ ಆಟದ ಮಂತ್ರಿಯನ್ನು ಆಯ್ದುಕೊಳ್ಳತಕ್ಕದ್ದು. ಪ್ರತಿ ತಿಂಗಳಿಗೊಮ್ಮೆ ಮಂತ್ರಿ ಮಂಡಳದ ಸಭೆ ಮಾಡಿ ಅದರಲ್ಲಿ ಆದ ಗೊತ್ತುವಳಿಗಳನ್ನು ಬರೆದು ಇಡಬೇಕು, ಸಾಲೆಯ ಪ್ರಧಾನ ಗುರೂಜಿಯವರು ಸ್ಥಿರ ಅಧ್ಯಕ್ಷ, ಒಂದನೆ ಅಸಿಸ್ಟಂಟ ಇವರು ಸ್ಥಿರ ಉಪಾಧ್ಯಕ್ಷ ಎಂದು ಕೆಲಸ ಮಾಡತಕ್ಕದ್ದು. ಇತರ ಉಪಗುರೂಜಿಯವರು ಮಾರ್ಗದರ್ಶಕರೆಂದು ಸಹಾಯ ಮಾಡತಕ್ಕದ್ದು. ಬಾಲ ಬಾಲಿಕೆಯವರು ವಿಚಾರ ಪೂರ್ಣವಾಗಿ ಮುಂದಾಳು ಆಗುವಂತೆ ಮತ್ತು ಎಲ್ಲರಿಗೆ ವಿಧಾನದ ಆಜ್ಞಾಪಾಲನೆ ಮಾಡುವ ರೂಢಿಯಾಗುವಂತೆ ನೋಡಿಕೊಳ್ಳಬೇಕು. ದೈನಿಕ ಕೆಲಸದಲ್ಲಿ ಆದ ಕಾರ್ಮಿಕ ತಪ್ಪುಗಳ ಬಗ್ಗೆ ಹಾಗು ಬರುವ ತೊಂದರೆ ತೊಡಕುಗಳ ಬಗ್ಗೆ ಅವು ಸಭೆಯಲ್ಲಿ ವಿಚಾರವಿನಿಮಯವನ್ನು ಮಾಡುವದು ಅತ್ಯವಶ್ಯ. ಸ್ವತಂತ್ರ ಭಾರತಕ್ಕೆ ಅವಶ್ಯಕ ಇರುವ ಉತ್ತಮ ಮುಂದಾಳುಗಳು ಮತ್ತು ಉತ್ತಮ ಸಮಾಜ ಜೀವಿ ನಾಗರಿಕರು ತಯಾರಾಗುವದು ಇದೇ ಜೀವನ ಶಿಕ್ಷಣದ ಧ್ಯೇಯ ಇರುತ್ತದೆ. ಸಾಲೆಗಳಲ್ಲಿ ಸ್ವಯಂ ಪ್ರೇರಿತ ಶಿಸ್ತು ಮತ್ತು ಸಂಘಟನೆ ಇದೇ ನಮ್ಮ ಬೇಡಿಕೆಯಾಗಿದೆ. ಸಾಲೆಯಲ್ಲಿ ಇಡೀ ವರ್ಷದಲ್ಲಿ ಮಾಡಬಹುದಾದ ಉದ್ದೇಶಪೂರ್ಣ ಚಟುವಟಿಕೆಗಳ ಒಂದು ಯೋಜನೆಯನ್ನು ತಯಾರಿಸಿಕೊಂಡು ಜೂನ ತಿಂಗಳಲ್ಲಿ ಬರಿದಿಡತಕ್ಕದ್ದು. ಪ್ರತಿಯೊಂದು ಚಟುವಟಿಕೆಯ ಪ್ರೇರಣೆ ಬಾಲಕ ಬಾಲಿಕೆಯರಿಗೆ ಸ್ವಾಭಾವಿಕವಾಗಿಯಾಗುವಂತೆ ಎಲ್ಲ ಗುರೂಜಿಯವರು ಚಾಲನೆ ಕೊಡಬೇಕು. ಆ ನಂತರ ಯೋಜನೆ ಮತ್ತು ಕೆಲಸದ ವಿಭಜನೆ ಮಾಡಿಕೊಂಡು ಸರಿಯಾಗಿ ಕಾರ್ಯನಿರ್ವಹಣೆಯಾಗುವಂತೆ ಪ್ರಯತ್ನಿಸತಕ್ಕದ್ದು. ಕೊನೆಗೆ ಮರುದಿವಸ ಆಮಸಭೆಯಲ್ಲಿ ಚರ್ಚೆ ಮಾಡತಕ್ಕದ್ದು. ಚಟುವಟಿಕೆಯ ಉದ್ದೇಶಗಳು ಎಷ್ಟರ ಮಟ್ಟಿಗೆ ಸಾಧ್ಯವಾಗಿವೆ ಇದನ್ನು ಪರಿಶೀಲಿಸಬೇಕು. ಸಾಲೆಗಳಲ್ಲಿ ನಡೆಯುವ ದಿನಾಚರಣೆಗಳ ಉದ್ದೇಶವು ಬಾಲಕ ಬಾಲಿಕೆಯರಿಗೆ ಸರಿಯಾಗಿ ತಿಳಿಯುವಂತೆ ಆಚರಿಸತಕ್ಕದ್ದು.

ಸಾಲೆಗಳಲ್ಲಿ ನಡೆಯತಕ್ಕ ಮೂಲೋದ್ಯೋಗವನ್ನು ಉತ್ತಮ ಫಲನಿಷ್ಪತ್ತಿಯಾಗುವಂತೆ ಬಾಲಕ ಬಾಲಿಕೆಯರಿಗೆ ಉಪಕ್ರಿಯೆಗಳ ತಾತ್ವಿಕ ಜ್ಞಾನವನ್ನು ಸಕಾಲಕ್ಕೆ ಕೊಟ್ಟು ಗುರೂಜಿಯವರ ಮಾರ್ಗದರ್ಶನದಲ್ಲಿ ನಡೆಯತಕ್ಕದ್ದು. ಕೆಲಸದಲ್ಲಿಯಾದ ಕಾರ್ಮಿಕ ತಪ್ಪುಗಳನ್ನು ಆಗಿಂದಾಗ ವಿಶದೀಕರಿಸಿ ಮೂಲೋದ್ಯೋಗವು ಲಾಭಕರವಾಗುವಂತೆ ಪ್ರಯತ್ನಿಸತಕ್ಕದ್ದು. ಬಾಲಕ ಬಾಲಿಕೆಯರಿಗೆ ಎಲ್ಲ ಉಪಕರಣಗಳ ಸರಿಯಾದ ಉಪಯೋಗವನ್ನು ಮಾಡಲಿಕ್ಕೆ ಕಲಿಸತಕ್ಕದ್ದು. ಕೆಲಸ ಪೂರ್ಣವಾದ ಮೇಲೆ ಎಲ್ಲ ಉಪಕರಣಗಳನ್ನು ಯೋಗ್ಯ ಸ್ಥಳದಲ್ಲಿ ಸುರಕ್ಷಿತವಾಗಿ ಇಡುವ ವ್ಯವಸ್ಥೆ ಮಾಡುವಂತೆ ಜಾಗ್ರತೆ ವಹಿಸತಕ್ಕದ್ದು. ಭಾರತೀಯ ಜೀವನ ಶಿಕ್ಷಣ ಸಾಲೆಗಳಲ್ಲಿ ಜೀವನಕ್ಕೆ ಮೂಲಭೂತ ಇರತಕ್ಕ ಬೇಡಿಕೆಗಳನ್ನು ಪೂರೈಸುವದಕ್ಕಾಗಿ (೧) ನೂಲುವದು ಮತ್ತು ನೇಯಿಗೆ, (೨) ಕಾಗದ, ರಟ್ಟಿನ ಕೆಲಸ ಹಾಗು ಬಡಿಗತನ (೩) ಕೈತೋಟ ಹಾಗು ಒಕ್ಕಲತನ ಇವುಗಳನ್ನು ಆಯ್ದುಕೊಳ್ಳಲಾಗಿವೆ. ಇವುಗಳಲ್ಲಿ ನೇಯಿಗೆ, ಬಡಿಗತನ ಮತ್ತು ಒಕ್ಕಲತನ ಇವು ಮುಖ್ಯ, ಮತ್ತು ನೂಲುವದು, ಕಾಗದದ ಮತ್ತು ರಟ್ಟಿನ ಕೆಲಸ, ಕೈತೋಟ ಇವು ಉಪ ಮೂಲೋದ್ಯೋಗವೆಂದು ಪರಿಗಣಿಸಲಾಗಿವೆ. ಪರಿಸರದ ಜ್ಞಾನವಾಗಬೇಕೆಂದು ಬೇರೆ ಬೇರೆ ಚಟುವಟಿಕೆಗಳನ್ನು ಮಾಡಿಸತಕ್ಕದ್ದು. ಊರ ಜನರ ಸಂಪರ್ಕ ಬೆಳೆಯುವಂತೆ ಸಾಲೆಯ ವರ್ಧಂತಿ, ಶಾರೀರಿಕ ಶಿಕ್ಷಣ ದಿನ, ಸಮಾಜ ಶಿಕ್ಷಣ ದಿನ, ಜೀವನ ಶಿಕ್ಷಣ ಸಪ್ತಾಹ, ಗ್ರಾಮಸುಧಾರಣ ಸಪ್ತಾಹ ಮೊದಲಾದ ದಿನಗಳನ್ನು ಆಚರಿಸತಕ್ಕದ್ದು. ಬಾಲಕ ಬಾಲಿಕೆಯರ ಸುಖವನ್ನು ಬೆಳೆಯಬೇಕೆಂದು ಕಾವ್ಯಗಾಯನ ಸ್ಪರ್ಧೆ, ಭಜನೆ, ಸಾಂಸ್ಕೃತಿಕ ಕಾರ್ಯಕ್ರಮಗಳು, ವನಭೋಜನ ಮೊದಲಾದ ಚಟುವಟಿಕೆಗಳ ಯೋಜನೆ ಇಡತಕ್ಕದ್ದು. ಬಾಲಕ ಬಾಲಿಕೆಯರು ಪಾಲಕರಿಗೆ ನೆರವು ಕೊಡುವ ಹಾಗು ಸಮಾಜ ಸೇವೆ ಮತ್ತು ಸ್ವಾಧ್ಯಾಯ ಮಾಡುವ

ವಿಧಾನಗಳನ್ನು ಅವರಿಗೆ ಸರಿಯಾಗಿ ತಿಳಿಸಿ ಅವರ ದಿನ ಚರಿಗಳನ್ನು ಸಕಾಲಕ್ಕೆ ಬರೆಯುವಂತೆ ಹಾಗು ವಾರ ಕ್ಕೊಮ್ಮೆ ಅವುಗಳನ್ನು ಪರಿಶೀಲನೆ ಮಾಡುವಂತೆ ನೋಡಿ ಕೊಳ್ಳತಕ್ಕದ್ದು, ಇದರಿಂದ ಸ್ವಾವಲಂಬಿ, ಸಮಾಜಜೀವಿ ಉತ್ತಮ ನಾಗರಿಕರಾದುದು, ಹಾಗು ಪರಿವರ್ತನೆ ನಮ್ಮ ಮಕ್ಕಳಲ್ಲಿ ಎಷ್ಟರ ಮಟ್ಟಿಗೆ ಬಂದಿದೆಯೆಂಬುವದು ನಮಗೆ ಗೊತ್ತಾಗಬಹುದು.

೧೯೫೬ ರಲ್ಲಿ ನಮ್ಮ ಕೇಂದ್ರ ಸರಕಾರದವರು ಶ್ರೀ ಜಿ. ರಾಮಚಂದ್ರನ್, ಗಾಂಧಿಗ್ರಾಮದ ಡಾಯರೆಕ್ಟರ ಸಾಹೇಬರ ನೇತೃತ್ವದಲ್ಲಿ ಒಂದು ಉಪಸಮಿತಿಯನ್ನು ನಿಯಮಿಸಿದರು. ಸಮಿತಿಯವರು ಎಲ್ಲ ರಾಜ್ಯಗಳಲ್ಲಿ ತಿರುಗಾಡಿ ಜೀವನ ಶಿಕ್ಷಣ ಸಾಲೆಗಳಲ್ಲಿಯ ಪ್ರಗತಿಯ ಪರಿ ಶೀಲನೆ ಮಾಡಿದರು. ಭಾರತದಲ್ಲಿ ಸಧ್ಯಕ್ಕೆ ಇರುವ ಜೀವನ ಶಿಕ್ಷಣ ಸಾಲೆಗಳ ಪ್ರಮಾಣವು ಬಹಳ ಕಡಿಮೆಯಿರುತ್ತದೆ. ಇನ್ನು ಸಾದಾ ಸಾಲೆಗಳು ಬಹಳಷ್ಟಿವೆ. ಎಲ್ಲ ಸಾಲೆಗಳನ್ನು ಜೀವನ ಶಿಕ್ಷಣ ಸಾಲೆಗಳನ್ನಾಗಿ ಪರಿವರ್ತಿಸುವದು ಬಹಳ ದುಸ್ತರವಾದ್ದರಿಂದ ನಾವು ಉಳಿದ ಸಾಲೆಗಳನ್ನು ಮೂಲೋದ್ಯೋಗ ವಿರಹಿತ ಸಾದಾ ಜೀವನ ಶಿಕ್ಷಣ ಸಾಲೆಗಳನ್ನಾಗಿ ಪರಿವರ್ತಿಸಿ ಅವುಗಳಲ್ಲಿ ಮೂಲೋದ್ಯೋಗವನ್ನು ಬಿಟ್ಟು ಇತರ ಚಟುವಟಿಕೆಗಳನ್ನು ಪ್ರಾರಂಭಿಸುವದು ಯೋಗ್ಯ ಮಾರ್ಗ. ಕ್ರಮಶಃ ಈ ಸಾಲೆಗಳಲ್ಲಿ ಮೂಲೋದ್ಯೋಗವನ್ನು ಪ್ರಾರಂಭಿಸಿ ಕೊನೆಗೆ ಎಲ್ಲ ಸಾಲೆಗಳು ಪೂರ್ಣ ಜೀವನ ಶಿಕ್ಷಣ ಸಾಲೆಗಳೆಂದು ಪರಿವರ್ತಿಸಬಹುದು. ಈ ಯೋಜನೆ ಅತಿ ತೀವ್ರ ಗತಿಯಲ್ಲಿನಲ್ಲಿ ತರಬೇಕೆಂದು ಕೇಂದ್ರ ಸರಕಾರದ ಆದೇಶವಿದೆ.

ಜೀವನ ಶಿಕ್ಷಣ ಸಾಲೆಗಳಲ್ಲಿ ನಾವು ಇತರ ಬೌದ್ಧಿಕ ವಿಷಯಗಳ ಕಡೆಗೆ ಸಾಕಷ್ಟು ಲಕ್ಷ್ಯವನ್ನು ಪೂರೈಸ ತಕ್ಕದ್ದು. ಮಹಾತ್ಮಾ ಗಾಂಧಿಯವರ ಹೇಳಿಕೆಯ ಪ್ರಕಾರ ನಾವು ಬಾಲಕರ ಹಸ್ತಾಕ್ಷರವು ಉತ್ತಮವಾಗುವಂತೆ ಲಕ್ಷ್ಯವನ್ನು ಪೂರೈಸತಕ್ಕದ್ದು. (ಕೆಟ್ಟ ಹಸ್ತಾಕ್ಷರ ಇದು ಅಪೂರ್ಣ ಶಿಕ್ಷಣದ ಗುರುತು– ಗಾಂಧೀಜಿ) ಬಾಲಕ ಬಾಲಿಕೆಯರು ತಮ್ಮ ಲೇಖನವನ್ನು ಪೂರ್ಣ ವಿಚಾರಿಸಿ ಪಕ್ಕಾ ಬರೆಯುವಂತೆ ನೋಡಿಕೊಳ್ಳತಕ್ಕದ್ದು. ಹಸ್ತಲಿಖಿತ ಮಾಸಪತ್ರಿಕೆ, ಕಾವ್ಯಗಾಯನ, ಸಾಂಘಿಕ ಗೀತೆ, ವಾಕ್‌ಸ್ಪರ್ಧೆ ಮೊದಲಾದ ಕಾರ್ಯಕ್ರಮಗಳನ್ನು ರಚಿಸಿ ಬಾಲ ಬಾಲಿಕೆಯರ ಸರ್ವಾಂಗೀಣ ಉನ್ನತಿಯಾಗುವಂತೆ ನೋಡಿಕೊಳ್ಳತಕ್ಕದ್ದು. ಭಾರತದ ಎಲ್ಲ ನಾಗರಿಕರು ಸಮಾಜ ಜೀವಿ, ಸ್ವಾವಲಂಬಿ, ಜ್ಞಾನ, ಬಲ ಮತ್ತು ಶೀಲ ಸಂಪನ್ನರಾಗಲೆಂದು ಪ್ರಾರ್ಥಿಸುವೆನು. ಈ ಸುದಿನವು ಬೇಗನೆ ಬರಲಿ— ಜಯ್ ಜಗತ್.

ಪಾಶ್ಚಿಮಾತ್ಯರ ಸಾಮಾಜಿಕ ಪ್ರಜ್ಞೆ ಹಾಗೂ ಅವರ ಶೈಕ್ಷಣಿಕ ದೃಷ್ಟಿ

ಲೇಖಕರು :— **ಶ್ರೀ ಮ. ಗು. ಶಿವಾರಿ,** ಅ. ಮಾ. ಕ. ಶಾ. ನಂ. ೧, ಬೆಳಗಾವಿ

[ಬೆಳಗಾವಿಯ ಬಿ. ಟಿ. ಕಾಲೇಜಿನ ಹಿಂದಿನ ಪ್ರಿನ್ಸಿಪಾಲರಾದ ಶ್ರೀ ವ್ಹಿ. ಬಿ. ದೇಸಾಯಿ, ಅವರು ಅಮೇರಿಕೆಯ ಸಂಯುಕ್ತ ಸಂಸ್ಥಾನದ ಯಾತ್ರೆ ಮುಗಿಸಿ ಇದೀಗ ಭಾರತಕ್ಕೆ ಬಂದಿದ್ದಾರೆ. ಅವರು ಅಲ್ಲಿಯ ಕೆಲ ಶೈಕ್ಷಣಿಕ ಅನುಭವಗಳನ್ನು ದಿ. ೨೦–೩–೬೦ರಂದು ಬೆಳಗಾವಿ ಮರಾಠಿ ಎಸೆಯ ನಂಬರಿನ ಶಾಲೆಯಲ್ಲಿ ಶಿಕ್ಷಕರಿಗಾಗಿ ಏರ್ಪಡಿಸಿದ ಸಭೆಯಲ್ಲಿ ನಿರೂಪಿಸಿದ್ದಾರೆ. ಅವರ ಭಾಷಣದ ಮುಖ್ಯಾಂಶಗಳನ್ನೆತ್ತಿಕೊಂಡು ಪ್ರಸ್ತುತ ಲೇಖನ ಬರೆಯಲಾಗಿದೆ.]

ಅಮೇರಿಕೆಯ ಸಾಮಾಜಿಕ ಸ್ಥಿತಿಗತಿ

ಭಾರತದ ಸುಮಾರು ಏಳುಪಟ್ಟು ವಿಸ್ತೀರ್ಣವುಳ್ಳ ಅಮೇರಿಕೆಯ ಸಂಯುಕ್ತ ಸಂಸ್ಥಾನದಲ್ಲಿ ಭಾರತದಲ್ಲಿಯಷ್ಟು ಜನಸಾಂದ್ರತೆಯಿಲ್ಲ. ಅಲ್ಲಿಯ ೧೮ ಕೋಟಿ ಜನಸಂಖ್ಯೆಯೆತ್ತ! ಇಲ್ಲಿಯ (ಭಾರತದ) ೪೦ ಕೋಟಿ ಜನಸಂಖ್ಯೆಯೆತ್ತ! ಒಂದಕ್ಕೊಂದು ಅಜಗಜಾಂತರ! ಅಲ್ಲಿಯ ಜನರು ನೂರಕ್ಕೆ ನೂರರಷ್ಟು ಸಾಕ್ಷರರು; ಕಲಿತವರು. ಅವರಲ್ಲಿ ೧೦೦ಕ್ಕೆ ೯೦ ರಷ್ಟು ಜನರು

ಮಾಧ್ಯಮಿಕ ಶಿಕ್ಷಣವನ್ನು ಪಡೆದವರಾಗಿರುತ್ತಾರೆ. ಈ ದೇಶದಲ್ಲಿಯ ಸಾಮಾಜಿಕ ಸ್ಥಿತಿಯು ಭಿನ್ನಸ್ವರೂಪದ್ದಾಗಿದೆ. ಅಲ್ಲಿ ವಿಭಕ್ತ ಕುಟುಂಬಗಳೇ ಹೆಚ್ಚು. ಮಕ್ಕಳು ಸಾಮಾನ್ಯವಾಗಿ ೧೮ ವರ್ಷದವರಾಗುವವರೆಗೆ ತಂದೆ ತಾಯಿಗಳ ಹತ್ತರ ಇರಬಹುದಾಗಿದೆ. ಪ್ರಾಪ್ತವಯಸ್ಕರಾಗಿ ಮದುವೆಯಾದ ಮೇಲೆ ಬೇರೆ ಮನೆಮಾಡಿಕೊಂಡೇ ಇರುತ್ತಾರೆ. ವಿವಾಹ ವಿಚ್ಛೇದನಗಳು ಈ ನಾಡಿನಲ್ಲಿ ವಿಶೇಷವಾಗಿವೆ. ಇದರಿಂದಾಗಿ ಮಕ್ಕಳ ಪಾಲನೆ ಪೋಷಣೆಯ ಭಾರವನ್ನು ಕೆಲವು ಸಲ ವಿಚ್ಛೇದನ ಬಯಸಿದ ತಂದೆ ತಾಯಿಗಳು ತಮ್ಮ ತಮ್ಮಲ್ಲಿ ಹಂಚಿಕೊಳ್ಳುತ್ತಾರೆ. ಇಲ್ಲವಾದರೆ ಇಂಥ ಮಕ್ಕಳನ್ನು ಸಮಾಜದ ಮನೆಗಳಲ್ಲಿ ಬಿಟ್ಟುಕೊಡುತ್ತಾರೆ. ಈ ಮಕ್ಕಳ ಪಾಲನೆ-ಪೋಷಣೆಯ ಯಾವತ್ತೂ ಭಾರವು ಸಮಾಜದ ಮನೆಯ ಮೇಲೆಯೇ ಬೀಳುತ್ತದೆ. ಆದರೂ ಯಾವ ಮಗುವೂ ಬೀದಿಯ ಪಾಲಾಗಿ ನಮ್ಮಲ್ಲಿಯಂತೆ ಗೋಳಾಡುವದಿಲ್ಲ. ಸಮಾಜದ ಮನೆಯಲ್ಲಿ ಮಗುವು ಯೋಗ್ಯ ಪಾಲನೆ-ಪೋಷಣೆಯೊಂದಿಗೆ ಬೆಳೆಯುತ್ತದೆ. ಇಂಥ ಮಗುವನ್ನು ಸಾಮಾಜಿಕರು ಗೌರವದಿಂದ ಕಾಣುವರು. ಸಾಮಾಜಿಕ ಪರಿಸರದಲ್ಲಿ ಬೆಳೆಯುವ ಇಂಥ ಮಗುವಿನ ಶಿಕ್ಷಕನು ತಂದೆ-ತಾಯಿಗಳ ಪಾತ್ರವಾಡಿ ಅದಕ್ಕೆ ಅವಶ ವಿರುವ ಮಾನಸಿಕ, ನೈತಿಕ ಹಾಗೂ ಬೌದ್ಧಿಕ ಬೆಳವಣಿಗೆಗೆ ಸಹಾಯಕನಾಗಿರುತ್ತಾನೆ. ಎಷ್ಟೋ ಸದ್ಗೃಹಸ್ಥರು ತಮ್ಮ ಪ್ರೀತಿಯ ಮಕ್ಕಳೊಂದಿಗೆ ಇಂಥ ಸಾಮಾಜಿಕ ಮಕ್ಕಳನ್ನು ಕಾಸಾಡುತ್ತಾರೆಲ್ಲದೆ ಅವರ ಯೋಗ್ಯ ಪಾಲನೆ-ಪೋಷಣೆ ಮಾಡಿ ತಕ್ಕ ಶೈಕ್ಷಣಿಕ ಸವಲತ್ತುಗಳನ್ನು ನೀಡಿ ಬೆಳೆಸುತ್ತಾರೆ. ಇಂಥ ಮಕ್ಕಳು ಬೆಳೆದು ಸನ್ಮಾನ್ಯ ನಾಗರಿಕರಾಗಿ ಬೆಳೆಯಲು ಈ ದೇಶದಲ್ಲಿ ಸಾಕಷ್ಟು ಅವಕಾಶವಿದೆ.

ಶಿಕ್ಷಣ ದೃಷ್ಟಿ

ಈ ದೇಶದಲ್ಲಿ ಶಿಕ್ಷಣದ ಸಮಸ್ತ ಜೊಣೆಯು ಜನತಾ ಪ್ರತಿನಿಧಿಗಳ ಮೇಲಿರುತ್ತದೆ. ಸುಮಾರು ೨ಲಕ್ಷ ಜನಸಂಖ್ಯೆಯುಳ್ಳ ಕ್ಷೇತ್ರವನ್ನು ಶೈಕ್ಷಣಿಕ ಜಿಲ್ಲೆಯೆಂದು ಕರೆದು ಅದಕ್ಕೊಂದು ಶಾಲಾ ಸಮಿತಿ (School Board) ಏರ್ಪಟ್ಟಿರುತ್ತದೆ. ಆ ಸಮಿತಿಯ ಸದಸ್ಯರೆಲ್ಲ ಜನತಾ ಪ್ರತಿನಿಧಿಗಳಾಗಿರುತ್ತಾರೆ. ಅವರು ಸರಕಾರದಿಂದ ಕರತೆರಿಗೆಯಲ್ಲಿಯ ಸುಮಾರು ನೂರಕ್ಕೆ ಐದರಷ್ಟು ಹಣ ಪಡೆದು ಇಂಥ ಶಿಕ್ಷಣ ಸಮಿತಿಗಳನ್ನು ಸಂಘಟಿಸಿಕೊಂಡು ಹೋಗುತ್ತಾರೆ. ಶಾಲಾಸಮಿತಿಯವರೇ ವರಿಷ್ಠ ಶಿಕ್ಷಣಾಧಿಕಾರಿಗಳನ್ನು ಹಾಗೂ ಶಿಕ್ಷಕರನ್ನು ಆಯ್ಕೆಮಾಡುತ್ತಾರೆ. ಅವರ ಸಂಬಳ ಸಾರಿಗೆಯನ್ನು ಗೊತ್ತುಪಡಿಸುವರಲ್ಲದೆ ಪಾಠ್ಯಕ್ರಮವನ್ನು ರೂಪಿಸುವಾಗ ಅನುಭವಿಕ ಶಿಕ್ಷಕರಿಂದ ಸಲಹೆ ಸೂಚನೆಗಳನ್ನು ಪಡೆಯುತ್ತಾರೆ. ಅವರ ಅಭಿಪ್ರಾಯಗಳಲ್ಲಿ ಮುಕ್ಕಾಲು ಪಾಲಿನಷ್ಟು ಸ್ವೀಕರಿಸಿ ಅವುಗಳನ್ನು ಕಾರ್ಯಕಾರೀ ಮಾಡುತ್ತಾರೆ. ಆದ್ದರಿಂದ ಇಲ್ಲಿಯ ಶಿಕ್ಷಕರ ಮೇಲೆ ಗುರುತರವಾದ ಕರ್ತವ್ಯಭಾರವಿರುವದಲ್ಲದೆ ಅವರು ಹೆಚ್ಚು ಶೈಕ್ಷಣಿಕ ಪಾತ್ರತೆಯುಳ್ಳವರಾಗಿರುತ್ತಾರೆ. ಶಾಲೆಗಳ ಏಳ್ಗೆಗಾಗಿ ಪಾಲಕ ಶಿಕ್ಷಕ ಸಂಘಗಳು ಏರ್ಪಟ್ಟಿರುತ್ತವೆ. ಈ ಸಂಘಗಳು ಶಾಲೆಯ ಯಾವತ್ತೂ ಅವಶ್ಯಕತೆಗಳನ್ನು ಪೂರೈಸುತ್ತವೆ.

ಶಿಕ್ಷಕರ ಸ್ಥಿತಿಗತಿ

ಈ ದೇಶದಲ್ಲಿಯ ಶಿಕ್ಷಕರೆಲ್ಲರೂ ಸಮಾನ ಶೈಕ್ಷಣಿಕ ದರ್ಜೆಯುಳ್ಳವರಿರುವರು. ಶಿಕ್ಷಕನಾಗುವವನು ನಮ್ಮಲ್ಲಿಯ ಎಂ.ಎ. ದಷ್ಟು ಓದಿದವನು ಇರುವನು. ಅವನು ಪ್ರಾಥಮಿಕ ವರ್ಗಗಳಿಗೂ ಕಲಿಸಬಹುದು. ಶಿಕ್ಷಕರು ತಮಗೆ ಒಗ್ಗುವ ತರಗತಿಗಳಿಗೆ ಪಾಠ ಹೇಳಿಕೊಡಬಹುದು. ಮಕ್ಕಳನ್ನು ಪ್ರೀತಿಸುವ ಸ್ವಭಾವವುಳ್ಳವರು ಪ್ರಾಥಮಿಕ ವರ್ಗಗಳಿಗೆ ಪಾಠ ಹೇಳಿಕೊಡುವರು. ಬೇಜಾರು ಬಂದಲ್ಲಿ ಪ್ರಾಥಮಿಕ ವರ್ಗಬಿಟ್ಟು ಮಾಧ್ಯಮಿಕ ಹಂತದಲ್ಲಿಯ ವರ್ಗಕ್ಕೆ ಪಾಠ ಹೇಳಿಕೊಡಲು ಅನುಕೂಲವಿರುತ್ತದೆ. ಆದರೆ ಅವನ ಸಂಬಳ ಸಾರಿಗೆಯಲ್ಲಿ ಯಾವ ವ್ಯತ್ಯಾಸವೂ ಆಗಲಾರದು. ಶಿಕ್ಷಕರ ಶೈಕ್ಷಣಿಕ ಪಾತ್ರತೆ ನೋಡಿ ಸಂಬಳ ಕೊಡುತ್ತಾರೆ. ನಮ್ಮಲ್ಲಿಯಂತೆ ಪ್ರಾಥಮಿಕ ಹಂತದಲ್ಲಿ ದುಡಿಯುವವರಿಗೆ ಕಡಿಮೆ, ಮಾಧ್ಯಮಿಕ ಹಂತದಲ್ಲಿ ದುಡಿಯುವವರಿಗೆ ಸ್ವಲ್ಪ ಹೆಚ್ಚು, ಹೀಗಿರುವದಿಲ್ಲ. ಶಿಕ್ಷಕನ ಆರಂಭ ಸಂಬಳ ಈ ದೇಶದಲ್ಲಿ ಸುಮಾರು ೪೦೦ ಇಲ್ಲವೆ ೫೦೦ ಡಾಲರು ಇರುತ್ತದೆ. ಕೊನೆಯ ಸಂಬಳ ೨,೦೦೦ ಇಲ್ಲವೆ ೩,೦೦೦ ಡಾಲರು ಇರುತ್ತದೆ. ಈ ಅಂಕಿ ಸಂಖ್ಯೆಗಳನ್ನು ನೋಡಿ ನಮ್ಮ ದೇಶದ ಶಿಕ್ಷಕರು ಬೆಚ್ಚಿಬೀಳಬಹುದು. ಆದರೆ ಈ ದೇಶದ ಜೀವನಪಟ್ಟವನ್ನು ತಿಳಿವಾಗ ಈ ತರದ ಸಂಬಳ ಸಾರಿಗೆ ಅಷ್ಟೇನು ಹೆಚ್ಚಿನದಲ್ಲವೆಂದು ಕಂಡು ಬರುತ್ತದೆ. ಅಮೇರಿಕೆಯ ಒಬ್ಬ ಸಾಮಾನ್ಯ ಮನುಷ್ಯನ ಜೀವನ

ವೆಚ್ಚ ತಿಂಗಳಿಗೆ ೨೫೦ ಡಾಲರು ಇರುತ್ತದೆ. ಶಿಕ್ಷಕನಿಗೆ ಸಾಮಾನ್ಯ ಮನುಷ್ಯನ ಜೀವನ ವೆಚ್ಚದ ಸುಮಾರು ೨ ಪಟ್ಟು ಸಂಬಳ ಸಿಗುತ್ತದೆಂದಾಯಿತು. ನಮ್ಮಲ್ಲಿ ಒಬ್ಬ ಸಾಮಾನ್ಯ ಮನುಷ್ಯನ ಜೀವನ ವೆಚ್ಚ ಈಗ ತಿಂಗಳಿಗೆ ೨೫ ರೂ. ಇನ್ನು, ಪ್ರಾ. ಶಿಕ್ಷಕನ ಸಂಬಾರ ೭೫ ರಿಂದ ೮೦ ರೂ. ಅಂದರೆ ನಮ್ಮಲ್ಲಿ ಸಾಮಾನ್ಯ ಮನುಷ್ಯನ ಜೀವನ ವೆಚ್ಚದ ಸುಮಾರು ೩ ಪಟ್ಟು ಸಂಬಳ ಶಿಕ್ಷಕರಿಗೆ ಸಿಗುತ್ತದೆ. ಪ್ರಾಥಮಿಕ ಶಾಲೆಗಳಲ್ಲಿ ಹೆಚ್ಚಾಗಿ ಶಿಕ್ಷಕಿಯರೇ (೧೦೦ಕ್ಕೆ ೯೦ರಷ್ಟು) ಕೆಲಸ ಮಾಡುತ್ತಾರೆ. ಮಾಧ್ಯಮಿಕ ಹಂತದಲ್ಲಿ ನೂರಕ್ಕೆ ೪೦ರಷ್ಟು ಶಿಕ್ಷಕಿಯರು ಇರುತ್ತಾರೆ. ಶಿಕ್ಷಕರ ಕಾರ್ಯಕ್ಷಮತೆಯ ಬಗ್ಗೆ ಈ ದೇಶದಲ್ಲಿ ಹೆಚ್ಚಿಗೆ ಗಮನಕೊಡುವರು. ಶಾಲಾಸಮಿತಿಯವರು ಮುಖ್ಯಾಧ್ಯಾಪಕರಿಂದ ೩ ಸಲ ಶಿಕ್ಷಕನೊಬ್ಬನ ಬಗ್ಗೆ ಕಾರ್ಯಕ್ಷಮತೆಯ ಬಗ್ಗೆ ದೂರು ಬಂದುದಾದರೆ ವಿಚಾರಣೆ ನಡೆಸುವರು. ತಪ್ಪಿತಸ್ಥರನ್ನು ಕೆಲಸದಿಂದ ತೆಗೆದುಹಾಕುವರು.

ಶಾಲಾ ಕಟ್ಟಡ

ಈ ದೇಶದಲ್ಲಿ ಶಾಲಾ ಕಟ್ಟಡಗಳು ಭವ್ಯವಾಗಿ ವಿಶಾಲವಾಗಿ ಇರುವವು. ಒಂದು ಪ್ರಾಥಮಿಕ ಶಾಲೆಗೆ ಹೊಂದಿ ಸುಮಾರು ೨೫ ಎಕರೆ ಸ್ಥಳ, ಮಾಧ್ಯಮಿಕ ಶಾಲೆಗೆ ೫೦ ರಿಂದ ೧೦೦ ಎಕರೆ ಸ್ಥಳ ಹಾಗೂ ಕಾಲೇಜು ವಿಶ್ವವಿದ್ಯಾಲಯಗಳಿಗೆ ಸಾವಿರಾರು ಎಕರೆ ಸ್ಥಳ ಇರುತ್ತದೆ. ಹುಡುಗರ ವಸತಿ, ಆಟದ ಬೈಲು, ತೋಟ, ಹೊಲ ಇತ್ಯಾದಿ ಶಾಲೆಗೆ ಹೊಂದಿ ಸಮೀಪದಲ್ಲಿರುವವು.

ಶಿಕ್ಷಣದ ಕ್ರಮ

ಈ ದೇಶದಲ್ಲಿ ಪ್ರಾಥಮಿಕ ಹಾಗೂ ಮಾಧ್ಯಮಿಕ ಹಂತಗಳು ಸೇರಿ ೧೩ ವರ್ಷದ ಅಭ್ಯಾಸಕ್ರಮ ಏರ್ಪಟ್ಟಿರುತ್ತದೆ. ಶಾಲೆಗಳಲ್ಲಿ ವಿಷಯವಾರ ಶಿಕ್ಷಕರಿರುತ್ತಾರೆ. ವರ್ಗದಲ್ಲಿ ಹುಡುಗರ ಬುದ್ಧಿಮಟ್ಟಕ್ಕನುಸರಿಸಿ ಸಾಮಾನ್ಯವಾಗಿ ಮೂರು ಗುಂಪುಗಳನ್ನು ಮಾಡಿಕೊಂಡು ಶಿಕ್ಷಕರು ಪಾಠ ಹೇಳಿಕೊಡುವರು. ಒಂದು ವರ್ಗಕ್ಕೆ ಒಂದೇ ತರವಾದ ಪಠ್ಯಪುಸ್ತಕವಿರದೆ ಹುಡುಗರ ಬುದ್ಧಿಮಟ್ಟಕ್ಕನುಸರಿಸಿ ಮಾಡಿಕೊಂಡ ಗುಂಪುಗಳಿಗೊಂದೊಂದು ಪಠ್ಯಪುಸ್ತಕ ಇರುತ್ತವೆ. ಪ್ರಗತಿ ಸಾಧಿಸದ ಮಕ್ಕಳನ್ನು ಯಾವ ಪ್ರಸಂಗದಲ್ಲಿಯೂ ಮೇಲಿನ ವರ್ಗಕ್ಕೆ ಕಳಿಸುವದಿಲ್ಲ. ಒಂದೇ ಪಠ್ಯಪುಸ್ತಕವನ್ನು ಮಕ್ಕಳು ೨ ವರ್ಷ ಓದಿದರೆ ಅವರಲ್ಲಿಯ ಅಭಿರುಚಿ ನಷ್ಟವಾಗುವದೆಂದು ತಿಳಿಯುವರು. ಅದಕ್ಕಾಗಿ ವಿವಿಧ ಪಠ್ಯಪುಸ್ತಕಗಳನ್ನು ಉಪಯೋಗಿಸುವರು. ಮಗುವು ಪ್ರಗತಿ ಸಾಧಿಸಿದ ದಿನದಿಂದ ಮೇಲಿದ ವರ್ಗಕ್ಕೆ ಹಾಕುವರು. ಪ್ರಗತಿಹೀನ ಮಕ್ಕಳನ್ನು ಕೆಲವೊಂದು ಸಲ ಕೆಳಗಿನ ವರ್ಗಕ್ಕೆ ವರ್ಗಾಯಿಸುವರು. ಪ್ರಗತಿ ಸಾಧಿಸುವಾಗ ಮತ್ತೆ ಮೇಲಿನ ವರ್ಗಕ್ಕೆ ಕಳಿಸುವರು. ಸಮಸ್ಯಾತ್ಮಕ ಮಕ್ಕಳಿಗೆ ಶಿಕ್ಷಣದ ಬೇರೆ ವ್ಯವಸ್ಥೆಯಿರುತ್ತದೆ. ಯಾವ ವರ್ಗದಲ್ಲಿಯೂ ೩೦ಕ್ಕಿಂತ ಹೆಚ್ಚಿಗೆ ಮಕ್ಕಳು ಇರುವದಿಲ್ಲ. ಬಾಲ ವರ್ಗಕ್ಕೆ ೨೦ ಹುಡುಗರಿಗೆ ಒಬ್ಬ ಶಿಕ್ಷಕಿ ಇರುತ್ತಾಳೆ. ವಾರ್ಷಿಕ ಪರೀಕ್ಷೆಯಲ್ಲಿ ವಿದ್ಯಾರ್ಥಿಯ ಇಡೀ ವರುಷದ ಪ್ರಗತಿ, ನಡತೆ ನೋಡಿಕೊಂಡು ಪರೀಕ್ಷಿಸುವರು. ನಮ್ಮಲ್ಲಿಯ ಹಾಗೆ ಪರೀಕ್ಷೆಗಳಿಗೆ ಅವಾಸ್ತವ ಮಹತ್ವವಿಲ್ಲ.

ಆನಂದಮಯ ಸಹಜ ಮುಖಮುದ್ರೆ ಶಿಕ್ಷಕನ ವ್ಯಕ್ತಿತ್ವದ ಬೆಳಕೆ

ಲೇಖಾಂಕ:— ೫

ಬರೆದವರು:— **ಶ್ರೀ ಅನ್ನದಾನೀಶ್ವರ ವಿರಕ್ತಮಠ,** ಹೆಡ್‌ಮಾಸ್ತರ ಮಹಿಳಾ ವಿದ್ಯಾಪೀಠ ಹಾಯಸ್ಕೂಲ, ಹುಬ್ಬಳ್ಳಿ

ಶಿಕ್ಷಕನು ವಿದ್ಯಾರ್ಥಿ ಪ್ರಪಂಚದಲ್ಲಿ ಪ್ರಿಯನಾಗ ಬೇಕಾದದ್ದು ಶಿಕ್ಷಣ ರಂಗದ ಉನ್ನತಿಗೆ ಅತ್ಯಾವಶ್ಯಕವೂ ಇಷ್ಟವೂ ಆಗಿದೆ. ಮಕ್ಕಳ ವಿಕಾಸದ ದೃಷ್ಟಿಯಿಂದಂತೂ ಈ ವಿದ್ಯಾರ್ಥಿ–ಪ್ರಿಯತೆಯು ಅತ್ಯಗತ್ಯವಾಗಿದೆ. ರಾಸ್ ಎಂಬ ಮನೋವೈಜ್ಞಾನಿಕ ಶಿಕ್ಷಣ ತಜ್ಞನು ಹೇಳಿರುವದೇನೆಂದರೆ:—

"ಮಕ್ಕಳು ಶಿಕ್ಷಕನನ್ನು ದ್ವೇಷಿಸಿದರೆ ಅವನು ಕಲಿಸುವ ವಿಷಯವನ್ನೂ ದ್ವೇಷಿಸಲುಪಕ್ರಮಿಸುತ್ತಾರೆ.

ಶಿಕ್ಷಕನನ್ನು ಪ್ರೀತಿಸಿದರೆ ಅವನ ವಿಷಯವನ್ನೂ ಪ್ರೀತಿಸುವರು. "

ಶಿಕ್ಷಕನು ಮಕ್ಕಳಿಗೆ ಮೆಚ್ಚುಗೆಯಾಗುವಂತೆ ಹರ್ಷ ಭರಿತ ಮುಖಮುದ್ರೆಯುಳ್ಳವನಾಗಿರಬೇಕು. ಸಹಜ ಸುಮುಖವು ತಪಸ್ಸಿಲ್ಲದೆ ಬರಲಾರದು. ಶ್ರೀ ನಿಜಗುಣ ಶಿವಯೋಗಿಗಳು ಶಿವಶಕ್ತಿಗೆ " ಸಹಜ ಸುಮುಖಿ " ಎಂಬ ಹೆಸರು ಕೊಟ್ಟಿರುವರು. ಶಿವಶಕ್ತಿ ಸಂಪನ್ನನಿಗೆ ಮಾತ್ರ ಸಹಜ- ಸುಮುಖತೆಯು ಉಂಟಾಗುವದು. ಶಿವಶಕ್ತಿ ಯೆಂದರೆ ಮಂಗಲಮಯವಾದ ಶಕ್ತಿ. ಈ ಶಿವಶಕ್ತಿ ಸಂಪನ್ನತೆಗೆ ತ್ರಿವಿಧ ತಪಸ್ಸು ಮಾಡಬೇಕೆಂದು ಶ್ರೀ ನಿಜಗುಣ ಶಿವಯೋಗಿಗಳು ಹೇಳಿರುವರು. ಆ ಮಹಾಯೋಗಿಗಳು ಹೀಗೆ ಹೇಳಿರುವರು:—

"ಪಂಚಕರ್ಮೇಂದ್ರಿಯ, ಪಂಚಜ್ಞಾನೇಂದ್ರಿಯ ಗಳನ್ನು ಅಂಕಿತದಲ್ಲಿಟ್ಟುಕೊಳ್ಳಬೇಕು. ಮನಸ್ಸನ್ನು ವಶ ದಲ್ಲಿಟ್ಟುಕೊಳ್ಳಬೇಕು. ವಿವೇಕ ಬುದ್ಧಿಯು ಜಾಗ್ರತವಾ ಗಿರಬೇಕು, ದಯೆಯಿರಬೇಕು, ಆತ್ಮವಿದ್ಯೆಯನ್ನು ಪಡೆಯ ಬೇಕು. ಇದು ಮಾನಸಿಕ ತಪಸ್ಸು."

ಮನೋನಿಗ್ರಹವಿಲ್ಲದವನು ಶಿಕ್ಷಕನಲ್ಲ. ಮನಸ್ಸಿನ ಕೈಯಲ್ಲಿ ಸಿಕ್ಕವನು ಮಂಗನು. ವಿವೇಕವಿಲ್ಲದವನು ಮಾನವನಲ್ಲ. "ವಿನಿಯದಿಂದ ಮಾತನಾಡಬೇಕು. ಹಿತವಚನಗಳನ್ನು ಆಡಬೇಕು. ಅಪಶಬ್ದಗಳನ್ನು ಪಯೋಗಿ ಸಬಾರದು. ಮಂತ್ರದಂಥ ಪವಿತ್ರ ಶಬ್ದಗಳನ್ನು ಆಡ ಬೇಕು. ದಿನಕ್ಕೊಂದು ಚೆಂದದಿಂದ ನಾಲಿಗೆಯನ್ನು ಕುಣಿಸಬಾರದು. ಜಿವ್ಹಾಚಾಪಲ್ಯ ಕೂಡದು. ತರ್ಕದ ಮಾತುಗಳನ್ನೇ ಆಡಬಾರದು. ಅಚಲಿತ ಅರ್ಥ ಬರುವಂತೆ ಸ್ಪಷ್ಟವಾಗಿ ಮಾತಾಡ ಬೇಕು. ಇದು ವಾಚಿಕ ತಪಸ್ಸು.

ಆತ್ಮಸಂಯಮನವನ್ನು ಸಾಧಿಸಿದ ಮಾನವನು ನಾಲಿಗೆಯ ಮೇಲಿನ ನಿಯಂತ್ರಣವನ್ನು ಪಾಲಿಸಬಲ್ಲನು. ಆತ್ಮಸಂಯಮನವಿಲ್ಲದ ಅವಿವೇಕಿಯು ಸಿಕ್ಕಂತೆ ಮಾತಾಡಿ ದುಃಖಿಕ್ಕೀಡಾಗುವನು.

"ಇಂದ್ರಿಯಗಳಿಂದ ಒಳ್ಳೆಯ ಕೆಲಸಗಳನ್ನು ಮಾಡುತ್ತಿರಬೇಕು. ಸರಮಾತ್ಮನಲ್ಲಿ ಭಕ್ತಿಯಿರಬೇಕು. ಸಜ್ಜನರ ಸೇವೆ ಮಾಡಬೇಕು. ಪ್ರಾರ್ಥನೆ ಮಾಡಬೇಕು. ಆಸನಗಳನ್ನು ಪಾಕಬೇಕು. ಧ್ಯಾನ ಮಾಡಬೇಕು. ಇದು ಶಾರೀರಿಕ ತಪಸ್ಸು."

ಮಾನಸಿಕ, ವಾಚಿಕ ತಪಸ್ಸು ಸಾಧಿಸಿದವನಿಗೆ ಶಾರೀರಿಕ ತಪಸ್ಸು ಸುಲಭ ಸಾಧ್ಯ. ಈ ಪ್ರಕಾರ ಕಾಯಾ, ವಾಚಾ, ಮನಸಾ ತ್ರಿಕರಣ ಶುದ್ಧಿಯುಳ್ಳವನು ನಿಜವಾದ ಮಾನವನು.

ಶಿಕ್ಷಕನು ನಿಜವಾದ ಮಾನವನು. ಅವನು ದಿನಾಲು ಮನೆಯಲ್ಲಿ ತಪಸ್ಸು ಮಾಡಬೇಕಾಗುವದು. ಗರಡೀಮನೆಯಲ್ಲಿ ಅಥವಾ ವ್ಯಾಯಾಮ ಶಾಲೆಯಲ್ಲಿ ಜಟ್ಟಿಯು ಶರೀರ ಸಾಧನ ಮಾಡುವಂತೆ ಶಿಕ್ಷಕನು ಮೊದಲು ಕುಟುಂಬದಲ್ಲಿ ಸಹಜ ಸಾಧನ ಮಾಡಬೇಕು. ಕುಟುಂಬವಿಲ್ಲದ ಶಿಕ್ಷಕನಿಗೆ ಈ ಸಾಧನ ಮಾರ್ಗವು ಕಠಿಣ ವಾಗಬಹುದು. ಆದರೆ ಅವನು ತನ್ನ ನೆರೆಹೊರೆಯವ ರೊಡನೆ ಮಿತ್ರರೊಡನೆ ಸಾಧನ ಮಾಡಬೇಕಾಗಬಹುದು. ಆನಂದಮಯ ಸಹಜ ಮುಖಮುದ್ರೆಯು ಯೋಗಿಗಳ ಸೊತ್ತು. ಶಿಕ್ಷಕನು ಯೋಗಿಯು. ಸತ್ಯವಾದ, ಜ್ಞಾನದ, ಆನಂದಮಯ ವಸ್ತುಗಳಲ್ಲಿ ಯಾವಾತನ ಮನವು ಲೀನ ವಾಗಿರುವದೋ ಅವನು ಯೋಗಿಯು. ಈ ದೃಷ್ಟಿಯಿಂದ ಶಿಕ್ಷಕನು ಒಬ್ಬ ಯೋಗಿಯು. ಇಂಥ ಯೋಗಿ ಶಿಕ್ಷಕನು ಸಹಜ ಸುಮುಖವುಳ್ಳವನಿರುವನು. ಅವನ ಮುಖವು ತೆರೆಯಡಗಿದ ಸಾಗರದಂತೆ ಪ್ರಶಾಂತ ಗಂಭೀರವಾಗಿರು ವದು.

ಶಿಕ್ಷಕರು ದಿನಾಲು ಕನ್ನಡಿಯಲ್ಲಿ ಮುಖನೋಡಿ ಕೊಳ್ಳುವರು. ಆದರೆ ಬೇರೆ ದೃಷ್ಟಿಯಿಂದ ನೋಡಿದರೆ ಫಲವಿಲ್ಲ. ಕನ್ನಡಿಯಲ್ಲಿ ನೋಡುವದೇತಕ್ಕೆ? ಮುಖದ, ನೋಟದ, ಶರೀರದ, ಬಟ್ಟೆಗಳ ಲೋಪದೋಷಗಳು ಇಲ್ಲ ದಂತೆ ಆಗಿ, ಸಹಜ ವೃತ್ತಿಯೂ ಆನಂದಮಯ ಪ್ರವೃ ತ್ತಿಯೂ ಬೆಳೆಯಲೆಂದು ! ಮುಖವು ಮನಸ್ಸಿನ, ಮನದ ಹಿನ್ನೆಲೆಯ ವಿಷಯ ಸೂಚಿಯು.ಮನದಲ್ಲಿ ಚಿಂತೆ ಸಂತಾಪ ಗಳಿದ್ದರೆ ಅವು ಮುಖದಲ್ಲಿ ಮೂಡುತ್ತವೆ. ಆನಂದ ಸಮತೆ ಸಮರಸತೆಗಳಿದ್ದರೆ ಅವೂ ಮುಖಕಮಲದಲ್ಲಿ ಕಂಗೊಳಿ ಸುತ್ತವೆ. ಕೌಟುಂಬಿಕ, ಸಾಮಾಜಿಕ, ಸಾಂಸ್ಕೃತಿಕ, ಆರ್ಥಿಕ ತೊಂದರೆ ಕೋಟಲೆಗಳಿದ್ದರೆ ಶಿಕ್ಷಕರು ಚಿಂತೆ ಯಿಂದ ಬಾಗಿ ಹೋಗುವರು. ಚಿಂತೆಯು ಜೀವನಕ್ಕೆ ಗಂಟುಬಿದ್ದ ಮರಣವೇ ಸರಿ. ಚಿಂತೆಯೇ ಮುಪ್ಪು ಸಂತೋ ಷವೇ ಯೌವನ" ಎಂಬ ಗಾದೆಯ ಮಾತು ಸತ್ಯವಾ ದದ್ದು. ಶಿಕ್ಷಕರು ಸಾಧನ ಮಾರ್ಗದಿಂದ ಚಿಂತೆಯನ್ನು

ಜಯಿಸಲು ಕಲಿಯಬೇಕು. ಸರಕಾರದವರು, ಖಾಸಗೀ ಮ್ಯಾನೇಜಮೆಂಟಿನವರು ಶಿಕ್ಷಕರಿಗೆ ಆರ್ಥಿಕ ಕೋಟಲೆಗಳುಂಟಾಗದಂತೆ ನೋಡಿಕೊಂಡರೆ ಶಿಕ್ಷಕರ ವ್ಯಕ್ತಿತ್ವಕ್ಕೆ ಕಳೆಯೇರುವದರಲ್ಲಿ ಸಂಶಯವಿಲ್ಲ. ಕುಟುಂಬದಲ್ಲಿ ಹೆಂಡತಿಯು ಬಲು ಕುಶಲಳಿರಬೇಕು. ಗಂಡನು ಶಿಕ್ಷಣ ಕಾರ್ಯದಲ್ಲಿ ಯಶಸ್ಸು ಗಳಿಸುವಂತೆ ಸಹಾಯ ಮಾಡುತ್ತಿರಬೇಕು. ಸಮಾಜದ ಮುಂಪಾಳುಗಳು, ಸಾಮಾಜಿಕರು ಶಿಕ್ಷಕರಿಗೆ ತೋರಿಕೆಯ ಗೌರವ, ಮರ್ಯಾದೆ ಕೊಡದೇ, ಅಂತರಂಗದಿಂದ ಆದರಿಸಬೇಕು; ಸನ್ಮಾನಿಸಬೇಕು. ಸಾಮಾಜಿಕ ಸ್ಥಾನಕೊಡಬೇಕು. ಹೆಡ್‌ಮಾಸ್ತರರು, ಶಿಕ್ಷಣಾಧಿಕಾರಿಗಳು, ಜಿಲ್ಲಾಧಿಕಾರಿಗಳು ಶಿಕ್ಷಕರಿಗೆ ಹೆದರಿಕೆಯ ಕೇಂದ್ರವಾಗದೇ ಪ್ರೀತಿಯ ಸಹಾನುಭೂತಿಯ ಕೇಂದ್ರವಾಗಬೇಕು. ಇಷ್ಟೆಲ್ಲ ಅನುಕೂಲತೆಯಿದ್ದರೂ ಶಿಕ್ಷಕನ ಸ್ವಂತ ಪ್ರಯತ್ನವಿಲ್ಲದಿದ್ದರೆ ಏನೂ ಪ್ರಯೋಜನವಿಲ್ಲ. ಶಿಕ್ಷಕರು ಆತ್ಮವಿಶ್ವಾಸದಿಂದ, ಸಂತೋಷದಿಂದ, ಸಹಜ ಸ್ವಭಾವದಿಂದ ವರ್ತಿಸಬೇಕು. ಅಂದರೆ ಶಿಕ್ಷಣ ಕಾರ್ಯವು ಸುಲಭವಾಗಿ ಸಾಗುವದು.

ಪ್ರಾಥಮಿಕ ಪಾಲಾ ಪ್ರಮಾಣಪತ್ರ ಪರೀಕ್ಷೆ, ಟ್ರೇನಿಂಗ ಕಾಲೇಜ; ಎಲಿಮೆಂಟರಿ ಮತ್ತು ಇಂಟರಮೀಡಿಯೆಟ್ ಗ್ರೇಡ ಮುಂ. ಡ್ರಾಯಿಂಗ ಪರೀಕ್ಷೆಗಳಿಗೆ—

ಜನಪ್ರಿಯವಾದ ಮತ್ತು ಸರಕಾರದಿಂದ ಮಂಜೂರಾದ ಒಂದೇ ಒಂದು ಪುಸ್ತಕ

ಆದರ್ಶ ಚಿತ್ರಕಲಾ

(Ideal Drawing)

ಶ್ರೀ ಎಸ್. ಕೆ. ಜೋಶಿ, ಮತ್ತು ಶ್ರೀ ಜಿ. ಡಿ. ವಾಲಿ.

ಎಲ್ಲ ದೊಡ್ಡ ಪುಸ್ತಕ ವ್ಯಾಪಾರಸ್ಥರಲ್ಲಿ ದೊರೆಯುವದು.
ಬೆಲೆ ೧—೧೨—೯ ಅಂಚೆವೆಚ್ಚ ಪ್ರತ್ಯೇಕ. ಐದು ಮತ್ತು ಐದಕ್ಕಿಂತ ಹೆಚ್ಚು ಪ್ರತಿ ತರಿಸಿಕೊಳ್ಳುವರಿಗೆ ಅಂಚೆ ವೆಚ್ಚವಿಲ್ಲ. ಇದು ಕನ್ನಡದಲ್ಲಿಯೂ ಸಿಗುತ್ತದೆ.

ಜಿ. ವಾಯ್. ರಾಣೆ
ಪ್ರಕಾಶಕರು, ೩೪೩, ಕಸಬಾ ಪೇಟ ಪುಣೆ.

೧೯೩೬ನೆಯ ಇಸವಿಯಿಂದ ಪ್ರಾರಂಭವಾಗುವ ಸಾಮಾನ್ಯ ಪ್ರಾ. ಶಾ. ಪ್ರ. ಪರೀಕ್ಷೆಯ ಅಭ್ಯಾಸ ಕ್ರಮವನ್ನು ಅನುಸರಿಸಿ ಬರೆದ

ಶೇಲಾರ ಕೃತ

ಪ್ರಾಥಮಿಕ ಭೂಮಿತಿ

[ಕ್ಷೇತ್ರಫಲ ಘನಫಲ ಸಹಿತ]

೪ ರಿಂದ ೭ ನೇಯ ವರ್ಗದ ವರೆಗಿನ ವಿಷಯವನ್ನೆಲ್ಲ ಒಳಗೊಂಡಿದೆ.

ಬೆಲೆ: ೧ರೂ. ೮ಆಣೆ ಮಾತ್ರ

ದೊರೆಯುವ ಸ್ಥಳ:—

ಸಾಯಿ ಪಬ್ಲಿಶಿಂಗ್ ಹಾವುಸ್,
ರೋಡ, ಧಾರವಾಡ.

Regd. No. B. 5375

ಭಾಗ ೧ ಕವಿತಾ ಸಂಕಲನ ೧೫೦ **ನಾವು ನಮ್ಮವರು** ಭಾಗ ೨ ಕಥಾ ಸಂಕಲನ ೧೫

(ಪ್ರಾಥಮಿಕ ಶಿಕ್ಷಕ ಸಾಹಿತಿಗಳ ಫೋಟೊ ಪರಿಚಯ ಕಥೆ ಕವನಗಳು)

ಮಾನ್ಯ ಎ. ಸಿ. ದೇವೇಗೌಡರು ಶಿಕ್ಷಣಾಧಿಕಾರಿಗಳು [D. P. I.] ಮೈಸೂರು ರಾಜ್ಯ ಅವರ ಮುನ್ನುಡಿ.

ಮಾನ್ಯ ಸಿದ್ಧಯ್ಯ ಪುರಾಣಿಕ 'ಕಾವ್ಯಾನಂದ'ರು ಡೆ. ಸೆಕ್ರೆಟರಿ ಶಿಕ್ಷಣ ವಿಭಾಗ ಇವರ ಹಿನ್ನುಡಿಗಳು.

- ಕೇವಲ ೩ರೂಪಾಯಿ [ಅಂಚೆಸೇರಿ] ವಾರ್ಷಿಕ ಚಂದಾ ಹಣದಲ್ಲಿ ೩ನೆಯ ಮಾಲೆಯ ೧-೨ನೆಯ ಕುಸುಮ ಪಡೆಯಿರಿ.
- ಪ್ರಾಥಮಿಕ ಶಿಕ್ಷಕರ ಕಥೆ, ಕಾದಂಬರಿ, ಕವನ, ನಾಟಕಾದಿ ಕೃತಿಗಳು ೪೦೦ ಪುಟಗಳಲ್ಲಿ.
- ಅಗಸ್ಟ ದಿಂದ ಅಗಸ್ಟಕ್ಕೆ ಒಂದು ವರುಷ
- ಬಿಡಿ ಕುಸುಮ ಚಂದಾದಾರರಿಗೆ ೩ ಬೆಲೆಯಲ್ಲಿ [ಅಂಚೆಖರ್ಚ
- ವರ್ಷದ ಮಧ್ಯದಲ್ಲಿ ಚಂದಾದಾರರಾದರೂ ಆ ವರ್ಷದ ಎಲ್ಲ ಪುಸ್ತಕಗಳು ದೊರೆಯುವವು.
- ಇಂದೇ ಚಂದಾಹಣ ಕಳಿಸಿ ತಮ್ಮದೇ ಆದ ಶಿಕ್ಷಕರ ಬಳಗವು ಬೆಳೆವಂತೆ ನೆರವಾಗಿರಿ. ಈ ಅಲ್ಪ ಹಣ ತಮ್ಮ ಶಿಕ್ಷಕ ಮಿತ್ರ ಏಳ್ಗೆಗೆ ಮೀಸಲು. ಗೆಳೆಯರನ್ನು, ವಾಚನಾಲಯಗಳನ್ನು ಚಂದಾದಾರರನ್ನು ಮಾಡಿ ನೆರವಾಗಿರಿ.

ವಿವರಗಳಿಗೆ: **ಭಾರತೀ ಸಾಹಿತ್ಯ ಭಂಡಾರ** ಅಂಚೆ: **ಯರನಾಳ** ಜಿಲ್ಲೆ: **ಬಿಜಾಪುರ**

ಕಲ್ಯಾಣ ಕನ್ನಡ ಗುಡಿಯ ಕಾಣಿಕೆ

ಸುವರ್ಣ ಸಂಧಿ! ಸಚಿತ್ರ ಗ್ರಂಥ!! ಸುಂದರ ಮುದ್ರಣ!!

"ಶಿಕ್ಷಣ-ಶಿಕ್ಷಕ-ದರ್ಶನ"

ಶಿಕ್ಷಕರಿಗೂ, ಶಿಕ್ಷಕ ವಿದ್ಯಾರ್ಥಿಗಳಿಗೂ, ಶಿಕ್ಷಣಾಭಿಮಾನಿಗಳಿಗೂ, ಉಪಯುಕ್ತವಾಗುವಂಥ, ತನು-ಮ ತಣಿಸುವಂಥ, ಶಿಕ್ಷಣ ತಜ್ಞರಿಂದ ಪರಿಶೀಲಿಸಲ್ಪಟ್ಟಂಥ, ಭಾರತದಲ್ಲಿಯ ಮಾನ್ಯ ಮಂತ್ರಿವರ್ಯರಿಂದ, ರಾಜ್ಯಪಾಲರಿಂದ ಶಿಕ್ಷಣಾಧಿಕಾರಿಗಳಿಂದ, ಪ್ರಿನ್ಸಿಪಾಲರಿಂದ, ಸಾಹಿತಿಗಳಿಂದ ಪ್ರಶಂಸೆ ಪಡೆದ ಅಭಿಪ್ರಾಯಗಳುಳ್ಳಂಥ, ಕರ್ನಾಟ ವಿಶ್ವವಿದ್ಯಾಲಯದ ಉಪ ಕುಲಪತಿಗಳಾದ ರ್ಯಾಂಗ್ಲರ್ ಶ್ರೀ ಡಿ. ಸಿ. ಪಾವಟೆಯವರು ಮುನ್ನುಡಿ ಬರೆದಂಥ ಅಮೋಘ ಗ್ರಂಥ.

ಶ್ರೀ ನಿಂಬಾಳ ಶಿಕ್ಷಕ ದಂಪತಿಗಳಿಂದ ಸಂಗ್ರಹಿಸಲ್ಪಟ್ಟಿದೆ. ಅಖಿಲ ಕರ್ನಾಟಕದ ಗಣ್ಯ ಶಿಕ್ಷಕ-ಶಿಕ್ಷಕಿಯ ಬಣ್ಣ ಬಣ್ಣಗಳಲ್ಲಿ ೪೧ ಫೋಟೊ ಬ್ಲಾಕ್, ಲೇಖನ, ಪರಿಚಯಗಳುಳ್ಳಂಥ ೪೭೫ ಪುಟಗಳ ಅಮರ ಸಾಹಿತ್ಯ ಗ್ರಂ ಕನ್ನಡದಲ್ಲಿ ಒಂದು ಉತ್ತಮ ಮಾದರಿಯ ಶೈಕ್ಷಣಿಕ ಉದ್ಗ್ರಂಥ.

ದಿ. ೧೫ ಅಗಸ್ಟ ಸ್ವಾತಂತ್ರ್ಯ ದಿನದಂದು ಮಾನ್ಯ ಶ್ರೀ ಎ. ಎಚ್. ದಳವಾಯಿ, ಎ. ಓ. ಸಾಹೇಬರ ಅಸ್ಥಾನಿಯಲ್ಲಿ ಪ್ರೊ. ಬಿ. ಟಿ. ಸಾಸನೂರ ಅವರ ಅಮೃತಹಸ್ತದಿಂದ ಈ ಗ್ರಂಥ ಪ್ರಕಾಶನಗೊಂಡಿದೆ.

ವಿವರಗಳಿಗೆ ಇಂದೇ ಈಗಲೇ ಬರೆಯಿರಿ.

ಸಾದಾ ಪ್ರತಿ ೩ ರೂ.] **ವ್ಯಾಪಾರಸ್ಥರಿಗೆ ಧಾರಾಳವಾದ ಕಮೀಷನ್.** **[ಸುಂದರ ಪ್ರತಿ ೪ ರೂ**

ವಿಳಾಸ :- ಶ್ರೀ ನಿಂಬಾಳ ಕಲ್ಯಾಣಪ್ಪ, ಪೋಸ್ಟ:— ತಾಂಬಿ, ಜಿಲ್ಲಾ:— ವಿಜಾಪುರ.

Printed by Shri S. F. Kattimani, at Manohar Power Printing Press, Hubli.
Edited & Published by Sjts. G. M. Joshi, B. M. Shintri, S. R. Tatti & Smt. P. A. Bhaska at the Kannada Jeevan Shikshan Office, Govt. Training College for Men, Dharwa

ಕಸಾಪ ಪತ್ರಿಕೆ

ಪ್ರಧಾನ ಸಂಪಾದಕರು : ಶ್ರೀ ಜಿ. ಎಂ. ಜೋಶಿ



ಪ್ರಕಟಣೆ ೧೯೬೦ ನವೆಂಬರ್ ೧೫

ಜೀವನ ಶಿಕ್ಷಣ

— ಸಂಪಾದಕ ಮಂಡಲ —

ಸಂಚಾಲಕರು : ಶ್ರೀ ಎಮ್. ಜಿ. ಹಂದ್ರಾಳ, ಬಿ.ಎ.(ಆನರ್ಸ),ಎಮ್.ಈಡಿ.,ಡಿ.ಬಿ.ಈಡಿ.,
ಎಜ್ಯುಕೇಶನಲ್ ಇನಸ್ಪೆಕ್ಟರ, ಧಾರವಾಡ,

ಪ್ರಧಾನ ಸಂಪಾದಕರು : ಶ್ರೀ ಜಿ. ಎಮ್. ಜೋಶಿ,
ಪ್ರಿನ್ಸಿಪಾಲ, ಗಂಡು ಮಕ್ಕಳ ಸರಕಾರಿ ಟ್ರೇನಿಂಗ ಕಾಲೇಜ, ಧಾರವಾಡ.

— ಸದಸ್ಯರು —

ಶ್ರೀಮತಿ ಪಿ. ಎ. ಭಾಸ್ಕರ, ಲೇಡಿ ಸುಪರಿಂಟಿಂಡೆಂಟ, ಹೆಣ್ಣು ಮಕ್ಕಳ ಸರಕಾರಿ ಟ್ರೇನಿಂಗ ಕಾಲೇಜ, ಧಾರವಾಡ.

ಶ್ರೀ ಬಿ. ಎಂ. ಶಿಂತ್ರಿ, ಬಿ.ಎ.,ಬಿ.ಟಿ., ನಿವೃತ್ತ ಅಸಿಸ್ಟಂಟ ಎಜ್ಯುಕೇಶನಲ್ ಇನಸ್ಪೆಕ್ಟರ ದಕ್ಷಿಣ ಭಾಗ. (ಮುಂಬಯಿ ಕರ್ನಾಟಕ) ಹಾಗು ಗೌ. ಕಾರ್ಯದರ್ಶಿ ಮತ್ತು ಲಾಯಬ್ರೇರಿಯನ್, ಸಾಹಿತ್ಯ ಸಮಿತಿ ಲಿಂಗಾಯತ ವಿದ್ಯಾಭಿವೃದ್ಧಿ ಸಂಸ್ಥೆ, ಧಾರವಾಡ.

ಶ್ರೀ ಎಸ್. ಆರ್. ತಟ್ಟಿ, ರಿಟಾಯರ್ಡ ಪ್ರಿನ್ಸಿಪಾಲ, ಪ್ರಾಥಮಿಕ ಶಿಕ್ಷಕರ ಟ್ರೇನಿಂಗ ಕಾಲೇಜ, ನವಲಗುಂದ.

ಸಂಪುಟ ೯೫ ಮಾರ್ಚ ೧೯೭೦ ಸಂಚಿಕೆ ೧೦

— ಪರಿವಿಡಿ —

೧.	ಸಂಪಾದಕೀಯ	....	....	೨
೨.	ವಿಚಾರ ಗೋಷ್ಠಿ	....	....	೩
೩.	ಪುಸ್ತಕ ವಿಮರ್ಶೆ	....	ಹೆಗ್ಗೋ	೪
೪.	ಜೀವನ ಶಿಕ್ಷಣ ಶಾಲೆಗಳ ಮೇಲ್ವಿಚಾರಣೆಯಲ್ಲಿ ಹೊಸ ದೃಷ್ಟಿಕೋನ	....	ಶ್ರೀ ಎಮ್. ಜಿ. ಹಂದ್ರಾಳ, ಇ. ಆಯ್. ಇವರ ಭಾಷಣದ ವರದಿಗಾರರು.	
		....	ಶ್ರೀ ಎಸ್. ಆರ್. ಮುರಿ	೬
೫.	ಜಗತ್ತಿನ ಚಪ್ಪರ	....	ಶ್ರೀ ಶಿಂತ್ರಿ ಬಸಪ್ಪನವರು	೭
೬.	ಜೀವನ ಶಿಕ್ಷಣ, ಹಿಂದೀ ಮತ್ತು ಶಿಕ್ಷಣ	....	ಶ್ರೀ ಭಾಲಚಂದ್ರ ಚಿಟನೀಸ	೧೦
೭.	ಶಿಕ್ಷಣದಲ್ಲಿ ಕಾಗದ ಹಾಗು ರಟ್ಟಿನ ಕೆಲಸ	....	ಶ್ರೀಮತಿ ಎಸ್. ಪುರುಷೋತ್ತಂ	೧೩
೮.	ಹಬ್ಬ ಹುಣ್ಣಿವೆ ಜಯಂತಿ ಆಚರಣೆ	....	ಶ್ರೀ ಜಿ. ಎಸ್. ಗೋಕರ್ಣ	೧೫
೯.	ಸಮಾಜದ ಉನ್ನತಿಯನ್ನು ಸಾಧಿಸುವದೇ ಜೀವನ ಶಿಕ್ಷಣದ ಶ್ರೇಷ್ಠ ಆದರ್ಶ	....	ಶ್ರೀ ತಟ್ಟಿ ಶ್ಯಾಮರಾಯರು	೧೯
೧೦.	ನಾ ಕಂಡ ಗಾಂಧೀಗ್ರಾಮ	....	ಶ್ರೀ ಎಚ್. ಜಿ. ಜೋಶಿ	೧೯

Statement about the ownership and particulars about the newspaper JEEVANA SHIKSHANA to be published in first issue every year after the last day of February.

FORM IV

1.	Place of Publication	...	Govt. T. C. M. Dharwar
2.	Periodicity of its Publication	...	Monthly
3.	Printer's Name		Shri S. F. Kattimani.
	Nationality	...	Indian.
	Address	...	Manohar P. Printing Press, Belgaum Galli, Hubli
4.	Publisher's Name	...	Shri Gunderao M. Joshi
	Nationality	...	Indian.
	Address	...	Principal, Govt. T. C. M. Dharwar
5.	Editor's Name	...	Shri Gunderao M. Joshi
	Nationality	...	Indian.
	Address	...	Principal, Govt. T, C. M. Dharwar
6.	Names & addresses of individuals who own the newspaper & partners or share-holders holding more than one percent of the total capital.	...	Editorial Board, Govt. T. C. M. Dharwar

I Gunderao M. Joshi, hereby declare that the particulars given above are true to the best of my knowledge and belief.

GUNDERAO M. JOSHI
Publisher

4th March, 1960

ಸಂಪಾದಕೀಯ

ವಿಶ್ವವಿದ್ಯಾಲಯ ಶಿಕ್ಷಣ :

ವಿಶ್ವವಿದ್ಯಾಲಯ ಶಿಕ್ಷಣವನ್ನು ಅರ್ಹತೆ ಮತ್ತು ಆಸಕ್ತಿಯುಳ್ಳವರಿಗೇ ನಿರ್ದಿಷ್ಟಪಡಿಸಬೇಕೆಂದು ವಿಶ್ವ ವಿದ್ಯಾಲಯ ನಿಧಿ ಆಯೋಗದವರು ತಮ್ಮ ವರದಿಯಲ್ಲಿ ವ್ಯಕ್ತಪಡಿಸಿರುವರು. ಭಾರತದಲ್ಲಿ ಶಿಕ್ಷಣವನ್ನು ದೊರ ಕಿಸುವ ಮಟ್ಟಕ್ಕೆ ಬೆಲೆಯಿಲ್ಲದಂತಾಗಿದೆ. ವಿದ್ಯಾರ್ಥಿಗಳು ತಾವು ಎಸ್. ಎಸ್. ಸಿ. ತೇರ್ಗಡೆಹೊಂದಿದೊಡನೆಯೇ, ಕಾಲೇಜು ಸೇರಿ, ೩-೪ ವರ್ಷಗಳಲ್ಲಿಯೇ ಪದವೀಧರ ರಾಗುತ್ತಾರೆ. ಬಹಳಷ್ಟು ವಿದ್ಯಾರ್ಥಿಗಳು ಕೇವಲ ತರಗತಿಗೆ ಹಚ್ಚಿದ ಪುಸ್ತಕಗಳನ್ನು, ಪರೀಕ್ಷೆ ಪೂರ್ವದಲ್ಲಿ ಹಗಲು-ರಾತ್ರಿ ಅಭ್ಯಸಿಸಿ, ಪರೀಕ್ಷೆಯಲ್ಲಿ ಹೇಗೋ ತೇರ್ಗಡೆ ಯಾಗುತ್ತಾರೆ. ಡಿಗ್ರಿ ಸಂಪಾದಿಸಿದ ನಂತರ, ಅವರಿಗೆ ಹೊರಜಗತ್ತಿನ ಕಡೆಗೆ ದೂರದೃಷ್ಟಿ ಎಂಬುದೇ ಇರುವದಿಲ್ಲ. ದೇಶದಲ್ಲಿಯ ಬಹಳಷ್ಟು ಜನರು ವಿದ್ಯಾವಂತರೆಂಬ ವಿಶ್ವವಿದ್ಯಾಲಯದ ಅರ್ಹತೆಯನ್ನು ಪಡೆದುಕೊಳ್ಳುತ್ತಿ ರುವದರಿಂದ ನಿರುದ್ಯೋಗತನದ ಸಮಸ್ಯೆಗೆ ಮತ್ತಷ್ಟು ಪುಟ ಕೊಟ್ಟಂತಾಗಿದೆ. ಎಸ್. ಎಸ್. ಸಿ. ಪಾಸಾಗಿ ವಿಶ್ವವಿದ್ಯಾಲಯಕ್ಕೆ ಪ್ರವೇಶ ದೊರಕಿಸುವ ಭಾರತದಲ್ಲಿಯ ವಿದ್ಯಾರ್ಥಿಗಳ ಟೇಕಡಾ ಪ್ರಮಾಣವು ಇತರ ಮುಂದು ವರಿದ ದೇಶಗಳಿಗಿಂತ ಹೆಚ್ಚಾಗಿದೆ. ಮುಂದುವರೆದ ದೇಶಗಳಲ್ಲಿ ವಿದ್ಯಾವಂತರಾದವರಿಗೆ ನಿರುದ್ಯೋಗತನದ ಸಮಸ್ಯೆ ಬರುವದಿಲ್ಲ. ಆದರೆ ಇಲ್ಲಿ ಆ ಸಮಸ್ಯೆ ಎದುರು ನಿಲ್ಲುತ್ತದೆ. ಕಾರಣ ಭಾರತದಲ್ಲಿ ಕೂಡ ವಿಶ್ವವಿದ್ಯಾಲಯ ಅರ್ಹತೆಯನ್ನು ಪಡೆಯುವ ಕ್ರಮವನ್ನು ಬಿಗುವುಗೊಳಿ ಸಬೇಕೆಂದು ಧನ ಆಯೋಗ ಸಮಿತಿಯ ಚೇಅರಮನ್ ರಾದ ಶ್ರೀ ಸಿ. ಡಿ. ದೇಶಮುಖ ಅವರು ಬಹು ಜಾಣ ತನದಿಂದ ಸರಕಾರಕ್ಕೆ ವರದಿ ಸಲ್ಲಿಸಿದ್ದಾರೆ. ಇದರಿಂದ ಯೋಗ್ಯತೆಯುಳ್ಳ ವಿದ್ಯಾರ್ಥಿಗಳಿಗೆ ಮಾತ್ರ ವಿಶ್ವವಿದ್ಯಾ ಲಯ ಶಿಕ್ಷಣವನ್ನು ಪಡೆಯಲು ಅವಕಾಶ ಕೊಡಬೇಕು ಎಂಬ ಮಾತನ್ನು ಸ್ಪಷ್ಟವಾಗಿ ವ್ಯಕ್ತಗೊಳಿಸಿದ್ದು ಕಂಡುಬರುತ್ತಿದೆ.

ವಿಶ್ವಶಾಂತಿ ಸ್ಥಾಪನೆಯಾಗಲಿ :

ಪ್ಯಾರೀಸಿನಲ್ಲಿ ಸೇರಲಿರುವ ಉನ್ನತ ಮಟ್ಟದ ಪರಿಷತ್ತು ನಿಶ್ಶಸ್ತ್ರೀಕರಣ ಸಾಧನೆಗೆ ಹಾಗೂ ಆಟಂ ಮತ್ತು ಹೈಡ್ರೋಜನ್ ಬಾಂಬುಗಳಂಥ ವಿನಾಶಕಾರಿ ಅಸ್ತ್ರಗಳ ತಯಾರಿಕೆ ಹಾಗೂ ಉಪಯೋಗಕ್ಕೆ ತಡೆ ಹಾಕುವಲ್ಲಿ ಯಶಸ್ವಿಯಾಗಲಿ ಎಂದು ಹಾರೈಸುವೆವು. ನಮ್ಮ ಪ್ರಧಾನ ಮಂತ್ರಿ ಶ್ರೀ ಜವಾಹರಲಾಲ ನೆಹರು ರವರು ಹೇಳಿದಂತೆ, ವಿಶ್ವಶಾಂತಿ ಸ್ಥಾಪನೆಯಾಗದಿದ್ದರೆ, ಅನಭಿವೃದ್ಧಿ ರಾಷ್ಟ್ರಗಳ ಎಲ್ಲ ಪ್ರಯತ್ನಗಳು ವಿಫಲವಾ ಗುವವು. ಈಗ ಒಂದು ದೇಶಕ್ಕೆ ಇನ್ನೊಂದು ದೇಶವ ಹೆದರುತ್ತದೆ. ಇಂಥ ಹೆದರಿಕೆಯ ಸ್ವರೂಪ ಮಾಯ ವಾಗದ ಹೊರತು ವಿಶ್ವಶಾಂತಿ ಸಾಧ್ಯವಿಲ್ಲ. ಕೇವಲ ಶಾಂತಿ ಸ್ಥಾಪನೆಯಾಗಬೇಕು ಎಂದು ಘೋಷಣೆ ಯನ್ನಿತ್ತರೆ ಶಾಂತಿ ಸಾಧಿಸಿದಂತಾಗುವದಿಲ್ಲ. ಶಾಂತಿ ಸಾಧನೆಯ ಕಾರ್ಯದಲ್ಲಿ ಅಡ್ಡಗಲ್ಲಾಗಿ ನಿಂತಿರುವ ಮಾರಕಾಸ್ತ್ರಗಳ ಪ್ರಯೋಗಗಳನ್ನು ಹಾಗೂ ನಿಶ್ಶಸ್ತ್ರೀ ಕರಣವನ್ನು ಮುಖ್ಯವಾಗಿ ಜಾರಿಯಲ್ಲಿ ತರಬೇಕು ವಿಶ್ವಶಾಂತಿಯನ್ನು ಬಯಸುತ್ತಿರುವ ಎಲ್ಲ ರಾಷ್ಟ್ರಗ ಬೇಡಿಕೆಯು ಬೇಗ ಕಾರ್ಯಾಚರಣೆಯಲ್ಲಿ ಬರುವಂ ಇದೇ ಮೇ ತಿಂಗಳಲ್ಲಿ ಪ್ಯಾರೀಸದಲ್ಲಿ ಸೇರಲಿರು ಪ್ರಪಂಚದ ಪ್ರಮುಖ ರಾಷ್ಟ್ರಗಳ ಧುರೀಣರ ಶೃಂಗ ಸ ಯಲ್ಲಿ ಯೋಗ್ಯ ಉಪಾಯಗಳನ್ನು ಕಂಡು ಹಿಡಿಯಲೆಂ ಹಾರೈಸದೆ ಇರಲಾರೆವು.

ಅಗಾದಿರ್ ಭೂಕಂಪ :

ದಕ್ಷಿಣ ಮೊರೋಕ್ಕೋದಲ್ಲಿ ಅಟ್ಲಾಂಟಿಕ ಮಹಾ ಸಾಗರದ ದಂಡೆಯ ಮೇಲಿನ ಬಂದರವಾದ ಅಗಾದಿ ಎಂಬಲ್ಲಿ ಫೆಬ್ರುವರಿ ಕೊನೆಯ ದಿನ ರಾತ್ರಿ ಸಂಭವಿಸಿ ಭೂಕಂಪದ ಪರಿಣಾಮವಾಗಿ ಸುಮಾರು ಹನ್ನೆರಡು ಸಾವಿರ ಜನರು ಸತ್ತಿರುವರೆಂದು ನಂಬಲಾಗಿದೆ. ಅಷ್ಟೇ ಸಾವಿರಾರು ಜನರು ಗಾಯಗೊಂಡಿರುವರು. ಈ ನಗರ

ಒದಗಿದ ವಿಪತ್ತಿನ ಕರುಣಾಜನಕ ವರ್ಣನೆಯನ್ನು ಓದಿ, ಯಾವ ಮನುಷ್ಯನ ಹೃದಯವು ಕರಗದೇ ಇರದು. ಅಗಾದಿರ್ ನಗರವು ಈಗ ಮರಣದ ಸಾಮ್ರಾಜ್ಯವಾಗಿದೆ. ವಿಪತ್ತಿಗೊಳಗಾದ ನಿಸ್ಸಹಾಯ ಜನರಿಗೆ ಸಕ್ರಿಯ ಸಹಾನುಭೂತಿ ತೋರಿಸುವದು ನಮ್ಮೆಲ್ಲರ ಕರ್ತವ್ಯವಾಗಿದೆ.

ವಿಚಾರ ಗೋಷ್ಠಿ :

ಮೈಸೂರ ರಾಜ್ಯದಲ್ಲಿಯ ಟ್ರೇನಿಂಗ ಸಂಸ್ಥೆಗಳ ಉಪಾಧ್ಯಯರ ವಿಚಾರ ಗೋಷ್ಠಿಯು ಧಾರವಾಡದ ಸರಕಾರೀ ಟ್ರೇನಿಂಗ ಕಾಲೇಜದಲ್ಲಿ ದಿನಾಂಕ ೧೧–೨–೬೦ ರಿಂದ ೧೩–೨–೬೦ರ ವರೆಗೆ ಜರುಗಿತು. ವಿಚಾರ ಗೋಷ್ಠಿಯಲ್ಲಿ ೧. ಜೀ. ಶಿ. ಶಾಲೆಗಳಲ್ಲಿ ಮೌಲ್ಯಮಾಪನ, ೨. ಚಟುವಟಿಕೆಗಳಿಗೆ ಅನುಗುಣವಾದ ಪಠ್ಯ ಪುಸ್ತಕಗಳು, ೩. ಸಾಂಸ್ಕೃತಿಕ ಚಟುವಟಿಕೆಗಳು, ಪ್ರದರ್ಶನ, ದಿನಾಚರಣೆಗಳನ್ನು ಶೈಕ್ಷಣಿಕ ಲಾಭವಾಗುವಂತೆ ಸಂಘಟಿಸುವದು, ೪. ಮೂಲೋದ್ಯೋಗಗಳನ್ನು ಶೈಕ್ಷಣಿಕ ರೀತಿಯಲ್ಲಿ ಕಲಿಸುವದು ಹಾಗೂ ೫. ಟ್ರೇನಿಂಗ ಸಂಸ್ಥೆಗಳು ಬಲಗೊಳ್ಳಲು ಯಾವ ಬದಲಾವಣೆಗಳು ಬೇಕು, ಈ ವಿಷಯಗಳ ಬಗ್ಗೆ ವಿಚಾರಪೂರ್ಣ ಚರ್ಚೆಯಾಗಿ ಯೋಗ್ಯ ಶಿಫಾರಸುಗಳನ್ನು ಮಾಡಲಾಯಿತು. ವಿಚಾರ ಗೋಷ್ಠಿಯ ಪ್ರತ್ಯೇಕವಾದ ವರದಿಯನ್ನು ಇದೇ ಸಂಚಿಕೆಯಲ್ಲಿ ಬೇರೆಡೆಗೆ ಪ್ರಕಟಿಸಲಾಗಿದೆ.

ಚಂದಾದಾರರಿಗೆ ವಿನಂತಿ :

ದಿನಾಂಕ ೧–೬–೧೯೫೯ಕ್ಕೆ ಪ್ರಾರಂಭವಾದ ವರುಷವು ೩೧–೫–೧೯೬೦ಕ್ಕೆ ಮುಕ್ತಾಯವಾಗುವದು. ಈ ವರ್ಷದ ಚಂದಾ ಹಣವನ್ನು ಕೊಡಲು ಈಗಾಗಲೇ ಎಲ್ಲ ಚಂದಾದಾರರಿಗೆ ಬಿಲ್ಲುಗಳನ್ನು ಕಳಿಸಲಾಗಿದೆ. ಸಹೃದಯ ಚಂದಾದಾರರು ದಯಮಾಡಿ ತಮ್ಮ ತಮ್ಮ ಚಂದಾ ಹಣವನ್ನು ಕುಳುಹಿಸಿ, ಈ ಮುಂದೆಯೂ ಅದೇ ರೀತಿ ನಮ್ಮನ್ನು ಪ್ರೋತ್ಸಾಹಿಸುವರಾಗಿ ಬೇಡಿಕೊಳ್ಳುತ್ತೇವೆ.

ಮೈಸೂರ ರಾಜ್ಯದಲ್ಲಿಯ ವಿದ್ಯಾರ್ಥಿತೆಯ ಟ್ರೇನಿಂಗ ಸಂಸ್ಥೆಗಳ ಉಪಾಧ್ಯಾಯರ

ವಿಚಾರ ಗೋಷ್ಠಿ ೧೯೬೦

(ಜೀವನ ಶಿಕ್ಷಣ ಸಪ್ತಾಹದ ಅಂಗವಾಗಿ)

ಧಾರವಾಡ ೧೫: ಜೀ. ಶಿ. ವಿಚಾರ ಗೋಷ್ಠಿಯು ೧೧–೨–೬೦ರಂದು ಮುಂಜಾನೆ ೮–೩೦ಕ್ಕೆ ಪ್ರಾರ್ಥನೆಯೊಂದಿಗೆ ಪ್ರಾರಂಭವಾಯಿತು. ೨೪ ಟ್ರೇ. ಸಂ. ಗಳಿಂದ ೨೮ ಪ್ರತಿನಿಧಿಗಳು ಆಗಮಿಸಿದ್ದರು. ನಿರ್ದೇಶಕರಾದ ಶ್ರೀ ಶ್ಯಾ. ಶ್ರೀ. ಹುಕ್ಕೇರಿಯವರು ಎಲ್ಲರನ್ನೂ ಹೃತ್ಪೂರ್ವಕವಾಗಿ ಸ್ವಾಗತಿಸುತ್ತ, ಜೀ. ಶಿ. ದಲ್ಲಿ ಕಾರ್ಯ ಮಾಡುವಾಗ ಬರುವ ಅಡೆತಡೆಗಳನ್ನು ಕುರಿತು ಸಮಸ್ಯೆಗಳನ್ನು ತಿಳಿಸಿ, ಅವುಗಳನ್ನು ಇಂಥ ವಿಚಾರ ಗೋಷ್ಠಿಗಳಲ್ಲಿ ಬಿಡಿಸುವ ಅವಶ್ಯಕತೆಯನ್ನು ಸಭೆಯ ಮುಂದೆ ಇಟ್ಟರು. ಶ್ರೀ ರಾ. ಶ್ರೀ ಹುಕ್ಕೇರಿಕರ, ಚೇರಮನ್, ಗಾಂಧಿ ಸ್ಮಾರಕ ನಿಧಿ, ಧಾರವಾಡ, ಇವರು ಈ ವಿಚಾರ ಗೋಷ್ಠಿಯನ್ನು ಉದ್ಘಾಟಿಸುತ್ತ ಜೀ. ಶಿ. ಕಾರ್ಯಕರ್ತರು, ಮೇಲ್ವಿಚಾರಕರು ಮತ್ತು 'ತರಬೇತಿ ಸಂಸ್ಥೆಗಳ ಅಧ್ಯಾಪಕರು' ನಿಷ್ಠೆಯಿಂದ ದುಡಿಯುವದು ಅವಶ್ಯವಿದೆ; ವಿಶಾಲ ದೃಷ್ಟಿಯಿಂದ ಮೂಲ ತತ್ವಗಳಿಗೆ ಬಾಧೆ ಬರದಂತೆ ದುಡಿಯಿರಿ. ಮೂಲೋದ್ಯೋಗಗಳು ಜೀವನದಲ್ಲಿ ಹಲವಾರು ಇವೆ. ಅವೆಲ್ಲವುಗಳನ್ನು ಶಿಕ್ಷಣ ದೃಷ್ಟಿಯಿಂದಲೂ ಉಪಯೋಗಿಸಿರಿ ಎಂದು ತಿಳಿಸಿದರು.

ನಂತರ ಮಧ್ಯಾಹ್ನದಲ್ಲಿ ಪ್ರತಿನಿಧಿಗಳು ೫ ಗುಂಪುಗಳಲ್ಲಿ ೫ ಸಮಸ್ಯೆಗಳನ್ನು ಬಿಡಿಸಿ, ಅವುಗಳನ್ನು ಮರುದಿನ ಸಭೆಯಲ್ಲಿ ಚರ್ಚೆಗೆ ಇಟ್ಟರು.

ಚರ್ಚೆಯ ವಿಷಯಗಳು : ೧. ಜೀ. ಶಿ. ಶಾಲೆಗಳಲ್ಲಿ ಮೌಲ್ಯಮಾಪನ, ೨. ಚಟುವಟಿಕೆಗಳಿಗೆ ಅನುಗುಣವಾದ ಪಾಠ್ಯ ಪುಸ್ತಕಗಳು, ೩. ಸಾಂಸ್ಕೃತಿಕ ಚಟುವಟಿಕೆಗಳು, ಪ್ರದರ್ಶನ, ದಿನಾಚರಣೆಗಳನ್ನು ಶೈಕ್ಷಣಿಕ ಲಾಭವಾಗುವಂತೆ ಸಂಘಟಿಸುವದು, ೪. ಮೂಲೋದ್ಯೋಗಗಳನ್ನು ಶೈಕ್ಷಣಿಕ ರೀತಿಯಲ್ಲಿ ಕಲಿಸುವದು, ೫. ಟ್ರೇನಿಂಗ ಸಂಸ್ಥೆಗಳು ಬಲಗೊಳ್ಳಲು ಯಾವ ಬದಲಾವಣೆಗಳು ಬೇಕು.

೧೩–೨–೬೦ರಂದು ಮುಂಜಾನೆ ಶ್ರೀ ಹಂದ್ರಾಳ, ಇ. ಆಯ್. ಧಾರವಾಡ ಇವರು ಜೀ. ಶಿ. ಶಾಲೆಗಳ

ಪಾಸಣೆಯೆಂಬ ವಿಷಯವನ್ನು ಕುರಿತು, ಮತ್ತು ೫–೨–೬೦ರಂದು ಶ್ರೀ ಎಸ್. ಬಿ. ಪಾಟೀಲ, ಗ್ರಾಮ ಸೇವಕರ ತರಬೇತಿ ಕೇಂದ್ರ ಇವರು ಜೀ. ಶಿ. ದಲ್ಲಿ ಸಹಕಾರತನದ ಸ್ಥಾನ ಈ ವಿಷಯವನ್ನು ಕುರಿತು ಭಾಷಣ ಮಾಡಿದರು.

ಪ್ರತಿನಿಧಿಗಳು ಎರಡು ಮೂವತ್ತು ಪಾಠಗಳನ್ನು ನಿರೀಕ್ಷಿಸಿದರು; ಮತ್ತು ಸ್ಥಳಿಕ ಜೀ. ಶಿ. ಶಾಲೆಗಳನ್ನು ಸಂದರ್ಶಿಸಿದರು.

೧೫–೨–೬೦ ಮಧ್ಯಾಹ್ನ ಮುಕ್ತಾಯ ಸಮಾರಂಭಕ್ಕೆ ಶ್ರೀ ಆರ್. ವಾಯ್. ಧಾರವಾಡಕರ ಇವರು ಮುಖ್ಯ ಅತಿಥಿಗಳಾಗಿ ಬಂದಿದ್ದರು. ಅವರು ಪ್ರತಿನಿಧಿಗಳನ್ನು ಉದ್ದೇಶಿಸಿ ಮಾತನಾಡುತ್ತ, ದೇಶದ ಉದ್ಧಾರಕ್ಕಾಗಿ ಗಾಂಧೀಜಿಯವರು ಹೇಳಿದ ಸಂಗತಿಗಳನ್ನು ಸರಿಯಾಗಿ ತಿಳಿದುಕೊಂಡು ಆ ಮಾರ್ಗದಲ್ಲಿ ನಿಷ್ಠೆಯಿಂದ ದುಡಿಯಿರಿ ಎಂದು ಸೂಚಿಸಿದರು. ಪ್ರತಿನಿಧಿಗಳಿಗೆ ವಸತಿ, ಭೋಜನ ವ್ಯವಸ್ಥೆಯನ್ನು ಗಂ. ಸ. ಟ್ರೇ. ಕಾ. ದಲ್ಲಿ ಮಾಡಲಾಗಿತ್ತು. ಪ್ರಾರ್ಥನಾ ಮಂದಿರದಲ್ಲಿ ಸಭೆಯ ಕಾರ್ಯಕಲಾಪಗಳು ನಡೆದವು.

ಈ ವಿಚಾರ ಗೋಷ್ಠಿಯು ಯಶಸ್ವಿಯಾಗಿ ಸಾಗುವಂತೆ ಸಹಾಯ ಮಾಡಿದ ಸಂಸ್ಥೆಗಳ ಮುಖ್ಯ ಅಧ್ಯಾಪಕರಿಗೂ, ಗುರುಗಳಿಗೂ ನಿರ್ದೇಶಕರು ಹೃತ್ಪೂರ್ವಕವಾಗಿ ಆಭಾರಗಳನ್ನು ಸಲ್ಲಿಸುತ್ತಾರೆ.

ಎಸ್. ಎಸ್. ಹುಳ್ಕೇರಿ
ನಿರ್ದೇಶಕರು ಮತ್ತು ಪ್ರಿನ್ಸಿಪಾಲರು ಜಿ. ಬಿ. ಟಿ. ಸಿ. ಧಾರವಾಡ

ಧಾರವಾಡ
೧೫–೨–೧೯೬೦

ಪುಸ್ತಕ ವಿಮರ್ಶೆ

ಸೆಳೆತದ ಶಿಲುಬೆ:– ಕ್ರೌನ ೪; ಪುಟಗಳು ೧೫೬; ಬೆಲೆ ೧ ರೂ. ೫೭ ನ. ಪೈ.

ಕಥೆಗಾರರು: ಶ್ರೀ ವೆಂ. ಮು. ಜೋಶಿ, ಪ್ರಕಾಶನ: ಜಯಂತ ಪ್ರಕಾಶನ, ಧಾರವಾಡ

'ಸೆಳೆತದ ಶಿಲುಬೆ' ಎಂಬ ಕಥಾ ಸಂಗ್ರಹವನ್ನು ಕನ್ನಡಿಗರಿಗೆ ನೀಡಿದ ಪ್ರೀಯುತ ವೆಂ. ಮು. ಜೋಶಿಯವರು ಈಗಾಗಲೇ ಬಹುಮಟ್ಟಿಗೆ ಕಥೆಗಾರರೆಂದು ಹೆಸರು ಪಡೆದಿದ್ದಾರೆ. ಈ 'ಶಿಲುಬೆ'ಯನ್ನು ಕಥೆಗಾರರು ಹನ್ನೆರಡು ಕಥೆಗಳ ಕಟ್ಟಿನಿಂದ ಮಾಡಿದ್ದಾರೆ. ಕೆಲವು ಕಥೆಗಳು ಮಡಿವಂತಿಕೆಯಾಚರಣೆಯ 'ಶಿಲುಬೆ'ಯಂತೆಸಿದರೂ ಅಲ್ಲಿ ಸೆಳೆತವಿದ್ದುದನ್ನೂ ಸಹಾ ಗುರುತಿಸಿದ್ದಾರೆ. ಆಂತೆಯೇ ಕಥೆಗಳನ್ನು ಓದುತ್ತ ಹೋದಂತೆ ಹೋಗಿದ್ದರೂ ಓದಿ ಮುಗಿಸಿ ಬಿಡೋಣ ಎಂದೆನಿಸುತ್ತದೆ. ಆ ದೃಷ್ಟಿಯಿಂದ ಕಥಾಕಾರರು ತಮ್ಮ ಈ ಕಥಾ ಸಂಗ್ರಹಕ್ಕೆ ಕೊಟ್ಟ ಶಿರೋಲೇಖವು ಉಚಿತವಾದುದೆಂದೇ ಹೇಳಬೇಕು. ಕೊನೆಯ ಕಥೆಯ ಹೆಸರನ್ನೇ ತಮ್ಮ ಈ ಕಟ್ಟಿಗೆ ಇಟ್ಟಿದ್ದಾರೆ. ಸಮಾಜದಲ್ಲಿ ಕಾಣುವ ವಿವಿಧ ವ್ಯಕ್ತಿಗಳ ಮಾನಸಿಕ ದ್ವಂದ್ವವನ್ನೂ ಕಥೆಗಾರರು ಚಿತ್ರಿಸುವಲ್ಲಿ ಯಶಸ್ವಿಯಾಗಿದ್ದಾರೆ. ಸೆಳೆತದ ಶಿಲುಬೆಯಲ್ಲಿಯ ನಿಂಗಿಯ, ಅವಿಧೆಯಲ್ಲಿಯ ಮಾಲಿಸಿಯ ಮನೋವಿಶ್ಲೇಷಣೆಯನ್ನು ಚೆನ್ನಾಗಿ ನಿರೂಪಿಸಿದ್ದಾರೆ.

ಸ್ತ್ರೀ ಸಹಜವಾದ ಮಾನಸಿಕ ದೌರ್ಬಲ್ಯಗಳನ್ನೂ; ಸಮಾಜದಲ್ಲಿ ತೆರೆಯ ಮರೆಯಲ್ಲಿ ಕಾಣುವ ಕಾಮ ಕೇಳಿಯನ್ನೂ ಕಥೆಗಳಲ್ಲಿ ಚನ್ನಾಗಿ ಮೂಡಿಸಿದ್ದಾರೆ. ಪ್ರತಿಯೊಂದು ಕಥೆಯಲ್ಲಿಯ ಘಟನೆಗಳನ್ನು ಸರಲವಾಗಿ. ಸುಂದರವಾಗಿ ವಿವರಿಸಿರುವರಲ್ಲದೆ,ಆ ವಿವರಣೆಯಲ್ಲಿ ಒಂದು ಓಟ ಕಾಣುತ್ತಿದೆ. ಅಲ್ಲಲ್ಲಿ ಕೆಲವು ಅಚ್ಚು ದೋಷಗಳು ಕಾಣ ಬರುವದುಂಟು. ಮೊದಲು ಕಥೆಯ ಶಿರೋಲೇಖವೇ ಅಚ್ಚಿನ ದೋಷಕ್ಕೆ ಗುರಿಯಾದುದು ಕಾಣುವುದು. ಕೆಲ ಕೆಲವು ಶಬ್ದಗಳು ಅಶ್ಲೀಲವೆನಿಸಿದರೂ, ನಡೆದ ಘಟನೆಗಳ ನಗ್ನ ಸತ್ಯವನ್ನು ನುಡಿಯಬೇಕಾದರೆ ಅನಿವಾರ್ಯವೆನಿಸುವವು. ಒಟ್ಟಿನಲ್ಲಿ ಕಥಾ ಸಂಗ್ರಹವು ಓದಬೇಕೆನಿಸುವದು. ಕನ್ನಡ ಕಥಾ ಸಾಹಿತ್ಯವನ್ನು ಹಿಗ್ಗಿಸಲೆತ್ನಿಸಿದ ಶ್ರೀ ಜೋಶಿಯವರು ಅಭಿನಂದನಾರ್ಹರು. ಕನ್ನಡಿಗರು ಕೊಂಡು ಓದಿ ಅವರಿಗೆ ತಮ್ಮ ಮೆಚ್ಚುಗೆಯನ್ನು ಸಲ್ಲಿಸಬೇಕು. ಇಲ್ಲದಿದ್ದರೆ ಅವರೇ ಬರೆದಂತೆ "ಸ್ವಂತದ ಶ್ರಾದ್ಧವಾದೀತು."

— ಹಗ್ಗೋ

ಜೀವನ ಶಿಕ್ಷಣ ಶಾಲೆಗಳ ಮೇಲ್ವಿಚಾರಣೆಯಲ್ಲಿ ಹೊಸ ದೃಷ್ಟಿಕೋನ

ಮೈಸೂರ ರಾಜ್ಯದ ಜೀವನ ಶಿಕ್ಷಣ ಟ್ರೇನಿಂಗ ಕಾಲೇಜುಗಳ ಪ್ರಾಧ್ಯಾಪಕರ ವಿಚಾರಗೋಷ್ಠಿಯ ಕಾರ್ಯಕ್ರಮದಲ್ಲಿ ಶ್ರೀ ಎಮ್. ಜಿ. ಹಂದ್ರಾಳ ಜಿಲ್ಲಾ ಶಿಕ್ಷಣಾಧಿಕಾರಿಗಳು, ಧಾರವಾಡ ಇವರು ಮಾಡಿದ ಭಾಷಣದ ಸಾರವು.)

ವರದಿ ಮಾಡಿದವರು: **ಶ್ರೀ ಎಸ್. ಆರ್. ಮಕರಿ,** ಧಾರವಾಡ

ಜೀವನ ಶಿಕ್ಷಣ ಕ್ಷೇತ್ರದಲ್ಲಿ ದುಡಿದು ಅದರ ಅನುಭವ ಪಡೆದವರಾದ ತಮ್ಮೊದುರು ನನ್ನ ಕೆಲವು ಅನುಭವಗಳನ್ನು ನಾನು ಹೇಳಬಯಸುತ್ತೇನೆ. ನಾನು ಹೇಳುವ ವಿಚಾರಗಳು ಹೊಸವು ಎಂದು ಯಾರೂ ಭಾವಿಸಬಾರದು. ಆದರೆ ಒಬ್ಬರ ಅನುಭವಗಳು ಇನ್ನೊಬ್ಬರಿಗೆ ಹೊಸವೆನಿಸಬಹುದಾಗಿದೆ. ಪರಸ್ಪರರ ಅನುಭವಗಳ ವಿನಿಮಯವೇ ವಿಚಾರ ಗೋಷ್ಠಿಯ ಮುಖ್ಯಕಾರ್ಯವು.

ಮೂಲ ಶಿಕ್ಷಣ ಶಾಲೆಗಳನ್ನು ಮೇಲ್ವಿಚಾರಿಸುವ ಬಗೆಗೆ ನಾನು ನಾಲ್ಕು ಮಾತುಗಳನ್ನು ಆಡಲಿದ್ದೇನೆ. ಯಾವದೇ ವಿಷಯವನ್ನು ಅಭ್ಯಸಿಸುವ ಪೂರ್ವದಲ್ಲಿ ಅದರ ಮೂಲ ವಿಚಾರವನ್ನು ತಿಳಿದುಕೊಳ್ಳಬೇಕು. ಮೂಲ ಶಿಕ್ಷಣವನ್ನು ಯಾವ ತೆರನಾಗಿ ಪರಿಶೀಲಿಸಬೇಕು? ಎಂಬುದರ ಬಗೆಗೆ ನಾವೆಲ್ಲರೂ ಒಂದು ಹೊಸ ದೃಷ್ಟಿಕೋನವನ್ನು ತಂದುಕೊಳ್ಳಬೇಕಾಗಿದೆ. ಮಹಾತ್ಮಾ ಗಾಂಧೀಜಿಯವರ ವಿಚಾರ ಪ್ರಣಾಲಿಯ ಮೇಲೆ ರಚಿತವಾದ ಬುನಿಯಾದಿ ತಾಲೀಮು ಅಥವಾ 'Basic Education' ಇದನ್ನು ನಾವು ಕನ್ನಡದಲ್ಲಿ ಮೂಲ ಶಿಕ್ಷಣವೆಂದು ಕರೆಯುತ್ತೇವೆ. ಶಿಕ್ಷಣವನ್ನು ಒಂದು ಮಂದಿರಕ್ಕೆ ಹೋಲಿಸುವದಾದರೆ ಅದರ ಅಡಿಪಾಯ ಅಥವಾ ತಳಪಾಯ ಮೂಲ ಶಿಕ್ಷಣವಾಗಿದೆ. ಶಿಕ್ಷಣವನ್ನು ಒಂದು ವೃಕ್ಷಕ್ಕೆ ಹೋಲಿಸಿದರೆ ಅದರ ಬೇರುಗಳೇ ಮೂಲ ಶಿಕ್ಷಣ ಎಂದು ಹೇಳಬಹುದು.

ಪ್ರಾಥಮಿಕ ಶಿಕ್ಷಣದ ಹಂತದಲ್ಲಿ ಕೃತಿ ಮೂಲಕ ಜ್ಞಾನ ಕೊಡಬೇಕೆಂದು ೧೯೧೯ರಲ್ಲಿ ಅಡಾಲ್ಫೊ ಫೇರಿಯವರು ಯರೋಪದಲ್ಲಿ ಹಾಗು ಜಾನ್ ಡೂಯಿ, ಅಮೇರಿಕೆಯಲ್ಲಿ ಚಳವಳಿ ಪ್ರಾರಂಭಿಸಿದ್ದುಂಟು. ಗಾಂಧೀಜಿಯವರ ಜೀವನ ಶಿಕ್ಷಣ ಪ್ರಣಾಲಿಯು ಆಧುನಿಕ ದೃಷ್ಟಿಕೋನದಲ್ಲಿ ಒಂದು ಪರಿಸ್ಥಿತಿಗನುಸರಿಸಿ ಆಧುನಿಕ ರೀತಿಯಲ್ಲಿ ರೂಪಗೊಂಡುದಾಗಿದೆ. ಕೃತಿ ಪ್ರಧಾನ ಶಿಕ್ಷಣವು ಗ್ರಾಮ ಕೈಗಾರಿಕೆಯ ಮುಖಾಂತರ ಸಾಗಬೇಕು; ಉದ್ಯೋಗದಲ್ಲಿ ನಿರ್ದಿಷ್ಟತೆ ಇರಬೇಕು. ಜೀವನದ ಮೂಲಭೂತ ಬೇಡಿಕೆ ಪೂರೈಸುವ ಉದ್ಯೋಗಗಳಿಗೆ ನಾವು ಪ್ರಾಮುಖ್ಯತೆ ಕೊಡಬೇಕು. They supply the prime needs of life. ಈ ದೃಷ್ಟಿಯಿಂದಲೂ ಮೂಲ ಶಿಕ್ಷಣದ ಅರ್ಥವು ಸಾರ್ಥಕವೆನಿಸುತ್ತದೆ.

ಗಾಂಧೀಜಿಯವರು ಆದರ್ಶ ಸಮಾಜ ರಚನೆಯನ್ನು ಮಾಡಬಯಸಿದ್ದರು. ಅವರು ರಾಜಕೀಯ ಮತ್ತು ಆರ್ಥಿಕ ವಿಚಾರಗಳಿಗೆ ತಮ್ಮ ಬಹಳ ಸಮಯ ಕಳೆದಿದ್ದರೂ ಶಿಕ್ಷಣದ ಬಗೆಗೂ ಬಹಳ ಆಳವಾಗಿ ವಿಚಾರಮಾಡಿ ಅವುಗಳನ್ನು ವ್ಯಕ್ತಪಡಿಸಿದ್ದಾರೆ. ನಾವು ಯಾವದೇ ಸುಧಾರಣೆಯನ್ನು ಮಾಡಬಯಸುವದಾದರೆ ಅದು ಶಿಕ್ಷಣದ ಮೂಲಕವೇ ಸಾಧ್ಯವೆಂಬ ಮಾತನ್ನು ಅವರು ಬಲವಾಗಿ ನಂಬಿದ್ದರು. ವರ್ಗರಹಿತವಾದ, ಅಹಿಂಸಾತ್ಮಕವಾದ, ಶೋಷಣ ರಹಿತ ಸಮಾಜ ರಚನೆಯನ್ನು ಈ ಮೂಲ ಶಿಕ್ಷಣದ ತಳಪಾಯದ ಮೇಲೆ ಕಟ್ಟುವದು ಸಾಧುಮಾರ್ಗವೆಂದು ತಿಳಿದರು.

ಮೂಲ ಶಿಕ್ಷಣವು ಕೇವಲ ಬೋಧನಕ್ರಮವಾಗಿ ಉಳಿಯಬಾರದು. Basic education is a phylosophy of life. It is not a mere system of instruction. ಜೀವಿಯು ಜೀವನದ ಮೂಲಕ ಜೀವಿಕೆಯ ಮಾರ್ಗವನ್ನು ಕಂಡುಕೊಳ್ಳುತ್ತದೆ. ಯಾವದೇ ಪಠ್ಯವಸ್ತುವಿನ ಮೂಲಕ ಕಲಿಯುವದು, ಇಲ್ಲವೇ ಕಲಿಸುವದು ತಪ್ಪಾಗುವದು. ಜೀವನ ಶಿಕ್ಷಣ

ವನ್ನು ಸಮಗ್ರವಾಗಿ ನೋಡಬೇಕು. ಮಗುವಿನ ಅಖಂಡ ವ್ಯಕ್ತಿತ್ವವನ್ನು ನಿರ್ಮಾಣಮಾಡುವದು ಮೂಲ ಶಿಕ್ಷಣದ ಹಿರಿಯಾಸೆಯಾಗಿದೆ. ಮಗು ಆಡುತ್ತ, ನೋಡುತ್ತ ಹಾಗೂ ಕೇಳುತ್ತ ತನ್ನ ಅನುಭವದ ಮೂಲಕ ಕಲಿಯುವದು ಅವನಲ್ಲಿ ಬಹುದಿನ ಉಳಿಯುತ್ತದೆ. ಮಕ್ಕಳಿಗೆ ಅನುಭವ ಪಡೆಯಲು ಅವಕಾಶ ಮಾಡಿಕೊಡಬೇಕು. Learning should be a joyous experience for the child. ಅಭಿರುಚಿ (Test) ಮತ್ತು ಒಳ (Tendency) ಇವುಗಳನ್ನು ಶಿಕ್ಷಕ ನಿರ್ಲಕ್ಷಿಸಲಾಗದು.

ಶಿಕ್ಷಣದಲ್ಲಿಯೂ ಹಿಂಸೆ, ಅಹಿಂಸೆಯ ಪ್ರಶ್ನೆ ಎಲ್ಲಿಯದು ಎಂದು ಕೆಲವರು ಉದ್ಗಾರ ತೆಗೆಯುತ್ತಾರೆ. ಗಾಂಧೀಜಿಯವರು 'ನಾವು ಕೆಟ್ಟ ನೂಲನ್ನು ತೆಗೆಯುವದೂ ಒಂದು ಹಿಂಸಾಕೃತಿಯೇ' ಎಂದು ಒಂದು ಸಂದರ್ಭದಲ್ಲಿ ನುಡಿದುದನ್ನು ಗಮನಿಸಬೇಕು. ದೋಷಯುಕ್ತವಾದ ನೂಲು ನೇಕಾರನ ಕೈಯಲ್ಲಿ ಬಂದಾಗ ಅವನೆಷ್ಟು ತೊಂದರೆ ಪಡುತ್ತಾನೆ! ಅವನಿಗಾಗುವ ಸಂಕಷ್ಟ ಹಿಂಸೆ ಎನಿಸುವದಿಲ್ಲವೇ? ನಮ್ಮ ದೃಷ್ಟಿ ವಿಶಾಲವಾಗಬೇಕು. ಇನ್ನೊಬ್ಬರ ಚಿಂತೆ ನಮಗೇಕೆ? ಈ ಭಾವನೆ ಘಾತುಕವಾದುದು. ನಮಗೆ ಒಪ್ಪಿಸಿಕೊಟ್ಟ ಕಾರ್ಯವನ್ನು ಚೊಕ್ಕಟವಾಗಿ ಮಾಡುವದಲ್ಲದೆ ಇನ್ನೊಬ್ಬರ ಕಾರ್ಯದಲ್ಲಿ ಸಹಕರಿಸುವದೂ ಸಾಂಘಿಕ ಜೀವನದ ದೃಷ್ಟಿಯಿಂದ ಬಹು ಮುಖ್ಯವಾದುದು.

ಶಾಲೆಗಳ ವಾರ್ಷಿಕ ತಪಾಸಣೆಯ ಕಾಲಕ್ಕೆ ನಾವು ನೋಡುತ್ತ ಬಂದಿರುವದೇನು? ಅಭ್ಯಾಸ ಪತ್ರಿಕೆಗೆ ಅನುಸರಿಸಿ ಅಭ್ಯಾಸ ಸಾಗಿದೆಯೇ? ಗಂಟೆಗನುಸರಿಸಿ ಪಾಠ ಪ್ರವಚನ ನಡೆಯುತ್ತಿರುವದೇ? ಇವೇ ತಾನೇ? ಅದರಿ ದೃಷ್ಟಿಕೋನ ಬದಲಾಯಿಸಬೇಕು. ಬಾಲಕರಲ್ಲಿ ಶಿಸ್ತೂ ಇಲ್ಲ, ಶಿಕ್ಷಕನ ಕಾರ್ಯದಲ್ಲಿ ಕಾರ್ಯ ಸಂಘಟನೆಯಿಲ್ಲ, ಅಭ್ಯಾಸ ಪತ್ರಿಕೆ, ಹಾಗೂ ವೇಳಾಪತ್ರಿಕೆಗಳಿಗೆ ಅನುಸರಿಸಿ ಕೆಲಸ ಸಾಗಿಲ್ಲ ಎಂದು ಹೇಳುವದು, ಹಳೆಯ ಸಾಂಪ್ರದಾಯದ ಪರಿಶೀಲನೆ. ಶಿಕ್ಷಕ ಎಂತೋ ಹೇಗೋ ಮೇಲ್ವಿಚಾರಕರಿಂದ ಪಾರಾಗಲು ಪ್ರಯತ್ನಿಸುವದು ಬೇಡ. ಅಭ್ಯಾಸ ಪತ್ರಿಕೆ, ವೇಳಾಪತ್ರಿಕೆ ಹಾಗು ಹಿಂದಿನ ಸೂಚನೆಗಳನ್ನು ಅಮಲಿನಲ್ಲಿ ತರುವದು ಇವೆಲ್ಲವುಗಳು ಔಪಚಾರಿಕವಾದವುಗಳು.

ಮೇಲ್ವಿಚಾರಕರು ಎಲ್ಲ ಶಿಕ್ಷಕರನ್ನೂ ಒಂದೆಡೆಗೆ ಬರಮಾಡಿಕೊಂಡು ಅವರ ಕುಂದು ಕೊರತೆಗಳೇನು? ಶಾಲೆಯನ್ನು ಪ್ರಗತಿ ದಿಸೆಯಲ್ಲಿ ಒಯ್ಯುವಲ್ಲಿ, ಹಾಗೂ ಅಡಚಣಿತದಲ್ಲಿ ಬರುವ ಆತಂಕಗಳೇನು? ಇವುಗಳ ಒಗೆಗೆ ಸರಿಯಾದ ಮಾರ್ಗದರ್ಶನ (Guidance) ಮಾಡಬೇಕು. ಶಾಲೆಯ ಪ್ರಗತಿಗೆ ಶಿಕ್ಷಕ–ಶಿಷ್ಯ ಇವರಿಬ್ಬರ ಸಂಬಂಧದೊಡನೆ ಪಾಲಕ ಹಾಗೂ ಮೇಲ್ವಿಚಾರಕರ ಸಹಕಾರವೂ ಅಷ್ಟೇ ಮಹತ್ವದ್ದೆನಿಸುತ್ತದೆ. ಶಾಲೆಯ ಪ್ರಗತಿ ಪರಿಶೀಲನೆಯನ್ನು ನೋಡುವಾಗ ಮಕ್ಕಳ ಶಿಕ್ಷಣವನ್ನು ಇಡಿಯಾಗಿ ನೋಡಬೇಕು. ಆರೋಗ್ಯ, ಶೀಲ, ವ್ಯವಹಾರ ಜ್ಞಾನ, ಹಾಗೂ ಸಂಸ್ಕೃತಿ ಇವುಗಳಿಲ್ಲದರ ಕಡೆಗೆ ಮೇಲ್ವಿಚಾರಕನ ದೃಷ್ಟಿ ಬೀಳಬೇಕು. ಮೇಲ್ವಿಚಾರಣೆಯಲ್ಲಿ ದೋಷದೋಷಗಳನ್ನು ನೋಡುವ ದೃಷ್ಟಿಕೋನವೇ ಮುಖ್ಯವಲ್ಲ. ಜೀವನ ಶಿಕ್ಷಣ ಶಾಲೆಗಳ ಮೇಲ್ವಿಚಾರಣೆ ಮಾಡುವಾಗ ಶಾಲೆಯ ಅಭ್ಯಾಸ, ಚಟುವಟಿಕೆಗಳು, ಹಾಗೂ ಶಿಕ್ಷಕರ ಮಾರ್ಗದರ್ಶನದ ರೀತಿ ಇವುಗಳ ಕಡೆಗೆ ಗಮನಕೊಡಬೇಕು.

ಜೀವನ ಶಿಕ್ಷಣ ಶಾಲೆಗಳಲ್ಲಿ ಶಿಕ್ಷಕನು ಮಾಡುವ ಪೂರ್ವಯೋಜನೆಗೆ (Teacher's plan) ಬಹಳ ಮಹತ್ವವಿದೆ. ಶಿಕ್ಷಕನು ವಾರ್ಷಿಕಯೋಜನೆ ಮಾಡಿದ್ದಾನೆಯೇ? ಅದರ ಮೇಲೆ ತಿಂಗಳ ಹಾಗೂ ವಾರದ ಮತ್ತು ದಿನದ ಯೋಜನೆ ವಿಭಜಿಸಿಕೊಂಡು ಚಟುವಟಿಕೆಗಳ ಮುಖಾಂತರ ವಿಷಯಗಳ ಹೊಂದಿಕೆ ಇಲ್ಲವೆ ಸಮನ್ವಯ ಸಾಧಿಸಿರುವನೆಂಬುದನ್ನು ನೋಡುವದು ಮುಖ್ಯವಾದುದು. ಮಾಡಿದ ಯೋಜನೆಯಲ್ಲಿ ಸಾಗಿಸಿದ ಅಭ್ಯಾಸದ ಪ್ರಮಾಣವೆಷ್ಟು? ಇದನ್ನು ಮೇಲ್ವಿಚಾರಕನು ಸಹಜವಾಗಿ ಕಂಡು ಹಿಡಿಯಬೇಕು. ಶಿಕ್ಷಕನಲ್ಲಿ ಮೂಲ ಶಿಕ್ಷಣದ ಬಗೆಗೆ ಧ್ಯೇಯ ನಿಷ್ಠತೆ ಮುಖ್ಯವಾಗಿರಬೇಕು. ಅದರಲ್ಲಿ ವಿಶ್ವಾಸವಿಲ್ಲದವನ ಕೈಯಲ್ಲಿ ಜೀವನ ಶಿಕ್ಷಣವು ಪ್ರಗತಿಹೊಂದಲಾರದು.

ಶಿಕ್ಷಕನಲ್ಲಿ ಸ್ವಯಂಪ್ರಯತ್ನ ಬೇಕು. ಅಭ್ಯಾಸ ಪತ್ರಿಕೆಯ ಸಂಯೋಜನೆಯಲ್ಲಿ ಪ್ರತಿ ವರುಷಕ್ಕೂ ಮಾಡಬೇಕಾದ ಬದಲಾವಣೆಯಲ್ಲಿ ಅವನು ಮಾಡಿದ ಪ್ರಯತ್ನಗಳು ಸ್ಪಷ್ಟವಾಗಿ ಕಂಡುಬರುತ್ತವೆ. ಯಾರೊಬ್ಬರು ಮಾಡಿದ ನಕಲು, ಇಲ್ಲವೆ ಅಂಧಾನುಕರಣ ಮಾಡಿದಾನೆಯೋ ಹೇಗೆ? ಕೇವಲ ದಿನಾಂಕ ಹಾಗೂ

ಶಿಕ್ಷಕನ ಹೆಸರು ಬದಲಾಯಿಸಿದರೆ ಅದು ಆ ಶಿಕ್ಷಕನ ಯೋಜನೆಯಾಗಲಾರದು. ಚಟುವಟಿಕೆಗಳ ಸಂಘಟನೆಯು ಶಿಕ್ಷಕನ ಚಾತುರ್ಯವನ್ನು ತೋರಿಸುತ್ತದೆ.

ಮೂಲ ಶಿಕ್ಷಣ ಶಾಲೆಯಲ್ಲಿಯ ಶಿಕ್ಷಕ ಸ್ವತಃ ಚಟುವಟಿಕೆಯಲ್ಲಿ ಭಾಗವಹಿಸಬೇಕು. ಮಕ್ಕಳನ್ನು ಕೆಲಸದಲ್ಲಿ ತೊಡಗಿಸಿ 'ಗೌಡಕಿ' ಮಾಡುವ ಶಿಕ್ಷಕ ಮೂಲ ಶಿಕ್ಷಣ ಶಾಲೆಯ ಶಿಕ್ಷಕನೆನಿಸಲಾರನು. ಶಿಕ್ಷಕನು ಮಕ್ಕಳಲ್ಲಿ ಬೆರೆತು ಕೆಲಸಮಾಡಿದಾಗ ಮಾತ್ರ ಅವರಲ್ಲಿ ಶ್ರಮಗೌರವ (Dignity of labour) ಹಾಗೂ ಚಟುವಟಿಕೆಯಲ್ಲಿ ಆಸಕ್ತಿ (Interest in activity) ಮೂಡಿ ಬರಲು ಸಾಧ್ಯವಿದೆ.

ಶಿಕ್ಷಕ ತನ್ನ ಕಾರ್ಯವನ್ನು ಕಾರಕೂನನ ದೃಷ್ಟಿಯಲ್ಲಿರುವ ವ್ಯಾಪಾರಿ ವೃತ್ತಿಗೆ ಹೋಲಿಸಬಾರದು. He has to change the heart of the pupils.) ಇನ್ನೊಬ್ಬರಿಗೆ ಆಗುವ ನೋವನ್ನು ತಿಳಿಯುವ ಮನೋವಿಕಾಸ ಮಕ್ಕಳಲ್ಲಿ ಆಗಬೇಕು. ಇಡೀ ಶಾಲೆ ಒಂದು ಪ್ರಯೋಗಶಾಲೆ. ಜೀವನವೇ ಒಂದು ಅನುಭವ ಮಂಟಪ. ಜೀವನದ ಅನುಭವಗಳೇ ಒಂದು ಮಾಲೆ. ಶಿಕ್ಷಣ ನಿಂತ ನೀರಲ್ಲ. ಸತತ ಹರಿಯುವ ಪ್ರವಾಹ. ಶಿಕ್ಷಕನಲ್ಲಿ ಪ್ರಯೋಗ ಬುದ್ಧಿ ಬೇಕು. ಅವನು ಪ್ರಗತಿಪರ ವಿಚಾರದವನಾಗಿರಬೇಕು.

ಜೀವನ ಶಿಕ್ಷಣವು ಸಾಮಾಜಿಕ ಜೀವನದಲ್ಲಿ ಒಂದು ಕ್ರಾಂತಿಯನ್ನೇ ಉಂಟುಮಾಡಿದೆ. ಮೂಲ ಶಿಕ್ಷಣ ಪ್ರಣಾಲಿಯಿಂದ ಸಾಮಾಜಿಕ ಬೆಳವಣಿಗೆಗೆ ಶಾಲೆ ಸ್ಫೂರ್ತಿಯ ಸೆಲೆಯಾಗಿದೆ. Basic education in the national system of education ಮೂಲ ಶಿಕ್ಷಣವು ಭಾರತೀಯರಲ್ಲಿ ರಾಷ್ಟ್ರೀಯತೆಯನ್ನು ತಂದು ಕೊಡುವದು. ಜಗತ್ತಿನಲ್ಲಿ ಶಿಕ್ಷಣ ಚರಿತ್ರೆಯಲ್ಲಿಯೇ ಭಾರತೀಯರ ಶಿಕ್ಷಣವಾದ ಮೂಲ ಶಿಕ್ಷಣವು ಒಂದು ಹೊಸ ಅಧ್ಯಾಯವನ್ನೇ ಪ್ರಾರಂಭಿಸಿದೆ. ಇದನ್ನು ಯಶಸ್ವಿ ಗೊಳಿಸುವದು ಶಿಕ್ಷಣ ಕ್ಷೇತ್ರದಲ್ಲಿ ದುಡಿಯುತ್ತಿರುವ ನಮ್ಮ ನಿಮ್ಮೆಲ್ಲರ ಮುಖ್ಯ ಹೊಣೆಯಾಗಿದೆ.

ಜೈ ಹಿಂದ

ಜಗತ್ತಿನ ಚಪ್ಪರ

ಲೇಖಕರು : **ಶ್ರೀ ಶಿಂತ್ರಿ ಬಸಪ್ಪನವರು,** ಬಿ.ಎ.,ಬಿ.ಟಿ.

ಮೊದಲ ಮಾತು

ತಿಬೇಟದಲ್ಲಿ ಚೀನದ ದಬ್ಬಾಳಿಕೆಯು ಪ್ರಾರಂಭವಾದಾಗಿನಿಂದ ಅದರ ಹೆಸರು ಈಗ ಎಲ್ಲರ ಬಾಯಲ್ಲಿ ಕೇಳಬರುತ್ತಲಿದೆ. ಆ ದಬ್ಬಾಳಿಕೆಯ ಪರಿಣಾಮದಿಂದ ದಲಾಯಿ ಲಾಮಾರು ಸ್ವದೇಶತ್ಯಾಗ ಮಾಡಿ ನಮ್ಮ ದೇಶದಲ್ಲಿ ಆಶ್ರಯವನ್ನು ಬಯಸಿದರು. ಅಂತರಾಷ್ಟ್ರೀಯ ಶಿಷ್ಟಸಂಪ್ರದಾಯಕ್ಕನುಸರಿಸಿ ನಮ್ಮ ರಾಷ್ಟ್ರವು ಅವರಿಗೆ ಆಶ್ರಯವನ್ನಿತ್ತು ಮಸೂರಿಯಲ್ಲಿ ಅವರ ಘನತೆಗೆ ತಕ್ಕಂತೆ ಭವ್ಯವಾದೊಂದು ಇಮಾರತಿಯಲ್ಲಿಟ್ಟಿದೆ. ಅವರ ಗೂಡ ಅವರ ಅನುಯಾಯಿಗಳೆಷ್ಟೋ ಜನರು ಸ್ವದೇಶತ್ಯಾಗ ಮಾಡಿ ನಮ್ಮ ದೇಶಕ್ಕೆ ವಲಸೆ ಬಂದಿರುವರು. ಅವರಿಗೋಸ್ಕರ ನಮ್ಮ ಕೇಂದ್ರ ಸರಕಾರವು ವಸತಿ ಮುಂತಾದ ಎಲ್ಲ ಸೌಕರ್ಯಗಳನ್ನೊದಗಿಸಿ ಕೊಟ್ಟಿದುದು ಸರ್ವಶ್ರುತವಿದೆ. ತಿಬೇಟಕ್ಕೆ ಹೊರಗಿನ ದೇಶಗಳ ಸಂಪರ್ಕವಿರದ್ದರಿಂದ ಅದು ಎಷ್ಟೋ ಶತಮಾನಗಳವರೆಗೆ ಅಜ್ಞಾತವಾಗಿಯೇ ಉಳಿದಿದ್ದ ಕಾಲವೊಂದಿತ್ತು. ಅದರ ನೈಸರ್ಗಿಕ ಪರಿಸ್ಥಿತಿಯೇ ಅದನ್ನು ಹಾಗೆ ಮಾಡಿತ್ತು. ಅದಕ್ಕೆ ಜಗತ್ತಿನ ಚಪ್ಪರವೆಂದು ಕರೆಯುವ ವಾಡಿಕೆಯಿದೆ. ಕಾರಣವೆಂದರೆ, ಅದು ಜಗತ್ತಿನಲ್ಲಿ ಎಲ್ಲಕ್ಕೂ ಎತ್ತರವಾದ ತಪ್ಪಲು ಪ್ರದೇಶವು. ಅದಕ್ಕೆ ಲಾಮಾಗಳ ದೇಶವೆಂದೂ ಕರೆಯುತ್ತಾರೆ. ಯಾಕಂದರೆ, ಬೌದ್ಧ ಮತದ ಧರ್ಮ ಗುರುಗಳಾದ ಲಾಮಾಗಳ ಸಂಖ್ಯೆಯು ಅಲ್ಲಿ ಹೆಚ್ಚಿಗೆ ಇದೆ ಮತ್ತು ಅಲ್ಲಿಯ ಧಾರ್ಮಿಕ, ಸಾಮಾಜಿಕ, ಮುಂತಾದ ಎಲ್ಲ ಅಡಳಿತದ ಕಾರ್ಯಗಳನ್ನು ದಲಾಯಿ ಲಾಮಾರ

ಆಜ್ಞೆಗಳ ಪ್ರಕಾರ ಅವರೇ ಸಾಗಿಸುತ್ತಾರೆ. ದಲಾಯಿ ಲಾಮಾರು ಆ ದೇಶದ ಎಲ್ಲಕ್ಕೂ ಶ್ರೇಷ್ಠ ಧರ್ಮಗುರುಗಳೂ ಆಹುದು ಮತ್ತು ಸಾರ್ವಭೌಮರೂ ಆಹುದು. ಅದಕ್ಕೆ ಸೋಜಿಗದ ದೇಶವೆಂದೂ ಕರೆಯುತ್ತಾರೆ. ಯಾಕಂದರೆ, ಅವರ ಸಂಪ್ರದಾಯಗಳು ಹೊರಗಿನವರಿಗೆ ಸೋಜಿಗವಾಗಿಯೇ ಉಳಿದಿವೆ. ಅವರಿಗೆ ಹೊರಗಿನ ದೇಶಗಳ ಸಂಪರ್ಕವಿರದ್ದರಿಂದ ತಮ್ಮವೇ ಆದ ಹಳೇ ರೂಢಿಗಳಿಗೆ ಅಂಟಿಕೊಂಡಿದ್ದಾರೆ. ಅವು ಪರದೇಶದವರಿಗೆ ವಿಸ್ಮಯವನ್ನುಂಟು ಮಾಡುತ್ತಿವೆ. ಆ ದೇಶದ ಬಗೆಗೆ ಓದುಗರಿಗೆ ಹೆಚ್ಚಿನ ತಿಳಿವಳಿಕೆಯಾಗಲೆಂಬ ಸದುದ್ದೇಶದಿಂದ ನಮಗೆ ದೊರೆತ ವಿವರಗಳನ್ನು ಲೇಖರಿಸಿ ಅವುಗಳನ್ನು ಸುಸಂಬದ್ಧವಾಗಿ ಹೊಂದಿಸಿ ಈ ಲೇಖವೊಂದನ್ನು ಬರೆಯಲಾಗಿದೆ.

ಪ್ರಾಕೃತಿಕ ರಚನೆ

ಆ ದೇಶವು ಸಮುದ್ರ ಸಪಾಟಿಯಿಂದ ಸುಮಾರು ೧೬೫೦೦ ಅಡಿ ಎತ್ತರದ ಮೇಲಿದೆ. ಹಲವೆಡಗಳಲ್ಲಿಯಂತೂ ೨೨೦೦೦ ಅಡಿ ಎತ್ತರವಿದೆ. ಅದುದರಿಂದಲೇ ಅದಕ್ಕೆ ಜಗತ್ತಿನ ಚಪ್ಪರವೆಂಬ ಅಭಿಧಾನವು ಪ್ರಾಪ್ತವಾಗಿದೆ. ಅದರ ವಿಸ್ತಾರವು ಸುಮಾರು ೧೦೦೦೦೦೦ ಚದುರು ಮೈಲುಗಳಷ್ಟಿದೆ, ಮತ್ತು ಅದರ ಜನಸಂಖ್ಯೆಯು ಸುಮಾರು ೪೦೦೦೦೦೦ ದಷ್ಟಿದೆ. ಒಂದು ಚೌರಸ ಮೈಲಿಗೆ ೪ ಜನವಿದ್ದಂತಾಯಿತು. ಇದರ ಮೇಲಿಂದ ಅಲ್ಲಿ ಜನವಸತಿಯು ಅತಿ ವಿರಳವೆಂದೇ ನಾವು ಅನ್ನಬೇಕು. ಆ ದೇಶವು ಒಂದು ಮಗ್ಗಲು ಭಯಾನಕವಾದ ಮತ್ತು ವಿಸ್ತೀರ್ಣವಾದ ಬಯಲಿನ ಅರಣ್ಯಗಳೂ ಮತ್ತೊಂದು ಮಗ್ಗಲು ಹಿಮಾಚ್ಛಾದಿತವಾದ ಹಿಮಾಲಯ ಪರ್ವತವೂ ಇರುವುದರಿಂದ ಅದಕ್ಕೆ ಹೊರಗಿನ ಸಂಪರ್ಕವು ಅತಿ ವಿರಳ. ಅಲ್ಲಿಗೆ ಹೋಗಲು ರಹದಾರಿಗಳೇ ಇಲ್ಲ. ಕೆಲವೆಡೆಗಳಲ್ಲಿ ಕಾಲುದಾರಿಯಂತಹ ಕಣಿವೆ ದಾರಿಗಳಿವೆ. ಅವು ಸಹ ಅಷ್ಟೊಂದು ಸುರಕ್ಷಿತವಲ್ಲ.

ಜನರು

ಆ ದೇಶದ ಉತ್ತರ ಭಾಗಕ್ಕೆ ಸರೋವರ ಪ್ರದೇಶವೆಂದೂ ದಕ್ಷಿಣ ಭಾಗಕ್ಕೆ ಕೊಳ್ಳಪ್ರದೇಶವೆಂದೂ ಕರೆಯಬಹುದು. ಉತ್ತರ ಭಾಗದ ಜನರು ಗುಳೇಕಾರರು. ಅವರು ಜೇಡಿಗಳಲ್ಲಿ ವಾಸಿಸುವರು. ದಕ್ಷಿಣ ಭಾಗದ ಜನರು ಒಕ್ಕಲತನ ಮಾಡುವರು, ಮತ್ತು ಮನೆಗಳಲ್ಲಿ ವಾಸಿಸುವರು. ಅವರೆಲ್ಲರು ಬೌದ್ಧ ಧರ್ಮದ ಅನುಯಾಯಿಗಳು. ಲಾಮಾಗಳ ಪ್ರಭಾವವು ಅವರ ಮೇಲೆ ಬಹಳಷ್ಟಿದೆ. ಯಾಕಂದರೆ, ಲಾಮಾಗಳು ಧಾರ್ಮಿಕ ಗುರುಗಳಿರುವರಲ್ಲದೆ ಆಡಳಿತಾಧಿಕಾರಿಗಳೂ ಆಗಿರುವರು. ಜನಸಾಮಾನ್ಯರಲ್ಲಿ ಬಹುಪತ್ನಿತ್ವವು ಜಾರಿಯಲ್ಲಿದೆ. ಹಲವುಕಡೆ ಬಹುಪತಿತ್ವ (ಒಬ್ಬ ಹೆಂಡತಿಗೆ ಒಡಹುಟ್ಟಿದ ಅಣತಂಮಂದಿರೆಲ್ಲ ಗಂಡಂದಿರಾಗಿರುವದು)ವೂ ರೂಢಿಯಲ್ಲಿದೆ. ಮೇಲಿನ ವರ್ಗಗಳ ಜನರಲ್ಲಿ ಏಕಪತ್ನಿತ್ವವಿದೆ. ಅವರು ಚೀನಿ–ಮೊಂಗೋಲಿಯನ್ನರ ಕುಲಕ್ಕೆ ಸೇರಿದವರಾದರೂ ಅವರ ಧಾರ್ಮಿಕ, ಸಾಮಾಜಿಕ, ವಾಣಿಜ್ಯ ಮುಂತಾದ ವ್ಯವಹಾರಗಳೆಲ್ಲ ಭಾರತದ ಗೂಡ ವಿಶೇಷವಾಗಿವೆ. ಲಡಾಖ ಮತ್ತು ಹಿಮಾಚಲ ಪ್ರದೇಶಗಳಲ್ಲಿಯ ವ್ಯಾಪಾರಸ್ಥರು ಅವರಿಗೆ ನಮ್ಮ ದೇಶದಿಂದ ಬೇಕಾಗುವ ಸರಕುಗಳನ್ನು ಪೂರೈಸುತ್ತಾರೆ. ಭಾರತದ ಗೂಡ ಅವರ ಸಂಪರ್ಕವು ಎಂದಿನಿಂದಲೋ ಸಾಗಿ ಬಂದಿರುವದರಿಂದ ಅವರ ಸಂಸ್ಕೃತಿಯು ನಮ್ಮ ಸಂಸ್ಕೃತಿಯನ್ನನುಸರಿಸುತ್ತಿದೆ.

ವಿಶಿಷ್ಟ ಸಂಪ್ರದಾಯಗಳು

ಆತಿಥ್ಯವನ್ನು ನೀಡುವದರಲ್ಲಿ ಅವರು ಹೆಸರಾಗಿದ್ದಾರೆ. ಅತಿಥಿಗಳಿಗೆ ಸುಸ್ವಾಗತವನ್ನೀಯುವ ಬಗೆಯು ವಿಚಿತ್ರವಿದೆ. ಅತಿಥಿಯು ಮನೆಗೆ ಬಂದ ಕೂಡಲೆ ಅವರು ತಮ್ಮ ನಾಲಿಗೆಯನ್ನು ಸ್ವಲ್ಪು ಹೊರದೆಗೆದು ಇಸ್ಸೆಂದು ಮುಗುಳುನಗೆಯಿಂದ ನಗುತ್ತಾರೆ. ಆ ಮೇಲೆ ಚಹದ ಪೇಯವನ್ನು ಕಪ್ಪಿನಲ್ಲಿ ಹಾಕಿ ಕುಡಿಯಲು ಕೊಡುತ್ತಾರೆ. ಕಪ್ಪಿನ ಒಳ ಮಗ್ಗಲಿನಲ್ಲಿ ಬೆಳ್ಳಿಯ ತೆಳ್ಳಗಿನ ತಗಡಿರುವದುಂಟು. ನಮ್ಮ ಹಾಗೆ ಚಹಾದಲ್ಲಿ ಹಾಲು–ಸಕ್ಕರೆಯನ್ನು ಹಾಕದೆ ಉಪ್ಪು–ಬೆಣ್ಣೆಯನ್ನು ಹಾಕುವ ಪರಿವಾಠವಿದೆ. ಈರ್ವರು ತಿಬೇಟದವರು ಒಬ್ಬರಿಗೊಬ್ಬರು ಭೆಟ್ಟಿಯಾದಾಗ ಕೊರಳ ಪಟ್ಟಿಯಂತಹದೊಂದು ವಸ್ತ್ರವನ್ನು ಪರಸ್ಪರರಿಗೆ ಕೊಡುವ ಸಂಪ್ರದಾಯವಿದೆ. ಅದು ಪರಸ್ಪರ ಸಖ್ಯತ್ವದ ಮತ್ತು ಪ್ರೇಮದ ಚಿನ್ಹವು. ತಿಬೇಟದ ಲಾಮಾಗಳೆಂದರೆ ಬೌದ್ಧ ಧರ್ಮದ ಸನ್ಯಾಸಿಗಳು ಇಲ್ಲವೆ ಭಿಕ್ಷುಗಳು. ಅವರಿಗೆ ಧಾರ್ಮಿಕ ಮತ್ತು ಆಡಳಿತದ ಅಧಿಕಾರಗಳಿರುವದರಿಂದ ಸಮಾಜದಲ್ಲಿ ಅವರಿಗೆ ಗೌರವಾದರಗಳು ವಿಗ್ಗಳವಾಗಿ ಸಿಗುತ್ತಿರುವದುಂಟು. ಅದುದರಿಂದ, ಚಿಕ್ಕಂದಿನಲ್ಲಿಯೇ

ಸನ್ಯಾಸವನ್ನು ಸ್ವೀಕರಿಸಿ ಲಾಮಾಗಳಾಗಬೇಕೆಂಬ ಪ್ರವೃತ್ತಿಯು ಆ ಜನರಲ್ಲಿ ವಿಶೇಷವಾಗಿ ಬೆಳೆದು ಬಂದಿದೆ. ತತ್ಪರಿಣಾಮವಾಗಿ, ಅಲ್ಲಿಯ ಜನಸಂಖ್ಯೆಯ ಒಂದು ನಾಲ್ಕಾಂಶದಷ್ಟು ಜನರು ಲಾಮಾಗಳಾಗಿರುತ್ತಾರೆ. ಅಲ್ಲಿ ಸುಮಾರು ೩೦೦ ಗೊಂಪಾ (ಬೌದ್ಧಮಠ ಅಥವಾ ವಿಹಾರ)ಗಳಿರುತ್ತವೆ. ದ್ರೇಪುಂಗ ಎಂಬ ಹೆಸರಿನ ಅತಿ ದೊಡ್ಡ ಮಠವು ಲ್ಹಾಸಾದ ಪಕ್ಕದಲ್ಲಿದ್ದು ಅದರಲ್ಲಿ ಸುಮಾರು ೧೦೦೦೦ ಲಾಮಾಗಳು ವಾಸಿಸುವರು. ಈ ಮಠಗಳು ಧಾರ್ಮಿಕ ಚಿಂತನೆಯಲ್ಲಿರುವವಲ್ಲದೆ ಸಾಮಾಜಿಕ ಹಾಗೂ ಸಾಂಸ್ಕೃತಿಕ ಕೇಂದ್ರಗಳೂ ಆಗಿವೆ. ಲಾಮಾ ವರ್ಗದಂತೆ ಸುಂಗಮಾ ಎಂಬ ಮತ್ತೊಂದು ಅಷ್ಟೇ ಮಹತ್ವದ ವರ್ಗವಿದೆ. ಪ್ರತಿಯೊಬ್ಬ ಸುಂಗಮಾನ ಮೈಯಲ್ಲಿ ಹಿಂದಕ್ಕೆ ಆಗಿ ಹೋದ ಒಬ್ಬ ವರದಿ ಪುರುಷನ ಭೂತವು ಪ್ರವೇಶಿಸಿರುವದೆಂದೂ ಆತನು ನುಡಿಯುವ ಭವಿಷ್ಯವು ನಿಜವಾಗುವದೆಂದೂ ಆ ಜನರ ಮೂಢ ನಂಬಿಕೆಯಿದೆ. ಆದುದರಿಂದ, ತಮ್ಮ ಪ್ರಪಂಚದ ಅಡಚಣೆಗಳಿಗೆ ಪರಿಹಾರವನ್ನು ಕಂಡುಕೊಳ್ಳಲು ಅವರು ಈ ಸುಂಗಮಾಗಳಿದ್ದೆಡೆಗೆ ಧಾವಿಸುವದುಂಟು. ಸುಂಗಮಾಗಳು ಆ ಸಮಸ್ಯೆಗಳ ಪರಿಹಾರಕ್ಕೋಸ್ಕರ ಹೇಳಿಕೆಗಳನ್ನು ಕೊಡುವರು. ಅವು ಬಹುತರವಾಗಿ ಅಸ್ಪಷ್ಟವಾದವುಗಳೇ ಹೆಚ್ಚು. ಅವುಗಳ ಅರ್ಥವನ್ನು ಚತುರನಾದೊಬ್ಬ ಲಾಮಾನು ಮಾಡಿ ಕೊಡುವನು. ಪ್ರತಿಯೊಂದು ಪ್ರಶ್ನೆಗೆ ಶುಲ್ಕವನ್ನು ಕೊಡಬೇಕಾಗುವದು. ಶುಲ್ಕವು ಪ್ರಶ್ನಕೇಳಿದವರ ದರ್ಜೆಗೆ ತಕ್ಕಂತೆ ಹೆಚ್ಚು ಕಡಿಮೆಯಾಗುವದುಂಟು. ಶ್ರೀಮಂತನಿದ್ದವನು ಹೆಚ್ಚು ಕೊಡಬೇಕು. ಬಡವನಿದ್ದವನು ಕಡಿಮೆ ಕೊಡಬೇಕು. ಒಬ್ಬ ದಲಾಯಿ ಲಾಮಾನು ಸ್ವರ್ಗಸ್ಥನಾದರೆ, ಅವನ ಪ್ರಾಣವು ಆಗ ಜನಿಸಿದ ಆವುದಾದೊಂದು ಕೂಸಿನಲ್ಲಿ ಪ್ರವೇಶವಾಗುತ್ತದೆಂದು ಅವರು ನಂಬುವದುಂಟು. ಆಗ ಒಬ್ಬ ಶ್ರೇಷ್ಠ ಸುಂಗಮಾನು ಆ ಕೂಸಿನ ಲಕ್ಷಣಗಳ ಬಗೆಗೆ ಹೇಳಿಕೆಯನ್ನು ಕೊಡುವದುಂಟು. ಪ್ರತಿಷ್ಠಿತ ಲಾಮಾಗಳು ಆ ಲಕ್ಷಣಗಳುಳ್ಳ ಕೂಸನ್ನು ಹುಡುಕಿ ಲ್ಹಾಸಾದಲ್ಲಿ ದಲಾಯಿ ಲಾಮಾರು ವಾಸಿಸುವ ಪೋಟಾಲಾ ಎಂಬ ಹೆಸರಿನ ಅರಮನೆಗೆ ತಂದು ಅದಕ್ಕೆ ಅಲ್ಲಿ ದಲಾಯಿ ಲಾಮಾನ ದೀಕ್ಷೆಯನ್ನು ಕೊಡುವರು. ಈ ಎಲ್ಲ ವಿಚಿತ್ರ ಸಂಗತಿಗಳ ಮೂಲಕ ತಿಬೇಟಕ್ಕೆ ಸೋಜಿಗದ ನಾಂಡೆದು ಕರೆಯುತ್ತಿರಲು ಸಾಕು.

ಆಹಾರ ಮತ್ತು ಉದ್ಯೋಗ

ಅಲ್ಲಿಯ ಕೊಳ್ಳಗಳಲ್ಲಿ ಬಾರ್ಲಿ ಎಂಬ ಧಾನ್ಯವು ಸಾಕಷ್ಟು ಬೆಳೆಯುತ್ತಿದೆ. ಅದು ಅವರ ಮುಖ್ಯ ಆಹಾರವು. ಯಾಕ ಎಂಬ ಪಶುವು ಅವರ ವಾಹನವೂ ಆಹುದು ಮತ್ತು ಪ್ಯೆನದ ಪ್ರಾಣಿಯೂ ಆಹುದು. ಅದರ ಮಾಂಸವನ್ನೂ ತಿನ್ನುತ್ತಾರೆ. ಅದರ ಉದ್ದನ್ನ ಕೂದಲುಗಳಿಂದ ಉಣ್ಣೆಯ ಅರಿವೆಯನ್ನೂ ಶಾಲು-ಗಳನ್ನೂ ಜಮಖಾನೆಗಳನ್ನೂ ಹಗ್ಗಗಳನ್ನೂ ತಯಾರಿಸು-ತ್ತಾರೆ. ಅದರ ಕೋಡು-ಎಲಬುಗಳನ್ನು ಮನೆ ಕಟ್ಟಲು ಉಪಯೋಗಿಸುವರು ಮತ್ತು ಅದರ ಶಗಣಿಯಿಂದ ಕುಳ್ಳುಗಳನ್ನು ಮಾಡಿ ಉರುವಲಕ್ಕೆ ಉಪಯೋಗಿಸುವ-ದುಂಟು. ದೇವರು ಆ ಜನರಿಗೆ ಈ ಪ್ರಾಣಿಯನ್ನು ದಯಪಾಲಿಸಿದುದು ದೊಡ್ಡದೊಂದು ಕೊಡುಗೆಯೆಂದೇ ನಾವು ಅನ್ನಬೇಕು. ಅರಬರಿಗೆ ಒಂಟೆಯಿದ್ದಂತೆ ತಿಬೇಟದವರಿಗೆ ಯಾಕ ಪ್ರಾಣಿಯು. ಅಲ್ಪ ಪ್ರಮಾಣದಲ್ಲಿ ಭತ್ತ, ಹಂಣು-ಹಂಪಲ, ಕಾಯಿಪಲ್ಲೆಗಳನ್ನು ಬೆಳೆಯು-ತ್ತಾರೆ. ಆದರೆ, ಅವುಗಳನ್ನು ಹೆಚ್ಚಾಗಿ ಶ್ರೀಮಂತರಷ್ಟೇ ಊಟ ಮಾಡುವರು. ಅವರ ಮುಖ್ಯ ಉದ್ಯೋಗ-ಗಳೆಂದರೆ ಕೃಷಿಕರ್ಮ ಮತ್ತು ಯಾಕ ಪ್ರಾಣಿಗಳನ್ನು ಸಾಕುವದು. ಉಣ್ಣೆಯ ಅರಿವೆಯನ್ನು ನೇಯುವದು, ಶಾಲು-ಜಮಖಾನೆಗಳನ್ನು ತಯಾರಿಸುವದು ಮತ್ತು ಹಗ್ಗಗಳನ್ನು ಹೊಸೆಯುವದು, ಇವು ಅವರ ಉಪಧಂದೆ-ಗಳು. ಅವರು ಶಾಂತತಾಪ್ರಿಯರಿರುವದರಿಂದ ಅವರಲ್ಲಿ ಸೈನಿಕ ಶಕ್ತಿಯು ಅಷ್ಟೊಂದು ಬೆಳೆದು ಬಂದಿಲ್ಲ.

ರಾಜ್ಯಕೀಯ ಪರಿಸ್ಥಿತಿ

ದಲಾಯಿ ಲಾಮಾರು ಅಲ್ಲಿಯ ಸಾರ್ವಭೌಮರೆಂದು ಮೇಲೆ ಹೇಳಿದೆ. ಆ ಜನರಲ್ಲಿ ಹೇಳಿಕೊಳ್ಳುವಷ್ಟು ಸೈನಿಕ ಶಕ್ತಿಯಿಲ್ಲದ್ದರಿಂದ ನೆರೆ ರಾಷ್ಟ್ರಗಳಾದ ಮೊಂಗೋ-ಲಿಯ ಮತ್ತು ಚೀನಗಳ ದಾಳಿಗಳು ಅದರ ಮೇಲೆ ಆಗುತ್ತ ಬಂದಿವೆಯೆಂಬುದನ್ನು ಆ ದೇಶಕ್ಕೆ ಸಂದರ್ಶನವನ್ನಿತ್ತ ಪ್ರವಾಸಿಕರು ವರದಿ ಮಾಡಿದ್ದಾರೆ. ಮೊಂಗೋಲಿಯದ ಕುಬ್ಲಾಯಿ ಖಾನನು ಒಂದು ಸಲ ಮಾತ್ರ ದಾಳಿ ಮಾಡಿದನಂತೆ. ಚೀನೀಯರು ಹಲವುಸಲ ದೌಡುಗಳನ್ನು ಮಾಡಿದಂತೆ ತೋರುತ್ತಿದೆ. ಕೊನೆಯ ಸಲ ೧೯೫೦ ನೆಯ ಇಸವಿ ಅಕ್ಟೋಬರ ತಿಂಗಳು ೭ನೆಯ ದಿನಾಂಕ ಕೆಂವು ಚೀನವು ದೊಡ್ಡ ಸೈನ್ಯದೊಂದಿಗೆ ಅಭಿಯೋಗವನ್ನು

ಮಾಡಿತು. ತಿಬೇಟಿನ ಸೈನ್ಯವು ಅದನ್ನು ಎದುರಿಸಿತಾದರೂ ಕೊನೆಗೆ ಅದು ಸೋತು ಚೀನೀಯರು ಹಾಕಿದ ಕರಾರುಗಳಿಗೆ ಅದು ಒಪ್ಪಿಕೊಂಡು ೨೩-೫-೧೯೫೧ರಂದು ಒಪ್ಪಂದವನ್ನು ಮಾಡಿಕೊಂಡಿತು. ಆ ಒಪ್ಪಂದದ ಪ್ರಕಾರ ಸಂರಕ್ಷಣ ಮತ್ತು ವಿದೇಶವ್ಯವಹಾರ ಶಾಖೆಗಳು ಚೀನಕ್ಕೆ ಒಪ್ಪಿಸಲ್ಪಟ್ಟವು, ಮತ್ತು ಒಳಾಡಳಿತವು ಸಂಪೂರ್ಣವಾಗಿ ದಲಾಯಿ ಲಾಮಾರಿಗೆ ಬಿಟ್ಟು ಕೊಡಲ್ಪಟ್ಟಿತು. ಚೀನೀಯರು ದಿನಗಳಿದಂತೆ ಆ ಒಪ್ಪಂದದ ಕರಾರುಗಳಂತೆ ನಡೆಯದೆ ಆ ದೇಶದ ಒಳಾಡಳಿತದಲ್ಲಿ ಹಸ್ತಕ್ಷೇಪವನ್ನು ಮಾಡಿ ಎಷ್ಟೋ ಸಾಮಾಜಿಕ ಸುಧಾರಣೆಗಳನ್ನೂ ಭೂಸುಧಾರಣೆಗಳನ್ನೂ ಆ ಜನರ ಮೇಲೆ ಒತ್ತಾಯದಿಂದ ಹೇರಿದರು. ತತ್ಪರಿಣಾಮವಾಗಿ, ಜನರಲ್ಲಿ ಅಸಂತೋಷವು ಬೆಳೆದು ವಾತಾವರಣವು ಹದಗೆಟ್ಟಿತು. ದೇಶದ ಎಲ್ಲ ಭಾಗಗಳಲ್ಲಿ ದಂಗೆಗಳೆದ್ದವು. ಚೀನೀಯರು ಈ ದಂಗೆಗಳನ್ನೆಲ್ಲ ಕಠೋರತನದಿಂದ ಹತ್ತಿಕ್ಕಿದರು. ಆ ದಬ್ಬಾಳಿಕೆಯಲ್ಲಿ ಅಸಂಖ್ಯ ಜನರ ಕೊಲೆಯಾಯಿತು. ದಲಾಯಿ ಲಾಮಾರು ವಾಸಿಸುವ ಪೋಟಾಲಾ ಅರಮನೆಯ ಸುತ್ತಲು ಬಲವಾದ ಕಾವಲು ಇರಿಸಲ್ಪಟ್ಟಿತು. ದಲಾಯಿ ಲಾಮಾರಿಗೆ ತಮ್ಮ ಜೀವನವನ್ನು ಉಳಿಸಿಕೊಂಡು ಹೇಗೋ ಪಾರಾಗಿ ನಮ್ಮ ದೇಶಕ್ಕೆ ಬರಬೇಕಾದರೆ ಸಾಕು ಬೇಕಾಯಿತು. ಚೀನೀಯರಿಗೆ ಇತ್ತಿತ್ತಲಾಗಿ ಸಾಮ್ರಾಜ್ಯದಾಹವೆಂಬ ರೋಗವು ಬಡಕೊಂಡಂತೆ ತೋರುತ್ತಿದೆ. ಈಗ ಅವರ ಸಮತಾವಾದದ ಪ್ರಸಾರವನ್ನು ಅತಿ ರಭಸದಿಂದ ಅಲ್ಲಿ ಮಾಡತೊಡಗಿದ್ದಾರೆ. ಅದರ ತತ್ತ್ವಗಳು ಆ ಜನರ ಮನಸಿಗೆ ಬಂದಿಲ್ಲ. ಅಶಾಂತಿಯು ಕುಗ್ಗದೆ ಹಿಗ್ಗುತ್ತಲೇ ಇದೆ. ಅವರು ತಮ್ಮ ಅಚ್ಚುಮೆಚ್ಚಿನ ದಲಾಯಿ ಲಾಮಾರ ಸ್ವದೇಶಾಗಮನದ ದಾರಿಯನ್ನೇ ಹಗಲಿರುಳು ಕಾಯುತ್ತಲಿದ್ದಾರೆ. ಅವರು ಸ್ವಾತಂತ್ರ್ಯಪ್ರಿಯರಿದ್ದುದರಿಂದ ಒಂದಿಲ್ಲೊಂದು ದಿನ ತಮ್ಮ ಸ್ವತಂತ್ರತೆಯನ್ನು ಅವರು ಪಡೆದುಕೊಳ್ಳುವದರಲ್ಲಿ ಸಂದೇಹವಿಲ್ಲ. ಬಲಾತ್ಕಾರದಿಂದ ಜನತೆಯನ್ನು ಬಗ್ಗಿಸುವದು ಇಲ್ಲಿಯವರೆಗೆ ಆರಿಗೂ ಶಕ್ಯವಾಗಿಲ್ಲ. ಹಾಗೆ ಮಾಡಲು ಪ್ರಯತ್ನಿಸಿದವರೆಲ್ಲರು ಮಣ್ಣು ಮುಕ್ಕಿದ ದೃಷ್ಟಾಂತಗಳು ಇತಿಹಾಸದಲ್ಲಿ ಹೇರಳವಾಗಿ ಸಿಕ್ಕುತ್ತಿವೆ. ಪ್ರೇಮದಿಂದ ಮಾತ್ರ ಜನರ ಹೃದಯಗಳನ್ನು ಗೆಲ್ಲುವದುಂಟು. ಇದರ ಮರ್ಮವನ್ನು ಚೀನೀಯರು ಬೇಗನೆ ಅರಿತುಕೊಂಡಷ್ಟು ಒಳಿತು.

ಜಯ ಹಿಂದ

ಜೀವನ ಶಿಕ್ಷಣ, ಹಿಂದೀ ಮತ್ತು ಶಿಕ್ಷಕರು

ಲೇಖಕರು : **ಶ್ರೀ ಭಾಲಚಂದ್ರ ಜಟನೀಸ,** ಎಂ.ಎ.,ಬಿ.ಟಿ.

ರಾಷ್ಟ್ರೀಯ ಮೂಲಶಿಕ್ಷಣದ ಯೋಜನೆಯನ್ನು ಮಹಾತ್ಮಾಜೀಯವರು ೧೯೩೭ರಲ್ಲಿ ದೇಶದ ಎದುರಿಗೆ ಇಟ್ಟರು. ೧೯೪೭ರಲ್ಲಿ ಭಾರತವು ಸ್ವತಂತ್ರವಾದಂದಿನಿಂದ ಈ ಯೋಜನೆಗೆ ಒಂದು ಕ್ರಿಯಾತ್ಮಕ ರೂಪ ಬಂದಿತು. ೧೪ವರ್ಷ ವಯಸ್ಸಿನವರೆಗಿನ ಮಕ್ಕಳೆಲ್ಲರಿಗೂ ಪುಕ್ಕಟೆಯಾದ ಕಡ್ಡಾಯವಾದ ಶಿಕ್ಷಣವನ್ನು ಕೊಡುವ ಹೊಣೆಗಾರಿಕೆಯನ್ನು ಸಂವಿಧಾನವು ಸರಕಾರದ ಮೇಲೆ ಹೊರಿಸಿದೆ. ಇದಕ್ಕನುಗುಣವಾಗಿ ಇಡೀ ದೇಶದಲ್ಲೆಲ್ಲ ಹೊಸ ಹೊಸ ಜೀವನ ಶಿಕ್ಷಣ ಶಾಲೆಗಳು ಪ್ರಾರಂಭವಾಗಹತ್ತಿವೆ. ಹಳೆಯ ಸಾದಾ ಶಾಲೆಗಳು ಜೀವನ ಶಿಕ್ಷಣ ಶಾಲೆಗಳಾಗಿ ಮಾರ್ಪಾಟು ಹೊಂದುತ್ತಲಿವೆ, ಆದರೆ ತುಸು ಒರೆ ಹಚ್ಚಿ ನೋಡಹೋದರೆ ಬಹಳಷ್ಟು ಶಾಲೆಗಳ ಹೆಸರು ಮಾತ್ರ ಜೀವನ ಶಿಕ್ಷಣ ಶಾಲೆಯೆಂದು ಪರಿವರ್ತನಗೊಂಡಿದೆಯೇ ಹೊರತು ಶಿಕ್ಷಣವು ಹಳೆಯ ಮಾರ್ಗವನ್ನು ಬಿಟ್ಟಿಲ್ಲ. ಇದಕ್ಕೆ ಮುಖ್ಯ ಕಾರಣ ಒಂದೇ ಒಂದು; ಅದೆಂದರೆ ತುಳಿದದಾರಿ ಸಮತಲವಾಗಿರುತ್ತದೆ, ಅದರ ಗುಂಟ ನಡೆಯುವದು ದುರ್ಲಭ; ಬರಿಗಾಲಿನಿಂದ, ಬರಿಗೈಯಿಂದ, ಕಣ್ಣು ಮುಚ್ಚಿ ನಡೆದರೂ ಅದು ತನ್ನ ಗುರಿ ಮುಟ್ಟಿಸುತ್ತದೆ. ಇನ್ನೊಂದು ಕಾರಣವೆಂದರೆ ಜೀವನ ಶಿಕ್ಷಣದ ಗುರಿಗಳು ಜೀವನ ಶಿಕ್ಷಣ ಕ್ಷೇತ್ರದಲ್ಲಿ ದುಡಿಯುವ ಶಿಕ್ಷಕರ ಮನಸ್ಸಿನಲ್ಲಿ ಚೆನ್ನಾಗಿ ಬೇರೂರಿಲ್ಲ. ಅವರಲ್ಲಿ ಜೀವನ ಶಿಕ್ಷಣದ ಬಗ್ಗೆ ಹುಮ್ಮಸ್ಸು ಇಲ್ಲ. ಇಂಥವರಿಗಾಗಿ

ಮಾರ್ಗದರ್ಶಕ ಸಾಹಿತ್ಯದ ಪುಸ್ತಕಗಳು ನಿರ್ಮಾಣ ತೀವ್ರಗತಿಯಿಂದ ಉಂಟಾಗಬೇಕಾಗಿದೆ.

ಬಹು ಸಂಖ್ಯೆ ಮಕ್ಕಳ ಶಿಕ್ಷಣವು ಜೀವನ ಶಿಕ್ಷಣದ ೮ ವರ್ಷಗಳಿಗೇ ಕೊನೆಗೊಳ್ಳುತ್ತದೆಂಬುದನ್ನು ನೆನೆದು ಕೊಂಡಾಗ ಈ ಜೀವನ ಶಿಕ್ಷಣ ಶಾಲೆಗಳ ಶಿಕ್ಷಕರ ಹೊಣೆ ಗಾರಿಕೆ ಇನ್ನಷ್ಟು ಸ್ಪಷ್ಟವಾಗುತ್ತದೆ. ಈ ೮ ವರ್ಷಗಳಲ್ಲಿ ಮಗುವಿನ ಜ್ಞಾನ, ಕಲಾ ಕೌಶಲ್ಯ, ತಿಳಿವಳಿಕೆ, ಸಾರಾಸಾರ ವಿಚಾರ, ಅಭಿರುಚಿ ಮತ್ತು ಮೆಚ್ಚುಗೆಯ ಚಟುವಟಿಕೆಗಳು (Hobbies) ಎಲ್ಲವೂ ಸರಿಯಾಗಿ ರೂಪಗೊಳ್ಳಬೇಕು. ಈ ಶಾಲೆಗಳಿಂದ ಹೊರಬೀಳುವಾಗ ಒಬ್ಬ ನಾಗರಿಕನಾಗಿ ತನ್ನ ಕರ್ತವ್ಯಗಳನ್ನು ಅರಿತು ತನ್ನ ಅಧಿಕಾರಗಳ ಸದುಪಯೋಗವನ್ನು ಮಾಡಿ, ಪ್ರಯತ್ನ ಮತ್ತು ಪರಿಶ್ರಮಗಳ ಮೂಲಕ ತನ್ನ ಜೀವನವನ್ನು, ರಾಷ್ಟ್ರದ ಸಂಪತ್ತನ್ನು ಉನ್ನತಗೊಳಿಸಲಿಕ್ಕೆ ಯೋಗ್ಯ ನಾಗಬೇಕು. ಇದು ಕಠಿಣವಾದಕೆಲಸವೆನೋ ಹೌದು. ಆದರೆ ವಿಶ್ವಾಸದಿಂದ ಪ್ರಮಾಣಿಕ ತನದಿಂದ ಈ ಕಾರ್ಯಕ್ಕಾಗಿ ಅಧ್ಯಾಪಕರು ಕಟಿಬದ್ಧರಾಗುವದು ಅವಶ್ಯವಾಗಿದೆ. ಅದರಿಂದ ಪಠ್ಯ ಕ್ರಮದಲ್ಲಿ ಕೊಟ್ಟ ಎಲ್ಲ ವಿಷಯಗಳನ್ನು ಈ ಕಾರ್ಯಸಾಧನೆಗೆ ಉಪಯುಕ್ತ ವಾಗುವಂತೆ ಯೋಜಿಸಬೇಕು.

ಜೀವನ ಶಿಕ್ಷಣದ ಪಾಠ್ಯಕ್ರಮದಲ್ಲಿ ಹಿಂದಿಗೂ ಇಂದು ಒಂದು ಸ್ಥಾನ ದೊರೆತಿದೆ. ಅದರ ಮಹತ್ವವನ್ನು ಶಿಕ್ಷಕರು ಮನಗಂಡು ಮಕ್ಕಳಲ್ಲಿ ಅದನ್ನು ಬಿಂಬಿಸ ಬೇಕಾಗಿದೆ. ನಾವೆಲ್ಲ ಒಂದೇ, ನಾವೆಲ್ಲ ಹಿಂದಿಯರು. ನಮ್ಮ ರಾಷ್ಟ್ರಭಾಷೆಯನ್ನು ನಾವು ಅರಿತುಕೊಂಡಾಗಲೇ ರಾಷ್ಟ್ರೀಯ ಜೀವನದಲ್ಲಿ ಏಕತೆ ಬರುವದು, ಸಮರಸ ಉಂಟಾಗುವದು, ಎಂಬುದು ಮಕ್ಕಳೆಲ್ಲರಿಗೂ ಮನದಟ್ಟಾ-ಗಲಿ. ರಾಷ್ಟ್ರಭಾಷೆಯ ಬಗ್ಗೆ ಪಟ್ಟಣದ ಶಿಕ್ಷಕನ ಕಾರ್ಯ ಸುಲಭವಾಗಿದೆ. ಹಳ್ಳಿಗಳಲ್ಲಿ ಅದು ಬಹಳ ಕಷ್ಟಕರವಾಗಿದೆ. ಹಳ್ಳಿಯ ಶಾಲೆಯ ಶಿಕ್ಷಕರ ಮೇಲೆಯೇ ರಾಷ್ಟ್ರಭಾಷೆಯ ಮತ್ತು ರಾಷ್ಟ್ರೀಯ ಏಕತೆಯ ಭವಿತವ್ಯ ಅವಲಂಬಿಸಿದೆ. ಆದ್ದರಿಂದ ಬಹು ಸಂಖ್ಯೆ ಹಳ್ಳಿಯ ಶಿಕ್ಷಕರಿಗೆಲ್ಲ ಈ ರಾಷ್ಟ್ರಭಾಷೆಯ ನಿರ್ದಿಷ್ಟ ಪರಿಚಯ-ವನ್ನು ಮಾಡಿಕೊಟ್ಟು ಅದನ್ನು ಮೇಲಿಂದ ಮೇಲೆ ಪರಿಮಾರ್ಜಿತ ಗೊಳಿಸುವ ಒಂದು ಯೋಜನೆಯು ಅವಶ್ಯಕವಾಗಿ ತೋರುತ್ತದೆ.

ಟ್ರೇನಿಂಗ ಕಾಲೇಜುಗಳ ಸಧ್ಯದ ಪಾಠ್ಯ ಕ್ರಮದಲ್ಲಿ ಹಿಂದೀ ವಿಷಯವೆನೋ ಇದೆ. ಕಡ್ಡಾಯವಾಗಿ ಹಿಂದೀ ಕಾಗದದ ಪರೀಕ್ಷೆಗೆ ಕೂಡಬೇಕಾಗುತ್ತದೆ. ಹಿಂದಿಯನ್ನು ಒಂದು ಗುಂಪಿನಲ್ಲಿ ಹಾಕಲಾಗಿದೆ. ಆ ಗುಂಪನಲ್ಲಿ ಒಟ್ಟು ಗುಣಗಳು ಪಾಸಾಗಲಿಕ್ಕೆ ಬೇಕಾಗುವಷ್ಟು ಬಿದ್ದರೆ ಸಾಕು; ಹಿಂದಿಯಲ್ಲಿ ಶೂನ್ಯ ಗುಣಗಳನ್ನು ಪಡೆದು ಉಳಿದವುಗಳಲ್ಲಿ ಒಟ್ಟು ಪಾಸಿಗೆ ಬೇಕಾಗುವಷ್ಟು ಆದರೂ ಸಾಕು. ಹೀಗಿರುವದರಿಂದ ಪರೀಕ್ಷಾ ಮನೋ ವೃತ್ತಿಯ ಶಿಕ್ಷಕ ವಿದ್ಯಾರ್ಥಿಗಳು ಅದರತ್ತ ಮನಸ್ಸು ಕೊಡುತ್ತಿಲ್ಲ. ಇಷ್ಟೇ ಅಲ್ಲ. ಇಡೀ ೨ವರ್ಷಗಳಲ್ಲಿ ಪೂರ್ಣವಾಗಿ ಲಿಪಿ ಪರಿಚಯವನ್ನು ಕೂಡ ಮಾಡಿ ಕೊಳ್ಳದವರೂ ಇದ್ದಾರೆ. ಈ ಸ್ಥಿತಿ ಸುಧಾರಿಸಬೇಕಾದರೆ ಪರೀಕ್ಷಾ ಸಮಿತಿಯವರೂ ವಿದ್ಯಾ ಇಲಾಖೆಯವರೂ ದೂರಗಾಮಿಯಾದ ಪರಿಣಾಮ ಗಳನ್ನು ಚಿಂತಿಸಿ ಹಿಂದಿಯಲ್ಲಿ ಕಡ್ಡಾಯವಾಗಿ ತೇರ್ಗಡೆ ಯಾಗುವಂತೆ ಮಾಡಬೇಕು. ಇದು ತಾತ್ಕಾಲ ಸಾಧ್ಯವಾಗುವಂತಿಲ್ಲದಿದ್ದರೆ ಕನಿಷ್ಠ ೧೦೦ಕ್ಕೆ ೩೫ ಗುಣ ಗಳನ್ನು ಪಡೆಯುವ ನಿರ್ಬಂಧವನ್ನಾದರೂ, ಹಾಕಬೇಕು. ಈ ಸೂಚನೆ ಎಷ್ಟು ತೀವ್ರವಾಗಿ ಕಾರ್ಯಗತವಾದೀತೋ ಅಷ್ಟೇ ರಾಷ್ಟ್ರಭಾಷೆಯ ಉನ್ನತಿಯ ಪ್ರಸಾರವೂ ತೀವ್ರವಾದೀತು. ರಾಷ್ಟ್ರಭಾಷೆಯ ಬಗ್ಗೆ ಪ್ರತಿಯೊಬ್ಬ ಶಿಕ್ಷಕನು ತಳೆಯ ಬೇಕಾದ ಜ್ಞಾನ, ಧೋರಣೆಗಳು ಆತನಿಗೆ ಅಂತಃಸ್ಫೂರ್ತಿಯಿಂದ ಬರುವಂತಾದರೆ ಜೇನಿಗೆ ಸಕ್ಕರೆ ಬಿದ್ದಂತೆ. ಇಂದಿನ ಪರಿಸ್ಥಿತಿಯನ್ನು ನೋಡಿದರೆ ಯಾವದೇ ಸಂಗತಿ ಅಂತಃಸ್ಫೂರ್ತಿಯಿಂದ ಬೆಳಗಲಿ ಎಂದು ಬಿಟ್ಟರೆ ಅದು ಕಮರಿಹೋಗುವ ಸಂಭವವು ಹೆಚ್ಚಾಗಿದೆ. ಆದ್ದರಿಂದ ತಾನೇ ಆಗಲಿ, ತಾವೇ ಮಾಡುತ್ತಾರೆ ಎಂಬ ಭಾವನೆಯಿಂದ ಕೈಕಟ್ಟಿಕೊಂಡು ಕೂತರೆ ಆಗದು. ಹೊರಗಿನ ಒತ್ತಡ, ಒತ್ತಾಯ ಬೇಕು. ಇಂಥ ಒತ್ತಾಯದ ಕ್ರಮಗಳಲ್ಲೇ ಮೇಲೆ ಸೂಚಿಸಿದ ವಿಷಯವೂ ಒಂದು ತರಬೇತಿಯ ಅಭ್ಯಾಸ ಕ್ರಮದಲ್ಲಿ ಹಿಂದಿಗೂ ಪ್ರಾಧಾನ್ಯಕೊಟ್ಟು ಆದರಲ್ಲಿ ಪಾಸಾಗುವದನ್ನಾಗಲಿ ಕನಿಷ್ಠಗುಣಗಳನ್ನು ಪಡೆಯುವದನ್ನಾಗಲಿ ಕಡ್ಡಾಯವಾಗಿ ಮಾಡಬೇಕು. ನಿರ್ದಿಷ್ಟವಾದ ಅವಧಿಯಲ್ಲಿ ಅವರವರ ಅಭಿರುಚಿಗನುಗುಣವಾಗಿ ೧೦ ಹಿಂದೀ ಪುಸ್ತಕಗಳನ್ನಾದರೂ ಓದಿ ಮುಗಿಸಬೇಕು. ಈ ಓದು ಸ್ಥೂಲ ಪರಿಚಯ ಮಾಡಿಕೊಳ್ಳುವದಕ್ಕಾಗಿ, ವಿವರವಾದ ಅಭ್ಯಾಸಕ್ಕಾಗಿ ಅಲ್ಲ.

ಶಬ್ದಕೋಶಗಳನ್ನು ಧಾರಾಳವಾಗಿ ಉಪಯೋಗಿಸಿ ಕೊಳ್ಳುವ ರೂಢಿಮಾಡಿಕೊಳ್ಳಬೇಕು. ದಿನ ನಿತ್ಯದಲ್ಲಿಯ ಅನಶ್ಯಕ ವಿಷಯಗಳ ಬಗ್ಗೆ ಮಾತನಾಡಲಿಕ್ಕೆ ಬರುವಷ್ಟಾದರೂ ಹಿಂದೀ ಭಾಷೆಯ ಸಿದ್ಧತೆಯಾಗಬೇಕು.

ನಿತ್ಯದ ಜೀವನಕ್ಕೆ ಶಾಲೆಯ ಜೀವನಕ್ಕೆ ಸಂಬಂಧ ಪಟ್ಟ ಸಂಗತಿಗಳ ಬಗ್ಗೆ ಕೆಲವು ಮಾತುಗಳನ್ನು ವರ್ಗದಲ್ಲಾಗಲಿ, ಸಭೆಯಲ್ಲಾಗಲಿ, ಹೇಳಲಿಕ್ಕೆ ಬರಬೇಕು; ಅವುಗಳನ್ನು ಶುದ್ಧವಾಗಿ ಬರೆಯಲಿಕ್ಕೂ ಬರಬೇಕು.

ಈ ಮೇಲ್ಕಾಣಿಸಿದ ಸೂಚನೆಗಳ ಜೊತೆಗೆ ಇನ್ನೂ ಕೆಲವು ಅವಶ್ಯ ಕಂಡ ವಿಷಯಗಳನ್ನು ಸೇರಿಸಿ ಹಿಂದಿ ವಿಷಯದ ಪರೀಕ್ಷೆಯಲ್ಲಿ ಪ್ರತಿಯೊಬ್ಬ ಶಿಕ್ಷಕ ವಿದ್ಯಾರ್ಥಿ ಪ್ರಗತಿ ಪಡೆಯಬೇಕು. ಗುಣಗಳ ಯೋಜನೆಯಾಗಬೇಕು. ಅಂದರೆ ಇವೆಲ್ಲ ಸಂಗತಿಗಳು ಅವಶ್ಯಕವೆಂದರಿತು ಶಿಕ್ಷಕ ವಿದ್ಯಾರ್ಥಿಗಳು ಹಿಂದಿಯ ಬಗ್ಗೆ ಪ್ರಯತ್ನ ಶೀಲರಾಗ ಬಹುದು. ಈ ಸೂಚನೆಗಳು ತರಬೇತಿ ಹೊಂದುತ್ತಿರುವ ನೂರಾರು ಶಿಕ್ಷಕರಿಗಾಗಿವೆ.

ಇನ್ನು ಈಗಾಗಲೇ ತರಬೇತಿ ಪಡೆದು ನಿಶ್ಚಿಂತರಾಗಿ ರಾಷ್ಟ್ರ-ರಾಷ್ಟ್ರೀಯ ಶಿಕ್ಷಣ ಇವುಗಳತ್ತ ನೋಡುವ ಮನಸ್ಸೂ ಕೂಡ ಮಾಡದೆ ತಮ್ಮ ತಮ್ಮ ವೈಯಕ್ತಿಕ ಜೀವನದತ್ತ ಮನಸ್ಸನ್ನು ಏಕಾಗ್ರಗೊಳಿಸಿ ಶಾಲೆಯ ನೌಕರಿ ತಿಂಗಳಿಗೆ ಬರುವ ಸಂಬಳಕ್ಕಾಗಿ, ಈ ಸಂಬಳದಿಂದ ಅದೀತೆಷ್ಟು, ಹೋದೀತೆಷ್ಟು, ಬೇಕಾದ ಮಾರ್ಗದಿಂದ ಪ್ರಯತ್ನ ಪಟ್ಟು ತನ್ನೂರಿನಲ್ಲಿ ತಾನುಳಿದರೆ ಬಂಗಾರ ಅದೀತು, ಬೇಕಾದ್ದೆಲ್ಲ ಅದೀತು ಎಂಬ ವೃತ್ತಿಯಿಂದ ಜೀವನ ಶಿಕ್ಷಣದ ಬಗ್ಗೆ ತಾತ್ಸಾರ ಭಾವನೆಯನ್ನು ತಳೆಯುವವರು, ತಮ್ಮದೇ ಹಳ್ಳಿಯ ತಂಬೂರಿಯ ತಂತಿ ಮೀಟಿ ಹಳ್ಳಿಗರನ್ನೂ ಹೊಸವರಿಂದ ಪರಾವರ್ತಗೊಳಿಸುತ್ತಲಿರುವ ಸಾವಿರಾರು ಜನ ಶಿಕ್ಷಕರನ್ನು ರಾಷ್ಟ್ರಭಾಷೆಯ ಮಹತ್ವ ಅರಿತುಕೊಳ್ಳುವಂತೆ ಹೇಗೆ ಮಾಡಬೇಕೆಂಬುದೊಂದು ದೊಡ್ಡ ಪ್ರಶ್ನೆ. ಇದರ ಬಗ್ಗೆ ಕೂಡ ಸರಕಾರೀ ಮಟ್ಟದಲ್ಲಿ ಒತ್ತಾಯದ ಕ್ರಮಗಳೇ ಬೇಕು. ಕೆಲವರು ತಾವಾಗಿಯೇ ಪರಿಶ್ರಮ ಪಟ್ಟು ತಾವು ದುಡಿಯುತ್ತಿರುವ ಶಾಲೆಗಳಲ್ಲಿ ಹಿಂದಿಯು ಪ್ರಗತಿ ಹೊಂದುವಂತೆ ಪ್ರಯತ್ನಿಸುತ್ತಿರ ಬಹುದು. ಅಂಥವರು ಈ ಸೂಚನೆಯಲ್ಲಿ ಹುದುಗಿರುವ ಭಾವನೆಯನ್ನೇ ನೋಡಬೇಕು, ಹೊರತು ಬೇರೆಯಲ್ಲ.

ಇವರು ಅವಶ್ಯಕವಾಗಿ ಹಿಂದೀ ಶಿಕ್ಷಣವನ್ನು ಪಡೆಯುವಂತೆ ಒಂದೆರಡು ಉಪಾಯಗಳನ್ನು ಮಾಡಬಹುದು. ಅವುಗಳ ಲ್ಲೊಂದೆಂದರೆ ನಿರ್ದಿಷ್ಟಗೊಳಿಸಿದ ವಯೋಮಿತಿಯೊಳ ಗಾಗಿ, ನಿರ್ದಿಷ್ಟಗೊಳಿಸಿದ ಸಮಯದಲ್ಲಿ ಹಿಂದೀ ಶಿಕ್ಷಣ ವನ್ನು ಪಡೆಯದಿದ್ದವರ ಮೇಲೆ ಅವಶ್ಯಕ ಕ್ರಮಗಳನ್ನು ಕೈಕೊಳ್ಳುವದು, ಸಂಬಳದ ಬೆಳಿಗೆಯನ್ನು ತಡೆಹಿಡಿ ಯುವದು, ಬಡ್ತಿ ಕೊಡದಿರುವದು, ಇತ್ಯಾದಿ. ಇಂದಿನ ಕಾಲವನ್ನು ನೆನೆದು-ಕೊಂಡರೆ ಇಂಥ ಕ್ರಮಗಳಿಗೆ ಶಿಕ್ಷಕನನ್ನು ಈಡುಗೊಳಿಸಿ ಅವನಿಗೆ ಮಾನಸಿಕ, ಹಾಗೂ ಆರ್ಥಿಕ ತೊಂದರೆಗೆ ಗುರಿಗೊಳಿಸುವದು ಸರಿದೋರುವ ದಿಲ್ಲ.

ಈ ಪರಿಸ್ಥಿತಿಯಲ್ಲಿ ಕೆಲಸದಲ್ಲಿರುವ ಶಿಕ್ಷಕರಿಗೆ ಹಿಂದಿಯ ಬಗ್ಗೆ ಮಾರ್ಗದರ್ಶನ ಮಾಡಿಕೊಡುವಂಥ ಒಂದು ಹಿಂದೀ ಅಲ್ಪಾವಧಿ ತರಬೇತಿಯ ಯೋಜನೆ ಅವಶ್ಯಕ ವೆನಿಸುತ್ತದೆ. ಈ ಯೋಜನೆಯಲ್ಲಿಯ ತರಬೇತಿಯ ಅವಧಿ ಎರಡು ವಾರಗಳಿಗಿಂತ ಹೆಚ್ಚು ಇರಬಾರದು. ತರಬೇತಿಗೆ ಬಂದವರಿಗೆ ನಮ್ಮ ಪ್ರಾಥಮಿಕ ಶಾಲೆಗಳಿಗೆ ಬೇಕಾಗುವಷ್ಟು ಹಿಂದಿಯ ಅಭ್ಯಾಸವನ್ನು ವಿವರವಾಗಿ ಮಾಡಿಸಬೇಕು. ಹಿಂದಿಯ ಮಹತ್ವ, ಹಿಂದೀ ಭಾಷೆ ಮತ್ತು ಸಾಹಿತ್ಯಗಳ ಬೆಳವಣಿಗೆ, ಹಿಂದೀ ಭಾಷೆಯನ್ನು ಹಳ್ಳಿಯ ಮಟ್ಟದಲ್ಲಿ ಪ್ರಚುರ ಗೊಳಿಸುವ ಸುಲಭ ಮಾರ್ಗಗಳು, ಹಿಂದಿಯಲ್ಲಿ ದೊರಕುವ ಸುಲಭ ಸಾಹಿತ್ಯ ಇತ್ಯಾದಿಗಳ ಪರಿಚಯವನ್ನು ಅವರಿಗೆ ಮಾಡಿಕೊಟ್ಟು, ಪ್ರತ್ಯಕ್ಷ ಹಿಂದೀ ಶಿಕ್ಷಣದ ಕಾರ್ಯಕ್ಕಾಗಿ ಅವರ ಮನೋಭೂಮಿಕೆಯನ್ನು ಅಣಿಗೊಳಿಸಬೇಕು. ಅವಿಷ ವಿಲ್ಲದೆ ಬೇಟೆ ಬಲೆಗೆ ಬೀಳದು; ಅದ್ದರಿಂದ ತರಬೇತಿಯ ಅವಧಿಯಲ್ಲಿ ಅವರಿಗೆ ಜೀವನನೇತನವನ್ನಾಗಲಿ, ತರಬೇತಿಯ ನಂತರ ಒಂದು ವಾರ್ಷಿಕ ಮುಂಬಡತಿ ಯಾಗಲಿ ಯಾವುದು ಅನುಕೂಲವೋ ಅದು ದೊರೆತರೆ ಒಳ್ಳೆಯದಾಗುತ್ತದೆ.

ಮೇಲೆ ಬರೆದವುಗಳೆಲ್ಲ ವಿಚಾರಗಳು ಮಾತ್ರ. ಇಂಥ ಯೋಜನೆಗಳು ಕಾರ್ಯಾಚರಣೆಯಲ್ಲಿ ಬರುವದಕ್ಕೂ ಕೆಲಸಮಯ ಬೇಕಾಗುತ್ತದೆ. "ಬಂದಾಗ ನೋಡೋಣ" ಅನ್ನುವ ದುರ್ಲಕ್ಷ ಭಾವನೆಯನ್ನು ತಾಳದೆ ರಾಷ್ಟ್ರ ಕಾರ್ಯಕ್ಕೆ ತಾವು ಸಲ್ಲಿಸುವ ಅಳಿಲು ಸೇವೆ, ಅದು ಕಾಯಾ, ವಾಚಾ, ಮನಸಾ, ಆಗಬೇಕು. ರಾಷ್ಟ್ರದ

ಜನಾಂಗವನ್ನು ರಾಷ್ಟ್ರೀಯ ಜೀವನಕ್ಕಾಗಿ ಅಣಿಗೊಳಿಸ ಬೇಕಾದರೆ, ರಾಷ್ಟ್ರೀಯ ಜೀವನದಲ್ಲಿ ರಾಷ್ಟ್ರ ಹಿತದ ವಿಚಾರಗಳನ್ನು ರಾಷ್ಟ್ರದಲ್ಲೆಲ್ಲ ಪ್ರಚುರಗೊಳಿಸುವದು ಅವಶ್ಯವಾದದ್ದು. ರಾಷ್ಟ್ರಭಾಷೆ ಎಂಬ ಭಾವನೆಯಿಂದ ಪ್ರೇರಿತವಾಗಿ ನಮ್ಮ ಶಿಕ್ಷಕರು ಹಿಂದಿಯ ಕಡೆಗೆ ಹೊರಳಬೇಕು.

ಶಿಕ್ಷಣದಲ್ಲಿ ಕಾಗದ ಹಾಗೂ ರಟ್ಟಿನ ಕೆಲಸ

ಲೇಖಕರು: **ಶ್ರೀಮತಿ ಎಸ್. ಪುರುಷೋತ್ತಂ,** ಬಿ.ಎಸ್‌ಸಿ.,ಬಿ.ಈಡಿ.

ಶಿಕ್ಷಣದಲ್ಲಿ ಉದ್ಯೋಗ ಮತ್ತು ಚಟುವಟಿಕೆಗಳು ಬಹು ಮಹತ್ವದ ಸ್ಥಾನವನ್ನು ಪಡೆದಿವೆ. ಏಕೆಂದರೆ ಇವುಗಳ ಮೂಲಕ ಮಗುವಿನ ಯೋಚನಾ ಮತ್ತು ಯೋಜನಾ ಶಕ್ತಿ ಅದೂ ಅಲ್ಲದೆ ಕೈ ಕುಶಲತೆ ಬೆಳೆಯುತ್ತವೆ. ಮಗು ತನ್ನ ಕೆಲಸ ಫಲಕಾರಿ ಯಾಗಬೇಕಾದರೆ ಯಥಾರ್ಥವಾಗಿರಬೇಕೆಂಬುದನ್ನು ಕಲಿಯುವುದು; ಅಂದರೆ to be effective he must be exact.

ಶಿಕ್ಷಣ ತಜ್ಞರು ಮಗುವಿನಲ್ಲಿರುವ ಆಸಕ್ತಿಯನ್ನು ಹುರಿದುಂಬಿಸಬೇಕೆಂದು ಒತ್ತಿ ಒತ್ತಿ ಹೇಳುತ್ತಾ ಬಂದಿರುವರು. ಮಗುವಿನಲ್ಲಿ ಹುದುಗಿರುವ ಇಂಥ ಒಂದು ಆಸಕ್ತಿಯನ್ನು ಆ ಮಗುವಿಗಿರುವ ಆಟವಾಡುವ ಸಹಜ ಪ್ರವೃತ್ತಿಯಿಂದಲೇ ಪ್ರಜ್ಞೋದಿಸಬೇಕು. ಇದಕ್ಕಿಂತಲೂ ಉತ್ತಮವಾದ ಮತ್ತೊಂದು ಮಾರ್ಗವಿಲ್ಲ. "The plays of children are he jerminal leaves of later life" ಎಂದು ಫ್ರೊಬೆಲ್ ಹೇಳಿರುವರು.

ಕಾಗದ ಮತ್ತು ರಟ್ಟಿನ ಕೆಲಸಗಳು ಮಕ್ಕಳಿಗೆ ಒಂದು ಆಟವಾಗಿಯೂ ಹೆಚ್ಚು ಆನಂದವನ್ನು ಕೊಡುವ ಕೆಲಸಗಳಾಗಿಯೂ ಮತ್ತು ಶಿಕ್ಷಣದ ಸಾಧ್ಯಮ ವಾಗಿಯೂ ಪರಿಣಮಿಸುತ್ತವೆ. ಪ್ರಥಮತಃ ಮಕ್ಕಳಿಗೆ ಕಾಗದದ ಕೆಲಸವನ್ನು ಕಲಿಸಬೇಕು. ಚಿಕ್ಕ ಮಗುವು ಕಾಗದವನ್ನು ಕಂಡಾಗ ಅದನ್ನು ಕೈಯಿಂದ ಹಿಸುಕಿ ಮುಮುಡಿ ಹರಿದು ಆನಂದ ಪಡುತ್ತದೆ, ಚಿಕ್ಕ ವಯಸ್ಸಿನ ಮಕ್ಕಳಿಗೆ ಕಾಗದದ ಕೆಲಸ ಹೆಚ್ಚು ಉಪಯುಕ್ತವಾದ ಹಾಗೂ ಅಮೂಲ್ಯವಾದ ಒಂದು ಉದ್ಯೋಗ. ಮಗುವು ಕಾಗದದಿಂದ ಸಾಧಾರಣ ವಸ್ತುಗಳ ಆಕೃತಿಗಳನ್ನು ರಚಿಸಲು ಪ್ರಯತ್ನಿಸುವಾಗ ನಿರೀಕ್ಷಿಸುವ (Sense of observation) ಜ್ಞಾನವನ್ನು ಪಡೆಯುತ್ತದೆ, ಮತ್ತು ತನ್ನ ಸುತ್ತಮುತ್ತಲಿನ ವಾತಾವರಣದಲ್ಲಿ ಹೆಚ್ಚಿನ ಆಸಕ್ತಿಯನ್ನು ಹೊಂದುತ್ತದೆ. ಮಗುವು ತನ್ನ ಮನೋಭಾವನೆಗಳನ್ನು, ಬೌದ್ಧಿಕವಿಚಾರಗಳನ್ನು ಕೃತಿಯಲ್ಲಿ ಕಾಗದದ ಮೂಲಕ ರೂಪಿಸಲು ಸಾಧ್ಯವಾಗು ತ್ತದೆ. ಈ ಕೆಲಸದಿಂದ ಮಗುವಿಗೆ ಸಂಖ್ಯೆ ಆಳತೆ ಮತ್ತು ಆಕೃತಿ ಇವುಗಳ ಕಲ್ಪನೆಯಾಗುವುದು. ಬಣ್ಣದ ಕಾಗದಗಳನ್ನು ಉಪಯೋಗಿಸಿದಾಗ ಬಣ್ಣಗಳ ಕಲ್ಪನೆಯೂ ಬರುವುದು. ಕಾಗದದ ಕೆಲಸದ ಮೂಲಕ ಮಗುವಿಗೆ ರೇಖಾಗಣಿತ ಜ್ಞಾನವನ್ನು ಕೊಡಬಹುದು. ಕಾಗದ ಸ್ವಲ್ಪ ಬೆಲೆಯ, ಸುಲಭವಾಗಿ ಸಿಗುವ ವಸ್ತು. ಆದ್ದರಿಂದ ಶಾಲೆಯಲ್ಲಿ ಮಾತ್ರವಲ್ಲದೆ ಮನೆಯಲ್ಲೂ ಮಕ್ಕಳು ತಮ್ಮ ವಿರಾಮ ಕಾಲದಲ್ಲಿ ಈ ಕೆಲಸವನ್ನು ಮಾಡಿ ಜ್ಞಾನವನ್ನು ಪಡೆಯಬಹುದು.

ಅದೇ ರೀತಿ ರಟ್ಟಿನ ಕೆಲಸಕ್ಕೂ ಶಿಕ್ಷಣದಲ್ಲಿ ಒಂದು ಹೆಚ್ಚಿನ ಸ್ಥಾನವಿದೆ. A basic craft must be both educational and productional" ಅಂದರೆ ಒಂದು ಮೂಲೋದ್ಯೋಗವು ಶಿಕ್ಷಣಾತ್ಮಕವಾಗಿಯೂ, ಉತ್ಪನ್ನಕಾರವಾಕಗಿಯೂ ಇರಬೇಕು. ಒಕ್ಕಲುತನ, ನೂಲುವದು, ನೇಯ್ಗೆ ಇವು ಮೇಲಿನ ನಿಯಮಗಳನ್ನು ಪೂರೈಸುವವು. ಮನುಷ್ಯನಿಗೆ ಅತ್ಯವಶ್ಯಕವಾದ ಉಡಿಗೆ, ಊಟ ಇವುಗಳನ್ನು ಈ ಮೇಲಿನ ಉದ್ಯೋಗಗಳು ಒದಗಿಸಿ ಕೊಡುತ್ತವೆ. ರಟ್ಟಿನ ಕೆಲಸ, ಕಟ್ಟಿಗೆ ಕೆಲಸ, ಲೋಹದ ಕೆಲಸ, ತಗಡಿನ ಕೆಲಸ ಇವೂ ಸಹ ಅತ್ಯವಶ್ಯಕವಾದ ಹಾಗೂ ಆಧಾರಭೂತವಾದ ಉದ್ಯೋಗಗಳು. ರಟ್ಟಿನ

ಕೆಲಸವನ್ನು ಶಿಕ್ಷಣದ ಮಾಧ್ಯಮವನ್ನಾಗಿ ಉಪಯೋಗಿಸಿ ಕೊಳ್ಳಬಹುದು. ಚಿಕ್ಕ ಮಕ್ಕಳಿಗೆ (ಅಂದರೆ ೧೦-೧೨ ವರ್ಷಗಳಿಗಿಂತಲೂ ಚಿಕ್ಕವಯಸ್ಸಿನ ಮಕ್ಕಳು) ಲೋಹದ ಕೆಲಸ, ಕಟ್ಟಿಗೆ ಕೆಲಸ ಇಂಥ ಕಠಿಣ ಕೆಲಸಗಳನ್ನು ಕಲಿಸಲು ಸಾಧ್ಯವಿಲ್ಲ. ಆದರೆ ಕಾಗದ ಮತ್ತು ರಟ್ಟಿನ ಕೆಲಸಗಳು ಈ ಮೇಲಿನ ಕೈ ಕೆಲಸಗಳನ್ನು ಮಕ್ಕಳು ಇನ್ನು ಮುಂದೆ ಕೈಗೊಳ್ಳಲು ಒಂದು ಪೂರ್ವ ತರಬೇತಿಯನ್ನು ಕೊಡುತ್ತವೆ.

ಮಕ್ಕಳು ತಯಾರಿಸಿದ ರಟ್ಟಿನ ಸಾಮಾನುಗಳು ಉಪಯುಕ್ತ ವಸ್ತುಗಳಾಗುತ್ತವೆ. ಉದಾಹರಣೆಗೆ ತಕಲಿ ಪೆಟ್ಟಿಗೆ, ವಿದ್ಯಾರ್ಥಿಗಳ ಫೈಲ್, ಬರೆಯುವ ಒತ್ತಿಗೆ, ಆಫೀಸ್ ಫೈಲ್ ಮುಂತಾದ ಇನ್ನೂ ಅನೇಕ ಸಾಮಾನುಗಳು ನಮ್ಮ ನಿತ್ಯದ ಉಪಯೋಗಕ್ಕೆ ಬರುತ್ತವೆ. ಹಾಗೂ ರಟ್ಟಿನ ಸಾಮಾನುಗಳನ್ನು ಮಾರಲಿಕ್ಕೂ ಬರುವುದು. ಮಕ್ಕಳಿಗೆ ತಾವು ತಯಾರಿಸಿದ ಈ ಉಪಯುಕ್ತ ಸಾಮಾನುಗಳ ಬಗ್ಗೆ ಒಂದು ಹೆಮ್ಮೆ ಮತ್ತು ಆನಂದ ಉಂಟಾಗುತ್ತದೆ. ಇದರಿಂದ ಅವರ ಆಸಕ್ತಿ ಹೆಚ್ಚು ಬೆಳೆಯುತ್ತದೆ.

ರಟ್ಟಿನ ಕೆಲಸದ ಶಿಕ್ಷಣದ ಮೂಲಕ ಚರಿತ್ರೆ, ಭೂಗೋಳ, ಜಾಯಿರೆ, ಗಣಿತ ಇವುಗಳ ಸಹಜವಾದ ಸಮನ್ವಯ ಮಾಡಲು ಸಾಧ್ಯ. ಜ್ಯಾಯಿರೆಯ (ರೇಖಾಗಣಿತ) ಸಮನ್ವಯಕ್ಕೆ ಕಾಗದ ಮತ್ತು ರಟ್ಟಿನ ಕೆಲಸಗಳಿಗಿಂತಲೂ ಹೆಚ್ಚು ಪರಿಣಾಮಕಾರಿಯಾದ ಹಾಗೂ ಹಿತವಾದ ಮತ್ತು ಆನಂದದಾಯಕವಾದ ಮತ್ತೊಂದು ಚಟುವಟಿಕೆಯಿಲ್ಲವೆಂದು ಹೇಳಬಹುದು. ರಟ್ಟನ್ನು ಕತ್ತರಿಸುವಾಗ ಮಕ್ಕಳು ಲೆಕ್ಕಾಚಾರ ಹಾಗೂ ಅಳತೆಗಳನ್ನು ಮಾಡಬೇಕಾಗುವದು. ಕೆಲವು ಜ್ಯಾಯಿರೆಯ ಆಕೃತಿಗಳನ್ನು ತೆಗೆಯಬೇಕಾಗುವುದು. ಇದರಿಂದ ಗಣಿತ ಮತ್ತು ಜ್ಯಾಯಿರೆಯ ಜ್ಞಾನ ಉಂಟಾಗುವದು. ಉದಾಹರಣೆಗೆ ಬರೆಯುವ ಒತ್ತಿಗೆ, ಆಫೀಸ್ ಫೈಲ್ ಮುಂತಾದವುಗಳನ್ನು ಮಕ್ಕಳು ಮಾಡುವಾಗ ಕಾಟಕೋನ ಜಾಕೋನದ ಕಲ್ಪನೆ ಯಾಗುವದು. ರಟ್ಟನ್ನು ದುಂಡಾಗಿ ಕತ್ತರಿಸಿದಾಗ ವೃತ್ತದ ಕಲ್ಪನೆ ಬರುವದು. ಹೀಗೆ ಇತರ ಆಕೃತಿಗಳನ್ನು ತೆಗೆದಾಗ ಚೌರಸ, ಅಷ್ಟಕೋನಾಕೃತಿ ಇನ್ನೂ ಇತರ ಜ್ಯಾಯಿರೆಯ ಆಕೃತಿಯ ಕಲ್ಪನೆಯಾಗುವದು ಸಹಜವೇ ಆಗಿದೆ. ಇನ್ನು ರಟ್ಟಿನ ಕೆಲಸದಲ್ಲಿ ಕೆಲವು ಸಲಕರಣೆಗಳನ್ನು ಉಪಯೋಗಿಸ ಬೇಕಾಗುವದು. ಈ ಸಲಕರಣೆಗಳು ಸುಲಭವಾಗಿ ಸಿಗುವವು. ಮತ್ತು ಅವುಗಳನ್ನು ಮಕ್ಕಳು ಉಪಯೋಗಿಸುವಾಗ ಹಾಗು ಪರಿಶೀಲಿಸುವಾಗ ಅವರಿಗೆ ಆದಿವಾಸಿಗಳ ಮತ್ತು ಅವರು ಉಪಯೋಗಿಸುತ್ತಿದ್ದ ಸಲಕರಣೆಗಳ ಬಗ್ಗೆ ಕಥೆಗಳನ್ನೂ ಅವರ ಚರಿತ್ರೆಯನ್ನೂ ಸ್ವಲ್ಪ ಮಟ್ಟಿಗೆ ಸರಳ ಭಾಷೆಯಲ್ಲಿ ತಿಳಿಸಬಹುದು. ಹೀಗೆ ಮಕ್ಕಳು ರಟ್ಟಿನಿಂದ ಪುರಾತನ ಕಟ್ಟಡಗಳನ್ನು ರಚಿಸಿದಾಗ ಅಥವಾ ಉದಾಹರಣೆಗೆ ರೋಮ್ ದೇಶದಲ್ಲಿ ಉಪಯೋಗಿಸುತ್ತಿದ್ದ ಅಂದಿನ ರಾಜ ರಥವನ್ನಾಗಲಿ, ಅಂದಿನ ರೋಮ್ ದೇಶದ ದಂಡಾಳುವಿನ ಆಕೃತಿಯನ್ನಾಗಲಿ, ಮಕ್ಕಳು ರಟ್ಟಿನಲ್ಲಿ ಕತ್ತರಿಸಿ ತೆಗೆದಾಗ ಆ ಕಾಲದ ಚರಿತ್ರೆ ಹಾಗೂ ಆ ಕಾಲದ ಆರಸರ ವಿಷಯಗಳನ್ನು ಸಂಕ್ಷಿಪ್ತವಾಗಿ ಕಥೆಯ ರೂಪದಲ್ಲಿ ಅವರಿಗೆ ತಿಳಿಯ ಪಡಿಸಲು ಬರುವದು. ಈ ರೀತಿಯಲ್ಲಿ ರಟ್ಟಿನ ಕೆಲಸದ ಮೂಲಕ ಮಕ್ಕಳಿಗೆ ಸಾಮಾನ್ಯ ಜ್ಞಾನವನ್ನು ಮಾಡಿಕೊಡ ಬಹುದು.

ಒಟ್ಟಿನಲ್ಲಿ ಹೇಳುವದಾದರೆ ಕಾಗದ ಹಾಗು ರಟ್ಟಿನ ಕೆಲಸಗಳು ಶಿಕ್ಷಣದ ಮಾಧ್ಯಮವಾಗಿ ಪರಿಣಮಿಸುತ್ತವೆ. ಹೆಚ್ಚುವೆಚ್ಚವಿಲ್ಲದ ಈ ಚಟುವಟಿಕೆಗಳಿಂದ ಮಕ್ಕಳಿಗೆ ಹೆಚ್ಚಿನ ಜ್ಞಾನವನ್ನು ಮಾಡಿಕೊಡಬಹುದು. ಏಳು ವರ್ಷಗಳಿಗಿಂತಲೂ ಚಿಕ್ಕ ವಯಸ್ಸಿನ ಮಕ್ಕಳಿಗೆ ಕಾಗದ ಕೆಲಸವನ್ನೂ ಏಳರಿಂದ ಹನ್ನೊಂದು ವರ್ಷಗಳ ಮಕ್ಕಳಿಗೆ ರಟ್ಟಿನ ಕೆಲಸವನ್ನೂ ಚಟುವಟಿಕೆಗಳಿಗಾಗಿ ತೆಗೆದುಕೊಂಡು ಅವುಗಳ ಮೂಲಕ ಜ್ಞಾನವನ್ನು ಕೊಡಬಹುದು. ಕಾಗದ ಕೆಲಸವನ್ನು ಮಾಡಿದಾಗ ಅತೀ ಚಿಕ್ಕ ಮಕ್ಕಳಿಗೆ ಕಾಗದವನ್ನು ಮಡಿಚಿ ಆಕೃತಿಗಳನ್ನು ಮಾಡುವದನ್ನು, ಸ್ವಲ್ಪ ದೊಡ್ಡ ಮಕ್ಕಳಿಗೆ ಕಾಗದವನ್ನು ಕತ್ತರಿಸಿ ಆಕೃತಿಗಳನ್ನು ತಯಾರಿಸುವದನ್ನು ಕಲಿಸಬೇಕು. ದೊಡ್ಡ ಮಕ್ಕಳಿಗೆ ಕಾಗದ ಹಾಗು ರಟ್ಟಿನ ಆಕೃತಿಗಳ ಚಿತ್ರಗಳನ್ನು ತೆಗೆಯಲು ಕಲಿಸ ಬಹುದು. ಇದರಿಂದ ಚಿತ್ರಕಲೆಗೆ ಒಂದು ತಳಹದಿ ಹಾಕಿದಂತಾಗುವದು.

ಕಾಗದ ಹಾಗು ರಟ್ಟಿನ ಕೆಲಸಗಳನ್ನು ಬರಿಯ ಸಾಧೋಪಕರಣಗಳನ್ನಾಗಿ ತೆಗೆದುಕೊಳ್ಳದೆ ಅವುಗಳನ್ನು ಮಾಧ್ಯಮವನ್ನಾಗಿಟ್ಟುಕೊಂಡು ಮಕ್ಕಳಿಗೆ ಅವುಗಳ ಮೂಲಕ ಹೆಚ್ಚಿನ ಶಿಕ್ಷಣವನ್ನು ಕೊಡಬೇಕು.

'ಹಬ್ಬ-ಹುಣ್ಣಿವೆ ಜಯಂತಿ ಆಚರಣೆ'

ಲೇಖಕರು: **ಶ್ರೀ ಜಿ. ಎಸ್. ಗೋಕರ್ಣ,** ಕ್ರಾಪ್ಟ ಅಗ್ರನಾಯಿಲ್ಲುರ, ಧಾರವಾಡ

ನಮ್ಮ ಜೀವನ ಶಿಕ್ಷಣ ಶಾಲೆಗಳಲ್ಲಿ ಹಬ್ಬಗಳನ್ನು ಆಚರಿಸುವ ರೂಢಿ ಪ್ರಾರಂಭಿಸಿದ್ದೇವೆ. ನಮ್ಮ ಪ್ರಾಥಮಿಕ ಶಾಲೆಗಳಲ್ಲಿ ಕೆಲಸ ಮಾಡುತ್ತಿರುವ ಎಲ್ಲ ಶಿಕ್ಷಕ ಶಿಕ್ಷಕಿಯರಿಗೆ ಹಬ್ಬಗಳ ಬಗ್ಗೆ ಪೂರ್ಣ ಮಾಹಿತಿ ಇರುವದು ಅತ್ಯಾವಶ್ಯಕವಾಗಿದೆ. ಬಾಲಬಾಲಿಕೆಯರಿಗೆ ಹಬ್ಬದ ಬಗ್ಗೆ ಪೂರ್ಣ ಮಾಹಿತಿ ಮಾಡಿಕೊಡದೇ ಆಚರಿಸಿದ ಹಬ್ಬಗಳು ಉದ್ದೇಶ ಪೂರ್ಣ ಚಿಟುವಟಿಕೆಯಲ್ಲಿ ಬರುವದಿಲ್ಲ. ಆದುದರಿಂದ ಆಚರಣೆಯ ಶೈಕ್ಷಣಿಕ ಬೆಲೆ ಕಡಿಮೆಯಾಗುವದು.

ಎಲ್ಲ ದೇಶಗಳಲ್ಲಿ ಎಲ್ಲ ಧರ್ಮದ ಜನರು ವರ್ಷದಲ್ಲಿಯ ಕೆಲವು ದಿನಗಳನ್ನು ಹಬ್ಬಗಳೆಂದು ಆಚರಿಸುವರು. ದೈನಂದಿನ ಶ್ರಮದ ಕೆಲಸದಿಂದ ದೂರ ಉಳಿದು ಮನೆಯಲ್ಲಿಯ ಜನರಗೂಡ ಒಂದು ದಿವಸ ಆನಂದದಿಂದ ಕಳೆದು ನಮ್ಮ ಉತ್ಸಾಹವನ್ನು ಬೆಳೆಯಿಸುವದೇ ಮುಖ್ಯ ಉದ್ದೇಶವೆಂದು ತಿಳಿದು ಬರುತ್ತದೆ. ಹಬ್ಬದ ದಿವಸ ಮನೆಯಲ್ಲಿ ವಿವಿಧ ಆಹಾರದ ಪಕ್ವಾನ್ನಗಳನ್ನು ತಿಂದು, ಉತ್ತಮ ಸ್ವಚ್ಛವಾದ ಅರಿವೆಗಳನ್ನು ಹಾಕಿಕೊಂಡು ಇಷ್ಟ ಮಿತ್ರರ ಮನೆಗೆ ಹೋಗಿ ಆನಂದದಿಂದ ವೇಳೆ ಕಳೆಯುವ ದುಂಟು. ಬಾಲಕ ಬಾಲಕಿಯರಂತೂ ಹಬ್ಬದ ದಿನಗಳ ಬಗ್ಗೆ ಆಸ್ಥೆಯನ್ನು ವಹಿಸಿ ಹಾದಿಯನ್ನು ಕಾಯುವದುಂಟು.

ದಿನಾಚರಣೆಯ ಎರಡನೆಯ ಪ್ರಕಾರವೆಂದರೆ ವ್ರತಗಳು. ಭಾರತದಲ್ಲಿ ಹಿಂದು ಜನರು ಏಕಾದಶಿ, ಮಹಾಶಿವರಾತ್ರಿ, ಅನಂತ ಚತುರ್ದಶಿ ಮೊದಲಾದ ವ್ರತಗಳನ್ನು ಆಚರಿಸುತ್ತಾರೆ. ಈ ದಿವಸ ಸನಾತನಿ ಜನರು ಉಪವಾಸವನ್ನು ಆಚರಿಸುತ್ತಾರೆ. ನಮ್ಮ ಮನೋಭಾವನೆಗಳ ಮೇಲೆ ನಿಯಂತ್ರಣವನ್ನು ಇಟ್ಟುಕೊಂಡು ನೈತಿಕ ಬಲವನ್ನು ಹೆಚ್ಚಿಸುವದೇ ಈ ವ್ರತಗಳ ಉದ್ದೇಶ. ಇತ್ತೀಚೆಗೆ ವ್ರತಗಳ ಮೂಲೋದ್ದೇಶವನ್ನು ಮರೆತು ಏಕಾದಶಿಯ ದಿನ ದಿನದ ಊಟದ ಬದಲು ಬೇರೆ ಬೇರೆ ಪದಾರ್ಥಗಳನ್ನು ಅಜೀರ್ಣವಾಗುವ ವರೆಗೆ ತಿಂದು ಆರೋಗ್ಯವರ್ಧನೆಯ ಬದಲು ರೋಗ ಸಂವರ್ಧನೆ ಮಾಡಿದ್ದು ಕಂಡು ಬರುತ್ತದೆ. ನಾವು ವ್ರತಗಳ ಸರಿಯಾದ ಉದ್ದೇಶ ತಿಳಿದುಕೊಂಡು ಅವುಗಳನ್ನು ಸರಿಯಾಗಿ ಆಚರಿಸುವದು ಅತ್ಯಾವಶ್ಯಕವಾಗಿದೆ. ಜೈನ ಧರ್ಮದಲ್ಲಿ ಮಹಾವೀರ ಜಯಂತಿಯ ವ್ರತವನ್ನು ಆಚರಿಸುತ್ತಾರೆ. ಹತ್ತು ದಿವಸದ ವರೆಗೆ ದಿನಾಲು ಒಂದರಂತೆ ಸದ್ಗುಣಗಳ ಉಪಾಸನೆ ಮಾಡುತ್ತಾರೆ. ಮುಸಲ್ಮಾನ ಜನರು ರಮಜಾನ ತಿಂಗಳಲ್ಲಿ ಒಂದು ತಿಂಗಳವರೆಗೆ ಉಪವಾಸ ಮಾಡುತ್ತಾರೆ. ಈ ವ್ರತಗಳನ್ನು ಆಚರಿಸಿ ಮಾನವ ಪ್ರಾಣಿಗಳಲ್ಲಿ ಇದ್ದ ಕ್ಷುದ್ರ ಮನೋವೃತ್ತಿಗಳನ್ನು ದೂರ ಮಾಡಿಕೊಂಡು ಆಚಾರ ಶುದ್ಧತೆ ಮಾಡುವದು ಹಾಗೂ ನಮ್ಮ ಪಚನೇಂದ್ರಿಯಗಳಿಗೆ ಅವಶ್ಯಕ ವಿಶ್ರಾಂತಿಯನ್ನು ಕೊಟ್ಟು ಆರೋಗ್ಯ ಸಂವರ್ಧನೆ ಮಾಡುವದು ಇವೇ ಉಪವಾಸಗಳ ಉದ್ದೇಶ. ಈ ಉದ್ದೇಶಗಳನ್ನು ಸರಿಯಾಗಿ ತಿಳಿದುಕೊಂಡು ವ್ರತಗಳನ್ನು ಆಚರಿಸತಕ್ಕದ್ದು.

ದಿನಾಚರಣೆಯ ಮೂರನೆಯ ಪ್ರಕಾರವೆಂದರೆ ಉತ್ಸವಗಳು. ಪ್ರತಿಯೊಂದು ಊರಲ್ಲಿ ಜಾತ್ರೆಗಳನ್ನು ಆಚರಿಸುವದು ನನಗೆ ಕಂಡು ಬರುತ್ತದೆ. ದಸರಾ (ವಿಜಯಾದಶಮಿ) ಪಬ್ಬ ನಮ್ಮ ನಾಡಹಬ್ಬವೆಂದು ನಾವು ಆಚರಿಸುತ್ತೇವೆ. ಲೋಕಮಾನ್ಯ ಟಿಳಕರು ಮಹಾರಾಷ್ಟ್ರದಲ್ಲಿ ಶಿವಾಜಿ ಜಯಂತಿ ಮತ್ತು ಗಣೇಶೋತ್ಸವ ಇವುಗಳನ್ನು ಉತ್ಸವವೆಂದು ಆಚರಿಸುವ ರೂಢಿ ಮಾಡಿ ಜ್ಞಾನ-ಬಲ-ಶೀಲಸಂವರ್ಧನೆಯಾಗಬೇಕೆಂದು ಪ್ರಯತ್ನಿಸಿದರು. ಪಾಶ್ಚಿಮಾತ್ಯ ದೇಶಗಳಲ್ಲಿ ಕ್ರಿಸ್‌ಮಸ್ ಸಮಯದಲ್ಲಿ ಮತ್ತು ಮುಸಲ್ಮಾನ ಧರ್ಮದವರು ಈದ-ಮಿಲಾದ ಮತ್ತು ಬಕರೀದ ಈ ಹಬ್ಬಗಳ ಕಾಲಕ್ಕೆ ಸಾಮೂಹಿಕ ಪ್ರಾರ್ಥನೆ ಮಾಡುವದು ನಮಗೆ ಗೊತ್ತಿದೆ. ಭಾರತದ ಬೇರೆ ಬೇರೆ ಭಾಗಗಳಲ್ಲಿ ಯಾತ್ರೆಗಾಗಿ ಲಕ್ಷಾವಧಿ ಜನರು ಕೂಡಿ ಉತ್ಸವಗಳನ್ನು ಆಚರಿಸುವದನ್ನು ನಾವು ನೋಡುತ್ತೇವೆ. ಗೋಕರ್ಣದ ಶಿವರಾತ್ರಿ,

ಕೆಲಸವನ್ನು ಶಿಕ್ಷಣದ ಮಾಧ್ಯಮವನ್ನಾಗಿ ಉಪಯೋಗಿಸಿ ಕೊಳ್ಳಬಹುದು. ಚಿಕ್ಕ ಮಕ್ಕಳಿಗೆ (ಅಂದರೆ ೧೦-೧೨ ವರ್ಷಗಳಿಗಿಂತಲೂ ಚಿಕ್ಕವಯಸ್ಸಿನ ಮಕ್ಕಳು) ಲೋಹದ ಕೆಲಸ, ಕಟ್ಟಿಗೆ ಕೆಲಸ ಇಂಥ ಕಠಿಣ ಕೆಲಸಗಳನ್ನು ಕಲಿಸಲು ಸಾಧ್ಯವಿಲ್ಲ. ಆದರೆ ಕಾಗದ ಮತ್ತು ರಟ್ಟಿನ ಕೆಲಸಗಳು ಈ ಮೇಲಿನ ಕೈ ಕೆಲಸಗಳನ್ನು ಮಕ್ಕಳು ಇನ್ನು ಮುಂದೆ ಕೈಗೊಳ್ಳಲು ಒಂದು ಪೂರ್ವ ತರಬೇತಿಯನ್ನು ಕೊಡುತ್ತವೆ.

ಮಕ್ಕಳು ತಯಾರಿಸಿದ ರಟ್ಟಿನ ಸಾಮಾನುಗಳು ಉಪಯುಕ್ತ ವಸ್ತುಗಳಾಗುತ್ತವೆ. ಉದಾಹರಣೆಗೆ ತಕಲಿ ಪೆಟ್ಟಿಗೆ, ವಿದ್ಯಾರ್ಥಿಗಳ ಫೈಲ್, ಬರೆಯುವ ಒತ್ತಿಗೆ, ಆಫೀಸ್ ಫೈಲ್ ಮುಂತಾದ ಇನ್ನೂ ಅನೇಕ ಸಾಮಾನುಗಳು ನಮ್ಮ ನಿತ್ಯದ ಉಪಯೋಗಕ್ಕೆ ಬರುತ್ತವೆ. ಹಾಗೂ ರಟ್ಟಿನ ಸಾಮಾನುಗಳನ್ನು ಮಾರಲಿಕ್ಕೂ ಬರುವುದು. ಮಕ್ಕಳಿಗೆ ತಾವು ತಯಾರಿಸಿದ ಈ ಉಪಯುಕ್ತ ಸಾಮಾನುಗಳ ಬಗ್ಗೆ ಒಂದು ಹೆಮ್ಮೆ ಮತ್ತು ಆನಂದ ಉಂಟಾಗುತ್ತದೆ. ಇದರಿಂದ ಅವರ ಆಸಕ್ತಿ ಹೆಚ್ಚು ಬೆಳೆಯುತ್ತದೆ.

ರಟ್ಟಿನ ಕೆಲಸದ ಶಿಕ್ಷಣದ ಮೂಲಕ ಚರಿತ್ರೆ, ಭೂಗೋಳ, ಜಾಯಿರೆ, ಗಣಿತ ಇವುಗಳ ಸಹಜವಾದ ಸಮನ್ವಯ ಮಾಡಲು ಸಾಧ್ಯ. ಜ್ಯಾಯಿರೆಯ (ರೇಖಾಗಣಿತ) ಸಮನ್ವಯಕ್ಕೆ ಕಾಗದ ಮತ್ತು ರಟ್ಟಿನ ಕೆಲಸಗಳಿಗಿಂತಲೂ ಹೆಚ್ಚು ಪರಿಣಾಮಕಾರಿಯಾದ ಹಾಗೂ ಹಿತವಾದ ಮತ್ತು ಆನಂದದಾಯಕವಾದ ಮತ್ತೊಂದು ಚಟುವಟಿಕೆಯಿಲ್ಲವೆಂದು ಹೇಳಬಹುದು. ರಟ್ಟನ್ನು ಕತ್ತರಿಸುವಾಗ ಮಕ್ಕಳು ಲೆಕ್ಕಾಚಾರ ಹಾಗೂ ಅಳತೆಗಳನ್ನು ಮಾಡಬೇಕಾಗುವದು. ಕೆಲವು ಜ್ಯಾಯರೆಯ ಆಕೃತಿಗಳನ್ನು ತೆಗೆಯಬೇಕಾಗುವುದು. ಇದರಿಂದ ಗಣಿತ ಮತ್ತು ಜ್ಯಾಯಿರೆಯ ಜ್ಞಾನ ಉಂಟಾಗುವದು. ಉದಾಹರಣೆಗೆ ಬರೆಯುವ ಒತ್ತಿಗೆ, ಆಫೀಸ್ ಫೈಲ್ ಮುಂತಾದವುಗಳನ್ನು ಮಕ್ಕಳು ಮಾಡುವಾಗ ಕಾಟಕೋನ ಚೌಕೋನದ ಕಲ್ಪನೆ ಯಾಗುವದು. ರಟ್ಟನ್ನು ದುಂಡಾಗಿ ಕತ್ತರಿಸಿದಾಗ ವೃತ್ತದ ಕಲ್ಪನೆ ಬರುವದು. ಹೀಗೆ ಇತರ ಆಕೃತಿಗಳನ್ನು ತೆಗೆದಾಗ ಚೌರಸ, ಅಷ್ಟಕೋನಾಕೃತಿ ಇನ್ನೂ ಇತರ ಜ್ಯಾಯಿರೆಯ ಆಕೃತಿಯ ಕಲ್ಪನೆಯಾಗುವದು ಸಹಜವೇ ಆಗಿದೆ. ಇನ್ನು ರಟ್ಟಿನ ಕೆಲಸದಲ್ಲಿ ಕೆಲವು ಸಲಕರಣೆ ಗಳನ್ನು ಉಪಯೋಗಿಸ ಬೇಕಾಗುವದು. ಈ ಸಲಕರಣೆಗಳು ಸುಲಭವಾಗಿ ಸಿಗುವವು. ಮತ್ತು ಅವುಗಳನ್ನು ಮಕ್ಕಳು ಉಪಯೋಗಿಸುವಾಗ ಹಾಗು ಪರಿಶೀಲಿಸುವಾಗ ಅವರಿಗೆ ಆದಿವಾಸಿಗಳ ಮತ್ತು ಅವರು ಉಪಯೋಗಿಸುತ್ತಿದ್ದ ಸಲಕರಣೆಗಳ ಬಗ್ಗೆ ಕಥೆಗಳನ್ನೂ ಅವರ ಚರಿತ್ರೆಯನ್ನೂ ಸ್ವಲ್ಪ ಮಟ್ಟಿಗೆ ಸರಳ ಭಾಷೆಯಲ್ಲಿ ತಿಳಿಸಬಹುದು. ಹೀಗೆ ಮಕ್ಕಳು ರಟ್ಟಿನಿಂದ ಪುರಾತನ ಕಟ್ಟಡಗಳನ್ನು ರಚಿಸಿದಾಗ ಅಥವಾ ಉದಾಹರಣೆಗೆ ರೋಮ್ ದೇಶದಲ್ಲಿ ಉಪಯೋಗಿಸುತ್ತಿದ್ದ ಅಂದಿನ ರಾಜ ರಥವನ್ನಾಗಲಿ, ಅಂದಿನ ರೋಮ್ ದೇಶದ ದಂಡಾಳುವಿನ ಆಕೃತಿಯನ್ನಾಗಲಿ, ಮಕ್ಕಳು ರಟ್ಟಿನಲ್ಲಿ ಕತ್ತರಿಸಿ ತೆಗೆದಾಗ ಆ ಕಾಲದ ಚರಿತ್ರೆ ಹಾಗೂ ಆ ಕಾಲದ ಅವಸರ ವಿಷಯಗಳನ್ನು ಸಂಕ್ಷಿಪ್ತವಾಗಿ ಕಥೆಯ ರೂಪದಲ್ಲಿ ಅವರಿಗೆ ತಿಳಿಯ ಪಡಿಸಲು ಬರುವದು. ಈ ರೀತಿಯಲ್ಲಿ ರಟ್ಟಿನ ಕೆಲಸದ ಮೂಲಕ ಮಕ್ಕಳಿಗೆ ಸಾಮಾನ್ಯ ಜ್ಞಾನವನ್ನು ಮಾಡಿಕೊಡ ಬಹುದು.

ಒಟ್ಟಿನಲ್ಲಿ ಹೇಳುವದಾದರೆ ಕಾಗದ ಹಾಗು ರಟ್ಟಿನ ಕೆಲಸಗಳು ಶಿಕ್ಷಣದ ಮಾಧ್ಯಮವಾಗಿ ಪರಿಣಮಿ ಸುತ್ತವೆ. ಹೆಚ್ಚುವೆಚ್ಚವಿಲ್ಲದ ಈ ಚಟುವಟಿಕೆಗಳಿಂದ ಮಕ್ಕಳಿಗೆ ಹೆಚ್ಚಿನ ಜ್ಞಾನವನ್ನು ಮಾಡಿಕೊಡಬಹುದು. ಏಳು ವರ್ಷಗಳಿಗಿಂತಲೂ ಚಿಕ್ಕ ವಯಸ್ಸಿನ ಮಕ್ಕಳಿಗೆ ಕಾಗದ ಕೆಲಸವನ್ನೂ ಏಳರಿಂದ ಹನ್ನೊಂದು ವರ್ಷಗಳ ಮಕ್ಕಳಿಗೆ ರಟ್ಟಿನ ಕೆಲಸವನ್ನೂ ಚಟುವಟಿಕೆಗಳಿಗಾಗಿ ತೆಗೆದುಕೊಂಡು ಅವುಗಳ ಮೂಲಕ ಜ್ಞಾನವನ್ನು ಕೊಡಬಹುದು. ಕಾಗದ ಕೆಲಸವನ್ನು ಮಾಡಿದಾಗ ಅತೀ ಚಿಕ್ಕ ಮಕ್ಕಳಿಗೆ ಕಾಗದವನ್ನು ಮಡಿಚಿ ಆಕೃತಿಗಳನ್ನು ಮಾಡುವದನ್ನು, ಸಲ್ಪ ದೊಡ್ಡ ಮಕ್ಕಳಿಗೆ ಕಾಗದವನ್ನು ಕತ್ತರಿಸಿ ಆಕೃತಿಗಳನ್ನು ತಯಾರಿಸುವದನ್ನು ಕಲಿಸಬೇಕು. ದೊಡ್ಡಮಕ್ಕಳಿಗೆ ಕಾಗದ ಹಾಗು ರಟ್ಟಿನ ಆಕೃತಿಗಳ ಚಿತ್ರಗಳನ್ನು ತೆಗೆಯಲು ಕಲಿಸ ಬಹುದು. ಇದ ರಿಂದ ಚಿತ್ರಕಲೆಗೆ ಒಂದು ತಳಹದಿ ಹಾಕಿದಂತಾಗುವದು.

ಕಾಗದ ಹಾಗು ರಟ್ಟಿನ ಕೆಲಸಗಳನ್ನು ಬರಿಯ ಪಾಠೋಪಕರಣಗಳನ್ನಾಗಿ ತೆಗೆದುಕೊಳ್ಳದೆ ಅವುಗಳನ್ನು ಮಾಧ್ಯಮವನ್ನಾಗಿಟ್ಟುಕೊಂಡು ಮಕ್ಕಳಿಗೆ ಅವುಗಳ ಮೂಲಕ ಹೆಚ್ಚಿನ ಶಿಕ್ಷಣವನ್ನು ಕೊಡಬೇಕು.

'ಹಬ್ಬ-ಹುಣ್ಣಿವೆ ಜಯಂತಿ ಆಚರಣೆ'

ಲೇಖಕರು: **ಶ್ರೀ ಜಿ. ಎಸ್. ಗೋಕರ್ಣ,** ಕ್ರಾಪ್ಟ ಅಗ್ರನಾಯಿಝರ, ಧಾರವಾಡ

ನಮ್ಮ ಜೀವನ ಶಿಕ್ಷಣ ಶಾಲೆಗಳಲ್ಲಿ ಹಬ್ಬಗಳನ್ನು ಆಚರಿಸುವ ರೂಢಿ ಪ್ರಾರಂಭಿಸಿದ್ದೇವೆ. ನಮ್ಮ ಪ್ರಾಥಮಿಕ ಶಾಲೆಗಳಲ್ಲಿ ಕೆಲಸ ಮಾಡುತ್ತಿರುವ ಎಲ್ಲ ಶಿಕ್ಷಕ ಶಿಕ್ಷಕಿಯರಿಗೆ ಹಬ್ಬಗಳ ಬಗ್ಗೆ ಪೂರ್ಣ ಮಾಹಿತಿ ಇರುವದು ಅತ್ಯಾವಶ್ಯಕವಾಗಿದೆ. ಬಾಲಬಾಲಿಕೆಯರಿಗೆ ಹಬ್ಬದ ಬಗ್ಗೆ ಪೂರ್ಣ ಮಾಹಿತಿ ಮಾಡಿಕೊಡದೇ ಆಚರಿಸಿದ ಹಬ್ಬಗಳು ಉದ್ದೇಶ ಪೂರ್ಣ ಚಿಟುವಟಕೆಯಲ್ಲಿ ಬರುವದಿಲ್ಲ. ಆದುದರಿಂದ ಆಚರಣೆಯ ಶೈಕ್ಷಣಿಕ ಬೆಲೆ ಕಡಿಮೆಯಾಗುವದು.

ಎಲ್ಲ ದೇಶಗಳಲ್ಲಿ ಎಲ್ಲ ಧರ್ಮದ ಜನರು ವರ್ಷದಲ್ಲಿಯ ಕೆಲವು ದಿನಗಳನ್ನು ಹಬ್ಬಗಳೆಂದು ಆಚರಿಸುವರು. ದೈನಂದಿನ ಶ್ರಮದ ಕೆಲಸದಿಂದ ದೂರ ಉಳಿದು ಮನೆಯಲ್ಲಿಯ ಜನರಗೂಡ ಒಂದು ದಿವಸ ಆನಂದದಿಂದ ಕಳೆದು ನಮ್ಮ ಉತ್ಸಾಹವನ್ನು ಬೆಳೆಯಿಸುವದೇ ಮುಖ್ಯ ಉದ್ದೇಶವೆಂದು ತಿಳಿದು ಬರುತ್ತದೆ. ಹಬ್ಬದ ದಿವಸ ಮನೆಯಲ್ಲಿ ವಿವಿಧ ಆಹಾರದ ಪಕ್ವಾನ್ನಗಳನ್ನು ತಿಂದು, ಉತ್ತಮ ಸ್ವಚ್ಛವಾದ ಅರಿವೆಗಳನ್ನು ಹಾಕಿಕೊಂಡು ಇಷ್ಟ ಮಿತ್ರರ ಮನೆಗೆ ಹೋಗಿ ಆನಂದದಿಂದ ವೇಳೆ ಕಳೆಯುವದುಂಟು. ಬಾಲಕ ಬಾಲಕಿಯರಂತೂ ಹಬ್ಬದ ದಿನಗಳ ಬಗ್ಗೆ ಆಸ್ಥೆಯನ್ನು ವಹಿಸಿ ಪಾದಿಯನ್ನು ಕಾಯುವದುಂಟು.

ದಿನಾಚರಣೆಯ ಎರಡನೆಯ ಪ್ರಕಾರವೆಂದರೆ ವ್ರತಗಳು. ಭಾರತದಲ್ಲಿ ಹಿಂದು ಜನರು ಏಕಾದಶಿ, ಮಹಾಶಿವರಾತ್ರಿ, ಅನಂತ ಚತುರ್ದಶಿ ಮೊದಲಾದ ವ್ರತಗಳನ್ನು ಆಚರಿಸುತ್ತಾರೆ. ಈ ದಿವಸ ಸನಾತನಿ ಜನರು ಉಪವಾಸವನ್ನು ಆಚರಿಸುತ್ತಾರೆ. ನಮ್ಮ ಮನೋಭಾವನೆಗಳ ಮೇಲೆ ನಿಯಂತ್ರಣವನ್ನು ಇಟ್ಟುಕೊಂಡು ನೈತಿಕ ಬಲವನ್ನು ಹೆಚ್ಚಿಸುವದೇ ಈ ವ್ರತಗಳ ಉದ್ದೇಶ. ಇತ್ತೀಚೆಗೆ ವ್ರತಗಳ ಮೂಲೋದ್ದೇಶವನ್ನು ಮರೆತು ಏಕಾದಶಿಯ ದಿನ ದಿನವ ಊಟದ ಬದಲು ಬೇರೆ ಬೇರೆ ಪದಾರ್ಥಗಳನ್ನು ಅಜೀರ್ಣವಾಗುವ ವರೆಗೆ ತಿಂದು ಆರೋಗ್ಯವರ್ಧನೆಯ ಬದಲು ರೋಗ ಸಂವರ್ಧನೆ ಮಾಡಿದ್ದು ಕಂಡು ಬರುತ್ತದೆ. ನಾವು ವ್ರತಗಳ ಸರಿಯಾದ ಉದ್ದೇಶ ತಿಳಿದುಕೊಂಡು ಅವುಗಳನ್ನು ಸರಿಯಾಗಿ ಆಚರಿಸುವದು ಅತ್ಯಾವಶ್ಯಕವಾಗಿದೆ. ಜೈನ ಧರ್ಮದಲ್ಲಿ ಮಹಾವೀರ ಜಯಂತಿಯ ವ್ರತವನ್ನು ಆಚರಿಸುತ್ತಾರೆ. ಹತ್ತು ದಿವಸದ ವರೆಗೆ ದಿನಾಲು ಒಂದರಂತೆ ಸದ್ಗುಣಗಳ ಉಪಾಸನೆ ಮಾಡುತ್ತಾರೆ. ಮುಸಲ್ಮಾನ ಜನರು ರಮಜಾನ ತಿಂಗಳಲ್ಲಿ ಒಂದು ತಿಂಗಳವರೆಗೆ ಉಪವಾಸ ಮಾಡುತ್ತಾರೆ. ಈ ವ್ರತಗಳನ್ನು ಆಚರಿಸಿ ಮಾನವ ಪ್ರಾಣಿಗಳಲ್ಲಿ ಇದ್ದ ಕ್ಷುದ್ರ ಮನೋವೃತ್ತಿಗಳನ್ನು ದೂರ ಮಾಡಿಕೊಂಡು ಆಚಾರ ಶುದ್ಧತೆ ಮಾಡುವದು ಹಾಗೂ ನಮ್ಮ ಪಚನೇಂದ್ರಿಯಗಳಿಗೆ ಆವಶ್ಯಕ ವಿಶ್ರಾಂತಿಯನ್ನು ಕೊಟ್ಟು ಆರೋಗ್ಯ ಸಂವರ್ಧನೆ ಮಾಡುವದು ಇವೇ ಉಪವಾಸಗಳ ಉದ್ದೇಶ. ಈ ಉದ್ದೇಶಗಳನ್ನು ಸರಿಯಾಗಿ ತಿಳಿದುಕೊಂಡು ವ್ರತಗಳನ್ನು ಆಚರಿಸತಕ್ಕದ್ದು.

ದಿನಾಚರಣೆಯ ಮೂರನೆಯ ಪ್ರಕಾರವೆಂದರೆ ಉತ್ಸವಗಳು. ಪ್ರತಿಯೊಂದು ಊರಲ್ಲಿ ಜಾತ್ರೆಗಳನ್ನು ಆಚರಿಸುವದು ನಮಗೆ ಕಂಡು ಬರುತ್ತದೆ. ದಸರಾ (ವಿಜಯಾದಶಮಿ) ಹಬ್ಬ ನಮ್ಮ ನಾಡಹಬ್ಬವೆಂದು ನಾವು ಆಚರಿಸುತ್ತೇವೆ. ಲೋಕಮಾನ್ಯ ಟಿಳಕರು ಮಹಾರಾಷ್ಟ್ರದಲ್ಲಿ ಶಿವಾಜಿ ಜಯಂತಿ ಮತ್ತು ಗಣೇಶೋತ್ಸವ ಇವುಗಳನ್ನು ಉತ್ಸವವೆಂದು ಆಚರಿಸುವ ರೂಢಿ ಮಾಡಿ ಜ್ಞಾನ-ಬಲ-ಶೀಲಸಂವರ್ಧನೆಯಾಗ ಬೇಕೆಂದು ಪ್ರಯತ್ನಿಸಿದರು. ಪಾಶ್ಚಿಮಾತ್ಯ ದೇಶಗಳಲ್ಲಿ ಕ್ರಿಸ್‌ಮಸ್ ಸಮಯದಲ್ಲಿ ಮತ್ತು ಮುಸಲ್ಮಾನ ಧರ್ಮದವರು ಈದ-ಮಿಲಾದ ಮತ್ತು ಬಕರೀದ ಈ ಹಬ್ಬಗಳ ಕಾಲಕ್ಕೆ ಸಾಮೂಹಿಕ ಪ್ರಾರ್ಥನೆ ಮಾಡುವದು ನಮಗೆ ಗೊತ್ತಿದೆ. ಭಾರತದ ಬೇರೆ ಬೇರೆ ಭಾಗಗಳಲ್ಲಿ ಯಾತ್ರೆಗಾಗಿ ಲಕ್ಷಾವಧಿ ಜನರು ಕೂಡಿ ಉತ್ಸವಗಳನ್ನು ಆಚರಿಸುವದನ್ನು ನಾವು ನೋಡುತ್ತೇವೆ. ಗೋಕರ್ಣದ ಶಿವರಾತ್ರಿ,

ಯಲ್ಲಮ್ಮ ಗುಡ್ಡದ ಭಾರತ ಹುಣ್ಣಿಮೆ, ಪಂಢರಪುರದ ಏಕಾದಶಿ, ಹುಬ್ಬಳ್ಳಿಯ ಸಿದ್ಧಾರೂಢ ಜಾತ್ರೆ, ಧಾರವಾಡ ಮತ್ತು ಸೊಲ್ಲಾಪೂರದ ಸಂಕ್ರಮಣದ ಜಾತ್ರೆ ಮೊದಲಾದ ಕೆಲವು ಉದಾಹರಣೆಗಳನ್ನು ಕೊಡಬಹುದು. ಯಾತ್ರೆಯಲ್ಲಿ ಬೇರೆ ಬೇರೆ ಜನರು ಒಂದೆಡೆ ಕೂಡುವದನ್ನು ಮತ್ತು ಉತ್ಸಾಹದಿಂದ ಕಾಲ ಕಳೆಯುವದನ್ನು ನೋಡಿ ಮನಸ್ಸಿಗೆ ಸಮಾಧಾನ ವಾಗುವದು. ಯಾತ್ರೆಗಳನ್ನು ಸಾಮಾಜಿಕ ಉತ್ಸವ ಗಳೆಂದು ಕರೆಯಬಹುದು.

ಇತ್ತೀಚೆಗೆ ನಾವು ರಾಷ್ಟ್ರೀಯ ದಿನಗಳನ್ನು ಆಚರಿಸಲು ಪ್ರಾರಂಭಿಸಿದ್ದೇವೆ. ೧೫ ಅಗಸ್ಟ ಸ್ವಾತಂತ್ರ್ಯ ದಿನವೆಂದೂ ೨೬ ಜನವರಿ ಪ್ರಜಾರಾಜ್ಯ ದಿನವೆಂದೂ ಆಚರಿಸುತ್ತೇವೆ. ಹಾಗು ಗ್ರಾಮ ಸುಧಾರಣಾ ಸಪ್ತಾಹ, ಜೀವನ ಶಿಕ್ಷಣ ಸಪ್ತಾಹ, ಸಮಾಜ ಶಿಕ್ಷಣ ಸಪ್ತಾಹ, ವನಮಹೋತ್ಸವ ಮೊದಲಾದ ಬೇರೆ ಬೇರೆ ದಿನಾಚರಣೆ ಗಳೂ ರೂಢಿವಾಗಿವೆ. ಭಾರತಕ್ಕೆ ಸ್ವಾತಂತ್ರ್ಯ ಸಿಕ್ಕ ಮೇಲೆ ಜನಸಾಮಾನ್ಯರಲ್ಲಿ ಸರಿಯಾದ ತಿಳುವಳಿಕೆಯಾಗಿ ಅವರ ಉತ್ಸಾಹ ಬೆಳೆದು ದೇಶದ ಅಭಿವೃದ್ಧಿಯಾಗಲೆಂಬ ಸದ್ಭಾವನೆಯಿಂದ ಈ ರಾಷ್ಟ್ರೀಯ ಉತ್ಸವಗಳನ್ನು ನಾವು ಆಚರಿಸುತ್ತೇವೆ. ಅದೇ ಪ್ರಕಾರ ಸಂಯುಕ್ತ ರಾಷ್ಟ್ರದಿನ ಮತ್ತು ಮಾನವ ಹಕ್ಕಿನ ದಿನ ಮುಂತಾದ ಅಂತರ್ರಾಷ್ಟ್ರೀಯ ದಿನಗಳ ಆಚರಣೆ ಮಾಡುವ ರೂಢಿಯನ್ನು ಪ್ರಾರಂಭಿಸಿದ್ದೇವೆ. ಭಾರತದಲ್ಲಿ ಹುಟ್ಟಿ ಬೆಳೆದು ಜಾಗತಿಕ ಕೀರ್ತಿ ಪಡೆದವರ ಮತ್ತು ರಾಷ್ಟ್ರಕ್ಕೆ ಮಾರ್ಗದರ್ಶನ ಮಾಡಿದ ಮಹಾ ಪುರುಷರ ಜಯಂತಿ ಮತ್ತು ಪುಣ್ಯತಿಥಿಗಳನ್ನು ಆಚರಿಸುವ ಕ್ರಮವನ್ನು ನಾವು ಕೈಕೊಂಡಿದ್ದೇವೆ. ಶ್ರೀ ಕೃಷ್ಣ ಜಯಂತಿ ರಾಮ ನವಮಿ, ಬಸವ ಜಯಂತಿ. ಮಹಾವೀರ ಜಯಂತಿ, ಮುಂತಾದ ದಿನಗಳನ್ನು ಧಾರ್ಮಿಕ ಹಬ್ಬಗಳೆಂದು ಆಚರಿಸುವದುಂಟು. ಶಿವಾಜಿ ಜಯಂತಿ, ಟಿಳಕ ಜಯಂತಿ, ಸುಭಾಸ ಜಯಂತಿ, ರಾಜೇಂದ್ರ ಪ್ರಸಾದ ಜಯಂತಿ, ಗಾಂಧೀ ಜಯಂತಿ, ನೆಹರೂ ಜಯಂತಿ, ಟಾಗೋರ ಜಯಂತಿ, ಗಾಂಧೀ ಪುಣ್ಯತಿಥಿ ಈ ದಿನಗಳನ್ನು ನಾವು ಐತಿಹಾಸಿಕ ಹಾಗು ರಾಷ್ಟ್ರೀಯ ದಿನಗಳೆಂದು ಆಚರಿಸುತ್ತೇವೆ. ನಾವು ಅವರ ಜೀವನ ಚರಿತ್ರೆಯ ಸಿಹಿ ನೆನಹು ಮಾಡಿ ಅವರ ಗುಣಗಳು ನಮ್ಮಲ್ಲಿ ಬರುವಂತೆ ಪ್ರಯತ್ನಿಸುವದೇ ಈ ದಿನಗಳನ್ನು ಆಚರಿಸುವ ಉದ್ದೇಶವಾಗಿದೆ.

ಜೀವನ ಶಿಕ್ಷಣ ಶಾಲೆಗಳಲ್ಲಿ ಹಬ್ಬಗಳ ಆಚರಣೆಗೆ ಮಹತ್ವದ ಸ್ಥಾನವನ್ನು ಕೊಡಲಾಗಿದೆ. ಬಾಲಕ ಬಾಲಿಕೆಯರಿಗೆ ನಮ್ಮ ದೇಶದ ಸಂಸ್ಕೃತಿಯ ಬಗ್ಗೆ ಮಾಹಿತಿ ಮಾಡಿಕೊಡುವದು ಮತ್ತು ಮಹಾಪುರುಷರ ಚರಿತ್ರೆ ಹೇಳಿ ಅವರ ಶೀಲಸಂವರ್ಧನೆಯಾಗುವಂತೆ ಅವರ ಜ್ಞಾನ ಬೆಳೆಸುವದೇ ಮುಖ್ಯ ಉದ್ದೇಶವಾಗಿದೆ. ಹಬ್ಬಗಳ ಆಚರಣೆಯಿಂದ ಕೆಲವು ಉದ್ದೇಶಪೂರ್ಣ ಚಟುವಟಿಕೆಗಳನ್ನು ಮಾಡಿಸಿ ಆ ಚಟುವಟಿಕೆಗಳ ಮುಖಾಂತರ ಅವರಿಗೆ ಸಮವಾಯ ಜ್ಞಾನವನ್ನು ಮಾಡಿಕೊಡವದು ಅವಶ್ಯಕ ವಿರುತ್ತದೆ. ನಮ್ಮ ಸಂಸ್ಕೃತಿಯ ಜ್ಞಾನವನ್ನು ಪುಸ್ತಕಗಳ ಮುಖಾಂತರ ಕೊಡುವದಕ್ಕಿಂತ ಅನುಭವದಿಂದ ಪಡೆಯುವದೇ ಶ್ರೇಷ್ಠ ವಾದದ್ದು. ಜೀವನ ಶಿಕ್ಷಣ ಶಾಲೆಗಳಲ್ಲಿ ಎಲ್ಲ ಧರ್ಮಗಳಿಗೆ ಸಂಬಂಧಪಟ್ಟ ಹಬ್ಬಗಳನ್ನು ಆಚರಿಸತಕ್ಕದ್ದು. ಏಕೆಂದರೆ ಬಾಲ-ಬಾಲಿಕೆಯರಿಗೆ ಎಲ್ಲ ಧರ್ಮಗಳ ಬಗ್ಗೆ ಸಮಭಾವನೆ ಉಂಟಾಗಬೇಕು. ಎಲ್ಲ ಧರ್ಮಗಳ ಉಚ್ಚ ತತ್ವಗಳ ಜ್ಞಾನ ಅವರಿಗೆ ಆಗುವದರಿಂದ ಅವರ ಭಾವನೆ ವಿಶಾಲವಾಗುವದು. ಇದರ ಹೊರತಾಗಿ ಸರಕಾರದ ಸೂಚನೆಯ ಪ್ರಕಾರ ಕೆಲವು ದಿನಗಳನ್ನು ಆಚರಿಸುವದರಿಂದ ಬಾಲಬಾಲಿಕೆಯರಿಗೆ ಕೆಲವು ಸರಕಾರಿ ಯೋಜನೆಯ ಬಗ್ಗೆ ಜ್ಞಾನವಾಗುತ್ತದೆ. ವನಮಹೋತ್ಸವ, ಶಾರೀರಿಕ ಶಿಕ್ಷಣದಿನ, ಉಳಿತಾಯ ಯೋಜನೆಯ ದಿನ, ಸಂಚವಾರ್ಷಿಕ ಯೋಜನೆಯ ದಿನ, ಸಹಕಾರಿ ಸಂಸ್ಥೆಗಳ ದಿನ ಮೊದಲಾದ ದಿನಗಳನ್ನು ಆಚರಿಸುವ ಯೋಜನೆ ಇರುತ್ತದೆ. ಅದರಂತೆ ಜೀವನ ಶಿಕ್ಷಣ ಸಪ್ತಾಹ, ಸಮಾಜ ಶಿಕ್ಷಣ ಸಪ್ತಾಹ, ಗ್ರಾಮ ಸುಧಾರಣಾ ಸಪ್ತಾಹ ಮೊದಲಾದ ಸಪ್ತಾಹಗಳನ್ನು ಆಚರಿಸುವ ಬಗ್ಗೆ ನಮಗೆ ಶಿಕ್ಷಣ ಖಾತೆಯವರು ಆದೇಶವನ್ನು ಕೊಡುತ್ತಾರೆ. ಭಾರತಕ್ಕೆ ಸ್ವಾತಂತ್ರ್ಯ ಸಿಕ್ಕ ನಂತರ ದೇಶದ ಪ್ರಗತಿಯ ಬಗ್ಗೆ ಮಾಡುತ್ತಿರುವ ಯೋಜನೆಗಳ ಬಗ್ಗೆ ನಮಗೆ ಹಾಗು ನಮ್ಮ ಬಾಲಕ ಬಾಲಿಕೆಯರಿಗೆ ಸರಿಯಾದ ಜ್ಞಾನವಾಗುವದು ಅವಶ್ಯ. ಆದುದರಿಂದ ನಾವು ನಮ್ಮ ಶಾಲೆಗಳಲ್ಲಿ ಊರ ಜನರ ಸಹಕಾರದಿಂದ ಈ ರಾಷ್ಟ್ರೀಯ ದಿನಗಳ ಆಚರಣೆ ಮಾಡುವದು ಏಹಿತ.

ನಮ್ಮ ಶಾಲೆಗಳಲ್ಲಿ ದಿನಾಚರಣೆ ಆಚರಿಸುವ ಪದ್ಧತಿಯ ಬಗ್ಗೆ ವಿಚಾರಮಾಡೋಣ. ವರ್ಷದ ಪ್ರಾರಂಭದಲ್ಲಿ ಪ್ರಧಾನ ಗುರೂಜಿಯವರು ಎಲ್ಲ ಗುರೂಜಿಯವರ ಒಂದು ಸಭೆಯನ್ನು ಕರೆದು ಇಡೀ ವರ್ಷದಲ್ಲಿ ಆಚರಿಸತಕ್ಕ ದಿನಗಳ ಒಂದು ಯಾದಿಯನ್ನು ತಯಾರಿಸಿ ಆ ದಿನಗಳ ವರ್ಗೀಕರಣ ಮಾಡತಕ್ಕದ್ದು.

೧. ಊರವರ ಸಹಕಾರದಿಂದ ಆಚರಿಸುವ ದಿನಗಳು

(ಅ) ಸ್ವಾತಂತ್ರ್ಯ ದಿನ (ಬ) ಪ್ರಜಾರಾಜ್ಯ ದಿನ (ಕ) ಸಮಾಜ ಶಿಕ್ಷಣ ದಿನ (ಡ) ಶಾರೀರಿಕ ಶಿಕ್ಷಣ ದಿನ (ಇ) ಶಾಲೆಯ ವರ್ಧಂತಿ (ಫ) ಗ್ರಾಮ ಸುಧಾರಣಾ ಸಪ್ತಾಹ (ಗ) ವನಮಹೋತ್ಸವ (ಹ) ಜೀವನ ಶಿಕ್ಷಣ ಸಪ್ತಾಹ (ರ) ಬಾಲಕರ ದಿನ. ವಿಜಯಾ ದಶಮಿ (ನಾಡಹಬ್ಬ)

೨. ಶಾಲೆಯಲ್ಲಿ ಸಾಮೂಹಿಕವಾಗಿ ಆಚರಿಸುವ ದಿನಗಳು

(ಅ) ಗಾಂಧೀ ಪುಣ್ಯತಿಥಿ (ಬ) ಗಣೇಶ ಚತುರ್ಥಿ (ಕ) ಟಾಗೋರ ಜಯಂತಿ (ಡ) ಟಿಳಕ ಜಯಂತಿ (ಇ) ಶಿವಾಜಿ ಜಯಂತಿ (ಫ) ಬಸವ ಜಯಂತಿ ಗೀತಾ ಜಯಂತಿ, ಮಹಮ್ಮದ ಪೈಗಂಬರ ಜಯಂತಿ, ಮಕರ ಸಂಕ್ರಮಣ.

೩. ವರ್ಗಗಳಲ್ಲಿ ಆಚರಿಸುವ ದಿನಗಳು

(ಅ) ಕೃಷ್ಣ ಜನ್ಮಾಷ್ಟಮಿ (ಬ) ನಾಗರ ಪಂಚಮಿ (ಕ) ರಾಮ ನವಮಿ (ಡ) ಚಿಕ್ಕ ಪ್ರವಾಸ (ಇ) ವನ ಭೋಜನ (ಫ) ಶಿಗೀ ಹುಣ್ಣಿವೆ.

ಇಲ್ಲಿ ಕೊಟ್ಟಯಾದಿಯನ್ನು ಮಾರ್ಗದರ್ಶನಕ್ಕಾಗಿ ಕೊಡಲಾಗಿದೆ. ಇದರಲ್ಲಿ ಬದಲಾವಣೆ ಮಾಡಿ ಆಯಾ ಪರಿಸರಕ್ಕೆ ಯೋಗ್ಯವಾಗುವಂತೆ ಒಂದು ಯಾದಿಯನ್ನು ಮಾಡಿಕೊಂಡು ಪ್ರಧಾನಗುರೂಜಿಯವರ ಕೋಣೆಯಲ್ಲಿ ಹಚ್ಚಿ ಇಡತಕ್ಕದ್ದು. ಊರಲ್ಲಿ ಜರುಗುವ ಜಾತ್ರೆಗಳಲ್ಲಿ ಬಾಲಕರು ಸ್ವಯಂಸೇವಕರೆಂದು ನೆರವಾಗುವ ಯೋಜನೆಯನ್ನು ಮಾಡಿ ಇಡುವದು ವಿಹಿತ. ಪ್ರತಿಯೊಂದು ವರ್ಗದಲ್ಲಿ ಬಾಲಕರ ಸಹಾಯದಿಂದ ಆಚರಿಸುವ ದಿನಗಳ ಪ್ರತಿತಿಂಗಳದ ಯಾದಿಯನ್ನ ಹಚ್ಚಿ ಇಡಬೇಕು. ಅಂದರೆ ಆವರಿಗೆ ಆ ದಿನಗಳ ಬಗ್ಗೆ ಸ್ವಾಭಾವಿಕ ಉತ್ಸುಕತೆಯುಂಟಾಗುವದು.

ಜೀವನ ಶಿಕ್ಷಣ ಶಾಲೆಗಳಲ್ಲಿ ದಿನಾಚರಣೆ ಮಾಡುವ ಕಾರ್ಯದಲ್ಲಿ ಶಾಲೆಯ ಮಂತ್ರಿಮಂಡಳಕ್ಕೆ ಹೊಣೆಗಾರಿಕೆಯಿಂದ ದಿನಾಚರಣೆಯ ಯೋಜನೆ, ಕಾರ್ಯನಿರ್ವಹಣೆ, ಪರಿಶೀಲನೆ ಮತ್ತು ಕೊನೆಗೆ ಇದರ ವರದಿ ಬರೆಯುವದು ಮೊದಲಾದ ಕೆಲಸಗಳನ್ನು ಮಾಡಲು ತರಬೇತಿ ಕೊಡುವದು ಆವಶ್ಯಕ. ದಿನಾಚರಣೆಯ ವೇಳೆಗೆ ಶಾಲೆಯನ್ನು ಸ್ವಚ್ಛ ಮಾಡುವದು, ಮಾವಿನ ತಳಿರುಗಳಿಂದ ಶಾಲೆಯನ್ನು ಶೃಂಗರಿಸುವದು "ಸುಸ್ವಾಗತಂ" ಎಂದು ಒಂದು ಪಟ್ಟಿಯನ್ನು ಹಚ್ಚುವದು, ಕಾರ್ಯಕ್ರಮವನ್ನು ಕರಿ ಹಲಿಗೆಯ ಮೇಲೆ ಬರೆದು ಇಡುವದು, ಸ್ವಾಗತ ಭಾಷಣ ಮತ್ತು ಆಭಾರ ಮನ್ನಣೆಯ ಭಾಷಣ ಮಾಡುವ ಮೊದಲಾದ ಕೆಲಸಗಳನ್ನು ಹೊಣೆಗಾರಿಕೆಯಿಂದ ಮಾಡಲು ಕಲಿಸತಕ್ಕದ್ದು. ಆಚರಿಸುವ ದಿನದ ಬಗ್ಗೆ ಬಾಲಕ-ಬಾಲಿಕೆಯರಿಗೆ ಪೂರ್ಣ ಜ್ಞಾನವನ್ನು ಮಾಡಿ ಕೊಡುವದು ಅತ್ಯಾವಶ್ಯಕ. ದಿನಾಚರಣೆಯ ಎಲ್ಲ ಕೆಲಸವನ್ನು ಬಾಲಕ-ಬಾಲಿಕೆಯರಿಗೆ ಮತ್ತು ಮಂತ್ರಿಮಂಡಳಕ್ಕೆ ಒಪ್ಪಿಸಿ ಶಿಕ್ಷಕರು ಅವರಿಗೆ ಮಾರ್ಗದರ್ಶನ ಮಾಡತಕ್ಕದ್ದು. ಹೊಣೆಗಾರಿಕೆಯಿಂದ ಕಾರ್ಯನಿರ್ವಹಣೆ ಮಾಡುವ ಮುಂದಾಳುಗಳು ಮತ್ತು ಸಹಕಾರದಿಂದ ಕಾರ್ಯಮಾಡುವ ವರ್ಗ ಬಂಧುಭಗಿನಿಯರನ್ನೂ ತಯಾರಿಸುವ ಉದ್ದೇಶ ಸಾಧಿಸಿಕೊಳ್ಳ ಬೇಕಾಗಿದೆ. ದಿನಾಚರಣೆಯಲ್ಲಿ ಪ್ರಾರ್ಥನೆ, ಸುಭಾಷಣೆಗಳು, ಆಭಾರ ಮನ್ನಣೆ, ಮನರಂಜನೆಯ ಕಾರ್ಯಕ್ರಮ, ಸಾಂಘಿಕ ಗೀತೆಗಳು ಮೊದಲಾದವುಗಳನ್ನು ಮಾಡಿಸತಕ್ಕದ್ದು. ಎಲ್ಲ ವರ್ಗದ ಬಾಲಕ-ಬಾಲಿಕೆಯರಿಗೆ ಅವರವರ ಯೋಗ್ಯತೆಯ ಪ್ರಕಾರ ಕೆಲಸವನ್ನು ಹಂಚಿಕೊಡತಕ್ಕದ್ದು. ಶಾಲೆಯಲ್ಲಿಯ ಬಾಲವೀರ ಪಥಕದ ಕಡೆಗೆ ಕೂಡ್ಸುವ ವ್ಯವಸ್ಥೆ ಮತ್ತು ಶಿಸ್ತಪಾಲನೆ ಈ ಕೆಲಸಗಳನ್ನು ಒಪ್ಪಿಸತಕ್ಕದ್ದು. ಕೆಲವು ಮಹತ್ವದ ವಿಷಯಗಳ ಬಗ್ಗೆ ಬಾಲಕರು ಬರೆದ ಹಸ್ತಲಿಖಿತ ಮಾಸಿಕವನ್ನು ತಯಾರಿಸಿ ಬಾಲಕರ ಲೇಖನ ಕೌಶಲ್ಯ ಮತ್ತು ಚಿತ್ರಕಲೆಗೆ ಉತ್ತೇಜನವನ್ನು ಕೊಡತಕ್ಕದ್ದು. ದಿನಾಚರಣೆಯಿಂದ ಬಾಲ-ಬಾಲಿಕೆಯರ ಜ್ಞಾನ—ಬಲ—ಶೀಲಸಂವರ್ಧನೆ ಯಾಗತಕ್ಕದ್ದು.

ಯಾವುದಾದರೂ ಒಂದು ಹಬ್ಬ ಆಚರಿಸುವುದಾದರೆ ಅದಕ್ಕಾಗಿ ನಾವು ಮಾಡಬಹುದಾದ ಉಪಕ್ರಿಯೆಗಳ ಯೋಜನೆಯನ್ನು ತಯಾರ ಮಾಡಿಕೊಳ್ಳಬೇಕು. ಜೈತ್ರ ಮಾಸದಲ್ಲಿ ಪ್ರತಿಯೊಬ್ಬರ ಮನೆಯಲ್ಲಿ ಪೆಣ್ಣು ಮಕ್ಕಳು ಹೂನಿಲ್ಯ ಮಾಡುವ ಪರಂಪರೆ ಇದೆ. ವಸಂತ ಋತು ಇದು ನಮಗೆ ಆನಂದ ಕೊಡುವ ಋತು. ನಾವು ಪೆಣ್ಣು ಮಕ್ಕಳ ಸಾಲೆಯಲ್ಲಿ ಈ ಸಮಾರಂಭವನ್ನು ಮಾಡುವ ಮಾನಲೆ ಅದರ ಬಗ್ಗೆ ಕೆಳಗಿನಂತೆ ಯೋಜನೆ ಮಾಡಬೇಕು:-

೧) ಸಾಲೆಯ ಸಭಾಯಿ.
೨) ಸಾಲೆಯನ್ನು ಶೃಂಗರಿಸುವದು:-
   ಅ) ಕಾಗದದ ಪರಪರೆಗಳಿಂದ.
   ಬ) ತಳಿರು ತೋರಣಗಳಿಂದ.
   ಕ) ರಂಗವಲ್ಲಿ ಮಾಕಿ.
೩) ಆಮಂತ್ರಣ ಪತ್ರಿಕೆಗಳನ್ನು ತಯಾರಿಸುವದು.
೪) ಕಾಗದದ ಪಾಕೀಟುಗಳನ್ನು ತಯಾರಿಸುವದು.
೫) ಪೂಜೆಯ ಸಾಹಿತ್ಯವನ್ನು ತಯಾರಿಸುವದು. (ಹೂಮಾಲೆ ಇತ್ಯಾದಿ)
   ಅ) ಕಡ್ಲಿಯ ಉಸಲಿ.
   ಬ) ಕಡ್ಲಿ ಬೇಳೆಯ ಕೋಸಂಬರಿ.
   ಕ) ಪಾನಕ.
   ಡ) ಮಾವಿನಕಾಯಿ ಪಚಡಿ.
   ಇ) ಆರತಿಯನ್ನು ತಯಾರಿಸುವದು.
   ಫ) ಬಾಸಪಟ್ಟಿ.
೬) ಅತಿಥಿಗಳ ಸ್ವಾಗತವನ್ನು ಮಾಡುವದು.
೭) ಸ್ವಾಗತಗೀತೆ. ಸಾಲೆಯ ಪರಿವಾಜನ, ನಾಡಗೀತೆ.
೮) ಪೂಜೆ.
೯) ಪ್ರಸಾದ ಹಂಚುವಿಕೆ.
೧೦) ಆಹಾರ ಸನ್ನಿಕ.
೧೧) ಮನರಂಜನೆಯ ಕಾರ್ಯಕ್ರಮ- ಕೋಲಾಟ ಇತ್ಯಾದಿ.
೧೨) ಮಂಗಳ ಮಾತರಮ್.

ಈ ಎಲ್ಲ ಚಟುವಟಿಕೆಗಳನ್ನು ಎಷ್ಟು ಪರ್ಯಂತ್ಯ ಮಂತ ಕೂಡಬೇಕೆನ್ನುವದನ್ನು ಯೋಜನೆಯಲ್ಲಿ ಸೂಚಿಸಬೇಕು. ಈ ಸಮಯದ ಅವಧಿಯಲ್ಲಿ ಮಕ್ಕಳು ಏನು ಸಹಕಾರದಿಂದ ಕೆಲಸ ಮಾಡುವ ಬಗ್ಗೆಯೂ ಅವರ ಜ್ಞಾನ, ಬಲ ಮತ್ತು ಶೀಲಸಂವರ್ಧನೆಯಾಗಿ ಪಾಲಕರೊಡನೆ ನಿಕಟವಾದ ಸಂಬಂಧ ಬರುತ್ತದೆ.

ಮೊದಲಿಗಾಗಿ ಒಂದು ದಿನದ ಆಚರಣೆ ಮೇಲೆ ತೋರಿಸಲಾಗಿದೆ. ಇದೇ ಪ್ರಕಾರ ಹಬ್ಬಗಳ ಆಚರಣೆಯ ಯೋಜನೆ ಮಾಡಿಕೊಳ್ಳಬಹುದು. ಕೆಲವು ಹಬ್ಬಗಳಲ್ಲಿ ಬಾಲಕ-ಬಾಲಿಕೆಯರು ಮನೆ ಮನೆ ಹಾರಿ ರಾಷ್ಟ್ರೀಯ ಧನ ಹಾಕು ಮಾಡುವರು. ಅವರ ಈ ಸಹಜ ಪ್ರವೃತ್ತಿಯನ್ನು ನಾವು ಮಾರ್ಪಡಿಸಲು ಪ್ರಯತ್ನಿಸತಕ್ಕದ್ದು. ಸೋಳೆ ಹುಣ್ಣಿಮೆಯಲ್ಲಿ ಬಣ್ಣ ಸಿಡಿಸುವದು, ಅಶ್ಲೀಲ ಮಾತುಗಳನ್ನು ಆಡುವದು, ಕಟ್ಟಿಗೆ ಕುಳ್ಳು ತುಡುಗು ಮಾಡುವದು ಇಂಥ ಅನಿಷ್ಟ ರೂಢಿಗಳಿಂದ ಬಾಲಕರನ್ನು ಮುಕ್ತ ಮಾಡುವದಕ್ಕಾಗಿ ನಾವು ಅವರಿಗೆ ವಿವಿಧ ಚಟುವಟಿಕೆಗಳನ್ನು ಕೊಡಬೇಕು. ಕಾವ್ಯಗಾಯನ ಸ್ಪರ್ಧೆ, ವಾಕ್ ಸ್ಪರ್ಧೆ, ಆಟಪಾಟ, ಮನರಂಜನೆ ಮೊದಲಾದ ಚಟುವಟಿಕೆಗಳಿಂದ ಅವರ ಆನಂದ ವರ್ಧನೆ ಮಾಡಬಹುದು. ಬಾಲ-ಬಾಲಿಕೆಯರಿಗೆ ಆನಂದ ಮಾಡಿ ಕೊಡುವವರಿಗೆ ದೇವರ ಸಂಗಡ ನಿಕಟ ಸಂಬಂಧ ಬರುವದೆಂದು ಹೇಳುತ್ತಾರೆ.

ಮಕ್ಕಳ ದಿನಾಚರಣೆಯ ದಿನದ ಬಾಲಕ-ಬಾಲಿಕೆಯರಿಗೆ "ಬಾಲಕರ ಹಕ್ಕು ಮತ್ತು ಕರ್ತವ್ಯ" ಇವುಗಳ ಅರಿವು ಮಾಡಿ ಕೊಡತಕ್ಕದ್ದು.

ಹಕ್ಕು

೧) ಆಹಾರ ಪಡೆಯುವದು.
೨) ಬಟ್ಟೆ ಪಡೆಯುವದು.
೩) ಮನೆ (ಆಶ್ರಯ) ಪಡೆಯುವದು.
೪) ವಿದ್ಯೆಯನ್ನು ಪಡೆಯುವದು.

ಕರ್ತವ್ಯ

೧) ತಾಯಿತಂದೆಯರಿಗೆ ನಿಷ್ಠಾವಂತನಾಗುವದು.
೨) ಸಮಾಜ ಸೇವೆಯನ್ನು ಮಾಡಿ ಒಳ್ಳೆಯ ನಾಗರಿಕನಾಗುವದು.
೩) ಗುರುಹಿರಿಯರ ಅಜ್ಞೆ ಪಾಲನ ಮಾಡಿ ಸ್ನೇಹಭಾವವನ್ನು ಮಾಡಿ ವಿದ್ಯೆ ಕಲಿಯುವದು.
೪) ತಮ್ಮ ತಂಗಿಯರಿಗೆ ಮಾರ್ಗ ದರ್ಶನ ಮಾಡಿ ಸಹಾಯ ಮಾಡುವದು.

—ಜಯ ಜಗತ್—

ಸಮಾಜದ ಉನ್ನತಿಯನ್ನು ಸಾಧಿಸುವದೇ ಜೀವನ ಶಿಕ್ಷಣದ ಶ್ರೇಷ್ಠ ಆದರ್ಶ

(ಹಿಂದಿನ ಸಂಚಿಕೆಯಿಂದ ಬಂದದ್ದು)

ಲೇಖಕರು : **ಶ್ರೀ ತಟ್ಟಿ ರ್ಯಾಮುರಾಯರು,** ಎಮ್. ಎ.

೯. ಸ್ವಚ್ಛತೆ, ಶ್ರಮದಾನ, ಬ್ರಾಹ್ಮಣಿಕೆ, ತ್ಯಾಗ ಸೇವಾಭಾವಗಳನ್ನು ನಿರ್ಮಿಸುವುದು.

೧೦. ವೈಜ್ಞಾನಿಕ ಭೂತ್ವದ ಮನೋವೃತ್ತಿಯನ್ನು ಯೋಜನೆಯ ಮನೋವೃತ್ತಿಯನ್ನು ಬೆಳೆಸುವುದು.

ಕೊನೆಯದಾಗಿ ಶಿಕ್ಷಕರು ತಮ್ಮ ನೀತಿ-ಸ್ಥಿತಿ ಆಚರಣೆ, ಕಾಯಾ-ವಾಚಾ-ಮನಸಾ ಶುದ್ಧ ಅಂತಃಕರಣದಿಂದ ಜನರಲ್ಲಿ ತಮಗೆ ಗೌರವಾದರಗಳು ತಾನಾಗಿ ದೊರೆಯುವಂತೆ ನಡೆಯಲು ಕಲಿಯುವುದು. ಜನಪರಿಯು 'ಜೀವನ ಶಿಕ್ಷಣ'ದಲ್ಲಿ ಬಿಡುವ ಅಣ್ಣಾರಾಯರ ಹಿತೋಪದೇಶದ ಮಾತುಗಳನ್ನು ಶಿಕ್ಷಕರೂ ಜನವಾಹಿನಿಯವರೂ ಪಾಲಕರೂ ಗಮನಿಸಬೇಕು:—

ಜೀವನ ಶಿಕ್ಷಣ ರಂಗದಲ್ಲಿ ಕಾರ್ಯಕರ್ತರ ಮುಂದಿರುವ ದೊಡ್ಡದೊಡಲನೆಯ ಸಮಸ್ಯೆ ಎಂದರೆ ಅವರಿಗೆ ತಮ್ಮ ಅರಿವು ತಮಗೆ ಇಲ್ಲದೆ ಇರುವದು. ಬಾಳಿದ ಕಾರ್ಯಕ್ಷೇತ್ರದೊಳಗೆ ಸಂಬಳಕ್ಕಾಗಿ ದುಡಿಯುವ ಕೂಲಿಗಳಂತೆ ತಾವೂ ಒಂದು ವರ್ಗದ ನೌಕರರೆಂದು ಭಾವಿಸಿ ಶಿಕ್ಷಣ ಕಾರ್ಯವನ್ನು ನಡೆಯಿಸುತ್ತಿರುವದು ಎಲ್ಲಕ್ಕೂ ದೊಡ್ಡ ಸಮಸ್ಯೆಯಾಗಿದೆ. ಇದನ್ನು ಹೊರಲು ಅವರು ಮನಸ್ಸಿನೊಳಗಿಂದ ತೆಗೆದು ಹಾಕಲಿಚ್ಛೆ ಬೇಕು.

ತಮ್ಮ ಮೇಲೆ ಭಾರೀ ರಾಷ್ಟ್ರವನ್ನು ಸಮರ್ಥನು ಹುರಿದ್ದ ಕೃಷ್ಣರಾಯ ದೊಣೆಯಿಂದ; ಆ ಪಕ್ಷಿತ್ರ ರಾಗೂ ದೊಣೆಗಾರಿಕೆಯ ಕಾರ್ಯದಲ್ಲಿ ನಾವು ತೊಡಗಿದ್ದೇವೆ. ನಾವು ಸ್ವಲ್ಪ ಅಲಕ್ಷವನ್ನು ಮಾಡಿದರೂ ಸಹ ರಾಷ್ಟ್ರದ ಒಂದು ದೊಡ್ಡ ಮಾನವು ಆಗುತ್ತದೆ ಎಂಬ ತಿಳುವಳಿಕೆಯು ಅವರಲ್ಲಿ ಮೂಡಬೇಕು. ಈ ರೀತಿಯ ಜಿಳಕೆನಲ್ಲಿ ಅವರು ಕಾರ್ಯಪ್ರವೃತ್ತರಾದಲ್ಲಿ ಜೀವನ ಶಿಕ್ಷಣದೊಳಗೆ ನಿಗೆ ಒಂದು ಮಹತ್ವದ ಸಮಸ್ಯೆಯೇ ಸುಲಭವಾಗಿ ಆಗುತ್ತದೆ".

"ಈ ಮಾತನ್ನು ಹೇಳಿ ನಾವು ಗುರುಗಳ ಮೇಲಿನ ಸಮಸ್ತ ಭಾರವನ್ನು ಮಾತ್ರ ನಮ್ಮ ಸಮ್ಮ ಕಾರ್ಯಗಳತ್ತ ಹೊರಳಿದರಾಯಿತೆಂದು ನಾಗರಿಕರೂ ಅವಳಿತ ವರ್ಗವೂ ತಿಳಿದುಕೊಂಡರೆ ಅದು ತೀರ ತಪ್ಪಾಗುತ್ತದೆ. ಶಾಲಾ ಶಿಕ್ಷಕರೂ ಒಬ್ಬ ವ್ಯಕ್ತಿ, ಅವನ ಕಾರ್ಯ ಶಕ್ತಿಗೂ ಇತಿ ಮಿತಿಗಳಿರುವ ಹಾಗೆ, ಅವನಿಗೂ ಗೃಹಜೀವನ ಹಾಗೂ ಸಾಮಾಜಿಕ ಜೀವನಗಳು ಇವೆ. ಇವೆಲ್ಲವುಗಳ ಅರಿವು ನಾವಿನ ಎಲ್ಲ ಜನರಿಗೂ ಇರಲಿಕ್ಕೆ ಬೇಕು. ಅಷ್ಟಲ್ಲದೆ ತಮ್ಮೆಲ್ಲರಿಗಿಂತ ಒಂದು ಹೆಜ್ಜೆ ಮಿಗಿಲಾಗಿ ಮಹತ್ವಪೂರ್ಣವಾದ ರಾಷ್ಟ್ರ ನಿರ್ಮಾಣದ ಕಾರ್ಯದಲ್ಲಿ ಜೀವನ ಶಿಕ್ಷಣದ ಕಾರ್ಯಕರ್ತರನ್ನು ತೊಡಗಿಸ್ಬೇಕು; ಅವನ ಕಾರ್ಯದಲ್ಲಿ ಸಮಸ್ತ ಜನರ ಸಕ್ರಿಯ ಸಹಾನುಭೂತಿಯು ಅವಶ್ಯಕತೆ ಇದೆ ಎಂಬ ತಿಳುವಳಿಕೆಯಿಂದ ಜನ ನಡೆದುಕೊಳ್ಳಬೇಕು."

ನಾ ಕಂಡ ಗಾಂಧೀಗ್ರಾಮ

ಲೇಖಕರು : **ಶ್ರೀ ಎಚ್. ಜಿ. ಜೋಶಿ,** ಧಾರವಾಡ

"ಗುರು ಅಪ್ಪಾ, ಬಿಸ್ಸಿ, ನಮ, ಪೆಂಚಮೆ...." ಎಂಬುದೂ ಜ್ಞೋತಿರ್ವೈದ್ಯರ ಸಂತೈಸು. ಬನ್ನಿವಾರಿಯಿಂದ ೨, ೫, ೬, ೯, ೧೧ ರೂಪಾಯಿಗಳನ್ನು ಬಿಲ್ಲಿ ಫೀಜನ್ನು ಕೊಡುವನು. ಆ ಕಾಲದಲ್ಲಿ ಕಾಲಿಗೆ ಮಾಡಿ ಕಲಿಯುವರು. ಇವೇ ಜನಸಾಧಿ ತಿಂಗಳು ೧೦ ರೂಪಾಯಿ ತಾರಿಯಿಗೆ ಗುರು ಬರುವುದು ಫೂರ್ಣ ರಾತ್ರಿಯನ್ನು ಸ್ಮಶಾನದಲ್ಲಿ ಮಾಡುವನು. ಮೂರು ರಾತ್ರಿಯಲ್ಲಿ ಮುಟ್ಟಿನ ಸಮಸ್ತ ಗುರುಬಲ್ಲ ಮಹಾನ ಮಾಂತ್ರಿಕರು ಮೊದಲೆಂದು ಒಟ್ಟು ಕೂಡಿಸಿಕೊಂಡರೆ ಸಂತೃಪ್ತಿಪಡಿಸಿದ್ದೆವು. ಆಮೇ ಕಾರಿಕ್ಕೆ 'ಗಾಂಧೀಗ್ರಾಮಕ್ಕೆ' ಮಾಸಿಕಾಚಾರ ನಡೆಯಿತ

ಒಂದು ಚಿಕ್ಕ ತರಬೇತಿಗಾಗಿ ಹೋಗುವ ಪ್ರಸಂಗವು ಒದಗಿ ಬಂದಿತು. ಅದನ್ನು ನಾನು ಗುರುಬಲದ ಸುಫಲವೆಂದೇ ಭಾವಿಸಿದೆನು.

'ಗಾಂಧೀಗ್ರಾಮ'ವು ಜನ್ಮವೆತ್ತಿ ಇದೀಗ ಹದಿ ಮೂರು ವರುಷಗಳಾದವು. 'ಮದ್ರಾಸ ಪ್ರಾಂತ'ದ 'ಮಧುರಾ' ಜಿಲ್ಲೆಯ ಒಂದು ಬೆಂಗಾಡಿನಲ್ಲಿ ಬೆಳೆಯುತ್ತಲಿದೆ. ಉತ್ತರ ಕರ್ನಾಟಕದಿಂದ ಹೋಗ ಬಯಸುವವರು ಬೆಂಗಳೂರು, ತ್ರಿಚನಾಪಲ್ಲಿ ಮಾರ್ಗವಾಗಿ ಹೋಗಬಹುದಾಗಿದೆ. ತ್ರಿಚನಾಪಲ್ಲಿಯಿಂದ ಮಧುರೆಗೆ ಹೋಗುವ ರಾಜಮಾರ್ಗದಲ್ಲಿ ಈ ಗ್ರಾಮವು ಹುಟ್ಟಿಕೊಂಡಿದೆ. ಮಧ್ಯದಲ್ಲಿ "ದಿಂಡಿಗಲ್ಲು" ಎಂಬ ಒಂದು ರೇಲ್ವೆ ಜಂಕ್ಶನ್ ಉಂಟು. ದಿಂಡಿಗಲ್ಲಿನಿಂದ ದ್ವಿತೀಯ ನಿಲ್ದಾಣವೇ ಗಾಂಧೀಗ್ರಾಮವು. ಈ ನಿಲ್ದಾಣಕ್ಕೆ 'ಅಂಬಾತುರಾಯಿ' ಎಂಬ ಪುರಾಣ ಹೆಸರುಂಟು. ನಿಲ್ದಾಣದ ಉತ್ತರ ದಿಕ್ಕಿಗೆ ರೈಲು ಕಂಬಿಗಳನ್ನು ಹಿಡಿದು ೬ ಫರ್ಲಾಂಗುಗಳಷ್ಟು ಹೋದರೆ ಗಾಂಧೀಗ್ರಾಮವು ನಿಲುಕುವದು. ಗ್ರಾಮದ ಪೂರ್ವಕ್ಕೆ "ಶಿರುಮಲೈ" (ಶಿರು=ಚಿಕ್ಕ; ಮಲೈ=ಪರ್ವತ) ಪಶ್ಚಿಮಕ್ಕೆ ಕೊಡೈಕೆನಾಲದ ಪರ್ವತದ ಶ್ರೇಣಿಗಳು ಹಬ್ಬಿಕೊಂಡಿವೆ. ಪರ್ವತಗಳೆರಡೂ ಗ್ರಾಮವನ್ನು ತಮ್ಮ ತೋಳತೆಕ್ಕೆಯಲ್ಲಿಟ್ಟುಕೊಂಡು ಆಡಿಸುವಂತಿವೆ. ಗ್ರಾಮ ವಾಸಿಗಳು ಆ ಪರ್ವತಗಳನ್ನು ಅನಿಮಿಷನೇತ್ರರಾಗಿ ಕಾಯುತ್ತ ನಿಂತ ದೇವದೂತರೆಂದು ಕರೆಯುವರು. "ಶಿರುಮಲೈ" ಅಂಚಿನವರೆಗೆ ಗ್ರಾಮದ ಭೂಮಿಯು ಹಬ್ಬಿದೆ. ಸುಪ್ರಭಾತದಲ್ಲಿ ನೇಸರನು ಸಾವಕಾಶವಾಗಿ ಶಿರುಮಲೈ ಹತ್ತುತ್ತ ಬರುತ್ತಿರುವ ಠೀವಿಯನ್ನು ನೋಡಬೇಕು! ಮೋಡಗಳ ತುಂಡುಗಳನ್ನು ಬಂದು ಆಶ್ರಯಿಸಿಕೊಂಡಿರುವ ಸೊಬಗನ್ನು ಈಕ್ಷಿಸಬೇಕು! ಕೊಡೈಕೆನಾಲ್‌ನಲ್ಲಿ (ಕೊಡೈ=ಬೇಸಗೆ; ಕೆನಾಲ್=ವಿಶ್ರಾಮಧಾಮ) ಅಸ್ತಂಗತನಾಗುವ ಸೂರ್ಯನ ಇಂದ್ರಜಾಲದ ಆಟವು ಎಂಥವರನ್ನೂ ಮುಗ್ಧಗೊಳಿಸುವದು. ಇಂಥ ಪ್ರಕೃತಿ ರಮಣೀಯ ಸ್ಥಾನದಲ್ಲಿ ಅಂಥ ಗ್ರಾಮವು ಮೈದಳೆದು ನಿಂತಿದೆ. ಗ್ರಾಮ ನಿರ್ಮಾತೃಗಳು ಒಂದು ಕಥೆಯನ್ನೂ ಹೇಳುವರು. ಪೂಜ್ಯಬಾಪು ಒಮ್ಮೆ ತಮಿಳು ನಾಡಿನ ಯಾತ್ರೆಯನ್ನು ಕೈಕೊಂಡ ಸಮಯದಲ್ಲಿ ಮದ್ರಾಸದಿಂದ ಮಧುರೆಗೆ ಹೊರಟಿದ್ದರಂತೆ ಅಂಬಾತುರಾಯಿ ನಿಲ್ದಾಣವು ಸಮೀಪಿಸುತ್ತಲೇ ಒಳಗೆ ಪ್ರವೇಶಿಸಲು ಗಾಡಿಗೆ ಸಿಗ್ನಲ್ ಬಿದ್ದಿರಲಿಲ್ಲವಂತೆ, ತಕ್ಷಣ ಗಾಡಿ ಅಲ್ಲಿ ನಿಂತುಬಿಟ್ಟಿತು. ಗಾಡಿಯಲ್ಲಿದ್ದ ಗಾಂಧೀಜಿಯವರು ಹೊರಗೆ ಕತ್ತು ಹಾಕಿ ಕ್ಷಣಹೊತ್ತು ಅಲ್ಲಿಯ ರಮಣೀಯತೆಗೆ ಮಂತ್ರ ಮುಗ್ಧರಾದರಂತೆ. ಅವರ ಮನಸೆಳೆದ ತಾಣವೆಂದೇ ಅಲ್ಲಿ ಗಾಂಧೀಗ್ರಾಮದ ಪ್ರತಿಷ್ಠಾಪನೆಗೆ ಕಾರಣವಾಯ್ತೆಂದು ಹೇಳುವರು.

ಗಾಂಧೀಜಿಯ ಪರಮಭಕ್ತರೆನಿಸಿಕೊಂಡ ಕೆಲ ವಿಧಾಯಕ ಕಾರ್ಯಕರ್ತರು ಮದ್ರಾಸದ ಅಡ್ಯಾರದ ಹತ್ತಿರ ಗಾಂಧೀಜಿಯ ವಿಧಾಯಕ ಕಾರ್ಯಗಳಾದ ಜೀವನ ಶಿಕ್ಷಣ, ಗ್ರಾಮೀಣ ವೈದ್ಯಕೀಯ ಶುಶ್ರೂಷೆ ಹಾಗೂ ಗ್ರಾಮ ಸೇವಿಕೆಯರ ತರಬೇತಿಯ ಕಾರ್ಯಗಳನ್ನು ಕೈಕೊಂಡು ಇರುತ್ತಿದ್ದರು. ಅಲ್ಲಿಯ ಪಟ್ಟಣದ ವಾತಾವರಣವು ಅವರ ಮನಸ್ಸಿಗೆ ಒಗ್ಗಿರಲಿಲ್ಲ. ವಿಧಾಯಕ ಕಾರ್ಯಗಳಿಗೆ ಉಚಿತವಾದ ತಾಣವನ್ನು ಅರಸುತ್ತಲೇ ಇದ್ದರು. ಕೊನೆಗೊಮ್ಮೆ ಡಾ. ಶ್ರೀಮತಿ ಸೌಂದರಮ್ಮನವರು ಆ ಸ್ಥಳವನ್ನು ಸಂಶೋಧಿಸಿ ೧೯೪೬ನೆಯ ಜುಲೈ ತಿಂಗಳ ೭ನೆಯ ದಿನಾಂಕದಂದು ಅದರ ಆಯ್ಕೆಯನ್ನು ಮಾಡಿದರು. 'ಮನಸ್ಸಿದ್ದಲ್ಲಿ ಮಹಾದೇವ'ನೆನ್ನುವಂತೆ ಸಮೀಪದಲ್ಲಿಯೇ ಇರುವ ಚಿನ್ನಾಲಪಟ್ಟಿಯ ಉದಾರ ಹೃದಯದ ಬಾಂಧವರು ಆ ಭಾಗವಲ್ಲಿಯ ೨೫ ಎಕರೆ ಭೂವಿಯನ್ನು ದಾನವಾಗಿ ಕೊಟ್ಟರು. ಅಲ್ಲಿಯೇ ಮೊದಲು ಮೂರು ಚಿಕ್ಕ ಕಟ್ಟಡಗಳು ಎದ್ದು ನಿಂತವು. ಒಂದರಲ್ಲಿ ೪೦ ಹುಡುಗರಿದ್ದ ಜೀವನ ಶಿಕ್ಷಣ ಶಾಲೆಯೂ ಇನ್ನೊಂದರಲ್ಲಿ ೩೦ ಜನ ಶಿಕ್ಷಕ ವಿದ್ಯಾರ್ಥಿಗಳಿದ್ದ ಪ್ರಾಥಮಿಕ ಶಿಕ್ಷಕರ ತರಬೇತಿ ಕೇಂದ್ರವೂ, ಮೂರನೆಯ ದರಲ್ಲಿ 'ಕಸ್ತೂರಬಾ ಸ್ಮಾರಕ ನಿಧಿ'ಯ ಆಶ್ರಯದಲ್ಲಿ ೩೦ ಜನ ತರಬೇತಿ ಪಡೆಯುವ ಗ್ರಾಮ ಸೇವಿಕೆಯರ ತರಬೇತಿ ಕೇಂದ್ರವೂ ನೆಲಸಿದವು. ಈ ಮೂರೂ ಕೇಂದ್ರ ಗಳುಳ್ಳ ಗ್ರಾಮವನ್ನು ಹಿಂದಿನ ಮುಂಬೈ ರಾಜ್ಯದ ಮುಖ್ಯ ಮಂತ್ರಿಗಳಾದ ದಿವಂಗತ ಬಿ. ಜಿ. ಖೇರರು ೧೯೪೬ನೆಯ ಅಕ್ಟೋಬರ ೩ನೆಯ ದಿನಾಂಕ ಪ್ರಪ್ರಥಮವಾಗಿ ಉದ್ಘಾಟಿಸಿದರು. ಭಾರತೀಯ ಸಂಸ್ಕೃತಿಯ ಪಡಿನೆಳಲಿನಂತಿದ್ದ ಬಾಳಾಸಾಹೇಬ ಖೇರರ ಅಮೃತಹಸ್ತ ಸ್ಪರ್ಶದಿಂದ ಪುಲಕಿತವಾದ ಗ್ರಾಮವಿಂದು ಶಿಕ್ಷಣ, ಸಂಸ್ಕೃತಿ, ಸರ್ವ

ರ್ಮ ಸಮಾನತ್ವ, ಸ್ವಾವಲಂಬನ, ಶಾಂತಿಗಳ ವರೂರಾಗಿದೆ.

ಇಂದು ಗ್ರಾಮಕ್ಕೆ ೩೫೦ ಎಕರೆಗಳಷ್ಟು ವಿಸ್ತಾರ ನಾದ ಭೂಮಿದೊರಕಿದೆ. ಅನೇಕ ಕಟ್ಟಡಗಳು ಲೆಯೆತ್ತಿ ನಿಂತಿವೆ. ಬೆಂಗಾಡಾದ ಭೂಮಿಯಿಂದು ಹೂ-ಗಿಡ-ಮರಗಳಿಂದ ಸುಶೋಭಿತವಾಗಿದೆ. "ನೆಹರೂ ಫ್ಹೆನ್ಯೂ" "ರಾಜಾಜಿ ಅಸ್ಪೆನ್ಯೂ" ಮೊದಲಾದ ಭಿಧಾನಗಳಿಂದ ಗಂಭೀರತೆಯನ್ನು ಪಡೆದಿದೆ. ಸತ್ಯದ ಸಾಮ್ರಾಜ್ಯವಿರುವಲ್ಲಿ ಜಯಲಕ್ಷ್ಮಿ ನಡೆದು ರುವಳೆ" ನ್ನುವಂತೆ ಇಲ್ಲಿಯ ಪ್ರತಿಯೊಂದು ಕಾರ್ಯ ೀಲಾಪವೂ ಇಂದು ಪ್ರಗತಿ ಹೊಂದುತ್ತ ಸಾಗಿವೆ. ಈ ಗ್ರಾಮದಲ್ಲಿ ತಲೆ ಎತ್ತಿನಿಂತ ಹಲವಾರು ಸಂಸ್ಥೆ ಳನ್ನು ನೋಡಿದರೆ ಇದರ ವಿರಾಟ್ ಸ್ವರೂಪದ ಕಲ್ಪನೆ ರುವದು. ಇದಕ್ಕೆ ಗ್ರಾಮವೆನ್ನುವದಕ್ಕಿಂತಲೂ ಂದು ಬೃಹದ್ ಸಂಸ್ಥೆ ಎನ್ನಬಹುದು. ಆ ಸಂಸ್ಥೆಯಲ್ಲಿ ಂತರ್ಗತವಾದ ಸಂಸ್ಥೆಗಳಿವು:-

೧) 'ಬಾಲ ಭವನ' ಅನಾಥಾಶ್ರಮ
೨) ಪೂರ್ವ ಮೂಲ ಶಿಕ್ಷಣ ಶಾಲೆ
೩) ಜೀವನ ಶಿಕ್ಷಣ ಶಾಲೆ
೪) ಅಪರ ಮೂಲ ಶಿಕ್ಷಣ ಶಾಲೆ
೫) ಪ್ರಾಥಮಿಕ ಶಿಕ್ಷಕರ ಜೀವನ ಶಿಕ್ಷಣ ತರಬೇತಿ ಕೇಂದ್ರ
೬) ಗ್ರಾಮೀಣ ಉಚ್ಚ ಶಿಕ್ಷಣಾಲಯ
೭) ಸೇವಿಕಾಶ್ರಮ
೮) ಗ್ರಾಮ ವೈದ್ಯಕೀಯ ಸೇವಾ ಸಂಸ್ಥೆ
೯) ಗ್ರಾಮ ವಿಸ್ತರಣಾ ತರಬೇತಿ ಕೇಂದ್ರ
೧೦) ಸಮಾಜ ಶಿಕ್ಷಣ ಸಂಘಟಕರ ತರಬೇತಿ ಕೇಂದ್ರ
೧೧) ವಿಧಾಯಕ ಕಾರ್ಯಕರ್ತರ ಗೃಹ
೧೨) ಖಾದಿ ಹೆಂಟ್ಟುನಳಿ ಶಾಖೆ
೧೩) ಗ್ರಾಮ ಕೈಗಾರಿಕಾ ಕೇಂದ್ರ
೧೪) ಸಹಕಾರ ಭಾಂಡಾರ
೧೫) ಸರ್ವೋದಯ ಸಹಕಾರ ಒಕ್ಕಲುತನ 'ಬ್ಯಾಂಕು'
೧೬) ಅಚ್ಚುಕೂಟ
೧೭) ಸಾಂಸ್ಕೃತಿಕ ಚಟುವಟಿಕೆಗಳ ಕೂಟ
೧೮) ಹಿಂದೀಭವನ
೧೯) ಬಳಗದ ಸದಸ್ಯರ ವಿಶ್ರಾಂತಿ ಗೃಹ
೨೦) ಗಾನಗೋಷ್ಠಿ
೨೧) ಶಾಂತಿಸೇನಾ

ಈ ಇಪ್ಪತ್ತೊಂದು ಶಾಖೆಗಳಲ್ಲದೆ ಇನ್ನೂ ನಾಲ್ಕೈದು ಚಿಕ್ಕಚಿಕ್ಕ ಶಾಖೆಗಳು ಉಂಟು. ಈ ಗ್ರಾಮದ ಮುಖ್ಯ ಧ್ಯೇಯವು ವಿದ್ಯಾದಾನವು. ಗಾಂಧೀಜಿ ಪ್ರಣೀತವಾದ ಜೀವನ ಶಿಕ್ಷಣವನ್ನು ಎಲ್ಲ ಹಂತಗಳಲ್ಲಿಯೂ ಕೊಟ್ಟು ಮಕ್ಕಳನ್ನು ಸತ್ಪ್ರಜೆಗಳಾಗಿ ಬಾಳಲು ಅರ್ಹರಾಗುವಂತೆ ಅಣಿಗೊಳಿಸಲಾಗುವದು. ೩ ವರುಷದ ಬಾಲಕನಾಗಿ ಬಂದು ಸೇರಿಕೊಂಡರೆ, ಶಿಕ್ಷಣವನ್ನು ಎಲ್ಲ ಹಂತಗಳಲ್ಲಿಯೂ ಪೂರ್ಣಗೊಳಿಸಿ ಜೀವಿಸಲು ಅರ್ಹನನ್ನಾಗಿ ಮಾಡಿ ಹೊರ ಹೋಗಲು ಅನುವಾಗುವಂತೆ ಶಿಕ್ಷಣ ಏರ್ಪಾಡು ಇಲ್ಲಿದೆ. ಇಂದು ಜೀವನ ಶಿಕ್ಷಣವನ್ನು ಪ್ರಾಥಮಿಕ ಶಿಕ್ಷಣದ ಮಟ್ಟದಲ್ಲಷ್ಟೇ ನಾವು ಎಲ್ಲೆಡೆಗೆ ಕಾಣುತ್ತೇವೆ. ಆದರೆ ಪೂರ್ವ ಮೂಲ ಶಿಕ್ಷಣದಿಂದ ಹಿಡಿದು ವಿಶ್ವವಿದ್ಯಾಲಯದ ತನಕಿನ ಜೀವನ ಶಿಕ್ಷಣವನ್ನು ನೋಡಲಪೇಕ್ಷಿಸಿದರೆ ಗಾಂಧೀ ಗ್ರಾಮಕ್ಕೆ ಹೋಗಬೇಕು. ಅಲ್ಲಿ ಪ್ರಾಥಮಿಕ ಶಿಕ್ಷಣ, ಮಾಧ್ಯಮಿಕ ಶಿಕ್ಷಣ, ಉಚ್ಚ ಶಿಕ್ಷಣಗಳೆಲ್ಲವೂ ಜೀವನ ಶಿಕ್ಷಣದ ತತ್ವಗಳ ಮೇಲೆಯೆ ದೊರಕುತ್ತವೆ. "ಪ್ರತಿಯೊಬ್ಬ ಮಾನವನಿಗೂ ನ್ಯಾಯ ಸಮತೆಗಳು ದೊರಕಬೇಕು. ಜೀವನದ ಕೊನೆಯ ಶ್ರೇಣಿಯಲ್ಲಿರುವವನಿಗೂ ನ್ಯಾಯ ದೊರಕುವದೆಂಬ ಶ್ರದ್ಧೆ ಹುಟ್ಟಬೇಕು. ವರ್ಣರಹಿತ, ಜಾತ್ಯತೀತ ಸಮಾಜವನ್ನು ಅಹಿಂಸೆಯ ಮಾರ್ಗದಲ್ಲಿ ನಡೆದು ನಿರ್ಮಿಸಬೇಕು. ದೈಹಿಕ ಹಾಗೂ ಉತ್ಪಾದಿತ ಕಾರ್ಯದ ಮೂಲಕ ಸಾಮಾಜಿಕ ಹಾಗೂ ನೈತಿಕ ಮೌಲ್ಯಗಳ ವೃದ್ಧಿಯಾಗಬೇಕು"— ಎಂದು ಗಾಂಧೀಜಿಯು ಅಪೇಕ್ಷಿಸಿದ್ದರಲ್ಲದೆ ತಮ್ಮ ಜೀವನದಲ್ಲಿ ನಡೆದು ತೋರಿದರು. ಅಂಥ ಗಾಂಧೀಜಿಯ ಪರಮ ಅನುಯಾಯಿಗಳೆನಿಸಿಕೊಂಡ ಕಾರ್ಯಕರ್ತರು ಇಂದು ಗಾಂಧೀ ಗ್ರಾಮದಲ್ಲಿ ಈ ತರಹದ ಸಮಾಜ ರಚನಾ ಕಾರ್ಯದಲ್ಲಿ ನಿಷ್ಠೆಯಿಂದ ತೊಡಗಿದ್ದಾರೆ. ಅಂತೆಯೇ ಅವರ ಕಾರ್ಯದತ್ತ ದೇಶವೇ ಇಂದು ಮುಖ ಹೊರಳಿಸಿ ನಿಂತುಕೊಂಡಿದೆ. ಅಜಾತ ಶತ್ರುವೆನಿಸಿದ ರಾಜೇಂದ್ರ ಪ್ರಸಾದರು, ಶಾಂತಿದೂತರಾದ ಪಂಡಿತಜೀಯವರು, ದೇವದೂತರಂತಿದ್ದ ವಿನೋಬಾಜಿಯವರು, ಆಚಾರ್ಯ ಜೆ.ಬಿ. ಕೃಪಲಾನಿ, ಅಮಾತ್ಯ ರಾಜಗೋಪಾಲಾ

ಕಾರ್ಯ, ಪಿ. ಸಿ. ಘೋಷ ಮೊದಲಾದ ದೇಶದ ಅನೇಕ ಗಣ್ಯ ವ್ಯಕ್ತಿಗಳು ಗಾಂಧೀ ಗ್ರಾಮವನ್ನು ಸಂದರ್ಶಿಸದವರಿಲ್ಲದೆ, ಅನೇಕ ಶಿಕ್ಷಣ ತಜ್ಞರೂ, ರಾಜ್ಯದ ಮಂತ್ರಿಗಳೂ, ರಾಜಕಾರಣಿಗಳೂ ಬಂದು ಹೋಗುತ್ತಲೇ ಇರುತ್ತಾರೆ. ನಮ್ಮ ವಾಸ್ತವ್ಯದ ಸಂದರ್ಭದಲ್ಲಿ 'ಜೀನಾ' ದೇಶದ 'ಚಾ' ಎಂಬ ಪ್ರೊಫೆಸರರು ಭೇಟ್ಟಿಯಿತ್ತಿದ್ದರು. ಕೇರಳದ ಸರ್ವಧರ್ಮ ಸಮಾನತ್ವದ ನಾಯಕರೆನಿಸಿಕೊಂಡ ಶ್ರೀ ಎಸ್. ಕೆ. ಜಾರ್ಜ್‌ರವರು ಅಲ್ಲಿಯೇ ವಿಶ್ರಾಂತಿ ಪಡೆಯುತ್ತಿದ್ದರು. ಇಂಥ ಆದರ್ಶ ಸಂಸ್ಥೆಯ ಎಂದೊಂದು ವಿಭಾಗವೂ ಮನಸೆಳೆಯುವದು.

ಬಾಲಭವನ

ಇದನ್ನು ಬಾಲಭವನವೆಂದೂ, ಅನಾಥಾಶ್ರಮವೆಂದೂ ಕರೆಯುವರು. ಅನಾಥ ಮಕ್ಕಳೇ ಇಲ್ಲಿರುವದರಿಂದ ಇದು ಅನಾಥಾಶ್ರಮವೂ ಹೌದು, ಆದರೆ ಅನಾಥ ಮಕ್ಕಳನ್ನು ತಾಯ್ತಂದೆಗಳಂತೆ ಪಾಲನೆ-ಪೋಷಣೆಮಾಡಿ, ಅವರನ್ನು ಸನಾಥರನ್ನಾಗಿ ಮಾಡುತ್ತಿರುವದರಿಂದ ಇದು ಬಾಲ ಭವನವೇ ಸರಿ! ಇಲ್ಲಿ ಇಂದು ೧೮೦ ಮಕ್ಕಳಿರುತ್ತಾರೆ. ೩ ತಿಂಗಳಿನಿಂದ ಹಿಡಿದು ೧೨ ವರ್ಷ ವಯಸ್ಸಿನ ಮಕ್ಕಳು ಈ ಬಾಲಭವನದಲ್ಲಿರುತ್ತಾರೆ. ಆ ಮಕ್ಕಳ ತಾಯ್ತಂದೆಗಳಾರೊ! ಎಲ್ಲಿಗೂ ತಿಳಿಯದು. ಅಲ್ಲಿ ಮಕ್ಕಳು ಹೇಗೆ ಬರುವರೆಂಬುದು ಸದಾ ಒಂದು ನಿಗೂಢವಾದ ಸಮಸ್ಯೆಯೇ! ಆಶ್ರಮ ಪಾಸಿಗಳಿಗೇ ಗೊತ್ತಿರುವದಿಲ್ಲ. ಗುಪ್ತ ಪೋಲೀಸರ ಪ್ರಾಣಾಕ್ಷ ಬುದ್ಧಿಗೂ ಕೂಡ ನಿಲುಕುತ್ತಿರುವದಿಲ್ಲ. ಬೀಲದಲ್ಲಿ ಪಾತ್ರೆ ಕಟ್ಟಿಬಿಟ್ಟೊ, ಹೆಳಿಗೆಗಳ ನಡುವೆಯೊ, ಗಿಡಗಳ ಬುಡದಲ್ಲಿಟ್ಟೊ, ಬಿಟ್ಟು ಹೋದ ಶಿಶುಗಳನ್ನು ತಂದು ಸಾಕುತ್ತಾರೆ. ಹಡೆದ ತಾಯ್ತಂದೆಗಳಿಗೂ ಮಿಗಿಲಾದ ಈ ಸಡಿಲ ತಾಯ್ತಂದೆಗಳು ನಾಕೆ ಸಲಹುತ್ತಾರೆ. ಚಿಕ್ಕ ಕೂಸುಗಳನ್ನು ತೊಟ್ಟಿಲಗಟ್ಟಿ ತೂಗುತ್ತಾರೆ. ಬೆಳಿಗ್ಗೆ ಮುಖ ತೊಳೆದು ಹಾಲು ಕುಡಿಸುತ್ತಾರೆ. ಬೇನೆ ಬಂದವುಗಳಿಗೆ ಔಷಧವೀಯುತ್ತಾರೆ. ಹೇಸುಗೆಯನ್ನದೆ, ಹಿಂಜರಿಯದೆ, ಆತ್ಮ ಸಂತೋಷದ ಪಾಲನೆ ಮಾಡುವ ಅಲ್ಲಿಯ ಸ್ತ್ರೀ ಸಮುದಾಯವನ್ನು ನೋಡಿದರೆ "ಹಾ! ಇಲ್ಲಿದೆ ನಿಜವಾದ ತಾಯ್ತನ" ಎಂದೆನಿಸದೆ ಇರದು. "ಹೆಣ್ಣೆ" ನಿನ್ನ ಪೆಸರು, ತಾಳ್ಮೆ ತಾಯ್ತನಗಳಲ್ಲವೇ? ಎಂದು ಯಾರಾದರೂ ಎನ್ನಬಹುದಾಗಿದೆ. ಅವರ ಸೇವೆ ಸಂಬಳದ ಸೇವೆಯಲ್ಲ. ಮಾನವೀಯ ಹೃದಯದ ಸೇವೆ. ಅಲ್ಲಿಯ ಮಕ್ಕಳು ಬೆಳೆಯುತ್ತಿರುವಂತೆ ಅವರನ್ನೇ ತಾಯಂದಿರೆಂದು ತಿಳಿಯುತ್ತಾರೆ. ನಾವು ಬಾಲಭವನವನ್ನು ನಿರೀಕ್ಷಿಸಲು ಹೋದ ಸಮಯದಲ್ಲಿ ೩ ವರುಷದ ಒಂದು ಚಿಕ್ಕ ಮಗುವಿಗೆ ತಮಿಳಿನಲ್ಲಿಯೇ 'ನಿನ್ನ ಹೆಸರೇನಮ್ಮಾ' ಎಂದು ಕೇಳಿದೆವು. ಆ ಮಗು, 'ನಿಲ್ಲಿ! ನನ್ನ ತಾಯಿಯನ್ನು ಕರೆದುಕೊಂಡು ಬರುತ್ತೇನೆ' ಎಂದು ಹೇಳಿ, ಓಡಿ ಹೋಗಿ ಅಲ್ಲಿಯ ಶಿಕ್ಷಕಿಯೊಬ್ಬಳನ್ನು ಕರೆತಂದು 'ಅಮ್ಮಾ, ಇವರು ನನ್ನನ್ನು ಹೆದರಿಸುತ್ತಲಿದ್ದಾರೆ!' ಎಂದು ಹೇಳಿದ ರೀತಿ, ಆ ಮಗುವಿನ ಮುಗ್ಧಭಾವನೆ, ನಮ್ಮನ್ನು ನಿಶ್ಚಲರನ್ನಾಗಿ ಮಾಡಿಬಿಟ್ಟವು. ಆ ಮಕ್ಕಳಿಗೆ ತಾವು ಪರಭೃತರೆಂಬ ಕಲ್ಪನೆಯೇ ಬರುವದಿಲ್ಲ. ಸ್ವಲ್ಪ ಬೆಳೆದ ಅಲ್ಲಿಯ ಎಲ್ಲ ಮಕ್ಕಳಿಗೂ ಬೆಳಗಿನಲ್ಲಿಯೇ ತಣ್ಣೀರ ಸ್ನಾನ ಮಾಡಿಸಿ, ಒಗೆದ ಬಟ್ಟೆಗಳನ್ನು ತೊಡಿಸಿ, ತಿನಿಸಿ, ಆಡಲು ಬಿಡುವರು. ೩ ರಿಂದ ೬ ವರುಷದ ವರೆಗಿನ ಮಕ್ಕಳಿಗಾಗಿ ಒಂದು ಪೂರ್ವ ಮೂಲ ಶಿಕ್ಷಣ ಶಾಲೆಯೇ ಇದೆ.

ಪೂರ್ವ ಮೂಲ ಶಿಕ್ಷಣ ಶಾಲೆ

ಇಲ್ಲಿ ಸುಮಾರು ೭೦ ಮಕ್ಕಳು ಇರುವರು. ಒಂದು ವಿಶಾಲವಾದ ಕಟ್ಟಡದಲ್ಲಿ ಆ ಮಕ್ಕಳಿಗೆ ಚಿಕ್ಕ ಚಿಕ್ಕ ಕೆಲಸಗಳನ್ನು ಮಾಡಲು ಕೊಡುವರು. ಥಳಿ ರಂಗೋಲಿಗಳನ್ನು ಕೆಲವು ಮಕ್ಕಳು ಹಾಕುವರು. ಆಟ ಆಡುವರು. ಮಧ್ಯಾಹ್ನದ ಊಟವನ್ನು ಅಲ್ಲಿಯೇ ಉಣಬಡಿಸುವರು. ಮಕ್ಕಳು ತಮ್ಮ ತಮ್ಮ ನೀರಿನ ಪಾತ್ರೆಗಳನ್ನು ತೆಗೆದು ಕೊಳ್ಳುವರು. ತೊಳೆಯುವರು. ಸ್ವಚ್ಛಗೊಳಿಸುವಲ್ಲಿಯೂ ನೆರವಾಗುವರು. ಸಾಮೂಹಿಕ ಹಾಡು ಹೇಳುವರು. ಸಂಭಾಷಿಸುವರು. ವಸ್ತುಗಳನ್ನು ಗುರುತಿಸುವರು ಮುಖ್ಯವಾಗಿ ಸಾಂಘಿಕ ಹಾಗೂ ರಚನಾತ್ಮಕ ಆಟವೇ ಈ ಶಾಲೆಯ ಶಿಕ್ಷಣದ ತಳಪಾಯವು. ಅನಾಥಾಶ್ರಮದ ಮಕ್ಕಳೇ ಹೆಚ್ಚಾಗಿ ಈ ಶಾಲೆಯಲ್ಲಿರುವರು.

ಜೀವನ ಶಿಕ್ಷಣ ಶಾಲೆ

ಮದ್ರಾಸ ಪ್ರಾಂತದಲ್ಲಿ ಪ್ರಾಥಮಿಕ ಶಿಕ್ಷಣವು ಸದ್ಯಕ್ಕೆ ೮ ವರ್ಷಗಳ ಅವಧಿಯದು ಇದೆ. ಏಳು ವರುಷಗಳ ಯೋಜನೆಯನ್ನು ಕಾರ್ಯರೂಪದಲ್ಲಿ ತರುವದನ್ನು

ತಾತ್ವಿಕವಾಗಿ ಅಂಗೀಕರಿಸಿದ್ದರೂ ಅದಿನ್ನೂ ಬಳಿಕೆಯಲ್ಲಿ ಬಂದಿರುವದಿಲ್ಲ. ಈ ಎಂಟು ವರುಷಗಳ ಶಿಕ್ಷಣವನ್ನು 'ಜ್ಯೂನಿಯರ್ ಬೇಸಿಕ್ ಶಾಲೆ,' 'ಸೀನಿಯರ್ ಬೇಸಿಕ್ ಶಾಲೆ' ಎಂದು ಎರಡು ವಿಭಾಗಗಳಲ್ಲಿ ಜೋಡಿಸಲಾಗಿದೆ. ಕಿರಿಯ ವಿಭಾಗದ ಜೀವನ ಶಿಕ್ಷಣ ಶಾಲೆಯು ಗಾಂಧಿ ಗ್ರಾಮದ ಆವಾರದಲ್ಲಿಯೇ ಇದ್ದು, ಆ ಶಾಲೆಗೆ ಆಶ್ರಮ ವಾಸಿಗಳ ಮಕ್ಕಳು ಬಾಲಭವನದ ಬೆಳೆದ ಮಕ್ಕಳು, ನೆರೆಯ ಗ್ರಾಮದ ಕೆಲ ಮಕ್ಕಳು ಬರುವರು. ಹತ್ತಿಯ ಬಿಡಿಸುವಿಕೆಯಿಂದ ಹಿಡಿದು ನೂಲುವ ಕಾರ್ಯವನ್ನು ಮಾಡುವರಲ್ಲದೆ ಕೈತೋಟದ ಕೆಲಸಗಳನ್ನು ಮಾಡುವರು. ಅಭ್ಯಾಸವು ಸಮುವಾಯ ಪದ್ಧತಿಯಿಂದಲೇ ಸಾಗುವದು. ಸೀನಿಯರ್ ಬೇಸಿಕ್ ಶಾಲೆಯು ರಾಜಮಾರ್ಗದ ಆಚೆಯ ಪಕ್ಕದಲ್ಲಿ (ಪಶ್ಚಿಮಕ್ಕೆ) ಉಂಟು. ೬ ರಿಂದ ೮ ವರ್ಗಗಳು ಅಲ್ಲಿರುವವು. ಆ ಶಾಲೆ ಹಾಗೂ ಅದರ ಮೂಲ ಶಿಕ್ಷಣದ ಕಟ್ಟಡವಿರುವ ಆ ಸ್ಥಲವನ್ನು 'ತಂಬಿತೋಟವು' ಎಂದು ಕರೆಯುವರು. ಮದ್ರಾಸಿನ ಟಿ. ವ್ಹಿ. ಎಸ್. ಎಂಬ ಸಂಸ್ಥೆಯು ೧೭೦೦೦ ರೂ. ಕೊಟ್ಟು ೧೭ ಎಕರೆ ಭೂಮಿ ಯನ್ನು ಕೊಂಡು ದಾನವಾಗಿ ಇತ್ತಿದೆ. ಆ ಕುಟುಂಬದ 'ತಂಬಿ' ಎಂಬವರು ಅಕಾಲಿಕ ಮರಣ ಹೊಂದಿದ್ದರಿಂದ ಆ ಹೆಸರನ್ನು ಅದಕ್ಕೆ ಇಡಲಾಗಿದೆ-ಎಂಬ ಮಾತು ವಿಚಾರಾಂತ್ಯದಲ್ಲಿ ತಿಳಿದು ಬಂದಿತು. ಸುಮಾರು ೧೫೫ ವಿದ್ಯಾರ್ಥಿಗಳು ಆಶ್ರಮದಲ್ಲಿಯೇ ವಾಸಿಸಿ, ಸಾಂಘಿಕ ಜೀವನವನ್ನು ನಡೆಸುತ್ತ ಅಭ್ಯಸಿಸುತ್ತಿರುವರು. ಆ ಮಕ್ಕಳಿಗೆ ಊಟ ವಸತಿಗಳೆಲ್ಲವೂ ಉಚಿತವಾಗಿರುವವು. ಅಲ್ಲದೆ ಶಾಲೆಗೆ ಬರುವ ಎಲ್ಲ ಮಕ್ಕಳಿಗೂ ಮಧ್ಯಾಹ್ನದ ಊಟದ ಯೋಜನೆಯಿರುವದು. ಇಂದು ಎರಡೂ ವಿಭಾಗಗಳಲ್ಲಿ ಸುಮಾರು ೪೦೦ ವಿದ್ಯಾರ್ಥಿಗಳು ಜೀವನ ಶಿಕ್ಷಣವನ್ನು ಪಡೆಯುತ್ತಲಿದ್ದಾರೆ. ಸೀನಿಯರ್ ಬೇಸಿಕ್ ಶಾಲೆಯಲ್ಲಿ ನೆಯ್ಗೆ ಹಾಗೂ ಒಕ್ಕಲುತನ ಎರಡೂ ಮುಖ್ಯ ಮೂಲೋದ್ಯೋಗಗಳುಂಟು. ಮಕ್ಕಳು ಎರಡೂ ಉದ್ಯೋಗಗಳಲ್ಲಿ ಒಳ್ಳೇ ಆಸ್ಥೆವಹಿಸಿ ದುಡಿಯುತ್ತಲಿರು ವರು. ಬೆಳಗಿನ ೭ ರಿಂದ ೯ ವರೆಗೆ ಒಕ್ಕಲುತನದಲ್ಲಿ ತೊಡಗುವರು. ಸಾಮಾನ್ಯವಾಗಿ ಮದ್ರಾಸ ಪ್ರಾಂತದ ಲ್ಲೆಲ್ಲ ಶಾಲಾ ಅವಧಿಗಳು ಬೆಳಿಗ್ಗೆ ೯ ರಿಂದ ೧೫ ವರೆಗೆ, ಮಧ್ಯಾಹ್ನದಲ್ಲಿ ೨ರಿಂದ ೫ರ ವರೆಗೆ ನಡೆಯುವವು. ಬಹು ಶಾಲೆಗಳಲ್ಲಿ ಮಧ್ಯಾಹ್ನದ ಊಟದ ಏರ್ಪಾಡು ಇದ್ದುದ ರಿಂದ ಈ ಅವಧಿಗಳ ಅದಚಣಿಯು ಉಂಟಾಗುವದಿಲ್ಲ. ಸಾಂಘಿಕ ಜೀವನವು ಕೂಡ ಮುಂತ್ರಿ ಮಂಡಲದ ಮುಖಾಂತರ ಸಂಘಟಿಸಲ್ಪಡುವದು. ವಸತಿ ಗೃಹದಲ್ಲಿ ರುವ ಮಕ್ಕಳು, ತಮ್ಮ ಭೋಜನದ ವ್ಯವಸ್ಥೆಯನ್ನು ತಾವೇ ಮಾಡಿಕೊಳ್ಳುವರಲ್ಲದೆ, ಸ್ವಚ್ಛತೆ ಅಚ್ಚುಕಟ್ಟುತನ ಗಳ ಬಗೆಗೆ ವಿಶೇಷ ಜಾಗ್ರತೆವಹಿಸುತ್ತಾರೆ. ಇಲ್ಲಿಯ ಶಿಕ್ಷಕ ವರ್ಗವೂ ಕೂಡ ಜೀವನ ಶಿಕ್ಷಣದಲ್ಲಿ ತರಬೇತಿ ಪಡೆದು ಮಕ್ಕಳಲ್ಲಿ ಸಮರಸವಾಗಿ ಸದಾ ಕಾಲವೂ ಮಾರ್ಗ ದರ್ಶನ ಮಾಡುತ್ತಲಿರುತ್ತಾರೆ. ಅವರಿಗೆ ಅಲ್ಲಿಯೇ ವಸತಿ ಗೃಹಗಳ ಏರ್ಪಾಡು ಇರುವದರಿಂದ ಬೋಧಿಸಲು ಅಕಾಲವೆಂಬುದೇ ಅವರಿಗಿರುವದಿಲ್ಲ. ಅಲ್ಲಿಯ ಪ್ರಾಥ ಮಿಕ ಶಿಕ್ಷಕರನ್ನು ಆಣಿಗೊಳಿಸುವ ತರಬೇತಿ ಸಂಸ್ಥೆಯು ಇರುವದರಿಂದ ಆ ಶಾಲೆಯು ಅದಕ್ಕೆ ಪ್ರಾಯೋಗಿಕ ಶಾಲೆ ಯಾಗಿಯೂ ಕೆಲಸ ಮಾಡುತ್ತಿದೆ. ಇಂದು ಶಾಲೆಯು ಸಂಪೂರ್ಣವಾಗಿ ಸ್ವಯಂ ಪೂರ್ಣವಾಗಿರುವದಿಲ್ಲವೆಂಬ ಸಂಗತಿಯೇನೋ ನಿಜ. ಆದರೆ ಮಕ್ಕಳ ನೆಯ್ಗೆಯಿಂದ ಬರುವ ಲಾಭವು ಮಧ್ಯಾಹ್ನದ ಊಟದ ಯೋಜನೆಯನ್ನು ಮಾಡಲು ಅನುಕೂಲವಾಗುವಷ್ಟರ ಮಟ್ಟಿಗೆ (ಕಿಂಚಿತ್ ಕಡಿಮೆ) ಬರುತ್ತಿದೆ ಎಂಬ ಸಂಗತಿಯು ಮಾತ್ರ ಸಂಪೂರ್ಣ ಸತ್ಯವಿದೆ.

ಅಪರ ಮೂಲ ಶಿಕ್ಷಣ ಶಾಲೆ

ಇದೊಂದು ಜೀವನ ಶಿಕ್ಷಣವನ್ನು ಮಾಧ್ಯಮಿಕ ಹಂತದಲ್ಲಿ ಪ್ರಯೋಗಿಸಿ ತೋರಿಸುತ್ತಿರುವ ಶಾಲೆಯು. ೮ ವರುಷಗಳ ವರೆಗೆ ಜೀವನ ಶಿಕ್ಷಣವನ್ನು ಪಡೆದು ಹೊರ ಬೀಳುವ ಮಕ್ಕಳು ಪುನಃ ಮುಂದಿನ ಶಿಕ್ಷಣದ ಸಮಸ್ಯೆ ಯನ್ನು ಎದುರಿಸುವಂತಾಗಬಾರದೆಂದು ಜೀವನ ಶಿಕ್ಷಣವು ಪ್ರಾಥಮಿಕ ಮಟ್ಟಕ್ಕೇ ನಿಲ್ಲಬಾರದೆಂಬ ಘನೋದ್ದೇಶ ದಿಂದ, ಈ ಶಾಲೆಯನ್ನು ಕಟ್ಟಿ ಬೆಳಿಸಲಾಗಿದೆ. ಇದು ಹೈಸ್ಕೂಲ ಇದ್ದ ಹಾಗೆ ಇಲ್ಲ. ೩ ವರುಷಗಳ ಅಭ್ಯಾಸ ಕ್ರಮವಿದೆ. S. S. C. ವರೆಗೆ ಅಭ್ಯಾಸವಾಗುತ್ತಿದೆ. ಇಲ್ಲಿಯ ಅಧ್ಯಯನವೆಲ್ಲವೂ ಸಮವಾಯ ಪದ್ಧತಿ ಯಿಂದಲೇ ಸಾಗುವದು. ಇಂಗ್ಲೀಷ, ಗಣಿತ, ಸಮಾಜ ಶಾಸ್ತ್ರ, ಅರ್ಥಶಾಸ್ತ್ರ ಮೊದಲಾದ ವಿಷಯಗಳಲ್ಲದೆ ಮಾತೃಭಾಷೆ (ತಮಿಳು) ಮತ್ತು ಹಿಂದೀ ಭಾಷೆಗಳನ್ನು ಇಲ್ಲಿ ಕಲಿಸಲಾಗುವದು. ಈ ಶಾಲೆಯಲ್ಲಿಯೂ ಒಕ್ಕಲು ತನ ಹಾಗೂ ನೆಯ್ಗೆಯ ಮೂಲೋದ್ಯೋಗಗಳಿರುವವು ಸಾಂಘಿಕ ಜೀವನವು ಇಲ್ಲಿಯೂ ಕಡ್ಡಾಯವಾಗಿದೆ

ಇಂದು ಈ ಶಾಲೆಯಲ್ಲಿ ಸುಮಾರು ೧೦೦ ವಿದ್ಯಾರ್ಥಿಗಳು ಅಭ್ಯಸಿಸುತ್ತಲಿರುವರು. ಇಲ್ಲಿಂದ ಹೊರ ಬೀಳಲಿರುವ ೧೧ನೆಯ ವರುಷದ ಪರೀಕ್ಷೆಯನ್ನು ಒಂದು ಪ್ರತ್ಯೇಕವಾದ 'ಕೌನ್ಸಿಲ್ಲು' ನಡೆಯಿಸುವದು. ಪಾಸಾದವರಿಗೆ ಕೌನ್ಸಿಲ್ಲ ದವರೇ ಪ್ರಮಾಣಪತ್ರವನ್ನು ಕೊಡುವರು. ವ್ರಾಂತಿಕ ಸರಕಾರದವರು ನೌಕರಿಯನ್ನು ಕೊಡುವ ದೃಷ್ಟಿಯಲ್ಲಿ ಇದನ್ನು ಮದ್ರಾಸದ S. S. L. C. ಪರೀಕ್ಷೆಯ ತತ್ಸಮಾನವೆಂದು ಪರಿಗಣಿಸಿದೆ. ಆದರೆ ಕಾಲೇಜ ಪ್ರವೇಶಕ್ಕೆ ಮಾತ್ರ ಈ ಶಾಲೆಯಿಂದ ಹೊರಬಿದ್ದವರಿಗೆ ಅನುವಿರುವದಿಲ್ಲ. ಈ ಅಡಚಣಿಯೇ ಗ್ರಾಮೀಣ ಉಚ್ಚ ಶಿಕ್ಷಣದ ಗ್ರಾಮೀಣ ವಿಶ್ವವಿದ್ಯಾಲಯ ಸ್ಥಾಪನೆಗೆ ಗ್ರಾಮವಾಸಿಗಳನ್ನು ಉದ್ದೀಪಿಸಿತು.

ಉಚ್ಚ ಶಿಕ್ಷಣದ ಗ್ರಾಮೀಣ ವಿದ್ಯಾಲಯ

ಜೀವನದಲ್ಲಿ 'ತತಃ ಕಿಂ'? ಎಂಬ ಪ್ರಶ್ನೆಯು ಯಾವಾಗಲೂ ಬಂದು ನಿಲ್ಲತಕ್ಕದ್ದೇ. ಅದನ್ನು ಬಿಡಿಸುತ್ತ ಸಾಗುವದೇ ಪುರುಷಪ್ರಯತ್ನದ ಒರೆಗಲ್ಲು. ಜೀವನ ಶಿಕ್ಷಣದ ಹೈಸ್ಕೂಲ ಮಟ್ಟವನ್ನು ದಾಟಿ ಹೊರಬೀಳುವ ವಿದ್ಯಾರ್ಥಿಗಳಿಗೆ ಉಚ್ಚ ಶಿಕ್ಷಣದ ಹಸಿವು ಉಂಟಾದರೆ ಅದನ್ನು ಹಿಂಗಿಸುವ ಕಾರ್ಯವು ಆಗಬೇಕೆಂಬ ಘನೋದ್ದೇಶದಿಂದ ಪ್ರೇರಿತರಾಗಿ ಉಚ್ಚ ಶಿಕ್ಷಣದ ಗ್ರಾಮೀಣ ವಿಶ್ವವಿದ್ಯಾಲಯವೊಂದನ್ನು ಇಲ್ಲಿ ಕಟ್ಟಿದ್ದಾರೆ. ಇಲ್ಲಿಂದ ಹೊರಬೀಳುವ ತರುಣರು ಪದವೀಧರ ತತ್ಸಮಾನರು. ವಿಶ್ವವಿದ್ಯಾಲಯದವರಿನ್ನೂ ಇಲ್ಲಿಯ ಪದವಿಯನ್ನು ಮನ್ನಿಸದಿದ್ದರೂ ಕೇಂದ್ರ ಸರಕಾರವು, ಅನೇಕ ಪ್ರಾಂತಿಕ ಸರಕಾರಗಳು ನೌಕರಿಯನ್ನು ಕೊಡುವಲ್ಲಿ ಇಲ್ಲಿಯ ಪ್ರಶಸ್ತಿಯನ್ನು ಪದವಿಯೆಂದೇ ಮನ್ನಿಸಿವೆ. ಇಲ್ಲಿಂದ ಪ್ರಶಸ್ತಿ ಪಡೆದು ಹೊರಬೀಳುವವರಿಗೆ ರಾಷ್ಟ್ರೀಯ ವಿಸ್ತರಣಾ ಕೇಂದ್ರಗಳಲ್ಲಿ ಸಮಾಜ ಶಿಕ್ಷಣ ಯೋಜನೆಗಳಲ್ಲಿ, ಸಹಕಾರಿ ಸಂಸ್ಥೆಗಳಲ್ಲಿ, ಗ್ರಾಮೋದ್ಯೋಗ ಶಾಲೆಗಳಲ್ಲಿ ಸುಲಭವಾಗಿ ನೌಕರಿಗಳು ದೊರೆಯುವವಷ್ಟಲ್ಲದೆ ಸ್ವಾತಂತ್ರ್ಯಕರಿಗೆ ದೊರೆಯುವ ಸಂಬಳವೇ ದೊರೆಯುವದು. ಇಂಥ ಉಚ್ಚ ಶಿಕ್ಷಣದ ಗ್ರಾಮೀಣ ವಿದ್ಯಾಲಯಗಳು ದೇಶದಲ್ಲಿ ಇಂದು ೧೦ ಇವೆ. ಗಾಂಧೀಗ್ರಾಮದಲ್ಲಿಯ ಈ ವಿದ್ಯಾಲಯವನ್ನು ೧೩ನೆಯ ಅಗಸ್ಟ ೧೯೫೬ ರಂದು ರಾಷ್ಟ್ರಪತಿ ಬಾಬು ರಾಜೇಂದ್ರ ಪ್ರಸಾದರು ಉದ್ಘಾಟಿಸಿರುವರು. ಇದರಲ್ಲಿ ೨ ವಿಭಾಗಗಳಿದ್ದು, ಒಂದನ್ನು 'ಗ್ರಾಮಸೇವಾ ಕಾಲೇಜ' ಎಂದೂ ಇನ್ನೊಂದನ್ನು 'ಒಕ್ಕಲುತನ ಶಾಸ್ತ್ರದ ಕಾಲೇಜ' ಎಂದೂ, ಕರೆಯುವರು. ಒಕ್ಕಲುತನ ಶಾಸ್ತ್ರದ ಕಾಲೇಜದ ಅಭ್ಯಾಸವು ಎರಡು ವರುಷಗಳದ್ದಿದ್ದು, ಅಪರ ಮೂಲ ಶಿಕ್ಷಣ ಶಾಲೆ (ಬೇಸಿಕ್ ಸ್ಕೈಸ್ಕೂಲ) ಯಿಂದ ಪಾಸಾದ ವಿದ್ಯಾರ್ಥಿಗಳು ಇಲ್ಲಿಯೇ ಕಾಲೇಜ ಪ್ರವೇಶಕ್ಕೆ ಅರ್ಹವಾಗುವ ವಿಷಯಗಳನ್ನು ತೆಗೆದುಕೊಂಡು S. S. C. ಪಾಸಾದವರು ಆ ಕಾಲೇಜನ್ನು ಸೇರಬಹುದಾಗಿದೆ. ಇಲ್ಲಿ ಒಕ್ಕಲುತನ, ಪಶುಶಾಸ್ತ್ರ, ಗ್ರಾಮೀಣ ಅರ್ಥಶಾಸ್ತ್ರ ಮತ್ತು ಸಹಕಾರ, ಸಾರ್ವಜನಿಕ ಆರೋಗ್ಯ, ಗ್ರಾಮಸಾಡಳಿತ, ಗ್ರಾಮೋದ್ಯೋಗಗಳು, ಹಣ್ಣಿನ ವ್ಯವಸಾಯ, ಅರಣ್ಯವ್ಯವಸಾಯ, ಮೊದಲಾದ ವಿಷಯಗಳನ್ನು ಕಲಿಸಲಾಗುವದು. ೨ ವರ್ಷಗಳ ನಂತರ ಅಭ್ಯಾಸಕ್ರಮವನ್ನು ಯಶಸ್ವಿಯಾಗಿ ಮುಗಿಸಿದವರಿಗೆ ಪ್ರಶಸ್ತಿಯನ್ನು ಕೊಡುವರು. ಈ ಅಭ್ಯಾಸಕ್ರಮದಲ್ಲಿ ಇಂದು ಸುಮಾರು ೮೦ ವಿದ್ಯಾರ್ಥಿಗಳಿರುವರು. ಇವರಲ್ಲಿ ತಮಿಳರೂ, ಕೇರಳೀಯರೂ, ಇರುವರು. ಗ್ರಾಮ ಸೇವಾ ಕಾಲೇಜವು ೩ ವರುಷಗಳ ಅಭ್ಯಾಸಕ್ರಮವುಳ್ಳದ್ದು. ಅಪರ ಮೂಲ ಶಿಕ್ಷಣ ಶಾಲೆಯಿಂದ ಹೊರಬಿದ್ದ ಮಕ್ಕಳನ್ನು ನೇರವಾಗಿ ಸೇರಿಸಿಕೊಳ್ಳುವರು. ಎಸ್. ಎಸ್. ಸಿ. ಪಾಸಾದವರಿಗೂ ಅಲ್ಲಿ ಪ್ರವೇಶವುಂಟು. ಆದರೆ ಅಂಥವರು ಮೊದಲು ೧ ವರ್ಷ ತಯಾರಿ ವರ್ಗದಲ್ಲಿ ಅಭ್ಯಸಿಸಬೇಕಾಗುವದು. ಆ ತಯಾರಿ ವರ್ಗವು ನಮ್ಮಲ್ಲಿ ಇಂದು P. U. C. ವರ್ಗವಿದ್ದ ಹಾಗೆ. ೩ ವರುಷಗಳ ಅಭ್ಯಾಸಕ್ರಮವನ್ನು ಯಶಸ್ವಿಗೊಳಿಸಿದ ನಂತರ 'ಡಿಪ್ಲೊಮಾ' ಕೊಡುವರು. ಇದು ಪದವಿಯ ತತ್ಸಮಾನವಾಗಿದೆ. ಈ ಕಾಲೇಜನಲ್ಲಿ ಪ್ರಾಂತೀಯಭಾಷೆ (ತಮಿಳು, ಮಲಿಯಾಳಿ) ಹಿಂದಿ ಹಾಗೂ ಇಂಗ್ಲೀಷ ಎಂಬ ಮೂರು ಭಾಷೆಗಳನ್ನು ಕಲಿಸುವರಲ್ಲದೆ, ನಾಗರಿಕತೆಯ ಇತಿಹಾಸ, ಹಳ್ಳಿಯ ಸಮಸ್ಯೆಗಳಾದ ಅರ್ಥಶಾಸ್ತ್ರ, ಸಮಾಜಶಾಸ್ತ್ರ, ಆರೋಗ್ಯ ಹಾಗೂ ಸ್ವಚ್ಛತೆ, ಒಕ್ಕಲುತನ, ಸ್ಥಾಪತ್ಯ ಶಿಲ್ಪ, ಮಾಗೂ ಆಡಳಿತ, ಮೊದಲಾದವುಗಳ ಪರಿಚಯವನ್ನು ಮಾಡಿಕೊಡಲಾಗುವದು. ಗೃಹವಿಜ್ಞಾನ, ಸಂಗೀತ, ಗ್ರಾಮೋದ್ಯೋಗಗಳು ಮೊದಲಾದ ಕೆಲವೊಂದು ಐಚ್ಛಿಕ ವಿಷಯಗಳೂ ಉಂಟು. ಈ ಐಚ್ಛಿಕ ವಿಷಯಗಳಲ್ಲಿ ನಮ್ಮ ಮನ ಸೆಳೆದ ವಿಭಾಗವೆಂದರೆ ಸಂಗೀತ ವಿಭಾಗವು. ಇಲ್ಲಿ ಸಂಗೀತದಲ್ಲಿ ಪದವಿ ಪದೆದ

ಮಹಿಳೆಯು ಸಂಗೀತ ಪ್ರಾಧ್ಯಾಪಕಳಾಗಿದ್ದು, ಶಾಸ್ತ್ರೀಯವಾಗಿ ಸಂಗೀತವನ್ನು ಕಲಿಸುತ್ತಿರುವಳು. ಪ್ರತಿಯೊಂದು ವರ್ಗದಲ್ಲಿ ೩–೪ ಜನರು ಸಂಗೀತವನ್ನು ಅಭ್ಯಸಿಸುವರು ಕಾಣಿಸುವನವರು. ಸಂಗೀತಕ್ಕಾಗಿ ಪ್ರತ್ಯೇಕವಾದ ಒಂದು ಕೋಣೆಯಿದ್ದು, ಆ ಕೋಣೆಯಲ್ಲಿ ಸಂಗೀತದ ಆಚಾರ್ಯರೆನಿಸಿಕೊಂಡ ಹದಿನಾಲ್ಕು ಜನರ ಭಾವಚಿತ್ರಗಳು ತೂಗಾಡುತ್ತಿವೆ. ಆ ಚಿತ್ರಗಳಲ್ಲಿ ಪ್ರಥಮ ಸ್ಥಾನವು ಪುರಂದರದಾಸರಿಗೆ ದೊರೆತಿದ್ದು, 'Father of Karnataka music' ಎಂದು ಬರೆಯಲಾಗಿದೆ. ಅದನ್ನು ನೋಡಿ ಕನ್ನಡಿಗರಾದ ನಾವು ಪುಲಕಿತರಾದೆವು. ಆ ಪ್ರಾಧ್ಯಾಪಿಕೆಯನ್ನು ನಾವು 'ಕನ್ನಡ ಬರುವದೇ?' ಎಂದು ಕೇಳಿದೆವು. ಅವಳು ಕನ್ನಡವನ್ನು ಅರಿಯದವಳಾಗಿದ್ದರೂ, ಪುರಂದರದಾಸರ ಒಂದೆರಡು ಕೀರ್ತನೆಗಳನ್ನು ತಮಿಳು ಧಾಟಿಯಲ್ಲಿ ಎತ್ತಿ ಹಾಡಿದಳು. ಈ ಕನ್ನಡದ ಹಾಡುಗಳನ್ನು ನೀವು ಕಲಿತುದು ಹೇಗೆ? ಎಂದು ಪ್ರಶ್ನಿಸಿದೆವು. "ನಾದ ಮಾಧುರ್ಯಕ್ಕೆ, ಭಕ್ತಿರಸಕ್ಕೆ ಸೋತ ಜೀವಕ್ಕೆ ಭಾಷೆ ಬೇಕಿಲ್ಲ. ತೆರೆದ ಹೃದಯವೊಂದಿದ್ದರೆ ಸಾಕು" ಎಂದು ಉತ್ತರಿಸಿದಳು. ಅವಳ ಮಾತು 'ಮೂಕಂ ಕರೋತಿ ವಾಚಾಲಂ'! ಈ ವಿದ್ಯಾಲಯದ ಶಿಕ್ಷಣದ ಮಾಧ್ಯಮವು ಇಂಗ್ಲೀಷ ಭಾಷೆಯಾಗಿರುವದರಿಂದ ಬೇರೆ ಪ್ರಾಂತದ ಜನರೂ ಬರಬಹುದಾಗಿದೆ.

ಒಂದು ವರುಷದ ತಯಾರಿ ವರ್ಗದ ವಿಭಾಗದಲ್ಲಿಯೂ ನಮ್ಮಲ್ಲಿಯ P. U. C. ವರ್ಗಕ್ಕೆ ಇರುವಷ್ಟು ವಿಷಯಗಳುಂಟು.

ಇಂದು ಈ ತಯಾರಿ ವರ್ಗ, ೩ ವರ್ಷಗಳ 'ಡಿಪ್ಲೋಮಾ' ವಿಭಾಗ, ಹಾಗೂ ಒಕ್ಕಲುತನ ಕಾಲೇಜು– ಈ ಎಲ್ಲ ವಿಭಾಗಗಳು ಕೂಡಿ ಸುಮಾರು ೨೪೦ ಜನ ವಿದ್ಯಾರ್ಥಿಗಳುಂಟು. ಎಲ್ಲ ವಿದ್ಯಾರ್ಥಿಗಳಿಗೂ ವಸತಿ ಗೃಹದ ವಿಸ್ತಾರವು ಇರುವದಲ್ಲದೆ, ತಮ್ಮ ತಮ್ಮ ಊಟದ ವ್ಯವಸ್ಥೆಯನ್ನು ಮಂತ್ರಿ ಮಂಡಲದ ಮುಖಾಂತರವೇ ಮಾಡಿಕೊಳ್ಳುವರು. ಸಾಂಘಿಕ ಜೀವನ (Community life) ವು ಇವರಿಗೂ ಕಡ್ಡಾಯದ್ದಾಗಿದೆ. ಇಲ್ಲಿಯ ಪ್ರಾಧ್ಯಾಪಕ ವರ್ಗವು ಉಚ್ಚಶ್ರೇಣಿಯ ಪದವಿ ಪ್ರಶಸ್ತಿಗಳನ್ನು ಪಡೆದವರಾಗಿರುವರಲ್ಲದೆ ಉತ್ಸಾಹಿತರೂ, ಗಾಂಧೀಜಿಯ ರಚನಾತ್ಮಕ ಕಾರ್ಯಕಲಾಪಗಳಲ್ಲಿ ಶ್ರದ್ಧೆಯುಳ್ಳವರೂ ಆಗಿರುವರು. ವಿದ್ಯಾರ್ಥಿಗಳನ್ನು ಕುಟುಂಬದ ಬಳಗದವರಂತೆ ಕಾಣುತ್ತ, ಪ್ರತಿಯೊಂದರಲ್ಲಿ ಮಾರ್ಗದರ್ಶನ ಮಾಡುತ್ತಿರುವರು. ಜೀವನ ಶಿಕ್ಷಣದ ತತ್ವಗಳ ತಳಪದಿಯ ಮೇಲೆಯೆ ಈ ವಿಭಾಗದ ಎಲ್ಲ ಕಾರ್ಯಕಲಾಪಗಳು ನಡೆಯುತ್ತವೆ.

ಪ್ರಾಥಮಿಕ ಶಿಕ್ಷಕರನ್ನು ಅಣಿಗೊಳಿಸುವ– ಬೇಸಿಕ್ ಟ್ರೇನಿಂಗ ಶಾಲೆ

ನಮ್ಮಲ್ಲಿ ಟ್ರೇನಿಂಗ್ ಕಾಲೇಜ ಎಂದು ಕರೆಯುತ್ತಿರುವದನ್ನು ಆ ಭಾಗದಲ್ಲಿ 'ಟ್ರೇನಿಂಗ ಸ್ಕೂಲ' ಎಂದು ಕರೆಯುವದುಂಟು. ಗಾಂಧೀಗ್ರಾಮದ ಪ್ರಾರಂಭದಿಂದಲೇ ಇಲ್ಲಿ ಪ್ರಾಥಮಿಕ ಶಿಕ್ಷಕರ ತರಬೇತಿ ಕಾಲೇಜು ಉಂಟು. ಇಂದು ಇಲ್ಲಿಯ ಟ್ರೇನಿಂಗ ಸ್ಕೂಲಿನಲ್ಲಿ ೬೦ ಜನರು ತರಬೇತಿ ಪಡೆಯುತ್ತಿರುವ ಎರಡು ವರ್ಗಗಳುಂಟು. ಎಲ್ಲರೂ ಮದ್ರಾಸಿನ ಎಸ್. ಎಸ್. ಎಲ್. ಸಿ. (ಎಸ್. ಎಸ್. ಸಿ.) ಪಾಸಾದವರುಂಟು. ಮದ್ರಾಸ ಪ್ರಾಂತದಲ್ಲಿ ತರಬೇತಿ ಪಡೆದ ಶಿಕ್ಷಕರ ಕೊರತೆ ಇರುವದಿಲ್ಲ. ತರಬೇತಿ ಪಡೆದುಕೊಂಡೇ ಶಿಕ್ಷಕರೆಂದು ಸೇರುತ್ತಿರುವದುಂಟು. ಹೀಗಾಗಿ ಅಲ್ಲಿ ಶಿಕ್ಷಕರೆಂದು ಕೆಲಸ ಮಾಡುತ್ತಿರುವವರನ್ನು ತರಬೇತಿಗೆ ಕಳಿಸುವ ಅವಶ್ಯಕತೆ ಶಿಕ್ಷಣ ಖಾತೆಗೆ ಇರುವದಿಲ್ಲ. ಎಸ್. ಎಸ್. ಸಿ. ಆದ ನಂತರ ಪ್ರಾಥಮಿಕ ಶಿಕ್ಷಕರಾಗ ಬಯಸುವವರು ತರಬೇತಿಗೆ ಆಯ್ಕೆಗಾಗಿ ಅಭ್ಯರ್ಥಿಗಳಾಗಿ ಬರುತ್ತಾರೆ. ಆರಿಸಿದವರಿಗೆ ಪ್ರತಿ ತಿಂಗಳೂ ೧೮ ರೂ. ವಿದ್ಯಾರ್ಥಿ ವೇತನವನ್ನು ಸರಕಾರದವರು ಕೊಡುತ್ತಾರೆ. ಎರಡು ವರುಷ ತರಬೇತಿ ಪಡೆದು ಪಾಸಾಗಿ ಹೊರಬಿದ್ದ ನಂತರ ಪುನಃ ಅಂಥವರು ನೌಕರಿಗಾಗಿ ದಾರಿಕಾಯ ಬೇಕಾಗುವದು. ಸಾಮಾನ್ಯವಾಗಿ ತರಬೇತಿಯನ್ನು ಯಶಸ್ವಿಯಾಗಿ ಮುಗಿಸಿ ಹೊರಬೀಳುವವರಿಗೆ ನೌಕರಿಯು ಮೊರಕುತ್ತಲಿದೆ. ಮದ್ರಾಸ ಪ್ರಾಂತದಲ್ಲಿ 'ಏಕ ಶಿಕ್ಷಕರ' ಶಾಲೆಗಳಿರುವದಿಲ್ಲ. ೫ ವರ್ಗಗಳು ಇರುವ ಜ್ಯೂನಿಯರ ಶಾಲೆಯಲ್ಲಿ ಕನಿಷ್ಠ ೩ ಜನರಾದರೂ ಶಿಕ್ಷಕರಿರುತ್ತಾರೆ. ಗಾಂಧೀ ಗ್ರಾಮದಲ್ಲಿಯು ತರಬೇತಿ ಸಂಸ್ಥೆಯು ಆದರ್ಶ ಸಂಸ್ಥೆಯೆನಿಸಿಕೊಂಡಿದೆ. ಈ ತರಬೇತಿ ಸಂಸ್ಥೆಯು ಸಹ ಶಿಕ್ಷಣದ ಸಂಸ್ಥೆಯು. ಇಲ್ಲಿ ಅರ್ಧದಷ್ಟು ಹೆಣ್ಣು ಮಕ್ಕಳು ಜೊತೆಯಾಗಿಯೇ

ತರಬೇತಿ ಪಡೆಯುತ್ತಿರುವರು. ಮಂತ್ರಿ ಮಂಡಲವು ಸ್ತ್ರೀ-ಪುರುಷರೀರ್ವರಿಂದಲೂ ರಚಿತವಾಗಿರುವದು. ಸಾಂಘಿಕ ಜೀವನ, ಮೂಲೋದ್ಯೋಗಗಳ ಕಾರ್ಯಕಲಾಪಗಳ ಸಂಘಟನೆಗಳಲ್ಲಿಯೂ ಗಂಡು-ಹೆಣ್ಣುಗಳ ಭೇದವಿಲ್ಲದಲೆ ನಡೆಯುತ್ತವೆ. ಒಕ್ಕಲುತನ, ನೂಲು-ನೆಯ್ಗೆ, ಎರಡೂ ಮೂಲೋದ್ಯೋಗಗಳು ನಡೆಯುತ್ತಿವೆ. ಸಾಮಾನ್ಯವಾಗಿ ನೂಲು-ನೆಯ್ಗೆಯ ಉದ್ಯೋಗದಲ್ಲಿ ಉತ್ಪಾದಿತವಾದ ಅರಿವೆಯನ್ನು ತರಬೇತಿ ನಡೆಯುತ್ತಿರುವವರೇ ಉಪಯೋಗಿಸುವರು. ಒಕ್ಕಲುತನದಲ್ಲಿ ಭತ್ತವನ್ನು ಬೆಳೆಯಲಾಗುವದು. ಈ ಭತ್ತದ ಅಕ್ಕಿಯನ್ನು ವಿದ್ಯಾರ್ಥಿಗಳ ಊಟಕ್ಕಾಗಿಯೇ ಉಪಯೋಗಿಸಲಾಗುವದು. ಹೆಣ್ಣು ಮಕ್ಕಳಿಗೆ, ಪುರುಷರಿಗೆ–ಹೀಗೆ ಎರಡು ಪ್ರತ್ಯೇಕ ವಸತಿ ಗೃಹಗಳಿವೆ. ಊಟದ ಮನೆಯು ಮಾತ್ರ ಸಾಮೂಹಿಕವಾಗಿ ಒಂದೇ ಉಂಟು. ಹೆಣ್ಣು ಮಕ್ಕಳ ಸಂಖ್ಯೆಯು ಸಾಕಷ್ಟು ಇರುವದರಿಂದ ಸಾಂಘಿಕ ಜೀವನದ ಕಾರ್ಯಕಲಾಪಗಳು ಬಹಳೇ ಸುವ್ಯವಸ್ಥಿತವಾಗಿ ಸಾಗುತ್ತಿವೆ. ಇಲ್ಲಿ ತರಬೇತಿ ಪಡೆಯುತ್ತಿರುವ ಹೆಣ್ಣು ಮಕ್ಕಳು ಸರತಿಯಂತೆ ಪ್ರತಿ ದಿನವೂ ತಾವು ಬಾಲಭವನದಲ್ಲಿ ಮಕ್ಕಳ ಜೋಪಾನ ಮಾಡುವ ಕಲಸವನ್ನೂ ನೋಡಿಕೊಳ್ಳುವರು. ಹೀಗಾಗಿ ಅವರಿಗೆ ಮಕ್ಕಳ ಜೋಪಾನದ ಶಿಕ್ಷಣವೂ ಪ್ರಾಯೋಗಿಕವಾಗಿ ದೊರಕುತ್ತಿದೆ. ಹಳ್ಳಿಯ ವಾತಾವರಣವು ಅವರನ್ನು ಯಾವ ಬಾಹ್ಯ ಆಕರ್ಷಣೆಗೂ ಬಿಡುವದಿಲ್ಲ. ಸಾಂಘಿಕ ಜೀವನ, ಮೂಲೋದ್ಯೋಗಗಳು ಒಳ್ಳೇ ಅಚ್ಚುಕಟ್ಟಾಗಿಯೂ, ಸುವ್ಯವಸ್ಥಿತವಾಗಿಯೂ, ನಡೆಯುತ್ತಿವೆ. ಸ್ವಾಧ್ಯಾಯದ ವ್ಯವಸ್ಥೆಯೂ ಕೂಡ, ಚಿತ್ತಾಕರ್ಷಕವಾಗಿದೆ. ರಾತ್ರಿಯಲ್ಲಿ ಶಿಕ್ಷಕ–ಶಿಕ್ಷಿಕೆಯರ ಮೇಲ್ವಿಚಾರಣೆಯಲ್ಲಿ ಒಂದೆಡೆಗೆ ಗುಂಪಾಗಿ ಕುಳಿತು ಅಧ್ಯಯನ ಮಾಡುತ್ತಿರುತ್ತಾರೆ. ಆ ವೇಳೆಯಲ್ಲಿ ಯಾರೂ ಹರಟೆಕೊಚ್ಚರು. ಬೇಜಾರು ಬಂದರೆ ಮುಂದಿದ್ದ ಡೆಸ್ಕಿನ ಮೇಲೆ ಹಣೆಯಿಟ್ಟು ನಿದ್ರಿಸುವರೇ ವಿನಃ, ಮಾತನಾಡಿಸಿ ಇನ್ನೊಬ್ಬರ ಅಭ್ಯಾಸವನ್ನು ಕೆಡಿಸಲಾರರು. ಮದ್ರಾಸ ಪ್ರಾಂತದ ಪ್ರಾಥಮಿಕ ಶಿಕ್ಷಕರ ತರಬೇತಿ ಸಂಸ್ಥೆಗಳ ಅಭ್ಯಾಸ ಪತ್ರಿಕೆಯ ಕ್ರಮವನ್ನು ಇಲ್ಲಿಯೂ ಅನುಸರಿಸಲಾಗುತ್ತಿದೆ. ಅಥವಾ ಇಲ್ಲಿಯ ಅಭ್ಯಾಸ ಪತ್ರಿಕೆಯನ್ನು ಆದರ್ಶವಾಗಿಟ್ಟುಕೊಂಡು ಅದನ್ನು ರಚಿಸಲಾಗಿದೆ ಎಂದೂ ಹೇಳಬಹುದು. ಅಭ್ಯಾಸ ಪತ್ರಿಕೆಯ ಸ್ಥೂಲರೂಪ ಹೀಗಿದೆ:—

ಸಾಮಾನ್ಯ ಭಾಗ–ಅ

೧) ಶರೀರ ಶಾಸ್ತ್ರ–ಆರೋಗ್ಯ (ಶಾರೀರಿಕ ಶಿಕ್ಷಣ ಸಹಿತ)
೨) ಕೈತೋಟ, ಒಕ್ಕಲುತನ ಹಾಗೂ ಮಹಾನಸ ಕಾರ್ಯ
೩) ನೂಲು–ನೆಯ್ಗೆ ಹಾಗೂ ಇನ್ನುಳಿದ ಮೂಲೋದ್ಯೋಗಗಳು.
೪) ಸಾಂಘಿಕ ಜೀವನ ತರಬೇತಿ ಮತ್ತು ಸಾಂಸ್ಕೃತಿಕ ಚಟುವಟಿಕೆಗಳು
೫) ಪ್ರಯೋಗ ಶಾಲೆಯಲ್ಲಿ ಕಲಿಸುವ ಕಾರ್ಯ

ಅಭ್ಯಾಸ ವಿಷಯಗಳು ವಿಶೇಷ–ಭಾಗ–ಬ

೧) ಶೈಕ್ಷಣಿಕ ಮಾನಸಶಾಸ್ತ್ರ ಹಾಗೂ ಮಗುವಿನ ಅಭ್ಯಾಸ
೨) ಜೀವನ ಶಿಕ್ಷಣ ತತ್ವಗಳು ಮತ್ತು ಶಾಲಾಡಳಿತೆ
೩) ಕಲಿಸುವ ಪದ್ಧತಿಗಳು ಮತ್ತು ಸಾಮಾನ್ಯ ಭಾಷೆ
೪) ಇಂಗ್ಲೀಷ ಕಲಿಸುವ ಪದ್ಧತಿಗಳು (ಕೇವಲ ಹಿರಿಯ ವಿಭಾಗದವರಿಗೆ ಮಾತ್ರ)

ಇಲ್ಲಿಯ ಶಿಕ್ಷಕ ವರ್ಗವೂ ಸಮರ್ಥವಾಗಿದೆ. ಸಹ ಶಿಕ್ಷಣ ಸಂಸ್ಥೆಯಾಗಿರುವದರಿಂದಲೂ ಪ್ರೌಢ ಜನರೇ ತರಬೇತಿಗೆ ಬರುತ್ತಿರುವದರಿಂದಲೂ, ಮೇಲ್ವಿಚಾರಕರು ಒಳ್ಳೇ ದಕ್ಷತೆಯನ್ನು ವಹಿಸುತ್ತಿರುವರಲ್ಲದೆ, ಜಟಿಲ ಸಮಸ್ಯೆಗಳೇನಾದರೂ ಉದ್ಭವಿಸಿದಲ್ಲಿ ಒಳ್ಳೆ ಚಾಣಾಕ್ಷತನದಿಂದ ಹಿತವಾಗುವ ದಾರಿಯಲ್ಲಿ ಬಿಡಿಸುವರು. ಈ ಸಂಸ್ಥೆಯ ಪರವಾಗಿ ವರುಷದಲ್ಲಿ ಮೂರು ಸಲ ವಿಚಾರ ಗೋಷ್ಠಿಗಳು, ಚರ್ಚೆಗಳು, ಸಭೆಗಳು, ಪ್ರಾಥಮಿಕ ಶಿಕ್ಷಕರಿಗಾಗಿ ನಡೆಯುತ್ತಿದ್ದು, ಪ್ರಾಥಮಿಕ ಶಿಕ್ಷಣದ ಆದರ್ಶದಲ್ಲಿಯೂ ಜೀವನ ಶಿಕ್ಷಣದ ಪ್ರಗತಿ, ಪರಿಶೀಲನೆಯು ನಡೆದು ಬಹುಜನರಿಗೆ ಸಂಸ್ಥೆಯು ಮಾರ್ಗದರ್ಶನ ಮಾಡುತ್ತಿರುವದು.

ಕುಮಾರಪ್ಪ ಔದ್ಯೋಗಿಕ ವಿಭಾಗ

ಗಾಂಧೀಜಿಯ ಸುಪ್ರಸಿದ್ಧ ಅರ್ಥಶಾಸ್ತ್ರಜ್ಞರೆನಿಸಿದ ಜೆ. ಸಿ. ಕುಮಾರಪ್ಪನವರ ಹೆಸರನ್ನು ಈ ವಿಭಾಗಕ್ಕೆ ಇಡಲಾಗಿದೆ. ಗಾಂಧೀಜಿ, ಪಂಡಿತಜೀ–ಇವರಿಗೆ ಈ ಆಶ್ರಮದಲ್ಲಿ ಯಾವ ಆದರ, ಪೂಜ್ಯ ಭಾವನೆಗಳಿವೆಯೋ,

ಅವೇ ಭಾವನೆಗಳು ಈ ಅರ್ಥಶಾಸ್ತ್ರಜ್ಞನ ವಿಷಯದಲ್ಲಿಯೂ ಇವೆ. ಈ ವಿಭಾಗದಲ್ಲಿ ಅಚ್ಚುಕೂಟ, ಕೈಯಿಂದ ಭತ್ತ ಕುಟ್ಟುವದು, ಕುಚ್ಚಕ್ಕಿ ತಯಾರಿಸುವದು, ಗಾಣ, ಸಾಬೂಮು ತಯಾರಿಸುವದು, ಕಾಗದ ತಯಾರಿಸುವದು, ಕಮ್ಮಾರಿಕೆಯ ಕೆಲಸದ ವಿಭಾಗ, ಖಾದೀ ವಸ್ತ್ರಾಲಯ ನೊದಲಾದ ಶಾಖೆಗಳಿದ್ದು, ಅವು ಆ ಆ ಸಾಧನಗಳನ್ನು ತಯಾರಿಸುವ ಕೇಂದ್ರಗಳಾಗಿವೆಯಲ್ಲದೆ, ವಿದ್ಯಾರ್ಥಿಗಳಿಗೆ ತರಬೇತಿ ಕೊಡುವ ಆಲಯಗಳೂ ಎನಿಸಿವೆ. ಆ ಆ ಕಸಬು ತೆಗೆದುಕೊಂಡ ವಿದ್ಯಾರ್ಥಿಗಳು ಇಲ್ಲಿ ಬಂದು ಪ್ರಯೋಗ ಮಾಡಿ ತರಬೇತಿ ಪಡೆಯುತ್ತಿರುವದುಂಟು. ಹೀಗಾಗಿ ಈ ವಿಭಾಗವು ದ್ವಿಮುಖ ಉದ್ದೇಶವನ್ನು ಸಾಧಿಸುತ್ತಿದೆಯಲ್ಲದೆ ಕುಮಾರಪ್ಪನವರ ಹೆಸರಿಗೆ ಅನ್ವರ್ಥಕವೆನಿಸಿದೆ.

ಆಶ್ರಮದ ಕೆಲ ವೈಶಿಷ್ಟ್ಯಗಳು

(ಅ) ಪ್ರಾರ್ಥನೆ

ಗಾಂಧೀ ಗ್ರಾಮದ ಕೆಲ ಚಟುವಟಿಕೆಗಳು ತನ್ಮೂನೇ ಆದ ವೈಶಿಷ್ಟ್ಯವನ್ನು ಪಡೆದಿವೆ. ಪ್ರಾರ್ಥನೆಯು ಮನ ಸೆಳೆಯುವ ಒಂದು ವಿಶೇಷವು. ನಿತ್ಯದಲ್ಲಿ ಬೆಳಗಿನ ಆರು ಘಂಟೆಗೆ ಆ ಆ ಸಂಸ್ಥೆಗಳ ವಿದ್ಯಾರ್ಥಿಗಳು ತಮ್ಮ ತಮ್ಮ ವಿಭಾಗಗಳಲ್ಲಿಯೇ ಪ್ರಾರ್ಥನೆಯನ್ನು ನಡೆಯಿಸುವರು. ಇಲ್ಲಿ ಪ್ರಾತಃಕಾಲದ ಪ್ರಾರ್ಥನೆಗಿಂತಲೂ ಸಾಯಂ ಪ್ರಾರ್ಥನೆಗೆ ವಿಶೇಷ ಮಹತ್ವವಿದೆ. ಅದಕ್ಕಾಗಿ ನಿರ್ಮಿಸಲಾದ 'ಅನ್ನಪೂರ್ಣಾ' ಮಂದಿರದಲ್ಲಿ ನಿತ್ಯವೂ ಸಾಯಂಕಾಲ ೭ ಘಂಟೆಗೆ ಪ್ರಾರ್ಥನೆಯು ನಡೆಯುತ್ತದೆ. ೬-೪೫ಕ್ಕೆ ಸುಮಾರು ೫ ನಿಮಿಷಗಳ ವರೆಗೆ ಒಂದೇ ಸವನೆ ಶ್ರುತಿ ಹಿಡಿದು ಗಂಟೆ ಬಾರಿಸುತ್ತದೆ. ಆ ಗಂಟೆ ಬಾರಿಸುವಿಕೆಯಲ್ಲಿಯೂ ಒಂದು ಕಲೆಯಿದೆ. ಅದರ ಆ ನಿನಾದದಲ್ಲಿ ಒಂದು ಮಾಧುರ್ಯವಿದೆ. ಗಂಟೆಯಾಗುತ್ತಲೇ ಸಾಯಂಕಾಲದಲ್ಲಿ ಹತ್ತು ದಿಕ್ಕಿನಿಂದಲೂ ಹಕ್ಕಿಗಳು ಬಂದು ಗೂಡು ಸೇರುವಂತೆ ಎಲ್ಲ ಸಂಸ್ಥೆಗಳಿಂದಲೂ ಹರಿ-ಕಿರಿಯರೆನ್ನದೆ ಅನ್ನಪೂರ್ಣಾ ಮಂದಿರದತ್ತ ಧಾವಿಸುತ್ತಾರೆ. ಸಾಮಾನ್ಯವಾಗಿ ಆಶ್ರಮವಾಸಿಗಳೆಲ್ಲರೂ ಅಲ್ಲಿ ಬಂದು ಸೇರುತ್ತಾರೆ. ಸರಿಯಾಗಿ ೬ ಗಂಟೆಗೆ "ಯಂ ಬ್ರಹ್ಮಾ ವರುಣೇಂದ್ರರುದ್ರ ಮರುತಃ...." ಎಂಬ ಉಪನಿಷದ್ವಾಕ್ಯ ದಿಂದ ಪ್ರಾರ್ಥನೆಯು ಪ್ರಾರಂಭವಾಗುತ್ತದೆ. ಪ್ರಾರ್ಥನೆ ಯನ್ನು ನಡೆಯಿಸಿಕೊಂಡು ಹೋಗುವವರು ಹೆಣ್ಣು ಮಕ್ಕಳು. ಬೇರೆ ಬೇರೆ ಪ್ರಾರ್ಥನಾ ಪದ್ಯಗಳಾಗುವವಲ್ಲದೆ, ನಿತ್ಯವೂ ಮೂರೂ ಜನ ಪ್ರಾಧ್ಯಾಪಕರು ಬೇರೆ ಬೇರೆ ಧರ್ಮ ಪಂಗಡಗಳ ಮಹಾನುಭಾವರ ಗ್ರಂಥಗಳಿಂದ ಆಯ್ದ ನುಡಿಗಳನ್ನು ಓದುತ್ತಾರೆ. ಇಂಗ್ಲೀಷ ಭಾಷೆಯಲ್ಲಿಯ ಮಾತುಗಳನ್ನು ಓದಿ, ಪುನಃ ತಮಿಳಿನಲ್ಲಿ ಭಾಷಾಂತರಿಸು ತ್ತಾರೆ. ಕೊನೆಗೆ 'ರಾಮ-ಧುನ್'ದಿಂದ ಪ್ರಾರ್ಥನೆಯು ಮುಗಿಯುತ್ತದೆ. ಕನಿಷ್ಠ ೨೦ ನಿಮಿಷಗಳ ವರೆಗಾದರೂ ಪ್ರಾರ್ಥನೆಯು ನಡೆಯುತ್ತದೆ. ಒಂದೊಂದು ದಿನ ಡಾಯರೆಕ್ಟರರಾದ ಶ್ರೀ ರಾಮಚಂದ್ರನ್‌ರವರು ಪ್ರಾರ್ಥ ನೋತ್ತರ ಭಾಷಣ ಮಾಡುತ್ತಾರೆ. ಅವರು ಇಂಗ್ಲೀಷಿ ನಲ್ಲಿ ಭಾಷಣ ಮಾಡುತ್ತಾರೆ. ಇನ್ನೊಬ್ಬರು ಅದನ್ನು ತಮಿಳಿನಲ್ಲಿ ಭಾಷಾಂತರಿಸುತ್ತಾರೆ. ಹೀಗಾಗಿ ಒಂದೊಂದು ದಿನ ೧೫ರಿಂದ ೨೫ ತಾಸಿನ ವರೆಗೆ ಪ್ರಾರ್ಥನಾ ಸಭೆಯು ನಡೆಯುತ್ತಿರುವದುಂಟು. ಇಷ್ಟು ದೀರ್ಘಕಾಲ ನಡೆದರೂ ಕೂಡಾ ಅಲ್ಲಿಯ ಶಾಂತಿಗೆ ಎಳ್ಳಷ್ಟೂ ಚ್ಯುತಿ ಬರುವದಿಲ್ಲ. ಮೂರು ವರುಷದ ಮಕ್ಕಳಿಂದ ಹಿಡಿದು ೭೦ ವರುಷದ ಮುದುಕರವರೆಗೆ ಸಿಟ್ಟಿನ್ನದೆ ಕುಳಿತಿರುತ್ತಾರೆ. ತಪ್ಪಿಯೂ ಸಹ ಗಳ ಮಾಡರು ಆ ಸಮಯದಲ್ಲಿ ಪ್ರಾರ್ಥನೆಯು ಮುಗಿದ ಮೇಲೆ ಕೂಡ ಯಾವ ಗದ್ದಲವನ್ನೂ ಮಾಡದೆ ತಮ್ಮ ತಮ್ಮ ಸ್ಥಳಗಳಿಗೆ ಕದಲಿ ಹೋಗುತ್ತಾರೆ.

ಪ್ರಾರ್ಥನೆಯ ವಾತಾವರಣಕ್ಕೆ, ಭಾರತೀಯ ಸಂಸ್ಕೃತಿಯು ಒಗ್ಗುವಂತೆ 'ಅನ್ನಪೂರ್ಣಾ' ಮಂದಿರ ವನ್ನು ಆ ಸಮಯಕ್ಕೆ ಸಿಂಗರಿಸುತ್ತಾರೆ. ವೇದಿಕೆಯ ಎದುರಿಗೆ ರಂಗುರಂಗಿನ ರಂಗವಲ್ಲಿಯನ್ನು ಕಮಲ ಪುಷ್ಪ ಅರಳಿದಂತೆ ಹಾಕಿ ಅದರ ಮೇಲೊಂದು ಮುಖ ಕಾಣು ವಂತಹ ಸ್ವಚ್ಛವಾದ ತಾಮ್ರ ಕಲಶವನ್ನು ಇಟ್ಟಿರುತ್ತಾರೆ. ಪೂರ್ಣ ಕುಂಭ ಪಾತ್ರದ ಎದುರಿನಲ್ಲಿ ಎತ್ತರವಾದ ಸಮೆಯೊಂದನ್ನಿರಿಸಿ, ದೀಪ ಹೊತ್ತಿಸಿರುವರು. ಪ್ರಾರ್ಥ ನೆಯ ಕಾಲಕ್ಕೆ ವಿದ್ಯುದ್ದೀಪಗಳನ್ನಾರಿಸುವರು. ಈ ಸಂಸ್ಕೃತಿಯ ಬೆಳೆಕಿನಂತಿರುವ ಸ್ಥಾನದೀಪಿಕೆಯ ಬೆಳಕಿ ನಲ್ಲಿಯೇ ಪ್ರಾರ್ಥನೆಯು ನಡೆಯುವದು. ಸ್ಥಾನದೀಪಿಕೆ, ಪೂರ್ಣ ಕುಂಭ ಪಾತ್ರೆಗಳು, ಪೂರ್ವಕಾಲದ ಋಷ್ಯಾ ಶ್ರಮಗಳ ನೆನಪು ಮಾಡಿಕೊಡುವವು. ಇಂಥ ಪವಿತ್ರ ವಾದ ಶಾಂತ ವಾತಾವರಣದಲ್ಲಿ ಪ್ರಾರ್ಥನೆಯು ನಡೆಯುವದು.

ನಮಗೆ ಈ ಪ್ರಸಂಗದಲ್ಲಿ ಒಂದು ಮಾತು ಮಾತ್ರ ಹಿಡಿಸಲಿಲ್ಲ. ಅವರು ಹೇಳುತ್ತಿರುವ ಸಂಸ್ಕೃತ ಶ್ಲೋಕಗಳ ಉಚ್ಚಾರವು ಮಾತ್ರ ನಮ್ಮ ಕರ್ಣಕ್ಕೆ ಸಮವೆನಿಸಲಿಲ್ಲ. ಅವರು 'ಶ'ಕಾರಕ್ಕೆ ಬದಲಾಗಿ 'ಸ'ಕಾರವನ್ನು ಉಚ್ಚರಿಸುವಂತೆ ಕೇಳುತ್ತಿತ್ತು. 'ಓಂ ಶಾಂತಿಃ' ಎಂಬುದನ್ನು 'ಓಂ ಸಾತಿ' ಎಂದೂ 'ಓಂ ಶಕ್ತಿ' ಎಂಬುದನ್ನು 'ಓಂ ಸಕ್ತಿ' ಎಂದೂ ಉಚ್ಚರಿಸುವದನ್ನು ಕೇಳಿ ನಮಗೆ ಹೇಗೋ ಅನಿಸಿತು! ಅವರೂ ಆ ಪವಿತ್ರ ವಾತಾವರಣವು ನಮ್ಮನ್ನು ವಿನಮ್ರರನ್ನಾಗಿ ಮಾಡಿತ್ತು.

ಬ) ವನಿತಾ ಬಳಗದ ಅಭಿಕ್ಯ

ಈ ಗ್ರಾಮವಾಸಿಗಳಲ್ಲಿ ಹೆಣ್ಣು ಮಕ್ಕಳ ಸಂಖ್ಯೆಯೇ ಹೆಚ್ಚೆಂದರೂ ಸರಿ. ಒಂದೆರಡು ಸಂಸ್ಥೆಗಳನ್ನು ಬಿಟ್ಟರೆ ಉಳಿದ ಎಲ್ಲ ಸಂಸ್ಥೆಗಳೂ ಸಹ ಶಿಕ್ಷಣದ ಸಂಸ್ಥೆಗಳಾಗಿವೆ. ಪ್ರತಿಯೊಂದರಲ್ಲಿಯೂ ಸುಮಾರು ಅರ್ಧದಷ್ಟು ವಿದ್ಯಾರ್ಥಿನಿಯರಿರುತ್ತಾರೆ. ಮೂಲೋದ್ಯೋಗದ ಕೆಲಸಗಳನ್ನು ಸಾಂಘಿಕ ಜೀವನದ ಕೆಲಸಗಳನ್ನು, ಒಟ್ಟಾಗಿಯೇ ಮಾಡುತ್ತಿರುವರು. ವಿದ್ಯಾರ್ಜನೆಗೆ, ಜೀವನ ನಿರ್ವಹಣೆಗೆ, ಬೇಕಾಗುವ ಸಾಮರ್ಥ್ಯವನ್ನು ಗಳಿಸುವಲ್ಲಿ 'ನಚಲಿಂಗಂ' ಎಂಬ ತತ್ವವನ್ನು ಧರಿಸುತ್ತಾರೆ. ಯಾವ ಚಟುವಟಿಕೆಯೇ ಇರಲಿ ಅಲ್ಲಿ ಹೆಣ್ಣು ಮಕ್ಕಳೇ ವಿಜೃಂಭಿಸುವದನ್ನು ಕಾಣಬಹುದಾಗಿದೆ. ಅಧ್ಯಾಪಕ ವರ್ಗದವರಲ್ಲಿ, ಕರಣಿಕರ ಬಳಗದಲ್ಲಿ, ಆಡಳಿತಗಾರರಲ್ಲಿ ಸ್ತ್ರೀ ಸಮಾಜವು ಸಾಕಷ್ಟಿರುವದು.

ಕ) ಸಾಂಸ್ಕೃತಿಕ ಚಟುವಟಿಕೆಗಳು

ದಕ್ಷಿಣಾದಿ ಸಂಗೀತವು ಇಲ್ಲಿಯ ಸಾಂಸ್ಕೃತಿಕ ಚಟುವಟಿಕೆಗಳ ವಿಶೇಷಾಂಗವು. ಚಿತ್ರ, ಸಂಗೀತ, ನೃತ್ಯ, ಸುಳುವು-ಹೊಳವಿನ ರಂಗೋಲಿ ಬರೆಯುವದು, ವಿಶೇಷ ಪ್ರಸಂಗಗಳಲ್ಲಿ ನಡೆಯುವವು. ಮೇಲಿಂದ ಮೇಲೆ ಗೋಷ್ಠಿಗಳನ್ನೂ ನೆರವೇರಿಸುವರು. ತಮಿಳು ನಾಡಿನ ಕವಿಗಳ, ಸಂತರ, ಮಹತ್ಪದ ಹುಟ್ಟಗಳ ಆಚರಣೆಗಳು ಜರಗುವವು. 'ಪೊಂಗಲ್' ಹಬ್ಬವು ತಮಿಳರಿಗೆ ಒಂದು ವಿಶೇಷವಾದ ಹಬ್ಬವು. ಅಂದು ಪ್ರತಿಯೊಂದು ಚಿಕ್ಕ ಗುಡಿಸಲಿನ ಮುಂದೆಯೂ ಸಾರಿಸಿ, ರಂಗವಲ್ಲಿಯನ್ನು ಹಾಕಿರುತ್ತಾರೆ.

[ಮುಂದುವರಿಯುವದು]

ಪ್ರಾಥಮಿಕ ಶಾಲಾ ಪ್ರಮಾಣಪತ್ರ ಪರೀಕ್ಷೆ, ಟ್ರೇನಿಂಗ ಕಾಲೇಜ; ಎಲಿಮೆಂಟರಿ ಮತ್ತು ಇಂಟರಮೀಡಿಯೆಟ್ ಗ್ರೇಡ ಮುಂ. ಡ್ರಾಯಿಂಗ ಪರೀಕ್ಷೆಗಳಿಗೆ—

ಜನಪ್ರಿಯವಾದ ಮತ್ತು ಸರಕಾರದಿಂದ ಮಂಜೂರಾದ ಒಂದೇ ಒಂದು ಪುಸ್ತಕ

ಆದರ್ಶ ಚಿತ್ರಕಲಾ

(Ideal Drawing)

ಶ್ರೀ ಎಸ್. ಕೆ. ಜೋಶಿ, ಮತ್ತು ಶ್ರೀ ಜಿ. ಡಿ. ವಾಲಿ.

ಎಲ್ಲ ದೊಡ್ಡ ಪುಸ್ತಕ ವ್ಯಾಪಾರಸ್ಥರಲ್ಲಿ ದೊರೆಯುವದು.

ಬೆಲೆ ೧—೧೨—೯ ಅಂಚೆವೆಚ್ಚ ಪ್ರತ್ಯೇಕ. ಐದು ಮತ್ತು ಐದಕ್ಕಿಂತ ಹೆಚ್ಚು ಪ್ರತಿ ತರಿಸಿಕೊಳ್ಳುವರಿಗೆ ಅಂಚೆ ವೆಚ್ಚವಿಲ್ಲ. ಇದು ಕನ್ನಡದಲ್ಲಿಯೂ ಸಿಗುತ್ತದೆ.

ಜಿ. ವಾಯ್. ರಾಣೆ

ಪ್ರಕಾಶಕರು, ೩೪೩, ಕಸಬಾ ಪೇಟ ಪುಣೆ.

೧೯೩೬ನೆಯ ಇಸವಿಯಿಂದ ಪ್ರಾರಂಭವಾಗುವ ಸಾಮಾನ್ಯ ಪ್ರಾ. ಶಾ. ಪ್ರ. ಪರೀಕ್ಷೆಯ ಅಭ್ಯಾಸ ಕ್ರಮವನ್ನು ಅನುಸರಿಸಿ ಬರೆದ

ಶೇಲಾರ ಕೃತ

ಪ್ರಾಥಮಿಕ ಭೂಮಿತಿ

[ಕ್ಷೇತ್ರಫಲ ಘನಫಲ ಸಹಿತ]

೪ ರಿಂದ ೭ ನೇಯ ವರ್ಗದ ವರೆಗಿನ ವಿಷಯವನ್ನೆಲ್ಲ ಒಳಗೊಂಡಿದೆ.

ಬೆಲೆ: ೧ರೂ. ೮ಆಣೆ ಮಾತ್ರ

ದೊರೆಯುವ ಸ್ಥಳ:—

ಸಾಯಿ ಪಬ್ಲಿಶಿಂಗ್ ಹಾವುಸ್,

ರೋಡ, ಧಾರವಾಡ.

ನಮ್ಮ ರಾಷ್ಟ್ರಪತಿ, ಡಾ. ರಾಜೇಂದ್ರ ಪ್ರಸಾದರು ಹಾಗೂ ವಿಯೆಟನಾಮ ಪ್ರಜಾರಾಜ್ಯದ ಅಧ್ಯಕ್ಷರಾದ ಡಾ. ಹೋ. ಚಿಮಿನ್ಹ್ ನವರು ಹನಾಯ ನಗರದಲ್ಲಿ ಪರಸ್ಪರರನ್ನು ಆಲಂಗಿಸುವಾಗ.

ಕೊಲಂಬೋದಲ್ಲಿ ನಿಲೋನದ ಹಿಂದಿನ ಪ್ರಧಾನ ಮಂತ್ರಿಗಳು, ರಾಷ್ಟ್ರಪತಿ ಡಾ. ರಾಜೇಂದ್ರ ಪ್ರಸಾದರನ್ನು ಅಭಿನಂದಿಸುತ್ತಿರುವಾಗ.

ಟೋಕಿಯೋದಲ್ಲಿ ಕೇಂದ್ರದ ಹಣಕಾಸಿನ ಮಂತ್ರಿ ಶ್ರೀ ಮುರಾರಜಿ ದೇಸಾಯಿ ಇವರು ಜಪಾನ ದೇಶದ ವ್ಯಾಪಾರಿ ಸಂಘದ ಅಧ್ಯಕ್ಷರೊಡನೆ ಸಂಭಾಷಣೆ ಮಾಡುತ್ತಿರುವಾಗ.

ನೇಪಾಳದ ಕಾಟಮಂಡು ನಗರದ ಬೀದಿಯಲ್ಲಿ ಪ್ರಧಾನ ಮಂತ್ರಿ ಶ್ರೀ ಜವಾಹರಲಾಲ ನೆಹರು ಇವರು ಕಾರಿನಲ್ಲಿ ಹೋಗುವಾಗ.

ಸೈಗಾಂವದಲ್ಲಿ ರಾಷ್ಟ್ರಪತಿ ಡಾ. ರಾಜೇಂದ್ರ ಪ್ರಸಾದರು ವಿಯೆಟನಾಮ ರಾಜ್ಯದ ಅಧ್ಯಕ್ಷ ಶ್ರೀ ನಗೋ ದಿನ್ ಡಾಯಮ್ ಜೊತೆಯಲ್ಲಿ.

ಫಿಲಿಪಾಯಿನ್ಸ್ ದೇಶದ ಅಧ್ಯಕ್ಷ ಕಾರ್ಲೋಸ ಪಿ. ಗ್ರೇಸಿಯಾ ಮತ್ತು ಡಾ. ಎಸ್. ರಾಧಾಕೃಷ್ಣನ್, ಸಂಭಾಷಣೆಯಲ್ಲಿದ್ದಾಗ.

ಲೋಕಸಭೆಯ ಅಧ್ಯಕ್ಷರಾದ ಶ್ರೀ ಅನಂತಶಯನಂ ಅಯ್ಯಂಗಾರ ಇವರು ಸ್ವಿಟ್ಜರ್ಲೆಂಡಿನ ರಾಷ್ಟ್ರೀಯ ಸಭೆಯ ಅಧ್ಯಕ್ಷರಾದ ಶ್ರೀ ಅಂಟೋನಿನ್ ನಾವೆಟ್ಟಿ ಇವರೊಂದಿಗೆ ಪ್ರಾಗ ನಗರದಲ್ಲಿ.

ಅಫಗಾನಿಸ್ತಾನಕ್ಕೆ ಹೊರಡುವ ಸಮಯಕ್ಕೆ, ಪಾಲಮ ವಿಮಾನ ನಿರ್ವಾಣದಲ್ಲಿ ಪ್ರಧಾನ ಮಂತ್ರಿ ಶ್ರೀ ಜವಾಹರಲಾಲ ನೆಹರು ಇವರು ನೆರದ ಜನಸಮೂಹಕ್ಕೆ ಅಭಿವಂದಿಸುವಾಗ.

ಪ್ರಧಾನಮಂತ್ರಿ ಶ್ರೀ ಜವಾಹರಲಾಲ ನೆಹರು ಅಫಗಾನಿಸ್ತಾನದ ರಾಜರೊಂದಿಗೂ (ಬಲಗಡೆ ನಿಂತವರು) ಮತ್ತು ಅಫಗಾನಿಸ್ತಾನದ ಪ್ರಧಾನ ಮಂತ್ರಿಗಳೊಂದಿಗೂ (ಎಡಗಡೆಗೆ ನಿಂತವರು) ಕಾಬೂಲಿನಲ್ಲಿ.

ಪ್ಯಾರೀಸನಲ್ಲಿ ನಮ್ಮ ಹಣಕಾಸಿನ ಮಂತ್ರಿ ಶ್ರೀ ಮುರಾರಜಿ ದೇಸಾಯಿ ಇವರು ಫ್ರಾನ್ಸಿನ ಹಣಕಾಸಿನ ಮಂತ್ರಿ ಶ್ರೀ ಎಮ್. ಅಂಟೊನಿನಿ ಇವರ ಜೊತೆಯಲ್ಲಿ ಸಂಭಾಷಣೆ ಮಾಡುತ್ತಿರುವಾಗ.

Regd. No. B. 5375

ಭಾಗ ೧ ಕವಿತಾ ಸಂಕಲನ ೧೫೦ **ನಾವು ನಮ್ಮವರು** ಭಾಗ ೨ ಕಥಾ ಸಂಕಲನ ೧೫೦

(ಪ್ರಾಥಮಿಕ ಶಿಕ್ಷಕ ಸಾಹಿತಿಗಳ ಫೋಟೊ ಪರಿಚಯ ಕಥೆ ಕವನಗಳು)

ಮಾನ್ಯ ಎ. ಸಿ. ದೇವೇಗೌಡರು ಶಿಕ್ಷಣಾಧಿಕಾರಿಗಳು [D. P. I.] ಮೈಸೂರು ರಾಜ್ಯ ಅವರ ಮುನ್ನುಡಿ.

ಮಾನ್ಯ ಸಿದ್ಧಯ್ಯ ಪುರಾಣಿಕ 'ಕಾವ್ಯಾನಂದ'ರು ಜಿ. ಸೆಕ್ರೆಟರಿ ಶಿಕ್ಷಣ ವಿಭಾಗ ಇವರ ಹಿನ್ನುಡಿಗಳು.

- ಕೇವಲ ೩ ರೂಪಾಯಿ [ಅಂಚೆಸೇರಿ] ವಾರ್ಷಿಕ ಚಂದಾ ಹಣದಲ್ಲಿ ೩ನೆಯ ಮಾಲೆಯ ೧-೩ನೆಯ ಕುಸುಮ ಪಡೆಯಿರಿ.
- ಪ್ರಾಥಮಿಕ ಶಿಕ್ಷಕರ ಕಥೆ, ಕಾದಂಬರಿ, ಕವನ, ನಾಟಕಾದಿ ಕೃತಿಗಳು ೪೦೦ ಪುಟಗಳಲ್ಲಿ.
- ಅಗಸ್ಟ ದಿಂದ ಅಗಸ್ಟಕ್ಕೆ ಒಂದು ವರುಷ ಬಿಡಿ ಕುಸುಮ ಚಂದಾದಾರರಿಗೆ ೪ ಜೆಲೆಯಲ್ಲಿ [ಅಂಚೆಬೇರೆ]
- ವರ್ಷದ ಮಧ್ಯದಲ್ಲಿ ಚಂದಾದಾರರಾದರೂ ಆ ವರ್ಷದ ಎಲ್ಲ ಪುಸ್ತಕಗಳು ದೊರೆಯುವವು.
- ಇಂದೇ ಚಂದಾಹಣ ಕಳಿಸಿ ತಮ್ಮದೇ ಆದ ಶಿಕ್ಷಕರ ಬಳಗವು ಬೆಳೆವಂತೆ ನೆರವಾಗಿರಿ. ಈ ಅಲ್ಪ ಹಣ ತಮ್ಮ ಶಿಕ್ಷಕ ಮಿತ್ರರ ಏಳ್ಗೆಗೆ ಮೀಸಲು. ಗೆಳೆಯರನ್ನು, ವಾಚನಾಲಯಗಳನ್ನು ಚಂದಾದಾರರನ್ನು ಮಾಡಿ ನೆರವಾಗಿರಿ.

ವಿವರಗಳಿಗೆ: **ಭಾರತೀ ಸಾಹಿತ್ಯ ಭಂಡಾರ** ಅಂಚೆ: **ಯರನಾಳ** ಜಿಲ್ಲೆ: **ಬಿಜಾಪುರ**

ಕಲ್ಯಾಣ ಕನ್ನಡ ಗುಡಿಯ ಕಾಣಿಕೆ

ಸುವರ್ಣ ಸಂಧಿ! ಸಚಿತ್ರ ಗ್ರಂಥ!! ಸುಂದರ ಮುದ್ರಣ!!!

"ಶಿಕ್ಷಣ-ಶಿಕ್ಷಕ-ದರ್ಶನ"

ಶಿಕ್ಷಕರಿಗೂ, ಶಿಕ್ಷಕ ವಿದ್ಯಾರ್ಥಿಗಳಿಗೂ, ಶಿಕ್ಷಣಾಭಿಮಾನಿಗಳಿಗೂ, ಉಪಯುಕ್ತವಾಗುವಂಥ, ತನು-ಮನ ತಣಿಸುವಂಥ, ಶಿಕ್ಷಣ ತಜ್ಞರಿಂದ ಪರಿಶೀಲಿಸಲ್ಪಟ್ಟಂಥ, ಭಾರತದಲ್ಲಿಯ ಮಾನ್ಯ ಮಂತ್ರಿವರ್ಯರಿಂದ, ರಾಜ್ಯಪಾಲರಿಂದ, ಶಿಕ್ಷಣಾಧಿಕಾರಿಗಳಿಂದ, ಪ್ರಿನ್ಸಿಪಾಲರಿಂದ, ಸಾಹಿತಿಗಳಿಂದ ಪ್ರಶಂಸೆ ಪಡೆದ ಅಭಿಪ್ರಾಯಗಳುಳ್ಳಂಥ, ಕರ್ನಾಟಕ ವಿಶ್ವವಿದ್ಯಾಲಯದ ಉಪ ಕುಲಪತಿಗಳಾದ ರ್ಯಾಂಗ್ಲರ್ ಶ್ರೀ ಡಿ. ಸಿ ಪಾವಟೆಯವರು ಮುನ್ನುಡಿ ಬರೆದಂಥ, ಅಮೋಘ ಗ್ರಂಥ.

ಶ್ರೀ ನಿಂಬಾಳ ಶಿಕ್ಷಕ ದಂಪತಿಗಳಿಂದ ಸಂಗ್ರಹಿಸಲ್ಪಟ್ಟಿದೆ. ಅಖಿಲ ಕರ್ನಾಟಕದ ಗಣ್ಯ ಶಿಕ್ಷಕ-ಶಿಕ್ಷಕಿಯರ ಬಣ್ಣ ಬಣ್ಣಗಳಲ್ಲಿ ಲಘು ಫೋಟೊ ಬ್ಲಾಕ್, ಲೇಖನ, ಪರಿಚಯಗಳುಳ್ಳಂಥ ೪೭೫ ಪುಟಗಳ ಅಮರ ಸಾಹಿತ್ಯ ಗ್ರಂಥ. ಕನ್ನಡದಲ್ಲಿ ಒಂದು ಉತ್ತಮ ಮಾದರಿಯ ಶೈಕ್ಷಣಿಕ ಉದ್ಗ್ರಂಥ.

ದಿ. ೧೫ ಆಗಸ್ಟ ಸ್ವಾತಂತ್ರ್ಯ ದಿನದಂದು ಮಾನ್ಯ ಶ್ರೀ ಎ. ಎಚ್. ದಳವಾಯಿ, ಎ. ಓ. ಸಾಹೇಬರ ಅಧ್ಯಕ್ಷತೆಯಲ್ಲಿ ಪ್ರೊ. ಬಿ. ಟಿ. ಸಾಸನೂರ ಅವರ ಅಮೃತಹಸ್ತದಿಂದ ಈ ಗ್ರಂಥ ಪ್ರಕಾಶನಗೊಂಡಿದೆ.

ವಿವರಗಳಿಗೆ ಇಂದೇ ಈಗಲೇ ಬರೆಯಿರಿ.

ಸಾದಾ ಪ್ರತಿ ೩ ರೂ.] ವ್ಯಾಪಾರಸ್ಥರಿಗೆ ಧಾರಾಳವಾದ ಕಮೀಷನ್. [ಸುಂದರ ಪ್ರತಿ ೪ ರೂ.

ನಿಳಾಸ :- ಶ್ರೀ ನಿಂಬಾಳ ಕಲ್ಯಾಣಪ್ಪ, ಪೋಸ್ಟ:— ತಾಂಬಿ, ಜಿಲ್ಲಾ:— ವಿಜಾಪುರ.

Printed by Shri S. F. Kattimani, at Manohar Power Printing Press, Hubli.
Edited & Published by Sjts. G. M. Joshi, B. M. Shiutri, S. R. Tatti & Smt. P. A. Bhaskar at the Kannada Jeevan Shikshan Office, Govt. Training College for Men, Dharwar

ಡಾ. ಫ. ಗು. ಹಳಕಟ್ಟಿಯವರು

ಬಿಡಿ ಪ್ರತಿ ೬ ಆಣೆ

ವಾ.ಚಂ. ೪ ರೂ.

ಜೀವನ ಶಿಕ್ಷಣ

— ಸಂಪಾದಕ ಮಂಡಲ —

ಸಂಚಾಲಕರು: ಶ್ರೀ ಎಮ್. ಜಿ. ಹಂದ್ರಾಳ, ಬಿ.ಎ.(ಆನರ್ಸ್),ಎಮ್.ಈಡಿ.,ಡಿ.ಬಿ.ಈಡಿ.,
ಎಜ್ಯುಕೇಶನಲ್ ಇನಸ್ಪೆಕ್ಟರ, ಧಾರವಾಡ,

ಪ್ರಧಾನ ಸಂಪಾದಕರು: ಶ್ರೀ ಜಿ. ಎಮ್. ಜೋಶಿ,
ಪ್ರಿನ್ಸಿಪಾಲ, ಗಂಡು ಮಕ್ಕಳ ಸರಕಾರಿ ಟ್ರೇನಿಂಗ ಕಾಲೇಜ, ಧಾರವಾಡ.

— ಸದಸ್ಯರು —

ಶ್ರೀಮತಿ ಪಿ. ಎ. ಭಾಸ್ಕರ, ಲೇಡಿ ಸುಪರಿಂಟೆಂಡೆಂಟ, ಹೆಣ್ಣು ಮಕ್ಕಳ ಸರಕಾರಿ ಟ್ರೇನಿಂಗ ಕಾಲೇಜ, ಧಾರವಾಡ.

ಶ್ರೀ ಬಿ. ಎಂ. ಶಿಂತ್ರಿ, ಬಿ.ಎ.,ಬಿ.ಟಿ., ನಿವೃತ್ತ ಅಸಿಸ್ಟಂಟ ಎಜ್ಯುಕೇಶನಲ್ ಇನಸ್ಪೆಕ್ಟರ ದಕ್ಷಿಣ ಭಾಗ. (ಮುಂಬಯಿ ಕರ್ನಾಟಕ) ಹಾಗು ಗೌ. ಕಾರ್ಯದರ್ಶಿ ಮತ್ತು ಲಾಯಬ್ರೇರಿಯನ್, ಸಾಹಿತ್ಯ ಸಮಿತಿ ಲಿಂಗಾಯತ ವಿದ್ಯಾಭಿವೃದ್ಧಿ ಸಂಸ್ಥೆ, ಧಾರವಾಡ.

ಶ್ರೀ ಎಸ್. ಆರ್. ತಟ್ಟಿ, ರಿಟಾಯರ್ಡ ಪ್ರಿನ್ಸಿಪಾಲ, ಪ್ರಾಥಮಿಕ ಶಿಕ್ಷಕರ ಟ್ರೇನಿಂಗ ಕಾಲೇಜ, ನವಲಗುಂದ.

ಸಂಪುಟ ೯೫ ಫೆಬ್ರುವರಿ ೧೯೬೦ ಸಂಚಿಕೆ ೯

— ಪರಿವಿಡಿ —

೧.	ಸಂಪಾದಕೀಯ	....	....	೧
೨.	ಡಾಕ್ಟರ ಫ. ಗು. ಹಳಕಟ್ಟಿಯವರು	....	ಶ್ರೀ ಶಿಂತ್ರಿ ಬಸಪ್ಪನವರು	೨
೩.	ಮೂಲ ಶಿಕ್ಷಣ	....	ಶ್ರೀ ಎಂ. ಜಿ. ಹಂದ್ರಾಳ	೫
೪.	ಶಾಲೆಯು ಸಮಾಜದ ಕೇಂದ್ರವು	....	ಶ್ರೀ ಎಸ್. ಆರ್ ಮಕರಿ	೮
೫.	ಜೀವನ ಶಿಕ್ಷಣ ಶಾಲೆಗಳಲ್ಲಿ ಸಾಂಘಿಕ ಜೀವನದ ಸ್ಥಾನ	....	ಶ್ರೀಮತಿ ಪಿ. ಎ. ಭಾಸ್ಕರ	೧೦
೬.	ಜೀವನ ಶಿಕ್ಷಣ ತರಬೇತಿ ವರ್ಗಗಳ ದೈನಂದಿನ ಕಾರ್ಯಕ್ರಮ	....	ಕು. ವೇಣುಬಾಯಿ ಶೀಲಭದ್ರ	೧೧
೭.	ಧಾರವಾಡದಲ್ಲಿ ಜರುಗಿದ ಜೀವನ ಶಿಕ್ಷಣ ಸಪ್ತಾಹದ ಸಂಕ್ಷಿಪ್ತ ವರದಿ	....	ಶ್ರೀ ಎಸ್. ಪ್ಹಿ. ಪಂಡಿತ	೧೪
೮.	ಜೀವನ ಶಿಕ್ಷಣ ಶಾಲೆಗಳಲ್ಲಿ ಸಾಂಸ್ಕೃತಿಕ ಚಟುವಟಿಕೆಗಳು	....	ಕು. ಪದ್ಮಾವತಿ ಗುಬ್ಬಿ	೧೭
೯.	ಮೂಲ ಶಿಕ್ಷಣದಲ್ಲಿ ಪೋಷಕರ ಪಾತ್ರ	....	ಶ್ರೀ ಸಿ. ಜಿ. ವೆಂಕಟರಮಣಪ್ಪಟ್ಟಿ	೧೪
೧೦.	ಸುದ್ದಿಗಳು	....	....	೨೩
೧೧.	S. I. E. ಪರೀಕ್ಷೆಯ ಫಲಿತಾಂಶ	....	....	೨೫
೧೨.	ಸಮಾಜದ ಉನ್ನತಿಯನ್ನು ಸಾಧಿಸುವದೇ ಜೀವನ ಶಿಕ್ಷಣದ ಶ್ರೇಷ್ಠ ಆದರ್ಶ	....	ಶ್ರೀ ತಟ್ಟಿ ಶಾಮರಾಯರು	೨೬
೧೩.	ಪ್ರಾ. ಶಿ. ಪ್ರ. ಪ. ಪರೀಕ್ಷೆಯ ಪೇಪರ್‌ಸೆಟ್ಟಿಂಗ್ ೧೯೬೦	....	....	ಕವರ ೩

ಮುಖಪುಟದ ಬ್ಲಾಕು "ಕೃಷಿಂಚ" ಮಾಸಪತ್ರಿಕೆಯ ಕೃಪೆಯಿಂದ

ಸಂಪಾದಕೀಯ

ಡಾ. ಹಳಕಟ್ಟಿಯವರಿಗೆ ಸತ್ಕಾರ

ದಿನಾಂಕ ೧೭-೧-೧೯೬೦ನೇ ದಿನ ಧಾರವಾಡದಲ್ಲಿ ವಚನಶಾಸ್ತ್ರ ಪಿತಾಮಹರಾದ ಡಾ. ಫ. ಗು. ಹಳಕಟ್ಟಿಯವರ ಸಮಾಜ ಸೇವೆಯನ್ನು ಕುರಿತು ನಾಡಿನ ವಿದ್ವಜ್ಜನರು ಮುಕ್ತಕಂಠದಿಂದ ಹೊಗಳಿದರು. ಅವರಿಗೆ ೧೮ ಸಹಸ್ರ ರೂ. ಹಮ್ಮಿಣಿ ಅರ್ಪಿಸಿ ಸತ್ಕರಿಸಿ ಗೌರವಿಸಲಾಯಿತು. ಈ ಸಮಾರಂಭವು ಶ್ರೀ ಮ. ನಿ. ಪ್ರ. ಸ್ವ. ಮೃತ್ಯುಂಜಯ ಮಹಾಸ್ವಾಮಿಗಳವರ ದಿವ್ಯಸನ್ನಿಧಾನದಲ್ಲಿ ನಡೆಯಿತು. ಶ್ರೀ ಟಿ. ಎಚ್. ಎಮ್. ಸದಾಶಿವಯ್ಯನವರು ಅಧ್ಯಕ್ಷತೆಯನ್ನು ವಹಿಸಿದ್ದರು. ಮೃತ್ಯುಂಜಯ ಮಹಾಸ್ವಾಮಿಗಳು ಡಾ. ಹಳಕಟ್ಟಿಯವರಿಗೆ ೧೮ ಸಾವಿರ ರೂ. ಗಳ ನಿಧಿ ಸಮರ್ಪಣ ಮಾಡಿ ಆಶೀರ್ವದಿಸಿದ ನಂತರ, ನಾಡಿನ ಅನೇಕ ಮೇಧಾವಿಗಳು ಮಾತನಾಡಿ ಹಳಕಟ್ಟಿಯವರ ಕಾರ್ಯದ ಗುಣಗಾನ ಮಾಡಿದರು. ಶ್ರೀ ಜಲೂರ ವೆಂಕಟರಾಯರು, ಬ್ಯಾಂಗ್ಲರ ಡಿ. ಸಿ. ವಾವಟಿ ಅವರು, ಶ್ರೀ ಆರ್. ವಾಯ್. ಧಾರವಾಡಕರರು, ಶ್ರೀಮತಿ ಸರಸ್ವತೀಬಾಯಿ ಗೌಡರ ಅವರು, ಕವಿವರ್ಯ ಶ್ರೀ ಬೇಂದ್ರೆ ಅವರು, ಶ್ರೀ ಹಳಕಟ್ಟಿಯವರ ಸಮಾಜ ಸೇವೆಯನ್ನೂ, ಸದ್ದಿಲ್ಲದೆ ಸೇವೆ ಸಲ್ಲಿಸುವ ಅವರ ವೃತ್ತಿಯನ್ನೂ, ಅವರ ಪ್ರತಿಭೆಯನ್ನೂ, ನಿರಾಡಂಬರವಾಗಿ ವಚನ ಸಾಹಿತ್ಯದಲ್ಲಿ ಅವರು ೪೫ ವರ್ಷಗಳಿಂದ ನಡೆಸಿದ ಸಂಶೋಧನ ಕಾರ್ಯವನ್ನೂ ಹೊಗಳಿದರು. ಡಾ. ಹಳಕಟ್ಟಿಯವರಂತಹ ಋಷಿ ಸದೃಶ ಪಾವನ ಜೀವಿಗಳನ್ನೂ ಹಾಗೂ ಸ್ಥಿತಪ್ರಜ್ಞರನ್ನೂ ಸತ್ಕರಿಸುವ ಸುಯೋಗ ದೊರೆಯಲು ಪುಣ್ಯಬೇಕು. ವಚನ ಸಾಹಿತ್ಯಕ್ಕೆ ಸೇವೆ ಸಲ್ಲಿಸಿದ ಡಾ. ಫ. ಗು. ಹಳಕಟ್ಟಿಯವರ ಆಯುಷ್ಯ ಹಾಗೂ ಆರೋಗ್ಯ ಹೆಚ್ಚಾಗಲಿ ಎಂದು ನಾವು ಪರಮಾತ್ಮನಲ್ಲಿ ಪ್ರಾರ್ಥಿಸುವೆವು. (ಡಾ. ಹಳಕಟ್ಟಿಯವರ ಬಗ್ಗೆ ಶ್ರೀ ಬಿ. ಎಮ್. ಶಿಂತ್ರಿಯವರು ಬರೆದ ಲೇಖನವನ್ನು ಇದೇ ಸಂಚಿಕೆಯಲ್ಲಿ ಪ್ರಕಟಿಸಲಾಗಿದೆ.)

ಶಿಕ್ಷಕರಿಗೆ ಗೌರವ

ವಿಜಾಪೂರ ಜಿಲ್ಲೆಯ ಚಡಚಣ ಪ್ರಾಥಮಿಕ ಶಾಲೆಯ ಮುಖ್ಯೋಪಾಧ್ಯಾಯಕರೂ ಹಾಗೂ ನಮ್ಮ ಜೀವನ ಶಿಕ್ಷಣ ಪತ್ರಿಕೆಗೆ ಮೇಲಿಂದ ಮೇಲೆ ತಮ್ಮ ಬರೆಹಗಳನ್ನು ಕಳಿಸುವವರೂ ಆದ ಶ್ರೀ ಸಿಂಪಿ ಲಿಂಗಣ್ಣ, ಧಾರವಾಡ ಜಿಲ್ಲೆಯ ಹಂಸಭಾವಿ ದುರ್ಗದ ಹೈಸ್ಕೂಲಿನ ಮುಖ್ಯೋಪಾಧ್ಯಾಯಕರಾದ ಶ್ರೀ ಬಿ. ಟಿ. ಶೆಟ್ಟರ ಹಾಗೂ ಬೆಂಗಳೂರ ಜಿಲ್ಲೆಯ ಮೇಲನಹಳ್ಳಿ ಗರ್ಲ್ಸ್ ಮಿಡಲ್ ಸ್ಕೂಲಿನ ಮುಖ್ಯೋಪಾಧ್ಯಾಯಕರಾದ ಶ್ರೀ ಪಟ್ಟರಾಮಯ್ಯ ಇವರಿಗೆ ನಮ್ಮ ರಾಷ್ಟ್ರಪತಿಗಳು ರಾಷ್ಟ್ರೀಯ ಪಾರಿತೋಷಿಕಗಳನ್ನು ದಯಪಾಲಿಸಿದ ಆನಂದದಾಯಕ ಸುದ್ದಿಯು ನಮ್ಮನ್ನು ಹರ್ಷಭರಿತರನ್ನಾಗಿ ಮಾಡಿದೆ. ಈ ವ್ಯಕ್ತಿಗಳನ್ನು ಗೌರವಿಸುವ ಮೂಲಕ, ಭಾರತ ಸರಕಾರವು ಶಿಕ್ಷಕ ವೃತ್ತಿಯನ್ನೇ ಗೌರವಿಸಿದೆ. ಯಾವ ದೇಶದಲ್ಲಿ ಶಿಕ್ಷಕನಿಗೆ ಗೌರವವಿಲ್ಲವೋ ಆ ದೇಶವು ಮೇಲಕ್ಕೆ ಬರಲಾರದು. ಶಿಕ್ಷಕರನ್ನು ಗೌರವಾದರಗಳಿಂದ ಕಾಣುವ ಸತ್ಪರಂಪರೆಯು ನಮ್ಮ ಗ್ರಾಮ ಪಟ್ಟಣಗಳಲ್ಲಿ ಪುನರಪಿ ಬೆಳೆದುಕೊಂಡು ಬರಲಿ ಎಂದು ಹಾರೈಸದೆ ಇರಲಾರೆವು. ಬಹುಮಾನಿತರಾದ ನಮ್ಮ ಶಿಕ್ಷಕರಿಗೆ ನಮ್ಮ ಪತ್ರಿಕೆಯ ವತಿಯಿಂದ ದೀರ್ಘಾಯು ಆರೋಗ್ಯಗಳನ್ನು ಕೋರುವೆವು.

ಜೀವನ ಶಿಕ್ಷಣ ಸಪ್ತಾಹ

ಕೇಂದ್ರ ಸರಕಾರದ ಆದೇಶದ ಮೇರೆಗೆ ಇದೇ ಜನೆವರಿ ದಿ. ೨೦ ರಿಂದ ದಿ. ೨೬ರ ವರೆಗೆ ಭಾರತದಾದ್ಯಂತ "ಜೀವನ ಶಿಕ್ಷಣ ಸಪ್ತಾಹ"ವನ್ನು ಆಚರಿಸಲಾಯಿತು. ವರುಷ ವರುಷಕ್ಕೂ ಈ ಶಿಕ್ಷಣ ಕ್ರಮವು ಪ್ರಗತಿಪಥದಲ್ಲಿದೆ ಎಂದು ಧೈರ್ಯವಾಗಿ ಹೇಳಬಹುದು. ಜೀವನ ಶಿಕ್ಷಣದ ಬಗ್ಗೆ ಸಕಲರಿಗೂ ಅದರ ಪರಿಚಯವಾಗಬೇಕೆಂದೂ, ಅದರ ಕಾರ್ಯಕಲಾಪಗಳಲ್ಲಿ ಹೆಚ್ಚಿನ ಜೀವಕಳೆ ತುಂಬಲೂ ಈ ಸಪ್ತಾಹದಿಂದ ಬಹಳಷ್ಟು ಪರಿಣಾಮವಾಯಿತು.

ಇದರ ಅಂಗವಾಗಿ ಎಲ್ಲೆಡೆಗೂ ಸಭೆ-ಸಮ್ಮೇಳನಗಳು ಜರುಗಿದವು. ಜೀವನ ಶಿಕ್ಷಣ ಕ್ರಮದ ಬಗ್ಗೆ ವಿಚಾರ ಸಂಕಿರಣ, ಪ್ರದರ್ಶನ ಮುಂ. ಗಳು ಜರುಗಿದವು. ಇದಲ್ಲದೆ ಸಾಮೂಹಿಕ ಪ್ರಾರ್ಥನೆ, ನಗರ ಸಂಕೀರ್ತನೆ, ಸೂತ್ರಯಜ್ಞ ಹಾಗೂ ಜಿಲ್ಲೆಯ ಶಿಕ್ಷಣಾಧಿಕಾರಿಗಳಾದ ಶ್ರೀ ಎಮ್. ಜಿ. ಹಂದ್ರಾಳ ಇವರ ಬಾನುಲಿ ಭಾಷಣ (ಭಾಷಣವನ್ನು ಇದೇ ಸಂಚಿಕೆಯಲ್ಲಿ ಕೊಡಲಾಗಿದೆ) ಮುಂತಾದ ಕಾರ್ಯಕಲಾಪಗಳೂ ಆದವು.

ಧಾರವಾಡದಲ್ಲಿ ಜರುಗಿದ ಜೀವನ ಶಿಕ್ಷಣ ಸಪ್ತಾಹದ ವರದಿಯನ್ನು ಇದೇ ಸಂಚಿಕೆಯಲ್ಲಿ ಬೇರೆಡೆಯಲ್ಲಿ ಕೊಡಲಾಗಿದೆ.

ಗಣರಾಜ್ಯ ದಿನ

ಜನೆವರಿ ದಿ. ೨೬ ಈ ದಿನವು ಭಾರತಕ್ಕೆ ಹೆಮ್ಮೆ ಪಡುವ ದಿನವಾಗಿದೆ. ಈ ವರುಷವೂ ಆ ದಿನವನ್ನು ಒಳ್ಳೇ ಸಂಭ್ರಮದಿಂದಲೂ ಗೌರವದಿಂದಲೂ ಆಚರಿಸಲಾಯಿತು. ನಮ್ಮ ರಾಜ್ಯಘಟನೆಯನ್ನು ಆಚರಣೆಯಲ್ಲಿ ತಂದುದು ೧೯೫೦ನೆಯ ಇಸ್ವಿ ಜನೆವರಿ ೨೬ ರಂದು. ಆ ಇತಿಹಾಸ ಪ್ರಸಿದ್ಧ ದಿನವನ್ನು ಪ್ರತಿ ವರುಷ ಗಣರಾಜ್ಯ ದಿನವೆಂದು ಹೆಮ್ಮೆಯಿಂದ ಆಚರಿಸುತ್ತ ಇದ್ದೇವೆ. ಇಂದಿಗೆ ನಮ್ಮ ರಾಜ್ಯ ಘಟನೆಯ ಹತ್ತು ವರುಷಗಳು ತುಂಬಿ ಹನ್ನೊಂದನೆಯ ವರುಷದಲ್ಲಿ ಕಾಲಿಡುತ್ತಲಿದ್ದೇವೆ. ಈ ಹತ್ತು ವರ್ಷಗಳಲ್ಲಿ ಭಾರತವು ಇಡೀ ಪ್ರಪಂಚದಲ್ಲಿಯೇ ಹಿರಿಮೆಯ ಸ್ಥಾನವನ್ನು ಪಡೆದಿದೆ.

ಈ ಶುಭದಿನದಂದು ಇಲ್ಲಿಯ ವರೆಗೆ ಸಾಧಿಸಿದ ಪ್ರಗತಿಯನ್ನು ನಾವು ಕಲ್ಪಿಸಿಕೊಳ್ಳಬಹುದು. ಭಾರತವು ಈಗ ಜಗತ್ತಿಗೆಲ್ಲ ಶಾಂತಿಯುತ ಮಾರ್ಗದರ್ಶನ ಮಾಡುತ್ತಲಿದೆ. ಎಲ್ಲ ದೇಶಗಳು ಭಾರತದ ಕಡೆಗೆ ಹೊರಳಿ ಆಶಾಪೂರಿತ ನೇತ್ರಗಳಿಂದ ನೋಡುತ್ತಲಿವೆ. ನಮ್ಮ ಪ್ರಜಾ ಪ್ರಭುತ್ವವೂ ತನ್ನ ಆಂತರಿಕ ಶಕ್ತಿಗಳಿಂದ ಮುನ್ನಡೆಯುತ್ತಿದೆ. ದೇಶದ ಆರ್ಥಿಕ ಮಟ್ಟವನ್ನು ಏರಿಸಿ ಜನಸಾಮಾನ್ಯರ ಜೀವನದ ಮಟ್ಟವನ್ನು ಎತ್ತರಿಸುವ ಪ್ರಯತ್ನಗಳೂ ನಡೆದಿವೆ. ೨ನೇ ಪಂಚವಾರ್ಷಿಕ ಯೋಜನೆಯ ಅವಧಿಯು ಮುಗಿಯುತ್ತ ಬಂದಿದೆ. ೩ನೇ ಪಂಚವಾರ್ಷಿಕ ಯೋಜನೆಯ ಸಿದ್ಧತೆಯು ಕೂಡ ಭರದಿಂದ ಸಾಗಿದೆ. ಯೋಜನೆಗಳನ್ನು ಯಶಸ್ವಿ ರೀತಿಯಿಂದ ಕಾರ್ಯಗತ ಮಾಡ ಬೇಕಾದರೆ ಪ್ರತಿಯೊಬ್ಬ ಭಾರತೀಯನು ತನ್ನ ಪಾಲಿನ ತ್ಯಾಗ ಹಾಗು ಸೇವೆಯನ್ನು ಸಲ್ಲಿಸಬೇಕು ಎಂದು ನಮ್ಮ ಹಿರಿಯ ನಾಯಕರು ಕರೆ ಇತ್ತಿದ್ದಾರೆ. ಹಿರಿಯರು ಕೊಟ್ಟ ಸಂದೇಶದ ಮೇರೆಗೆ ಅವಶ್ಯವಿದ್ದ ತ್ಯಾಗವನ್ನು ಮಾಡಲು ನಾವೆಲ್ಲರೂ ಸಿದ್ಧರಾಗೋಣ.

ಗಾಂಧೀಜಿಯವರ ಪುಣ್ಯತಿಥಿಯ ಆಚರಣೆ

ಜನೇವರಿ ದಿ. ೩೦ ನೇ ದಿನವನ್ನು ಹುತಾತ್ಮರ ದಿನವೆಂದು ಪಾಲಿಸಲಾಯಿತು. ಭಾರತ ಪಿತಾಮಹರಾದ ಗಾಂಧೀಜಿಯವರು ಕಣ್ಮರೆಯಾಗಿ ಜಾನೇವಾರಿ ೩೦ ನೆಯ ದಿನಾಂಕಕ್ಕೆ ಹನ್ನೆರಡು ವರ್ಷಗಳಾದವು. ಆ ದಿನ ಗಾಂಧೀಜಿಯವರು ಮಾಡಿದ ಅಪಾರ ತ್ಯಾಗ ಹಾಗು ಸೇವೆಗಳನ್ನು ಸ್ಮರಣೆಗೆ ತಂದು ಅಹೋರಾತ್ರಿ ದೇಶದ ಸಲುವಾಗಿ ಪ್ರಾಣಾರ್ಪಣೆ ಮಾಡಿದ ಎಲ್ಲ ಹುತಾತ್ಮರನ್ನು ನೆನೆದು ಅವರನ್ನು ಗೌರವಿಸುವ ಸಲುವಾಗಿ ಸರಿಯಾಗಿ ಮುಂಜಾನೆ ೧೧ ಘಂಟೆಗೆ ಎರಡು ನಿಮಿಷಗಳ ಮೌನವನ್ನು ಆಚರಿಸಲಾಯಿತು. ಈ ದಿನ ಗಾಂಧೀಜಿಯವರ ಮೂಲ ತತ್ವಗಳಾದ ಸತ್ಯ, ಪ್ರೇಮ, ಅಹಿಂಸೆ, ತ್ಯಾಗ, ಸೇವೆ ಗಳನ್ನು ನೆನೆದು ಅವರು ಹಾಕಿಕೊಟ್ಟ ಸತ್ಪಥದಲ್ಲಿಯೆ ಮುಂದೆ ಹೋಗುವದಾಗಿ ಎಲ್ಲರೂ ಪ್ರತಿಜ್ಞೆ ಮಾಡುವರಾಗಬೇಕು.

ಡಾಕ್ಟರ ಫ. ಗು. ಹಳಕಟ್ಟಿಯವರು

ಬಿ.ಎ.,ಎಲ್.ಎಲ್.ಬಿ.,ಡಿ.ಲಿಟ್.

[ವಚನಶಾಸ್ತ್ರ ಪಿತಾಮಹರು]

ಲೇಖಕರು: **ಶ್ರೀ ಶಂತ್ರಿ ಬಸಪ್ಪನವರು,** ಬಿ.ಎ.,ಬಿ.ಟಿ.

ಮೊದಲ ಮಾತು

ಡಾಕ್ಟರ ಹಳಕಟ್ಟಿ ಫಕೀರಪ್ಪನವರು ವೀರಶೈವ ಸಂಸ್ಕೃತಿಯನ್ನೊಳಗೊಂಡ ಪುರಾತನ ಗ್ರಂಥಗಳನ್ನು ಸಂಶೋಧಿಸಿ ಅಭ್ಯಸಿಸಿ ಕನ್ನಡ ಸಾಹಿತ್ಯಕ್ಕೆ ಅಮೋಘವಾದ ಸೇವೆಯನ್ನು ಸಲ್ಲಿಸಿದುದು ಸರ್ವಶ್ರುತವಿದೆಯಷ್ಟೇ. ಅವರು ವಕೀಲರಾಗಿದ್ದುದು ಕೇವಲ ಹೆಸರಿಗೆ ಮಾತ್ರ. ಅವರು ತಮ್ಮ ವಕೀಲಿಯನ್ನು ಕೋರ್ಟು-ಕಚೇರಿಗಳಲ್ಲಿ ನಡೆಸದೆ ಕನ್ನಡ ಮಾತೆಯ ಸಮ್ಮುಖದಲ್ಲಿ ಮಾತ್ರ ನಡೆಸಿದರು. ಕನ್ನಡ ಮಾತೆಯ ನ್ಯಾಯಸ್ಥಾನದಲ್ಲಿ ವಚನ ಸಾಹಿತ್ಯದ ವಕಾಲತ್ತನ್ನು ವಹಿಸಿಕೊಂಡು ಸಾಹಿತ್ಯದ ಹಿರಿಮೆಯನ್ನು ಕನ್ನಡ ಜನತೆಗೆ ಮನವರಿ ಮಾಡಿಕೊಟ್ಟು ಕನ್ನಡ ಸಾಹಿತ್ಯದಲ್ಲಿ ಅದಕ್ಕೊಂದು ಅತ್ಯುಚ್ಚ ಸ್ಥಾನವನ್ನು ತಂದು ಕೊಟ್ಟುದನ್ನು ಅರಿ ಅಲ್ಲಗಳೆಯಲಾರರು. ಅದುವೇ ಅವರ ಜೀವನ ಹೆಗ್ಗುರಿ. ಆದುದರಿಂದ, ಅವರನ್ನು ವಚನ ಶಾಸ್ತ್ರ ಪಿತಾಮಹರೆಂದು ಕರೆಯುವದು ಎಲ್ಲ ದೃಷ್ಟಿಯಿಂದಲೂ ಯೋಗ್ಯವೇ ಸರಿ. ಹೋದ ತಿಂಗಳು ೧೭ನೆಯ ದಿನಾಂಕ ಧಾರವಾಡದ ಲಿಂಗಾಯತ ನಗರಭವನ (Lingayat

Town Hall) ದಲ್ಲಿ ಕನ್ನಡ ಜನತೆಯು ಅವರನ್ನು ಅತ್ಯಂತ ವಿಜೃಂಭಣೆಯಿಂದ ಸತ್ಕರಿಸಿ ೧೫೦೦೦ ರೂಪಾಯಿಗಳ ನಿಧಿಯೊಂದನ್ನು ಪ್ರೇಮಾಂತಃಕರುಣಗಳಿಂದರ್ಪಿಸಿದುದನ್ನು ಓದುಗರು ಇಷ್ಟರಲ್ಲಿಯೇ ಮರೆತಿರಲಿಕ್ಕಿಲ್ಲವಷ್ಟೇ. ಅಂತಹವರ ಅಲ್ಪ ಪರಿಚಯವನ್ನಿಲ್ಲಿ ಮಾಡಿಕೊಡಲು ಪ್ರಯತ್ನಿಸಲಾಗಿದೆ.

ಮನೆತನ ಹಾಗೂ ಪರಂಪರೆ

ಹಳಕಟ್ಟಿ ಮನೆತನವು ಧಾರವಾಡದಲ್ಲಿಯ ಹೊಸಯಲ್ಲಾಪುರ ಓಣಿಯಲ್ಲಿದ್ದು ಅದು ಎಂದಿನಿಂದಲೋ ಹೆಸರನ್ನು ಗಳಿಸಿಕೊಂಡು ಬಂದಿದೆ. ಡಾಕ್ಟರ ಹಳಕಟ್ಟಿಯವರ ತಂದೆಯವರ ಹೆಸರು ಶ್ರೀ ಗುರುಬಸಪ್ಪನವರು. ಅವರು ಧಾರವಾಡ ಗಂಡು ಮಕ್ಕಳ ಸರಕಾರಿ ಟ್ರೇನಿಂಗ ಕಾಲೇಜದಲ್ಲಿ ಟ್ರೇನಿಂಗ ಪಡೆದು ಶಿಕ್ಷಕನ ವೃತ್ತಿಯನ್ನು ಕೈಕೊಂಡು ಹಲವು ವರ್ಷ ಸೇವೆಯನ್ನು ಸಲ್ಲಿಸಿದರು. ಮ್ಯಾಟ್ರಿಕ್ ಪರೀಕ್ಷೆಯ ವರೆಗೆ ಅಭ್ಯಾಸ ಮಾಡಿ ಪಬ್ಲಿಕ್ ಸರ್ವೀಸ (Public service) ಪರೀಕ್ಷೆಯಲ್ಲಿ ಉತ್ತೀರ್ಣರಾದ ನಂತರ ಶಿಕ್ಷಕ ವೃತ್ತಿಯನ್ನು ಬಿಟ್ಟುಗೊಟ್ಟು ಅದೇ ಇಲಾಖೆಯಲ್ಲಿ ಕಾರಕೂನರಾಗಿ ದಕ್ಷಿಣ ಭಾಗದ (ಈಗಿನ ಮುಂಬಯಿ ಕರ್ನಾಟಕ) ಎಜ್ಯುಕೇಶನಲ್ ಇನಸ್ಪೆಕ್ಟರವರ ಕಚೇರಿಯಲ್ಲಿ ೧೯೧೨ನೆಯ ಇಸವಿಯಲ್ಲಿ ಸೆಕಂಡ ಕ್ಲಾರ್ಕರಾಗಿದ್ದಾಗ ನಿವೃತ್ತಿಯನ್ನು ಹೊಂದಿದರು ಮತ್ತು ಮುಂದೆ ೧೯೩೬ರಲ್ಲಿ ಲಿಂಗದೊಳಗಾದರು. ಅವರು ನಾಮಾಕಿಂತ ಲೇಖಕರಾಗಿದ್ದುದರಿಂದ ಸುಮಾರು ಇಪ್ಪತ್ತು ಪುಸ್ತಕಗಳನ್ನು ಬರೆದು ಪ್ರಕಟಿಸಿ ಕನ್ನಡ ವಾಙ್ಮಯಕ್ಕೆ ಅಪಾರ ಸೇವೆಯನ್ನು ಸಲ್ಲಿಸಿದರು. ಅವರ ಮನೆತನದಲ್ಲಿ ಸಾಹಿತ್ಯದ ಸೇವೆಯು ರಕ್ತಾನುಗತವಾಗಿ ಬಂದಂತೆ ತೋರುತ್ತಿದೆ. ಅವರ ಧರ್ಮಪತ್ನಿಯವರ ಹೆಸರು ಶ್ರೀಮತಿ ದಾನಮ್ಮನವರು. ಆ ಆದರ್ಶ ದಂಪತಿಗಳ ಹೊಟ್ಟೆಯಿಂದ ಶ್ರೀ ಫಕೀರಪ್ಪನವರು ದಿನಾಂಕ ೩-೭-೧೮೮೦ ರಂದು ಧಾರವಾಡದಲ್ಲಿ ಜನಿಸಿದರು. ಅವರಿಗೆ ಈರ್ವರು ತಮ್ಮಂದಿರಿದ್ದಾರೆ. ಅವರಲ್ಲೋರ್ವರಾದ ಶ್ರೀ ಬಸವಂತಪ್ಪನವರು ಶಿಕ್ಷಣ ಖಾತೆಯಲ್ಲಿ ಕಾರಕೂನರಾಗಿ ದಕ್ಷಿಣ ಭಾಗದ (ಈಗಿನ ಮುಂಬಯಿ ಕರ್ನಾಟಕದ) ಎಜ್ಯುಕೇಶನಲ್ ಇನ್‌ಸ್ಪೆಕ್ಟರವರ ಹೆಡ್ ಕ್ಲಾರ್ಕರಾಗಿ ೧೯೪೪ನೆಯ ಇಸವಿಯಲ್ಲಿ ನಿವೃತ್ತಿಯನ್ನು ಹೊಂದಿರುವರು. ಇನ್ನೋರ್ವರಾದ ಶ್ರೀ ಗಂಗಾಧರಪ್ಪನವರು ಬೆಳಗಾವಿಯ ಡಿ. ಎಸ್. ಪಿ. ಕಚೇರಿಯಲ್ಲಿ ಕಾರಕೂನರೆಂದು ಕೆಲಸ ಮಾಡುತ್ತಿದ್ದಾರೆ.

ಬಾಲ್ಯ ಮತ್ತು ಶಿಕ್ಷಣ

ಅವರ ಪ್ರಾಥಮಿಕ ಶಿಕ್ಷಣವು ಧಾರವಾಡದಲ್ಲಿ ೧೮೮೬ ರಿಂದ ೧೮೯೦ರ ವರೆಗೆ ಜರುಗಿತೆಂಬಂತೆ ತೋರುತ್ತಿದೆ, ಮತ್ತು ಮಾಧ್ಯಮಿಕ ಶಿಕ್ಷಣವು ೧೮೯೦ ರಿಂದ ೧೮೯೬ರ ವರೆಗೆ ಧಾರವಾಡ ಹಾಯಸ್ಕೂಲದಲ್ಲಾಯಿತು. ೧೮೯೬ನೆಯ ಇಸವಿಯಲ್ಲಿ ಮ್ಯಾಟ್ರಿಕ್ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿ ಉಚ್ಚ ಶಿಕ್ಷಣಕ್ಕೋಸ್ಕರ ಪುಣೆ ಪಟ್ಟಣದಲ್ಲಿಯ ಡೆಕ್ಕನ ಕಾಲೇಜವನ್ನು ಸೇರಿದರು. ಅಲ್ಲಿ ನಾಲ್ಕು ವರ್ಷಗಳ ವರೆಗೆ ಅಭ್ಯಾಸ ಮಾಡಿ ಬಿ. ಎ. ಪರೀಕ್ಷೆಗೆ ಕೆಮಿಸ್ಟ್ರಿ ಮತ್ತು ಫಿಜಿಕ್ಸ ಎಂಬ ಸಾಯಿನ್ಸ ವಿಷಯಗಳನ್ನು ತಮ್ಮ ಐಚ್ಛಿಕ ವಿಷಯಗಳನ್ನಾಗಿ ತಕ್ಕೊಂಡು ಮುಂಬಯಿಯಲ್ಲಿಯ ಸೇಂಟ ಝೇವ್ಹಿಯರ ಕಾಲೇಜದಿಂದ ೧೯೦೨ ರಲ್ಲಿ ಆ ಪರೀಕ್ಷೆಯನ್ನು ಪಾಸಾದರು. ಮುಂದೆ ಮುಂಬಯಿಯಲ್ಲಿಯ ಲಾ (Law) ಕಾಲೇಜನ್ನು ಸೇರಿ ಎರಡು ವರ್ಷಗಳ ವರೆಗೆ ಅಭ್ಯಾಸ ಮಾಡಿ ೧೯೦೪ ರಲ್ಲಿಎಲ್.ಎಲ್.ಬಿ. ಪರೀಕ್ಷೆಯಲ್ಲಿ ಉತ್ತೀರ್ಣರಾದರು. ಆ ಎರಡು ವರ್ಷಗಳಲ್ಲಿ ಅವರು ಎಮ್. ಎ. ಪರೀಕ್ಷೆಗೋಸ್ಕರವೂ ಅಭ್ಯಾಸ ಮಾಡಿ ಪರೀಕ್ಷೆಗೆ ಕೂಡ್ರದೇ ತಮ್ಮ ಪ್ರಯತ್ನವನ್ನು ಅಷ್ಟಕ್ಕೇ ಬಿಟ್ಟುಗೊಟ್ಟರು. ಇಲ್ಲಿಗೆ ಅವರ ವಿದ್ಯಾಭ್ಯಾಸವು ಮುಗಿದಂತಾಯಿತು.

ಸಾರ್ವಜನಿಕ ಸೇವೆ

ಅವರು ವಕೀಲಿ ಪರೀಕ್ಷೆಯನ್ನು ಪಾಸಾಗಿ ವಿಜಾಪುರದಲ್ಲಿ ತಮ್ಮ ವಕೀಲಿಯನ್ನು ಪ್ರಾರಂಭಿಸಿದರು. ಹಲವು ವರ್ಷಗಳ ವರೆಗೆ ಅವರು ವಿಜಾಪುರ ಮುನಸಿಪಾಲಿಟಿಯ ವ್ಹಾಯಿಸ ಪ್ರೆಸಿಡೆಂಟರಾಗಿದ್ದರಲ್ಲದೆ ಹಲವು ಸಲ ಮ್ಯಾನೇಜಿಂಗ ಕಮೀಟಿಯ ಜೇರಮನ್ನರಾಗಿದ್ದರು. ಆಗ ಮರಾಠಿ ಭಾಷೆಯ ಪ್ರಭಾವಕ್ಕೊಳಗಾಗಿದ್ದ ಆ ಶಹರದಲ್ಲಿ ಕನ್ನಡ ಸಾಲೆಗಳ ಸಂಖ್ಯೆಯನ್ನು ಹೆಚ್ಚಿಸಿ ಜನತೆಯಲ್ಲಿ ಕನ್ನಡದ ಬಗೆಗೆ ಅಭಿಮಾನವನ್ನು ಚಿಗುರಿಸಿದ ಶ್ರೇಯವು ಅವರಿಗೆ ಸಲ್ಲುತ್ತದೆ. ೧೯೧೪ರಲ್ಲಿ ವೀರಶೈವ ವಿದ್ಯಾವರ್ಧಕ ಸಂಸ್ಥೆಯನ್ನು ಸ್ಥಾಪಿಸಿ ಅಂದಿನಿಂದ ಒಂದು ಹಾಯಸ್ಕೂಲನ್ನು ನಡೆಯಿಸಿದರು. ಮುಂದೆ ಕೆಲ ವರ್ಷಗಳ ನಂತರ ಆ ಹಾಯಸ್ಕೂಲಿಗೆ ಶ್ರೀ ಸಿದ್ಧೇಶ್ವರ ಹಾಯಸ್ಕೂಲೆಂಬ ನಾಮಕರಣವಾಯಿತು. ಅದೇ ಸಂಸ್ಥೆಯು ಬಂಥನಾಳದ ಶ್ರೀ ಮಹಾತಿವಯೋಗಿಗಳವರ ದಿವ್ಯ ಅನುಗ್ರಹದಿಂದ ಈಗ ಬಲಿತು ದೊಡ್ಡದಾಗಿ ವಿಜಯ ಕಾಲೇಜನ್ನು ನಡೆಸುತ್ತಿದೆ. ೧೯೨೦ ರಿಂದ ೧೯೨೪ರ ವರೆಗೆ ಅವರು ಮುಂಬಯಿ ಪ್ರಾಂತಿಕ ಲೇಜಿಸ್ಲೇಟಿವ್ಹ

ಕೌನ್ಸಿಲ್ಲಿನ ಲೋಕಸಭೆಯುಕ್ತ ಸಭಾಸದರಾಗಿದ್ದರು. ೧೯೨೩ ರಿಂದ ೧೯೨೬ರ ವರೆಗೆ ಅವರು ಪಬ್ಲಿಕ್ ಪ್ರಾಸಿಕ್ಯೂಟರ ಮತ್ತು ಸ್ಪೀಡರರಾಗಿದ್ದರು. ಸುಮಾರು ೧೯೨೬ ರಿಂದ ವಿಜಾಪುರ ಮುನಸಿಪಾಲಟಿಯ ಸ್ಕೂಲ ಬೋರ್ಡಿನ ಚೇರಮನ್ನರೆಂದು ಆಯ್ಕೆಯನ್ನು ಹೊಂದಿ ಆ ಹುದ್ದೆಯಲ್ಲಿ ಬಿಟ್ಟೂ ಬಿಡದೆ ಆರು ವರ್ಷಗಳ ವರೆಗೆ ಕೆಲಸ ಮಾಡಿದರು. ಆ ಸುದೀರ್ಘಾವಧಿಯಲ್ಲಿ ವೃತ್ತಿ ಶಿಕ್ಷಣ (Vocational training) ಕ್ಕೆ ಮಹತ್ವವನ್ನು ಕೊಟ್ಟು ಪ್ರಾಥಮಿಕ ಶಾಲೆಗಳ ಅಭ್ಯಾಸ ಪದ್ಧತಿಯಲ್ಲಿ ಅದಕ್ಕೊಂದು ವಿಶಿಷ್ಟ ಸ್ಥಾನವಿರುವಂತೆ ಮಾಡಿದರು. ೧೯೩೮ರಲ್ಲಿ ಧಾರವಾಡದಲ್ಲಿ ನೆರವೇರಿದ ಕರ್ನಾಟಕ ಏಕೀಕರಣ ಸಮ್ಮೇಲನದ ಅಧ್ಯಕ್ಷರಾಗಿ ಒಮ್ಮತದಿಂದ ಚುನಾಯಿಲ್ಪಟ್ಟರು.

ಸಾಹಿತ್ಯದ ಸೇವೆ

ಮೇಲೆ ಹೇಳಿದಂತೆ ಅವರು ವಕೀಲರಾಗಿದ್ದುದು ಕೇವಲ ಹೆಸರಿಗೆ ಮಾತ್ರ. ಕನ್ನಡ ಸಾಹಿತ್ಯಕ್ಕೆ ತ್ರಿಕರಣ ಪೂರ್ವಕವಾಗಿ ಅರ್ಪಿಸಿದ ಸೇವೆಯೇ ಅವರ ನಿಜವಾದ ಸೇವೆಯು. ಅದುವೇ ಅವರ ಜೀವನದ ಹೆಗ್ಗುರಿ. ನಾಯಿನ್ನ ವಿಷಯಗಳನ್ನು ಜಿಜ್ಞಿಕ ವಿಷಯಗಳನ್ನಾಗಿ ತಕ್ಕೊಂಡ ಮಹಿಳಾಧರ ಒಲವು ಸಾಹಿತ್ಯದತ್ತ ಹೊರಳಿದ್ದು ಅವರಿಷ್ಟ ಇಚ್ಛೆಯೆಂದರೆ ಸಲ್ಲುವದು. ಅವರು ತಮ್ಮ ವಿಷಯವಸ್ತುವಿನ ಬಗ್ಗೆ ಹೀಗೆ ಬರೆದಿರುವುದುಂಟು. ಇವರು ಬಾಲ್ಯ ಅಷ್ಟಾವಧಾನಿ ಕುಳಿದ್ದಾರೆ. ಅವರು ಉಷ್ಣ ವಲಯದಲ್ಲಿ ಕಾರ್ಯವಿಯಲ್ಲಿ ಜಲಾ ನ ಮಾಡಿದ ತ್ತರವಾಸಿಯಿಂದಲೇ ಅಂದರೆ ಸುಮಾರು ೧೯೦೬ನೆಯ ಇಸವಿಯಿಂದಲೇ ಸಣ್ಣ ಗ್ರಂಥಗಳ ಪ್ರಕಟನ ಮತ್ತು ಸಂಶೋಧನವನ್ನು ಕೈಕೊಂಡಿದ್ದರೆಂಬ ಸಂಗತಿಯು ವಿಶೇಷವಾಗಿ ಪತ್ರಿಕೆಯು ೧೯೫೦ನೆಯ ಇಸವಿ ಡಿಸೆಂಬರ ತಿಂಗಳ ಸಂಚಿಕೆಯಲ್ಲಿ ಪ್ರಕಟವಾದ ಅವರ ಲೇಖನದಿಂದ ನಮಗೆ ಗೊತ್ತಾಗುತ್ತದೆ. ಆ ಲೇಖನದಲ್ಲಿ ಅವರು ತಮ್ಮ ಸಂಶೋಧನದ ಕಾರ್ಯದಲ್ಲಿ ಅನುಭೋಗಿಸಿದ ಕಷ್ಟ-ನಷ್ಟಗಳನ್ನೂ ಎಡರು-ತೊಡರುಗಳನ್ನೂ ಪ್ರಾಂಜಲ ಮನಸಿನಿಂದ ಹೃದಯಂಗಮವಾಗಿ ಬಣ್ಣಿಸಿದ್ದಾರೆ. ಅದರಂತೆ ೧೯೫೫ನೆಯ ಇಸವಿ ಫೆಬ್ರುವರಿ ತಿಂಗಳು ೧೫ನೆಯ ದಿನಾಂಕ ಧಾರವಾಡದ ಆಕಾಶವಾಣಿಯಲ್ಲಿ ಚಿತ್ರಿಸಿದ ತಮ್ಮ ಭಾಷಣದಲ್ಲಿ ಅವರು ತಮ್ಮ ಜೀವನದ ಹೋರಾಟವನ್ನೂ ಎಂತೆಂತಹ ಅನಿಷ್ಟ ಪ್ರಸಂಗಗಳಲ್ಲಿಯೂ ಸಹ ವಚನ ಗ್ರಂಥಗಳ ಸಂಶೋಧನದ ಕಾರ್ಯವನ್ನು ಸ್ಥಗಿತಗೊಳಿಸದ ಅವ್ಯಾಹತವಾಗಿ ಸಾಗಿಸಿಕೊಂಡು ಬಂದುದನ್ನೂ ಮಾರ್ಮಿಕವಾಗಿ ವಿವರಿಸಿದ್ದಾರೆ. ಅವರು ಶಿವಾನುಭವ ಪತ್ರಿಕೆಯನ್ನು ಹೊರಡಿಸಿದುದು ದಿನಾಂಕ ೧-೮-೧೯೫೬ ರಂದು. ಅಂದಿನಿಂದ ಇಲ್ಲಿಯ ವರೆಗೆ ನೂರಾರು ವಚನ ಗ್ರಂಥಗಳನ್ನೂ ಬೇರೆ ಹಳೆ ಗ್ರಂಥಗಳನ್ನೂ ಪ್ರಕಟಿಸಿ ಬೆಳಕಿಗೆ ತಂದಿದ್ದಾರೆ. ಒಬ್ಬನೇ ಒಬ್ಬ ವ್ಯಕ್ತಿಯು ಇಷ್ಟೆಲ್ಲ ಕೆಲಸ ಮಾಡುವದೆಂದರೆ ಇದು ಸಾಮಾನ್ಯ ಮಾತಲ್ಲವೆಂಬುದನ್ನು ಓದುಗರು ಗಮನಿಸುವದೊಳಿತು. ಇದಕ್ಕೋಸ್ಕರ ಅವರನ್ನು ಎಷ್ಟು ಅಭಿನಂದಿಸಿದರೂ ಕಡಿಮೆಯೇ ಸೈ. ವಚನ ಸಾಹಿತ್ಯದ ಮೇಲ್ಮೈಯನ್ನು ಜಗತ್ತಿಗೆ ಕೈಯೆತ್ತಿ ತೋರಿಸಿ ಕನ್ನಡ ಸಾಹಿತ್ಯದಲ್ಲಿ ಅದೇಕೆ ವಿಶ್ವದ ಸಾಹಿತ್ಯದಲ್ಲಿ ಅದಕ್ಕೊಂದು ಅತ್ಯುನ್ನತ ಸ್ಥಾನವನ್ನು ತಂದು ಕೊಟ್ಟ ಶ್ರೇಯವು ತುಂಬಾ ಅವರಿಗೇ ಒಸಲಾಗಿದೆ. ಈ ಮಾತನ್ನು ಮನದಂದು ಕನ್ನಡ ಸಾಹಿತ್ಯ ಪರಿಷತ್ತಿನ ಕಾರ್ಯಕಾರಿ ಸಮಿತಿಯು ೧೯೫೬ರಲ್ಲಿ ಬಳ್ಳಾರಿಯಲ್ಲಿ ಕಲಿತ ಅಧಿವೇಶನಕ್ಕೆ ಅವರನ್ನು ಅಧ್ಯಕ್ಷರನ್ನಾಗಿ ಒಕ್ಕೊರಲಿನಿಂದ ಚುನಾಯಿಸಿತು ಮತ್ತು ಅಖಿಲ ಭಾರತ ವೀರಶೈವ ಮಹಾಸಭೆಯ ಕಾರ್ಯವಾಹಕ ಸಮಿತಿಯು ಧಾರವಾಡದಲ್ಲಿ ೧೯೫೩ರಲ್ಲಿ ಜರುಗಿದ ಅಧಿವೇಶನಕ್ಕೆ ಅವರನ್ನು ಅಧ್ಯಕ್ಷರೆಂದು ಏಕ ಕಂಠದಿಂದ ಚುನಾಯಿಸಿ ಗೌರವಿಸಿತು. ಕನ್ನಡಮ್ಮನಿಗೆ ಸಲ್ಲಿಸಿದ ಅವರ ಈ ಅಪಾರ ಸೇವೆಯ ಪ್ರೀತ್ಯರ್ಥವಾಗಿ ಕರ್ನಾಟಕ ವಿಶ್ವವಿದ್ಯಾಲಯವು ಅವರಿಗೆ ಡಾಕ್ಟರೇಟ (ಡಿ. ಲಿಟ್.) ಪದವಿಯನ್ನು ೧೯೫೭ನೆಯ ಇಸವಿಯಲ್ಲಿ ದಯಪಾಲಿಸಿತು.

ಕೊನೆಯ ಮಾತು

ಜನಸೇವೆಯೇ ಈಶ ಸೇವೆಯೆಂದು ದುಡಿದವರ ಮಡಿತನವನ್ನು ಜನತೆಯು ಎಂದಿಗೂ ಮರೆಯಲಾರದು. ಕನ್ನಡ ಜನತೆಯು ಅವರಿಗೋಸ್ಕರ ನಿಧಿಯೊಂದನ್ನು ಹುಮ್ಮಸದಿಂದ ಕೇಖರಿಸಿ ಅವರನ್ನು ಧಾರವಾಡಕ್ಕೆ ಪ್ರೇಮಾದರಗಳಿಂದ ಬರಮಾಡಿಕೊಂಡು ಲಿಂಗಾಯತ ನಗರ ಭವನದಲ್ಲಿ ಕಿಕ್ಕಿರಿದು ತುಂಬಿದ್ದ ಸಭೆಯಲ್ಲಿ ಹಮ್ಮಿಣಿಯನ್ನರ್ಪಿಸಿ ಅವರನ್ನು ಅಟ್ಟಹಾಸದಿಂದ ಸತ್ಕರಿಸಿತು. ಇಂತಪ್ಪ ಡಾಕ್ಟರ ಹಳಕಟ್ಟಿ ಫಕೀರಪ್ಪನವರಿಗೆ ಆ ದಯಾಘನನಾದ ಪರಮಾತ್ಮನು ಇನ್ನೂ ಹೆಚ್ಚಿನ ಆಯುರಾರೋಗ್ಯವನ್ನೂ ಸಂಪದಭಿವೃದ್ಧಿಯನ್ನೂ ದಯಪಾಲಿಸೆಂದು ಪ್ರಾರ್ಥಿಸುತ್ತೇವೆ.

--: ಜಯ ಹಿಂದ :--

ಮೂಲ ಶಿಕ್ಷಣ

ಲೇಖಕರು : **ಶ್ರೀ ಎಂ. ಜಿ. ಹಂದ್ರಾಳ,** ಬಿ.ಎ.(ಆನರ್ಸ್), ಎಂ.ಎಡ್.

[ಧಾರವಾಡ ಆಕಾಶವಾಣಿ ಅವರ ಕೃಪೆಯಿಂದ]

ಮೂಲ ಶಿಕ್ಷಣದ ಮೂಲ ಪುರುಷರೆಂದರೆ ಮಹಾತ್ಮಾ ಗಾಂಧಿಯವರು. ೧೯೩೭ ರಲ್ಲಿ ರಾಜ್ಯ ಸರ ಕಾರಗಳಲ್ಲಿ ಕಾಂಗ್ರೆಸ್ ಮಂತ್ರಿ ಮಂಡಲಗಳು ಸ್ಥಾಪನೆ ಯಾದವು. ಈ ಕಾಲದಲ್ಲಿ ರಾಷ್ಟ್ರೀಯ ಶಿಕ್ಷಣವನ್ನು ರೂಪುಗೊಳಿಸಲು ಅನುವು ದೊರೆಯಿತು. ಆದುದರಿಂದ ಗಾಂಧೀಜಿಯವರು ಅದೇ ವರುಷ ಜುಲೈ ತಿಂಗಳಲ್ಲಿ ಹರಿ ಜನ ಪತ್ರಿಕೆಯಲ್ಲಿ ಹೊಸ ಶಿಕ್ಷಣದ ಬಗೆಗೆ ತಮ್ಮ ವಿಚಾರ ಗಳನ್ನು ಮೊಟ್ಟಮೊದಲು ಪ್ರಕಟಮಾಡಿದರು. ಅವರ ಮಾತುಗಳು ಹೀಗೆ ಇವೆ:—

" ಶಿಕ್ಷಣದಿಂದ ಮಗುವಿನ ಸಮನ್ವಿತ ವಿಕಾಸವಾಗ ಬೇಕು. ಸಾಕ್ಷರತೆ ಶಿಕ್ಷಣವಲ್ಲ. ಕೈಗಾರಿಕೆಯ ಮುಖಾಂ ತರ ಮಗುವಿನ ಶಿಕ್ಷಣವು ಆರಂಭವಾಗಬೇಕು. ಮಕ್ಕಳ ಕೆಲಸದಿಂದ ಉಂಟಾದ ಸಾಮಾನುಗಳನ್ನು ಸರಕಾರವು ಕೊಂಡಲ್ಲಿ ಶಿಕ್ಷಣವು ಸ್ವಾವಲಂಬಿಯಾಗಬಲ್ಲದು. ಇಂಥ ಶಿಕ್ಷಣ ಯೋಜನೆಯನ್ವಯ ಮಗುವಿನ ಮನಸ್ಸು ಚಾಗೂ ದೇಹ ಪೂರ್ತಿಯಾಗಿ ವಿಕಾಸ ಹೊಂದುವವು. ಕೈಗಾರಿಕೆ ಯನ್ನು ಯಾಂತ್ರಿಕವಾಗಿ ಕಲಿಸದೆ, ಶಾಸ್ತ್ರಬದ್ಧವಾಗಿ ಕಲಿಸಬೇಕು. ಆತ್ಮವಿಶ್ವಾಸವಿಲ್ಲದೆ ನಾನು ಹೀಗೆ ಬರೆ ಯಲ್ಲ; ಅನುಭವದ ಹಿನ್ನೆಲೆಯಿದೆ "

ಗಾಂಧೀಜಿಯವರ ಈ ಮಾತುಗಳಲ್ಲಿ ಹೊಸ ಶಿಕ್ಷಣದ ಅಂಶಗಳು ಸೂಕ್ಷ್ಮವಾಗಿ ಸೇರಿಕೊಂಡಿವೆ. ಶಿಕ್ಷಣ ವೆಂದರೆ ಬರಿಯ ಓದಿನ ಸಂಸ್ಕಾರವಲ್ಲ. ಅದು ಮಗುವಿ ನಲ್ಲಿ ಹುದುಗಿದ ಅಂತಶ್ಶಕ್ತಿಗಳ ಸಹಜವಾದ ವಿಕಾಸದ ವಿಧಾನ. ಮಗುವಿನಲ್ಲಿ ಕಂಡುಬರುವ ಕ್ರಿಯಾತ್ಮಕ ಜೈವ ತ್ಯಗಳನ್ನು ಜೀತರಿಸಿ, ಅವು ಪ್ರಜ್ವಲಿಸುವಂತೆ ಮಾಡು ವದು ಶಿಕ್ಷಣದ ಮಹತ್ವದ ಕಾರ್ಯ. ಶಿಕ್ಷಣವು ಮಗು ವಿನ ಅಖಂಡ ವ್ಯಕ್ತಿತ್ವದ ವಿಕಾಸಕ್ಕೆ ನೆರವಾಗಬೇಕು. ಮಗುವಿನ ದೇಹ, ಬುದ್ಧಿ, ನೀತಿ ಇವುಗಳ ಸಮನ್ವಿತ ವಿಕಾ ಸವಾಗಬೇಕು. ಜ್ಞಾನ ಪಡೆಯುವುದು ಶಿಕ್ಷಣದ ಒಂದು ಬಲವಾದ ಸಾಧನವು. ಅದುವೇ ಶಿಕ್ಷಣದ ಆದಿ–ಅಂತ್ಯ ವಲ್ಲ. ಚಿಕ್ಕ ಮಕ್ಕಳಿಗೆ ಜ್ಞಾನದೊರಕುವುದು ಕೇವಲ ಪುಸ್ತಕಗಳ ಮುಖಾಂತರವಲ್ಲ. ಅದು ಅವರು ಮಾಡುವ ಕ್ರಿಯೆಗಳಲ್ಲಿ ಅಡಗಿದೆ. ಮಗುವು ತನ್ನ ಇಂದ್ರಿಯಗಳನ್ನು ಬಳಿಸಿ; ಸುತ್ತಲಿನ ಜ್ಞಾನವನ್ನು ಮಾಡಿಕೊಳ್ಳುತ್ತಾನೆ. ಅದು ಏನು ? ಇದು ಏನು ? ಎಂದು ಆಗಾಗ ಪ್ರಶ್ನೆ ಮಾಡುವ ಪ್ರವೃತ್ತಿಯೇ ಜ್ಞಾನದ ಬಾಗಿಲನ್ನು ತೆರೆಯಿ ಸುತ್ತದೆ. ಈ ಜಿಜ್ಞಾಸು ಪ್ರವೃತ್ತಿಯು ಮಗುವನ್ನು ಕೆಲಸಕ್ಕೆ ತೊಡಗಿಸುತ್ತದೆ. ಕೆಲಸ ಮಾಡುವಾಗ ಅದರ ಕಾರ್ಯಕಾರಣ ಭಾವವನ್ನು ಹೆಣೆಯುತ್ತದೆ. ಕೈಕೊಂಡ ಕಾರ್ಯವನ್ನು ಪೂರ್ತಿಗೊಳಿಸಲು ಪ್ರೇರಿಸುತ್ತದೆ; ಒಂದು ಸಿದ್ಧಿಯು ರೂಪುಗೊಂಡು ಅದು ಅದರ ರಚನಾ ತ್ಮಕ ಪ್ರವೃತ್ತಿಯಲ್ಲಿ ಪರಿಣಮಿಸುತ್ತದೆ.

ಮಗುವು ಕೆಲಸದ ಮುಖಾಂತರ ಜ್ಞಾನವನ್ನು ಸಂಗ್ರಹಿಸುತ್ತಾನೆ. ತನ್ನ ನೈಹಿಕ ಬೆಳವಣಿಗೆಯನ್ನೂ, ನೈತಿಕ ಪೋಷಣೆಯನ್ನೂ, ಮಾಡಿಕೊಳ್ಳುತ್ತಾನೆ. ಕೈಯಿಂದ ಮೆದುಳಿಗೆ, ಮೆಯಿಂದ ಮಾನಕ್ಕೆ. ಮೈ–ಕೈ ಗಳಿಂದ ಬುದ್ಧಿ–ಹೃದಯಗಳಿಗೆ ಸಂಸ್ಕಾರವನ್ನುಂಟುಮಾ ಡುವುದು ಮೂಲ ಶಿಕ್ಷಣದ ವೈಶಿಷ್ಟ್ಯವಾಗಿದೆ. ಶಿಕ್ಷಣವು ಕೇವಲ ಬೋಧನೆಯಲ್ಲ. ಅದು ಅನುಭವ ಮೂಲ. ವ್ಯಕ್ತಿಯು ತನ್ನ ಜೀವನದಲ್ಲಿ ಅನೇಕ ಅನುಭವಗಳನ್ನು ಪಡೆಯುತ್ತಾನೆ. ಅನುಭವಗಳ ಪರಿಣಾಮವಾಗಿ ಅವನ ಜೀವನದಲ್ಲಿ ಒಂದು ಬಗೆಯ ತಿದ್ದುಪಡೆ ನಡೆಯುತ್ತದೆ. ಅದುವೇ ಅವನ ಸಂಸ್ಕಾರ; ಅವನ ನಿಜವಾದ ಶಿಕ್ಷಣ. ಆದುದರಿಂದ ಮೂಲ ಶಿಕ್ಷಣಕ್ಕೆ ಜೀವನ ಶಿಕ್ಷಣ ವೆಂದೂ ಕರೆಯುತ್ತಾರೆ. ಜೀವಿಯು ಜೀವಿಕೆಯ ಕಲೆ ಯನ್ನು ಜೀವಿಸಿಯೇ ಕಲಿಯಬೇಕು. ಎಂದು ಅಮೇರಿ ಕೆಯ ಶಿಕ್ಷಣತಜ್ಞ ಜಾನ್‌ಡ್ಯೂಯಿ ಅವರ ವಿಚಾರ ಪ್ರಣಾಲಿಯು ಇದೇ ಸೂತ್ರವನ್ನು ಆದರಿಸುತ್ತದೆ. ಮೂಲ ಶಿಕ್ಷಣ ಯೋಜನೆಯಲ್ಲಿ ಕೆಳಗಿನ ಸಂಗತಿಗಳು ಮಹತ್ವದ ಅಂಶಗಳಾಗಿವೆ.

೧) ಮೂಲಶಿಕ್ಷಣವು ಮಗುವಿನ ಅಖಂಡ ವಿಕಾಸ ವನ್ನು ಮಾಡುತ್ತದೆ; ಎಂದರೆ ಮಗುವಿನ ವ್ಯಕ್ತಿತ್ವವು ಇಡಿಯಾಗಿ ಬೆಳೆಯುತ್ತದೆ.

೨) ಮಗುವು ಜೀವಿಕೆಯ ಕಲೆಯನ್ನು ಅನುಭವಿಸಿ ಕಲಿಯುತ್ತಾನೆ.

೩) ಮಗುವು ಜ್ಞಾನವನ್ನು ಪುಸ್ತಕದ ಮುಖಾಂತರ ಮಾತ್ರಗಳಿಸದೆ, ತಾನು ಮಾಡುವ ಕೆಲಸದ ಮುಖಾಂತರ ಪಡೆಯುತ್ತಾನೆ; ಎಂದರೆ ಜ್ಞಾನವು ಕ್ರಿಯೆಯ ಸಂಗಾತಿಯಾಗಿ ದೊರೆಯುತ್ತದೆ; ಅರ್ಥಾತ್ ಜ್ಞಾನವು ಅನುಭವ ಜನ್ಯವಾಗಿ ಸಿಗುತ್ತದೆ.

೪) ಕೈಗಾರಿಕೆಗಳ ಮುಖಾಂತರ ಚಿಕ್ಕಮಕ್ಕಳಿಗೆ ಜ್ಞಾನವು ದೊರೆಯುತ್ತದೆ. ಕಾರಣ ಕೈ ಕುಶಲತೆಯ ತರಬೇತು ಶಿಕ್ಷಣದ ಜೊತೆಗೆ ಸಾಗುತ್ತದೆ.

೫) ಮೂಲ ಶಿಕ್ಷಣವು ಉದ್ಯಮ ಮೂಲ ಶಿಕ್ಷಣವು; ಎಂದರೆ ಒಂದು ಉದ್ಯೋಗವು ಶಿಕ್ಷಣದ ಮಾಧ್ಯಮವಾಗಿ ಸೇರುತ್ತದೆ. ಮೂಲ ಶಿಕ್ಷಣದ ಸಾಲೆಗಳಲ್ಲಿ ಉದ್ಯೋಗವು ಕೇಂದ್ರ ಸ್ಥಾನವನ್ನು ಪಡೆಯುತ್ತದೆ. ಉದ್ಯೋಗದ ದ್ವಾರ ಇತರ ಅಭ್ಯಾಸ ವಿಷಯಗಳನ್ನು ಕಲಿಸಲಾಗುತ್ತದೆ. ಆದುದರಿಂದ ಮೂಲ ಶಿಕ್ಷಣ ಪಡೆದ ಮಕ್ಕಳು ಉದ್ಯೋಗದಲ್ಲಿ ತರಬೇತು ಪೊಂದುವರು. ಅಷ್ಟೇ ಅಲ್ಲದೆ ಉದ್ಯೋಗ ಸ್ನಿಯತೆ, ಸ್ವಾವಲಂಬನ ಪ್ರವೃತ್ತಿ ಇವು ಸಹಜವಾಗಿ ವಿಕಾಸ ಪೊಂದುತ್ತವೆ.

೬) ಮೂಲ ಶಿಕ್ಷಣ ಸಾಲೆಯಲ್ಲಿ ಮಗುವು ತನ್ನ ವ್ಯಕ್ತಿತ್ವವನ್ನು ಸಾಮಾಜಿಕ ವರಿಸರದಲ್ಲಿಯೇ ಬೆಳೆಯಿಸಿ ಕೊಳ್ಳುತ್ತಾನೆ. ವ್ಯಕ್ತಿಯ ವ್ಯಕ್ತಿತ್ವವನ್ನು ವಿಕಾಸ ಮಾಡುವುದು ಶಿಕ್ಷಣದ ಗುರಿ ಎಂದು ಡಾ. ನನ್ ಅವರು ವ್ಯಕ್ತಪಡಿಸಿದ್ದಾರೆ. ಆದರೆ ವ್ಯಕ್ತಿಯ ವ್ಯಕ್ತಿತ್ವದ ನೈಜವಾದ ವಿಕಾಸಕ್ಕೆ ಸಾಮಾಜಿಕ ಸಂಪರ್ಕವು ಅಗತ್ಯವೆಂದೂ ನಿಜವಾದ ವ್ಯಕ್ತಿತ್ವವು ಸಾಮಾಜಿಕ ಮಾಧ್ಯಮದ ಮುಖಾಂತರವೇ ಪ್ರಕಟವಾಗುವುದೆಂದೂ ಡಾ. ನನ್ ಅವರೇ ಒಪ್ಪಿದ್ದಾರೆ. ಶಿಕ್ಷಣದ ದ್ವಿಮುಖವಾದ ಧ್ಯೇಯಗಳು ಎಂದರೆ ವ್ಯಕ್ತಿಯ ವ್ಯಕ್ತಿತ್ವದ ವಿಕಾಸ ಮತ್ತು ಸಾಮಾಜಿಕ ಹಿತ. ಇವೆರಡೂ ಮೂಲಶಿಕ್ಷಣದ ತತ್ವ ಪ್ರಣಾಲಿಯಲ್ಲಿ ಏಕ ಮುಖವಾಗಿ ಸಮರಸವಾಗಿವೆ. ಮೂಲ ಶಿಕ್ಷಣವನ್ನು ಪಡೆದ ಮಗುವು ಸಾಮಾಜಿಕ ಹಿತೈಷಿಯಾಗುವನು; ಆತ್ಮ ಸಿದ್ಧಿಯನ್ನು ಸಮಾಜ ಸೇವೆಯ ಮುಖಾಂತರ ಪಡೆಯಲು ಯತ್ನಿಸುವನು.

೭) ಮೂಲ ಶಿಕ್ಷಣ ಸಾಲೆಯಲ್ಲಿ ಮಗುವು ನಿಸರ್ಗದ ಅಭ್ಯಾಸವನ್ನು ಮಾಡುತ್ತಾನೆ. ಹೂವು ತಾನಾಗಿ ಅರಳುವಂತೆ ಮಗುವು ತನ್ನ ಜೀವನವನ್ನು ಬೆಳೆಯಿಸಿ ಕೊಳ್ಳುತ್ತಾನೆ. ನಿಸರ್ಗ ನಿರೀಕ್ಷಣೆಯಲ್ಲಿ ಜ್ಞಾನವು ಜೊತೆ ಗೊಂಡು ಮಗುವಿಗೆ ಭಾವ ಸಂಸ್ಕರಣವುಂಟಾಗುತ್ತದೆ.

೮) ಮಗುವು ಶಿಕ್ಷಣ ಪಡೆಯುವಾಗ ಮೂರು ಬಗೆಯ ಪರಿಸರಗಳಲ್ಲಿ ಬೆಳೆಯುತ್ತಾನೆ. ಆರ್ಥಿಕ, ಸಾಮಾಜಿಕ ಹಾಗೂ ನೈಸರ್ಗಿಕ ವಾತಾವರಣಗಳಲ್ಲಿ ಅವನ ಕ್ರಿಯೆಗಳು ಸಮಾವೇಶವಾಗುತ್ತವೆ. ಹೀಗೆ ಶಾಲೆಯ ಜೀವನದಲ್ಲಿ ಮಗುವು ಬೆಳೆಯುತ್ತ ನಾಗರಿಕತೆಗೆ ಅವಶ್ಯಕವಿದ್ದ ಮೂಲಜ್ಞಾನವನ್ನು ಪಡೆಯುತ್ತಾನೆ.

ಮೂಲ ಶಿಕ್ಷಣದ ಯೋಜನೆಯಲ್ಲಿ ಅಡಗಿದ ಈ ಎಲ್ಲ ತತ್ವಗಳನ್ನು ಶಿಕ್ಷಣ ತಜ್ಞರು ಒಪ್ಪುವರು. ಶಿಕ್ಷಣವು ಚಟುವಟಿಕೆಯ ಮುಖಾಂತರ ಸಾಗಬೇಕೆಂಬುದು ನವೀನ ವಿಚಾರ. ಯುರೋಪದಲ್ಲಿ ಅಡಾಲ್ಫ ಫೇರಿಯರ ಮತ್ತು ಅಮೇರಿಕೆಯಲ್ಲಿ ಜಾನ್ ಡ್ಯೂಯಿ ಈ ವಿಚಾರ ಪ್ರಣಾಲಿಯನ್ನು ಜಗತ್ತಿನ ತುಂಬ ಪಸರಿಸಿದ್ದಾರೆ. ಆದುದರಿಂದ ಚಿಕ್ಕ ಮಕ್ಕಳ ಶಿಕ್ಷಣದಲ್ಲಿ ಚಟುವಟಿಕೆಗಳಿಗೆ ಮಹತ್ವದ ಸ್ಥಾನ ಕೊಡಲಾಗಿದೆ. ಮಗುವಿನ ಆರೋಗ್ಯ ಜೀವನ, ಕೈಗಾರಿಕೆಗಳಲ್ಲಿ ತರಬೇತು, ವ್ಯವಹಾರಿಕ ಜ್ಞಾನ, ಸಹಜೀವನ ಇವು ಮೂಲ ಶಿಕ್ಷಣ ಯೋಜನೆಯಲ್ಲಿಯ ಮುಖ್ಯಾಂಶಗಳು. ಈ ವಿಚಾರಗಳಿಗೆ ಭಿನ್ನಾಭಿಪ್ರಾಯಗಳಿಲ್ಲ. ಆದರೆ ಒಂದೇ ಒಂದು ವಿಚಾರವು ಮಾತ್ರ ಇಂದಿಗೂ ಜಟಿಲವಾಗಿ ಉಳಿದಿದೆ. ಅದೆಂದರೆ ಕೈಗಾರಿಕೆಗಳ ಮುಖಾಂತರ ಕೊಡಲ್ಪಡುವ ಶಿಕ್ಷಣವು ಸ್ವಾವಲಂಬಿಯಾಗ ಬಲ್ಲುದು.

ಕೈಗಾರಿಕೆಗಳನ್ನು ಸಾಲೆಗಳಲ್ಲಿ ಸೇರಿಸುವದರಿಂದ ತುಸು ಮಟ್ಟಿಗೆ ಉತ್ಪಾದನೆಯಾಗುವದೇನೋ ನಿಜ. ಆದರೆ ಗಾಂಧೀಜಿಯವರು ಅಪೇಕ್ಷಿಸಿದಂತೆ ಶಿಕ್ಷಕರ ಪಗಾರವನ್ನು ಮಕ್ಕಳ ಉತ್ಪಾದನೆಯಿಂದ ಹೊರಡಿಸುವುದು ಸಾಧ್ಯವಿಲ್ಲವೆಂದು ತಿಳಿದು ಬಂದಿದೆ. ಕೈಗಾರಿಕೆ

ಳನ್ನು ಸೇರಿಸಿದ್ದರಿಂದ ಉಪಕರಣಗಳಿಗಾಗಿ ಹೆಚ್ಚಿನ
ಚ್ಚವು ತಗಲುವುದು. ಈ ವೆಚ್ಚವನ್ನು ಮಾತ್ರ ಮಕ್ಕಳ
ುತ್ಪಾದನೆಯಿಂದ ಹೊರಡಿಸಬಹುದೆಂದು ಅನುಭವ
ಂದ ಕಂಡು ಬಂದಿದೆ. ಆದಾಗ್ಯೂ ಒಂದು ಮಾತನ್ನು
ಈ ಪ್ರಸಂಗಗಳಲ್ಲಿ ಗಮನಿಸುವದು ಅಗತ್ಯ. ಅದೇನೆಂದರೆ:–
ೈಗಾರಿಕೆಯು ಶಿಕ್ಷಣದ ಮಾಧ್ಯಮವಾಗಿದೆ. ಅದನ್ನು
ಲಿಯುವುದರಿಂದ ಮಕ್ಕಳು ಅದಕ್ಕೆ ಹೊಂದಿಕೊಂಡಿದ್ದ
ಾಮಾನ್ಯ ಜ್ಞಾನವನ್ನು ಪಡೆಯುತ್ತಾರೆ. ಅಲ್ಲದೆ ಶಾಲೆ
ಳಲ್ಲಿ ವಿಜ್ಞಾನ ಸಾಹಿತ್ಯವನ್ನು ಕೊಡುತ್ತೇವೆ. ವಾಚ
ಾಲಯವನ್ನು ಏರ್ಪಡಿಸುತ್ತೇವೆ; ಎಷ್ಟೋ ವೈಕ್ಷಣಿಕ
ುಪಕರಣಗಳನ್ನು ಕೊಡುತ್ತೇವೆ. ಈ ಎಲ್ಲ ಸಂಗತಿ
ಳನ್ನು ಪೂರೈಸುವಾಗ ವೆಚ್ಚದ ಕಡೆಗೆ ನಾವು ಗಮನ
ೊಡುವದಿಲ್ಲ. ಅವೆಲ್ಲ ಶಿಕ್ಷಣದ ಸಾಧನಗಳೆಂದು ಪರಿಗ
ಣಿಸುತ್ತೇವೆ. ಅದರಂತೆಯೇ ಶಾಲೆಗಳಲ್ಲಿ ಕೈಗಾರಿಕೆಗಳ
ಜ್ಞಾನವೂ ಇದೆ. ಕೈಗಾರಿಕೆಗಳು ಶಿಕ್ಷಣದ ಸಾಧನ
ಳಾಗಿವೆ. ಕಾರಣ ಮಕ್ಕಳಿಗೆ ಕೈಗಾರಿಕೆಗಳಲ್ಲಿ ಜ್ಞಾನ
ೊರೆಯುತ್ತದೆ. ಅಲ್ಲದೆ ಕೈಗಾರಿಕೆಗಳ ಮುಖಾಂತರ
ಅಭ್ಯಾಸ ವಿಷಯಗಳ ಜ್ಞಾನವಾಗುತ್ತದೆ. ಕೈಗಾರಿಕೆ
ಗಳಿಗೆ ಸಂಬಂಧಿಸಿದ ಸಾಧನ ಸಲಕರಣೆಗಳನ್ನು ಉಪಯೋ
ಸಲು ಕಲಿಯುತ್ತಾರೆ. ಉದ್ಯೋಗಗಳಲ್ಲಿ ಒಲುಮೆ
ಹುಟ್ಟುತ್ತದೆ. ಸಮಾಜದ ಭದ್ರತೆಗೆ ಆಧಾರಿತವಾದ
ಶ್ರಮ ವಿಭಾಗ ಹಾಗೂ ಶ್ರಮ ಗೌರವ ತತ್ವಗಳು ಮಕ್ಕಳಿಗೆ
ಂಬಿತವಾಗುತ್ತವೆ. ಮಕ್ಕಳು ಗುಂಪಿನಲ್ಲಿ ಕೆಲಸಮಾಡು
ತ್ತಾರೆ. ಪರಸ್ಪರ ಸಹಕಾರ, ಸಹಾಯ, ಸಹಾನುಭೂತಿ
ಮೊದಲಾದ ಸದ್ಗುಣಗಳು ಮಕ್ಕಳಲ್ಲಿ ನೆಲೆಗೊಳ್ಳುತ್ತವೆ.
ಇದಲ್ಲದೆ, ವೈಜ್ಞಾನಿಕ ದೃಷ್ಟಿಯೂ ವಿಕಾಸವಾಗುತ್ತದೆ.
ಕಾರಣ ಶಿಕ್ಷಣದ ದೃಷ್ಟಿಯಿಂದ ಕೈಗಾರಿಕೆಗಳ ಸ್ಥಾಪ
ನೆಯಿದು. ಪ್ರಾಥಮಿಕ ಶಾಲೆಗಳಲ್ಲಿ ಮಕ್ಕಳ ವಯೋ
ಮಾನಕ್ಕೆ ಅವು ಒಗ್ಗುತ್ತವೆ. ಮನೋ ವಿಜ್ಞಾನವೂ
ಈ ತತ್ವವನ್ನು ಮನ್ನಿಸುತ್ತದೆ ಆದುದರಿಂದ ಮೂಲ
ಶಿಕ್ಷಣಕ್ಕೆ ಹೊಸ ಶಿಕ್ಷಣ ಎಂದೂ ಕರೆಯುತ್ತಾರೆ.
ಮಹಾತ್ಮಾ ಗಾಂಧೀಜಿಯವರು ' ನಯೀ ತಾಲೀಮ ' ಎಂದು ಕರೆದಿ
ದ್ದಾರೆ. ಅವರು ಕೊಟ್ಟ ವ್ಯಾಖ್ಯೆಯು ಶಿಕ್ಷಣದ ಹೊಸ
ದಿಶೆಯನ್ನೇ ತೋರಿಸುತ್ತದೆ. ಮಗುವಿನಲ್ಲಿ ಹುದುಗಿದ
ಶಾರೀರಿಕ, ಬೌದ್ಧಿಕ, ನೈತಿಕ ಹಾಗೂ ಆಧ್ಯಾತ್ಮಿಕ ಅಂಶ
ಗಳನ್ನೂ ಉತ್ತಮ ರೀತಿಯಲ್ಲಿ ಪ್ರಕಟಗೊಳಿಸುವದೇ
ಶಿಕ್ಷಣ ಎಂದು ಅವರು ನಿರೂಪಿಸಿದ್ದಾರೆ.

ಮೂಲ ಶಿಕ್ಷಣವೆಂದರೆ ಶಿಕ್ಷಣ ವೃಕ್ಷದ ಮೂಲ ಅರ್ಥಾತ್ ಬೇರು. ಹಿಂದಿಯಲ್ಲಿ ಬುನಿಯಾದಿ ತಾಲೀಮ, ಇಂಗ್ಲೀಷಿನಲ್ಲಿ ಬೇಸಿಕ್ ಎಜ್ಯುಕೇಶನ್ ಈ ಶಬ್ದಗಳೂ ಶಿಕ್ಷಣ ಮಂದಿರದ ತಳಹದಿ ಅಥವಾ ಪಾಯ ಎಂಬ ಅರ್ಥ ವನ್ನೇ ಸೂಚಿಸುತ್ತವೆ. ಕಾರಣ ಮೂಲ ಶಿಕ್ಷಣ ವೆಂದರೆ ಅದು ತಳಹದಿ ಸ್ವರೂಪದ್ದಾಗಿರಬೇಕು. ಅದು ಭದ್ರ ವಾಗಿರಬೇಕು. ಬೇರಿನಂತೆ ಸತ್ವಯುತವಾಗಿರಬೇಕು. ಎಂದರೆ ಚೇತನಯುಕ್ತವಾಗಿರಬೇಕು. ಕೈಗಾರಿಕೆ ಇಲ್ಲವೆ ಯಾವುದೊಂದು ಕೆಲಸದ ಮುಖಾಂತರ ಮಗು ಶಿಕ್ಷಣ ಪಡೆಯುವದರಿಂದ ಶಿಕ್ಷಣವು ಸಜೀವವಾಗುತ್ತದೆ. ಪುಸ್ತ ಕೀಯ ವಿದ್ಯೆಯಂತೆ ಅದು ನಿರ್ಜೀವವಾಗುವದಿಲ್ಲ. ಮೂಲ ಶಿಕ್ಷಣವೆಂದರೆ ಪ್ರಾಥಮಿಕ ಶಿಕ್ಷಣವು. ಅದು ಬೆಳೆಯು ತ್ತಿರುವ ಮಗುವಿನ ಅಖಂಡ ವಿಕಾಸಕ್ಕೆ ಪೋಷಕವಾಗಿದೆ. ನಾಗರಿಕತೆಗೆ ಪೋಷಕವಾಗುವ ಮೂಲಜ್ಞಾನವನ್ನು ಮಗು ವಿಗೆ ಒದಗಿಸುತ್ತದೆ. ಮಕ್ಕಳ ವ್ಯಕ್ತಿತ್ವವನ್ನು ಸಮಾ ನಾದ ರೀತಿಯಲ್ಲಿ ಬೆಳೆಯಿಸಿ, ಅವರನ್ನು ಸುಸಂಸ್ಕೃತ ನಾಗರಿಕರನ್ನಾಗಿ ತರಬೇತು ಗೊಳಿಸುತ್ತದೆ. ಸ್ವಾವ ಲಂಬನ ಪ್ರವೃತ್ತಿಯು ಅವರಲ್ಲಿ ವಿಕಾಸಹೊಂದಿ, ಸ್ವಾವಲಂಬಿ ಸಮಾಜದ ಘಟಕಗಳಾಗಿ ಮಕ್ಕಳು ಬೆಳೆಯು ತ್ತಾರೆ. ಗಾಂಧೀಜಿಯವರು ನಿರೂಪಿಸಿದ ಶೋಷಣ ರಹಿತ–ವರ್ಗರಹಿತ ಆದರ್ಶ ಸಮಾಜದ ರಚನೆಯ ಕಲ್ಪನೆಯೇ ಮೂಲ ಶಿಕ್ಷಣದ ಹಿರಿ ಗುರಿಯಾಗಿದೆ. ಮೂಲ ಶಿಕ್ಷಣವು ನವಸಮಾಜ ನಿರ್ಮಾಣದ ಸಾಧನವಾ ಗಿದೆ. ಭಾರತೀಯರ ಸಾಹಿತ್ಯ-ಸಂಸ್ಕೃತಿಗಳ ಪುನರುತ್ಥಾ ನದ ಮುಖ್ಯಸಾಧನವೂ ಆಗಿದೆ. ಅಂತೆಯೇ ಮೂಲ ಶಿಕ್ಷಣವು ಭಾರತದ ರಾಷ್ಟ್ರೀಯ ಶಿಕ್ಷಣವೆಂದು ಕೇಂದ್ರ ಸರಕಾರವು ಒಪ್ಪಿಕೊಂಡಿದೆ. ರಾಜ್ಯ ಸರಕಾರಗಳೂ ಶಿಕ್ಷಣದ ಪುನರ್ರಚನೆಯನ್ನು ಈ ದಿಶೆಯಲ್ಲಿಯೇ ನಡೆ ಸಿವೆ. ಮೂಲ ಶಿಕ್ಷಣವು ಭಾರತೀಯರ ಶಿಕ್ಷಣವು. ಜಗತ್ತಿನ ವೈಕ್ಷಣಿಕ ಚರಿತ್ರೆಯಲ್ಲಿ ಇದು ಒಂದು ಹೊಸ ಅಧ್ಯಾಯವು. ಈ ದಿಶೆಯಲ್ಲಿ ಮೂಲ ಶಿಕ್ಷಣದ ಮಹತಿ ಯನ್ನು ಅರಿತು ಅದರ ಪ್ರಸಾರವನ್ನು ಮೂಲ ಶಿಕ್ಷಣದ ಸಪ್ತಾಹದಲ್ಲಿ ಸರ್ವವಿಧದಿಂದಲೂ ಮಾಡುವುದು ನಮ್ಮ ಹೊಣೆಯಾಗಿದೆ.

ಜಯ ಹಿಂದ್

ಶಾಲೆಯು ಸಮಾಜದ ಕೇಂದ್ರವು

THE SCHOOL IS A COMMUNITY CENTRE

ಲೇಖಕರು : ಶ್ರೀ ಎಸ್. ಆರ್. ಮುಕರಿ, ಶಿ. ನಿ. ಗಂ. ಸ. ಟ್ರೇ. ಕಾ. ಧಾರವಾಡ.

ಜೀವನ ಶಿಕ್ಷಣದ ಸಪ್ತಾಹದ ಅಂಗವಾಗಿ ಏರ್ಪಡಿಸಿರುವ ಈ ವಿಚಾರ ಸಂಕಿರಣದಲ್ಲಿ ಜೀವನ ಶಿಕ್ಷಣದ ಬಗೆಗೆ ಹಲವಾರು ವ್ಯಾಖ್ಯಾನಗಳನ್ನು ನೀವು ಕೇಳಿದ್ದೀರಿ. ಅವರೆಲ್ಲರ ಭಾಷಣಗಳ ಸಾರಾಂಶವು ಜೀವನಕ್ಕಾಗಿ ಶಿಕ್ಷಣ ಎನ್ನುವದರ ಪ್ರತಿಪಾದನೆಯಾಗಿರುತ್ತದೆಂಬುದರಲ್ಲಿ ಸಂಶಯವಿಲ್ಲ. ಜೀವನಕ್ಕಾಗಿ ಶಿಕ್ಷಣವೆಂದ ಮೇಲೆ ಮಕ್ಕಳು ಶಿಕ್ಷಣವನ್ನು ಪಡೆಯುವದು ಶಾಲೆಯಲ್ಲಿ. ಶಾಲೆಯಲ್ಲಿ ಪಡೆಯವ ಶಿಕ್ಷಣವೇ ಜೀವನದ ರೂಪರೇಷೆಯನ್ನೂ ಹಾಗೂ ಬಾಳಿ ಬದುಕ ಬೇಕಾದ ಸಮಾಜ ದರ್ಶನವನ್ನೂ ಮಾಡಿಸುತ್ತದೆ. ಆದುದರಿಂದ ಶಾಲೆಯು ಸಮಾಜದ ಕೇಂದ್ರವೆಂದಂತಾಯಿತು.

ಸಮಾಜವನ್ನು ಸುಧಾರಿಸಲಿಕ್ಕೆ ಅಥವಾ ಸಮಾಜದ ಉನ್ನತಿಗೆ ಶಿಕ್ಷಣವೇ ಒಂದು ಬಹು ಮುಖ್ಯ ಸಾಧನವು. ಈಗ ನಾವು ಕಾಣುತ್ತಿರುವ ಸಮಾಜವು ದೋಷಪೂರಿತವಾಗಿರುವದರಿಂದ ಅದರ ಜಾಗದಲ್ಲಿ ಬದಲಾವಣೆಯಾಗುವದು ಅವಶ್ಯವಿದೆ. ಶಿಕ್ಷಣದಿಂದ ಸಮಾಜವು ಬದಲಾಯಿಸಿಕೊಳ್ಳಬಲ್ಲದೆಂಬುದಕ್ಕೆ ಐತಿಹಾಸಿಕ ಉದಾಹರಣೆಗಳನ್ನು ನಾವು ನೋಡಬಹುದು. ಪೂರ್ವ ಕಾಲದಲ್ಲಿ ಸ್ಪಾರ್ಟನರು ಶಕ್ತಿಯುತವಾದ ಸಮಾಜವನ್ನು ಬಯಸಿದ್ದರು. ಅಂಥ ಸಮಾಜ ನಿರ್ಮಾಣಕ್ಕೆ ಬೇಕಾಗುವ ವ್ಯಕ್ತಿಗಳನ್ನು ತಯಾರಿಸುವದಕ್ಕಾಗಿ ದೈಹಿಕ ಬೆಳವಣಿಗೆಗೆ ಮತ್ತು ಶಿಸ್ತಿನ ಮಾಜಕ್ಕೆಯಿಂದ ಕೂಡಿದ ಶಿಕ್ಷಣ ಪದ್ಧತಿಯನ್ನು ಶಾಲೆಯಲ್ಲಿ ಅನುಸರಿಸಿದರು. ೧೯ನೆಯ ಶತಮಾನದಲ್ಲಿ ಜರ್ಮನ್‌ರೂ ಸಹಿತ ಜನತೆಯನ್ನು ತಮ್ಮ ಹಿಂಬಾಲಕರನ್ನಾಗಿ ಮಾಡಿಕೊಳ್ಳಲು ವಿಶಿಷ್ಟ ತರಹದ ಶಿಕ್ಷಣ ಪದ್ಧತಿಯನ್ನು ಅನುಸರಿಸಿದರು. ಈಗಲೂ ಸಹಿತ ಫ್ಯಾಶಿಸ್ಟರು ಮಾಗೂ ಕಮ್ಯುನಿಸ್ಟರು ತಮಗೆ ಬೇಕಾದಂತಹ ಸಮಾಜ ನಿರ್ಮಾಣಕ್ಕಾಗಿ ತಮ್ಮದೇ ಆದ ಶಿಕ್ಷಣ ಪದ್ಧತಿಗಳನ್ನು ಅವಲಂಬಿಸಿರುವದು ಸುಸ್ಪಷ್ಟವಿದೆ. " ತಂದೆಯಂತೆ ಮಗ " ಅಂತೆಯೇ " ಶಾಲೆಯಂತೆ ಸಮಾಜ " ಎಂಬ ಮಾತು ಈ ಮೇಲಿನ ಉದಾಹರಣೆಗಳಿಂದ ಕಂಡು ಬರುವದು.

ಭಾರತೀಯ ಸಮಾಜದಲ್ಲಿ ಉಚ್ಚ-ನೀಚ, ಬಡವ-ಬಲ್ಲಿದ ಹಾಗೂ ಅಶಿಕ್ಷಿತ-ಸುಶಿಕ್ಷಿತರೆಂಬ ತಾರತಮ್ಯ ಎದ್ದು ಕಾಣುತ್ತಿದೆ. ಸಬಲರು ದುರ್ಬಲರ ಹೋಳಿ ಆಡುತ್ತಿದ್ದಾರೆ. ಒಬ್ಬರನ್ನೊಬ್ಬರು ಶೋಷಿಸಿ ಹಿಂಸಿಸಿ ತಮ್ಮ ಬೇಳೆ ಬೇಯಿಸಿಕೊಳ್ಳುವ ಎತ್ತುಗಡೆಯಲ್ಲಿದ್ದಾರೆ. ಇಂಥ ಸಮಾಜ ನಿರ್ಮಾಣಕ್ಕೆ ನಾವು ಪಡೆದಿರುವ ಶಿಕ್ಷಣವೇ ಕಾರಣವೆಂದು ಬೇರೆ ಹೇಳಬೇಕಾಗಿಲ್ಲ. ಶಿಕ್ಷಣದ ಫಲವು ಬಹು ಕಾಲದ ನಂತರ ಬರುವಂತಹದು. ಶತಮಾನಗಳ ಕಾಲ ದೋಷಪೂರಿತವಾದ ಶಿಕ್ಷಣ ಪದ್ಧತಿ ನಮ್ಮ ಶಾಲೆಗಳಲ್ಲಿ ನಡೆದು ಬಂದಿರುವದರಿಂದ ಅದರ ಕಹಿ ಫಲವನ್ನು ಇಂದು ನಾವು ಕಾಣುತ್ತಿದ್ದೇವೆ.

ವರ್ಗರಹಿತ ಅಹಿಂಸಾತ್ಮಕ ಹಾಗೂ ಶೋಷಣ ರಹಿತವಾದ ಸಮಾಜವು ಭಾರತದಲ್ಲಿ ನಿರ್ಮಾಣವಾಗಬೇಕೆಂದು ಮ. ಗಾಂಧೀಜಿಯವರು ಕನಸು ಕಂಡಿದ್ದರು. ಅವರ ಆಶೆ ಆಕಾಂಕ್ಷೆಗಳ ತಳಹದಿಯ ಮೇಲೆಯೇ ನಮ್ಮ ಭಾರತೀಯ ರಾಜ್ಯ ಘಟನೆಯು ರೂಪಿತವಾಗಿದೆ. ಶಾಂತಿ, ಸಮತೆ, ನ್ಯಾಯ, ಸ್ವಾತಂತ್ರ್ಯ ಹಾಗೂ ಬಾಂಧವ್ಯದ ಮೂಲಭೂತ ತತ್ವಗಳನ್ನು ಅನುಸರಿಸಿ ಪ್ರಜಾಸತ್ತಾತ್ಮಕ ಸಮಾಜ ರಚನೆಯನ್ನು ರಚಿಸಲು ನಿರ್ಧರಿಸಲಾಗಿದೆ. ಘಟನೆಗನು ಗುಣವಾಗಿ ಪ್ರಜಾಪ್ರಭುತ್ವ ಸಮಾಜದಲ್ಲಿ ಪ್ರತಿಯೊಬ್ಬ ವ್ಯಕ್ತಿಯಲ್ಲಿಯೂ ಉದಾತ್ತ ವಿಚಾರಗಳು, ಸಹಕಾರ-ಮನೋಭಾವನೆ, ಪರರ ವ್ಯಕ್ತಿತ್ವದ ಅಸ್ತಿತ್ವಕ್ಕೆ ಮನ್ನಣೆ ಕೊಡುವದು, ಅನ್ಯರ ಹಕ್ಕು ಬಾಧ್ಯತೆಗಳ ಗೌರವ ಹಾಗೂ ಸ್ವಾವಲಂಬತನ ಮುಂತಾದ ಸದ್ಗುಣಗಳು ಮೂಡಿ ಬರುವಂತೆ ಪ್ರಯತ್ನಿಸುವದು ಅವಶ್ಯವಾಗಿದೆ. ಶಾಲೆಯಲ್ಲಿ ನಾವು ಅಪೇಕ್ಷಿಸುವಂಥ ಗುಣಗಳುಳ್ಳ ವ್ಯಕ್ತಿಗಳನ್ನು ನಿರ್ಮಾಣ ಮಾಡಲು ಸಾಕಷ್ಟು ಸೌಲಭ್ಯ ದೊರೆಯುತ್ತಿದೆ

ಶಾಲಾ ವಿದ್ಯಾರ್ಥಿಗಳಲ್ಲಿ ಬೇರೆ ಬೇರೆ ಧರ್ಮದ ಬೇರೆ ಬೇರೆ ಜಾತಿಯ, ಬೇರೆ ಬೇರೆ ಭಾಷೆಗಳನ್ನಾಡುವ ಮತ್ತು ವಿಭಿನ್ನ ಪರಿಸ್ಥಿತಿಗಳಲ್ಲಿ ಬೆಳೆದು ಬಂದಂತಹ ವಿದ್ಯಾರ್ಥಿಗಳಿರುವದರಿಂದ ಸಮಾಜದ ಸಧ್ಯದ ಪ್ರತಿ ಬಿಂಬವೆ ಶಾಲೆಯು ಎಂದು ನಾವು ಅನ್ನಬಹುದು. "School is the epitome of the society" ಎಂದು ಇಂಗ್ಲೀಷಿನಲ್ಲಿ ಒಂದು ಹೇಳಿಕೆ ಇದೆ. ಅಂದ ಮೇಲೆ ಅಪೇಕ್ಷಿತ ಗುಣಗಳನ್ನು ವ್ಯಕ್ತಿಗಳಲ್ಲಿ ನಿರ್ಮಾಣ ಮಾಡಬೇಕಾದರೆ, ಬಾಲ್ಯವೇ ಯೋಗ್ಯ ಕಾಲ ಎಂದು ಮನೋವಿಜ್ಞಾನವು ಸಾರಿ ಹೇಳುತ್ತಿದೆ. ಆದುದರಿಂದ ನಿರ್ಧರಿತ ಸಮಾಜದ ಪಡಿಯಚ್ಚು ಶಾಲೆಯನ್ನುವದರಲ್ಲಿ ಸಂದೇಹವಿಲ್ಲ.

ಬೇವಿನ ಬೀಜವನ್ನು ಬಿತ್ತಿ ದ್ರಾಕ್ಷೆಯ ಫಲವನ್ನು ಉಂಡವರುಂಟೆ? ಸಾಧ್ಯವಿಲ್ಲ. ಅದಕಾರಣ ಸಮಾಜ ವಾದೀ ಸ್ವರೂಪದ ಸಮಾಜ ರಚನೆಯನ್ನು ನಾವು ನಿರ್ಮಿಸಲು ನಿರ್ಧರಿಸಿರುವಾಗ ಅದಕ್ಕನುಗುಣವಾದ ಶಿಕ್ಷಣ ಹಾಗೂ ಶಿಕ್ಷಣ ಪದ್ಧತಿಯನ್ನು ನಮ್ಮ ಶಾಲೆಗಳಲ್ಲಿ ರೂಢಿಸುವದು ಅವಶ್ಯವಿದೆ.

ಮೇಲಿನ ವಿವರಣೆಯಿಂದ ನವ ಸಮಾಜ ರಚನೆಯಲ್ಲಿ ಶಾಲೆಯ ಪಾತ್ರವು ಬಹು ಮುಖ್ಯವಾದುದು ಎಂಬುದರ ಅರಿವು ಉಂಟಾಯಿತು. ಶಾಲೆಯಲ್ಲಿ ಶಿಕ್ಷಕನು ಮಕ್ಕಳಿಗೆ ಕೇವಲ ಬೌದ್ಧಿಕ ವಿಷಯ ಕಲಿಸಿದರೆ ಅವನ ಕರ್ತವ್ಯ ಮುಗಿಯಲಿಲ್ಲ. ಶಿಕ್ಷಕನ ಕಾರ್ಯ ಸುಶಿಕ್ಷಿತರನ್ನು ತಯಾರಿಸುವದರ ಜೊತೆಗೆ ಸುಸಂಸ್ಕೃತರ ತಯಾರಿಯನ್ನೂ ಮಾಡಬೇಕಾಗಿದೆ. ನವ ಸಮಾಜ ರಚನೆಯ ಈ ಸಂಕ್ರಾಂತಿ ಸಮಯದಲ್ಲಿ ತುಂಬು ಜೀವನ ಸಾಗಿಸುವದಕ್ಕಾಗಿ ಜೀವನದಲ್ಲಿ ಬಂದೊದಗುವ ಎಲ್ಲ ಪ್ರಸಂಗಗಳನ್ನೂ ಸಮರ್ಥ ರೀತಿಯಿಂದ ಎದುರಿಸುವದ ಕ್ಕಾಗಿ ಶಾಲಾ ಮಕ್ಕಳು ಶಾಲೆಯಲ್ಲಿಯೇ ಅಂತಹ ಸಂದರ್ಭಗಳನ್ನು ಒದಗಿಸಿಕೊಂಡು ಗರಡಿ ಸಾಧನೆ ಪಡೆಯಬೇಕು.

ಭಾರತವು ಪ್ರಜಾಸತ್ತಾತ್ಮಕ ರಾಷ್ಟ್ರವು. ಇಂದಿನ ಮಕ್ಕಳು ನಾಳಿನ ನಾಗರಿಕರು. ರಾಷ್ಟ್ರ ನಿರ್ಮಾಪಕರು; ಭವಿಷತ್ ಭಾರತದ ಅಳಿವು ಉಳಿವುಗಳಿಗೆ ಇಂದಿನ ಮಕ್ಕಳೇ ಹೊಣೆಗಾರರು. ಅಂದ ಮೇಲೆ ಶಾಲೆಗಳಲ್ಲಿ ಪ್ರಜಾಪ್ರಭುತ್ವಕ್ಕನುಗುಣವಾದ ಪರಿಸರವನ್ನು ತಂದು ಕೊಟ್ಟು ತನ್ಮೂಲಕ ಮಕ್ಕಳಿಗೆ ಅವರ ಅನುಭವಗಳನ್ನು ಮಾಡಿಕೊಡಬೇಕಾಗಿದೆ. ಇಂದಿನ ಸಂದರ್ಭದಲ್ಲಿ ಶಾಲೆಯನ್ನು ಸಮಾಜದ ಕೇಂದ್ರವನ್ನಾಗಿ ಮಾಡುವದು ಅವಶ್ಯವಷ್ಟೇ ಅಲ್ಲ; ಅನಿವಾರ್ಯವೂ ಆಗಿದೆ.

ಶಾಲೆ ಸಮಾಜದ ಕೇಂದ್ರವಾಗಿರುವಾಗ ಅಲ್ಲಿರುವ ಶಿಕ್ಷಕ ಹಾಗೂ ಬಾಲಕರಲ್ಲಿ ಗೌರವಯುತ ಪ್ರೇಮಮಯ ಸಂಬಂಧ ಪರಸ್ಪರರಲ್ಲಿ ಉಂಟಾಗಬೇಕು. ಶಿಕ್ಷಕ ಕಲಿಸುವಲ್ಲಿ ಗುರುವಾಗಿ, ಜೀವನ ಪೋರಾಟವನ್ನು ಎದುರಿಸುವಲ್ಲಿ ಗೆಳೆಯನಾಗಿ, ಆಪೈಕೆಯಲ್ಲಿ ತಾಯಿಯಾಗಿ, ಮಾರ್ಗದರ್ಶಕನಾಗಿ ಕೆಲಸ ಮಾಡಬೇಕಾಗುತ್ತದೆ. ಮಕ್ಕಳಾದರೂ ಗುರುವಿನಲ್ಲಿ ಭಯಭಕ್ತಿ ಆದರ ಹಾಗೂ ಗೌರವದಿಂದ ನಡೆದುಕೊಳ್ಳಬೇಕು. ಈ ಭಾವನೆಗಳು ಗುರು ಶಿಷ್ಯರಲ್ಲಿ ಹೊರಹೊಮ್ಮಿದಾಗ ಇಂದು ಕಂಡು ಬರುವ ವಿದ್ಯಾರ್ಥಿಗಳ ಸಂಪ್ರ ಸತ್ಯಾಗ್ರಹ ಪರತಾಳಗಳು ಮುಂದೆ ನಿರ್ಮಾಣವಾಗಲಿರುವ ಸಮಾಜದಲ್ಲಿ ಕಂಡು ಬರಲಾರವು.

ಸರ್ವತಂತ್ರ ಸ್ವತಂತ್ರ ರಾಷ್ಟ್ರೀಯ ಭಾವನೆ ಸಮಾಜದಲ್ಲಿ ಮೊಳೆತು ಬರಬೇಕಾದರೆ ಶಾಲಾ ಮಕ್ಕಳೂ ಅದರಿಂದ ಹೊರಗುಳಿಯಬಾರದು. ವಿಧೇಯತೆಯ ಜೌಕಟ್ಟಿನಲ್ಲಿ ಪ್ರಗತಿಯ ದಿಕ್ಕಿನಲ್ಲಿ ಮಕ್ಕಳಿಗೆ ಸಂಪೂರ್ಣ ಸ್ವಾತಂತ್ರ್ಯವನ್ನು ಕೊಡಬೇಕು. ಅವರ ಕೆಲಸ ಕಾರ್ಯಗಳಲ್ಲಿ ಶಿಕ್ಷಕ ಮಾರ್ಗದರ್ಶಕ ಮಾತ್ರ. ಪ್ರತ್ಯಕ್ಷ ಕಾರ್ಯ ಮಾಪನವಲ್ಲಿ ಕಾರ್ಯ ಸಂಘಟಿಸುವಲ್ಲಿ ಮಕ್ಕಳು ಸ್ವತಂತ್ರರಾಗಿರಬೇಕು.

ಶಿಕ್ಷಕ ಮತ್ತು ಪಾಲಕರಲ್ಲಿ ನಿಕಟ ಸಂಬಂಧವೇರ್ಪಟ್ಟಾಗ ಶಾಲೆಯ ಚಟುವಟಿಕೆಗಳ ಪರಿಣಾಮ ಸಮಾಜದ ಮೇಲೆ ಸ್ಪುಟವಾಗಿ ಆಗುತ್ತದೆ. ಪಾಲಕರ ದೃಷ್ಟಿಯಲ್ಲಿ ಶಾಲೆ ದೇಗುಲವಾಗುತ್ತದೆ. ಪಾವಿತ್ರ್ಯದ ಹಿನ್ನೆಲೆಯಿಲ್ಲದ ನೈರ್ಮಲ್ಯದ ಲೇಪನವಿಲ್ಲದ ಶಿಕ್ಷಣಕ್ಕೆ ಬೆಲೆ ಸಿಕ್ಕುವದಿಲ್ಲ. ಕಾರಣ ಶಾಲೆಯ ಬಗೆಗೆ ಪಾಲಕರಲ್ಲಿ ಪವಿತ್ರ ಭಾವನೆ ನಿರ್ಮಾಣವಾಗಲು ಪ್ರಯತ್ನಿಸಬೇಕು. ಅದರ ಸಂವರ್ಧನೆಗಾಗಿ ಪಾಲಕರ ದಿನ, ಮಕ್ಕಳ ದಿನ, ಶಾಲಾ ವಾರ್ಷಿಕೋತ್ಸವ, ಆಚರಣೆಗಳು, ಉತ್ಸವಗಳು ಹಾಗೂ ಸಮಾಜ ಸೇವಾ ಕಾರ್ಯ ಮುಂತಾದ

ಕಾರ್ಯಕ್ರಮಗಳನ್ನು ಏರ್ಪಡಿಸಿ ಪಾಲಕರನ್ನು ಶಾಲೆಗೆ ಬರಮಾಡಿಕೊಳ್ಳಬೇಕು.

ಶ್ರಮಗೌರವ, ದುಡಿತದ ಬೆಲೆ, ಸಮತೆ ಹಾಗೂ ಸಹಕಾರ ಮನೋಭಾವನೆಗಳನ್ನು ಕುದುರಿಸಲು ಮಕ್ಕಳಿಂದ ಸಮಾಜ ಸೇವೆಯನ್ನು ಮಾಡಿಸುವದು ಅತ್ಯಾವಶ್ಯಕವು. ಶಾಲೆಯಲ್ಲಿ ಸಮಾಜ ಸೇವೆ ಮಾಡುವ ಮನೋದಾರ್ಢ್ಯ ಪಡೆದ ಮಕ್ಕಳು ತಮ್ಮ ಭಾವೀ ಜೀವನದಲ್ಲಿ ಉತ್ತಮ ಸಮಾಜ ಸೇವಕರಾಗುವರೆಂಬುದರಲ್ಲಿ ಸಂದೇಹವಿಲ್ಲ.

ಶಾಲೆಗಳಲ್ಲಿ ಆಚರಿಸಬಹುದಾದ ನಿತ್ಯ ನೈಮಿತ್ತಿಕ ಚಟುವಟಿಕೆಗಳಿಂದ 'ಮಕ್ಕಳಲ್ಲಿ ಸರಳತನ, ಸಹಕಾರ, ಶಿಸ್ತು, ಸೇವಾಭಾವನೆ ಹಾಗೂ ಮುಂದಾಳುತನ ಈ ಸದ್ಗುಣಗಳು ನೆಲೆಸಲು ಅನುವಾಗುವದು. ಶಾಲೆಯಲ್ಲಿ ಸ್ವಯಂ ಶಾಸನ ಪದ್ಧತಿಯನ್ನು ಅನುಸರಿಸುವದರಿಂದ ಪ್ರಜಾತಂತ್ರದ ಪರಿಚಯ ಮಕ್ಕಳಿಗೆ ಉಂಟಾಗಿ ಘನ ವ್ಯಕ್ತಿತ್ವವನ್ನು ಪಡೆದು ನೂತನ ಸಮಾಜ ರಚನೆಗೆ ಬದ್ಧಕಂಕಣರಾಗುವರು.

ಗುರು ನಿಲಯವಾಗಿರುವ ಶಾಲೆ ಒಂದು ಪುಣ್ಯ ಕ್ಷೇತ್ರ. ಅಲ್ಲಿಂದ ಹರಿಯುವ ಜಲವೆಲ್ಲ ನಾಡಿನ ಪಾಪ ತೊಳೆಯುವ ಪವಿತ್ರ ಗಂಗೆ; ಆ ಜಲವೆಂದರೆ ಮಕ್ಕಳು. ಮಕ್ಕಳೇ ನವ ಸಮಾಜವನ್ನು ರೂಪಿಸಬಲ್ಲರು. ಆದುದರಿಂದ ಶಾಲೆ ಸಮಾಜದ ಕೇಂದ್ರವಾಗಿದೆ.

ಜೀವನ ಶಿಕ್ಷಣ ಶಾಲೆಗಳಲ್ಲಿ ಸಾಂಘಿಕ ಜೀವನದ ಸ್ಥಾನ

ಲೇಖಿಕೆಯರು : **ಶ್ರೀಮತಿ ಪಿ. ಎ. ಭಾಸ್ಕರ,** ಲೇಡಿ ಸುಪರಿಂಟೆಂಡೆಂಟ, ಹೆ.ಮು.ಸ.ಟ್ರೇ.ಕಾ. ಧಾರವಾಡ.

ಜೀವನ ಶಿಕ್ಷಣವು ಪ್ರಾಥಮಿಕ ಶಿಕ್ಷಣ ಕ್ಷೇತ್ರದಲ್ಲಿ ಕ್ರಾಂತಿಯನ್ನು ಉಂಟುಮಾಡಿದೆ. ಚಟುವಟಿಕೆಯೇ ಜೀವನ ಶಿಕ್ಷಣದ ಜೀವಾಳ. ಜೀವನವೇ ಶಿಕ್ಷಣ. ಶಿಕ್ಷಣವೇ ಜೀವನ ಎಂಬ ತತ್ವವನ್ನು ಅಳವಡಿಸಿಕೊಂಡಿದೆ. ಈ ಶಿಕ್ಷಣ ಸಹಾಯಿ, ಸಾಂಘಿಕ ಜೀವನ, ಪ್ರಾರ್ಥನೆ, ಉತ್ಪಾದಕ ಚಟುವಟಿಕೆಗಳು, ಸಮವಾಯ ತಂತ್ರ, ಮಾತೃಭಾಷೆಯ ಮಹತ್ವ ಇವೇ ಮೊದಲಾದವುಗಳು, ಜೀವನ ಶಿಕ್ಷಣದ ಘಂಟ್ರಗಳೆಂದು ಹೇಳಬಹುದು. ಈ ಲೇಖನದ ಉದ್ದೇಶವು ಸಾಂಘಿಕ ಜೀವನದ ಸ್ಥಾನ, ಜೀವನ ಶಿಕ್ಷಣದಲ್ಲಿ ಯಾವುದಕ್ಕಿದೆ ಎಂಬುದನ್ನು ಸ್ಪಷ್ಟಪಡಿಸುವದು.

ಮನುಷ್ಯನು ಸಂಘಜೀವಿ. ಅವನು ಏಕಾಂಗಿಯಾಗಿ ಬಾಳಲಾರನು. ಇದಕ್ಕೆ ಸಾಂಘಿಕ ಪ್ರವೃತ್ತಿಯೇ ಕಾರಣವೆಂದು ಹೇಳಬಹುದು. ಮನುಷ್ಯನನ್ನು ಸಮಾಜ ಬಾಹಿರನನ್ನಾಗಿ ಮಾಡುವದೆಂದರೆ ಅದೊಂದು ಹೆಚ್ಚಿನ ಶಿಕ್ಷೆಯನ್ನು ಕೊಟ್ಟಂತೆ ಎಂದು ಹೇಳಬಹುದು. ಆದ ಕಾರಣ ಮನುಷ್ಯನು ಸಂಘ-ಸಂಸ್ಥೆಗಳನ್ನು ಕಟ್ಟುವ ಪ್ರಯತ್ನದಲ್ಲಿರುವನು. ಸಮಾಜವನ್ನು ಬೆಳೆಸುವ ಹವ್ಯಾಸದಲ್ಲಿರುವನು. ಆದ್ದರಿಂದ ಸಾಂಘಿಕ ಜೀವನವು ಪ್ರತಿಯೊಂದು ಜೀವಿಯ ಗುರಿ ಎಂದು ಹೇಳಬಹುದು. ಹಿಂದಿನ ಶಿಕ್ಷಣದಲ್ಲಿ ವಿಷಯಕ್ಕೆ ಪ್ರಾಧಾನ್ಯತೆ ಇದ್ದರೆ ಇಂದಿನ ಶಿಕ್ಷಣದಲ್ಲಿ ಮಗುವಿಗೆ ಹೆಚ್ಚು ಮಹತ್ವವಿದೆ. ಕಾರಣ ಮಗುವಿನ ಸರ್ವತೋಮುಖವಾದ ಬೆಳವಣಿಗೆಗೆ ಅವಶ್ಯವಾದ ಕೊಡಲಾಗಿದೆ. ಅಂದರೆ ಮಗುವಿನಲ್ಲಿ ಆದರ್ಶ ವಿಚಾರಗಳು ಬರುವಂತೆ ವಾತಾವರಣವನ್ನು ಕಲ್ಪಿಸಿಕೊಡಲಾಗಿದೆ. 'ಸಾಂಘಿಕ ಜೀವನವೂ' ಆ ಅವಶ್ಯಕತೆಗಳಲ್ಲಿ ಒಂದು ಎಂದು ಹೇಳಬಹುದು.

ಪ್ರತಿಯೊಬ್ಬ ವಿದ್ಯಾರ್ಥಿಯಲ್ಲಿ ಸಹಕಾರ ಬುದ್ಧಿಯು ಬೆಳೆದು ಬರಬೇಕಾದರೆ ಅವನು ಸಂಘದಲ್ಲಿ ಇರಬೇಕಾಗುತ್ತದೆ. ಬಹುಜನರು ಇರುವ ಸಂಘದಲ್ಲಿ ಬೇರೆ ಬೇರೆ ವಿಚಾರದ ಜನರಿರುವದು ಸಹಜ. ತಮ್ಮ ತಮ್ಮ ವಿಚಾರಗಳಂತೆ ನಡೆದರೆ ಸಂಘವು ಬಾಳಲಾರದು. ತದ್ವಿರುದ್ಧವಾಗಿ ಅಶಾಂತಿಯ ವಾತಾವರಣವೇ ಪಸರಿಸುವದು. ಈ ಎಲ್ಲ ತತ್ವಗಳ ಕಾರ್ಯಾಚರಣೆ ಜೀವನ ಶಿಕ್ಷಣ ಶಾಲೆಗಳಲ್ಲಿ ಏರ್ಪಡಿಸುವ ಚಟುವಟಿಕೆಗಳಲ್ಲಿ ಆಗುವದು.

ಪ್ರವಾಸಗಳನ್ನು ಏರ್ಪಡಿಸಿದಾಗ ಶಾಲೆಗಳಲ್ಲಿಯ ಎಲ್ಲ ಮಕ್ಕಳೂ ಒಂದೆಡೆಗೆ ಸೇರಿ ಹೋಗಬೇಕಾಗುವದು. ಅಲ್ಲಿಯ ವ್ಯವಸ್ಥೆಯನ್ನು ಎಲ್ಲರೂ ಸೇರಿ ಮಾಡಬೇಕಾಗುವದು. ಆಗ ಒಬ್ಬರಿಗೊಬ್ಬರ ಪೂರ್ಣ ಪರಿಚಯವಾಗುವದಲ್ಲದೆ ಸಹಕಾರ, ಪ್ರೀತಿ, ದಯೆ ಮೊದಲಾದ ಗುಣಗಳ ಬೆಳವಣಿಗೆ ಆಗುವದು.

ಅದರಂತೆ ಮನರಂಜನೆಯ ಕಾರ್ಯಕ್ರಮಗಳನ್ನು ಏರ್ಪಡಿಸಿದಾಗಲೂ ಸಭೆ ಸಮ್ಮೇಲನಗಳನ್ನು ಇಟ್ಟಾಗಲೂ ಈ ತರಹದ ವಾತಾವರಣವನ್ನು ಕಲ್ಪಿಸಿಕೊಟ್ಟಂತಾಗುವದು.

ತರಬೇತಿ ಕೇಂದ್ರಗಳಲ್ಲಿ ಹಳ್ಳಿಯ ವಾಸ್ತವ್ಯ ಪ್ರವಾಸ, ಭಾತ್ರಾಲಯದಲ್ಲಿ ವಾಸಿಸುವದು ಇವೇ ಮೊದಲಾದವುಗಳಲ್ಲಿ ಸಾಂಘಿಕವಾಗಿ ಜೀವಿಸುವದನ್ನು ಕಾಣಬಹುದು. ಇಂದಿನ ಮಕ್ಕಳು ಉತ್ತಮ ನಾಗರಿಕರಾಗಬೇಕಾದರೆ ಈ ಎಲ್ಲ ಗುಣಗಳು ಅವರಲ್ಲಿ ಬರಬೇಕು. ಕಾರಣ ಜೀವನ ಶಿಕ್ಷಣದಲ್ಲಿ ಸಾಂಘಿಕ ಜೀವನದ ಮಹತ್ವ ಅತಿಶಯವಾಗಿದೆ. ಕಾರಣ ಸಾಂಘಿಕ ಜೀವನವು ಶಾಂತರೀತಿಯಿಂದ ನಡೆಯಬೇಕಾದರೆ ಎಲ್ಲರು ಬೇರೆಯವರ ವಿಚಾರಗಳಿಗೆ ಬೆಲೆ ಕೊಡುತ್ತ ಹೋಗಬೇಕಾಗುವದು. ಹೀಗೆ ಪರಸ್ಪರ ತಿಳುವಳಿಕೆ ಉಂಟಾಗುತ್ತದೆ. ಹೀಗೆಯೇ ಸಹಕಾರ ತತ್ವವು ಅವರಲ್ಲಿ ಸಹಜವಾಗಿ ಬೇರೂರುವದು.

ಎರಡನೆಯದಾಗಿ ತಾನು ಬದುಕಿ ಉಳಿದೆಲ್ಲ ಜನರೂ ಬದುಕಬೇಕು, ಎಂಬ ವಿಚಾರವು ಎಲ್ಲರಲ್ಲಿಯೂ ಒಡಮೂಡುವದು. ಬೇರೆಯವರ ಕಷ್ಟನಷ್ಟಗಳಲ್ಲಿ ಸಹಾಯ ಸಲ್ಲಿಸಬೇಕೆಂಬ ಲವಲವಿಕೆ ಉಂಟಾಗುವದು. ಹೀಗೆ ತನ್ನ ಬಂಧುಗಳಿಗೆ ಸಹಾಯ ಸಹಕಾರಗಳನ್ನು ಸಲ್ಲಿಸುವನು.

ಮೂರನೆಯದಾಗಿ ನಾವೆಲ್ಲರೂ ಒಂದು ಕುಟುಂಬದವರು ಎಂಬ ಭಾವನೆ ಎಲ್ಲ ಸಂಘಜೀವಿಗಳಲ್ಲಿಯೂ ಬರುವದು. ಅದರಂತೆ ಅವರ ನಡತೆಯಾದರೂ ಸರಿ ಹೋಗುವದು.

ಜಾತಿ-ಮತ-ಪಂಥಗಳನ್ನೆಲ್ಲ ಮರೆತು ನಾವೆಲ್ಲರೂ ಒಂದು ಎಂಬ ಭಾವನೆಯು ಬರಬೇಕಾದರೆ ಸಾಂಘಿಕ ಜೀವನದಿಂದಲೇ ಎಂದು ಹೇಳಬಹುದು.

ಜೀವನ ಶಿಕ್ಷಣ ತರಬೇತಿ ವರ್ಗಗಳ ದೈನಂದಿನ ಕಾರ್ಯಕ್ರಮ

ಬರೆದವರು : **ಕುಮಾರಿ ವೇಣುಬಾಯಿ ಅ. ಶೀಲಭದ್ರ,** ೨ನೆಯ ವರ್ಷ "ಬ"ಶಿ.ವಿ.
ಕ. ಹೆ. ಮ. ಸ. ಟ್ರೇ. ಕಾಲೇಜ ಧಾರವಾಡ.

[ಸಂದರ್ಭ:– ಹೆಣ್ಣು ಮಕ್ಕಳ ಸರಕಾರಿ ಟ್ರೇನಿಂಗ ಕಾಲೇಜ ಧಾರವಾಡ ಇಲ್ಲಿಗೆ ೧ನೆಯ ವರ್ಷದ ತರಬೇತಿಗಾಗಿ ಬಂದ ವಿದ್ಯಾರ್ಥಿನಿಯರಿಗೆ ತರಬೇತಿ ವರ್ಗದ ಕಾರ್ಯಕ್ರಮಗಳ ಯಾವ ಮಾಹಿತಿಯೂ ಇರುವದಿಲ್ಲ. ಆಗ ೨ನೆಯ ವರ್ಷ ತರಬೇತಿ ಪಡೆಯುತ್ತಿರುವ ವಿದ್ಯಾರ್ಥಿನಿಯರು ಕಾಲೇಜದ ಎಲ್ಲ ಮಾಹಿತಿಯನ್ನು ಮಾಡಿಕೊಡುವರು. ಅದನ್ನೇ ಇವರಲ್ಲಿ ಚಿತ್ರಿಸಲಾಗಿದೆ.]

ಪಾತ್ರ ಪರಿಚಯ :–

ವೇಣು, ಸುಲೋಚನಾ ೨ನೆಯ ವರ್ಷದ ವಿದ್ಯಾರ್ಥಿನಿಯರು.

ಹನಳಾ, ಶಾರದಾ ೧ನೆಯ ವರ್ಷದ ವಿದ್ಯಾರ್ಥಿನಿಯರು.

ವೇಣು, ಸುಲೋಚನಾ:–

ನಾನು ನೀನು ಜೋಡಿ,
ಈ ಕಾಲೇಜು ಎತ್ತಿನ ಗಾಡಿ
ಗಣ ಗಣ ಗಂಟೆ ಆಯಿತು ಏಳು.
ಪ್ರಾರ್ಥನಾಕ ಎಲ್ಲರು ಬಂದಾರ ನೋಡು.

‖ ನಾನು ನೀನು ‖

(ಗನೆಯ ಪರ್ಸದ ಸಹೋದರಿಯರನ್ನು ಎಬ್ಬಿಸಿ ಕೊಂಡು ಬಂದು ಸ್ಪಾರ್ಧೆ ಮಾಡಿ ಮುಂದಿನ ಕೆಲಸಗಳನ್ನು ತಿಳಿಸುವದು.)

ವೇಣು, ಸುಲೋಚನಾ:-

ಹಿಡಿ ಹಿಡಿ ಹಿಡಿ ಕುರ್ಚಿಗೆ ಹಿಡಿ
ತಗೊ ತಗೊ ತಗೊ ಬುಟ್ಟಿ ತಗೊ
ನಡಿ ನಡಿ ನಡಿ ಸಫಾಯಕ ನಡಿ

|| ನಾನು ನೀನು||

ಹವಳಾ:— ಏನ ಶಾರದಾ, ಬಂದಕೂಡ್ಲೆ ನಮ್ಮ ಕೈಯಾಗ ಕುರ್ಚಿಗಿ ಬುಟ್ಟಿನ ಕೊಟ್ಬಲ್ಲ. ಏನ್ರಿ, ನಾವರ ಕಲಿಯಾಕಂತ ಬಂದಿವಿ. ಕುರ್ಚಿಗಿ ಬುಟ್ಟಿ ಕೊಟ್ಬ ತಗೊಂಡು ಏನ ಮಾಡೂನು.

ವೇಣು:— ಅಲ್ರೀ, ನಾವು ಕಲಿಯಲಿಕ್ಕೆ ಬಂದದ್ದು ಜೀವನ ಶಿಕ್ಷಣ. ಅಂದ ಮೇಲೆ ಇದಾವರೂ ಜೀವನ ಶಿಕ್ಷಣದ ಒಂದು ಅಂಗ.

ಹವಳಾ:— ನಾವು ಪ್ಯಾಂಗ ತಗಿಯುನಯವ್ವಾ ಹುಲ್ಲು.

ವೇಣು ಸುಲೋಚನಾ:—

ಬಂದ್ರ ಬಂದ್ರ ಬಂದ್ರ ಅಕ್ಕೋರು ಬಂದ್ರ
ಕೆತ್ತ ಕೆತ್ತ ಕೆತ್ತ ಹುಲ್ಲ ಕೆತ್ತ
ಬುಟ್ಯಾಗ ತುಂಬ ತಿಪ್ಯಾಗ ಜೆಲ್ಲಿ
ಗೊಬ್ಬರ ಹಾಡೂನು ನಡಿ ನಡಿ

|| ನಾನು ನೀನು ಜೋಡಿ ||

ಹವಳಾ:— ಆವ್ವಾ ಹುಲ್ಲ ಕೆತ್ತಿ ನಮ್ಮ ಕೈಯಾಗ ಗುಳ್ಳಿ ಬಂದಾವ ನೋಡ್ರಿ ಇಲ್ಲೆ. ಅಲ್ರೀ ಹುಲ್ಲು ತಗಿಯಾಕ ಕನಗೂಡಸಾಕ, ಗಬಾರ ತೊಳ್ಯಾಕ, ಆಳುಮಕ್ಕಳು ಪಟ್ಟೇವಾಲಗೋಳು ಇಲ್ಲೆ ಯಾರೂ ಇಲ್ಲೇನ್ರಿ ?

ವೇಣು:— ಪಟ್ಟೇವಾಲಾಗೋಳು ಈ ಕೆಲಸಯಾಕ ಮಾಡತಾರ್ರೀ. ಅವರಿಗೂ ಆಫೀಸಿನ ಕೆಲಸ ಇರತದ ಅಲ್ರೀ, ನಾವು ನಮ್ಮ ಮನೆಯ ಹಿಂದ ಮುಂದ ಹುಲ್ಲುಕಸಕಡ್ಡಿ ಬೆಳೆದಿದ್ದರ, ಬಿದ್ದಿದ್ದರ ತೆಗೆದಿಲ್ಲೇನು ಅದರಂತೆ ನಮ್ಮ ಕಾಲೇಜ ಕಂಪೌಂಡದಾಗ ಸಫಾಯಿ ಮಾಡೂದು.

ವೇಣು ಸುಲೋಚನಾ:—

ಹಾಕ ಹಾಕ ಹಾಕ ಗುದ್ಲಿ ಹಾಕ
ಎಳಿ ಎಳಿ ಎಳಿ ಸಲಕೆಲೆ ಎಳಿ
ಮಡಿಯನು ಮಾಡಿ ಅಗಿಯನು ಹಚ್ಚಿ
ಕಾಯಿಪಲ್ಯೆ ಬೆಳೆಯೋಣುನಡೀ ನಡೀ

|| ನಾನು ನೀನು ಜೋಡಿ ||

ಹವಳಾ:— ಅವ್ವಾ, ಇವರೇನ ಶಾರದಾ, ಕುರ್ಚಿಗಿ ಮೊದಲು ಕೊಟ್ಟು ಈಗ ಗುದ್ಲಿನೂ ತಗೋರಿ ಅನ್ನಾಕ ಹತ್ತಿದರಲ್ಲ, ಇದೇನ ಕೈತೋಟನ ನಮ್ಮವ್ವ, ಯಾತಕ ಬೇಕಯವ್ವಾ, ಬಜಾರದಾಗ ಆಣೆಕೊಡುವಲ್ಲೆ ಎರಡಣೆ ಕೊಟ್ರ ಮುಸ್ತ ಮನಾರ ಪಲ್ಯ ಬರತದ. ಇದನ್ಯಾರ ಹೇಳ್ಯಾರ ನಮ್ಮವ್ವ, ಗುದ್ಲಿಲೆ ಕಡಿಯೂದು ಮಡಿಮಾಡಿ ಅಗಿಹಚ್ಚಿ ನೀರ ಹಾಕೂದು, ಇದೇನ ನನ್ನ ಕೈಲಿ ಸಾಧ್ಯ ಆಗದ ಮಾತವಾ. ಮೊದಲ ಗೊತ್ತಿದ್ರ ನಾನೇನು ಕಾಲೇಜಕ್ಕ ಬರತಿದ್ದಿಲ್ಲ. ನೋಡು.

ವೇಣು:- ಹಾ ಹಾ ಏನಂದ್ರಿ ಗುದ್ಲಿನರ ನೋಡೀರೇನು? ನಮ್ಮ ಯೋಗ್ಯತೆಗೆ ತಕ್ಕಂತೆ ಮಾಡಿಸ್ಯಾರ. ಅಲ್ಲದೇ ನಾವು ಪಡೆಯಲಿಕ್ಕೆ ಬಂದದ್ದು ಜೀವನ ಶಿಕ್ಷಣ. ಇದರಾಗ ಸ್ವಾವಲಂಬನ ಬಹಳ ಮಹತ್ವದ್ದರಿ. ಪ್ಯಾಟ್ಯಾಗ ತಂದು ತಿನ್ನೋದು ಪರಾವಲಂಬನ. ನೀವರ ನಿಮ್ಮ ಮನಿ ಹಿತ್ತಲದಾಗ ಕಾಯಿಪಲ್ಯ ಬೆಳಸ್ತಿರೋ ಇಲ್ಲೋ ? ಅದರಂತೆ ಇಲ್ಲೂ ಬೆಳೆದ ಕಾಯಿಪಲ್ಯೇನ ನಮ್ಮ ಬೋರ್ಡಿಂಗಕ್ಕ ಉಪಯೋಗ ಮಾಡಿಕೊಳ್ಳೂದು. ನಮ್ಮ ಕಾಲೇಜ ಗುರುಗೋಳ ಸಹಿತ ನಮ್ಮ ವಿದ್ಯಾರ್ಥಿನಿಯರು ಬೆಳೆದದ್ದು ಅಂತ ಎಷ್ಟು ಆದರದಿಂದ ಕೊಂಡುಕೋತಾರ ಗೊತ್ತದೇನು. ಅಂದ ಮೇಲೆ ನೀವ ಹಿಂಗ ಅಂದರ ಪ್ಯಾಂಗ. ಇನ್ನೂ ಹತ್ತೀ ಕೆಲಸ, ಹೊಲಿಗೆ ಕೈಕೆಲಸಾನೂ ಮಾಡಬೇಕು.

ಹವಳಾ:— ಇದನ್ನೆಲ್ಲಾ ಮಾಡದಿದ್ರ ಏನಮಾಡತಾರ್ರಿ.

ವೇಣು:— ನಾಳೆ ಪರೀಕ್ಷಕ್ಕ ಸಾಂಘಿಕ ಜೀವನಕ್ಕ ೧೦೦ ಮಾರ್ಕ್ಸ ಇರತಾವಲ್ಲಾ ಅದರಾಗ ಮಾರ್ಕ್ಸ ಕಡದ ಬಿಡತಾರ.

ಶಾರದಾ:— ಅವ್ವಾ, ಬ್ಯಾಡವಾ ಹಂಗಾದರ ನಮ್ಮ ಕೈಯಿಂದಾದಷ್ಟ ಮಾಡೂನಂತ, ಸುಮ್ಮನ ಇರ ನಮ್ಮವ್ವ. ಮಾಡತೀನರಿ ಮಾಡತೀವು.

ವೇ. ಸುಲೋಚನಾ:—

ಹಿಡಿ ಹಿಡಿ ಹಿಡಿ ಹತ್ತಿ ಹಿಡಿ
ತಗೊ ತಗೊ ತಗೊ ತಕಲಿ ತಗೊ
ಅರಳಿಯ ಹಿಂಜಿ ಹಂಜಿಯ ಮಾಡಿ
ನೂಲನು ತೆಗೆಯೋಣು ನಡಿ ನಡಿ
|| ನಾನು ನೀನು ಜೋಡಿ ||

ಶಾರದಾ:— ಅವ್ವ, ಅವ್ವ ಅವ್ವನನ ಹತ್ತಿ. ಇದನ್ನ ತಗೊಂಡು ಏನಮಾಡಬೇಕರ್ರಿ ?

ಸುಲೋಚನಾ:— ಇದರಲ್ಲಿಯ ಕಸರು ಕಡ್ಡಿ ತೆಗೆದು ಸ್ವಚ್ಛಮಾಡಿ ಅರಿಬೇಕು. ನಂತರ ಅರಳಿ ಹಿಂಜಿ, ಹಂಜಿಮಾಡಿ ನೂಲಬೇಕು.

ಶಾರದಾ:— ಅರಿಯೂದು ಅಂದರ ಹ್ಯಾಂಗರಿ ?

ಹವಳಾ:— ಕಲ್ಲಮೇಲೆ ಕಲ್ಲಿಟ್ಟು ಅರಿಯೂದು; ಅದನ್ನು ಕೇಳ್ತಾರೇನ ಹುಚ್ಚಿ !

ಶಾರದಾ:— ಪಾ, ಪಾ, ಹೂರಣಾ ರೂಬ್ಬಿದಂಗ ರುಬ್ಬುದು ಹೌದಲ್ರೀ ?

ವೇಣು:— ಛೆ ಛೆ ಛೆ ನೀವು ಎನ್ ಹುಚ್ಚುಚಾರ ತಿಳಿಕೋತಿರವ್ವಾ. ಮೊದಲ ಹತ್ತಿನರ ಸ್ವಚ್ಛಮಾಡಿ ನಂತ್ರ ಮೂಲೋದ್ಯೋಗ ಗುರುಗೋಳು ನಿಮ್ಮ ವರ್ಗಕ್ಕ ಬಂದಾಗ ಅರಿಯುದು ಹೇಳ್ತಾರ. ಕುಡ ಹಲಿಗಿ ಕೊಡ್ತಾರ. ಹಲಿಗಿ ಮೇಲೆ ಒಂದೊಂದ ತೊಳೆ ಹತ್ತಿ ಇಟ್ಟು ಕುಡದಿಂದ ಅರಿಯುವದನ್ನೂ ಹೇಳ್ತಾರ. ಯಾಕ ಅಂಜತೀರಿ, ನಂತರ ನೂಲಾಕು ಕಲಸ್ತಾರ.

ಶಾರದಾ:— ಏನಬಿಡ್ರೆವ್ವ ನಮಗಂತೂ ಈ ಪಾಸ್ಟೇಲು ಕಾಲೇಜು, ಕಾಲೇಜ ಕೆಲಸ ನೋಡಿ ದಿಕ್ಕುಕಾಣದಂಗ ಆಗಾಕ್ಹತ್ತೈದ.

ಹವಳಾ:— ಏನಬಿಡ್ರೆವ್ವ. ನಮಗಂತೂ ತಿಳಿಯದ ಮಾತು. ಬಲ ಬೇಸರ ಬಂತ್ರವ್ವ.

ವೇಣು:— ಮೊದಲ ನಿಮಗ ಹಾಂಗ ಅನಸ್ತದ, ಹೋಗುವಾಗ ಇಲ್ಲಿಂದ ಯಾಕ ಕಳಸ್ತಾರ ಯವ್ವಾಽss ಅಂತ ಅಳತೀರಿ.

ಬಾ ಬಾ ಬಾ ಕ್ಲಾಸಿಗೆ ಬಾ
ಓದ ಓದ ಓದ ಪುಸ್ತಕ ಓದ
ಗುರುಗಳ ಮಾತನ್ನು ಮೀರದೆ ನಾವು
ಕಲಿಯೋಣಂತ ನಂತರ ನಡೀ ನಡೀ
|| ನಾನು ನೀನು ಜೋಡಿ ||

ಶಾರದಾ:— ಅವ್ವಾ, ಈಗ ಬಂತ ನೋಡವಾ ಓದು ಬರೆಹ.

ಹವಳಾ:— ಹೌನ, ಇದನರ ಏನ ಏನ ಅದನ ಏನೋ.

ಶಾರದಾ:— ಅದಕ್ಯಾಕ ಚಿಂತಿ. ಇಷ್ಟೆಲ್ಲ ಕೆಲಸ ಅಂದ ಮೇಲೆ ಓದು ಬರೆಹ ಸ್ವಲ್ಪ ಇರಬೇಕೇಳ್ರೀ.

ವೇಣು:— ಓದು ಬರೆಹ ಕಡಿಮಿ ಅನಬೇಡಿರಿ. ಅದು ಎಸ್. ಎಸ್. ಸಿ. ಯವರ ನರಿ ಅದ. ಅದರ ಜೊತಿ ಕೆಲಸಾನೂ ಮಾಡಬೇಕು. ಆಂದಾಗ ಆಡುತ್ತ ಕಲಿ; ಮಾಡುತ್ತ ಕಲಿ ಅಂದ್ರ ನಮ್ಮ ಶಿಕ್ಷಣ ಸಾರ್ಥಕ ಆಗತದ.

ಹವಳಾ:— ಅದೆಲ್ಲ ಆತ್ರೀ. ಇನ್ನ ನಮ್ಮ ಪುಸ್ತಕದ ವ್ಯವಸ್ಥ ಏನ್ರೀ ಎಲ್ಲಿ ತಗೋಬೇಕು ?

ಸುಲೋಚನಾ:— ವರ್ಗದೊಳಗ ಗುರುಗಳಿಗೆಲ್ಲ ಕೇಳ್ತಾರ ಕೇಳ್ರೀ. ನಿಮಗೆ ಬೇಕಾದ ಪುಸ್ತಕ ನಮ್ಮ ಕಾಲೇಜದ 'ವಿಜಯ ಭಾಂಡಾರ' ದಲ್ಲಿ ಕೊಂಡುಕೊಳ್ಳಿರಿ. ಅದಾದರೂ ನಮ್ಮ ಸಹಕಾರಿ ಸಂಘವೇ ಆಗಿದೆ. ಅಲ್ಲಿ ನಿಮಗೆ ಬೇಕಾದ ಪ್ರತಿಯೊಂದು ಸಾಮಾನು ಸಿಗತಾವ.

ವೇಣು:— ಅದಕ್ಕೂ ನಿಮಗ ಏನರ ತಿಳಿಲಿಕ್ಕಂದ್ರ ನಮ್ಮನ್ನ ಕೇಳ್ರಿ ಹೇಳ್ತೀವಿ.

ಶಾರದಾ:— ನಡೀರೆವ್ವ ಹಂಗಾದರ. ಇಷ್ಟ ಧೈರ್ಯ ಹೇಳಿಂದ ನಮಗೂ ಸ್ವಲ್ಪ ಹುರುಪು ಬಂದಾಂಗ ಆಗೇದ. ನಾವೂ ನಮ್ಮ ವರ್ಗಕ್ಕ ಹೋಗತೀವಿ. ಮೇಲಿಂದ ಮೇಲೆ ನಿಮ್ಮನ್ನ ಭೆಟ್ಟಿಆಗ್ತೇವಿ. ನಮಸ್ಕಾರಿ ಹೋಗಿ ಬರ್ತೇವರಿ.

ವೇ. ಸುಲೋಚನಾ:– ಹೋಗಿ ಬರ್ರಿ ನಮಸ್ಕಾರ.

ವೇಣು:– ಏನವಾ ಅವರಂತೂ ಕ್ಲಾಸಿಗೆ ಹೋದರು. ನಮ್ಮದದ ಅಲ್ಲ ಮಗ್ಗದ ಮನಿಗೆ ಹೋಗಿ ಹೊಡ ಕೊಳ್ಳುದು, ಬಡಕೊಳ್ಳುದು. ಪಾಸಣ್ಣವರ ಗುರು ಗಳಂತೂ ಬಂದಿರತಾರ. ಸಿಟ್ಟಿಗೆದ್ದಿದ್ದಾರು ನಡಿ ನಡೀವಾ.

ಸುಲೋಚನಾ:— ಹೌದವಾ ಹೌದು. ಇವತ್ತ ಹೊತ್ತು ಬಾಳ ಆಗೇದ ನಡಿವಾ.

ವೇಣು, ಸುಲೋಚನಾ:–

ಚಟ ಚಟ ನಡಿ ಚರಖಾ ತಗೊ
ನಡಿ ನಡಿ ನಡಿ ಮಗ್ಗದ ಮನಿಗೆ
ಪಾಸಣ್ಣವರ ಗುರುಗಳು ಬಂದು
ಕರಿಯಾಕ ಹತ್ಯಾರ ನಡೀ ನಡೀ
|| ನಾನು ನೀನು ಜೋಡಿ ||

ಮಾಡ ಮಾಡ ಮಾಡ ಗಿಂಟಾ ಮಾಡ
ಹಾಕ ಹಾಕ ಹಾಕ ಹುರಿಯನು ಹಾಕ
ಪಾಸನು ಪಾಕಿ ಉಂಕಿಯ ಮಾಡಿ
ಮಗ್ಗಕ ಹಾಕುನು ನಡೀ ನಡೀ
|| ನಾನು ನೀನು ಜೋಡಿ ||

ಬಡಿ ಬಡಿ ಬಡಿ ಕಾಲ ಬಡಿ.
ಹೊಡಿ ಹೊಡಿ ಹೊಡಿ ಲಾಳಿ ಹೊಡಿ
ಲಟ್ ಸಟ್ ಅಂತ ಬಟ್ಟೆಯ ನೆಯ್ದು
ಪೂರಿ ಧರಿಸೋನು ನಡೀ ನಡಿ
|| ನಾನು ನೀನು ಜೋಡಿ ||

ಕೇಳ್ ಕೇಳ್ ಕೇಳ್ ಪಾಠಾ ಕೇಳ್
ತಗಿ ತಗಿ ತಗಿ ಟಿಪ್ಪಣಿ ತಗಿ
ಪಾಠಾ ಕೊಟ್ಟು ಮುಕ್ಕಳ ಬುದ್ಧಿ
ಜಾಗೃತ ಗೊಳಿಸೋನು ನಡೀ ನಡಿ
|| ನಾನು ನೀನು ಜೋಡಿ ||

ಓ ಈ ಕಾಲೇಜ ಎತ್ತಿನ ಗಾಡಿ.
|| ನಾನು ನೀನು ಜೋಡಿ ||

ಧಾರವಾಡದಲ್ಲಿ ಜರುಗಿದ ಜೀವನ ಶಿಕ್ಷಣ ಸಪ್ತಾಹದ ಸಂಕ್ಷಿಪ್ತ ವರದಿ

ವರದಿಗಾರರು: **ಶ್ರೀ ಎಸ್. ಪಿ. ಪಂಡಿತ,** ಬಿ.ಎ.,ಎಲ್.ಇಡಿ.,ಡಿ.ಸಿ.ಇಡಿ.,ಡಿ.ಬಿ.ಇ.
ಟ್ರೇನಿಂಗ ಕಾಲೇಜ, ಧಾರವಾಡ

ಪ್ರತಿ ವರ್ಷದಂತೆ ಈ ವರ್ಷವೂ ಜನೆವರಿಯ ೨೦ನೆಯ ದಿನಾಂಕದಿಂದ ೨೬ನೆಯ ದಿನಾಂಕದ ವರೆಗೆ ಧಾರವಾಡದಲ್ಲಿ ಜೀವನ ಶಿಕ್ಷಣದ ಸಪ್ತಾಹವು ಜರುಗಿತು. ಸಪ್ತಾಹದ ಅಂಗವಾಗಿ ಶಿಕ್ಷಣ ತಜ್ಞರ ವ್ಯಾಖ್ಯಾನ, ಸಾಮೂಹಿಕ ಸೂತ್ರಯಜ್ಞ, ವಸ್ತು ಪ್ರದರ್ಶನ, ನೂಲುವ ಸ್ಪರ್ಧೆ, ವಿವಿಧ ವಿನೋದಾವಳಿಗಳು, ವಿಚಾರ ಸಂಕಿರಣ ಈ ಕಾರ್ಯಕ್ರಮಗಳನ್ನು ಏರ್ಪಡಿಸಲಾಗಿತ್ತು. ಈ ಯಾವತ್ತು ಕಾರ್ಯಕ್ರಮಗಳಲ್ಲಿ ಧಾರವಾಡದಲ್ಲಿಯ ಎಲ್ಲ ಟ್ರೇನಿಂಗ ಕಾಲೇಜುಗಳ ಶಿಕ್ಷಕ ವಿದ್ಯಾರ್ಥಿ ವಿದ್ಯಾರ್ಥಿನಿಯರೂ, ಪದವೀಧರ ಜೀವನ ಶಿಕ್ಷಣ ಕೇಂದ್ರದವರೂ ಹಾಗೂ ಶಾಲಾ ಬಾಲಕ ಬಾಲಕಿಯರೂ ಭಾಗವಹಿಸಿದ್ದರು. ಇದಕ್ಕೆ ಪ್ರಾಧ್ಯಾಪಕರೂ ಶಿಕ್ಷಣಾಧಿಕಾರಿಗಳೂ ಉಪಸ್ಥಿತರಿದ್ದರು.

ದಿನಾಂಕ ೨೦ ರಂದು ಸಾಯಂಕಾಲ ೫ ಘಂಟೆಗೆ ಕಡಪಾ ಮೈದಾನದಲ್ಲಿ ಜೀವನ ಶಿಕ್ಷಣದ ಸಪ್ತಾಹದ ಪ್ರಾರಂಭೋತ್ಸವವು ನಡೆಯಿತು. ಕರ್ನಾಟಕ ಕಾಲೇಜದ ಪ್ರೊ. ಎಸ್. ಎಸ್. ಮಾಳವಾಡರವರು ಸಪ್ತಾಹದ ಅಂಗವಾಗಿ ಉದ್ಘಾಟನೆಯನ್ನು ಮಾಡಿದರು. ಗಂ. ಮು. ಸರಕಾರಿ ಟ್ರೇನಿಂಗ ಕಾಲೇಜದ ಪ್ರಿನ್ಸಿಪಾಲ ಗುಂಡೂರಾವ

ಜೋಶಿಯವರು ಸ್ವಾಗತಪರ ಭಾಷಣ ಮಾಡಿದರು. ಮುಖ್ಯ ಅತಿಥಿಗಳಾದ ಪ್ರೋ. ಎಸ್. ಎಸ್. ಮಾಳವಾಡ ರವರು ಅಸತ್ಯದಿಂದ ಸತ್ಯಕ್ಕೆ, ಮೃತ್ಯುವಿನಿಂದ ಜೀವನ ದೆಡೆಗೆ ಸಾಗಬೇಕೆಂಬ ಪ್ರಾರ್ಥನೆಯಿಂದ ಪ್ರಾರಂಭವಾಗಿ ರುವ ಈ ಸಭೆಯಲ್ಲಿ ಭಾಗವಹಿಸಲು ನನಗೆ ಆನಂದವಾ ಗುತ್ತದೆ ಎಂದು ನುಡಿದರು.

ಅವರು ಮುಂದುವರೆದು ಜೀವನ ಶಿಕ್ಷಣದ ಪ್ರಚಾ ರದ ಬಗೆಗೆ ಪ್ರಸ್ತಾಪಿಸಿ ಕಾಗದ ಪತ್ರ, ಓದು ಬರೆಹ ಹಾಗೂ ಭಾಷಣಗಳು ಇವು ಬಾಹ್ಯ ಪ್ರಚಾರದ ದ್ಯೋತಕ ಗಳಾದರೆ, ಶಾಲೆಯೇ ಆಚಾರದ ದ್ಯೋತಕವೆಂದರು. ಜೀವನ ಶಿಕ್ಷಣಕ್ಕೆ ವರ್ಧಾ ಶಿಕ್ಷಣವೆಂಬ ಹೆಸರೂ ಇದೆ. ವರ್ಧಾ ಶಿಕ್ಷಣ ಯೋಜನೆಗೆ ಟೀಕೆಯ ಮಾತುಗಳೂ ಇವೆ. ನಾವು ಕಲಿಯುವದು ಶಿಕ್ಷಣ ಪಡೆಯುವದಕ್ಕಾಗಿ ನೂಲುವದು, ನೇಯುವದು, ಕಸಹೊಡೆಯುವ ಕೆಲಸಗ ಳನ್ನಲ್ಲ, ಎಂಬ ವಿರೋಧವಿತ್ತು, ಜನರು ಶಿಕ್ಷಣದ ಅರ್ಥವನ್ನು ಸರಿಯಾಗಿ ತಿಳಿದುಕೊಳ್ಳಬೇಕು. ಸುಶಿ ಕ್ಷಿತರು ಸುಸಂಸ್ಕೃತರಾಗುವದು ಅವಶ್ಯವಿದೆ. ಹಿಂದಿನ ಶಿಕ್ಷಣದಿಂದ ಶೀಲ, ಸ್ವಭಾವ, ಕಾರ್ಯಕ್ಷಮತೆ ಬೆಳೆ ಯಲಿಲ್ಲ. ಕಲಿಯುವವನಿಗೂ ಕಲಿಸುವವನಿಗೂ ಆನಂದ ಉಂಟಾಗುವ ಶಿಕ್ಷಣವೇ ನಿಜವಾದ ಶಿಕ್ಷಣವೆಂದು ನುಡಿದರು. ಜೀವನ ಶಿಕ್ಷಣವು ಸಾರ್ವತ್ರಿಕವಾಗಿ ಬಳಕೆ ಯಲ್ಲಿ ಬರಬೇಕು. ಎಂದು ಅವರು ಹಾರೈಸಿದರು.

ಆಭಾರ ಮನ್ನಣೆಯೊಂದಿಗೆ ಕಾರ್ಯಕ್ರಮವು ಮುಕ್ತಾಯವಾಯಿತು.

ದಿನಾಂಕ ೨೧ ರಂದು ಕಡಪಾ ಮೈದಾನದಲ್ಲಿ ಮುಂಜಾನೆ ೮ ಘಂಟೆಗೆ ಸಾಮೂಹಿಕ ಸೂತ್ರಯಜ್ಞವು ನಡೆಯಿತು. ಮುಖ್ಯ ಅತಿಥಿಗಳಾಗಿ ಜನತಾ ಕಾಲೇಜದ ಪ್ರಿನ್ಸಿಪಾಲರಾದ ಆರ್. ವಾಯ್. ಧಾರವಾಡಕರರು ಆಗಮಿಸಿದ್ದರು.

ಪ್ರಾರ್ಥನೆಯೊಂದಿಗೆ ಕಾರ್ಯಕ್ರಮವು ಪ್ರಾರಂಭ ವಾಯಿತು. ಪ್ರಾತಃಕಾಲದ ಪ್ರಶಾಂತ ವಾತಾವರಣದಲ್ಲಿ ೧೫ ನಿಮಿಷಕಾಲ ಸಾಮೂಹಿಕ ಸೂತ್ರಯಜ್ಞವು ನಡೆ ದಾಗ ಮ. ಗಾಂಧೀಜಿಯವರ ಪ್ರಾರ್ಥನಾ ಸಭೆಯ ಜ್ಞಾಪಕ ಬರುವಂತಿತ್ತು.

ಮುಖ್ಯ ಅತಿಥಿಗಳಾದ ಪ್ರಿ. ಧಾರವಾಡಕರರು ಎಳೆ ಬಿಸಿಲಿನಲ್ಲಿಯೇ ಕುಳಿತು ೧ ಘಂಟೆಕಾಲ ಅಸ್ಖಲಿತವಾಗಿ ಭಾಷಣ ಮಾಡಿದರು. ಸಾಮೂಹಿಕವಾಗಿ ಒಂದೆಡೆಗೆ ಕುಳಿತು ಸದ್ಭಾವನೆಯಿಂದ ನಡೆದ ಈ ಸೂತ್ರಯಜ್ಞವು ನಿಜವಾದ ಜೀವನ ಶಿಕ್ಷಣದ ತಿರುಳನ್ನು ತೋರಿಸುತ್ತದೆ. ಮ. ಗಾಂಧೀಜಿಯವರು ತಮ್ಮ ಸ್ವಂತ ಅನುಭವದ ಸಾರವಾಗಿರುವ ಜೀವನ ಶಿಕ್ಷಣ ಪದ್ಧತಿಯನ್ನು ನಮಗೆ ಹಾಕಿ ಕೊಟ್ಟಿದ್ದಾರೆ. ಅವರಿಂದ ಪ್ರತಿಪಾದಿಸ ಲ್ಪಟ್ಟ ಜೀವನ ಶಿಕ್ಷಣವು ಭಾರತೀಯ ಸಂಸ್ಕೃತಿಗೆ ಒಗ್ಗು ವಂತಹದಾಗಿದೆ. ಭಾರತವು ಕೃಷಿಪ್ರಧಾನವಾದ ರಾಷ್ಟ್ರ ವಾಗಿರುವದರಿಂದ ಅಂತಹ ಸಂಸ್ಕೃತಿಯನ್ನೇ ಬೆಳೆಯಿಸಿ ಕೊಳ್ಳಬೇಕಾಗಿದೆ. ಇಂಗ್ಲಂಡಪಂತೆ ಭಾರತವನ್ನು ಕಾರಖಾನೆಗಳ ರಾಷ್ಟ್ರವನ್ನಾಗಿ ಮಾಡುವ ಹುಚ್ಚು ಸಾಹಸ ಬೇಡವೆಂದು ಅವರು ನುಡಿದರು. ಗಾಂಧೀಜಿ ಯವರ ವಿಚಾರಗಳು ಬಹು ಮೂಲ್ಯವಾಗಿರುವದರಿಂದ ಸರ್ವರೂ ಗಾಂಧೀ ಸಾಹಿತ್ಯಾಭ್ಯಾಸ ಮಾಡಲು ಅವರು ಕರೆಯಿತ್ತರು.

ಆಭಾರ ಮನ್ನಣೆಯೊಂದಿಗೆ ಕಾರ್ಯಕ್ರಮವು ಮುಕ್ತಾಯವಾಯಿತು.

ದಿ. ೨೨ ರಂದು ಜೀವನ ಶಿಕ್ಷಣ ಸಪ್ತಾಹದ ಅಂಗವಾಗಿ ಗಂ. ಸರಕಾರಿ ಟ್ರೇನಿಂಗ ಕಾಲೇಜದಲ್ಲಿ ಪ್ರದರ್ಶನವನ್ನು ಏರ್ಪಡಿಸಲಾಗಿತ್ತು. ಈ ಪ್ರದರ್ಶನದ ಉದ್ಘಾಟನೆಯನ್ನು ಧಾರವಾಡ ಗ್ರಾಮ ಸೇವಕ ತರಬೇತಿ ಕೇಂದ್ರದ ಪ್ರಿನ್ಸಿಪಾಲ ಹುಲ್ಲತ್ತಿಯವರು ನೆರವೇರಿಸಿ ದರು. ಅವರು ಶಿಕ್ಷಕ ವಿದ್ಯಾರ್ಥಿ ವಿದ್ಯಾರ್ಥಿನಿಯ ರನ್ನು ಕುರಿತು, ಸರಕಾರವು ಪಂಚವಾರ್ಷಿಕ ಯೋಜನೆ ಗಳಲ್ಲಿ ಸಾಧಿಸಿದ ಪ್ರಗತಿಯನ್ನು ಬಣ್ಣಿಸಿದರು. ಪ್ರದರ್ಶ ನಗಳನ್ನು ಯಾರಿಗಾಗಿ ಏರ್ಪಡಿಸಲಾಗುತ್ತದೆ ಎಂಬ ಮಾತನ್ನು ಜ್ಞಾಪಕದಲ್ಲಿಟ್ಟುಕೊಂಡು ಅದಕ್ಕನುಗುಣ ವಾಗಿ ಅವುಗಳನ್ನು ಸಂಘಟಿಸಬೇಕೆಂದು ತಮ್ಮ ಅಭಿ ಪ್ರಾಯ ವ್ಯಕ್ತಪಡಿಸಿದರು.

ಪ್ರದರ್ಶನದಲ್ಲಿ ಧಾರವಾಡದ ಎಲ್ಲ ಟ್ರೇನಿಂಗ ಕಾಲೇಜುಗಳಲ್ಲಿಯ ಉತ್ತಮ ಒಕ್ಕಲುತನದ ಹುಟ್ಟುವಳಿ ಯನ್ನು, ಕೈನೂಲಿನ ಬಟ್ಟೆ, ಕುಸುರಿನ ಕಸೂತಿಯ ಬಟ್ಟೆಗಳನ್ನು ಹಾಗು ಉತ್ತಮ ರಟ್ಟಿನ ವಸ್ತುಗಳನ್ನು

ಪ್ರದರ್ಶಿಸಲಾಗಿತ್ತು. ಪ್ರದರ್ಶನದಲ್ಲಿ ಎಲ್ಲ ಟ್ರೇನಿಂಗ ಕಾಲೇಜುಗಳಲ್ಲಿಯ ಹಾಗು ಪದವೀಧರ ಜೀವನ ಶಿಕ್ಷಣ ಕೇಂದ್ರದಲ್ಲಿಯ ಹಾಗೂ ಧಾರವಾಡದ ನಿಯಮಿತ ಕ್ಷೇತ್ರ ದಲ್ಲಿಯ ಶಾಲೆಗಳಲ್ಲಿಯ ವಸ್ತುಗಳನ್ನು ಪ್ರದರ್ಶಿಸಲಾ ಗಿತ್ತು. ಪ್ರದರ್ಶನವನ್ನು ದಿ. ೩೬ ರ ವರೆಗೆ ತೆರೆದಿ ಡಲಾಗಿತ್ತು.

ದಿನಾಂಕ ೨೩ ರಂದು ಸಾಯಂಕಾಲ ೭ ಘಂಟೆಗೆ ಗಂ. ಸರಕಾರಿ ಟ್ರೇನಿಂಗ ಕಾಲೇಜದ ನಾಟ್ಯಗೃಹದಲ್ಲಿ ಮಕ್ಕಳ ವಿವಿಧ ವಿನೋದಾವಳಿ ಕಾರ್ಯಕ್ರಮ ನಡೆದವು. ಈ ಕಾರ್ಯಕ್ರಮಕ್ಕೆ ಧಾರವಾಡದ ಮೆ|| ಎ.ಇ. ರವರಾದ ಶ್ರೀ ಎಂ. ಜಿ. ಹಂದ್ರಾಳ ಸಾಹೇಬರು ಅಧ್ಯಕ್ಷರಾಗಿದ್ದರು. ಅವರು ಮಕ್ಕಳ ಕಾರ್ಯಕ್ರಮಗಳನ್ನು ಕಂಡು ತುಂಬಾ ಮೆಚ್ಚುಗೆ ವ್ಯಕ್ತ ಪಡಿಸಿದರು.

ದಿನಾಂಕ ೨೫ ರಂದು ಮುಂಜಾನೆ ೯ ಘಂಟೆಗೆ ಗಂ. ಸ. ಟ್ರೇನಿಂಗ ಕಾಲೇಜದ ಪ್ರಾರ್ಥನಾ ಮಂದಿರದಲ್ಲಿ ವಿಚಾರ ಸಂಕಿರಣವು ನಡೆಯಿತು. ಈ ಸಭೆಗೆ ಶಿಕ್ಷಣ ತಜ್ಞರೆನಿಸಿದ ಶ್ರೀ ತಟ್ಟಿಶ್ಯಾಮರಾಯರು ಮುಖ್ಯ ಅತಿ ಥಿಗಳಾಗಿ ಆಗಮಿಸಿದ್ದರು. ವಿಚಾರ ಸಂಕಿರಣದಲ್ಲಿ ಟ್ರೇನಿಂಗ ಕಾಲೇಜದ ಹಾಗೂ ಪದವೀಧರ ಜೀವನ ಶಿಕ್ಷಣ ಕೇಂದ್ರದ ೬ಜನ ಶಿಕ್ಷಕ ವಿದ್ಯಾರ್ಥಿಗಳು ಅಭ್ಯಾಸ ಪೂರ್ಣವಾದ ವಿಚಾರಗಳನ್ನು ವ್ಯಕ್ತಪಡಿಸಿದರು. ವಿಚಾರ ಸಂಕಿರಣದಲ್ಲಿ ಧಾರವಾಡದ ಕ್ಯಾಸ್ಟ್ ಅರ್ಗನಾ ಯ್ಸರ್ ಶ್ರೀ ಗೋಕರ್ಣರವರೂ ಭಾಗವಹಿಸಿ ವಿದ್ವ ತ್ಪೂರ್ಣ ಭಾಷಣ ಮಾಡಿದರು. ಅಧ್ಯಕ್ಷರು ಭಾಷಣ ಗಳನ್ನು ಪರಿಶೀಲಿಸಿವಲ್ಲದೇ ತಮ್ಮದೇ ಆದ ಹೊಸ ವಿಚಾರಗಳನ್ನು ಹೇಳಿದರು.

ಶ್ರೀ ಪಂಡಿತ ಗುರುಗಳಿಂದ ಆಭಾರ ಮನ್ನಣೆ ಯಾದ ನಂತರ ವಿಚಾರ ಸಂಕಿರಣದ ಕಾರ್ಯಕ್ರಮವು ಮುಕ್ತಾಯವಾಯಿತು.

ದಿನಾಂಕ ೨೬ ರಂದು ಮುಂಜಾನೆ ೧೧ ಘಂಟೆಗೆ ಗಂ. ಸರಕಾರಿ ಟ್ರೇನಿಂಗ ಕಾಲೇಜದ ಪ್ರಾರ್ಥನಾ ಮಂದಿರ ದಲ್ಲಿ ಜೀವನ ಶಿಕ್ಷಣ ಸಪ್ತಾಹದ ಮುಕ್ತಾಯ ಸಮಾ ರಂಭವು ನೆರವೇರಿತು.

ಈ ಸಮಾರಂಭಕ್ಕೆ ಮುಖ್ಯ ಅತಿಥಿಗಳಾಗಿ ಶ್ರೀ ಬಿ. ಎಮ್. ಶಿಂತ್ರಿ ಯವರು ಆಗಮಿಸಿದ್ದರು. ಸಭೆಯ ಅಧ್ಯಕ್ಷತೆಯನ್ನು ಧಾರವಾಡ ಜಿಲ್ಲೆಯ ಮೆ|| ಎ. ಇ. ರವರಾದ ಶ್ರೀ ಎಂ. ಜಿ. ಹಂದ್ರಾಳ ಸಾಹೇಬರವರು ವಹಿಸಿದ್ದರು. ವೇದಿಕೆಯ ಮೇಲೆ ಅಧ್ಯಕ್ಷರೂ ಗಂ. ಸ. ಟ್ರೇನಿಂಗ ಕಾಲೇಜದ ಪ್ರಿನ್ಸಿಪಾಲರಾದ ಶ್ರೀ ಜೋತಿ ಯವರೂ, ಪದವೀಧರ ಜೀವನ ಶಿಕ್ಷಣ ಕೇಂದ್ರದ ಪ್ರಿನ್ಸಿಪಾಲರಾದ ಶ್ರೀ ಹುಕ್ಕೇರಿಯವರೂ - ಹಾಗೂ ಧಾರವಾಡದ D. E. I. ಶ್ರೀ ಉಣಕಲ್ಲ ಸಾಹೇಬರವರೂ ವಿರಾಜಮಾನರಾಗಿದ್ದರು.

ಪ್ರಾರಂಭದಲ್ಲಿ ಸಾಮೂಹಿಕ ಪ್ರಾರ್ಥನೆ ನಡೆ ಯಿತು. ನಂತರ ಶ್ರೀ ಎಸ್. ಪ್ಹಿ. ಪಂಡಿತ ಗುರುಗಳು ಜೀವನ ಶಿಕ್ಷಣ ಸಪ್ತಾಹದ ೭ ದಿನಗಳ ವರದಿಯನ್ನು ಓದಿ ಹೇಳಿದರು.

ಸಭೆಯ ಅಧ್ಯಕ್ಷರಾದ ಶ್ರೀ ಎಂ. ಜಿ. ಹಂದ್ರಾಳ ರವರು ಈ ವರ್ಷ ಜೀವನ ಶಿಕ್ಷಣ ಸಪ್ತಾಹದ ಬಗೆಗೆ ಮಾಡಿದ ಪೂರ್ವ ಯೋಜನೆಯನ್ನು ಸಂಕ್ಷಿಪ್ತದಲ್ಲಿ ತಿಳಿ ಸಿದರು. ಹಾಗೂ ಜೀವನ ಶಿಕ್ಷಣದ ಪ್ರಚಾರ ಹಾಗೂ ಆದರ ವಿಸ್ತರಣೆಯ ಬಗೆಗೆ ಸರಕಾರ ತಳೆದ ಧೋರಣೆ ಯನ್ನು ವಿಶದಪಡಿಸಿದರು.

ಮುಖ್ಯ ಅತಿಥಿಗಳಾದ ಶ್ರೀ ಬಿ. ಎಮ್. ಶಿಂತ್ರಿ ಯವರು ಜೀವನ ಶಿಕ್ಷಣದ ಬಗೆಗೆ ತಾವು ತುಂಬಾ ಆಶಾ ವಾದಿಗಳಾಗಿರುವದಾಗಿ ತಿಳಿಸಿದರು. ಮಕ್ಕಳು ತಯಾರಿ ಸಿದ ವಸ್ತುಗಳ ಪ್ರದರ್ಶನ ಕಂಡು ಅವರು ಹರ್ಷ ಪುಲಕಿತ ರಾಗಿ ತಾವು ಹಿಂದೆಯೇ ಅಪೇಕ್ಷಿಸಿದ್ದ ಜೀವನ ಶಿಕ್ಷಣ ವನ್ನು ಈಗ ಕಾಣುತ್ತಿರುವದಾಗಿ ತಿಳಿಸಿದರು. ಜನತೆಯ ಒಲುವಿಗನುಸರಿಸಿಯೇ ಶಿಕ್ಷಣ ಪದ್ಧತಿ ರೂಪಿತವಾಗಬೇ ಕೆಂಬ ಬಗ್ಗೆ ತಮ್ಮ ನಿಲುಮೆಯನ್ನು ವ್ಯಕ್ತಪಡಿಸಿ ಆ ಆಶೆಯನ್ನು ಇಂದು ಜೀವನ ಶಿಕ್ಷಣವು ನೆರವೇರಿ ಸುತ್ತಿದೆ ಎಂದು ನುಡಿದರು.

ಧಾರವಾಡದ D. E. I. ಶ್ರೀ ಉಣಕಲ್ಲರವರು ಆಭಾರವನ್ನು ಮನ್ನಿಸಿದರು. ವಂದೇ ಮಾತರಂ ಗೀತೆ ಯೊಂದಿಗೆ ಸಭೆಯು ಮುಕ್ತಾಯವಾಯಿತು.

ಜೀವನ ಶಿಕ್ಷಣ ಶಾಲೆಗಳಲ್ಲಿ

ಸಾಂಸ್ಕೃತಿಕ ಚಟುವಟಿಕೆಗಳು

ಕುಮಾರಿ : **ಪದ್ಮಾವತಿ ಗುಬ್ಬಿ,** ೨ನೇ ವರ್ಷ ವನಿತಾ ಟ್ರೇನಿಂಗ ಕಾಲೇಜ, ಧಾರವಾಡ

ಶಾಲೆಯು ಒಂದು ಸಾಮಾಜಿಕ ಸಂಸ್ಥೆ. ಅಲ್ಲಿ ಕೂಡಿ ಬಾಳುವ ಕಲೆಯನ್ನು ಮಕ್ಕಳು ಪ್ರತ್ಯಕ್ಷ ಜೀವನದ ಮುಖಾಂತರವಾಗಿ ಕಲಿಯುವರು. ಮೊದಲು ಎಷ್ಟೋ ವಿಷಯಗಳ ಅಭ್ಯಾಸ ಪತ್ರಿಕಾತೀತ ಚಟುವಟಿಕೆಗಳೆಂದು ಕಲಿಸಲ್ಪಡುತ್ತಿದ್ದವು. ಆದರೆ ಈಗಿನ ಜೀವನ ಶಿಕ್ಷಣ ಶಾಲೆಗಳಲ್ಲಿ ಜೀವನಕ್ಕೆ ಸನ್ನಿಹಿತವಾದ ಚಟುವಟಿಕೆಗಳನ್ನು ಅಭ್ಯಾಸ ಪತ್ರಿಕೆಗೆ ಜೋಡಿಸಲಾಗಿದೆ. ಮತ್ತು ಪಠ್ಯ ವಸ್ತುಗಳು ಸಾಧನವಾಗಿವೆ. ಇಂತಹ ಚಟುವಟಿಕೆಗಳಲ್ಲಿ ಸಾಂಸ್ಕೃತಿಕ ಚಟುವಟಿಕೆಯು ಒಂದು.

ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಪುಣ್ಯತಿಥಿ, ರಾಷ್ಟ್ರೀಯ ಹಬ್ಬಗಳು, ದಿನಾಚರಣೆ, ಜಯಂತಿಗಳು, ಪ್ರವಾಸಗಳು, ಮನರಂಜನೆಯ ಕಾರ್ಯಕ್ರಮಗಳು, ಸಾಹಿತ್ಯ ವಿಷಯದ ಚಟುವಟಿಕೆಗಳು, ಪ್ರದರ್ಶನ ಈ ಎಲ್ಲ ಚಟುವಟಿಕೆಗಳು ಮಕ್ಕಳ ಸಾಂಘಿಕ ಪ್ರವೃತ್ತಿಯನ್ನು ಉದಾತ್ತೀಕರಿಸಲು ಸಹಾಯ ಮಾಡುತ್ತವೆ. ನಿಸರ್ಗದ ಚಮತ್ಕಾರಗಳಿಗೆ ಮನಸೋತು ದೇವರಲ್ಲಿ ಶ್ರದ್ಧೆಯನ್ನು ಹುಟ್ಟಿಸುತ್ತವೆ. ತನ್ನ ಜೀವನವು ಉದಾತ್ತ ಮಟ್ಟಕ್ಕೆ ಹೋಗಬೇಕೆಂದು ಬಯಸುವ ಸುದಿನಗಳನ್ನು ತಂದೊಡ್ಡುತ್ತವೆ. ಶಾಲೆಯನ್ನು ಅಲಂಕರಿಸುವಲ್ಲಿ ಮಕ್ಕಳ ಕೌಶಲ್ಯ ಸ್ಫುಟಗೊಳ್ಳುತ್ತದೆ. ಸೌಂದರ್ಯದ ಭಾವನೆ ವಿಕಸಿತ ಹೊಂದುತ್ತದೆ.

ಧಾರ್ಮಿಕ ಹಬ್ಬಗಳನ್ನು ಆಚರಿಸುವಲ್ಲಿ ಸಾಮಾಜಿಕ ಜೀವನಕ್ಕೆ ಪೋಷಕವಾಗುವಂತಹ ಸಾಂಸ್ಕೃತಿಕ ಪ್ರಗತಿಯ ಹೆಜ್ಜೆಗಳನ್ನು ತೋರಿಸುವ ಧಾರ್ಮಿಕ ಹಬ್ಬಗಳನ್ನು ಆಚರಿಸಬೇಕು. ಮಹಾಪುರುಷರ ಮಹತ್ಕಾರ್ಯದ ತಿಳುವಳಿಕೆ ಉಂಟಾಗಬೇಕು. ಒಂದೊಂದು ಹಬ್ಬದ ವೈಶಿಷ್ಟ್ಯಗಳೇ ಬೇರೆ. ಅದಕ್ಕೆ ತಕ್ಕಂತೆ ವಿಚಾರಪೂರಿತವಾಗಿ ಹಬ್ಬಗಳನ್ನು ಆಚರಿಸಬೇಕು. ಸೈಸರ್ಗಿಕವಾಗಿ ಇರುವ ಕೃಷಿಯ ಮಹತ್ವವು ಮಕ್ಕಳಿಗೆ ಇರಬೇಕು. ಕೃಷಿಗೆ ಉಪಯುಕ್ತವಾದ ಸಾಧನೆಗಳನ್ನು ಪೂಜಿಸುವದು. ಉದಾ:– ಕಾರಹುಣ್ಣಿವೆ, ಮಣ್ಣೆತ್ತಿನ ಅಮವಾಸೆ, ಶೀಗೆ ಹುಣ್ಣಿವೆ ಇವುಗಳನ್ನು ಆಚರಿಸುವಾಗ್ಗೆ ಹೊಲಗಳಿಗೆ ಹೋಗುವದು ಒಳ್ಳೆಯದು. ಇಂತಹ ನೈಸರ್ಗಿಕ ಚಟುವಟಿಕೆಯನ್ನು ಆಯ್ದುಕೊಂಡು ಮಕ್ಕಳಿಗೆ ಭೂಮಿ, ಹವೆ, ಬೆಳೆಗಳ ಬಗೆಗೆ ಪ್ರತ್ಯಕ್ಷ ಜ್ಞಾನ ಮಾಡಿಕೊಡಬೇಕು. ನಾಡಿನ ಚರಿತ್ರವನ್ನು ರೂಪಿಸಿದ ಮಹಾಪುರುಷರ ದಿನಾಚರಣೆ, ಸ್ವಾತಂತ್ರ್ಯ ಹೋರಾಟದ ಮಹತ್ವದ ಘಟನೆಗಳು, ನಾಡಿನ ಭವಿತವ್ಯತೆಯನ್ನು ರೂಪಿಸಲು ಹೆಣಗಾಡಿದ ಸ್ತ್ರೀ ಪುರುಷರ ಚರಿತ್ರವು ತಿಳಿಯುವಂತೆ ರಾಷ್ಟ್ರೀಯ ಹಬ್ಬದ ದಿನಾಚರಣೆಗಳಲ್ಲಿ ಅಡಕವಾಗಿರಬೇಕು; ಮತ್ತು ಮ. ಗಾಂಧಿಜಿ, ಸುಭಾಸ, ಟಿಳಕರ ಜಯಂತಿಯನ್ನು ಆಚರಿಸಿ ಮಕ್ಕಳಲ್ಲಿ ದೇಶಾಭಿಮಾನವು ಸ್ಫುಟಗೊಳ್ಳುವಂತೆ ಮಾಡಬೇಕು.

ಶಾಲೆಯ ಹುಟ್ಟು ಹಬ್ಬ, ಪಾಲಕರ ದಿನ, ಶಾರೀರಿಕ ದಿನ ಇವು ಮಕ್ಕಳ ಚಟುವಟಿಕೆಗಳನ್ನು ಪ್ರದರ್ಶಿಸಲು ಮಹತ್ವದ ಸಂಗತಿಗಳು. ಪಾಲಕರು ತಮ್ಮ ಮಕ್ಕಳ ಕೃತಿಯನ್ನು ನೋಡಲು ಅವಕಾಶ ದೊರೆಯುವದು. ಸಭೆಯನ್ನು ತಯಾರಿ ಮಾಡುವದು, ಅತಿಥಿಗಳ ಸ್ವಾಗತ, ಧ್ವಜವಂದನೆ, ಸಾಮೂಹಿಕ ಪ್ರಾರ್ಥನೆ ಇವುಗಳನ್ನು ಏರ್ಪಡಿಸುವದರಿಂದ ಸಾಮಾಜಿಕ ವಾತಾವರಣವು ಫಲಪ್ರದವಾಗುವದು. ನೈಸರ್ಗಿಕ ಚಟುವಟಿಕೆಗಳನ್ನು ಏರ್ಪಡಿಸುವಾಗ್ಗೆ ಚಿಕ್ಕ ಪ್ರವಾಸವನ್ನು ಕೈಕೊಳ್ಳಬೇಕು. ಕೋಟೆ, ಕೊತ್ತಲೆಗಳಿಂದ ಐತಿಹಾಸಿಕ ಸ್ಥಳದ ಕಲ್ಪನೆ ಮಕ್ಕಳಿಗೆ ಪ್ರತ್ಯಕ್ಷವಾಗಿ ಆಗುತ್ತದೆ. ಭೌಗೋಲಿಕ ಸ್ಥಳದ ಮಹತ್ವವು ಗೊತ್ತಾಗುತ್ತದೆ. ಪ್ರವಾಸದ ಚಟುವಟಿಕೆಯಿಂದ ಆನಂದವಾಗುತ್ತದೆ, ಇಷ್ಟೇ ಅಲ್ಲ ಆಯಾಸವನ್ನು ಹೊಡೆದೊಡಿಸುವ ತಕ್ಕ ಔಷಧಿ; ಶಿಲ್ಪಕಲೆ, ಚಿತ್ರಕಲೆಯಿಂದ ಒಡಗೂಡಿದ ಗುಡಿಗೋಪುರಗಳ ನಿರೀಕ್ಷಣೆಯನ್ನು ಮಾಡುವದರಿಂದ ಮಕ್ಕಳಲ್ಲಿ ಕಲಾಭಿಮಾನ, ಅಭಿರುಚಿ

ಅಭ್ಯಾಸಮಾಡಿಸಿದ್ದಲ್ಲಿ ಪ್ರಯೋಜನವಾಗುವುದು. ಇಂಥ ಅಭ್ಯಾಸವನ್ನು ಅಂಗಡಿಯವರಲ್ಲಿ ಮಾತ್ರವಲ್ಲ ಮನೆಯಲ್ಲಿಯೂ ಮಾಡಿಸಬಹುದು.

ಬಹುಮಟ್ಟಿಗೆ ಇಂದಿನ ಶಾಲೆಗಳಲ್ಲಿ ಎಂದರೆ ಮಿಡಲ್ ಸ್ಕೂಲ್, ಹೈಸ್ಕೂಲ್, ಮಿಡಲ್‌ಸ್ಕೂಲ್‌ಗಳಲ್ಲಿ ಮಾತ್ರ ಪ್ರಯೋಗಾಲಯಗಳನ್ನು ಏರ್ಪಡಿಸಲಾಗಿದೆ. ಪಾಠಶಾಲೆಯಲ್ಲಿ ಕಲಿಸುವ ವಿಷಯಗಳನ್ನು ಪ್ರಯೋಗಾಲಯಕ್ಕೆ ಸಂಬಂಧಪಡಿಸಿ ಅಭ್ಯಾಸಮಾಡಿಸಲಾಗುತ್ತದೆ. ಪ್ರಯೋಗಾಲಯದಲ್ಲಿ ಮಾಡಿಸುವ ಅಭ್ಯಾಸಗಳು ಪಾಠಶಾಲೆಯಲ್ಲಿ ಕಲಿಸುವ ವಿಷಯಗಳಿಗೆ ಸಂಬಂಧಪಟ್ಟಿರಬೇಕು. ಪಾಠಶಾಲೆಯಲ್ಲಿ ಕಲಿಸುವ ವಿಷಯಗಳಿಗೆ ಸಂಬಂಧಪಡದೆ ಇರುವ ಅಭ್ಯಾಸಗಳನ್ನು ಪ್ರಯೋಗಾಲಯದಲ್ಲಿ ಮಾಡಿಸಿದರೆ ಅದರಿಂದ ಪ್ರಯೋಜನವಾಗುವುದಿಲ್ಲ. ಪಾಠಶಾಲೆಯಲ್ಲಿ ಕಲಿಸುವ ವಿಷಯಗಳಿಗೆ ಸಂಬಂಧಪಟ್ಟ ಅಭ್ಯಾಸಗಳನ್ನು ಪ್ರಯೋಗಾಲಯದಲ್ಲಿ ಮಾಡಿಸಿದರೆ ಅದರಿಂದ ಪ್ರಯೋಜನವಾಗುವುದು. ಆದರೆ ಪಾಠಶಾಲೆಯಲ್ಲಿ ಕಲಿಸುವ ವಿಷಯಗಳಿಗೆ ಸಂಬಂಧಪಟ್ಟ ಅಭ್ಯಾಸಗಳನ್ನು ಪ್ರಯೋಗಾಲಯದಲ್ಲಿ ಮಾಡಿಸಿದರೆ ಅದರಿಂದ ಪ್ರಯೋಜನವಾಗುವುದಿಲ್ಲ. ಪಾಠಶಾಲೆಯಲ್ಲಿ ಕಲಿಸುವ ವಿಷಯಗಳಿಗೆ ಸಂಬಂಧಪಟ್ಟ ಅಭ್ಯಾಸಗಳನ್ನು ಪ್ರಯೋಗಾಲಯದಲ್ಲಿ ಮಾಡಿಸಿದರೆ ಅದರಿಂದ ಪ್ರಯೋಜನವಾಗುವುದು. ಆದರೆ ಪಾಠಶಾಲೆಯಲ್ಲಿ ಕಲಿಸುವ ವಿಷಯಗಳಿಗೆ ಸಂಬಂಧಪಡದೆ ಇರುವ

ಅವುಗಳ ಕೈಪಿಡಿಯ ಮೂಲಕ ಕಲಿಯಲು ಪ್ರಯತ್ನಿಸಿದರು. ಅವರು ಕೈಪಿಡಿಯ ಪ್ರತಿಯೊಂದು ಪದವನ್ನೂ ಅಧ್ಯಯನ ಮಾಡಿದರು. ಅವರು ಅದನ್ನು ಪ್ರತಿ

ಯಾಂತ್ರಿಕನಾದರೆ ಅದು ಕೇವಲ ಶ್ರಮನಾಯಕವಾಗಿರುತ್ತದೆ. ಆಗ ಜ್ಞಾನ ಸಂಪಾದನೆಯೂ ಇಲ್ಲ; ಜ್ಞಾನ ವೃದ್ಧಿಯೂ ಇಲ್ಲ.

ಮಾನವನಿಗೆ ಅತ್ಯವಶ್ಯಕವಾಗಿ ಬೇಕಾದ ಉಪಯುಕ್ತ ಜ್ಞಾನ ಜೀವನದ ಚಟುವಟಿಕೆಗಳ ಮುಖಾಂತರ ಅನುಭವದಿಂದ ಬರುತ್ತದೆ ಈ ಜ್ಞಾನವನ್ನು ಸ್ಥೂಲವಾಗಿ ಎರಡು ಭಾಗಗಳನ್ನಾಗಿ ವಿಂಗಡಿಸಬಹುದು.

೧. ವಿಚಾರ ಶಕ್ತಿ (Reasoning)

೨. ಉಪಯುಕ್ತ ಮಾಹಿತಿ (Functional information)

ಉಪಯುಕ್ತ ಮಾಹಿತಿ ಕಾಲಕಾಲಕ್ಕೆ ಬದಲಾಗುತ್ತಿದ್ದರೂ ವಿಚಾರ ಶಕ್ತಿ, ವೈಜ್ಞಾನಿಕ ದೃಷ್ಟಿ ಎಲ್ಲ ಕಾಲಕ್ಕೂ ಒಂದೇ ಬಗೆಯದಾಗಿರುತ್ತದೆ. ಆದ್ದರಿಂದ ವೈಜ್ಞಾನಿಕವಾದ ವಿಚಾರ ಶಕ್ತಿಯನ್ನು ಬೆಳೆಸುವದಕ್ಕೆ ಹೆಚ್ಚಿನ ಗಮನಕೊಡಬೇಕಾಗುತ್ತದೆ. ಇದನ್ನು ಸೂಕ್ತ ಚಟುವಟಿಕೆಗಳ ಮೂಲಕ ಮಾಡಲು ಸಾಧ್ಯವಿದೆ. ಈ ಜ್ಞಾನ ಮತ್ತು ಚಟುವಟಿಕೆಗಳನ್ನು ಯೋಗ್ಯ ರೀತಿಯಲ್ಲಿ ಸಂಬಂಧಿಸುವ ಶಿಕ್ಷಣ ತಂತ್ರವೇ "ಮೂಲ ಶಿಕ್ಷಣದ ಸಮವಾಯ ತಂತ್ರ" ಈ ತಂತ್ರದ ಮೂಲಕ ಮಗುವಿಗೆ ಕೃತ್ರಿಮವಾದ ಹೆಚ್ಚು ಪ್ರಯೋಜನಕಾರಿಯಲ್ಲದ ಜ್ಞಾನದ ಖಂಡಗಳನ್ನು ಕೊಡದೆ, ಸಹಜವಾದ, ಉಪಯುಕ್ತವಾದ ಹಾಗೂ ಅಖಂಡವಾದ, ಸಮಗ್ರವಾದ ಜ್ಞಾನವನ್ನು ಕೊಡಲು ಸಾಧ್ಯವಾಗುತ್ತದೆ.

ಮಗುವಿಗೆ ಶಿಕ್ಷಣವನ್ನು ಚಟುವಟಿಕೆಗಳ ಮುಖಾಂತರವಾಗಿಯೇ ಕೊಡಬೇಕೆಂದು ಹೇಳಿದಾಗ, 'ಅವು ಎಂತಹವಾಗಿರಬೇಕು?' ಎಂಬ ಪ್ರಶ್ನೆ ಉದ್ಭವಿಸುವದು ಸಹಜ. ಮೊದಮೊದಲು ಚಟುವಟಿಕೆಗಳು ಯಾವುದಾದರೊಂದು ಜೀವನೋದ್ದೇಶಕ್ಕೆ ಸಂಬಂಧಿಸಿಯೇ ಇರಬೇಕೆಂಬ ಧಾವಪ ಇತ್ತು. ಇದರಿಂದ ಅನೇಕ ನ್ಯೂನತೆಗಳು ಕಾಣುಬಂದು ಚಟುವಟಿಕೆಗಳನ್ನು ಮಗುವಿನ ಸಾಮಾಜಿಕ ಹಾಗೂ ನೈಸರ್ಗಿಕ ಸನ್ನಿವೇಶಗಳಿಂದಲೂ ಆರಿಸಬೇಕೆಂದು ತೀರ್ಮಾನಿಸಲಾಯಿತು. ಈ ಎರಡು ಪರಿಸರಗಳಲ್ಲಿ ಸಮಾವೇಶವಾಗಿರುವ ಮಗುವಿನ ಜೀವನದ ಚಟುವಟಿಕೆಗಳನ್ನು ಶಿಕ್ಷಕರ ಸೌಕರ್ಯಕ್ಕಾಗಿ ಈ ಗುಂಪುಗಳಾಗಿ ವಿಂಗಡಿಸಿದ್ದಾರೆ. ಅವು:—

೧. ನಿತ್ಯ ಕ್ರಮದ ಚಟುವಟಿಕೆಗಳು

೨. ಸಾಮಾಜಿಕ ಹಾಗೂ ಸಾಂಸ್ಕೃತಿಕ ಚಟುವಟಿಕೆಗಳು

೩. ನೈಸರ್ಗಿಕ ಪರಿಸರದ ಚಟುವಟಿಕೆಗಳು

೪. ಔದ್ಯೋಗಿಕ ಚಟುವಟಿಕೆಗಳು

೫. ಆಟಗಳು ಮತ್ತು ಮನೋರಂಜಕ ಚಟುವಟಿಕೆಗಳು

ಚಟುವಟಿಕೆಗಳನ್ನು ಆರಿಸುವಾಗ ಶಿಕ್ಷಕರು ತುಂಬಾ ಎಚ್ಚರಿಕೆಯಿಂದ ಇರಬೇಕು. ಹಾಗೂ ಜೀವನದ ನಾನಾ ಮುಖಗಳಲ್ಲಿ ಕಾಣುವ ಸಮಸ್ಯೆಗಳಕಡೆ ಗಮನ ಕೊಡಬೇಕು. ಚಟುವಟಿಕೆಯ ಮುಖಾಂತರ ಬರುವ ಜ್ಞಾನವು ಸ್ಪಷ್ಟ ಹಾಗೂ ಸಹಜವಾಗಿರಬೇಕೇ ವಿನಹ ಎಂದಿಗೂ ಕೃತ್ರಿಮವಾಗಿರಬಾರದು; ಸಂಯೋಗವಾಗಿರಬಾರದು. ಚಟುವಟಿಕೆಯು ಒಂದು ಉದ್ಯೋಗವನ್ನು ಕಲಿಯುವುದಾಗಿರಬಹುದು; ಒಂದು ಸಾಮಾಜಿಕ ಹಬ್ಬವನ್ನಾಗಲೀ, ಉತ್ಸವವನ್ನಾಗಲೀ ಆಚರಿಸುವುದಾಗಿರಬಹುದು; ಅಥವಾ ಯಾವುದಾದರೊಂದು ವಸ್ತು ಅಥವಾ ಪ್ರದೇಶದ ನಿರೀಕ್ಷಣೆಯೂ ಆಗಿರಬಹುದು. ಕೆಲವು ಚಟುವಟಿಕೆಗಳು ಜಾಗ್ರತೆ ಮುಗಿಯಬಹುದು; ಮತ್ತೆ ಕೆಲವಕ್ಕೆ ಹೆಚ್ಚುಕಾಲ ಬೇಕಾಗಬಹುದು; ಇನ್ನು ಹಲವು ಅನೇಕ ದಿನಗಳವರೆಗೆ ನಡೆಯಬಹುದು. ಆದ್ದರಿಂದ ಎಲ್ಲಾ ಚಟುವಟಿಕೆಗಳಿಗೂ ಒಂದೇ ಕಾಲಾವಧಿಯ ನಿರ್ಬಂಧ ಮಾಡುವದು ಸರಿಯಲ್ಲ.

ಚಟುವಟಿಕೆಯನ್ನು ಮಾಡಿಸುವಾಗ ಮಗುವಿಗೆ ಅದರ ಅವಶ್ಯಕತೆ ಉಂಟಾಗುವ ಸನ್ನಿವೇಶವನ್ನು ಮೊದಲು ಕಲ್ಪಿಸಬೇಕು. ಅನಂತರ ಚಟುವಟಿಕೆಯನ್ನು ಮಗುವು ವೈಜ್ಞಾನಿಕವಾಗಿ ಮಾಡಲು ಉತ್ತೇಜಿಸಬೇಕು. ಪ್ರತಿ ಹಂತವನ್ನೂ ಅದು ಏತಕ್ಕೋಸ್ಕರ ಮತ್ತು ಹೇಗೆ ಮಾಡುವದು ಎಂಬುದನ್ನು ಸ್ಪಷ್ಟವಾಗಿ ತಿಳಿದುಕೊಳ್ಳಬೇಕು.

ಶಿಕ್ಷಣ ಮಾಧ್ಯಮಕ್ಕಾಗಿ ಉದ್ಯೋಗಗಳನ್ನು ಆರಿಸುವಾಗ ಅವುಗಳ ಶೈಕ್ಷಣಿಕ ಸೌಲಭ್ಯ ಮತ್ತು ಉಪಯುಕ್ತತೆಗಳ ಕಡೆಯೂ ಗಮನ ಕೊಡಬೇಕು.

ರೂಢಿಯಲ್ಲಿರುವ ಶಿಕ್ಷಣ ಪದ್ಧತಿಯ ಬೋಧನ ಕ್ರಮದಲ್ಲೂ ಅನೇಕ ಉಪಯುಕ್ತ ಅಂಶಗಳಿವೆ; ತತ್ವ ಗಳಿವೆ. ಉದಾಹರಣೆಗೆ ಗೊತ್ತಿರುವುದರ ಸಹಾಯ ದಿಂದ ಗೊತ್ತಿಲ್ಲದಿರುವುದನ್ನು ಪರಿಚಯ ಮಾಡಿಕೊಡು ವದು, ಸುಲಭವಾದುದರಿಂದ ಕಠಿಣವಾದುದರ ಕಡೆಗೆ, ಸಾಕಾರದಿಂದ ನಿರಾಕಾರದ ಕಡೆಗೆ, ವಿಭಜನೆಯಿಂದ ಸಂಯೋಜನೆಯ ಕಡೆಗೆ ಸಾಗುವುದು— ಮುಂತಾದವು. ಇವಲ್ಲದೆ, ಹರ್ಬಾರ್ಟ್ ಎಂಬ ಶಿಕ್ಷಣ ತಜ್ಞನು ಪೀಠಿಕೆ, ವಿಷಯ ದರ್ಶನ, ವಿಷಯ ನಿರೂಪಣೆ, ತತ್ವ ಬೋಧನೆ ಹಾಗೂ ಅಭ್ಯಸನ ಎಂಬ ಐದು ಪಂತಗಳ ಬೋಧನ ಕ್ರಮವನ್ನು ರೂಪಿಸಿದನು. ಸಮವಾಯ ತಂತ್ರವನ್ನು ಉಪಯೋಗಿಸುವಾಗ ಅದಕ್ಕೆ ಅನುಗುಣವಾದ ಐದು ಮೆಟ್ಟಿಲುಗಳನ್ನು ಶಿಕ್ಷಕನ ಮಾರ್ಗದರ್ಶನಕ್ಕಾಗಿ ರೂಪಿಸಿ ದ್ದಾರೆ. ಅವು ಯೋಜನೆ, ಪೂರ್ವಸಿದ್ಧತೆ, ಕಾರ್ಯನಿರ್ವಹಣೆ, ಪರಿಶೀಲನೆ ಹಾಗೂ ದೃಢೀಕರಣ. ಈ ಮೆಟ್ಟಿಲುಗಳನ್ನು ಸೌಕರ್ಯಕ್ಕೋಸ್ಕರ ಪುನಃ ವಿಭಾಗಿಸಿದ್ದಾರೆ.

ಮೂಲ ಶಿಕ್ಷಣದಲ್ಲಿ ಜ್ಞಾನವನ್ನು ಅಖಂಡ ವಾಗಿಯೇ ಕೊಡಬೇಕೆಂದೂ ಅದನ್ನು ಚಟುವಟಿಕೆಯ ಮುಖಾಂತರವೇ ಕೊಡಬೇಕೆಂದೂ ಈ ಮೊದಲೇ ಹೇಳಿದೆ. ಚರಿತ್ರೆ, ಭೂಗೋಳ, ಗಣಿತ, ವಿಜ್ಞಾನ ಮುಂತಾದ ವಿಷಯಗಳು ಹೊರ ನೋಟಕ್ಕೆ ಬೇರೆ ಬೇರೆಯಂತೆ ಕಂಡರೂ ಅವು ಪರಸ್ಪರ ಸಂಬಂಧಿಸಿಯೇ ಇವೆ. ಅವು ಒಂದನ್ನು ಬಿಟ್ಟು ಒಂದು ಇರಲಾರವು. ಇವುಗಳನ್ನು ಬೇರೆ ಬೇರೆಯಾಗಿ ಕಲಿಸದೆ ಒಟ್ಟಿಗೆ ಕಲಿಸಿದರೆ ಮಗುವು ಸುಲಭವಾಗಿ ಹಾಗೂ ಸಹಜವಾಗಿ ಗ್ರಹಿಸಬಲ್ಲದು. ಉದಾಹರಣೆಗೆ ತಕಲಿಯಿಂದ ನೂಲುವದನ್ನೇ ತೆಗೆದು ಕೊಳ್ಳೋಣ. ಈ ಚಟುವಟಿಕೆಯ ಸಹಾಯದಿಂದ ಹತ್ತಿ ಬೆಳೆಯುವ ಪ್ರದೇಶಗಳು, ಹತ್ತಿಯಲ್ಲಿಯ ಬೇರೆಬೇರೆ ಜಾತಿ, ಹತ್ತಿಯಿಂದ ತಯಾರಾಗುವ ಬಟ್ಟೆಗಳು, ಕಾಲ ಕಾಲಕ್ಕೆ ಬೇರೆ ಬೇರೆ ದೇಶಗಳ ಜನತೆಯ ಉಡಿಪಿನ ಲ್ಲಾದ ಬದಲಾವಣೆಗಳು ಇವನ್ನು ತಿಳಿಸಬಹುದು. ತಕಲಿಯ ಚಿತ್ರವನ್ನು ಬರೆಸಬಹುದು. ತಕಲಿ ಯಾವ ಲೋಹಗಳಿಂದ ಮಾಡಲ್ಪಟ್ಟಿದೆ ಎಂಬುದನ್ನೂ ಇತರ ಲೋಹಗಳ ವಿಚಾರವನ್ನೂ ತಿಳಿಸಬಹುದು. ವೃತ್ತ, ಸರಳರೇಖೆ, ಇತ್ಯಾದಿ ರೇಖಾಗಣಿತದ ವಿಷಯಗಳನ್ನೂ ನೂಲಿನ ವಸ್ತುಗಳು, ನಂಬರು ಇತ್ಯಾದಿ ಅಂಕಗಣಿತದ ವಿಷಯಗಳನ್ನೂ, ಆ ಮೂಲಕ ಕೂಡುವದು, ಕಳೆಯು ವದು, ಗುಣಾಕಾರ, ಭಾಗಾಕಾರ, ಇವುಗಳನ್ನೂ ಸಹಜ ವಾಗಿಯೇ ಸಮನ್ವಯ ಮಾಡಿ ಕಲಿಸಬಹುದು.

ನೈಸರ್ಗಿಕ ಚಟುವಟಿಕೆಗಳನ್ನು ಆರಿಸಿಕೊಂಡಾಗ ಗುಡುಗು, ಮಿಂಚು, ಮಳೆ, ನಕ್ಷತ್ರ, ಸೂರ್ಯ, ಚಂದ್ರ ಇತ್ಯಾದಿ ಪ್ರಕೃತಿಯ ವೈಚಿತ್ರ್ಯಗಳ ಮೂಲಕ ಮಕ್ಕಳ ಕುತೂಹಲ ಮತ್ತು ಗ್ರಹಣ ಶಕ್ತಿಯನ್ನು ಹೆಚ್ಚಿಸಿ ತನ್ಮೂಲಕ ವಿಜ್ಞಾನ, ಗಣಿತ, ಭೂಗೋಳ ಮುಂತಾದ ಅನೇಕ ವಿಷಯಗಳನ್ನು ಆಕರ್ಷಕ ರೀತಿಯಲ್ಲಿ ಕಲಿಸ ಬಹುದು.

ಚಟುವಟಿಕೆಗಳಿಂದ ಮಕ್ಕಳಲ್ಲಿ ಸ್ನಾಯುಗಳ ಸಂಯಮನ ಮತ್ತು ಪರಸ್ಪರ ಸಂಘಟನೆಯು ಹೆಚ್ಚು ಹೆಚ್ಚು ಬಲಗೊಂಡು ನಾಜೂಕಾಗುತ್ತದೆ. ಈ ರೀತಿ ಚಟುವಟಿಕೆಗಳ ಮೂಲಕ ಮಕ್ಕಳ ಕಣ್ಣು, ತರಬೇತಿ ಹೊಂದಿದಂತೆ ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಅವರ ಏಕಾಗ್ರತೆ, ರಚನಾತ್ಮಕ ಹಾಗೂ ಉತ್ಪಾದಕ ಭಾವನೆ, ನಿರ್ಣಾಯಕ ಶಕ್ತಿ ಇವುಗಳೂ ತರಬೇತಿ ಹೊಂದುತ್ತವೆ. ಚಟುವಟಿಕೆಗಳು ಯಾವಾಗಲೂ ಸಾಂಘಿಕವಾಗಿಯೇ ಇರಬೇಕು. ಇದರಿಂದ ಮಕ್ಕಳಲ್ಲಿ ಸಹಕಾರ ಮನೋಭಾವ ಬೆಳೆಯುತ್ತದೆ. ಶಿಸ್ತು, ಸಂಯಮ, ನ್ಯಾಯಪ್ರಿಯತೆ, ಕರುಣೆ, ಶುಚಿತ್ವ, ಮುಂತಾದ ಶ್ರೇಷ್ಠಗುಣಗಳು ಬೆಳೆದು ಮಗುವಿನ ಶೀಲ ಸಂವರ್ಧನೆಯಾಗುತ್ತದೆ. ಹೀಗೆ ಮಕ್ಕಳು ಚಟುವಟಿ ಕೆಗಳ ಮುಖಾಂತರ ಗ್ರಹಿಸಿದ ಉಪಯುಕ್ತ ಜ್ಞಾನವನ್ನು ತಮ್ಮ ಸರ್ವಾಂಗೀಣ ವಿಕಾಸಕ್ಕಾಗಿ ಉಪಯೋಗಿಸಿ ಕೊಳ್ಳಬಹುದು.

ಸಮವಾಯ ಬೋಧನೆ ಪದ್ಧತಿಯಲ್ಲಿ ಪರಿಶೀಲನೆ ಹಾಗೂ ದೃಢೀಕರಣಗಳಿಗೆ ಬಹಳ ಮಹತ್ವವಿದೆ. ಮಕ್ಕಳು ತಮ್ಮ ಯೋಜನೆ ಹಾಗೂ ಕಾರ್ಯಸಿದ್ಧಿ ಗಳನ್ನು ತುಲನಾತ್ಮಕ ದೃಷ್ಟಿಯಿಂದ ನೋಡುತ್ತಾ ವಿಮರ್ಶಾತ್ಮಕ ಮನೋಭಾವ ಬೆಳಸಿಕೊಳ್ಳುತ್ತಾರೆ. ಮತ್ತು ಮಕ್ಕಳು ತಾವು ಕಲಿತ ಹೊಸಜ್ಞಾನವನ್ನು ಬೇರೆ ಬೇರೆ ಸಂದರ್ಭಗಳಲ್ಲಿ ಉಪಯೋಗಿಸಲು ಶಕ್ತರಾ ಗುವಂತೆ ಮಾಡಲು ಅಭ್ಯಸನ ಅವಶ್ಯವಾಗಿ ಬೇಕು. ಸಾಂಪ್ರದಾಯಿಕ ಶಿಕ್ಷಣ ಪದ್ಧತಿಯಲ್ಲಿ ಮಕ್ಕಳು ತಮಗೆ

ಸಂಬಂಧವಿಲ್ಲದ ವಿಷಯಗಳನ್ನು ಯಾಂತ್ರಿಕವಾಗಿ ಶಿಕ್ಷಕರ ಬಲವಂತಕ್ಕಾಗಿ ಕಲಿಯುತ್ತಿದ್ದಾಗ ಅಭ್ಯಸನ ಅರ್ಥ ಹೀನವಾಗಿತ್ತು; ಬಹು ಮಟ್ಟಿಗೆ. ವ್ಯರ್ಥವೂ ಆಗಿತ್ತು. ಆದರೆ ಮೂಲ ಶಿಕ್ಷಣ ಪದ್ಧತಿಯಲ್ಲಿ ಮಕ್ಕಳು ತಮಗೆ ಬೇಕಾಗಿರುವ, ಸಂಬಂಧಿಸಿರುವ ವಿಷಯಗಳನ್ನು ಚಟುವಟಿಕೆಗಳ ಮೂಲಕ ಮತ್ತೆ ಮತ್ತೆ ಕಲಿತರೂ ಅದು ಬೇಸರವಾಗದೆ ಅವರಿಗೆ ಆ ವಿಷಯವನ್ನು ಕಲಿತ ಬಗ್ಗೆ ಹಾಗೂ ಕಲಿತುದನ್ನು ಉಪಯೋಗಿಸುವ ಬಗ್ಗೆ ಸಮಾಧಾನವಾಗುತ್ತದೆ ಮತ್ತು ಸಂತೋಷವು ಆಗುತ್ತದೆ.

ಮೂಲ ಶಿಕ್ಷಣದಲ್ಲಿ ಸಾಕ್ಷರತೆಗೂ ಸ್ಥಾನವಿದೆ. ಆದರೆ ಸಾಕ್ಷರತೆಯೇ ಶಿಕ್ಷಣದ ಆದಿಯೂ ಅಲ್ಲ; ಅಂತ್ಯವೂ ಅಲ್ಲ; ಮಗುವು ತನ್ನ ಸ್ವಭಾವಗಳಿಗೆ ಅನುಸಾರವಾಗಿ ಚಟುವಟಿಕೆಗಳನ್ನು ಮಾಡುತ್ತಲೇ ಅಕ್ಷರಗಳನ್ನೂ ಕಲಿತುಕೊಳ್ಳುತ್ತದೆ.

ಕಾವ್ಯಗಳು ಸೌಂದರ್ಯಾಭಿರುಚಿ ಮುಂತಾದ ಹಲವು ಭಾವ ಸಿಷ್ಠೆವಿಷಯಗಳನ್ನೂ, ಕ್ರಮಬದ್ಧವಾದ ಚರಿತ್ರೆಯನ್ನೂ ಮಕ್ಕಳಿಗೆ ಚಟುವಟಿಕೆಗಳ ಮುಖಾಂತರವಾಗಿಯೇ ಕಲಿಸಲು ಸಾಧ್ಯವಿಲ್ಲ. ಇಂತಹ ವಿಷಯಗಳನ್ನು ಸಾಂಪ್ರದಾಯಿಕ ಪದ್ಧತಿಯಿಂದಲೇ ಆದರೆ ವೈಜ್ಞಾನಿಕ ದೃಷ್ಟಿಯಿಂದ ಕಲಿಸುವದು ಒಳ್ಳೆಯದು.

ಶಿಕ್ಷಕನು ವರ್ಷದ ಆದಿಯಲ್ಲಿಯೇ ಮಗುವಿನ ಮನಸ್ಸಿನ ಮಟ್ಟವನ್ನು ತನ್ನ ದೃಷ್ಟಿಯಲ್ಲಿಟ್ಟುಕೊಂಡು ಒಂದು ವಾರ್ಷಿಕ ಯೋಜನೆಯನ್ನು ತಯಾರಿಸಬೇಕು. ಅದರಲ್ಲಿ ಬರುವ ಚಟುವಟಿಕೆಗಳನ್ನು ಅವುಗಳ ಕಠಿಣತೆಗೆ ತಕ್ಕಂತೆ ಕ್ರಮವಾಗಿ ಜೋಡಿಸಬೇಕು. ಈ ಚಟುವಟಿಕೆಗಳಿಂದ ಒಟ್ಟಾಗಿ ಜ್ಞಾನ ಅವರಿಗೆ ಉಪಯುಕ್ತವಾಗಿರಬೇಕು. ಮತ್ತು ಸೂಲದಿಂದ ಸೂಕ್ಷ್ಮಕ್ಕೆ ಸಾಗುವಂತಿರಬೇಕು. ಇಷ್ಟಾದ ಮೇಲೆ ಈ ವಾರ್ಷಿಕ ಯೋಜನೆಯ ಸಹಾಯದಿಂದ ತ್ರೈಮಾಸಿಕ, ಮಾಸಿಕ, ವಾರದ ಹಾಗೂ ದಿನದ ಯೋಜನೆಯನ್ನು ಸಿದ್ಧಗೊಳಿಸಬೇಕು. ಈ ಯೋಜನೆಯಲ್ಲಿ ಮುಖ್ಯ ಚಟುವಟಿಕೆಗಳೂ, ಉಪ ಚಟುವಟಿಕೆಗಳೂ ಇರಬೇಕು. ಈ ಚಟುವಟಿಕೆಗಳನ್ನು ಯಶಸ್ವಿಯಾಗಿ ಮಾಡಲು ಬೇಕಾದ ಸಾಧನ ಸಾಮಗ್ರಿಗಳ ಪಟ್ಟಿಯನ್ನು ತಯಾರಿಸಿ ಅವನ್ನು ಸಿದ್ಧಗೊಳಿಸಿಕೊಳ್ಳಬೇಕು. ಅಲ್ಲದೆ ಉಪಯುಕ್ತ ಪುಸ್ತಕಗಳ ಪಟ್ಟಿಯೂ ಸಿದ್ಧವಾಗಬೇಕು.

ಇನ್ನು ಪಠ್ಯ ಪುಸ್ತಕಗಳ ಬಗ್ಗೆ ಒಂದು ಮಾತು. ಜೀವನ ಶಿಕ್ಷಣದ ಬೋಧನೆ ಪದ್ಧತಿಯಲ್ಲೂ ಪುಸ್ತಕಗಳಿಗೆ ಸ್ಥಾನ ವಿದ್ದೇ ಇದೆ. ಆದರೆ ಇವು ಶಿಕ್ಷಕನಿಗೆ ಸಹಾಯಕವಾಗಿರಬೇಕೇ ವಿನಹ ಶಿಕ್ಷಕನು ಇವುಗಳ ದಾಸನಾಗಿರಕೂಡದು. ಜೀವನ ಶಿಕ್ಷಣ ಶಾಲೆಗಳಿಗೆ ಬೇಕಾದ ಪುಸ್ತಕಗಳನ್ನು ಮಕ್ಕಳ ಮಾನಸಿಕ ಬೆಳವಣಿಗೆಯನ್ನು ಅವಲಂಬಿಸಿ ಬರೆಯಿಸಬೇಕು. ಆದರೆ ತರ್ಕಬದ್ಧ ಕ್ರಮ (Logical Order) ವನ್ನು ಬಿಡಬಾರದು. ಈ ಗ್ರಂಥಗಳನ್ನು ರಚಿಸುವವರು ಮನೋವೈಜ್ಞಾನಿಕ ಕ್ರಮಕ್ಕೂ, ತರ್ಕಬದ್ಧ ಕ್ರಮಕ್ಕೂ ನಡುವೆ ಒಂದು ಸುಭದ್ರ ಹಾಗೂ ಸುರಕ್ಷಿತವಾದ ಸೇತುವೆಯನ್ನು ನಿರ್ಮಿಸಬೇಕು. ಈ ಕೆಲಸ ಅಗಾಧವಾಗಿದ್ದು ಸರ್ಕಾರದವರೇ ಇದನ್ನು ವಹಿಸಿಕೊಂಡು ಸುರಿತ ಹಾಗೂ ಯೋಗ್ಯ ಶಿಕ್ಷಕರಿಂದ ಮಾಡಿಸಬೇಕು.

ಕೊನೆಯದಾಗಿ ಮೂಲ ಶಿಕ್ಷಣ ಫಲಪ್ರದವಾಗಬೇಕಾದರೆ, ಸಮುವಾಯ ತಂತ್ರ ಯಶಸ್ವಿಯಾಗಬೇಕಾದರೆ ಇವೆಲ್ಲಕ್ಕಿಂತ ಮಿಗಿಲಾಗಿ ಯೋಗ್ಯ ಶಿಕ್ಷಕನ ಅವಶ್ಯಕತೆ ಇದೆ. ಗಾಂಧೀಜಿಯವರು ತಮ್ಮ ಈ ಯೋಜನೆಯಲ್ಲಿ ಶಿಕ್ಷಕನಿಗೆ ಮಹತ್ವದ ಸ್ಥಾನ ಕೊಟ್ಟಿದ್ದರು. ಶಿಕ್ಷಕನ ಸಾಮರ್ಥ್ಯ, ದೇಶದ ರಚನಾ ಕಾರ್ಯದಲ್ಲಿ ಅವನಿಗಾಗಿರುವ ಆಸಕ್ತಿ, ಪ್ರಯೋಗವನ್ನು ಮಾಡುವಂತಹ ವೈಜ್ಞಾನಿಕ ಮನೋಭಾವ ಮತ್ತು ಅವನು ತನ್ನ ಕಾರ್ಯದಲ್ಲಿ ಕಂಡು ಬರುವ ಫಲಿತಾಂಶಗಳನ್ನು ಕ್ರಮಬದ್ಧವಾಗಿ ಗುರುತು ಹಾಕಿಕೊಂಡು ತನ್ನ ವ್ಯವಸಾಯಿ ಬಂಧುಗಳೊಡನೆ ಚರ್ಚಿಸಿ ಸರಿಯಾದ ಮಾರ್ಗವನ್ನು ಕಂಡುಕೊಳ್ಳುವುದೂ ಈ ಯೋಜನೆಯ ಯಶಸ್ಸಿಗೆ ಕಾರಣವಾಗಿರುತ್ತದೆ. ಆದುದರಿಂದ ನಾಡಿನ ಹಾಗೂ ನಾಡಿನ ಶಿಕ್ಷಣರಂಗದ ಪರ್ವಕಾಲವಾದ ಇಂದು ಶಿಕ್ಷಣ ಕ್ಷೇತ್ರದಲ್ಲಿ ದುಡಿಯುತ್ತಿರುವ ನಾವೆಲ್ಲರೂ ಮೂಲ ಶಿಕ್ಷಣದ ನೆರವಿನಿಂದ ಭಾರತದ ಭಾಗ್ಯಶಿಲ್ಪಿ ಬಾಪೂಜಿಯವರ ರಾಮರಾಜ್ಯದ ಕನಸನ್ನು ನೆನಸನ್ನಾಗಿ ಮಾಡಲು ಪ್ರಯತ್ನಿಸಬೇಕಾದುದು ನಮ್ಮೆಲ್ಲರ ಆದ್ಯ ಕರ್ತವ್ಯವಾಗಿದೆ.

— ಜೈ ಹಿಂದ್ —

ಜೀವನ ಶಿಕ್ಷಣ ಸಪ್ತಾಹ ಹಾಗೂ ಪ್ರಜಾರಾಜ್ಯ ದಿನೋತ್ಸವಗಳು

ಬೈಲಹೊಂಗಲ: ದಿನಾಂಕ ೨೬ ರಂದು ಪ್ರಜಾರಾಜ್ಯ ದಿನೋತ್ಸವದ ದಿವಸ ಇಲ್ಲಿಯ ಉರ್ದು ಗ. ಮು. ಶಾಲೆಯಲ್ಲಿ ಇಲ್ಲಿಯ ಪ್ರಮುಖ ಜವಳಿ ವ್ಯಾಪಾರಿಗಳಾದ ಶ್ರೀ ಎಂ.. ಡಿ. ಶೇಖ ಅವರ ಹಸ್ತದಿಂದ ಧ್ವಜಾರೋಹಣ ಕಾರ್ಯವು ನೆರವೇರಿತು. ಇಲ್ಲಿಯ ಕಾರ್ಯಕ್ರಮಗಳನ್ನು ನೋಡಿ ಆನಂದಿತರಾಗಿ ಶ್ರೀ ಶೇಖರವರು ಗಂಡು ಹಾಗು ಹೆಣ್ಣುಮಕ್ಕಳ ಶಾಲೆಯ ಬಡ ವಿದ್ಯಾರ್ಥಿಗಳಿಗಾಗಿ ೫೦ ರೂಪಾಯಿಗಳ ಉರ್ದು ಪುಸ್ತಕಗಳನ್ನು ೪೨ ರೂಪಾಯಿಗಳ ಪಾಟಿಗಳನ್ನೂ ಮತ್ತು ಸ್ಕಾಲರ್‌ಶಿಪ್ ಪರೀಕ್ಷೆಗೆಂದು ಹೋಗುವ ಬಡ ವಿದ್ಯಾರ್ಥಿಯೋರ್ವನಿಗೆ ೯ ರೂಪಾಯಿಗಳನ್ನೂ ರೋಖ ಕೊಟ್ಟರು.

ಕುಡಚಿ: ಜೀವನ ಶಿಕ್ಷಣದ ಸಪ್ತಾಹದ ಅಂಗವಾಗಿ ಕುಡಚಿ ಕನ್ನಡ, ಮರಾಠಿ, ಉರ್ದು ಶಾಲಾ ಶಿಕ್ಷಕರು ಹಾಗು ಮಕ್ಕಳು ದಿನಾಂಕ ೨೭ರಂದು ಮೆ|| ಇ. ಆಯ್. ಸಾಹೇಬರು ಬೆಳಗಾವಿ ಅವರ ಅಧ್ಯಕ್ಷತೆಯಲ್ಲಿ ಮಕ್ಕಳ ಮನರಂಜನೆ ಕಾರ್ಯಕ್ರಮಗಳು, ಶಿಕ್ಷಕರ ಶೈಕ್ಷಣಿಕ ಪಟಗಳ ಪ್ರದರ್ಶನ ಏರ್ಪಡಿಸಲಾಗಿತ್ತು. ಅಧ್ಯಕ್ಷರು ಸಮಯೋಚಿತವಾಗಿ ಜೀವನ ಶಿಕ್ಷಣದ ಮಹತ್ವವನ್ನು ವಿವರಿಸಿದರು.

ಮುಶೀಗೇರಿ: ಅಖಿಲ ಭಾರತ ಮೂಲ ಶಿಕ್ಷಣದ ಸಪ್ತಾಹದ ಅಂಗವಾಗಿ ದಿ. ೨೪ ರಂದು ಕ. ಗ. ಶಾಲೆಯಲ್ಲಿ ಶ್ರೀ ಡಿ.ಎಸ್. ಹುಯಿಲಗೊಳ ಆ.ಡೆ.ಎ.ಇ. ಗಜೇಂದ್ರಗಡ ಭಾಗ ಇವರ ಅಧ್ಯಕ್ಷತೆಯಲ್ಲಿ ವಸ್ತುಪ್ರದರ್ಶನ ಏರ್ಪಡಿಸಲಾಗಿತ್ತು. ಶ್ರೀ ಅಂದಾನೆಪ್ಪ ದೊಡ್ಡಮೇಟಿ ಎಂ. ಎಲ್. ಎ. ಅವರು ಪ್ರದರ್ಶನದ ಉದ್ಘಾಟನೆಯನ್ನು ಮಾಡಿದರು. ಈ ತಾಲೂಕ ತಹಶೀಲದಾರ ಶ್ರೀ ಕುಲಕರ್ಣಿಯವರು ಮುಖ್ಯ ಅತಿಥಿಗಳಾಗಿ ಆಗಮಿಸಿದ್ದರು. ಮಕ್ಕಳ ನೈಜ ಕಲೆಯನ್ನು ಕಂಡು ಸಂತೋಷಿಸಿದರು.

ಹಳೇರಿತ್ತಿ: ದಿ. ೨೬ ರಂದು ಗ್ರಾಮದಲ್ಲಿ ಬಾಲ–ಬಾಲಕಿಯರಿಂದ ಪ್ರಭಾತಫೇರಿ ನಡೆಯಿತು. ಸ್ಕೂ. ಕ. ಜೇ. ರಿಂದ ಧ್ವಜಾರೋಹಣವಾಯಿತು. ಅಂದು ಸಾಯಂಕಾಲ ೪ ಗಂಟೆಗೆ ಶ್ರೀ ಮಲ್ಲಪ್ಪ ಕೋಡಿಹಳ್ಳಿ ಅವರ ಅಧ್ಯಕ್ಷತೆಯಲ್ಲಿ ಸಭೆ ಜರುಗಿತು. ಅಧ್ಯಕ್ಷರು ಶಾಲಾ ಮಕ್ಕಳ ಉಪಯೋಗಕ್ಕಾಗಿ ೨೫ ರೂ. ಯ ನೀರಿನ ಟಾಕಿಯನ್ನು ಕೊಡುವದಾಗಿ ವಾಗ್ದಾನ ಮಾಡಿದರು.

ಮುಳವಾಡ: ದಿ. ೨೬ ರಂದು ಶ್ರೀ ಎಂ. ವ್ಹಿ. ಪಾಟೀಲ ಅವರಿಂದ ಧ್ವಜಾರೋಹಣವಾಯಿತು. ಮುಳವಾಡ ಗ್ರಾ. ಪಂ, ಕಮೀಟಿಯವರು ಕನ್ನಡ ಗಂಡು ಹಾಗೂ ಹೆಣ್ಣುಮಕ್ಕಳ ಶಾಲೆಗಳಿಗೆ ೫೦ ರೂ. ಬೆಲೆಯ ಕುಡಿಯುವ ನೀರಿನ ಪಾತ್ರೆಗಳನ್ನು ಕೊಟ್ಟರು.

ಬಾಳಂಬೀಡ: ದಿ. ೨೬ ರಂದು ಎಂದಿನಂತೆ ಈ ಸಲವೂ ನಮ್ಮ ಶಾಲೆಯಲ್ಲಿ ಉರ್ದು ಶಾಲೆಯನ್ನೊಳಗೊಂಡು ಮೂಲ ಶಿಕ್ಷಣ ಸಪ್ತಾಹವು ಒಂದು ವಾರದ ವರೆಗೆ ನಡೆಯಿತು. ಈ ಸಪ್ತಾಹದ ಕೊನೆಯದಿನವಾದ ದಶವಾರ್ಷಿಕ ಪ್ರಜಾರಾಜ್ಯೋತ್ಸವದ ಸವಿ ನೆನಹಿಗಾಗಿ ಶಾಲೆಗೆ ೩೦' ಉದ್ದವಾದ (೪೦ ರೂ. ಬೆಲೆಯ) ಕಬ್ಬಿಣದ ಧ್ವಜ ಕಂಬವೊಂದನ್ನು ಊರ ನಾಗರಿಕರು ದೇಣಿಗೆಯ ರೂಪವಾಗಿ ಕೊಟ್ಟರು ಹಾಗೂ ಮಕ್ಕಳ ಸಹಕಾರಿ ಅಂಗಡಿಯ ಬಗ್ಗೆ ಮಂತಿಗೆ ಕೂಡಿಸಿ ಕೊಟ್ಟರು.

ಗುಳೇದಗುಡ್ಡ: ದಿನಾಂಕ ೨೪ ರಂದು ಇಲ್ಲಿಯ ಸೆಂಟ್ರಲ್ ಸ್ಕೂಲಿನಲ್ಲಿ ಜೀವನ ಶಿಕ್ಷಣ ಸಪ್ತಾಹವನ್ನು ಆಚರಿಸಲಾಯಿತು.

ಹುನಗುಂದ: ಇಲ್ಲಿಯ ಕೇಂದ್ರ ಶಾಲೆಯಲ್ಲಿ ದಿ. ೨೦ ರಿಂದ ಏಳು ದಿವಸ ಜೀವನ ಶಿಕ್ಷಣ ಸಪ್ತಾಹವು ಒಳ್ಳೇ ವಿಜೃಂಭಣೆಯಿಂದ ನೆರವೇರಿತು.

ದಿನಾಂಕ ೨೦ ರಂದು ಶ್ರೀ ಮಡಿವಾಳರ ಕೇಂದ್ರ ಶಾಲಾ ಮುಖ್ಯ ಗುರುಗಳ ಅಧ್ಯಕ್ಷತೆಯಲ್ಲಿ ಶ್ರೀ ಜಿ. ಪಿ. ಸಂಜಯ್ಯನಮಠ ವಕೀಲರ ಹಸ್ತದಿಂದ ಸಪ್ತಾಹದ ಉದ್ಘಾಟನೆಯಾಗಿ ಮಾನ್ಯ ಡೆಪ್ಯೂಟಿ ಕಮೀಶನರು ಶ್ರೀ ಕುಪ್ಪಸದ, ಶ್ರೀ ಎಸ್. ಕೆ. ದೇಶಪಾಂಡೆ

ಶ್ರೀ ತೋಟದ, ಶ್ರೀ ಮಾಗಿ, ಶ್ರೀ ಬಳೂರಗಿ, ಶ್ರೀ ಪವಾಡ ಶೆಟ್ಟಿ ಸರಕಾರಿ ಡಾಕ್ಟರರು ಮೊದಲಾದವರು ಅತಿಥಿಗಳಾಗಿ ಆಗಮಿಸಿ ಮನಸ್ಸೋಯು ಭಾಷಣಗಳನ್ನಿತ್ತರು.

ಜೀವನ ಶಿಕ್ಷಣ ಸಪ್ತಾಹದ ಅಂಗವಾಗಿ ವಿಜಾಪೂರ ಜಿಲ್ಲೆಯ ಎಲ್ಲ ಜೀವನ ಶಿಕ್ಷಣ ಸಂಸ್ಥೆಗಳ ಪರವಾಗಿ ವಸ್ತು -ಕಲಾ ಪ್ರದರ್ಶನವನ್ನು ಬಾಗಲಕೋಟೆಯ ಸೆಂಟ್ರಲ್ ಸ್ಕೂಲಿನಲ್ಲಿ ದಿನಾಂಕ ೨೪ ರಂದು ನೆರವೇರಿಸಲಾಯಿತು. ಈ ಸಮಾರಂಭಕ್ಕೆ ಸನ್ಮಾನ್ಯ ಶ್ರೀ ಎಸ್.ಎಸ್. ಮೆಳ್ಳಿಗೇರಿ ಜೀಅರಮನ್ ಜಿಲ್ಲಾ ಭಾರತ ಸೇವಕ ಸಮಾಜ ವಿಜಾಪೂರ ಅವರು ಉದ್ಘಾಟಕರಾಗಿಯೂ, ಶ್ರೀ ಜಿ. ಎಂ. ಹಿರೇಮಠ ಅಶಿ.ಕವಿಶನರ ಬಾಗಲಕೋಟ ಅವರು ಅಧ್ಯಕ್ಷರಾಗಿಯೂ ಆಗಮಿಸಿದ್ದರು. ಈ ಸಭೆಗೆ ಶ್ರೀ ಗುರುರಾವ್ ಜೋರಾಪೂರ, ಶ್ರೀ ಆರ್. ಎಚ್. ಮುಲ್ಲಾ ಶಾಸನಾಧಿಕಾರಿಗಳು ವಿಜಾಪೂರ, ಅ. ಎ. ಓ. ಹಾಗು ಸಹಾಯಕ ಉಪಶಿಕ್ಷಣಾಧಿಕಾರಿಗಳು ನಗರದ ಪ್ರತಿಷ್ಠಿತ ನಾಗರಿಕರೂ ಶಿಕ್ಷಕ-ಶಿಕ್ಷಕಿಯರೂ ಆಗಮಿಸಿದ್ದರು. ಕೊನೆಗೆ ರಾಷ್ಟ್ರಗೀತೆಯೊಂದಿಗೆ ಸಭೆಯು ಮುಕ್ತಾಯವಾಯಿತು.

ಪರಮಾನಂದವಾಡಿ: ದಿ. ೩೦ ರಂದು ಇಲ್ಲಿ ಪ್ರಾಥಮಿಕ ಶಿಕ್ಷಕರ ಸೀಮಾ ಸಮ್ಮೇಲನವು ಶ್ರೀ ಎಮ್. ಎಸ್. ಕುಲಕರ್ಣಿ, ಉಪಶಿಕ್ಷಣಾಧಿಕಾರಿಗಳು, ಬೆಳಗಾವಿ ಅವರ ಹಿರಿಯತನದಲ್ಲಿ ನೆರವೇರಿತು.

ಆಗಡಿ: ದಿ. ೨೦ ರಿಂದ ೨೬ ಪೂರ್ಣ ಒಂದು ವಾರದ ವರೆಗೆ ಅಖಿಲ ಭಾರತ ಜೀವನ ಶಿಕ್ಷಣ ಸಪ್ತಾಹವನ್ನು ಆಚರಿಸಲಾಯಿತು.

ಚಿಕ್ಕಹಡಸಲಗಿ (ತಾ. ಜಮಖಂಡಿ): ಶಾಲೆಗೆ ಶ್ರೀ ಜೋತಬಾಬು ಪೋರೆ ಪಡಸಲಗಿ ಇವರು ದಿ. ೨೬ ರಂದು ಪ್ರಜಾರಾಜ್ಯ ದಿನಕ್ಕಿಂ ರೂಪಾಯಿ ಬೆಲೆ ಬಾಳುವ ಧ್ವಜಾಂಗಟೆಯನ್ನು ದೇಣಿಗೆ ಕೊಟ್ಟಿದ್ದಾರೆ.

ಇಲಕಲ್ಲ: ದಿ. ೨೦ ರಿಂದ ೨೬ ರ ವರೆಗೆ ಜೀವನ ಶಿಕ್ಷಣ ಸಪ್ತಾಹವನ್ನು ಸುಮಾರು ೨೦೦೦ ಬಾಲ-ಬಾಲಕಿಯರು ಕೂಡಿಕೊಂಡು ಆಚರಿಸಿದರು.

ರಬಕವಿ: ದಿ. ೨೬ ರಂದು ಕನ್ನಡ ಗಂಡು ಮಕ್ಕಳ ಜೀವನ ಶಿಕ್ಷಣ ಶಾಲೆಯಲ್ಲಿ ಪ್ರಜಾರಾಜ್ಯ ದಿನವನ್ನು ಜೀವನ ಶಿಕ್ಷಣ ಸಪ್ತಾಹದ ಮುಕ್ತಾಯ ಸಮಾರಂಭದ ಜೊತೆಗೆ ಪಾಲಕರ ಸಹಕಾರದೊಂದಿಗೆ ಶಿಕ್ಷಕರ ಹಾಗೂ ವಿದ್ಯಾರ್ಥಿ ವೃಂದವು ಒಳ್ಳೇ ವಿಜೃಂಭಣೆಯಿಂದ ಆಚರಿಸಿದರು.

ಇಂಡಿ: ಕ. ಗ. ಶಾಲಾ ನಂ. ೧ ದಿ. ೨೦ ರಿಂದ ೨೬ ರ ವರೆಗೆ ಜೀವನ ಶಿಕ್ಷಣ ಸಪ್ತಾಹವನ್ನು ಆಚರಿಸಲಾಯಿತು.

ಸಿದ್ದಾಪೂರ (ತಾ. ಹಾವೇರಿ): ಇಲ್ಲಿಯ ಜೀವನ ಶಿಕ್ಷಣ ಕ. ಗ. ಶಾಲೆಯಲ್ಲಿ ದಿ. ೨೬ ರಂದು ಜೀವನ ಶಿಕ್ಷಣ ಸಪ್ತಾಹದ ಮುಕ್ತಾಯ ಸಮಾರಂಭ ಹಾಗು ಪ್ರಜಾರಾಜ್ಯ ದಿನದ ಕಾರ್ಯಕ್ರಮಗಳು ನಡೆದವು.

ಗುಡಗೇರಿ: ಕ. ಗ. ಜೀವನ ಶಿಕ್ಷಣ ಶಾಲೆಯಲ್ಲಿ ದಿ. ೨೦ ರಿಂದ ೨೬ ರ ವರೆಗೆ ಅಖಿಲ ಭಾರತ ಮೂಲ ಶಿಕ್ಷಣ ಸಪ್ತಾಹದ ಅಂಗವಾಗಿ ಯಾವತ್ತೂ ಕಾರ್ಯಕ್ರಮಗಳು ಜರುಗಿದವು. ಮತ್ತು ಪ್ರಜಾರಾಜ್ಯ ದಿನೋತ್ಸವದ ಅಂಗವಾಗಿ ಪ್ರಭಾತಫೇರಿ, ಧ್ವಜವಂದನೆ, ಭಾಷಣ ಮುಂತಾದ ಕಾರ್ಯಕ್ರಮಗಳಾಗಿ ಶಾಲಾ ಕಟ್ಟಡದ ಮೇಲೆ ದೀಪೋತ್ಸವ, ವಿವಿಧ ವಿನೋದಾವಳಿಗಳು, ಎರಡು ಏಕಾಂಕಗಳು ಮುಂತಾದ ಯಾವತ್ತೂ ಕಾರ್ಯಗಳು ಯಶಸ್ವಿ ರೀತಿಯಿಂದ ಜರುಗಿದವು.

ಸುಳ್ಳ:– ಹುಬ್ಬಳ್ಳಿ ತಾಲೂಕಿನ ಸುಳ್ಳ ಗ್ರಾಮದಲ್ಲಿ ೧೮೦೦೦ ರೂ. ವೆಚ್ಚದಿಂದ ಕಟ್ಟಿದ ಪ್ರಾಥಮಿಕ ಶಾಲಾ ಕಟ್ಟಡದ ಉದ್ಘಾಟನಾ ಸಮಾರಂಭವನ್ನು ಮೈಸೂರ ರಾಜ್ಯದ ಶಿಕ್ಷಣ ಮಂತ್ರಿ ಶ್ರೀ ಅಣ್ಣಾರಾವ ಗಣಮುಖಿ ಅವರು ದಿ. ೧–೨–೧೯೬೦ ಸಾಯಂಕಾಲ ನೆರವೇರಿಸಿದರು. ಸಮಾರಂಭದ ಅಧ್ಯಕ್ಷತೆಯನ್ನು ಶ್ರೀ ಎಂ. ಆರ್ ಪಾಟೀಲ M. L. A. ಅವರು ವಹಿಸಿದ್ದರು. ಮೈಸೂರ ಮುಖ್ಯಮಂತ್ರಿ ಶ್ರೀ ಬಿ. ಡಿ. ಜತ್ತಿ, ಕೇಂದ್ರ ಮಂತ್ರಿ ಶ್ರೀ ಡಿ. ಪಿ. ಕರಮರಕರ, ಕುಮಾರ ಸ್ವಾಮಿಗಳು ನಂಕಲ್ಯಾಣಮಠ, ಉಪಕುಲಪತಿಗಳು ಶ್ರೀ ಡಿ. ಸಿ. ಪಾವಟೆ ಉಪಮಂತ್ರಿ ಶ್ರೀಮತಿ ಲೀಲಾವತಿ ಮಾಗಡಿ, ಎಮ್. ಪಿ ಸಿ. ಸಿ. ಅಧ್ಯಕ್ಷ ಶ್ರೀ ಎಚ್. ಕೆ. ವೀರಣ್ಣಗೌಡ ಶ್ರೀ ಎಚ್. ವ್ಹಿ. ಕೌಜಲಗಿ M. L. A. ಮೊದಲಾದ ಗಣ್ಯವ್ಯಕ್ತಿಗಳು ಯಶಕೋರಿ ಕಳಸಿದ ಸಂದೇಶಗಳನ್ನು ಪ್ರಧಾನ ಗುರುಗಳು ಓದಿದರು.

ಪ್ರಾಥಮಿಕ ಶಾಲಾ ಪ್ರವೇಶಪತ್ರ ಪರೀಕ್ಷೆ, ಟ್ರೇನಿಂಗ್ ಕಾಲೇಜು; ಎಲಿಮೆಂಟರಿ ಮತ್ತು ಇಂಟರಮೀಡಿಯೆಟ್ ಗ್ರೇಡ ಮುಂ. ಡ್ರಾಯಿಂಗ ಪರೀಕ್ಷೆಗಳಿಗೆ—

ಜನಪ್ರಿಯವಾದ ಮೆಚ್ಚುಗರಕಾರದಿಂದ ಮೆಂಬಹೂರಾದ ಒಂದೇ ಒಂದು ಪುಸ್ತಕ

ಆದರ್ಶ ಚಿತ್ರಕಲಾ

(Ideal Drawing)

ಶ್ರೀ ಎಸ್. ಕೆ. ಜೋಶಿ ಮತ್ತು ಶ್ರೀ ಜಿ. ವಿ. ಪಾಲಿ.

ಎಲ್ಲ ದೊಡ್ಡ ಪುಸ್ತಕ ವ್ಯಾಪಾರಸ್ಥರಲ್ಲಿ ದೊರೆಯುವದು.
ಬೆಲೆ ೧—೧೫—೯ ಅಂಚೆವೆಚ್ಚ ಪ್ರತ್ಯೇಕ. ಐದು ಮತ್ತು ಐದಕ್ಕಿಂತ ಹೆಚ್ಚು ಪ್ರತಿ ತರಿಸಿಕೊಳ್ಳುವರಿಗೆ ಅಂಚೆ ವೆಚ್ಚವಿಲ್ಲ. ಇದು ಕನ್ನಡದಲ್ಲಿಯೂ ಸಿಗುತ್ತದೆ.

ಜಿ. ಪಾಯರ್. ರಾಜೆ

ಪ್ರಕಾಶಕರು, ಶಿರಸಿ, ಕೆನರಾ ಜೇಟಿ ಪುಣೆ.

ಗ್ರಾಹಕರ ಇಷ್ಟವಿಯಿಂದ ಪ್ರಾರಂಭವಾಗುವ ಸಾಮಾನ್ಯ ಪ್ರಾ. ಶಾ. ಪ್ರ. ಪರೀಕ್ಷೆಯ ಅಭ್ಯಾಸ ಕ್ರಮವನ್ನು ಅನುಸರಿಸಿ ಬರೆದ

ಬೇಲೂರ ಪೈಪ

ಪ್ರಾಥಮಿಕ ಭೂಮಿತಿ

[ಕ್ಷೇತ್ರಫಲ ಘನಫಲ ಸಹಿತ]

೪ ರಿಂದ ೭ ನೇಯ ವರ್ಗದ ಪಠಿಗಿನ ವಿಷಯವನ್ನೆಲ್ಲ ಒಳಗೊಂಡಿದೆ.

ಬೆಲೆ: ೧೮೦. ಅಂಚೆ ಮಾಸ್ತ

ದೊರೆಯುವ ಸ್ಥಳ:—

ಸಾಯಿ ಬೆಟ್ಟಿಶಿಂಗ್ ದಾವುನ್,
ವಿಜಯ ರೋಡ, ಧಾರವಾಡ.

ಸಮಾಜದ ಉನ್ನತಿಯನ್ನು ಸಾಧಿಸುವದೇ ಜೀವನ ಶಿಕ್ಷಣದ ಶ್ರೇಷ್ಠ ಆದರ್ಶ

ಲೇಖಕರು: ಶ್ರೀ ಪಟ್ಟಿ ಶ್ಯಾಮರಾಯರು, ಎಮ್.ಎ.

ಸ್ವತಂತ್ರ ರಾಷ್ಟ್ರದ ನಾಗರಿಕರಾದ ನಾವು ಶಿಕ್ಷಣದ ವಿಷಯವಾಗಿ ಆಳವಾದ ವಿಚಾರವನ್ನು ಮೇಲಿಂದ ಮೇಲೆ ಮಾಡಬೇಕು. ಶಿಕ್ಷಣದ ಆದರ್ಶದ ವ್ಯಾಖ್ಯೆಯನ್ನು ನಾವು ಸರಿಯಾಗಿ ಗೊತ್ತುಮಾಡಿಕೊಳ್ಳಬೇಕು. ಈ ಆದರ್ಶಗಳು ಎರಡು ಬಗೆಯಾಗಿವೆ. ಸರ್ವದೇಶ ಕಾಲಕ್ಕೂ ಒಂದೇ ಆಗಿರತಕ್ಕ ಶಿಕ್ಷಣದ ಸಾಮಾನ್ಯ ಆದರ್ಶವು ಬೇರೆ; ಒಂದೊಂದು ವಿಶಿಷ್ಟ ದೇಶ ಕಾಲಕ್ಕೆ ಸರಿಹೋಗುವ ಶಿಕ್ಷಣದ ಗುರಿ ಬೇರೆ. ವ್ಯಕ್ತಿಯು ತನ್ನ ಗುಣ ಶೀಲ ಆಚರಣೆಗಳನ್ನು ಪರಿಶುದ್ಧಗೊಳಿಸಿಕೊಂಡು ಭಾರತ ಸಮಾಜವನ್ನು ಉಚ್ಚ ನೈತಿಕ ಧಾರ್ಮಿಕ ಮಟ್ಟಕ್ಕೆ ಮುಟ್ಟಿಸುವ ನಿರ್ಧಾರಕ್ಕೆ ಬಂದು ಜೀವಸೇವೆಯನ್ನು ಕೈಕೊಳ್ಳಬೇಕು. ಈ ಸೇವೆಯನ್ನು ದಕ್ಷತೆಯಿಂದ ನಿರ್ವಹಿಸುವ ಯೋಗ್ಯತೆಯನ್ನು ಪಡೆಯುವದು ಇಂದಿನ ನಮ್ಮ ಶಿಕ್ಷಣದ ಗುರಿಯಾಗಿದೆ. ನಮ್ಮ ದೇಶದ, ನವಭಾರತದ ಮತ್ತು ಸಾಧ್ಯವಿದ್ದಷ್ಟು ಇತರ ಜಗತ್ತಿನ ಜನಜೀವನವನ್ನು ನಿಜ ಶಾಂತಿ ಸಮಾಧಾನಗಳಿಂದ ಕೂಡಿದ ಒಂದು ಉಚ್ಚಮಟ್ಟಕ್ಕೆ ಒಯ್ಯಲಿಕ್ಕೆ ಒಮ್ಮನಸ್ಸಿನಿಂದಲೂ ಪರಸ್ಪರ ಸಹಕಾರದಿಂದಲೂ ಪರಿಶ್ರಮಿಸುವದು; ಮತ್ತು ಇಂತಹ ವ್ಯಗ್ರವಿವರ ಸಮಾಜದಲ್ಲಿ ಒಂದಾಗಿ ನಮ್ಮ ಆತ್ಮ ಉನ್ನತಿಯನ್ನು ಸಾಧಿಸುವದು ಇದೇ ಶಿಕ್ಷಣದ ಪರಮ ಆದರ್ಶ. ಇನ್ನು ವಿದ್ಯೆ

ಅಥವಾ ಸುಜ್ಞಾನದ ಕಾರ್ಯವು ಮನುಷ್ಯನನ್ನು ನಿತ್ಯ ಸುಖ ಅಥವಾ ನಿತ್ಯ ನೀವು ಪ್ರಾರ್ಥನೆಯಲ್ಲಿ, ಮೃತ್ಯೋರ್ಮಾ ಅಮೃತಂ ಗಮಯ, ಎಂದು ಪರಮಾತ್ಮನನ್ನು ಬೇಡಿಕೊಂಡ ಅಮರತ್ವಕ್ಕೆ ಮುಟ್ಟಿಸಿ ಮುಂದೆ ಅಪಸಿಂದ ಲೋಕ ಕಲ್ಯಾಣದ ಕಾರ್ಯವನ್ನು ಪರಮೇಶ್ವರನ ಸಂಕಲ್ಪದಲ್ಲಿ ಒಂದಾಗಿ ಲೀಲಾಜಾಲವಾಗಿ ಮಾಡುತ್ತ ಅಜರಾಮರವಾಗಿ ಬಾಳುವದೇ ಜ್ಞಾನ ವಿಜ್ಞಾನಗಳ ಅಂತಿಮ ಗುರಿಯೆಂದು ಹೇಳಬಹುದು.

ಇನ್ನು ಆದರ್ಶ ಭಾರತ ಸಮಾಜವನ್ನು ಕಟ್ಟುವದೇ ಸದ್ಯದ ಗುರಿ ಎಂದ ಮೇಲೆ ಆದರ್ಶ ಸಮಾಜವೆಂದರೇನು– ಅದು ಹೇಗಿರಬೇಕು– ಇತರ ದೇಶಗಳ ಜನಾಂಗಗಳ ಸಮಾಜಕ್ಕೂ ನಮ್ಮ ಆದರ್ಶ ಸಮಾಜಕ್ಕೂ ಏನಾದರೂ ವ್ಯತ್ಯಾಸವಿದೆಯೇ ಎಂದು ವಿಚಾರಿಸಬೇಕಾಗುವದು. ನಮ್ಮ ಭಾರತ ಸಮಾಜಕ್ಕೂ ಇತರ ದೇಶಗಳ ಸಮಾಜಗಳಿಗೂ ಒಂದು ಮುಖ್ಯ ಭೇದವಿದೆ. ಅದಾವದು? ಉಗಮ ಎಂಬ ಬಾದಾಮಿಯ ಕಳೆದ ಒಂದು ಪಕ್ಷ ಪತ್ರಿಕೆಯಲ್ಲಿ ಶಿಕ್ಷಣದಲ್ಲಿ "ಐದರ ಐಸಿರಿ" ಎಂಬ ಒಂದು ಲೇಖ ಬಂದಿದೆ. ಅದನ್ನು ನೀವು ಓದಿರಬಹುದು. ಪ್ರಜಾಸತ್ತಾತ್ಮಕ ರಾಜ್ಯದಲ್ಲಿದ್ದ ಐದು ಕೊರತೆಗಳನ್ನು ನೀಗಿಸುವದು ದೇಶದ ಗುರಿಯಾಗಿರಬೇಕೆಂದು ಅದರಲ್ಲಿ ಹೇಳಿದೆ. ಇದೇನು ಹೊಸದಲ್ಲ. ನೀವೂ ಅನೇಕ ಸಲ ಈ ಮಾತನ್ನು ಹೇಳಿಯೇ ಹೇಳಿರುವಿರಿ. ಈ ಕೊರತೆಗಳಾವವೆಂದರೆ ಅನ್ನ, ಅರಿವೆ, ಆಶ್ರಯ, ಆರೋಗ್ಯ, ಅರಿವು. ಆದರೆ ಆ ಲೇಖವನ್ನು ಬರೆದವರು ಮುಖ್ಯವಾಗಿ ಸೂಚಿಸುವುದೇನೆಂದರೆ ಮೊದಲು ದೇಶವು ಮೊದಲಿನ ನಾಲ್ಕು ಕೊರತೆಗಳನ್ನು–ಜನಜೀವನದಲ್ಲಡ್ಡ ಕೊರತೆಗಳನ್ನು–ನಿವಾರಿಸುವದಕ್ಕೆ ತೊಡಗಬೇಕು. ಆದು ಸಾಧ್ಯವಾದ ಮೇಲೆ ಅರಿವು ಎಂದರೆ ಧಾರ್ಮಿಕ ಜ್ಞಾನ ಅಥವಾ ಉಪದೇಶಕ್ಕೆ ವ್ಯವಸ್ಥೆ ಮಾಡಬೇಕು ಎಂದು. ಕೇಂದ್ರ ಸರಕಾರದವರು ಸಾಲೆ ಕಾಲೇಜುಗಳಲ್ಲಿ ಧರ್ಮ ಶಿಕ್ಷಣವನ್ನು ಕೊಡುವದರ ಅವಶ್ಯಕತೆ, ಶಕ್ಯತೆ, ರೀತಿ ಇವುಗಳನ್ನು ಪರ್ಯಾಲೋಚಿಸಿ ವರದಿ ಮಾಡಲಿಕ್ಕೆ ಒಂದು ಆಯೋಗವನ್ನು ನಿಯಮಿಸಿದ್ದರು; ಅವರು ನೈತಿಕ, ಧಾರ್ಮಿಕ ಅಥವಾ ಆಧ್ಯಾತ್ಮಿಕ ಶಿಕ್ಷಣವು ಸಾಲೆ ಕಾಲೇಜುಗಳ ಪಾಠ್ಯವಸ್ತುಗಳಲ್ಲಿ ಒಂದಾಗಿರಬೇಕೆಂದು ಶಿಫಾರಸು ಮಾಡಿದ್ದಾರೆ. ಮೊದಲು ಎಲ್ಲ ಜನರಿಗೂ ಉಂಡುಟ್ಟು ತೃಪ್ತಿಯಿಂದ ಇರಲಿಕ್ಕೆ ಸಾಧ್ಯವಾಗುವಂತೆ ಸರಕಾರವು ನೋಡಿಕೊಳ್ಳಬೇಕೆಂದು. ಇದು ಕೂಡಾ ಸಾಮಾನ್ಯ ಕೆಲಸವಲ್ಲ; ಜಗತ್ತಿನ ಜನಸಂಖ್ಯೆಯು ಒಂದೇ ಸವನೆ ಹೆಚ್ಚುತ್ತಿದೆ. ಈಗ ನಾವು ಸಾಧನ ಸಂಪತ್ತನ್ನು ಹೆಚ್ಚಿಸಿದ್ದೇವೆ ಎನ್ನುವಷ್ಟರಲ್ಲಿ ಜನಸಂಖ್ಯೆಯು ಮತ್ತೆ ಬೆಳೆದಿರುವದು. ಹೀಗಾಗಿ ಅನ್ನ, ಅರಿವೆ, ವಾಸಸ್ಥಳ, ವೈದ್ಯಕೀಯ ಶುಶ್ರೂಷೆ, ಉದ್ಯೋಗ, ವಿಶ್ರಾಂತಿ— ಇವನ್ನು ದೇಶದ ಜನರಲ್ಲಿ ಪಕ್ಷಪಾತವಿಲ್ಲದೆ ಸಮನಾಗಿ ಹಂಚಿದ್ದೇವೆ ಎನ್ನುವಷ್ಟರಲ್ಲಿ ಮತ್ತೆ ಆ ಸಮತೆಯಲ್ಲಿ ವಿಷಮತೆಯು ಹಣಿಕಿ ಹಾಕುವದು. ಹಳ್ಳಿಗರು ನಗರದಲ್ಲಿದ್ದ ಜನರಿಗೆ ಸಿಕ್ಕಿರುವ ಅನೇಕಾನೇಕ ಸ್ಪೃಹಣೀಯ ಸೌಕರ್ಯಗಳು ತಮಗೆ ಸಿಕ್ಕಿಲ್ಲವೆಂದು ಅಸಂತುಷ್ಟರಾಗಿ ರಾಜ್ಯದ ಆಡಳಿತವನ್ನು ಟೀಕಿಸಬಹುದು. ಹೀಗಾಗಿ ಸುಖ ಸೌಕರ್ಯಗಳನ್ನು ಸಮಾನವಾಗಿ ಹಂಚುವ ಗುರಿಯು ನಮ್ಮ ದೇಶದಲ್ಲಿ ಸಾಧಿಸುವದು ಬಹಳ ದುಸ್ತರವಾಗಿದೆ.

ಸಮಾನತೆ ಎಂಬದು ಒಂದು ಸುಂದರವಾದ ಕಲ್ಪನೆ ಮಾತ್ರ, ಸಮಾಜದಲ್ಲಿ ಸ್ಥಾನಮಾನ-ಗೌರವಾದರಗಳನ್ನು ಸಮಾನವಾಗಿ ಹಂಚಬಹುದೋ ? ನ್ಯಾಯದಾನವನ್ನು ಎಲ್ಲರಿಗೂ ಸಮಾನವಾಗಿ ಹಂಚಬೇಕೆಂದು ರಾಜ್ಯ ಶಾಸನದಲ್ಲಿ ಹೇಳಿದೆ, ಆದರೆ ನೋಡಿರಿ, ಕೋರ್ಟು ಕಛೇರಿಗಳಿಗೆ ಹೋಗಿ ತಮಗಾದ ಅನ್ಯಾಯವನ್ನು ದೂರಿಕೊಳ್ಳಲಿಕ್ಕೆ ಹೆಜ್ಜಾಗಿ ಹಣವು ಬೇಡವೋ? ಬಡಜನರು ಈ ಭಾರವನ್ನು ಹೊರಬಲ್ಲರೋ? ನ್ಯಾಯದಾನಕ್ಕೂ ಒಂದು ಕರವನ್ನು ಹೇರಿದಂತಾಗಿದೆ, ಈಗ ಇನ್ನೊಂದು ವಿಷಮತೆ– ನಗರದ ಸೌಕರ್ಯಗಳೆಲ್ಲವೂ ಹಳ್ಳಿಯ ಜನರಿಗೆ ದೊರೆಯುವವೋ? ಇಲ್ಲ. ವೈದ್ಯಕೀಯ ಉಪಚಾರವು ಹಳ್ಳಿಗರಿಗೆ ದುರ್ಲಭವಾಗಿಲ್ಲವೇ? — ಹಳ್ಳಿ ನಗರಗಳಲ್ಲಿರುವ ವೈಷಮ್ಯವು ಒಂದಿಷ್ಟು ಯಾವಾಗಲೂ ಇರತಕ್ಕದ್ದೇ. ಹಳ್ಳಿಯು ಮುಂದೆ ಮುಂದೆ ಬಂದ ಹಾಗೆ ನಗರಗಳು ಇನ್ನೂ ಮುಂದೆ ಮುಂದೆ ಸಾಗುವವು. ಹೀಗೆ ಅವುಗಳ ನಡುವಿನ ಸ್ಪರ್ಧೆಯು ಮಿತಿಯಿಲ್ಲದೆ ಬೆಳೆದುಬರುವ ಗಂಡಾಂತರವಿದೆ. ಶಹರದ ಜನರು ಪಾಶ್ಚಾತ್ಯ ರಾಷ್ಟ್ರಗಳಿಂದ, ಅಮೇರಿಕಾ, ರಶಿಯಗಳ ಆದರ್ಶದಿಂದ ಮರುಳಾಗಿರುವರು. ಇದನ್ನು ತಪ್ಪಿಸುವದಕ್ಕೆ ನಮ್ಮ ಭಾರತೀಯ ಸಂಸ್ಕೃತಿಯು ಪಾಠಹಾಕೆ ಕೊಡಬೇಕಾಗಿದೆ. ಪರಿಮಿತಿ ಇಲ್ಲದ– ಈ ವಿಶೇಷಣವನ್ನು ಗಮನಿಸಿರಿ– ಅಪರಿಮಿತವಾದ ಸಾಧನ ಸಾಮಗ್ರಿಗಳ ಸಂಗ್ರಹ ಪ್ರವೃತ್ತಿಯು ವ್ಯಕ್ತಿಯಲ್ಲಿಯೂ, ಭಾರತೀಯ

ನಾಗರಿಕರ ಆಸೆ ಆಕಾಂಕ್ಷೆಯಲ್ಲಿಯೂ ಬೆಳೆಯಬಾರದು. ವ್ಯಕ್ತಿಯೇ ಆಗಲಿ, ಸಮಾಜವೇ ಆಗಲಿ, ತನ್ನ ಸಂಗ್ರಹ ಪ್ರವೃತ್ತಿಗೆ ಒಂದು ಮಿತಿಯನ್ನು ಹಾಕಿಕೊಳ್ಳಬೇಕು. ಇದೇ ಭಾರತೀಯ ಸಮಾಜದ ಸಂಸ್ಕೃತಿಯ ವೈಶಿಷ್ಟ್ಯ. ತ್ಯಾಗ ಭೋಗಗಳ ಸುಂದರ ಸಮನ್ವಯದಿಂದ ಬಾಳುವದು ಹಿಂದೂ ಧರ್ಮದ ಉಪದೇಶವಾಗಿರದೆ, ದಾನ, ದಯೆ, ಪರೋಪಕಾರ, ಇಂದ್ರಿಯ ನಿಗ್ರಹ, ಸಮಾಜಸೇವೆ ಇವು ಎಲ್ಲ ಧರ್ಮಗಳ ಸಾರವೂ ಆಗಿದೆ, ಆದ್ದರಿಂದ ಭಾರತವು ಅನ್ಯ ಧರ್ಮೀಯರನ್ನು ನ್ಯಾಯ, ಸಹಿಷ್ಣುತೆಗಳ ದೃಷ್ಟಿಯಿಂದ ಹಿಂದೆ ಅನೇಕ ಶತಮಾನಗಳಿಂದ ನೋಡಿಕೊಂಡಂತೆ ಮುಂದೆಯೂ ನೋಡಬೇಕು. ಅಂತೂ ಜೀವನ ಶಿಕ್ಷಣದ ಗುರಿಯು ಭಾರತೀಯ ಅಧ್ಯಾತ್ಮ ಸಂಸ್ಕೃತಿಗೆ ಒಪ್ಪುವಂತಹ ಸಮಾಜವನ್ನು ಪುನರ್ಘಟಿಸುವದು ಆಗಿದೆ. ಅದಕ್ಕಾಗಿ ಹೋರಾಡುವ ವೀರಪುತ್ರರು, ವೀರಮಾತೆಯರ ಹೊಟ್ಟೆಯಲ್ಲಿ ಹುಟ್ಟಿಬೆಳೆದುಬರುವಂತಾಗಬೇಕು. ಮಕ್ಕಳಲ್ಲಿ ಅಂತಹ ಜ್ಞಾನ, ಸ್ಫೂರ್ತಿ, ವಿಧಾಯಕ ಕಾರ್ಯಶಕ್ತಿ ಇವುಗಳ ಬೀಜವನ್ನು ವಿದ್ಯಾಗುರುಗಳು ಬಿತ್ತಬೇಕು.

ಎಲ್ಲ ಪ್ರಾಥಮಿಕ ಶಾಲೆಗಳನ್ನು ಜೀವನ ಶಿಕ್ಷಣ ಶಾಲೆಗಳಾಗಿ ಕ್ರಮವಾಗಿ ಮಾರ್ಪಡಿಸುವ ಕಾರ್ಯಾಚರಣೆಯ ಬಗ್ಗೆ ಕಳೆದ ವರ್ಷ ಧಾರವಾಡದ ಪದವೀಧರ ಶಿಕ್ಷಕ ಶಿಕ್ಷಣಾಲಯದಲ್ಲಿ ೪ನೆಯ ಜನೆವರಿಯಿಂದ ೧೦ನೆಯ ದಿನಾಂಕದವರೆಗೆ ಪ್ರಾದೇಶಿಕ ವಿಚಾರ ಸಂಕಿರಣ ಒಂದನ್ನು ಏರ್ಪಡಿಸಲಾಗಿತ್ತು. ಅದರಲ್ಲಿ ನಡೆದ ವಿಚಾರ ವಿನಿಮಯ ಮತ್ತು ನಿರ್ಣಯಗಳು–ಇವೆಲ್ಲವನ್ನು 'ವಿಚಾರಗೋಷ್ಠಿ' ಎಂಬ ಒಂದು ಪುಸ್ತಿಕೆಯಲ್ಲಿ ಕೊಡಲಾಗಿದೆ. ಅದನ್ನು ಎಲ್ಲರೂ ಚೆನ್ನಾಗಿ ಓದಿ ಮನನ ಮಾಡಬೇಕು. ಈ ಶಾಲೆಗಳಲ್ಲಿ ಮೂಲೋದ್ಯೋಗಕ್ಕೆ ಬೇಕಾಗುವ ಉಪಕರಣಗಳ ಪೂರೈಕೆಯೊಂದು ಸಮಸ್ಯೆ. ಉತ್ಪಾದಕ ಕೈಗಾರಿಕೆಗಳಿಗೆ ಸಮನ್ವಯಮಾಡಿ ವಿಷಯಗಳನ್ನು ಕಲಿಸುವ ಸಮವಾಯ ತಂತ್ರವನ್ನು ಉಪಯೋಗಿಸುವದೊಂದು ಸಮಸ್ಯೆ. ಹೀಗೆ ಇವೆರಡು ಸಮಸ್ಯೆಗಳನ್ನು ಬಿಡಿಸಬೇಕಾಗಿದೆ. ಇದು ನಿಧಾನವಾಗಿ ಸಾಧ್ಯವಾಗುವದು. ಸಮವಾಯ ತಂತ್ರದ ಇನ್ನೊಂದು ಸುಲಭ ಸಾಧ್ಯವಾದ ರೀತಿಯು ಸಾದಾತರಬೇತಿಯನ್ನು ಪಡೆದ ಎಲ್ಲ ಶಿಕ್ಷಕರಿಗೂ ಗೊತ್ತಿರುವದು. ಅದಾವದೆಂದರೆ, ವಿಷಯ ವಿಷಯಗಳಲ್ಲಿರುವ ಪರಸ್ಪರ ಸಂಬಂಧವನ್ನು, ಒಂದೇ ವಿಷಯದಲ್ಲಿದ್ದ ಬೇರೆ ಬೇರೆ ಭಾಗಗಳ ತಾರ್ಕಿಕ ಸಂಬಂಧವನ್ನು ವಿದ್ಯಾರ್ಥಿಗಳಿಗೆ ಒಡೆದು ತೋರಿಸಬೇಕು; ಮತ್ತು ಸಾಲೆಯಲ್ಲಿ ವಿಶೇಷ ಬೆಚ್ಚನಿಚ್ಚಿನೆ ಮಕ್ಕಳಿಂದ ಮಾಡಿಸಬಹುದಾದ ಕೈಕಲಸಗಳಿಗೆ ಮತ್ತು ನಿರೀಕ್ಷಣೆಯ ಚಟುವಟಿಕೆಗಳಿಗೆ (Nature Study and object lesson) ಸಂಬಂಧಿಸಿ ವಿಷಯದ ಪಾಠಗಳನ್ನು ಕಲಿಸಬೇಕು. ಯಾವದೇ ಒಂದು ಸಂಗತಿಯನ್ನು ಕಲಿಸಬೇಕಾದಾಗ ಇದರ ಉಪಯೋಗವೇನು, ಇದು ಯಾವ ಕೆಲಸಕ್ಕೆ ಬರುತ್ತದೆ ಎಂಬ ಮೂಲೋದ್ದೇಶವನ್ನು ಉಪೋದ್ಘಾತವಾಗಿ ಎಲ್ಲ ಪಾಠಗಳಲ್ಲಿಯೂ ಇಟ್ಟುಕೊಳ್ಳಬೇಕು.

ಮೇಲೆ ಹೇಳಿದ ವಿಚಾರಗೋಷ್ಠಿಯಲ್ಲಿ, ಸಾದಾ ಶಾಲೆಗಳಲ್ಲಿ ಜೀವನ ಶಿಕ್ಷಣಶಾಲೆಯ ವೈಶಿಷ್ಟ್ಯಗಳನ್ನು ತರುವಂಥ ಉದ್ದೇಶಪೂರಿತ ಚಟುವಟಿಕೆಗಳ ಯಾದಿಯನ್ನು ಮತ್ತು ಅವುಗಳನ್ನು ಸಂಘಟಿಸುವ ವಿಧಾನಗಳ ಕೆಲವು ಉದಾಹರಣೆಗಳನ್ನು ಕೆಳಗೆ ಕಾಣಿಸಲಾಗಿದೆ:—

೧. ಮಕ್ಕಳ ಸಹಜ ಪ್ರವೃತ್ತಿಗಳ ಉದಾತ್ತೀಕರಣ.

೨. ಮಕ್ಕಳಿಗೆ ಅವರ ಶಾಲೆಯ, ಮನೆಯ ಮತ್ತು ಸಮಾಜದ ನೈಸರ್ಗಿಕ ಸುತ್ತಲಿನ ಆವರಣದ ಕಲ್ಪನೆ ಮಾಡಿಕೊಡುವದು.

೩. ಮುಂದಾಳುತನ, ಸಹಕಾರ, ಸಂಘಟನಾ ಶಕ್ತಿಗಳನ್ನು ಪ್ರೋತ್ಸಾಹಿಸುವದು.

೪. ಮಕ್ಕಳ ಅನುಭವಶಕ್ತಿ, ವಿಚಾರಶಕ್ತಿ, ಸೃಜನಶಕ್ತಿಗಳನ್ನು ಬೆಳೆಸುವದು.

೫. ವೈಜ್ಞಾನಿಕ ದೃಷ್ಟಿಕೋನ ಬೆಳೆಸುವದು.

೬. ಕೈಕುಶಲತೆಯನ್ನು ಪ್ರೋತ್ಸಾಹಿಸುವದು.

೭. ಉತ್ತಮ ನಾಗರಿಕರಾಗುವಂತೆ ಮಾಡುವದು

೮. ಕೇವಲ ಪುಸ್ತಕೀಯ ಜ್ಞಾನಮಾಡಿಕೊಡದೆ ಸಹಜವಾಗಿ ಚಟುವಟಿಕೆಗಳ ಮುಖಾಂತರ ಜ್ಞಾನ ಗಳಿಸುವಂತೆ ಮಾಡುವದು.

(ಮುಂದುವರೆಯುವದು)

ಅಥವಾ ಸುಜ್ಞಾನದ ಕಾರ್ಯವು ಮನುಷ್ಯನನ್ನು ನಿತ್ಯ ಸುಖ ಅಥವಾ ನಿತ್ಯ ನೀವು ಪ್ರಾರ್ಥನೆಯಲ್ಲಿ, ಮೃತ್ಯೋರ್ಮಾ ಅಮೃತಂ ಗಮಯ, ಎಂದು ಪರಮಾತ್ಮ ನನ್ನು ಬೇಡಿಕೊಂಡ ಅಮರತ್ವಕ್ಕೆ ಮುಟ್ಟಿಸಿ ಮುಂದೆ ಅವನಿಂದ ಲೋಕ ಕಲ್ಯಾಣದ ಕಾರ್ಯವನ್ನು ಪರಮೇಶ್ವರನ ಸಂಕಲ್ಪದಲ್ಲಿ ಒಂದಾಗಿ ಲೀಲಾಜಾಲವಾಗಿ ಮಾಡುತ್ತ ಅಜರಾಮರರಾಗಿ ಬಾಳುವದೇ ಜ್ಞಾನ ವಿಜ್ಞಾನಗಳ ಅಂತಿಮ ಗುರಿಯೆಂದು ಹೇಳಬಹುದು.

ಇನ್ನು ಆದರ್ಶ ಭಾರತ ಸಮಾಜವನ್ನು ಕಟ್ಟುವದೇ ಸದ್ಯದ ಗುರಿ ಎಂದ ಮೇಲೆ ಆದರ್ಶ ಸಮಾಜವೆಂದರೇನು– ಅದು ಹೇಗಿರಬೇಕು– ಇತರ ದೇಶಗಳ ಜನಾಂಗಗಳ ಸಮಾಜಕ್ಕೂ ನಮ್ಮ ಆದರ್ಶ ಸಮಾಜಕ್ಕೂ ಏನಾದರೂ ವ್ಯತ್ಯಾಸವಿದೆಯೇ ಎಂದು ವಿಚಾರಿಸಬೇಕಾಗುವದು. ನಮ್ಮ ಭಾರತ ಸಮಾಜಕ್ಕೂ ಇತರ ದೇಶಗಳ ಸಮಾಜ ಗಳಿಗೂ ಒಂದು ಮುಖ್ಯ ಭೇದವಿದೆ. ಅದಾವದು? ಉಗಮ ಎಂಬ ಬಾದಾಮಿಯ ಕಳೆದ ಒಂದು ಪಕ್ಷ ಪತ್ರಿಕೆಯಲ್ಲಿ ಶಿಕ್ಷಣದಲ್ಲಿ "ಐದರ ಐಸಿರಿ" ಎಂಬ ಒಂದು ಲೇಖ ಬಂದಿದೆ. ಅದನ್ನು ನೀವು ಓದಿರಬಹುದು. ಪ್ರಜಾಸತ್ತಾತ್ಮಕ ರಾಜ್ಯ ದಲ್ಲಿದ್ದ ಐದು ಕೊರತೆಗಳನ್ನು ನೀಗಿಸುವದು ದೇಶದ ಗುರಿ ಯಾಗಿರಬೇಕೆಂದು ಅದರಲ್ಲಿ ಹೇಳಿದೆ. ಇದೇನು ಹೊಸ ದಲ್ಲ. ನೀವೂ ಅನೇಕ ಸಲ ಈ ಮಾತನ್ನು ಹೇಳಿಯೇ ಹೇಳಿರುವಿರಿ. ಈ ಕೊರತೆಗಳಾವವೆಂದರೆ ಅನ್ನ, ಅರಿವೆ, ಆಶ್ರಯ, ಆರೋಗ್ಯ, ಅರಿವು. ಅವರೆ ಆ ಲೇಖವನ್ನು ಬರೆದವರು ಮುಖ್ಯವಾಗಿ ಸೂಚಿಸುವುದೇನೆಂದರೆ ಮೊದಲು ದೇಶವು ಮೊದಲಿನ ನಾಲ್ಕು ಕೊರತೆಗಳನ್ನು–ಜನಜೀವನ ದಲ್ಲಿದ್ದ ಕೊರತೆಗಳನ್ನು-ನಿವಾರಿಸುವದಕ್ಕೆ ತೊಡಗಬೇಕು. ಅದು ಸಾಧ್ಯವಾದ ಮೇಲೆ ಅರಿವು ಎಂದರೆ ಧಾರ್ಮಿಕ ಜ್ಞಾನ ಅಥವಾ ಉಪದೇಶಕ್ಕೆ ವ್ಯವಸ್ಥೆ ಮಾಡಬೇಕು ಎಂದು. ಕೇಂದ್ರ ಸರಕಾರದವರು ಸಾಲೆ ಕಾಲೇಜುಗಳಲ್ಲಿ ಧರ್ಮ ಶಿಕ್ಷಣವನ್ನು ಕೊಡುವದರ ಅವಶ್ಯಕತೆ, ಶಕ್ಯತೆ, ರೀತಿ ಇವುಗಳನ್ನು ಪರ್ಯಾಲೋಚಿಸಿ ವರದಿ ಮಾಡಲಿಕ್ಕೆ ಒಂದು ಆಯೋಗವನ್ನು ನಿಯಮಿಸಿದ್ದರು; ಅವರು ನೈತಿಕ, ಧಾರ್ಮಿಕ ಅಥವಾ ಆಧ್ಯಾತ್ಮಿಕ ಶಿಕ್ಷಣವು ಸಾಲೆ ಕಾಲೇಜು ಗಳ ಪಾಠ್ಯವಸ್ತುಗಳಲ್ಲಿ ಒಂದಾಗಿರಬೇಕೆಂದು ಶಿಫಾರಸು ಮಾಡಿದ್ದಾರೆ. ಮೊದಲು ಎಲ್ಲ ಜನರಿಗೂ ಉಂಡುಟ್ಟು ತೃಪ್ತಿಯಿಂದ ಇರಲಿಕ್ಕೆ ಸಾಧ್ಯವಾಗುವಂತೆ ಸರಕಾರವು ನೋಡಿಕೊಳ್ಳಬೇಕೆಂದು. ಇದು ಕೂಡಾ ಸಾಮಾನ್ಯ ಕೆಲಸ ವಲ್ಲ; ಜಗತ್ತಿನ ಜನಸಂಖ್ಯೆಯು ಒಂದೇ ಸವನೆ ಹೆಚ್ಚುತ್ತಿದೆ. ಈಗ ನಾವು ಸಾಧನ ಸಂಪತ್ತನ್ನು ಹೆಚ್ಚಿಸಿದ್ದೇವೆ ಎನ್ನುವಷ್ಟರಲ್ಲಿ ಜನಸಂಖ್ಯೆಯು ಮತ್ತೆ ಬೆಳೆದಿರುವದು. ಹೀಗಾಗಿ ಅನ್ನ, ಅರಿವೆ, ವಾಸಸ್ಥಳ, ವೈದ್ಯಕೀಯ ಶುಶ್ರೂಷೆ, ಉದ್ಯೋಗ, ವಿಶ್ರಾಂತಿ— ಇವನ್ನು ದೇಶದ ಜನರಲ್ಲಿ ಪಕ್ಷಪಾತವಿಲ್ಲದೆ ಸಮನಾಗಿ ಹಂಚಿದ್ದೇವೆ ಎನ್ನು ವಷ್ಟರಲ್ಲಿ ಮತ್ತೆ ಆ ಸಮತೆಯಲ್ಲಿ ವಿಷಮತೆಯು ಹಣಿಕಿ ಹಾಕುವದು. ಹಳ್ಳಿಗರು ನಗರದಲ್ಲಿಲ್ಲದ್ದ ಜನರಿಗೆ ಸಿಕ್ಕಿರುವ ಅನೇಕಾನೇಕ ಸ್ಪೃಹಣೀಯ ಸೌಕರ್ಯಗಳು ತಮಗೆ ಸಿಕ್ಕಿಲ್ಲವೆಂದು ಅಸಂತುಷ್ಟರಾಗಿ ರಾಜ್ಯವ ಅಡಳಿತವನ್ನು ಟೀಕಿಸಬಹುದು. ಹೀಗಾಗಿ ಸುಖ ಸೌಕರ್ಯಗಳನ್ನು ಸಮಾನವಾಗಿ ಹಂಚುವ ಗುರಿಯು ನಮ್ಮ ದೇಶದಲ್ಲಿ ಸಾಧಿಸುವದು ಬಹಳ ದುಸ್ತರವಾಗಿದೆ.

ಸಮಾನತೆ ಎಂಬದು ಒಂದು ಸುಂದರವಾದ ಕಲ್ಪನೆ ಮಾತ್ರ. ಸಮಾಜದಲ್ಲಿ ಸ್ಥಾನಮಾನ-ಗೌರವಾದರಗಳನ್ನು ಸಮಾನವಾಗಿ ಹಂಚಬಹುದೋ ? ನ್ಯಾಯದಾನವನ್ನು ಎಲ್ಲರಿಗೂ ಸಮಾನವಾಗಿ ಹಂಚಬೇಕೆಂದು ರಾಜ್ಯ ಶಾಸನ ದಲ್ಲಿ ಹೇಳಿದೆ, ಆದರೆ ನೋಡಿರಿ, ಕೋರ್ಟು ಕಚೇರಿಗಳಿಗೆ ಹೋಗಿ ತಮಗಾದ ಅನ್ಯಾಯವನ್ನು ದೂರಿಕೊಳ್ಳಲಿಕ್ಕೆ ಹೆಚ್ಚಾಗಿ ಹಣವು ಬೇಡವೋ? ಬಡಜನರು ಈ ಭಾರವನ್ನು ಹೊರಬಲ್ಲರೋ? ನ್ಯಾಯದಾನಕ್ಕೂ ಒಂದು ಕರವನ್ನು ಹೇರಿದಂತಾಗಿದೆ, ಈಗ ಇನ್ನೊಂದು ವಿಷಮತೆ– ನಗರದ ಸೌಕರ್ಯಗಳೆಲ್ಲವೂ ಹಳ್ಳಿಯ ಜನರಿಗೆ ದೊರೆಯುವವೋ? ಇಲ್ಲ. ವೈದ್ಯಕೀಯ ಉಪಚಾರವು ಹಳ್ಳಿಗರಿಗೆ ದುರ್ಲಭ ವಾಗಿಲ್ಲವೇ? — ಹಳ್ಳಿ ನಗರಗಳಲ್ಲಿರುವ ವೈಷಮ್ಯವು ಒಂದಿಷ್ಟು ಯಾವಾಗಲೂ ಇರತಕ್ಕದ್ದೇ. ಹಳ್ಳಿಯು ಮುಂದೆ ಮುಂದೆ ಬಂದ ಹಾಗೆ ನಗರಗಳು ಇನ್ನೂ ಮುಂದೆ ಮುಂದೆ ಸಾಗುವವು. ಹೀಗೆ ಅವುಗಳ ನಡುವಿನ ಸ್ಪರ್ಧೆಯು ಮಿತಿಯಿಲ್ಲದೆ ಬೆಳೆದುಬರುವ ಗಂಡಾಂತರವಿದೆ. ಶಹರದ ಜನರು ಪಾಶ್ಚಾತ್ಯ ರಾಷ್ಟ್ರಗಳಿಂದ, ಅಮೇರಿಕಾ, ರಶಿಯ ಗಳ ಆದರ್ಶದಿಂದ ಮರುಳಾಗಿರುವರು. ಇದನ್ನು ತಪ್ಪಿಸು ವದಕ್ಕೆ ನಮ್ಮ ಭಾರತೀಯ ಸಂಸ್ಕೃತಿಯು ಪಾಠಹಾಕಿ ಕೊಡಬೇಕಾಗಿದೆ. ಪರಿಮಿತಿ ಇಲ್ಲದ– ಈ ವಿಶೇಷಣವನ್ನು ಗಮನಿಸಿರಿ– ಅಪರಿಮಿತವಾದ ಸಾಧನ ಸಾಮಗ್ರಿಗಳ ಸಂಗ್ರಹ ಪ್ರವೃತ್ತಿಯು ವ್ಯಕ್ತಿಯಲ್ಲಿಯೂ, ಭಾರತೀಯ

ನಾಗರಿಕರ ಆಸೆ ಆಕಾಂಕ್ಷೆಯಲ್ಲಿಯೂ ಬೆಳೆಯಬಾರದು. ವ್ಯಕ್ತಿಯೇ ಆಗಲಿ, ಸಮಾಜವೇ ಆಗಲಿ, ತನ್ನ ಸಂಗ್ರಹ ಪ್ರವೃತ್ತಿಗೆ ಒಂದು ಮಿತಿಯನ್ನು ಹಾಕಿಕೊಳ್ಳಬೇಕು. ಇದೇ ಭಾರತೀಯ ಸಮಾಜದ ಸಂಸ್ಕೃತಿಯ ವೈಶಿಷ್ಟ್ಯ. ತ್ಯಾಗ ಭೋಗಗಳ ಸುಂದರ ಸಮನ್ವಯದಿಂದ ಬಾಳುವದು ಹಿಂದೂ ಧರ್ಮದ ಉಪದೇಶವಾಗಿರದೆ, ದಾನ, ದಯೆ, ಪರೋಪಕಾರ, ಇಂದ್ರಿಯ ನಿಗ್ರಹ, ಸಮಾಜಸೇವೆ ಇವು ಎಲ್ಲ ಧರ್ಮಗಳ ಸಾರವೂ ಆಗಿದೆ, ಆದ್ದರಿಂದ ಭಾರತವು ಅನ್ಯ ಧರ್ಮೀಯರನ್ನು ನ್ಯಾಯ, ಸಹಿಷ್ಣುತೆಗಳ ದೃಷ್ಟಿಯಿಂದ ಹಿಂದೆ ಅನೇಕ ಶತಮಾನಗಳಿಂದ ನೋಡಿಕೊಂಡಂತೆ ಮುಂದೆಯೂ ನೋಡಬೇಕು. ಅಂತೂ ಜೀವನ ಶಿಕ್ಷಣದ ಗುರಿಯು ಭಾರತೀಯ ಅಧ್ಯಾತ್ಮ ಸಂಸ್ಕೃತಿಗೆ ಒಪ್ಪುವಂತಹ ಸಮಾಜವನ್ನು ಪುನರ್ಘಟಿಸುವದು ಆಗಿದೆ. ಅದಕ್ಕಾಗಿ ಹೋರಾಡುವ ವೀರಪುತ್ರರು, ವೀರಮಾತೆಯರ ಹೊಟ್ಟೆಯಲ್ಲಿ ಹುಟ್ಟಿಬೆಳೆದುಬರುವಂತಾಗಬೇಕು. ಮಕ್ಕಳಲ್ಲಿ ಅಂತಹ ಜ್ಞಾನ, ಸ್ಫೂರ್ತಿ, ವಿಧಾಯಕ ಕಾರ್ಯಶಕ್ತಿ ಇವುಗಳ ಬೀಜವನ್ನು ವಿದ್ಯಾಗುರುಗಳು ಬಿತ್ತಬೇಕು.

ಎಲ್ಲ ಪ್ರಾಥಮಿಕ ಶಾಲೆಗಳನ್ನು ಜೀವನ ಶಿಕ್ಷಣ ಶಾಲೆಗಳಾಗಿ ಕ್ರಮವಾಗಿ ಮಾರ್ಪಡಿಸುವ ಕಾರ್ಯಾಚರಣೆಯ ಬಗ್ಗೆ ಕಳೆದ ವರ್ಷ ಧಾರವಾಡದ ಪದವೀಧರ ಶಿಕ್ಷಕ ಶಿಕ್ಷಣಾಲಯದಲ್ಲಿ ೪ನೆಯ ಜನೆವರಿಯಿಂದ ೧೦ನೆಯ ದಿನಾಂಕದವರೆಗೆ ಪ್ರಾದೇಶಿಕ ವಿಚಾರ ಸಂಕಿರಣ ಒಂದನ್ನು ಏರ್ಪಡಿಸಲಾಗಿತ್ತು. ಅದರಲ್ಲಿ ನಡೆದ ವಿಚಾರ ವಿನಿಮಯ ಮತ್ತು ನಿರ್ಣಯಗಳು–ಇವೆಲ್ಲವನ್ನು 'ವಿಚಾರಗೋಷ್ಠಿ' ಎಂಬ ಒಂದು ಪುಸ್ತಿಕೆಯಲ್ಲಿ ಕೊಡಲಾಗಿದೆ. ಅದನ್ನು ಎಲ್ಲರೂ ಚೆನ್ನಾಗಿ ಓದಿ ಮನನ ಮಾಡಬೇಕು. ಈ ಶಾಲೆಗಳಲ್ಲಿ ಮೂಲೋದ್ಯೋಗಕ್ಕೆ ಬೇಕಾಗುವ ಉಪಕರಣಗಳ ಪೂರೈಕೆಯೊಂದು ಸಮಸ್ಯೆ. ಉತ್ಪಾದಕ ಕೈಗಾರಿಕೆಗಳಿಗೆ ಸಮನ್ವಯಮಾಡಿ ವಿಷಯಗಳನ್ನು ಕಲಿಸುವ ಸಮವಾಯ ತಂತ್ರವನ್ನು ಉಪಯೋಗಿಸುವದೊಂದು ಸಮಸ್ಯೆ. ಹೀಗೆ ಇವೆರಡು ಸಮಸ್ಯೆಗಳನ್ನು ಬಿಡಿಸಬೇಕಾಗಿದೆ. ಇದು ನಿಧಾನವಾಗಿ ಸಾಧ್ಯವಾಗುವದು. ಸಮವಾಯ ತಂತ್ರದ ಇನ್ನೊಂದು ಸುಲಭ ಸಾಧ್ಯವಾದ ರೀತಿಯು ಸಾದರಪಡಿಸಬೇಕಾಗಿರುವದು. ಅದಾವದೆಂದರೆ, ವಿಷಯ ವಿಷಯಗಳಲ್ಲಿರುವ ಪರಸ್ಪರ ಸಂಬಂಧವನ್ನು, ಒಂದೇ ವಿಷಯದಲ್ಲಿದ್ದ ಬೇರೆ ಬೇರೆ ಭಾಗಗಳ ತಾರ್ಕಿಕ ಸಂಬಂಧವನ್ನು ವಿದ್ಯಾರ್ಥಿಗಳಿಗೆ ಒಡೆದು ತೋರಿಸಬೇಕು; ಮತ್ತು ಶಾಲೆಯಲ್ಲಿ ವಿಶೇಷ ವೆಚ್ಚವಿಲ್ಲದೆ ಮಕ್ಕಳಿಂದ ಮಾಡಿಸಬಹುದಾದ ಕೈಕೆಲಸಗಳಿಗೆ ಮತ್ತು ನಿರೀಕ್ಷಣೆಯ ಚಟುವಟಿಕೆಗಳಿಗೆ (Nature Study and object lesson) ಸಂಬಂಧಿಸಿ ವಿಷಯದ ಪಾಠಗಳನ್ನು ಕಲಿಸಬೇಕು. ಯಾವದೇ ಒಂದು ಸಂಗತಿಯನ್ನು ಕಲಿಸಬೇಕಾದಾಗ ಇದರ ಉಪಯೋಗವೇನು, ಇದು ಯಾವ ಕೆಲಸಕ್ಕೆ ಬರುತ್ತದೆ ಎಂಬ ಮೂಲೋದ್ದೇಶವನ್ನು ಉಪಯೋದ್ಘಾತವಾಗಿ ಎಲ್ಲ ಪಾಠಗಳಲ್ಲಿಯೂ ಇಟ್ಟುಕೊಳ್ಳಬೇಕು.

ಮೇಲೆ ಹೇಳಿದ ವಿಚಾರಗೋಷ್ಠಿಯಲ್ಲಿ, ಸಾಮಾನ್ಯ ಶಾಲೆಗಳಲ್ಲಿ ಜೀವನ ಶಿಕ್ಷಣಶಾಲೆಯ ವೈಶಿಷ್ಟ್ಯಗಳನ್ನು ತರುವಂಥ ಉದ್ದೇಶಪೂರಿತ ಚಟುವಟಿಕೆಗಳ ಯಾದಿಯನ್ನು ಮತ್ತು ಅವುಗಳನ್ನು ಸಂಘಟಿಸುವ ವಿಧಾನಗಳ ಕೆಲವು ಉದಾಹರಣೆಗಳನ್ನು ಕೆಳಗೆ ಕಾಣಿಸಲಾಗಿದೆ:—

೧. ಮಕ್ಕಳ ಸಹಜ ಪ್ರವೃತ್ತಿಗಳ ಉದಾತ್ತೀಕರಣ.

೨. ಮಕ್ಕಳಿಗೆ ಅವರ ಶಾಲೆಯ, ಮನೆಯ ಮತ್ತು ಸಮಾಜದ ನೈಸರ್ಗಿಕ ಸುತ್ತಲಿನ ಆವರಣದ ಕಲ್ಪನೆ ಮಾಡಿಕೊಡುವದು.

೩. ಮುಂದಾಳುತನ, ಸಹಕಾರ, ಸಂಘಟನಾ ಶಕ್ತಿಗಳನ್ನು ಪ್ರೋತ್ಸಾಹಿಸುವದು.

೪. ಮಕ್ಕಳ ಅನುಭವಶಕ್ತಿ, ವಿಚಾರಶಕ್ತಿ, ಸೃಜನಶಕ್ತಿಗಳನ್ನು ಬೆಳೆಸುವದು.

೫. ವೈಜ್ಞಾನಿಕ ದೃಷ್ಟಿಕೋನ ಬೆಳೆಸುವದು.

೬. ಕೈಕುಶಲತೆಯನ್ನು ಪ್ರೋತ್ಸಾಹಿಸುವದು.

೭. ಉತ್ತಮ ನಾಗರಿಕರಾಗುವಂತೆ ಮಾಡುವದು

೮. ಕೇವಲ ಪುಸ್ತಕೀಯ ಜ್ಞಾನಮಾಡಿಕೊಡದೆ ಸಹಜವಾಗಿ ಚಟುವಟಿಕೆಗಳ ಮುಖಾಂತರ ಜ್ಞಾನ ಗಳಿಸುವಂತೆ ಮಾಡುವದು.

(ಮುಂದುವರೆಯುವದು)

The Programme of the S. T. C. Examination Part I 1960

Name of the centre and place	Name of Conductor
1) Dharwar: (Govt. A.K. Girls' High School Dharwar)	Educational Inspector, Dharwar.
2) Belgaum: (Secondary Teachers' College, Belgaum.)	Educational Inspector, Belgaum

—Time Table—

Wednesday, 4th May 1960

11-00 A. M. to 2-00 P. M.	Paper I Elementary Principles of ucation and Education Psychology.
3-00 P. M to 6-00 P. M.	Paper II (a) Educational Administration and Educational Movements; b) School Organisation and Hygine.

Thursday, 5th May 1960

11-00 A. M. to 2-00 P. M.	Paper III General Methods.
3-00 P. M. to 6-00 P. M.	Paper IV Special Methods

2/ Applications in the form printed as "Appendix A" in the rules must reach the Education Inspector of the District in which the candidate's school is situated on or before the 15th February 1960.

3/ Candidates are requested to state in their applications the centre at which they wish to appear and the language through which they wish to write their answers.

DHARWAR

Date : 11—1—60

S. V. Jevoor
Dy. Director of Public Instruction, Dharwar and Chairman,
S.T.C. Exam. Committee, 1960, Bombay Karnatak Area.

ಪ್ರಾಥಮಿಕ ಶಿಕ್ಷಕರ ಪ್ರಮಾಣ ಪತ್ರ ಪರೀಕ್ಷೆ ೧೯೬೦, (ಹಳೆಯ ಹಾಗೂ ಹೊಸ ಕ್ರಮದಂತೆ)

—: ಧಾರವಾಡ ವಿಭಾಗ :—

ವಾರ	ದಿನಾಂಕ	ವೇಳೆ ಇಂದ	ವರೆಗೆ	ಹಳೆಯಕ್ರಮ	ಹೊಸಕ್ರಮ
ಬುಧವಾರ	೨೦—೪—೬೦	೮-೦ ಮುಂ.	೧೦-೦ ಮುಂ.	ಶಿಕ್ಷಣ ತತ್ವ I	ಶಿಕ್ಷಣ ಶಾಸ್ತ್ರ
	,,	೩-೦ ಮ.	೫-೦ ಮ.	ವಿಜ್ಞಾನ	ಸಾಮಾನ್ಯ ಜ್ಞಾನ
ಗುರುವಾರ	೨೧—೪—೬೦	೮-೦ ಮುಂ.	೧೦-೦ ಮುಂ.	ಗಣಿತ—I	ಸಾ. ಗಣಿತ
	,,	೩-೦ ಮ.	೫-೦ ಮ.	ಭಾಷಾ—I	ಪ್ರಾದೇಶಿಕ ಭಾಷಾ—I
ಶುಕ್ರವಾರ	೨೨—೪—೬೦	೮-೦ ಮುಂ.	೧೧-೦ ಮುಂ.	ಮೂಲೋದ್ಯೋಗ ತಾತ್ವಿಕ	ಮೂಲೋದ್ಯೋಗ ತಾತ್ವಿಕ
	,,	೩-೦ ಮ.	೫-೦ ಮ.	ಭಾಷಾ—II	ಪ್ರಾ. ಭಾಷಾ—II
ಶನಿವಾರ	೨೩—೪—೬೦	೮-೦ ಮುಂ.	೧೦-೦ ಮುಂ.	ಗಣಿತ—II	ಶಾಲಾ ಆಡಳಿತ ಸಂಘಟನೆ
	,,	೩-೦ ಮ.	೫-೦ ಮ.	ಶಿಕ್ಷಣ ತತ್ವ—II	ಬೋಧನೆಯ ವಿಧಾನಗಳು
ಸೋಮವಾರ	೨೫—೪—೬೦	೮-೦ ಮುಂ.	೧೧-೦ ಮುಂ.	ಇತಿಹಾಸ, ಭೂಗೋಲ	ಸಾಮಾಜಿಕ ವಿಷಯಗಳು (ಇತಿಹಾಸ, ಭೂಗೋಲ, ಪೌರನೀತಿ)
	,,	೩-೦ ಮ.	೫-೦ ಮ.	ಹಿಂದಿ	ಹಿಂದಿ
ಮಂಗಳವಾರ	೨೬—೪—೬೦	೮-೦ ಮುಂ.	೧೦-೦ ಮುಂ.	ಪ್ರಾದೇಶಿಕ ಭಾಷಾ ಕಾಗದ [ಉರ್ದು ಉಮೇದವಾರರಿಗೆ ಮಾತ್ರ] (ಹಳೆಕ್ರಮವೆಂದರೆ ಎಸ್. ಎಸ್. ಸಿ. ಉಮೇದವಾರರಿಗೆ)	

Sd/—

ಪ್ರಿನ್ಸಿಪಾಲ್

ಗಂ. ಮ. ಸ. ಟ್ರೇ. ಕಾ. ಧಾರವಾಡ

Regd. No. B. 5375

ಭಾಗ ೧ ಕವಿತಾ ಸಂಕಲನ ೧೫೦ **ನಾವು ನಮ್ಮವರು** ಭಾಗ ೨ ಕಥಾ ಸಂಕಲನ ೧೫೦

(ಪ್ರಾಥಮಿಕ ಶಿಕ್ಷಕ ಸಾಹಿತಿಗಳ ಫೋಟೊ ಪರಿಚಯ ಕಥೆ ಕವನಗಳು)

ಮಾನ್ಯ ಎ. ಸಿ. ದೇವೇಗೌಡರು ಶಿಕ್ಷಣಾಧಿಕಾರಿಗಳು [D. P. I.] ಮೈಸೂರು ರಾಜ್ಯ ಅವರ ಮುನ್ನುಡಿ.

ಮಾನ್ಯ ಸಿದ್ಧಯ್ಯ ಪುರಾಣಿಕ 'ಕಾವ್ಯಾನಂದ'ರು ಡೆ. ಸೆಕ್ರೆಟರಿ ಶಿಕ್ಷಣ ವಿಭಾಗ ಇವರ ಹಿನ್ನುಡಿಗಳು.

- ಕೇವಲ ೩ ರೂಪಾಯಿ [ಅಂಚೆಸೇರಿ] ವಾರ್ಷಿಕ ಚಂದಾ ಹಣದಲ್ಲಿ ೩ನೆಯ ಮಾಲೆಯ ೧-೨ನೆಯ ಕುಸುಮ ಪಡೆಯಿರಿ.
- ಪ್ರಾಥಮಿಕ ಶಿಕ್ಷಕರ ಕಥೆ, ಕಾದಂಬರಿ, ಕವನ, ನಾಟಕಾದಿ ಕೃತಿಗಳು ಳಂಂ ಪುಟಗಳಲ್ಲಿ.
- ಅಗಷ್ಟ ದಿಂದ ಅಗಷ್ಟಕ್ಕೆ ಒಂದು ವರುಷ
- ಬಿಡಿ ಕುಸುಮ ಚಂದಾದಾರರಿಗೆ ೫ ಜಿಲೆಯಲ್ಲಿ [ಅಂಚೆಬೇರೆ]
- ವರ್ಷದ ಮಧ್ಯದಲ್ಲಿ ಚಂದಾದಾರರಾದರೂ ಆ ವರ್ಷದ ಎಲ್ಲ ಪುಸ್ತಕಗಳು ದೊರೆಯುವವು.
- ಇಂದೇ ಚಂದಾಹಣ ಕಳಿಸಿ ತಮ್ಮದೇ ಆದ ಶಿಕ್ಷಕರ ಬಳಗವು ಬೆಳೆವಂತೆ ನೆರವಾಗಿರಿ. ಈ ಅಲ್ಪ ಹಣ ತಮ್ಮ ಶಿಕ್ಷಕ ಮಿತ್ರರ ಎಳ್ಗೆಗೆ ಮೀಸಲು. ಗೆಳೆಯರನ್ನು, ವಾಚನಾಲಯಗಳನ್ನು ಚಂದಾದಾರರನ್ನು ಮಾಡಿ ನೆರವಾಗಿರಿ.

ವಿವರಗಳಿಗೆ: **ಭಾರತೀ ಸಾಹಿತ್ಯ ಭಂಡಾರ** ಅಂಚೆ: **ಯರನಾಳ** ಜಿಲ್ಲೆ: **ಬಿಜಾಪುರ**

ಕಲ್ಯಾಣ ಕನ್ನಡ ಗುಡಿಯ ಕಾಣಿಕೆ

ಸುವರ್ಣ ಸಂಧಿ! ಸಚಿತ್ರ ಗ್ರಂಥ!! ಸುಂದರ ಮುದ್ರಣ!!!

"ಶಿಕ್ಷಣ-ಶಿಕ್ಷಕ-ದರ್ಶನ"

ಶಿಕ್ಷಕರಿಗೂ, ಶಿಕ್ಷಕ ವಿದ್ಯಾರ್ಥಿಗಳಿಗೂ, ಶಿಕ್ಷಣಾಭಿಮಾನಿಗಳಿಗೂ, ಉಪಯುಕ್ತವಾಗುವಂಥ, ತನು-ಮನ ತಣಿಸುವಂಥ, ಶಿಕ್ಷಣ ತಜ್ಞರಿಂದ ಪರಿಶೀಲಿಸಲ್ಪಟ್ಟಂಥ, ಭಾರತದಲ್ಲಿಯ ಮಾನ್ಯ ಮಂತ್ರಿವರ್ಯರಿಂದ, ರಾಜ್ಯಪಾಲರಿಂದ, ಶಿಕ್ಷಣಾಧಿಕಾರಿಗಳಿಂದ, ಪ್ರಿನ್ಸಿಪಾಲರಿಂದ, ಸಾಹಿತಿಗಳಿಂದ ಪ್ರಶಂಸೆ ಪಡೆದ ಅಭಿಪ್ರಾಯಗಳುಳ್ಳಂಥ, ಕರ್ನಾಟಕ ವಿಶ್ವವಿದ್ಯಾಲಯದ ಉಪ ಕುಲಪತಿಗಳಾದ ರ್ಯಾಂಗ್ಲರ್ ಶ್ರೀ ಡಿ. ಸಿ. ಪಾವಟೆಯವರು ಮುನ್ನುಡಿ ಬರೆದಂಥ, ಅಮೋಘ ಗ್ರಂಥ.

ಶ್ರೀ ನಿಂಬಾಳ ಶಿಕ್ಷಕ ದಂಪತಿಗಳಿಂದ ಸಂಗ್ರಹಿಸಲ್ಪಟ್ಟಿದೆ. ಅಖಿಲ ಕರ್ನಾಟಕದ ಗಣ್ಯ ಶಿಕ್ಷಕ-ಶಿಕ್ಷಕಿಯರ ಬಣ್ಣ ಬಣ್ಣಗಳಲ್ಲಿ ಳಗ ಫೋಟೊ ಬ್ಲಾಕ್, ಲೇಖನ, ಪರಿಚಯಗಳುಳ್ಳಂಥ ಳಒಂ ಪುಟಗಳ ಅಮರ ಸಾಹಿತ್ಯ ಗ್ರಂಥ. **ಕನ್ನಡದಲ್ಲಿ ಒಂದು ಉತ್ತಮ ಮಾದರಿಯ ಶೈಕ್ಷಣಿಕ ಉದ್ಗ್ರಂಥ.**

ದಿ. ೧೫ ಅಗಸ್ಟ ಸ್ವಾತಂತ್ರ್ಯ ದಿನದಂದು ಮಾನ್ಯ ಶ್ರೀ ಎ. ಎಚ್. ದಳವಾಯಿ, ಎ. ಓ. ನಾಸೇಬರ ಅಧ್ಯಕ್ಷತೆಯಲ್ಲಿ ಪ್ರೊ. ಬಿ. ಟಿ. ಸಾಸನೂರ ಅವರ ಅಮೃತಹಸ್ತದಿಂದ ಈ ಗ್ರಂಥ ಪ್ರಕಾಶನಗೊಂಡಿದೆ.

ವಿವರಗಳಿಗೆ ಇಂದೇ ಈಗಲೇ ಬರೆಯಿರಿ.

ಸಾದಾ ಪ್ರತಿ ೩ ರೂ.] ವ್ಯಾಪಾರಸ್ಥರಿಗೆ ಧಾರಾಳವಾದ ಕಮೀಷನ್. [ಸುಂದರ ಪ್ರತಿ ೪ ರೂ

ವಿಳಾಸ :- ಶ್ರೀ ನಿಂಬಾಳ ಕಲ್ಯಾಣಪ್ಪ, ಪೋಸ್ಟ:— ತಾಂಬೆ, ಜಿಲ್ಲಾ:— ವಿಜಾಪುರ.

Printed by Shri S. F. Kattimani, at Manohar Power Printing Press, Hubli.
Edited & Published by Sjts. G. M. Joshi, B. M. Shinturi, S. R. Tatti & Smt. P. A. Bhaskar at the Kannada Jeevan Shikshan Office, Govt. Training College for Men, Dharwar

ಜೀವನ ಶಿಕ್ಷಣ

— ಸಂಪಾದಕ ಮಂಡಲ —

ಸಂಚಾಲಕರು : **ಶ್ರೀ ಎಮ್. ಜಿ. ಹಂದ್ರಾಳ,** ಬಿ.ಎ.(ಆನರ್ಸ),ಎಮ್.ಈಡಿ.,ಡಿ.ಬಿ.ಈಡಿ.,
ಎಜ್ಯುಕೇಶನಲ್ ಇನಸ್ಪೆಕ್ಟರ, ಧಾರವಾಡ,

ಪ್ರಧಾನ ಸಂಪಾದಕರು : **ಶ್ರೀ ಜಿ. ಎಮ್. ಜೋಶಿ,**
ಪ್ರಿನ್ಸಿಪಾಲ, ಗಂಡು ಮಕ್ಕಳ ಸರಕಾರಿ ಟ್ರೇನಿಂಗ ಕಾಲೇಜ, ಧಾರವಾಡ.

— ಸದಸ್ಯರು —

ಶ್ರೀಮತಿ ಪಿ. ಎ. ಭಾಸ್ಕರ, ಲೇಡಿ ಸುಪರಿಂಟಿಂಡೆಂಟ, ಹೆಣ್ಣು ಮಕ್ಕಳ ಸರಕಾರಿ ಟ್ರೇನಿಂಗ ಕಾಲೇಜ, ಧಾರವಾಡ.

ಶ್ರೀ ಬಿ. ಎಂ. ಶಿಂತ್ರಿ, ಬಿ.ಎ.,ಬಿ.ಟಿ., ನಿವೃತ್ತ ಅಸಿಸ್ಟಂಟ ಎಜ್ಯುಕೇಶನಲ್ ಇನಸ್ಪೆಕ್ಟರ ದಕ್ಷಿಣ ಭಾಗ. (ಮುಂಬಯಿ ಕರ್ನಾಟಕ) ಹಾಗು ಗೌ. ಕಾರ್ಯದರ್ಶಿ ಮತ್ತು ಲಾಯಬ್ರೇರಿಯನ್, ಸಾಹಿತ್ಯ ಸಮಿತಿ ಲಿಂಗಾಯತ ವಿದ್ಯಾಭಿವೃದ್ಧಿ ಸಂಸ್ಥೆ, ಧಾರವಾಡ.

ಶ್ರೀ ಎಸ್. ಆರ್. ತಟ್ಟಿ, ರಿಟಾಯರ್ಡ ಪ್ರಿನ್ಸಿಪಾಲ, ಪ್ರಾಥಮಿಕ ಶಿಕ್ಷಕರ ಟ್ರೇನಿಂಗ ಕಾಲೇಜ, ನವಲಗುಂದ.

ಸಂಪುಟ ೯೫ ಜನೇವರಿ ೧೯೬೦ ಸಂಚಿಕೆ ೮

— ಪರಿವಿಡಿ —

೧.	ಸಂಪಾದಕೀಯ	....	೧
೨.	ಪ್ರಾಥಮಿಕ ಶಾಲೆಗಳನ್ನು ಜೀವನ ಶಿಕ್ಷಣ ಶಾಲೆಗಳನ್ನಾಗಿ ಪರಿವರ್ತಿಸುವ ಬಗೆ .... ಶ್ರೀ ಎಸ್. ಎಸ್. ನಾಡಕರ್ಣಿ		೨
೩.	ಜೀವನ ಶಿಕ್ಷಣವನ್ನು ಭಾರತೀಯ ಸಂಸ್ಕೃತಿಯ ಒರೆಗಲ್ಲಿಗೆ ತಿಕ್ಕಿದಾಗ .... ಶ್ರೀ ತಟ್ಟಿ ಶಾಮರಾಯರು		೫
೪.	ಜೀವನ ಶಿಕ್ಷಣದಲ್ಲಿ ಗುರುವಿನ ಸ್ಥಾನ .... ಶ್ರೀ ವ್ಹಿ ಬಿ. ಜೋಕಾಪೂರ		೮
೫.	ಜೀವನ ಶಿಕ್ಷಣದಲ್ಲಿ ಕಾರ್ಯಕರ್ತನ ಸಮಸ್ಯೆಗಳು .... ಶ್ರೀ ಮಿರ್ಜಿ ಅಣ್ಣಾರಾಯರು		೧೧
೬.	ಜೀವನ ಶಿಕ್ಷಣವೂ ಜನಾನುರಾಗವೂ .... ಶ್ರೀ ಶಿಂತ್ರಿ ಬಸಪ್ಪನವರು		೧೩
೭.	ಸಾಂಸ್ಕೃತಿಕ ಚಟುವಟಿಕೆಗಳು .... ಶ್ರೀ ಶ್ರೀ ಯ. ಶೀಲವಂತ		೧೬
೮.	ನಾನು ಕಂಡ ಚಿಕ್ಕಮೊಂದು ಆದರ್ಶ ಕನ್ನಡ ಶಾಲೆ ಹಿಚಕಡ .... ಶ್ರೀ ಸ. ಪ. ಗಾಂವಕರ		೨೦
೯.	ಜೀವನ ಶಿಕ್ಷಣವೂ ಒಕ್ಕಲುತನವೂ .... ಶ್ರೀ ಎನ್. ಬಿ. ಕಡೇಮನಿ		೨೪
೧೦.	ಜೀವನ ಶಿಕ್ಷಣದ ತರಬೇತಿಯಲ್ಲಿ ಗ್ರಾಮ ವಾಸ್ತವ್ಯದ ಮಹತ್ವ .... ಶ್ರೀ ಎಸ್. ಆರ್. ಮಕರಿ		೨೭
೧೧.	ಸಮವಾಯ ಪದ್ಧತಿಯ ಪಾಠದ ಟಿಪ್ಪಣಿ .... ಶ್ರೀ ಹ. ಗ. ಜೋಶಿ		೨೯
೧೨.	ಜೀವನ ಶಿಕ್ಷಣದಲ್ಲಿ ವ್ಯಾಖ್ಯಾನೆಯ ಮಹತ್ವ .... ಶ್ರೀ ಎನ್. ಬಿ. ಹೊಬ್ಬಿ		೩೪
೧೩.	ರಾಷ್ಟ್ರೀಯ ಶಿಕ್ಷಣ ಮತ್ತು ಹಿಂದಿ .... ಶ್ರೀ ಬಿ. ಜಿ. ಚಿಟಣೀಸ		೩೯
೧೪.	ನಮ್ಮ ಮಾದರಿ ಶಾಲೆ .... ಶ್ರೀ ಆರ್. ಬಿ. ಸೊನಗಾರ		೪೧
೧೫.	ಪುಸ್ತಕ ವಿಮರ್ಶೆ		೪೩
೧೬.	ಪಾವನವಾಪ ಜೀವನ ಶಿಕ್ಷಣ (ಕವನ) .... ಶ್ರೀ ಎಸ್. ಡಿ. ಉಡಕೇರಿ		೪೪
೧೭.	ಪ್ರಕಟನೆ		ಕವರ ೩

ಸಂಪಾದಕೀಯ

ನಮ್ಮ ಮಾತು

ಪ್ರತಿವರುಷದಂತೆ ಈ ವರುಷವೂ ಜನೇವರಿ ೨೦ ನೆಯ ತಾರೀಖಿನಿಂದ ೨೬ರ ವರೆಗೆ ಜೀವನ ಶಿಕ್ಷಣ ಸಪ್ತಾಹವು ದೇಶದಾದ್ಯಂತ ಆಚರಿಸಲ್ಪಡುತ್ತಿದೆ. ಈ ಸಪ್ತಾಹ ಆಚರಣೆಯ ಉದ್ದೇಶವು ಜೀವನ ಶಿಕ್ಷಣದ ಬಗೆಗೆ ಸಾಮಾನ್ಯ ಜನತೆಯ ಲಕ್ಷ್ಯವನ್ನು ಎಳೆದು ಕೊಳ್ಳುವದಾಗಿದೆಯಲ್ಲದೆ; ಕಾರ್ಯಕರ್ತರಲ್ಲಿಯೂ ಒಂದು ಬಗೆಯ ಹುಮ್ಮಸ್ಸನ್ನು ಹುಟ್ಟಿಸುವದಾಗಿದೆ ಎಂದು ಹೇಳಬಹುದು. ಜೀವನ ಶಿಕ್ಷಣವು ಇಂದು ರಾಷ್ಟ್ರೀಯ ಶಿಕ್ಷಣವೆನಿಸಿಕೊಂಡಿದೆ. ಪ್ರಯೋಗಾವಸ್ಥೆಯನ್ನು ದಾಟಿ ನಿಂತಿದ್ದರೂ ಸಾಮಾನ್ಯ ಜನತೆಯಲ್ಲಿ ಇನ್ನೂ ಸಾಶಂಕ ಭಾವನೆಯು ಉಳಿದುದು ಅಲ್ಲಲ್ಲಿ ದೃಗ್ಗೋಚರವಾಗುತ್ತಿದೆ. ಉಳಿದುಕೊಂಡ ಭಾವನೆಯನ್ನು ದೂರೀಕರಿಸಿ ಆ ಶಿಕ್ಷಣದ ಬಗೆಗೆ ಹೆಚ್ಚಿನ ತಿಳುವಳಿಕೆಯನ್ನುಂಟು ಮಾಡಿಕೊಡುವುದು ಆ ಶಿಕ್ಷಣದ ಹೊಣೆ ಹೊತ್ತವರೆಲ್ಲರ ಕರ್ತವ್ಯವಾಗಿದೆ.

ಆ ಒಂದು ಹೊಣೆಗಾರಿಕೆಯ ಅರಿವಿನಿಂದ ಈ ಪತ್ರಿಕೆಯ ಸಂಚಾಲಕ ವರ್ಗದವರೂ ಕೂಡಾ ಈ ಸಂದರ್ಭದಲ್ಲಿ ಜೀವನ ಶಿಕ್ಷಣದ ಬಗೆಗೆ ಲೇಖನಗಳನ್ನು ಬರೆಯಿಸಿ ಪ್ರಕಟಿಸಬೇಕೆಂಬ ವಿಚಾರ ಮಾಡಿದರು. ಅನೇಕ ಲೇಖಕರನ್ನು ಕೇಳಿಕೊಳ್ಳಲಾಯಿತು. ಅವರಿಗೆ ಬೇರೆ ಬೇರೆ ವಿಷಯಗಳನ್ನೂ ಕೊಡಲಾಯಿತು. ನಮ್ಮ ಕರೆಗೆ ಓಗೊಟ್ಟು ಅನೇಕರು ತಮ್ಮ ಲೇಖನಗಳನ್ನು ಕಳುಹಿಸಿದರು. ಅಂಥ ಲೇಖಕರ ಲೇಖನಗಳನ್ನು ಈ ವಿಶೇಷ ಸಂಚಿಕೆಯಲ್ಲಿ ಪ್ರಕಟಿಸಿ ಇಂದು ಪ್ರಕಾಶನಗೊಳಿಸುತ್ತಿದ್ದೇವೆ. ಈ ವಿಶೇಷ ಸಂಚಿಕೆಗಾಗಿ ಲೇಖನಗಳನ್ನು ಬರೆದು ಕಳುಹಿದ ಎಲ್ಲರಿಗೂ ಈ ಸಂದರ್ಭದಲ್ಲಿ ಧನ್ಯವಾದಗಳನ್ನು ಸಮರ್ಪಿಸ ಬಯಸುತ್ತೇವೆ. ಮುಖ್ಯವಾಗಿ ಈ ತೆರನಾದ ವಿಚಾರಕ್ಕೆ ಪ್ರಚೋದನೆಯನ್ನು ಉಂಟುಮಾಡಿದವರು ನಮ್ಮ ಭಾಗದ ಶಿಕ್ಷಣ ಶಾಖೆಯ ಡೆಪ್ಯೂಟಿ ಡೈರೆಕ್ಟರರಾದ ಶ್ರೀಮಾನ್ ಎಸ್. ವ್ಹಿ. ಜೇವೂರ, ಅವರು ಹಾಗು ಧಾರವಾಡ ಜಿಲ್ಲೆಯ ಶಿಕ್ಷಣಾಧಿಕಾರಿಗಳಾದ ಶ್ರೀಮಾನ್ ಮ. ಗು. ಹಂದ್ರಾಳರವರು. ಈ ಈರ್ವರೂ ಮಹನೀಯರಿಗೆ ನಮ್ಮ ಕೃತಜ್ಞತೆಗಳ್ಳು ಮೀಸಲಾಗಿವೆ.

ವಿಚಾರಗೋಷ್ಠಿ

ಡಿಶಂಬರ ತಿಂಗಳ ೨೬ನೆಯ ತಾರೀಖಿನಿಂದ ೨೯ ಪೂರ್ಣ ೪ ದಿನ ಧಾರವಾಡ ಗಂಡು ಮಕ್ಕಳ ಸರಕಾರಿ ಟ್ರೇನಿಂಗ ಕಾಲೇಜದ ಪ್ರಾರ್ಥನಾ ಮಂದಿರದಲ್ಲಿ ಧಾರವಾಡ ಹಾಗು ಗುಲಬುರ್ಗಾ ವಿಭಾಗಗಳ ಶಿಕ್ಷಣಾಧಿಕಾರಿಗಳ ಹಾಗು ಮಾಧ್ಯಮಿಕ ಶಾಲೆಗಳ ಮುಖ್ಯಾಧ್ಯಾಪಕರ ವಿಚಾರ ಗೋಷ್ಠಿಯೊಂದು ನಡೆಯಿತು. ವಿಚಾರ ಗೋಷ್ಠಿಯನ್ನು ಕರ್ನಾಟಕ ವಿಶ್ವವಿದ್ಯಾಲಯದ ಉಪಕುಲಪತಿಗಳಾದ ಮಾನ್ಯ ರ್ಯಾಂಗ್ಲರ ಡಿ. ಸಿ. ಪಾವಟೆಯವರು ಉದ್ಘಾಟಿಸಿ ಪ್ರತಿನಿಧಿಗಳಿಗೆ ಮಾರ್ಗದರ್ಶನಮಾಡಿದರು. ಧಾರವಾಡ ಜಿಲ್ಲೆಯ ನ್ಯಾಯಾಧೀಶರಾದ ಮಾನ್ಯ ವೀರಕುದರತ್ ಅಲ್ಲಿಯವರು ಮುಕ್ತಾಯ ಸಮಾರಂಭಕ್ಕೆ ಮುಖ್ಯ ಅತಿಥಿಗಳಾಗಿ ಬಂದಿದ್ದರು. ಡೆಪ್ಯೂಟಿ ಡೈರೆಕ್ಟರರಾದ ಶ್ರೀ ಎಸ್. ವ್ಹಿ. ಜೇವೂರವರು ಗೋಷ್ಠಿಯ ಮುಖ್ಯ ಸಂಚಾಲಕರಾಗಿದ್ದು ಸುಮಾರು ೬೫ ಜನ ಶಿಕ್ಷಣತಜ್ಞರು ಗೋಷ್ಠಿಯಲ್ಲಿ ಭಾಗವಹಿಸಿದ್ದರು. ಟ್ರೇನಿಂಗ ಕಾಲೇಜದವರು ಅಚ್ಚುಕಟ್ಟಾದ ವ್ಯವಸ್ಥೆಯನ್ನು ಮಾಡಿದ್ದು ನಾಲ್ಕುದಿನ ಹಬ್ಬದ ವಾತಾವರಣವು ಕಂಡುಬರುತ್ತಿದ್ದಿತು. ಇಂಥ ಗೋಷ್ಠಿಗಳು ಪುನರ್ಘಟನೆಯ ಈ ಸಂದರ್ಭದಲ್ಲಿ ಸಮಯೋಚಿತವಾಗಿರುವವಲ್ಲದೆ, ಪ್ರಯೋಜನ ಕಾರಿಯಾಗಿದೆ. ಪ್ರಾಥಮಿಕ ಶಿಕ್ಷಕರೂ ಕೂಡಾ ಖಾತೆಯವರು ಆದೇಶವೀಯಲಿ; ಬಿಡಲಿ; ಇಂಥ ಗೋಷ್ಠಿಗಳನ್ನು ನಡೆಯಿಸಿ ತಮ್ಮ ತಮ್ಮ ಸಮಸ್ಯೆಗಳನ್ನು ಎತ್ತಿಕೊಂಡು ಪರಿಹಾರೋಪಾಯಗಳನ್ನು ಕಂಡು ಕೊಳ್ಳುವುದು ಸೂಕ್ತವೂ ಸಮಂಜಸವೂ ಆಗಿದೆ.

ಕಾಂಗ್ರೆಸ್—ಅಧಿವೇಶನ

ಈ ಸಂಚಿಕೆಯು ಹೋರಬೀಳುತ್ತಿರುವ ಸಮಯದಲ್ಲಿಯೇ ನಮ್ಮ ರಾಜ್ಯದ ರಾಜಧಾನಿಯಾದ ಬೆಂಗಳೂರಿನಲ್ಲಿ ಕಾಂಗ್ರೆಸ್ಸಿನ ೬೫ನೆಯ ಮಹಾಧಿವೇಶನವು ಸೇರುತ್ತಲಿದೆ

೧೯೨೪ರಲ್ಲಿ ಗಾಂಧೀಜಿಯವರ ಧುರೀಣತ್ವದಲ್ಲಿ ಬೆಳಗಾಂವಿಯಲ್ಲಿ ಕರ್ನಾಟಕದಲ್ಲಿ ಪ್ರಥಮಸಲ ಅಧಿವೇಶನವು ಸೇರಿದ್ದಿತು. ೩೭ವರುಷಗಳನಂತರ ಪುನಃ ಕರ್ನಾಟಕದಲ್ಲಿ ಸೇರುತ್ತಿರುವದು ಕನ್ನಡಿಗರಿಗೆ ಒಂದು ಸಂತೋಷದ ಹಾಗು ಹೆಮ್ಮೆಯ ವಿಷಯವಾಗಿದೆ. ಈ ಸಲದ ಕಾಂಗ್ರೆಸ್ ಅಧಿವೇಶನದ ಅಧ್ಯಕ್ಷತೆಯನ್ನು ನೆರೆಯ ನಾಡಾದ ಆಂಧ್ರದ ಶ್ರೀಮಾನ್ ನೀಲಂ ಸಂಜೀವರೆಡ್ಡಿಯವರು ವಹಿಸಲಿರುವರು. ಅಧಿವೇಶನವು ಕನ್ನಡಿಗರ ಘನತೆ ಗೌರವಗಳಿಗೆ ತಕ್ಕಂತೆ ನೆರವೇರಿ; ಗಾಂಧೀ ನಾಡೆಂದು ಕರೆಯಿಸಿಕೊಂಡ ಕರ್ನಾಟಕದ ಕೀರ್ತಿಯು ಇನ್ನೂ ಹೆಚ್ಚಾಗಿ ಮೊಳಗಲಿ ! ಅಂಥ ಒಂದು ಕಾರ್ಯಶಕ್ತಿಯನ್ನು ಕನ್ನಡಿಗರಲ್ಲಿ–ಕನ್ನಡಿಗರ ಕುಲದೈವತೆಯೆನಿಸಿದ ಶಕ್ತಿದೇವತೆಯಾದ ಚಾಮುಂಡೇಶ್ವರಿಯು ದಯಪಾಲಿಸಲಿ ಎಂದು ಹಾರೈಸುವೆವು.

ಪ್ರಾಥಮಿಕ ಶಾಲೆಗಳನ್ನು ಜೀವನ ಶಿಕ್ಷಣ ಶಾಲೆಗಳನ್ನಾಗಿ ಪರಿವರ್ತಿಸುವ ಬಗೆ

[ಆಲ್ ಇಂಡಿಯಾ ರೆಡಿಯೋದವರ ಕೃಪೆಯಿಂದ]

ಲೇಖಕರು : **ಶ್ರೀ ಎಸ್. ಎಸ್. ನಾಡಕರ್ಣಿ,** ಬಿ.ಎಸ್‌ಸಿ.(ಆನರ್ಸ), ಡಿ.ಇಡಿ., ರಾ.ಭಾ.ವಿಶಾರದ

ಪ್ರಶ್ನೆ :— ಇತ್ತಿತ್ತಲಾಗಿ ಸಾದಾಸಾಲಿ, ಜೀವನ ಶಿಕ್ಷಣ ಶಾಲೆ ಅಂತ ಹೇಳಿ ಗದ್ದಲಾನ ಎದ್ದ ಬಿಟ್ಟದಲ್ಲ. ಏನ್ರಿ ಇದು ಜೀವನ ಶಿಕ್ಷಣ ಅಂದ್ರ ?

ಉತ್ತರ :— ಜೀವನ ಶಿಕ್ಷಣ ಅಂದ್ರ ಜೀವನದ ಸಲುವಾಗಿ ಶಿಕ್ಷಣ. ಮಕ್ಕಳು ಮುಂದೆ ತಮ್ಮ ಜೀವನವನ್ನು ಸರಿಯಾಗಿ ಸಾಗಿಸಿಕೊಂಡು ಹೋಗಬೇಕು ಅನ್ನುವದರ ಸಲುವಾಗಿ ಕೊಡುವ ಶಿಕ್ಷಣ. ಮಕ್ಕಳು ಕೇವಲ ಓದು, ಬರೆಹ, ಲೆಕ್ಕ ಇಷ್ಟೇ ಕಲ್ತರ ಅವರಿಗೆ ಜೀವನ ಸಾಗಿಸಲಿಕ್ಕೆ ಬರೋದಿಲ್ಲ. ಅಂತ ಹೇಳಿ ಅವರು ಸಣ್ಣವರಿದ್ದಾಗ ಸಾಲಿಯೊಳಗ ಜೀವನಕ್ಕ ಸಂಬಂಧಿಸಿದ ಉದ್ಯೋಗಗಳನ್ನು ಮಾಡಿಸಿ ಅವುಗಳ ಮೂಲಕ ಜ್ಞಾನ ಮಾಡಿಕೊಟ್ಟರ ಅವರು ನಿಜವಾಗಿಯೂ ಕಲ್ತಾಂಗಾಕ್ತದ. ಅನ್ನೋದು ಈ ಶಿಕ್ಷಣದ ತತ್ವ. ಮಕ್ಕಳು ತಮ್ಮ ಹೊಣೆಗಾರಿಕೆಯನ್ನು ಸರಿಯಾಗಿ ಅರಿತುಕೊಳ್ಳಬೇಕು. ಅವರು ಸ್ವಾವಲಂಬಿಗಳಾಗಬೇಕು, ಚಿಕ್ಕಂದಿನಿಂದಲೇ ಅವರು ಉಪಯುಕ್ತವಾದಂಥ ಕೆಲಸಗಳನ್ನು ಮಾಡಬೇಕು. ಸಮಾಜದ ಸಂಗಡ ಕೂಡಿಕೊಂಡು ನಡೀಬೇಕು ಅನ್ನೋದು ಜೀವನ ಶಿಕ್ಷಣದ ಉದ್ದೇಶ. ಆಯಾ ಉದ್ದೇಶಕ್ಕ ಸಂಬಂಧಪಟ್ಟ ಎಲ್ಲ ಚಟುವಟಿಕೆಗಳನ್ನು ಮಕ್ಕಳಿಂದಲೇ ಶಾಲೆಯೊಳಗ ಮಾಡಿಸುತ್ತಾರ. ಅಲ್ಲದೆ ಚಟುವಟಿಕೆಗಳನ್ನು ಮಾಡುವದರಿಂದ ಉತ್ತಮ ಜ್ಞಾನ ಮಕ್ಕಳಲ್ಲಿ ಉಂಟು ಆಗ್ತದ. ಇಂಥ ಚಟುವಟಿಕೆಗಳನ್ನು ಮಾಡಿಸುವದು ಬಿಟ್ಟು ಅವರಿಗೆ ಬರೇ ಪುಸ್ತಕದೊಳಗಿನ ಪಾಠಗಳನ್ನಷ್ಟೇ ಹೇಳಿ ಒಂದೆರಡು ಲೆಕ್ಕ ಹೇಳಿ ಕೊಟ್ಟರ ಅವರಿಗೆ ಮುಂದಿನ ಜೀವನದೊಳಗ ಏನ ಉಪಯೋಗ ಬಿಳ್ತದ ಹೇಳ್ರಿ. ಇದೇ ಈಗ ಹೇಳಿದ ಉದ್ದೇಶಗಳಿಲ್ಲವುಗಳನ್ನು ಈಡೇರಿಸಿದರ ಮಕ್ಕಳು ಉತ್ತಮ ನಾಗರಿಕರಾದಾರು, ಅವರಲ್ಲಿ ಉದ್ಯೋಗ ಮಾಡುವ ಶಕ್ತಿ ಬಂದೀತು, ಅದರಿಂದ ನಮ್ಮ ಸಮಾಜ ಸುಧಾರಿಸೀತು, ಇದಕ್ಕ ನೀವೇ ನಂತೀರಿ.

ಪ್ರಶ್ನೆ :— ಜೀವನ ಶಿಕ್ಷಣದ ಉದ್ದೇಶ ಎಲ್ಲಾ ನೆಟ್ಟಗ ಅವರಿ. ಆದರ ಇದು ಬಹಳೇ ಸಾವಕಾಶ ಪ್ರಚಾರ ಆಗಲಿಕ್ಕೆ ಹತ್ಯದ ಅಲ್ಲರಿ ಇದಕ್ಕ ಏನು ಕಾರಣ ?

ಉತ್ತರ :— ಇದಕ್ಕ ಬಹಳ ಕಾರಣಗಳು ಅವರಿ. ಮೊದಲನೆಯದು ಅಂದರ ಜೀವನ ಶಿಕ್ಷಣದೊಳಗ ತರಬೇತಿ ಪಡೆದ ಶಿಕ್ಷಕರ ಕೊರತೆ. ಆದರೆ ಇತ್ತೀಚೆಗೆ ಶಿಕ್ಷಕರ ಕಾಲೇಜುಗಳು ಬಹಳ ಆಗ್ಯಾವ. ಮತ್ತು ಸಾಕಷ್ಟು

ಶಿಕ್ಷಕರು ತರಬೇತಿ ಪಡೆದಾಂಗ ಆಗೇದ. ಅಂದ ಮೇಲೆ ಈ ಸಮಸ್ಯೆ ಸಾಕಷ್ಟು ಬಗೆ ಹರಿದಾಂಗ ಆಗೇದ ಅನ್ನಿರಿ. ಇನ್ನು ಎರಡನೆಯ ಕಾರಣ ಅಂದರ ಜೀವನ ಶಿಕ್ಷಣ ಅಂದರೇನಪ್ಪಾ ಅದು ಒಂದು ಭಾರಿ ಕಠಿಣವಾದಂಥ ಶಿಕ್ಷಣ ಪದ್ಧತಿ. ಮೊದಲಿನ ಶಿಕ್ಷಣಕ್ಕೂ ಈಗಿನ ಶಿಕ್ಷಣಕ್ಕೂ ಯಾವದೇ ಸಂಬಂಧ ಇಲ್ಲ. ಇದು ಒಂದು ಬೇರೆ ಶಿಕ್ಷಣ ಪದ್ಧತಿ. ಅಂತ ಎಲ್ಲರೂ ತಿಳಿದುಕೊಂಡಾಂಗದ. ಆದರ ಹಾಂಗೇನಿಲ್ಲ. ಜೀವನ ಶಿಕ್ಷಣ ಅಂದ್ರ ಏನು ಕಠಿಣ ಪದ್ಧತಿ ಅಲ್ಲ. ಮೊದಲಿನ ಶಿಕ್ಷಣಕ್ಕೇ ಇದ್ದ ಉದ್ದೇಶಗಳು ಈ ಶಿಕ್ಷಣಕ್ಕೂ ಅವ. ಆದರ ಚಟುವಟಿಕೆಗಳನ್ನು ಮಾಡಿಸುತ್ತ ನಾವು ಮಕ್ಕಳಿಗೆ ಕಲಿಸುವದೇ ಜೀವನ ಶಿಕ್ಷಣ ಅನ್ನುವ ಭಾವನಾ ನಾವು ಎಲ್ಲರಲ್ಲಿಯೂ ತಂದು ಕೊಡಬೇಕಾಗೇದ. ಮೂರನೆಯ ಕಾರಣ ಅಂದರ ದುಡ್ಡು ಗಳಿಸುವ ಉದ್ಯೋಗದಲ್ಲಿ ಮಕ್ಕಳು ಬಹಳೇ ಶ್ರಮ ತಗೆದುಕೊಳ್ಳಬೇಕಾಗ್ತದ. ಅಂದ ಮೇಲೆ ಶಾಲೆಗಳು ಕಾರಖಾನೆಗಳಾದಾಂಗ ಆಗ್ತಾವ. ಅನ್ನೋ ಒಂದು ವಿಚಾರ ಬಹಳ ಜನರ ತಲೆಯಲ್ಲಿ ಅದ. ನಿಜವಾಗಿ ನೋಡಿದ್ರ ಇದು ತಪ್ಪು ಕಲ್ಪನಾ. ಯಾಕೆಂದರೆ ಮಕ್ಕಳನ್ನು ಅವರ ಶಕ್ತಿಮೀರಿ ದುಡಿಸಬೇಕು ಅಂತ ಯಾರೂ ಹೇಳಿಲ್ಲ. ಕಲಿಯುವದರಲ್ಲಿ ಸಹಾಯ ಮಾಡ್ತಾವು. ಅವುಗಳಿಂದ ಜೀವನ ಸಾಗಿಸುವ ಬಲ ಬರ್ತದ-ಸ್ವಾವಲಂಬತನ ಬರ್ತದ ಅಂತ ಹೇಳಿ ಉದ್ಯೋಗಗಳನ್ನು ಸಾಲೆಗಳಲ್ಲಿ ಮಾಡಿಸಬೇಕೇ ಹೊರತು ಬರೇ ರೊಕ್ಕ ಗಳಿಸುವ ಉದ್ದೇಶ ಇಟ್ಟುಕೊಂಡು ಯಾವ ಸಾಲೆಗಳೂ ಉದ್ಯೋಗಗಳನ್ನು ನಡೆಸಬಾರದು. ಅಂತ ಎಲ್ಲ ಶಿಕ್ಷಣ ತಜ್ಞರೂ ಹೇಳ್ಯಾರ. ಮಕ್ಕಳಿಗೆ ಅತೀ ಶ್ರಮ ಆಗುವ ಹಾಗೆ ಅವರಿಂದ ಕೆಲಸಗಳನ್ನು ಮಾಡಸ್ತಾರ ಅನ್ನೋಭಾವನಾ ಎಲ್ಲರ ತಲೆಯೊಳಗಿಂದ ತೆಗೆದು ಹಾಕಬೇಕಾಗೇದ.

ಪ್ರಶ್ನೆ :— ಬರೇ ಈ ಉದ್ಯೋಗಗಳಿಗೆ ಹೆಚ್ಚಿನ ವೇಳೆ ಕೊಟ್ಟರೆ ಬಾಕಿ ವಿಷಯ ಕಲಿಯುವದು ಕಡಿಮೆ ಆಗೋದಿಲ್ಲೇನ್ರಿ?

ಉತ್ತರ :— ಹಾ! ನೀವು ಏನು ಕೇಳಿದ್ರಲ್ಲ ಆ ಸಂಶಯ ಬಹಳ ಜನರ ಮನಸ್ಸಿನೊಳಗ ಅದರಿ. ಹೆಚ್ಚು ಓದಿದಷ್ಟು, ಹೆಚ್ಚು ಬರೆದಷ್ಟು ಹುಡುಗರು ಹೆಚ್ಚು ಜಾಣರಾಗ್ತಾರ ಅಂತ ಹೇಳ್ಕೆನಾವು ಮೊದಲು ತಿಳಿದುಕೊಂಡಿದ್ವಿ. ಆದರ ಶಿಕ್ಷಣ ತಜ್ಞರ ಅಭಿಪ್ರಾಯದ ಪ್ರಕಾರ ಸಣ್ಣ ಮಕ್ಕಳಿಗೆ ಹಗಲೆಲ್ಲ ಒಂದು ಮೂಲೆಯೊಳಗೆ ಕೂಡ್ರಿಸಿ ಪುಸ್ತಕ ಓದ್ಸುವದಕ್ಕಿಂತ ಅವರ ಕಡೆಯಿಂದ ಚಟುವಟಿಕೆಗಳನ್ನು ಮಾಡ್ಸಿದರನ ಅವರು ಬೇಕಾದಾಂಗ ಶಾಣ್ಯಾರು ಆಗ್ತಾರ. ಅಂತ ಹೇಳಿ ಜೀವನ ಶಿಕ್ಷಣ ತಿಳಿದದ. ಕೆಲಸ ಮಾಡುವದು ಅಂದರ ಮಕ್ಕಳಿಗೆ ಆಟ ಆಡಿದಹಾಂಗ. ಅದರಿಂದ ಅವರಿಗೆ ಸಾಕಷ್ಟು ಜ್ಞಾನ ಆಗ್ತದ. ಅನ್ನೂದನ್ನ ದೊಡ್ಡ ದೊಡ್ಡ ಶಿಕ್ಷಣ ತಜ್ಞರು ಕಂಡು ಹಿಡಿದಾರ. ಈ ಮಾತು ಪ್ರತ್ಯಕ್ಷ ಜೀವನ ಶಿಕ್ಷಣ ಶಾಲೆಗೆ ಹೋದರ ಗೊತ್ತಾಗ್ತದ. ಅಲ್ಲಿ ಹುಡುಗರು ಎಷ್ಟು ಹುರುಪಿನಿಂದ ಕೆಲಸ ಮಾಡ್ತಾರ ಅವರ ಬುದ್ಧಿ ಎಷ್ಟು ಚುರುಕು ಆಗಿರ್ತದ ಅನ್ನೋದು ಪರೀಕ್ಷೆ ಮಾಡಿದರನ ತಿಳಿದು ಬರತದ. ಹಾಗಾದರೆ ಕೆಲಸ ಮಾಡುವದು, ಜ್ಞಾನ ಗಳಿಸುವದು ಒಂದಕ್ಕೊಂದು ಕೂಡಿ ನಡಿತಾವು ಅಂದಾಗ ಈ ಪ್ರಶ್ನೇನ ಉಳಿಯೊದಿಲ್ಲರಿ.

ಪ್ರಶ್ನೆ :— ಈ ಉದ್ಯೋಗಗಳನ್ನು ಸಾಲೆಗಳಲ್ಲಿ ಸಾಗಿಸಬೇಕಾದರೆ ಆ ಉದ್ಯೋಗಗಳ ಉಪಕರಣಗಳು, ಕಚ್ಚಾ ಮಾಲು ಮುಂತಾದವುಗಳು ಬೇಕಾಗ್ತಾವ. ಅಂದ ಮೇಲೆ ಬಹಳೇ ಖರ್ಚು ಬರ್ತದಲ್ರಿ. ಇಷ್ಟು ಹಣ ಖರ್ಚು ಮಾಡಿ ಎಲ್ಲ ಶಾಲೆಗಳನ್ನು ಜೀವನ ಶಿಕ್ಷಣ ಶಾಲೆಗಳನ್ನಾಗಿ ಮಾಡುವದು ಸಾಧ್ಯ ಅದ ಏನ್ರಿ?

ಉತ್ತರ :— ನೀವು ಅನ್ನೋದು ಖರೇ ಅದ ಬಿಡ್ರಿ. ಕೆಲವು ಜನರು ರಾಟಿ, ತಕಲಿಗಳು ಇರುವ ಶಾಲೆಗಳಷ್ಟೇ ಜೀವನ ಶಿಕ್ಷಣ ಶಾಲೆಗಳು ನೂಲುವದು, ನೇಯುವದು. ಬಡಿಗತನ, ಒಕ್ಕಲುತನ, ಇವುಗಳ ಪೈಕಿ ಯಾವುದಾದರೊಂದು ಉದ್ಯೋಗ ಜೀವನ ಶಿಕ್ಷಣ ಶಾಲೆಗಳಲ್ಲಿ ನಡೆಯಲಿಕ್ಕೆಬೇಕು. ಅನ್ನುವ ಒಂದು ವಿಚಾರಕೊಳಗಾಗ್ಯಾರ. ನೀವು ಹೇಳಿದಾಂಗ ಈ ಉದ್ಯೋಗಗಳನ್ನು ಪ್ರಾರಂಭಿಸಬೇಕಾದರ ಬಹಳ ಹಣ ಬೇಕಾಗ್ತದ. ಅವುಗಳ ಉಪಕರಣಗಳುಬೇಕು, ಕಚ್ಚಾ ಮಾಲುಬೇಕು. ಅವುಗಳನ್ನು ಇಡಲಿಕ್ಕೆ ಉತ್ತಮ ಕೋಣೆಗಳುಳ್ಳಂಥ ಕಟ್ಟಡಗಳು ಬೇಕು. ಒಕ್ಕಲುತನ ಪ್ರಾರಂಭಿಸಬೇಕಾದರ ಹೊಲಬೇಕು. ಎತ್ತುಗಳು ಬೇಕಾಗ್ತಾವು. ಅಷ್ಟ ಅಲ್ಲದ ಆ ಉದ್ಯೋಗಗಳನ್ನು ಪೂರ್ಣಬಲ್ಲಂಥ ಶಿಕ್ಷಕರು ಬೇಕು. ಇವುಗಳನ್ನೆಲ್ಲಾ ಒಮ್ಮೆಲೇ ಪೂರೈಸುವದು ಸರಕಾರಕ್ಕೆ ಆಗೋದಿಲ್ಲರಿ. ಅಂದ ಮೇಲೆ ನಾವು ಸಾದಾ ಶಾಲೆ

ಗಳನ್ನು ಜೀವನ ಶಿಕ್ಷಣ ಶಾಲೆಗಳನ್ನಾಗಿ ಯಾವ ರೀತಿ ಪರಿವರ್ತಿಸಬೇಕು ಅಂತ ಪ್ರಶ್ನೆ ಕೇಳೀರಿ. ಇದೇ ಹೋದ ಮೇ ತಿಂಗಳಲ್ಲಿ ಅಲಹಾಬಾದಿನಲ್ಲಿ ಒಂದು ಶಿಕ್ಷಣ ಸಮ್ಮೇಲನ ಕರೆದಿದ್ದರು. ಅದರಾಗ ಸುಲಭ ರೀತಿಯಲ್ಲಿ ಎಲ್ಲ ಶಾಲೆಗಳನ್ನು ಜೀವನ ಶಿಕ್ಷಣ ಶಾಲೆಗಳನ್ನಾಗಿ ಯಾವ ರೀತಿಯಲ್ಲಿ ಮಾಡಬೇಕು ಅಂಬುವ ವಿಚಾರ ವಿನಿಮಯ ನಡೆಯಿತು. ಅವರು ೧೯೬೧ನೆಯ ಇಸ್ವಿಯ ಕೊನೆಯೊಳಗಾಗಿ ಭಾರತದಲ್ಲಿಯ ಪ್ರತಿಯೊಂದು ಪ್ರಾಥಮಿಕ ಶಾಲೆಯನ್ನು ಜೀವನ ಶಿಕ್ಷಣ ಶಾಲೆಯನ್ನಾಗಿ ಪರಿವರ್ತಿಸಬೇಕು ಅಂತ ಠರಾವು ಪಾಸು ಮಾಡಿದರು. ಮೊದಲನೆಯದಾಗಿ ನಾವು ಜೀವನ ಶಿಕ್ಷಣದ ಉದ್ದೇಶಗಳನ್ನು ಪೂರ್ಣ ತಿಳಿದುಕೊಳ್ಳಬೇಕು. ಎರಡನೆಯದಾಗಿ ಈ ಮೂಲೋದ್ಯೋಗಗಳ ಪೈಕಿ ಯಾವುದೊಂದು ಉದ್ಯೋಗವನ್ನು ಶಾಲೆಯಲ್ಲಿ ಇಟ್ಟರನ ಅದು ಜೀವನ ಶಿಕ್ಷಣ. ಇಲ್ಲದಿದ್ರ ಅದುಜೀವನ ಶಿಕ್ಷಣ ಆಗಲಾರದು ಅನ್ನೋ ವಿಚಾರ ತೆಗೆದುಹಾಕಬೇಕು. ಮಕ್ಕಳ ಬೆಳವಣಿಗೆಯನ್ನು ಉತ್ತಮ ರೀತಿಯಿಂದ ಮಾಡಿಸಿ ಅವರ ಜ್ಞಾನವನ್ನು ಹೆಚ್ಚು ಮಾಡಲಿಕ್ಕೆ ಜೀವನ ಶಿಕ್ಷಣದಲ್ಲಿ ಈ ಮೂರು ಉದ್ಯೋಗಗಳಲ್ಲದ ಇನ್ನೂ ಎಷ್ಟೋ ಹಾದಿಗಳಿವೆ. ಅನ್ನೋದನ್ನ ನಾವು ತಿಳೀಬೇಕು.

ಪ್ರಶ್ನೆ :— ಯಾಗಾದರೆ ಸಾದಾ ಶಾಲೆಗಳನ್ನು ಸುಲಭದಲ್ಲಿ ಜೀವನ ಶಿಕ್ಷಣ ಶಾಲೆಗಳನ್ನಾಗಿ ಮಾಡುವ ಬಗೆ ಯಾವುದರಿ ?

ಉತ್ತರ :— ದೊಡ್ಡ ಮೂಲೋದ್ಯೋಗಗಳ ಬದಲು ನಣ್ಣ ಸುಲಭ ಉದ್ಯೋಗಗಳನ್ನು ಶಾಲೆಯಲ್ಲಿ ಪ್ರಾರಂಭಿಸಬಹುದು. ಕಾಗದ ಕತ್ತರಿಸಿ ಅನೇಕ ಸಾಮಾನುಗಳನ್ನು ಮಾಡುವದು, ರಟ್ಟಿನ ಕೆಲಸ, ಮಣ್ಣಿನಿಂದ ಅನೇಕ ವಸ್ತುಗಳನ್ನು ತಯಾರಿಸುವದು, ಕ್ಲೇಕೋಟಿಂಗನ್ನು ಮಾಡಿ ಅದರಲ್ಲಿ ಕಾಯಿಗಳ್ಳ ಬೆಳೆಯಿಸುವದು, ಹೂಕೋಟಿಂಗನ್ನು ತಯಾರಿಸಿ ತರತರದ ಹೂಗಳನ್ನು ಬೆಳೆಯಿಸುವದು, ಕಸಬರಿಗೆ ತಯಾರು ಮಾಡುವದು, ಕ್ಯಾಲೆಂಡರ ತಯಾರು ಮಾಡುವದು, ಉಟ್ಟಿಪ ಬಟ್ಟೆ ಹಚ್ಚುವದು, ರದ್ದಿ ಕಾಗದಗಳಿಂದ ಬುಟ್ಟಿ ತಯಾರಿಸುವದು, ಚಾಪಿ ಹೆಣೆಯುವದು, ಬಲೆಬಟ್ಟಿಗಳನ್ನು ತಯಾರಿಸುವದು, ಪಾಠಕ ಮಾಡುವದು, ಕಂಬೋಡ್ಡ ಗೊಬ್ಬರ ಕಾಯಿಗಳನ್ನು ತಯಾರಿಸುವದು, ಉಣಿಜಿಕ್ಕೆ ತಯಾರಿಸುವದು, ಬೇರೆಯವರ ಹೊಲಗಳಲ್ಲಿ ಹೋಗಿ ಬಿತ್ತುವ ಅಥವಾ ಕೊಯ್ಯುವ ಕೆಲಸದಲ್ಲಿ ಸಹಾಯ ಮಾಡುವದು. ಮುಂತಾದ ಉದ್ಯೋಗಗಳನ್ನು ಮಾಡಿಸಲಿಕ್ಕೆ ಬರುವದು. ಈ ಉದ್ಯೋಗಗಳಿಗೆ ಹೆಚ್ಚಿನ ಭಾಂಡವಲಿನ ಆವಶ್ಯಕತೆ ಇಲ್ಲ. ಹೆಚ್ಚಿನ ತಾಂತ್ರಿಕ ಜ್ಞಾನವಿರುವ ಶಿಕ್ಷಕರೇ ಬೇಕು ಅನ್ನುವ ಹಾಗಿಲ್ಲ. ಅಲ್ಲದೆ ಸಾಕಷ್ಟು ಹಗುರಾದ ಕೆಲಸಗಳಾಗಿದ್ದರೂ ಶಾಲೆಗೆ ತಕ್ಕಮಟ್ಟಿಗೆ ಉತ್ಪನ್ನವನ್ನು ತಂದು ಕೊಡುತ್ತವೆ. ಮತ್ತು ಮಕ್ಕಳಲ್ಲಿ ಹೆಚ್ಚಿನ ಜ್ಞಾನವನ್ನು ಉಂಟು ಮಾಡುತ್ತವೆ.

ಪ್ರಶ್ನೆ :— ಮಕ್ಕಳಿಗೆ ಹೊಣೆಗಾರಿಕೆಯ ಅರಿವನ್ನು ಉಂಟು ಮಾಡುವ ಚಟುವಟಿಕೆಗಳು ಯಾವವು ?

ಉತ್ತರ :— ಪ್ರತಿಯೊಂದು ವರ್ಗದೊಳಗ ತಿಂಗಳಿಗೆ ಒಂದೊಂದು ಮಂತ್ರಿ ಮಂಡಳ ಆರಿಸಬೇಕು. ಈ ಮಂತ್ರಿಗಳನ್ನು ಮಕ್ಕಳೇ ಆರಿಸಬೇಕು. ಅವರಲ್ಲಿ ಒಬ್ಬನು ಮುಖ್ಯ ಮಂತ್ರಿಯಾಗುವನು. ಅವನು ಇತರ ಮಂತ್ರಿಗಳಿಗೆ ಒಂದೊಂದು ಕೆಲಸವನ್ನು ಹಂಚಿ ಕೊಡಬೇಕು. ಕೆಲಸಗಳು ಯಾವವೆಂದರೆ ಪ್ರಾರ್ಥನೆ ಮಾಡುವದರ ಸಲುವಾಗಿ ಪ್ರಾರ್ಥನಾ ಕೋಣೆಯನ್ನು ಸ್ವಚ್ಛಗೊಳಿಸುವದು, ಎಲ್ಲರೂ ಕೂಡಿ ಪ್ರಾರ್ಥನೆ ಮಾಡುವದು, ಪಂಚಾಂಗ ಓದುವದು, ವರ್ತಮಾನಪತ್ರ ಓದುವದು, ವರ್ಗದ ಕೋಣೆಯ ಕಸಹೊಡೆದು ಝಳಝಳಗೊಳಿಸುವದು. ಶಾಲೆಯ ಹೊರ ಅಂಗಳದಲ್ಲಿ ಕಸ ಹೊಡೆಯುವದು, ಶಾಲೆಯೊಳಗಿನ ಖುರ್ಚಿ, ಕಪಾಟು, ಮೇಜುಗಳನ್ನು ಕಾಳಜಿಪೂರ್ವಕ ನೋಡಿಕೊಳ್ಳುವದು, ವೇಳೆಗೆ ಸರಿಯಾಗಿ ಗಂಟೆ ಬಾರಿಸುವದು, ವರ್ಗಗಳನ್ನು ಶೃಂಗಾರಗೊಳಿಸುವದು, ಮೈ, ಕೈಕಾಲುಗಳನ್ನು ತೊಳೆದುಕೊಳ್ಳುವದು, ಕುಡಿಯುವ ನೀರನ್ನು ತಂದು ಇಡುವದು, ಕುಡಿಯುವ ನೀರು ಹೊಲಸಾಗದಂತೆ ಅದರ ರಕ್ಷಣೆ ಮಾಡುವದು, ವಿದ್ಯಾರ್ಥಿಗಳ ಹಾಜರಿ ಹಾಕುವದು, ಹಾಜರಿ ರಿಜಿಷ್ಟ್ರನ್ನು ಬೇರೆ ಬೇರೆ ವರ್ಗದ ಗುರುಗಳ ಕೈಯಲ್ಲಿ ಒಯ್ದುಕೊಡುವದು ಮುಂತಾದವು.. ಈ ಎಲ್ಲ ಕೆಲಸಗಳನ್ನು ಮಕ್ಕಳು ಸ್ವತಃ ಮಾಡಬೇಕು ಅಲ್ಲದೆ ಶಾಲೆಯ ಪತ್ರಿಕೆಯನ್ನು ಹೊರಡಿಸುವದು, ಅದರ ಸಲುವಾಗಿ ಗ್ರಾಮದೊಳಗಿನ ಮುಖ್ಯ ಸಂಗತಿಗಳನ್ನು ಕೂಡಿ ಹಾಕುವದು. ಮುಂತಾದ ಕೆಲಸಗಳನ್ನು ಸಹ ಮಾಡಿಸಬಹುದು.

(೬೭ ನೆಯ ಪುಟ ನೋಡಿರಿ)

ಜೀವನ ಶಿಕ್ಷಣವನ್ನು ಭಾರತೀಯ ಸಂಸ್ಕೃತಿಯ ಒರೆಗಲ್ಲಿಗೆ ತಿಕ್ಕಿದಾಗ

ಲೇಖಕರು: ಶ್ರೀ ತಟ್ಟಿ ಶಾಮರಾಯರು, ಎಮ್. ಎ., ಎಸ್. ಟಿ. ಸಿ. ಡಿ.

ಮಾನವನು ಸಮಾಜಜೀವಿ; ಗುಂಪುಕಟ್ಟಿಕೊಂಡಿರುವುದು ಆತನ ಸ್ವಭಾವದ ಗುಣ– ಎಷ್ಟೋ ಪ್ರಾಣಿಗಳ ಸ್ವಭಾವದ ಪ್ರವೃತ್ತಿಯಂತೆ ಆತನ ಸಹಜಪ್ರವೃತ್ತಿ. ಆತ್ಮ ರಕ್ಷಣೆಗಾಗಿ, ಸ್ವಾಸ್ಥ್ಯ ಸುಖ–ಸಮಾಧಾನಗಳಿಗಾಗಿ ತನ್ನ ಬಾಳುವೆಯನ್ನು ಸುಧಾರಿಸಿಕೊಳ್ಳುವದಕ್ಕೆ ಮಾನವನು ಮಾಡುತ್ತ ಬಂದ ಪ್ರಯತ್ನಗಳೇ ನಾಗರಿಕತೆ, ಸಭ್ಯತೆ. ಸೃಷ್ಟಿಯೊಳಗಿನ ಅದ್ಭುತ ಶಕ್ತಿಗಳನ್ನು ಕುತೂಹಲದಿಂದ ನಿರೀಕ್ಷಿಸಿ ದೇವದತ್ತವಾದ ತನ್ನ ಬುದ್ಧಿಯಿಂದ ಸೃಷ್ಟಿಯ ಘಟನೆಗಳನ್ನು ತನಗೆ ಅನುಕೂಲವಾಗುವಂತೆ ತನ್ನ ನಿಯಂತ್ರಣದಲ್ಲಿಟ್ಟುಕೊಳ್ಳಲಿಕ್ಕೆ ಪ್ರಯತ್ನ ಮಾಡುತ್ತ ಬಂದನು. ಈ ಪ್ರಯತ್ನಗಳು ಕಾಲಗತಿಯಲ್ಲಿ ಒಂದು ಉಚ್ಚಮಟ್ಟಕ್ಕೆ ಬಂದು ನಿಂತಾಗ ಸಮಾಜವು ಕೂಡಿಹಾಕಿದ ಚರಿತ್ರ ವಿಚಾರಗಳು, ಭಾವನೆಗಳು, ಕಲಾಕೃತಿಗಳು, ಸಂಸ್ಥೆಗಳು– ಇವೇ ಆ ಸಮಾಜದ ಸಂಸ್ಕೃತಿ; ಆದರೆ ಸಮಾಜವು ಒಂದೇ ಮಟ್ಟದಲ್ಲಿ ಸದಾ ನಿಲ್ಲಲಾರದು. ಸೃಷ್ಟಿಯ ಶಕ್ತಿಗಳಮೇಲೆ ತನ್ನ ಪ್ರಭುತ್ವವನ್ನು ಹೆಚ್ಚು ಹೆಚ್ಚು ಸ್ಥಾಪಿಸಲು ಸಾಧ್ಯವಾದಾಗ ಮಾನವ ಸಮಾಜವು ಆ ಬದಲಾದ ಜಗತ್ತಿನ ಸ್ಥಿತಿಗೆ ಹೊಂದಿಕೊಂಡು ಹೋಗಬೇಕಾಗುವದು-ಹೀಗೆ ಸಮಾಜವು ಪರಿವರ್ತನಶೀಲವಾದದ್ದು. ಇಂದಿನ ಭಾರತೀಯ ಸಂಸ್ಕೃತಿಯು ಒಂದು ಎಂದು ಖಚಿತವಾಗಿ ಹೇಳಿಕೊಳ್ಳುವಷ್ಟು ಸುಸಂಬದ್ಧವಾಗಿರಲಿಕ್ಕಿಲ್ಲ; ಅನು ಅನೇಕ ವಿಭಿನ್ನ ಗುಣಗಳ ಮಿಶ್ರಣವೂ ಆಗಿರಬಹುದು. ಆದರೂ ಅದರಲ್ಲಿ ಪ್ರಾಚೀನಕಾಲದಿಂದ ಇಂದಾದರೂ ಕಂಡುಬರುವ ಅನೂಚಾನವಾಗಿ ಬಂದ ಕೆಲವು ವಿಶಿಷ್ಟ ಲಕ್ಷಣಗಳಿವೆ. ಜ್ಯೋತಿಷ್ಯ, ವೈದ್ಯಕ, ಗಣಿತ ಮುಂತಾದ ಭೌತಿಕ ವಿಜ್ಞಾನದಲ್ಲಿ ಬಹಳ ಹಿಂದಿನ ಕಾಲದಲ್ಲಿಯೇ ಸಾಧಿಸಿದ ಪ್ರಗತಿಯ ಅವಶೇಷಗಳು, ಸಾಹಿತ್ಯ, ಸಂಗೀತ, ಶಿಲ್ಪ ಮುಂತಾದ ಕಲೆಗಳಲ್ಲಿದ್ದ ಹಿಂದಿನ ವೈಭವದ ಸ್ಫೂರ್ತಿಯಿಂದ ಇಂದಿನವರೆಗೂ ಮುಂದುವರಿದ ರೂಪಾಂತರಗಳು, ಜಗತ್ತನ್ನೇ ಬೆರಗುಗೊಳಿಸುವಂತಹ ಸಾಂಖ್ಯ, ಯೋಗ ಮುಂತಾದ ತತ್ವಜ್ಞಾನ ದರ್ಶನಗಳ ವೈಚಾರಿಕ ಪರಂಪರೆ, ಮಾನವ ಜೀವನವು ಯಾವ ಹಾದಿಯಲ್ಲಿ ನಡೆಯಬೇಕು ಎಂದು ಮಾರ್ಗದರ್ಶನ ಮಾಡಿದ, ಹಾಗೂ ಅವ್ಯಾಹತವಾಗಿ ಇಂದಿಗೂ ಮಾಡುತ್ತಬಂದಿರುವ ಅನೇಕ ಮಹಾನುಭಾವರ, ಸಾಧು ಸತ್ಪುರುಷರ ಶ್ರೇಷ್ಠ ಉದಾಹರಣೆಗಳು, ಬಾಳಿನ ಶ್ರದ್ಧೆ, ಬಾಳಿನ ಆಚರಣೆ, ರೀತಿ ನೀತಿಗಳು ಇವುಗಳನ್ನು ಆಯಾ ದೇಶ ಕಾಲ ಪರಿಸ್ಥಿತಿಗನುಸರಿಸಿ ಬೋಧಿಸಿದ ಧರ್ಮಗಳು—? ಇವುಗಳ ಸಂಕಲನವೇ ಭಾರತೀಯ ಸಂಸ್ಕೃತಿಯ ವೈಶಿಷ್ಟ್ಯವಾಗಿದೆ.

ಭಾರತೀಯ ಸಂಸ್ಕೃತಿಯ ಎಲ್ಲಕ್ಕೂ ಹೆಚ್ಚಿನ ವೈಶಿಷ್ಟ್ಯವೆಂದರೆ– ಎಲ್ಲ ಧರ್ಮದವರಿಗೂ, ಎಲ್ಲ ಮತದವರಿಗೂ, ಎಲ್ಲ ಆಚರಣೆಯ ಭೇದಗಳಿಗೂ ಕೂಡಿಕೊಂಡಿರುವ ಸಹಿಷ್ಣುತೆಯನ್ನು ತೋರಿಸಿದ್ದು. ಬಹಳ ಹಿಂದಿನ ಕಾಲದಿಂದ ನಮ್ಮ ದೇಶದಲ್ಲಿ ಹಿಂದೂ ಧರ್ಮದವರು, ಕ್ರಿಸ್ತ ಧರ್ಮದವರು, ಇಸ್ಲಾಂ ಧರ್ಮದವರು, ಝರಥುಷ್ಟ್ರನ ಪಾರ್ಸೀ ಜನರೂ, ಜೈನರೂ, ಬೌದ್ಧ ಮತೀಯರು– ಎಲ್ಲರೂ ಸಹಜೀವನವನ್ನು ಮನ್ನಿಸಿ ನಡೆದಿದ್ದಾರೆ. ಇತ್ತೀಚೆಗೆ ಈ ಸಹಜೀವನದಲ್ಲಿ ಅಸಡ್ಡೆಯುಂಟಾಗಿದ್ದರೂ ಅದು ಭಾರತೀಯ ಸಂಸ್ಕೃತಿಯ ದೋಷವಲ್ಲ, ಈ ಕ್ರಾಂತಿಕಾಲದ ಅವಸರಾವಶ್ಯಕತೆಗಳಿಂದ ಉಂಟಾದ ದೋಷವಾಗಿದೆ. ಇದನ್ನು ತಿದ್ದಿಕೊಂಡು ಐಕ್ಯ ಸಾಮರಸ್ಯವನ್ನು ಪುನಃ ಪ್ರಸ್ಥಾಪಿಸಲು ನಾವು ಒತ್ತಾಸೆಯಿಂದ ದುಡಿಯಬೇಕಾಗಿದೆ.

ಯಾವ ಶಿಕ್ಷಣ ಪದ್ಧತಿಯೇ ಆಗಲಿ ಆ ಕಾಲದ, ಆ ದೇಶದ ಅವಸರಾವಶ್ಯಕತೆಗಳಿಗೆ ಹೊಂದಿಕೊಳ್ಳುವಂತೆಯೇ ರೂಪಗೊಳ್ಳುತ್ತದೆ. ಮಹಾತ್ಮಾ ಗಾಂಧಿಯವರು ಮೂಲ ಶಿಕ್ಷಣದ ಭವ್ಯ ಸುಂದರವಾದ ಕನಸನ್ನು ಕಂಡಾಗ ಅವರು ಆ ಕಾಲದ ನಮ್ಮ ಜನರ ಪರಿಸ್ಥಿತಿಯನ್ನೊಂದೇ ಎದುರಿ

ಸುವದಲ್ಲದೇ ಭಾರತೀಯರ ಭವಿಷ್ಯ ಜೀವನದ ತತ್ವವನ್ನು ಕೂಡ ತಿಳಿದುಕೊಂಡ ದೂರದೃಷ್ಟಿಯುಳ್ಳವರಾಗಿದ್ದರು.

ಜೀವನ ಶಿಕ್ಷಣವನ್ನು ವಿಮರ್ಶಿಸಿದ ಹಲವು ಅನುಭವಿಕರ ಬಾಯಿಂದ ಅದರ ಸ್ವರೂಪವನ್ನು ತಿಳಿದುಕೊಳ್ಳೋಣ. ತೊರ್ಕೆಯ ಶ್ರೀ ಮಾನೇಶ್ವರ ನಾಯಕರು ಹೀಗೆ ಹೇಳಿದ್ದಾರೆ: "ಸಮಾಜದ ಏಳಿಗೆಗೆ ಸಹಾಯವಾಗುವ ಹಾಗೂ ತನ್ಮೂಲಕ ವ್ಯಕ್ತಿಯ ವಿಕಾಸಕ್ಕೆ ಸಹಕಾರಿಯಾಗುವ ಶಿಕ್ಷಣವನ್ನು, ದೇವತೆಯಾಗಲಿರುವ ಮಾನವ ಮಗುವು ಪಡೆಯಬೇಕಾಗುತ್ತದೆ. ಅಂಥ ಶಿಕ್ಷಣವೇ ಜೀವನ ಶಿಕ್ಷಣವೆನಿಸುವದು .... ಇಂಗ್ಲಿಷ ಶಿಕ್ಷಣದ ಕುಂದು ಕೊರತೆಗಳನ್ನೆಲ್ಲ ಲಕ್ಷಕ್ಕೆ ತಂದು ನಮ್ಮ ಗಣರಾಜ್ಯದ ಆಸೆ ಆಕಾಂಕ್ಷೆಗಳಿಗೆ ಅನುಗುಣವಾಗಿ ಎಲ್ಲರಿಗೂ ಸುಖಮಯವಾದ ಜೀವನವನ್ನು ಸಾಗಿಸಲು ಸಹಾಯ ಮಾಡುವ ಕಡ್ಡಾಯದ ಹೊಸ ಶಿಕ್ಷಣವು ಸಾರ್ವತ್ರಿಕವಾಗಿಯೂ–ಪುಕ್ಕಟೆಯಾಗಿಯೂ ದೊರೆಯುವದು ನಮ್ಮ ನವ ರಾಷ್ಟ್ರ ನಿರ್ಮಾಣ ಕಾರ್ಯದಲ್ಲಿ ಅತಿ ಮಹತ್ವದ್ದಾಗಿದೆ. ...." ನಮ್ಮ ಭಾರತೀಯ ಸಂಸ್ಕೃತಿ 'ಹೊಸತೆಲ್ಲ ಹೊನ್ನು, ಹಳಯದೆಲ್ಲ ಮಣ್ಣು' ಎನ್ನದೆ ಇತರ ಸಂಸ್ಕೃತಿಗಳ ಒಳಿತನ್ನೆಲ್ಲ ರಕ್ತಗತ ಮಾಡಿಕೊಂಡ ವೈಶಿಷ್ಟ್ಯ ಅದಕ್ಕಿದೆ. .... ನಮ್ಮಲ್ಲಿ ಪಾಶ್ಚಿಮಾತ್ಯರಾಷ್ಟ್ರಗಳಿಗಿಂತ ಜನಬಲ ಹೆಚ್ಚಿದೆ. ಆದುದರಿಂದ, ಅವರಿಗೆ ಹಿತವಾದ, ಕೇಂದ್ರೀಕೃತ ಯಾಂತ್ರಿಕ ಹಾಗೂ ತಾಂತ್ರಿಕ ಶಿಕ್ಷಣವು ನಮ್ಮ ದೇಶಕ್ಕೆ ಸರಿಬೀಳಲಾರದು. ಹಾಗೆ ಮಾಡುವದು ನಿರುದ್ಯೋಗ ತನಕ್ಕೆ ಪೋತಣವಿತ್ತಂತೆ, ನಮ್ಮ ಪೂರ್ವಜರು ಆಧ್ಯಾತ್ಮಿಕಕ್ಕೆ ಬಹಳ ಮಹತ್ವವನ್ನು ಕೊಟ್ಟು ಭೌತಿಕವನ್ನು ಮರೆತರು. ನಾವು ಹಿಂದಿನವರ ತಪ್ಪುಗಳನ್ನು ತಿದ್ದಿಕೊಂಡು ಅವರ ಒಳಿತುಗಳನ್ನು ಅಳವಡಿಸಿಕೊಂಡು ಪರರಾಷ್ಟ್ರಗಳ ಒಳಿತನ್ನು ಅರಗಿಸಿಕೊಂಡು ಹೊಸ ಶಿಕ್ಷಣದ ರೂಪರೇಷೆಗಳನ್ನು ನಿರ್ಮಿಸಬೇಕಾಗಿದೆ.....ಕೌಮಾರಾವಸ್ಥೆಯಲ್ಲಿ ಬಾಲಕರಿಗೆ ಚಟುವಟಿಕೆಗಳೆಂದರೆ ಬಹಳ ಪ್ರೇಮವಿರುತ್ತದೆ. ಬರೀ ಪುಸ್ತಕೀಯ ಜ್ಞಾನವನ್ನು ತುಂಬುವದೆಂದರೆ ಅವನ ನೈಜ ಪ್ರವೃತ್ತಿಗಳ ವಿಕಾಸಕ್ಕೆ ವಿರೋಧವಾದದ್ದೂ ಘಾತುಕವಾದದ್ದೂ ಎಂದು ಮನಶ್ಶಾಸ್ತ್ರಜ್ಞರ ಅಭಿಪ್ರಾಯವಾಗಿರುತ್ತದೆ. ಆದುದರಿಂದ ಚಟುವಟಿಕೆಗಳ ಮೂಲಕ ಶಿಕ್ಷಣ ದೊರೆತರೆ ಅವನ ಸರ್ವತೋಮುಖ ಬೆಳಗೆಗೆ ಕಾರಣವಾಗುವದು. ಆ ಚಟುವಟಿಕೆಗಳು ಮಾತ್ರ ವಿಪುಲ ಶೈಕ್ಷಣಿಕ ಅವಕಾಶ (Rich in educative possibilities) ಗಳನ್ನೊಳಗೊಂಡವಿರಬೇಕು. ಅಂದರೆ ಮಾತ್ರ ಓದುಗನ ಕುತೂಹಲವು ಕೆರಳುತ್ತ ಹೋಗಿ ಅವನ ಸರ್ವತೋಮುಖ ವಿಕಾಸವಾಗುವದು. ನೂಲುವದು, ನೇಯುವದು, ಕೈತೋಟಗಾರಿಕೆ, ಒಕ್ಕಲುತನ, ಕಾಗದ ಹಾಗು ರಬ್ಬರಿನ ಕಲಸ, ಕಮ್ಮಾರಿಕೆ, ಚಮ್ಮಗಾರಿಕೆ ಮೊದಲಾದವು ಈ ಜಾತಿಗೆ ಸೇರಿದವು. ಇಲ್ಲದಲ್ಲಿ ಓದುಗನ ಕುತೂಹಲವು ದಿನಗಳೆದಂತೆ ಕುಂದಿ, ಅವನ ಪ್ರೇರಣೆಗಳೆ ಕೂಡ ಕಮರಿ ಹೋಗುವದು. ಚಟುವಟಿಕೆಯೆಂದ ಮಾತ್ರಕ್ಕೆ ಕೂಲಿಯ ಕೆಲಸ, ಶಾರೀರಿಕ ಶ್ರಮ ಎಂಬ ಭಾವನೆಗೆ ಎಡೆಗೊಡದೆ ಅದು ಶಾರೀರಿಕ ಹಾಗು ಮಾನಸಿಕ ಶ್ರಮಗಳನ್ನೊಳಗೊಂಡದ್ದೂ ಶಿರ–ಕರ–ಉರಗಳ ಸಮನ್ವಯಕ್ಕೆ ಸಹಕಾರಿಯಾದದ್ದೂ ಎಂದು ತಿಳಿದುಕೊಳ್ಳಬೇಕು." .... ಇತ್ತೀಚಿನ ವರೆಗೆ ನಮ್ಮ ಶಿಕ್ಷಣವು ಕುಡಿತದಿಂದ ಬರುವ ಉತ್ಪನ್ನದ ಮೇಲೆ ಅವಲಂಬಿಸಿತ್ತೆಂಬದನ್ನು ನಮೂದಿಸಲು ಸಹ ವಿಷಾದವೆನಿಸುತ್ತದೆ. ಶಿಕ್ಷಣದಂತಹ ಪವಿತ್ರ ಕಾರ್ಯವು ಮದ್ಯಪಾನದಂತಹ ಅಮಾನುಷ ಕೃತಿಯ ಮೇಲೆ ಅವಲಂಬಿಸುವದೆಂದರೆ ತೀರ ದುರ್ದೈವದ ಸಂಗತಿ. ೧೯೫೦ ನೆಯ ಇಸವಿಯ ಎಪ್ರಿಲ್ ೧ ರಿಂದ ಮುಂಬಯಿ ರಾಜ್ಯ ಸರಕಾರವು ಪೂರ್ಣ ಪಾನನಿರೋಧಕ್ಕಾಗಿ ಟೊಂಕಕಟ್ಟಿದೆ. ಇತರ ಉತ್ಪನ್ನದ ಬಾಬುಗಳಿಂದ ಶಿಕ್ಷಣದ ವೆಚ್ಚ ಸಹಿಸಲು ಸಾಧ್ಯವಿಲ್ಲೆಂಬದನ್ನು ಆ ಕಾಲದ ಸರಕಾರವು (೧೯೩೫ ರಲ್ಲಿನ) ಹೇಳಿದುದರಿಂದ ಗಾಂಧೀಜಿಯವರೂ ಝಾಕಿರ ಹುಸೇನ ಸಮಿತಿಯವರೂ ಶಿಕ್ಷಣವು ಸ್ವಾವಲಂಬಿಯಾಗಿರಬೇಕು— ಕನಿಷ್ಠಪಕ್ಷಕ್ಕೆ ಶಿಕ್ಷಕನ ಸಂಬಳವಾದರೂ ಹುಡುಗರ ಶ್ರಮದಿಂದ ಬರುವ ಉತ್ಪನ್ನದ ಮೇಲೆ ಅವಲಂಬಿಸಬೇಕೆಂದರು. ....ಕಾಂಗ್ರೆಸ್ಸು ಈ ಮಾತಿಗೆ ತನ್ನ ಅಧಿಕಾರ ಮುದ್ರೆಯನ್ನೊತ್ತದಿದ್ದರೂ ನಯೀ ತಾಲೀಮಿ ಸಂಘವು ಈ ತತ್ವಕ್ಕೆ ಅಂಟಿಕೊಂಡಿದೆ. ಮೂಲೋದ್ಯೋಗದಿಂದ ಬರುವ ಉತ್ಪನ್ನವನ್ನು ಕಡೆಗಣಿಸಿದರೆ ಓದುಗರಲ್ಲಿ ಅವನ್ನು ಪಾಡುವ ಶ್ರದ್ಧೆಯು ಕ್ರಮೇಣ ಕಣಿಮೆಯಾಗಿ ಅವರಲ್ಲಿರಬೇಕಾದ ಜಾಗರೂಕತೆ – ವೈಜ್ಞಾನಿಕ ದೃಷ್ಟಿ ಮುಂತಾದ ಸದ್ಗುಣಗಳು ಕ್ರಮೇಣ ಮಾಯವಾಗಿ ಜೀವನ ಶಿಕ್ಷಣವು ನಿರ್ಜೀವವಾಗಬಹುದು' .... "ಹೀಗೆ ಜೀವನ ಶಿಕ್ಷಣವು ಓದುಗ–ಚಟುವಟಿಕ ಶಿಕ್ಷಕರ ನಿಕಟ ಸಂಬಂಧವನ್ನೊಳಗೊಂಡದ್ದೂ, ಶಿರ-ಕರ-

ಉರಗಳ ಸಮನ್ವಿತ ಸಹಕಾರದಿಂದೊಡಗೂಡಿದ ತ್ರಿವೇಣಿ ಸಂಗಮದಂತಿದ್ದು ಶಿಕ್ಷಕ ಹಾಗು ಓದುಗರ ವಿಕಾಸಕ್ಕೆ ಸಾಧನವಾದದ್ದೂ, ಸ್ವಾವಲಂಬಿಯಾಗಲು ಸಾಮರ್ಥ್ಯ ವುಳ್ಳದ್ದೂ, **ಆಧ್ಯಾತ್ಮಿಕ ಹಾಗು ಭೌತಿಕಗಳ ಸುಂದರ ಸಮನ್ವಯಗೊಂಡದ್ದೂ,** ಸ್ವತಂತ್ರ ಭಾರತಕ್ಕೆ ತಾರಕ ಮಂತ್ರದಂತಿದ್ದದ್ದೂ ಆಗಿದೆ ಎಂಬುದನ್ನು ಎದೆತಟ್ಟಿ ಕೈ ಎತ್ತಿ ಹೇಳಬಹುದು".

ಧಾರವಾಡದ ಶ್ರೀ ರತ್ನಾಕರ ಹಾವೇರಿಯವರು ಹೀಗೆ ಅಭಿಪ್ರಾಯಪಟ್ಟಿದ್ದಾರೆ: "ಔದ್ಯೋಗಿಕ ಕ್ರಾಂತಿ ಯಿಂದ ಸಮಾಜ ಜೀವನ ಬಹು ತೊಡಕಾಗಿದೆ; ಬಹು ಕ್ಲಿಷ್ಟವಾಗಿದೆ. ಯಂತ್ರ ಯುಗದ ಗಡಿಬಿಡಿಯ ಮೂಲಕ 'ಮನೆಯು' ತನ್ನ ಶಿಕ್ಷಣವನ್ನು ಸಾಗಿಸಿದಂತಾಗಿದೆ. ವೈಜ್ಞಾನಿಕ ಪ್ರಗತಿಯಿಂದ ಮಠಗಳು ತಮ್ಮ ಶಿಕ್ಷಣ ಕಾರ್ಯವನ್ನು ಚೆನ್ನಾಗಿ ಸಾಗಿಸಲು **ಅವಕಾಶವಿಲ್ಲದಂತಾ** ಗಿದೆ * ಆದರೂ ಮನೆ ಮಠಗಳು ತಮ್ಮ ಮೇಲಿನ ಕರ್ತವ್ಯ ವನ್ನು ಚೆನ್ನಾಗಿ ನಿರ್ವಹಿಸಲಿಕ್ಕೆ ಕಲಿಯಲೇಬೇಕು. ಆದಕಾರಣ, ಶಾಲೆಯು ಮನೆ ಮತ್ತು ಮಠಗಳು ಮಾಡಬೇ ಕಾದ ಕೆಲಸವನ್ನು ಮಾಡಲೇಬೇಕಾಗಿದೆ. ಈ ರೀತಿಯಿಂದ ಆಧುನಿಕ ಶಾಲೆಯ ಹೊಣೆ ಮುಮ್ಮಡಿಯಾಗಿದೆ.....ಶಿಕ್ಷ ಣದ ಗುರಿ ಆದರ್ಶ ಸಮಾಜ (ಇರಬೇಕು) . ಅಹಿಂಸೆಯಲ್ಲಿ ಅಚಲ ನಂಬಿಗೆಯುಳ್ಳ, ಸಿರಿವಂತಿಕೆಯನ್ನು ಸಮಾನವಾಗಿ ಉಪಭೋಗಿಸುವ × ಸ್ವಾವಲಂಬಿ ಜನತೆಯ ಗುಂಪೇ ನಮ್ಮ ಈ ಹೊಸ ಸಮಾಜದ ಸದಸ್ಯರು (ಆಗಬೇಕು) . .... ಎಲ್ಲ ಜಾತಿಯ ಮಕ್ಕಳು ಕೂಡಿ ಕಲಿಯುವದರಿಂದ, ದುಡಿಯುವದರಿಂದ ಜಾತೀಯತೆಯ ಮೇಲೆ ಕಟ್ಟಿದ ಸಮಾಜಗಳಿಗೆ ೧ ಸ್ಥಾನವೇ ಇಲ್ಲದಂತಾಗುತ್ತದೆ. ಹಳ್ಳಿ ಮತ್ತು ಶಹರಗಳಲ್ಲಿ ಸ್ಪರ್ಧೆಯುಕಡಿಮೆಯಾಗಿ ೨ ಮಧುರ ಬಾಂಧವ್ಯ ಬೆಳೆಯುವದರಿಂದ ಕೇವಲ ಆರ್ಥಿಕ ದೃಷ್ಟಿಯ ಹಿಂದಿನ ಸಮಾಜ ರಚನೆಯು (ಅಸಮಾನ ಆರ್ಥಿಕ ದೃಷ್ಟಿಯ ಸಮಾಜ) ಇಲ್ಲದಂತಾ ಗುವದು. ಹಳ್ಳಿಯ ಉತ್ಕರ್ಷೆಯನ್ನೇ ಬಯಸಿ ಬಾಳುವ ಜನತೆಯಿಂದ ಕೂಡಿದ ನೂತನ ಸಮಾಜವೊಂದು ತಲೆ ಯೆತ್ತಲು ಅವಕಾಶ ಸಿಗುತ್ತದೆ.

ಶ್ರೀ ಹ. ಗ. ಜೋಶಿಯವರು ಹೀಗೆ ಹೇಳಿದ್ದಾರೆ: (ಸಮಾಜ ಶಿಕ್ಷಣ ವಿಷಯದಲ್ಲಿ) " ಇನ್ನು ನಮ್ಮ ನಾಡಿನ ಹದುಳವನ್ನೇ ಹದಗೆಡಿಸಿದ ಕೆಲ ಭಾವನೆಗಳನ್ನು ಸಮಾ ಜದ ರೋಗಗಳೆಂದು ಕರೆಯಬಹುದು. ವ್ಯಕ್ತಿಗಂಟಿದ ಈ ರೋಗದಿಂದ ಸಮಾಜ ರೋಗಗ್ರಸ್ತವಾಗಿದೆ. ಸಮಾಜ ರೋಗಿಯಾದುದರಿಂದ ರಾಷ್ಟ್ರ ನಿಟ್ಟುಸಿರಿಟ್ಟು ಮುಖ ತಗ್ಗಿಸಿಕೊಂಡು ಬಾಳುವ ಪ್ರಸಂಗ ಬಂದಿದೆ. ಆದಕ್ಕಾಗಿ ಈ ಎಲ್ಲ ರೋಗಗಳಿಗೆ ಚಿಕಿತ್ಸೆಯಾಗಬೇಕು. ಆದಕ್ಕಾಗಿ ಗಾಂಧೀಜಿ ಮೂಲ ಶಿಕ್ಷಣದ ನಿಸರ್ಗ ಚಿಕಿತ್ಸೆಯನ್ನೇ ಉಪಯೋಗಿಸಿದರೆ ಹೊರತು ಕಠೋರ ಶಸ್ತ್ರಕ್ರಿಯೆಯನ್ನು ಯೋಜಿಸಲಿಲ್ಲ. .... ಸಮಾಜಕ್ಕೆ ತಾನು ಸರ್ವಾಂಗ ಸುಂದರ ಪರಿಪೂರ್ಣತೆಯ ಸುಖವನ್ನು ಅನುಭವಿಸುವ ಲಾಭ ದೊರೆಯಬೇಕಾದರೆ, ಮೊದಲನೆಯದಾಗಿ **ಅದರ ಆರ್ಥಿಕ ಎಳೆದಾಟ ನಿಲ್ಲಬೇಕು.** ವ್ಯಕ್ತಿಯ ಆರ್ಥಿಕ ಪ್ರಪಂಚದಲ್ಲಿ ಶನಿಯ ದೃಷ್ಟಿ ಬಿದ್ದಿದ್ದರೆ ಅವರ ರೀತಿ ನೀತಿ ಗಳೆಲ್ಲ ಸಮಾಜದ ಕಂಟಕವಾಗಿ ಪರಿಣಮಿಸುತ್ತವೆ. ಹಾಗೆಯೆ ವ್ಯಕ್ತಿ ಮಿತಿಮೀರಿ ಕೂಳಬಕ್ಕನಾದರೆ– ಬಕಾ ಸುರನಾದರೆ– ಚಿಕ್ಕವರನ್ನೆಲ್ಲ ಮುರಿದು ಮುಕ್ಕಿ ಸಮಾಜ ವನ್ನು ತನ್ನ ಎಡಗಾಲ ಬುಡದಲ್ಲಿಟ್ಟುಕೊಳ್ಳುತ್ತಾನೆ. ಇದೊಂದು ದೊಡ್ಡ ಕುತ್ತು ಪಾರಾಗಬೇಕಾದರೆ ಹಳ್ಳಿ ಗಳಲ್ಲಿ ನಡೆದುಬಂದ ಉದ್ಯೋಗಗಳೆಲ್ಲ ಪುನರುಜ್ಜೀವಿತ ವಾಗಬೇಕು. ವ್ಯಕ್ತಿ ತಾನು ಸ್ವಾವಲಂಬನ ದೀಕ್ಷೆ ತೆಗೆದು ಕೊಳ್ಳಬೇಕು. .... ಹಳ್ಳಿಯ ಪ್ರಧಾನ ಉದ್ಯೋಗವೊಂದ ರಿಂದ ಆರಂಭವಾಗುವ ಶಿಕ್ಷಣ ಅದರ ಉಳಿದೆಲ್ಲ ರೋಗ ರುಜಿನಗಳನ್ನು ಕಳೆಯುತ್ತದೆ. .... ಜೀವನದಲ್ಲಿ ಸಭ್ಯತೆ

---

*— ಆದರೆ ಸುಖೋಪಭೋಗವನ್ನು ಒಂದು ಮಿತಿ ಯಲ್ಲಿ ನಿಯಂತ್ರಣದಲ್ಲಿಟ್ಟುಕೊಂಡು ಹಾಗೂ, ದ್ವೇಷಾಸೂಯೆ ಗಳಿಲ್ಲದ—ಸ್ವಾವಲಂಬಿ ಜನತೆಯ ಗುಂಪು.

× ಆದರೂ ಮನೆಮಠಗಳು ತಮ್ಮ ಹಾಲಿನ ಕರ್ತವ್ಯ ವನ್ನು ಚೆನ್ನಾಗಿ ನಿರ್ವಹಿಸಲಿಕ್ಕೆ ಕಲಿಯಬೇಕು.

೧. ಈಗ ಜನತೆಯು ಒಂದು ಉದ್ಯೋಗಕ್ಕೆ ಅರ್ಹರೆಂದು ಬಗೆಯುವ ಜನ ಸಮಾಜಗಳೇ ಇಲ್ಲ. ಆದರೆ ಶ್ರಮ ವಿಭಾಗ ತತ್ವದ ಮೇಲೆ ನಿಂತ ಮೂರು ವರ್ಗಗಳು ಅಥವಾ ಗುಂಪು ಗಳಲ್ಲಿ ಮಾತ್ರ ಇವೆ (ಸಾಮಾಜಿಕ=ಸಮಾಜದ ಆದರ್ಶದಂತೆ ಆಚರಿಸಿ ಮಾರ್ಗದರ್ಶನ ಮಾಡುವ; ರಾಜಕೀಯ=ರಾಜ ಕೀಯ ಐಕ್ಯವನ್ನು ಸಾಧಿಸಿ ದೇಶವನ್ನು ಸಂರಕ್ಷಿಸುವ; ಔದ್ಯೋ ಗಿಕ=ಹಳ್ಳಿಯ ಹಾಗು ಶಹರಗಳ ಉದ್ಯೋಗಗಳನ್ನು ಬೆಳಿಸಿ ಆರ್ಥೋತ್ಪಾದನೆಯನ್ನು ಹೆಚ್ಚಿಸುವ).

೨. ಹಳ್ಳಿಗಳು ಶಹರಗಳು ಸಮಾನವಾಗಿ ಸಿರಿವಂತಿಕೆ ಯನ್ನು ಉಪಯೋಗಿಸುವವೋ? ಅವುಗಳ ನಡುವೆ ಸ್ಪರ್ಧೆಯು ಹೆಚ್ಚಾಗಲಾರದೇ?

ಸಹಜತೆಗಳು ಕಾಲೂರಬೇಕು. ಅದು ಸ್ವಾವಲಂಬಿಯಾಗಿ ಸ್ವಯಂಪೂರ್ಣವಾಗಿರಬೇಕು. ತಾನು ತನ್ನ ಕುಟುಂಬದ ಹೊಣೆ ಹೊತ್ತೆಂತೆ ಅವನ ಮೇಲೆ ರಾಷ್ಟ್ರದ ಹಾಗು ಜಾಗತಿಕ ಭಾರವೂ ಇವೆ ಎಂಬ ಕಲ್ಪನೆಯೊಡನೆ ಶಿಕ್ಷಣ ಸಾಗುತ್ತಿರಬೇಕು. ತನ್ನ ಮೇಲಿನ ಸ್ಥಿತಿಗತಿಗಳನ್ನು ವಿಚಾರಿಸಿದಾಗ ವಿದ್ಯಾರ್ಥಿ ಇತರ ಮೇಲಿನ ಜನಜೀವನ, ಆಚಾರ ವಿಚಾರ, ಮನೆಮಾರು, ಸಾಮಾಜಿಕ ರೀತಿ-ನೀತಿ, ಹಬ್ಬ-ಹುಣ್ಣಿವೆ ಮೊದಲಾದವುಗಳನ್ನು ನಮ್ಮೊಡನೆ ಹೋಲಿಸಿ ನೋಡುವ ಹಾಗು ಅವುಗಳ ಕಡೆಗೆ ಸಹಾನುಭೂತಿ ಬೀರುವ ದೃಷ್ಟಿಯನ್ನು ವಿದ್ಯಾರ್ಥಿಗಳಿಗೆ ಬೀರಬೇಕಾಗಿದೆ. ಅದರಂತೆಯೇ ಕಷ್ಟದಲ್ಲಿ ಸಹಾಯ ನೀಡುವ ಆರ್ದ್ರ ಹೃದಯವೂ ರೂಪುಗೊಳ್ಳಬೇಕು. .... ನಮ್ಮ ಸಾಮಾಜಿಕ ಜೀವನವು ನಿಚ್ಚಳವಾಗಿ ಅಚ್ಚೊತ್ತಬೇಕಾದರೆ ಶಾಲೆಯಲ್ಲಿ ಸಾಮೂಹಿಕ ಉತ್ಸವ ಸಮಾರಂಭಗಳು ಜರುಗಬೇಕು. .... ಈ ಉತ್ಸವಗಳಲ್ಲಿ ಧಾರ್ಮಿಕ ಮನೋಭಾವ ಅಭಿವ್ಯಕ್ತವಾಗುವದರಿಂದ ವಿದ್ಯಾರ್ಥಿಗಳು ಧರ್ಮಭಾವನೆಯ ಬಗ್ಗೆ ಕುತೂಹಲಿಗಳೂ, ಅನ್ಯ ಧರ್ಮದ ಬಗ್ಗೆ ಸಹಾನುಭೂತಿಯುಳ್ಳವರೂ ಆಗಿರುವಂತೆ ಉಪಕ್ರಮ ಕೈಕೊಳ್ಳಬೇಕು."

ಸಂಸ್ಕೃತಿ, ಭಾರತೀಯ ಸಂಸ್ಕೃತಿಯ ವೈಶಿಷ್ಟ್ಯ. ಮೇಲೆ ಉದಾಹರಿಸಿದ ಅನುಭವಿಕ ಶಿಕ್ಷಕರ ವಿಮರ್ಶಾತ್ಮಕ ವಚನಗಳಿಂದ ಜೀವನ ಶಿಕ್ಷಣವು, ಭಾರತೀಯ ಸಂಸ್ಕೃತಿಯ ನಿಕಷದಿಂದ ಪರೀಕ್ಷಿಸಿದಾಗ, ಸಂಪೂರ್ಣವಾಗಿ ಆ ಸಂಸ್ಕೃತಿಗೆ ಸಮರಸವಾಗಿದ್ದು ಅದನ್ನು ಚಿರಕಾಲ ಪರಿಪೋಷಿಸುವಂಥದಾಗಿದೆ ಎಂಬ ಮಾತು ನಿರ್ವಿವಾದವಾದುದು ಎಂದು ಕಂಡು ಬರದೆ ಇರದು.

ಜೀವನ ಶಿಕ್ಷಣದಲ್ಲಿ ಗುರುವಿನ ಸ್ಥಾನ

ಲೇಖಕರು:— ಶ್ರೀ ವ್ಹಿ. ಬಿ. ಲೋಕಾಪೂರ, ಬಿ. ಎ., ಬಿ. ಟಿ.; ಡಿ. ಬಿ. ಇ., ಬೆಳಗಾವಿ

ಯಾವದೇ ಪದ್ಧತಿಯ ಶಿಕ್ಷಣವು ಸುಸಂಬದ್ಧವಾಗಿಯೂ ಸರಾಗವಾಗಿಯೂ ಸಾಗಬೇಕಾದರೆ ಅದನ್ನು ಕಲಿಸುವ ಗುರುವಿನ ಮೇಲೆ ಬಹಳವಾಗಿ ಅವಲಂಬಿಸಿರುತ್ತದೆ. ಶಿಕ್ಷಣದ ವಿಷಯದಲ್ಲಿ ಗುರುವಿನ ಹೊಣೆ ಬಹಳ ದೊಡ್ಡದು. ಅತನ ಸ್ಥಾನವು ದೊಡ್ಡದು. ಗುರುವು ತನ್ನ ವ್ಯಕ್ತಿತ್ವದ ಪ್ರಭಾವದಿಂದ ವಿದ್ಯಾರ್ಥಿಗಳನ್ನು ಶಾಲೆಗೆ ಬರಮಾಡಿಕೊಂಡು ಗುರುಮನೆಯನ್ನು ಅರಮನೆಯಾಗಿ ಮಾಡಬಹುದು. ಪ್ರಾಚೀನ ಕಾಲದಿಂದ ಇಲ್ಲಿಯ ವರೆಗೆ ನೋಡಿದರೆ ಗುರುವು ನಾಡಿನ ಶಿಕ್ಷಣದ ಪ್ರಗತಿಯಲ್ಲಿ ಅವ್ಯಾಹತವಾಗಿ ದುಡಿದಿದ್ದಾನೆ. ನಾಡಿನ ಶಿಕ್ಷಣದ ಪ್ರಗತಿ-ಪರಾಗತಿಗಳಿಗೆಲ್ಲ ಹೊಣೆಗಾರ ವ್ಯಕ್ತಿ ಗುರುವೇ ಎಂದು ಹೇಳಿದರೆ ಅತಿಶಯೋಕ್ತಿಯಾಗಲಾರದು.

ಜೀವನ ಶಿಕ್ಷಣದ ಯಶಸ್ಸು ಹಾಗೂ ಅಪಯಶಸ್ಸುಗಳು ಅದನ್ನು ಕೊಡುವ ಗುರುವಿನ ಮೇಲೆ ಸಂಪೂರ್ಣವಾಗಿ ಅವಲಂಬಿಸಿವೆ. ಜೀವನ ಶಿಕ್ಷಣವನ್ನು ಪ್ರಗತಿ ಪಥದಲ್ಲಿ ಸಾಗಿಸಲಿಚ್ಛಿಸುವಂಥ ಗುರುವು ಅದರ ಮಂತ್ರ-ತಂತ್ರಗಳನ್ನೆಲ್ಲ ಅರಿತವನಿರಬೇಕು. ಅತನು ಜೀವನ ಶಿಕ್ಷಣದ ಮಂತ್ರ ಎಂದರೆ ವಿಚಾರ ಚೆನ್ನಾಗಿ ಮನವರಿಕೆ ಮಾಡಿಕೊಂಡವನಿರಬೇಕು. ಜೀವನ ಶಿಕ್ಷಣವನ್ನು ಜೀವನದ ಸಲುವಾಗಿ ಕೊಡಬೇಕಾದರೆ ಅದು ಜೀವನದ ಮುಖಾಂತರವೇ ಸಾಗಬೇಕು ಎಂಬ ತತ್ವವನ್ನು ಮನನ ಮಾಡಿಕೊಂಡವನಿರಬೇಕು. ಅತನು ಜೀವನ ಶಿಕ್ಷಣದಿಂದಲೇ ನಮ್ಮ ನಾಡಿನ ಪ್ರಗತಿಯಾಗುವಂತೆ ಮಾಡಬೇಕೆಂಬ ಅಭಿಲಾಷೆ ತಾಳಿದವನಿರಬೇಕು. ಸ್ವಲ್ಪದರಲ್ಲಿ ಹೇಳಬೇಕಾದರೆ ಗುರುವು ಜೀವನ ಶಿಕ್ಷಣದಲ್ಲಿ ಸಂಪೂರ್ಣ ಶ್ರದ್ಧೆಯುಳ್ಳವನಾಗಿರಬೇಕು. ಶ್ರದ್ಧೆ ಇಲ್ಲದ ಗುರುವಿನಿಂದ ಜೀವನ ಶಿಕ್ಷಣದ ಶ್ರಾದ್ಧವಾಗುವದೇನೂ ಅಸಾಧ್ಯವಾದ ಮಾತಲ್ಲ.

ಇನ್ನು ಜೀವನ ಶಿಕ್ಷಣದ 'ತಂತ್ರ' ಎಂದರೆ ವಿಧಾನ. ಜೀವನ ಶಿಕ್ಷಣ ಕೊಡುವ ಕ್ರಮವನ್ನು ಗುರುವು ಆತ್ಮಸಾತ್ ಮಾಡಿಕೊಂಡವನಿರಬೇಕು. ಕಲಿಸುವ ಕ್ರಮದಲ್ಲಿ ಸಪಾಯವೆಂದರೇನು? ಅದನ್ನು ಹೇಗೆ ಮಾಡಬೇಕು, ಹೇಗೆ ಮಾಡಬಾರದು ಎಂಬುದರ ತಾರತಮ್ಯ ತಿಳಿದವನಾಗಿರಬೇಕು. ಚಟುವಟಿಕೆಯ ಮುಖಾಂತರ ವಿಷಯಗಳು

ಸ್ವಾಭಾವಿಕವಾಗಿ ಅರಳಿಬಂದರೆ ಸಮುದಾಯವಾಗುವವು. ಆದರೆ ವಿಷಯಗಳನ್ನು ಚಟುವಟಿಕೆಗೆ ಒತ್ತಾಯದಿಂದ ಅನುಬಂಧಿಸಿದರೆ ಅದು ಸಮುದಾಯವಾಗದೆ ಒತ್ತಾಯದ ಸಂಬಂಧೀಕರಣವಾಗುವದು! ಎಂಬ ಸಂಗತಿಯನ್ನು ಗುರುವು ತಿಳಿದವನಾಗಿರಬೇಕು. ಸಮುದಾಯ ಪಾಠದ ಗುಚ್ಛಗಳನ್ನು ಹೇಗೆ ತಯಾರಿಸಬೇಕೆಂಬ ತತ್ವವನ್ನು ಅರಿತುಕೊಂಡು ಇಡೀ ವರುಷದ ಚಟುವಟಿಕೆ ಹಾಗೂ ಸಮಸ್ವಿತ ವಿಷಯಗಳ ಒಂದು ಅಂದಾಜ ಪತ್ರಿಕೆಯನ್ನು ತಯಾರಿಸಿ ಅದರಂತೆ ನಡೆಯಬೇಕು. ಶಾಲೆಯ ಅಭ್ಯಾಸ ಪತ್ರಿಕೆಯಲ್ಲಿಯ ವಿಷಯಗಳೆಲ್ಲ ಸಾಧ್ಯವಿದ್ದ ಮಟ್ಟಿಗೆ ಚಟುವಟಿಕೆಗೆ ಸಮಸ್ವಿತವಾಗುವಂತೆ ನೋಡಿ ಕೊಳ್ಳಬೇಕಾಗುವದು. ಸಮಸ್ವಿತವಾಗದೆ ಉಳಿದ ವಿಷಯ ಗಳನ್ನು ಸ್ವತಂತ್ರವಾಗಿ ಕಲಿಸಬೇಕಾಗುವದು. ದಿನಾಲು ಕೇವಲ ಚಟುವಟಿಕೆಗಳನ್ನೇ ಕೊಡುತ್ತಹೋಗದೆ ಆದ ವಿಷಯಗಳು ದೃಢವಾಗುವದರ ಸಲುವಾಗಿ ಕೆಲವು ದೃಢೀ ಕರಣದ ಪಾಠಗಳನ್ನು ಕೊಡಬೇಕಾಗುವದು.

ಸಮುದಾಯದ ಕೇಂದ್ರಗಳಾದ ಮೂಲೋದ್ಯೋಗ, ಸಾಮಾಜಿಕ ವಾತಾವರಣ ಹಾಗು ನೈತಿಕ ವಾತಾವರಣ ಗಳ ಮೂಲಕ ಬಾಲಕರಿಗೆ ವಿವಿಧ ವಿಷಯಗಳನ್ನು ಕಲಿಸಿ ಅವರ ವ್ಯಕ್ತಿತ್ವದ ವಿಕಾಸ ಮಾಡುವದೇ ಜೀವನ ಶಿಕ್ಷಣದ ಗುರಿಯಾಗಿದೆ. ಬಾಲಕನ ಸರ್ವಾಂಗೀಣ ಉನ್ನತಿ ಗಾಗಿಯೇ ಜೀವನ ಶಿಕ್ಷಣವು ಶ್ರಮಿಸುತ್ತಿದೆ ಎಂದು ಗುರುವು ತಿಳಿದವನಿರಬೇಕು. ತಾನು ಮಾರ್ಗ ದರ್ಶಕನಾಗಿದ್ದು ಬಾಲಕರಿಗೆ ಪ್ರತ್ಯಕ್ಷ ಅನುಭವಗಳ ಮುಖಾಂತರ ಜ್ಞಾನಪಡೆಯಲು ಸಹಾಯಕನಾಗಬೇಕು. ಜೀವನ ಶಿಕ್ಷಣದಲ್ಲಿ ಬಾಲಕನು ಎಲ್ಲವನ್ನು ತಾನು ಮಾಡಿಯೇ ಕಲಿಯುವದರಿಂದ ತಾನು ಗಳಿಸಿದ ಜ್ಞಾನವು ಅತನಲ್ಲಿ ಸ್ಥಿರವಾಗಿ ಉಳಿದು ಅದು ಜೀವನಕ್ಕೆ ಹೊಂದಿ ಕೊಂಡು ಅತನು ಒಳ್ಳೇ ನಾಗರಿಕನಾಗುವನು.

ಜೀವನ ಶಿಕ್ಷಣದಲ್ಲಿ ಗುರುವು ತನ್ನ ಕಾರ್ಯವನ್ನು ನಿರ್ವಹಿಸುತ್ತಿರುವಾಗ್ಗೆ ಕೆಲವು ಸಮಸ್ಯೆಗಳನ್ನು ಎದುರಿಸ ಬೇಕಾಗುವದು. ಅತನು ಆಯಾ ಸಮಸ್ಯೆಗಳನ್ನು ಸರಿ ಯಾಗಿ ತಿಳಿದುಕೊಂಡು ಅವನ್ನು ಜಾಣ್ಮೆಯಿಂದ ನಿವಾರಿಸಿ ಜೀವನ ಶಿಕ್ಷಣದ ಪ್ರಗತಿಯನ್ನು ಸಾಧಿಸಬೇಕಾಗುವದು. ಜೀವನ ಶಿಕ್ಷಣಕ್ಕೆ ಒಮ್ಮೊಮ್ಮೆ ಹಳ್ಳಿಗರ ವಿರೋಧ ಕಂಡು ಬರಬಹುದು. ಆಗ ಅವರಿಗೆ ಜೀವನ ಶಿಕ್ಷಣದ ಬಗ್ಗೆ ಸರಿ ಯಾದ ತಿಳಿವಳಿಕೆ ಮಾಡಿಕೊಟ್ಟು ಅವರ ಮನಸ್ಸನ್ನು ಒಲಿಸಬೇಕಾಗುವದು. ಒಬ್ಬ ನೇಕಾರನು ತನ್ನ ಮಗನನ್ನು ನೂಲುವ ಹಾಗು ನೇಯುವ ಮೂಲೋದ್ಯೋಗವುಳ್ಳ ಜೀವನ ಶಿಕ್ಷಣ ಶಾಲೆಗೆ ಕಳಿಸಲು ಒಪ್ಪಿಕೊಳ್ಳುವದಿಲ್ಲ. ಯಾಕೆಂದರೆ ತಾನು ನೇಯಿಗೆಯ ಕೆಲಸವನ್ನು ಶಾಲೆಗಿಂತ ಸರಿಯಾಗಿ ಮನೆಯಲ್ಲಿ ಕಲಿಸಬಲ್ಲೆನೆಂದು ಅವನ ಮತ. ಒಬ್ಬ ಬಡಿಗನು ತನ್ನ ಮಗನನ್ನು ನೂಲುವ ಹಾಗು ನೇಯುವ ಮೂಲೋದ್ಯೋಗವುಳ್ಳ ಜೀವನ ಶಿಕ್ಷಣ ಶಾಲೆಗೆ ಕಳಿಸಲು ಒಪ್ಪುವದಿಲ್ಲ. ಯಾಕೆಂದರೆ ಆ ಶಿಕ್ಷಣದಿಂದ ತನ್ನ ಉದ್ಯೋಗಕ್ಕೇನೂ ಸಹಾಯವಾಗುವದಿಲ್ಲವೆಂದು ಆತನ ಅಭಿಪ್ರಾಯ. ಈ ರೀತಿಯಾಗಿ ಎಷ್ಟೋ ಸಮಸ್ಯೆಗಳು ಗುರುವಿನ ಮುಂದೆ ಸ್ವಾಭಾವಿಕವಾಗಿ ಬರುವವು. ಇಂಥ ಪ್ರಸಂಗಗಳಲ್ಲಿ ಗುರುವು ಸಮಸ್ಯೆಗಳನ್ನು ಸರಿಯಾಗಿ ಅರ್ಥ ಮಾಡಿಕೊಂಡು ಅವುಗಳನ್ನು ಜಾಣ ತನದಿಂದ ಬಿಡಿಸಬೇಕಾಗುವದು. ಗುರುವು ನೇಕಾರನಿ ಗಾಗಲೀ ಬಡಿಗನಿಗಾಗಲೀ ಜೀವನ ಶಿಕ್ಷಣ ಶಾಲೆಯಲ್ಲಿಯ ಕಲಿಸುವ ಕ್ರಮದ ಪರಿಚಯ ಮಾಡಿಕೊಟ್ಟು ಅವರ ಬಾಲಕರು ನೇಯಿಗೆಯನ್ನು ಸಶಾಸ್ತ್ರೀಯವಾಗಿ ಕಲಿಯುವರೆಂದೂ ಅಲ್ಲದೆ ಚಟುವಟಿಕೆಗಳ ಮುಖಾಂತರ ಜೀವನಾವಶ್ಯಕವಾದ ಎಷ್ಟೋ ವಿಷಯಗಳನ್ನು ತಿಳಿದು ಕೊಳ್ಳುವರೆಂದೂ ಹೇಳಬೇಕು. ಮತ್ತು ಶಾಲೆಯಲ್ಲಿ ಅವರು ಕಲಿತ ಉದ್ಯೋಗವು ಅವರ ಮನೆಯಲ್ಲಿಯ ಉದ್ಯೋಗಕ್ಕೆ ಪೂರಕವಾಗುವದೇ ಹೊರತು ಮಾರಕ ವಾಗುವದಿಲ್ಲೆಂದು ತಿಳಿಸಿ ಹೇಳಬೇಕು.

ಶಾಲೆಯು ಒಂದು ಸಮುದಾಯ ಕೇಂದ್ರವಾಗು ವಂತೆ (Community Centre) ಗುರುವು ನೋಡಿ ಕೊಳ್ಳಬೇಕು. ಜೀವನ ಶಿಕ್ಷಣ ಶಾಲೆಯ ಗುರುವು ಕೇವಲ ಶಾಲೆಯ ಗುರುವಾಗದೆ ಅತನು ಇಡೀ ಹಳ್ಳಿಯ ಗುರು ವಾಗಬೇಕು. ಆದರ ಸಲುವಾಗಿ ಅತನು ತಾನಿದ್ದ ಹಳ್ಳಿಯ ಸಮಗ್ರ ಅಭ್ಯಾಸ ಮಾಡಬೇಕಾಗುವದು. ಹಳ್ಳಿಯಲ್ಲಿಯ ನಿರಕ್ಷರಿಗಳನ್ನು ಕಂಡುಹಿಡಿದು ಅವರ ಸಲುವಾಗಿ ರಾತ್ರಿ ಶಾಲೆಗಳನ್ನಿಟ್ಟು ಅವರನ್ನು ಸಾಕ್ಷರರನ್ನಾಗಿ ಮಾಡಬೇಕು. ಹಳ್ಳಿಯ ಸಮಸ್ಯೆಗಳಲ್ಲಿ ಆಸ್ಥೆ ತೋರಿಸಿ ಊರವರ ಸಹ ಕಾರದಿಂದ ಬಿಡಿಸಲು ಪ್ರಯತ್ನಿಸಬೇಕು. ಶಾಲೆಯಲ್ಲಿ ಜರುಗುವ ಸಾಂಸ್ಕೃತಿಕ ಚಟುವಟಿಕೆಗಳ ಸಮಯದಲ್ಲಿ ಊರವರಿಗೆ ಆಮಂತ್ರಣಕೊಟ್ಟು ಬಾಲಕರು ಮಾಡಿದ

ವಿವಿಧ ರೀತಿಯ ಪ್ರಗತಿಯು ಅವರ ಲಕ್ಷ್ಯಕ್ಕೆ ಬರುವಂತೆ ಮಾಡಬೇಕು. ರಾಷ್ಟ್ರೀಯ ಹಬ್ಬಗಳನ್ನು ಆಚರಿಸಿದಾಗ್ಗೆ ಊರ ಪ್ರಮುಖರನ್ನು ಅತಿಥಿ ಮಾಡಿ ಅವರು ರಾಲೆಯ ಕೆಲಸಗಳಲ್ಲಿ ಅವಕ್ಕೆ ಸಮಿಸುವಂತೆ ಮಾಡಬೇಕು. ಜೀವನ ಶಿಕ್ಷಣ ಸಪ್ತಾಹವನ್ನು ಆಚರಿಸಿ ಜನತೆಯಲ್ಲಿ ಜೀವನ ಶಿಕ್ಷಣದ ಬಗ್ಗೆ ಸರಿಯಾದ ಕಲ್ಪನೆ ಮಾಡಿಕೊಟ್ಟು ಅದು ನಮ್ಮ ಭಾರತದ ಉನ್ನತಿಗೆ ಹೇಗೆ ಕಾರಣವಾಗುವದೆಂಬ ದನ್ನು ವಿವರಿಸಿ ತೋರಿಸಬೇಕು.

ಜೀವನ ಶಿಕ್ಷಣದಲ್ಲಿ ಗುರುವಿನ ಸ್ಥಾನ ದೊಡ್ಡ ದಿದ್ದಂತೆ ಹೊಣೆಗಾರಿಕೆಯುಳ್ಳದ್ದೂ ಇದೆ ಎಂದು ಹಿಂದೆ ಹೇಳಿದ್ದೇನೆ. ಇಂಥ ಹೊಣೆಗಾರಿಕೆಯುಳ್ಳ ಕೆಲಸವನ್ನು ನಿರ್ವಹಿಸುವಾಗ್ಗೆ ಬರಬಹುದಾದ ಕೆಲವು ತೊಂದರೆ ಗಳನ್ನು ಗುರುವು ತಮ್ಮ ಮೇಲಿನ ವರಿಷ್ಠಾಧಿಕಾರಿಗಳ ಮುಂದೆ ಹೇಳಿ ಅವುಗಳ ನಿವಾರಣೆ ಮಾಡಿಕೊಳ್ಳಬೇಕು. ಗುರುವು ಎದುರಿಸಬಹುದಾದ ತೊಂದರೆಗಳಲ್ಲಿ ಪ್ರಾಮುಖ್ಯ ವಾದ ತೊಂದರೆಯು ಆರ್ಥಿಕ ತೊಂದರೆ. ಶಾಲೆಯಲ್ಲಿ ದಿನಾಲು ಗುರುವು ಒಂದಿಲ್ಲೊಂದು ಚಟುವಟಿಕೆ ಮಾಡ ಬೇಕಾಗುವದು. ಚಟುವಟಿಕೆಗಳನ್ನು ಎಷ್ಟೇ ಕೈಹಿಡಿದು ಮಾಡಿದರೂ ಕೆಲವಕ್ಕೆ ದುಡ್ಡಿನ ಬೆಂಬಲವಿಲ್ಲದೆ ಆಗ ಲಾರವು. ರಾಷ್ಟ್ರೀಯ ಹಬ್ಬ ಇಲ್ಲವೆ ಯಾವದೇ ಸಪ್ತಾಹ ಗಳನ್ನು ಆಚರಿಸಿದಾಗ್ಗೆ ಅತಿಥಿಗಳನ್ನು ಕರೆಯಿಸಬೇಕಾ ಗುವದು. ಇಂಥ ಪ್ರಸಂಗಗಳಲ್ಲಿ ಹಣ ಖರ್ಚಾಗುವದು ಸ್ವಾಭಾವಿಕ. ಇಂಥ ತೊಂದರೆಗಳನ್ನು ಮನದಂದು ವರಿಷ್ಠಾಧಿಕಾರಿಗಳು ಶಕ್ಯವಿದ್ದಮಟ್ಟಿಗೆ ಇವನ್ನು ನಿವಾರಿ ಸಲು ಪ್ರಯತ್ನಿಸಿ ಜೀವನ ಶಿಕ್ಷಣದ ಪ್ರಗತಿಗೆ ಕಾರಣ ರಾಗಬೇಕು.

ಕೊನೆಯದಾಗಿ ಹೇಳಬೇಕಾದರೆ ಜೀವನ ಶಿಕ್ಷಣ ದಲ್ಲಿ ಗುರುವು ಪ್ರಾಮುಖ್ಯವಾದ ಸ್ಥಾನ ಪಡೆದಿದ್ದಾನೆ. ಜೀವನ ಶಿಕ್ಷಣದ ಏಗುಹೋಗುಗಳೆಲ್ಲವೂ ಅತನ ಕೈಯ ಲ್ಲಿಯೇ ಇವೆ. ಅತನು ತನ್ನ ಗುರುತರವಾದ ಹೊಣೆಗಾರಿಕೆ ಯನ್ನು ತಿಳಿದುಕೊಂಡು ಜೀವನ ಶಿಕ್ಷಣವು ಪ್ರಗತಿಪಥದಲ್ಲಿ ಸಾಗುವಂತೆ ತ್ರಿಕರಣಪೂರ್ವಕವಾಗಿ ಪ್ರಯತ್ನಿಸಬೇಕು.

ಪ್ರಾಥಮಿಕ ಶಾಲಾ ಪ್ರಮಾಣಪತ್ರ ಪರೀಕ್ಷೆ, ಟ್ರೇನಿಂಗ ಕಾಲೇಜ; ಎಲಿಮೆಂಟರಿ ಮತ್ತು ಇಂಟರಮೀಡಿಯೆಟ್ ಗ್ರೇಡ ಮುಂ. ಡ್ರಾಯಿಂಗ ಪರೀಕ್ಷೆಗಳಿಗೆ—

ಜನಪ್ರಿಯವಾದ ಮತ್ತು ಸರಕಾರದಿಂದ ಮಂಜೂರಾದ ಒಂದೇ ಒಂದು ಪುಸ್ತಕ

ಆದರ್ಶ ಚಿತ್ರಕಲಾ

(Ideal Drawing)

ಶ್ರೀ ಎಸ್. ಕೆ. ಜೋಶಿ, ಮತ್ತು ಶ್ರೀ ಜಿ. ಡಿ. ವಾಲಿ.

ಎಲ್ಲ ದೊಡ್ಡ ಪುಸ್ತಕ ವ್ಯಾಪಾರಸ್ಥರಲ್ಲಿ ದೊರೆಯುವದು.
ಬೆಲೆ ೧—೧೨—೯ ಅಂಚೆವೆಚ್ಚ ಪ್ರತ್ಯೇಕ. ಐದು ಮತ್ತು ಐದಕ್ಕಿಂತ ಹೆಚ್ಚು ಪ್ರತಿ ತರಿಸಿಕೊಳ್ಳುವವರಿಗೆ ಅಂಚೆ ವೆಚ್ಚವಿಲ್ಲ. ಇದು ಕನ್ನಡದಲ್ಲಿಯೂ ಸಿಗುತ್ತದೆ.

ಜಿ. ನಾರಾಯಣ. ರಾಣೆ

ಪ್ರಕಾಶಕರು, ಬೆಳಗಾವಿ, ಕರ್ನಾಟಕ ಪೋಲೀಸ ಪುಣೆ.

೧೯೫೬ನೆಯ ಇಸವಿಯಿಂದ ಪ್ರಾರಂಭವಾಗುವ ಸಾಮಾನ್ಯ ಪ್ರಾ. ಶಾ. ಪ್ರ. ಪರೀಕ್ಷೆಯ ಅಭ್ಯಾಸ ಕ್ರಮವನ್ನು ಅನುಸರಿಸಿ ಬರೆದ

ಶೇಲಾರ ಕೃತ

ಪ್ರಾಥಮಿಕ ಭೂಮಿತಿ

[ಕ್ಷೇತ್ರಫಲ ಘನಫಲ ಸಹಿತ]

೪ ರಿಂದ ೭ ನೇಯ ವರ್ಗದ ವರೆಗಿನ ವಿಷಯವನ್ನೆಲ್ಲ ಒಳಗೊಂಡಿದೆ.

ಬೆಲೆ: ೧ರೂ. ೮ಆಣೆ ಮಾತ್ರ

ದೊರೆಯುವ ಸ್ಥಳ:—

ಸಾಯಿ ಪಬ್ಲಿಶಿಂಗ್ ಹಾವುಸ್,
ವಿಜಯ ರೋಡ, ಧಾರವಾಡ.

ಜೀವನ ಶಿಕ್ಷಣದಲ್ಲಿ ಕಾರ್ಯಕರ್ತನ ಸಮಸ್ಯೆಗಳು

ಲೇಖಕರು: **ಶ್ರೀ ಮಿರ್ಜಿ ಅಣ್ಣಾರಾಯರು, ಸೇಡಬಾಳ**

ಪ್ರಗತಿಪರ ಯಾವುದೇ ರಾಷ್ಟ್ರದಲ್ಲಿ ಅಭ್ಯಾಸ ಪತ್ರಿಕೆಗೂ ದೇಶದ ಬೇಡಿಕೆಗೂ ಯಾವಾಗಲೂ ಹೊಂದಿಕೆಯು ಇರುತ್ತದೆ. ರಾಷ್ಟ್ರೀಯ ಅವಶ್ಯಕತೆಗಳನ್ನು ಶಿಕ್ಷಣವು ಪೂರೈಸುತ್ತಿರುತ್ತದೆ. ಪರಕೀಯರ ಆಳಿಕೆಯಲ್ಲಿದ್ದಾಗ ಭಾರತವು ಬ್ರಿಟಿಷ ಸತ್ತೆಯ ಬೇಡಿಕೆಗಳನ್ನು ಸಲ್ಲಿಸುವ ಒಂದು ದೇಶವಾಗಿತ್ತು. ಆಗ ಅದಕ್ಕನ್ಗುಣವಾಗಿ ನಮ್ಮ ಶಿಕ್ಷಣವೂ ರೂಪುಗೊಳಿಸಲ್ಪಡುತ್ತಿತ್ತು. ಆದರೆ ಇಂದು ನಮ್ಮ ದೇಶವು ಸ್ವತಂತ್ರವಾಗಿ ಪ್ರಜಾಪ್ರಭುತ್ವದ ಆಡಳಿತೆಯನ್ನು ರಚಿಸಿಕೊಂಡ ದೇಶವಾಗಿದೆ. ಈ ದೇಶಕ್ಕೆ ದೇಶದ ಸರ್ವಾಂಗೀಣ ವಿಕಾಸಕ್ಕೆ ಸಹಕಾರಿಯಾಗಬಲ್ಲ ಶಿಕ್ಷಣ ಪದ್ಧತಿಯನ್ನು ಸ್ವತಂತ್ರ ಭಾರತವು ಈಗಾಗಲೇ ರಚಿಸಿಕೊಂಡಿದೆ. ಅದಕ್ಕೇನೇ ನಾವೀಗ ಜೀವನ ಶಿಕ್ಷಣ ಎಂದು ಕರೆಯುತ್ತೇವೆ. ಇಂಥ ಶಿಕ್ಷಣವನ್ನು ಮಕ್ಕಳಿಗೆ ಒದಗಿಸುವದೆಂದರೆ ವಿಕಾಸ ಶೀಲವಾದ ಭಾರತ ರಾಷ್ಟ್ರವನ್ನೇ ಕಟ್ಟಿದಂತಿದೆ. ಈ ಮಹತ್ಕಾರ್ಯದ ಹೊಣೆಯು ಇಂದಿನ ಶಿಕ್ಷಕರ ಮೇಲಿದೆ. ಹೊಣೆಗಾರಿಕೆಯು ಹೆಚ್ಚಿದಷ್ಟೇ ಸಮಸ್ಯೆಗಳೂ ಕೂಡ ಹೆಚ್ಚುತ್ತ ಹೋಗುತ್ತವೆ. ಅದರಿಂದ ಇಂದು ಜೀವನ ಶಿಕ್ಷಣ ಕ್ಷೇತ್ರದಲ್ಲಿ ದುಡಿಯುತ್ತಿರುವ ಕಾರ್ಯಕರ್ತನ ಸಮಸ್ಯೆಗಳ ಸಮಾಲೋಚನೆಯು ನಡೆಯುವದು ತೀರ ಅವಶ್ಯಕವಾಗಿದೆ. ಸಮಸ್ಯೆಗಳ ಸ್ವರೂಪ ತಿಳಿದ ತರುವಾಯವೇ ಅಲ್ಲವೆ ಅವುಗಳನ್ನು ಬಿಡಿಸುವ ಮಾರ್ಗ?

ಜೀವನ ಶಿಕ್ಷಣ ರಂಗದಲ್ಲಿ ಕಾರ್ಯಕರ್ತರ ಮುಂದಿರುವ ಮೊಟ್ಟಮೊದಲನೆಯ ಸಮಸ್ಯೆ ಎಂದರೆ ಅವರಿಗೆ ತಮ್ಮರಿವು ತಮಗೆ ಇಲ್ಲದೆ ಇರುವುದು. ಉಳಿದ ಕಾರ್ಯಕ್ಷೇತ್ರದೊಳಗೆ ಸಂಬಳಕ್ಕಾಗಿ ದುಡಿಯುವ ಕೂಲಿಗಳಂತೆ ತಾವೂ ಒಂದು ವರ್ಗದ ನೌಕರರೆಂದು ಭಾವಿಸಿ ಶಿಕ್ಷಣ ಕಾರ್ಯವನ್ನು ನಡೆಯಿಸುತ್ತಿರುವದು ಎಲ್ಲಕ್ಕೂ ದೊಡ್ಡ ಸಮಸ್ಯೆಯಾಗಿದೆ. ಇದನ್ನು ಮೊದಲು ಅವರು ಮನಸ್ಸಿನೊಳಗಿಂದ ತೆಗೆದುಹಾಕಲಿಕ್ಕೆಬೇಕು. ತಮ್ಮ ಮೇಲೆ ಭಾವೀ ರಾಷ್ಟ್ರವನ್ನು ನಿರ್ಮಿಸುವ ಮಹತ್ವಪೂರ್ಣವಾದ ಹೊಣೆಯಿದೆ; ಆ ಪವಿತ್ರ ಹಾಗೂ ಹೊಣೆಗಾರಿಕೆಯ ಕಾರ್ಯದಲ್ಲಿ ನಾವು ತೊಡಗಿದ್ದೇನೆ. ನಾವು ಸ್ವಲ್ಪ ಅಲಕ್ಷವನ್ನು ಮಾಡಿದರೂ ಸದ ರಾಷ್ಟ್ರದ ಬಹು ದೊಡ್ಡ ಹಾನಿಯು ಆಗುತ್ತದೆ ಎಂಬ ತಿಳುವಳಿಕೆಯು ಅವರಲ್ಲಿ ಮೂಡಬೇಕು. ಈ ಅರಿವಿನ ಬೆಳಕಿನಲ್ಲಿ ಅವರು ಕಾರ್ಯಪ್ರವೃತ್ತರಾದಲ್ಲಿ ಜೀವನ ಶಿಕ್ಷಣದೊಳಗಿನ ಒಂದು ಮಹತ್ವದ ಸಮಸ್ಯೆಯೇ ಪರಿಹಾರವಾದಂತೆ ಆಗುತ್ತದೆ.

ಹೀಗೆ ಮನಃಪೂರ್ವಕವಾಗಿ ರಾಷ್ಟ್ರವನ್ನು ಪುನರ್‌ನಿರ್ಮಾಣಗೊಳಿಸಲೆಂದು ಸಿದ್ಧನಾಗಿ ನಿಂತ ಶಿಕ್ಷಕನು ರಾಷ್ಟ್ರಕ್ಕೇನೇ ಗುರುವಿನ ಸ್ಥಾನದಲ್ಲಿ ನಿಲ್ಲುವನು. ಆಗ ಅವನು ನನಗೆ ಯೋಗ್ಯ ಶಾಲಾ ಕಟ್ಟಡವಿಲ್ಲ, ಉಪಕರಣಗಳ ಕೊರತೆ ಇದೆ, ಸರಕಾರವು ಕಾಲಕಾಲಕ್ಕೆ ಸಾಧನ-ಸಲಕರಣೆಗಳನ್ನು ಪೂರೈಸುತ್ತಿಲ್ಲ, ಸಂಬಳ ಸರಿಯಾಗಿ ಸಿಗುವದಿಲ್ಲ ಇತ್ಯಾದಿ ಯಾವ ಗೊಣಗಾಟಕ್ಕೂ ತನ್ನ ಮನಸ್ಸಿನಲ್ಲಿ ಎಡೆಗೊಡಲಾರನು. ಅವನಿಗೆ ತಾನೊಂದು ಧ್ಯೇಯವನ್ನು ಸಾಧಿಸಬೇಕಾಗಿದೆ. ಆ ಧ್ಯೇಯಸಾಧನೆಗಾಗಿ ಬೇಕಾದ ಕಷ್ಟಗಳನ್ನು ಸಹಿಸುವೆ, ಅಡ್ಡಿ ಆತಂಕಗಳನ್ನು ದೂರಗೊಳಿಸಿ ಮುಂದೆ ಸಾಗುವೆ ಎಂಬ ನೆಚ್ಚು ಇರುತ್ತದೆ. ಆ ಆತ್ಮವಿಶ್ವಾಸದಿಂದ ಅವನು ಮುಂದರಿಯುತ್ತಾನೆ. ಆಗ ಮನಸ್ಸಿದ್ದಲ್ಲಿ ಮಾರ್ಗ ದೊರೆಯುತ್ತದೆ. ಅವನ ಎದುರಿಗಿನ ಸಮಸ್ಯೆಗಳೆಲ್ಲ ಕಾಲಕಾಲಕ್ಕೆ ಬಿಡುತ್ತ ಹೋಗುತ್ತವೆ.

ಈ ಮಾತನ್ನು ಹೇಳಿ ನಾವು ಗುರುಗಳ ಮೇಲೆ ಸಮಗ್ರ ಭಾರವನ್ನು ಹಾಕಿ ನಮ್ಮ ನಮ್ಮ ಕಾರ್ಯಗಳತ್ತ ಹೊರಳಿದರಾಯಿತೆಂದು ನಾಗರಿಕರೂ ಆಡಳಿತ ವರ್ಗವೂ ತಿಳಿದುಕೊಂಡರೆ ಅದು ತೀರ ತಪ್ಪಾಗುತ್ತದೆ. ಶಾಲಾ ಶಿಕ್ಷಕನೂ ಒಬ್ಬ ವ್ಯಕ್ತಿ, ಅವನ ಕಾರ್ಯಶಕ್ತಿಗೂ ಇತಿ ಮಿತಿಗಳೆಂಬವು ಇವೆ, ಅವನಿಗೂ ಗೃಹಜೀವನ ಹಾಗೂ ಸಾಮಾಜಿಕ ಜೀವನಗಳು ಇವೆ. ಇವೆಲ್ಲವುಗಳ ಅರಿವು ನಾಡಿನ ಎಲ್ಲ ಜನರಿಗೂ ಇರಲಿಕ್ಕೆಬೇಕು. ಅಲ್ಲದೆ ತಮ್ಮಿರಿಗಿಂತ ಒಂದು ವಿಶಿಷ್ಟ ಹಾಗೂ ಮಹತ್ವಪೂರ್ಣವಾದ ರಾಷ್ಟ್ರ ನಿರ್ಮಾಣದ ಕಾರ್ಯದಲ್ಲಿ ಜೀವನ ಶಿಕ್ಷಣದ ಕಾರ್ಯ

ಕರ್ತನು ತೊಡಗಿಸಿಕೊಂಡಿದ್ದಾನೆ; ಅವನ ಕಾರ್ಯದಲ್ಲಿ ನಮ್ಮೆಲ್ಲರ ಸಕ್ರಿಯ ಸಹಾನುಭೂತಿಯು ಅವಶ್ಯಕತೆ ಇದೆ ಎಂಬ ತಿಳುವಳಿಕೆಯಿಂದ ಜನ ನಡೆದುಕೊಳ್ಳಬೇಕು.

ಇಂಥ ತಿಳುವಳಿಕೆಯು ಜನತೆಯಲ್ಲಿ ಬರುವದೆಂದರೆ ಏನು?— ಎಂಬ ಪ್ರಶ್ನೆಯೂ ಇಲ್ಲಿ ಉದ್ಭವಿಸುತ್ತದೆ. ಜೀವನ ಶಿಕ್ಷಣದ ಕಾರ್ಯಕರ್ತರೊಡನೆ ಜನರ ಸಂಬಂಧ ಇರುವದು ಎರಡು ದೃಷ್ಟಿಯಿಂದ. ಒಂದು ಪಾಲಕರೆಂದು; ಇನ್ನೊಂದು ಸಾಮಾಜಿಕರೆಂದು. ಪಾಲಕರೆಂದು ನಡೆದುಕೊಳ್ಳುವಲ್ಲಿ ತಮ್ಮ ಮಕ್ಕಳನ್ನು ಸರಿಯಾದ ಹೊತ್ತಿಗೆ ಶಾಲೆಗೆ ಕಳಿಸುವದು, ಅವರಿಗೆ ಅವಶ್ಯಕವಿರುವ ವೈಕ್ತಿಕ ಸಾಧನಗಳನ್ನು ಪೂರೈಸುವದು, ತಮಗಿಂತಲೂ ಮಕ್ಕಳ ಕರ್ತವ್ಯ ಗುರುವೆಂದು ತಿಳಿದು ವರ್ತಿಸುವದು, ಗೌರವದಿಂದ ಶಿಕ್ಷಕರನ್ನು ಕಾಣುವದು ಇವೆಲ್ಲ ಹೊಣೆಗಾರಿಕೆಗಳನ್ನು ಜನರು ಕಾಲ ಕಾಲಕ್ಕೆ ನೆರವೇರಿಸುತ್ತ ಇರಬೇಕು. ಇನ್ನು ಸಾಮಾಜಿಕನೆಂದು ಬಾಳುತ್ತಿರುವಾಗ ಶಿಕ್ಷಕನು ಶಿಕ್ಷಣ ಕಾರ್ಯವನ್ನು ಕೈಗೆ ಇನ್ನಾವ ಕಡೆಗೂ ತನ್ನ ಮನಸ್ಸನ್ನು ಹರಿಯಿಸದಂತೆ ಅವನ ಜೀವನಾವಶ್ಯಕ ವಸ್ತುಗಳನ್ನು—ಯೋಗ್ಯ ಕ್ರಮ ತಕ್ಕೊಂಡು—ಪೂರೈಸುತ್ತ ಹೋಗುವದು. ಅವನಿಗೆ ತಾನಿಲ್ಲದೆ ತನ್ನ ಸುತ್ತಲಿನ ಜನರ ಸಹಕಾರದಿಂದ ಸುಲಭವಾಗಿ ತನ್ನ ಸಂಸಾರ ಸಿಸ್ಥಿತಿವಾಗಿ ಸಾಗುವಂಥ ಭರವಸೆಯು ತೀರ ಅವಶ್ಯಕವಾಗಿದೆ. ಉಳ್ಳವರು ಬಡವರಿಗೆ ನಡುವೆ ಬಾಳುವ ಶಿಕ್ಷಕನು ಹೋಳು ಅಕ್ಕಿ, ಜೋಳಗಳನ್ನು ಕೊಳ್ಳಲು ಸಂತೆ ಸಂತೆ ಅಲೆಯುವಂತೆ ಆಗಕೂಡದು. ಯೋಗ್ಯ ಧಾರಣೆಯಿಂದ ಅವನ ಮನೆಗೆ ಅಕ್ಕಿ ಒದಗಬೇಕು. ಸಂತೆಗೆ ಹೋದರೆ ನಾಲ್ಕು ಕಾಸು ಉಳಿಯುತ್ತವೆ ಎಂಬ ಭಾವನೆ ಅವನನ್ನು ಒದಗಿಸಿ ಮನ ಸೊ ಬಿಡಿಯಿಳ್ಳಬೇಕು. ನಗರವಲ್ಲಿರುವ ಜವಾಬ್ದಾರಿಗಾಗಿ ಪಾಲನ್ನು ಪೂರೈಸುವ ವ್ಯಾಪಾರಿಗಳಿಗೆ ಪಾಲು ಬಂದು. ಸಾಮಾಯಿಗೆ ಮೂರು ಸೇರಾದರೆ ಶಿಕ್ಷಕರಿಗೆ ಒದಗುವ ಸರಿಯಲ್ಲ ಹೊರೆಯಾಗಕೂಡದು. ಗುರುಗಳು ತಮ್ಮ ಬಿಡಿ ಉಳಿಗಳು ಹಿಂದುವ ಎಲ್ಲ ಪಾಲನ್ನು ಕೊಳ್ಳಲು ಶಕ್ತರಾಗುವೆಂಬ ಕಾರಣಕ್ಕಾಗಿ ತುಟ್ಟಿಯೆಂದು ಜನ ಗುಣಗಾಗಕೂಡದು. ಇಂಥ ಜೀವನಾವಶ್ಯಕ ವಸ್ತುಗಳ ಪೂರೈಕೆಯಲ್ಲಿ, ಸಾಮಾಜಿಕ ಸುರಕ್ಷಿತೆಯಲ್ಲಿ ಅವರಿಗೆ ಬರುವ ತೊಂದರೆಯು ಆಗದಂತೆ ಜನತೆಯು ನೋಡಿಕೊಳ್ಳುವ ಅವಶ್ಯಕತೆಯಿದೆ. ಇದರಿಂದ ಶಿಕ್ಷಣವಲ್ಲಿಯ ಕಾರ್ಯಕರ್ತನು ಒಮ್ಮನಸ್ಸಿನಿಂದ ತನ್ನ ಕಾರ್ಯದಲ್ಲಿ ತೊಡಗಲಿಕ್ಕೆ ಅನುಕೂಲವಾಗುತ್ತದೆ.

ಇನ್ನೂ ಪ್ರತ್ಯಕ್ಷ ಜೀವನ ಶಿಕ್ಷಣ ಕಾರ್ಯದಲ್ಲಿ ತೊಡಗಿದಾಗ ಕಾರ್ಯಕರ್ತನ ಎದುರಿಗೆ ಮತ್ತೂ ಅನೇಕ ಸಮಸ್ಯೆಗಳು ಉಪಸ್ಥಿತವಾಗುತ್ತವೆ. ವಿದ್ಯಾರ್ಥಿಗಳೆಲ್ಲ ಸರಿಯಾಗಿ ಶಾಲೆಗೆ ಬರುತ್ತಾರೆ. ತನ್ನ ಸಂಸಾರದ ಯಾವ ಚಿಂತೆಯೂ ಇಲ್ಲ—ಎಂದ ಮಾತ್ರಕ್ಕೆ ಜೀವನ ಶಿಕ್ಷಣವು ಯಶಸ್ವಿಯಾಗಿ ಕಾರ್ಯಕರ್ತನಿಂದ ನೆರವೇರಿಯೇ ತೀರುತ್ತದೆಂದು ಹೇಳಲಿಕ್ಕೆ ಬರುವದಿಲ್ಲ. ಯಾಕಂದರೆ ಶಾಲೆಯ ಜೀವನವು ಒಂದು ವಿಶಾಲವಾದ ಸಂಸಾರವಿದ್ದಂತೆ. ಅಲ್ಲಿ ಸಹಕಾರಿ ಶಿಕ್ಷಕರು ಇರುತ್ತಾರೆ, ಮುಖ್ಯ ಗುರುಗಳು ಇರುತ್ತಾರೆ, ನಿರೀಕ್ಷಕರು ಇರುತ್ತಾರೆ, ಶಾಸನಾಧಿಕಾರಿಗಳು ಇರುತ್ತಾರೆ, ಅವರೆಲ್ಲರ ದುಡಿತದ ಒಟ್ಟು ಪರಿಣಾಮದಲ್ಲಿ ಜೀವನ ಶಿಕ್ಷಣದ ಯಶಸ್ಸು ಇರುತ್ತದೆ. ಅದರಿಂದ ಪರಸ್ಪರರಲ್ಲಿ ಸಹಕಾರ, ಧ್ಯೇಯನಿಷ್ಠೆಗಳು ತೀರ ಅವಶ್ಯವಾಗಿವೆ. ಮೇಲಧಿಕಾರಿಗಳ ಸಮಾಧಾನಕ್ಕಾಗಿ ಆಗಾಗ ಎಚ್ಚತ್ತು ಕಾರ್ಯಸಾಗಿಸುವ ಕಾರ್ಯಕರ್ತರಿಂದ ಏನೂ ಪ್ರಯೋಜನವಾಗದು. ಜೀವನ ಶಿಕ್ಷಣವು ಹೂವು ಅರಳುವಂತೆ ಸ್ವಾಭಾವಿಕವಾಗಿ ಮಕ್ಕಳ ವಿಕಾಸವನ್ನು ಮಾಡಬೇಕು. ಅವರು ಯೋಗ್ಯ ನಾಗರಿಕರಾಗುವಂತೆ ನೋಡಿಕೊಳ್ಳಬೇಕು. ಪರಸ್ಪರರಲ್ಲಿ ಅಸೂಯೆ, ದೋಷಾರೋಪಣೆಯ ದೃಷ್ಟಿ, ಹೊಣೆಗೇಡಿತನಗಳಿಂದ ಅನರಿಸಿದ ಶಿಕ್ಷಕನು ಒಳ್ಳೆಯ ಪ್ರಜೆಗಳನ್ನು ನಿರ್ಮಿಸಲಾರನು. ಈ ಮಾನಸಿಕ ನ್ಯೂನತೆಗಳನ್ನು ಅವನು ಕಳೆದುಕೊಳ್ಳುವ ಅವಶ್ಯಕತೆಯಂತೂ ಇದ್ದೇ ಇದೆ. ಅಲ್ಲದೆ ತಾನು ಕೈಕೊಂಡಿರುವ ಕಾರ್ಯಕ್ಕೆ ಬೇಕಾಗಿರುವ ಯೋಗ್ಯತೆಯನ್ನು ಸಂಪಾದಿಸಲಿಕ್ಕೆ ಅವನು ಹಗಲಿರುಳೂ ಯತ್ನಿಸಬೇಕಾಗುತ್ತದೆ. ತಾನು ಕಲಿಸುವ ವರ್ಗದ ಪಠ್ಯ-ಪುಸ್ತಕಗಳನ್ನು ಸಹ ಕೊಳ್ಳದೆ ಕಾರ್ಯ ಮಾಡುವೆನೆನ್ನುವ ಶಿಕ್ಷಕನು ಯಶಸ್ವಿಯಾಗಲಾರನು. ಅವುಗಳನ್ನು ಸರಕಾರವೇ ಪೂರೈಸಬೇಕೆಂದು ದಾರಿಕಾಯುವ ಕಾರ್ಯಕರ್ತನು ತನ್ನ ಕಾರ್ಯದ ಮಹತ್ವವನ್ನು ಅರಿತುಕೊಂಡವನೆಂದು ಹೇಳಲಿಕ್ಕೆ ಬರುವದಿಲ್ಲ.

ಇವೆಲ್ಲವುಗಳನ್ನು ಪೂರೈಸಿಕೊಂಡು ಪ್ರಾಮಾಣಿಕವಾಗಿ ದುಡಿಯುವ ಶಿಕ್ಷಕನಿಗೆ ಆಡಳಿತ ವರ್ಗದಿಂದ

ಪ್ರೋತ್ಸಾಹ, ಪುರಸ್ಕಾರಗಳೂ ಲಭಿಸಬೇಕಾಗುತ್ತದೆ. ಶಿಕ್ಷಕನು ಮನುಷ್ಯನಾದುದರಿಂದ ಅವನಿಗೂ ಪುರಸ್ಕಾರದ ಅಗತ್ಯವಿದೆ. ಹನ್ನೆರಡು ತಿಂಗಳು ದುಡಿದ ಕಾರ್ಯಕರ್ತನಿಗಿಂತ ವರ್ಷವೆಲ್ಲ ಇತರ ವ್ಯವಸಾಯ ತಾಪತ್ರಯದಲ್ಲಿ ಕಳೆದು ಅಧಿಕಾರಿಗಳ ಎದುರಿಗೆ ಕಾರ್ಯದ ನಿರೀಕ್ಷಣೆಯ ಕಾಲಕ್ಕೆ ಮುಂದೆ ಮುಂದೆ ಓಡಾಡಿ ಒಳ್ಳೆಯ ಶಿಕ್ಷಕನೆಂದು ಹೆಚ್ಚಿನ ಪುರಸ್ಕಾರವನ್ನು ಹೊಂದುವದಾದಲ್ಲಿ ಪ್ರಾಮಾಣಿಕ ಕಾರ್ಯಕರ್ತನು ನಿರುತ್ಸಾಹಿಯಾಗುತ್ತ ಹೋಗುತ್ತಾನೆ. ಇದು ಒಂದು ಅವನ ಕಾರ್ಯದೊಳಗಿನ ಸಮಸ್ಯೆಯೇ ಆಗಿ ನಿಲ್ಲುತ್ತದೆ.

ಈ ಎಲ್ಲ ಸಮಸ್ಯೆಗಳನ್ನು ಕಾರ್ಯಕರ್ತನು ಪರಿಹರಿಸಿಕೊಂಡು ಮುಂದೆ ಸಾಗಿದಲ್ಲಿ ಜೀವನ ಶಿಕ್ಷಣವು ಯಶಸ್ವಿಯಾಗಿ ಸಾಗುವದೆಂಬುದರಲ್ಲಿ ಯಾವ ಸಂದೇಹವೂ ಇಲ್ಲ. ಪ್ರತ್ಯಕ್ಷ ಕಾರ್ಯದಲ್ಲಿ ತೊಡಗಿದ ಗುರುಗಳಿಗೆ ಇನ್ನೂ ಅನೇಕ ಚಿಕ್ಕ ಪುಟ್ಟ ಆಂತರಿಕ ಹಾಗೂ ಬಾಹ್ಯ ಸಮಸ್ಯೆಗಳೂ ಕೂಡ ಇವೆ. ಅವುಗಳನ್ನು ಅಯಾ ಕಾಲಕ್ಕೆ ಪರಿಹರಿಸಿಕೊಂಡು ರಾಷ್ಟ್ರನಿರ್ಮಾಣ ಕಾರ್ಯದಲ್ಲಿ ಕಾರ್ಯಕರ್ತನು ಮುಂದರಿಯುವದರಲ್ಲಿಯೇ ಅವನ ಜೀವನದ ಸಾಫಲ್ಯವಿದೆ.

ಜೀವನ ಶಿಕ್ಷಣವೂ ಜನಾನುರಾಗವೂ

ಲೇಖಕರು: **ಶ್ರೀ ಶಂ॥ ಬಸಪ್ಪನವರು,** ಬಿ.ಎ., ಬಿ.ಟಿ.

ಮೂಲ ಶಿಕ್ಷಣ

ಜೀವನ ಶಿಕ್ಷಣವು ಮೂಲ ಶಿಕ್ಷಣವೆಂಬ ಹೆಸರಿನಿಂದ ಪ್ರಾರಂಭವಾಯಿತಷ್ಟೇ. ಮೂಲ ಶಿಕ್ಷಣವೆಂದರೆ ಸುತ್ತಲಿನ ಪರಿಸ್ಥಿತಿಗೆ ತಕ್ಕಂತೆ ಆವುದಾದರೊಂದು ಮೂಲ ಕಾಯಕವನ್ನಾಯ್ದುಕೊಂಡು ಅದರ ಮುಖಾಂತರ ಮಗುವಿಗೆ ಶಿಕ್ಷಣವನ್ನು ಸಂಬಂಧೀಕರಣ ಮಾಡಿ ಕೊಡುವದು. ನೂಲುವದೊಂದೇ ಮೂಲ ಕಾಯಕವೆಂದು ಜನರ ಕಲ್ಪನೆಯಾಗಿದೆ. ವಸ್ತುಸ್ಥಿತಿಯು ಹಾಗಿಲ್ಲ. ನೂಲುವ ಕಾಯಕದಂತಹ ಹಲವಾರು ಕಾಯಕಗಳನ್ನು ರುಕೀರ ಹುಸೇನ ಕಮೀಟಿಯವರು ಸಿಫಾರಸು ಮಾಡಿದ್ದಾರೆ. ತಮ್ಮ ಸುತ್ತಲಿನ ಪರಿಸ್ಥಿತಿಗೆ ತಕ್ಕಂತೆ ಅವುಗಳಲ್ಲಿ ಬೇಕಾದೊಂದನ್ನು ಆರಿಸಿಕೊಳ್ಳಬಹುದು. ರಾಷ್ಟ್ರಪಿತನಿಂದ ಪ್ರಾರಂಭವಾದ ಈ ಶಿಕ್ಷಣವು ಜನತೆಯ ಮನವನ್ನು ತನ್ನತ್ತ ಆಕರ್ಷಿಸದೆ ಬಿಡಲಿಲ್ಲ. ಪ್ರಾರಂಭದಲ್ಲಿ ಮಕ್ಕಳೂ ಸಹ ಹುರುಪು-ಹುಮ್ಮಸಗಳಿಂದ ಈ ಶಿಕ್ಷಣವನ್ನು ಸ್ವಾಗತಿಸಿ ಆಸ್ಥೆಯಿಂದ ಹೊಂದಿದುದೂ ನಿಜ. ಈ ಶಿಕ್ಷಣದ ಪ್ರಯೋಗವು ಯಶಸ್ವಿಯಾಗುವದೆಂಬುದರ ಭರವಸೆಯು ಆಗ ಎಲ್ಲರಲ್ಲಿಯೂ ಮೂಡಿತು. ಆದರೆ, ಆಗಿನ ಅಭ್ಯಾಸ ಪತ್ರಿಕೆಯಂತೆ ಮೂಲ ಕಾಯಕವನ್ನು ಮುಂಜಾನೆ ೧॥ ತಾಸು ಅಪರಾನ್ಹ ೧॥ ತಾಸು ಈ ಪ್ರಕಾರ ದಿನದಲ್ಲಿ ಒಟ್ಟು ಸುಮಾರು ೩ ತಾಸು ಸಾಗಿಸಬೇಕೆಂಬ ನಿಯಮವಿತ್ತು. ತತ್ಪರಿಣಾಮವಾಗಿ, ಉಳಿದ ವಿಷಯಗಳಲ್ಲಿ ಮಗುವಿನ ಪ್ರಗತಿಯು ಕುಂಠಿತವಾದದ್ದು ಕಂಡು ಬಂದಿತು. ಮಗುವಿನ ಎಲ್ಲ ಶಿಕ್ಷಣವನ್ನು ಮೂಲ ಕಾಯಕದ ಮುಖಾಂತರವೇ ಸಂಬಂಧೀಕರಣ ಮಾಡಿ ಸಾಗಿಸಬೇಕೆಂಬ ಮತ್ತೊಂದು ನಿಯಮವಿತ್ತು. ಈ ನಿಯಮದಂತೆ ಹಲವು ವಿಷಯಗಳನ್ನು ಮಗುವಿಗೆ ಮೂಲ ಕಾಯಕದ ಮುಖಾಂತರ ಸಂಬಂಧೀಕರಣಮಾಡಿ ಕಲಿಸುವದೇ ಪುನ್ತರ ನೆಂದು ಎಲ್ಲರ ಅನುಭವಕ್ಕೆ ಬಂದಿತು. ಇವೆರಡೂ ವಿಷಯಗಳು ಮಗುವಿನ ಶಿಕ್ಷಣಕ್ಕೆ ಅಸ್ಪೊಂದು ಸಹಾಯಕವಾಗಲಿಲ್ಲವೆಂಬ ಮಾತನ್ನು ವಿಷಾದದಿಂದ ಇಲ್ಲಿ ಹೇಳಬೇಕಾಗಿದೆ. ಪ್ರಾರಂಭದಲ್ಲಿ ಆವುದೇ ಪ್ರಯೋಗದಲ್ಲಿ ತಪ್ಪು-ತಡಿಗಳಾಗುವದು ಸ್ವಾಭಾವಿಕವೇ. ಈ ಪ್ರಯೋಗವು ಅದಕ್ಕೆ ಅಪವಾದವಾಗಲಿಲ್ಲವೆಂಬುದನ್ನು ನಾವು ಒಪ್ಪಿಕೊಳ್ಳಲೇಬೇಕು. ಮೇಲೆ ಹೇಳಿದ ಈ ನಿಯಮಗಳಲ್ಲಿ ಬದಲಾವಣೆಯನ್ನು ಮಾಡುವದು ಅನಿವಾರ್ಯವೆಂದೆನಿಸಿತು. ಅದಕ್ಕಿ, ಈ ಮಾರ್ಪಾಡಿಗೆ ಉಗ್ರಮತವಾದಿಗಳಿಂದ ಬಲವಾದ ವಿರೋಧವು ಬರದೆ ಬಿಡಲಿಲ್ಲ. ಪ್ರಾರಂಭದಲ್ಲಿದ್ದಂತೆಯೇ ಅದು ಸಾಗಬೇಕೆಂಬುದು ಅವರ ಹಟವು. ಅವರ ಈ ಹಟಮಾರಿತನದ ವಿರೋಧಕ್ಕೆ ಬೆಂಬಲವು ಸಿಗದೆ ಹೋಯಿತು. ಅವರ ಉಗ್ರಮತದಂತೆ ಸಾಗಿದ್ದರೆ, ಮೂಲ ಶಿಕ್ಷಣವು ಮಗು ಪ್ರಧಾನ (Child centred)

ವಾಗದೆ ಕಾಯಕ ಪ್ರಧಾನ (Craft centred) ವಾಗಿ ಪರಿಣಮಿಸುವ ಸಂಭವವಿತ್ತು. ಪ್ರಾರಂಭದಲ್ಲಿ ಮೂಲ ಕಾಯಕದ ಮೇಲಿದ್ದ ಮಕ್ಕಳ ಆಸ್ಥೆಯು ದಿನಗಳು ಉರುಳಿದಂತೆ ಕುಂದುತ್ತ ನಡೆಯಿತು, ಮತ್ತು ಹೊಸ ಈ ಶಿಕ್ಷಣದ ಬಗೆಗಿದ್ದ ಜನತೆಯ ಆಸುರಾಗವೂ ಬಹಳಮಟ್ಟಿಗೆ ಕುಗ್ಗಿತು. ಸರಕಾರದವರು ಈ ಸಂಗತಿಗಳನ್ನೆಲ್ಲ ಸಾರಾಸಾರ ವಿಚಾರ ಮಾಡಿ ಶಿಕ್ಷಣ ತಜ್ಞರ ಅಭಿಪ್ರಾಯಗಳನ್ನು ತಕ್ಕೊಂಡು ಮಗುವಿನ ಶಿಕ್ಷಣಕ್ಕೆ ಸುಗಮವಾಗುವಂತೆ ಮೂಲ ಕಾಯಕದ ಅವಧಿಯನ್ನು ಸಾಕಷ್ಟು ತಗ್ಗಿಸಿದರು; ಮತ್ತು ಅದರ ಮುಖಾಂತರವೇ ಸಂಬಂಧೀಕರಣ ಮಾಡಿ ಮಗುವಿನ ಎಲ್ಲ ಶಿಕ್ಷಣವು ಸಾಗಬೇಕೆಂಬ ನಿಯಮವನ್ನು ಸಡಲಿಸಿ ಅದರ ಮುಖಾಂತರ ಅನುಬಂಧನ ಮಾಡಿ ಕಲಿಸಲು ಶಕ್ಯವಿಲ್ಲದ ವಿಷಯಗಳನ್ನು ಮಗುವಿನ ನೈಸರ್ಗಿಕ ಹಾಗೂ ಸಾಮಾಜಿಕ ಪರಿಸ್ಥಿತಿಗಳ ಮುಖಾಂತರ ಅನುಬಂಧನ ಮಾಡಿ ಕಲಿಸಲಡ್ಡಿಯಿಲ್ಲವೆಂದು ಸಾರಿದರು. ಈ ಬದಲಾವಣೆಗಳಿಂದ ಆಗ ಮೂಲ ಶಿಕ್ಷಣಕ್ಕಂಟಿಕೊಂಡಿದ್ದ ಸಂಕುಚಿತ ಮನೋಭಾವವು ವಿಶಾಲಗೊಂಡಿತು.

ಜೀವನ ಶಿಕ್ಷಣ

ಮೇಲೆ ಹೇಳಿದಂತೆ ಮೂಲಶಿಕ್ಷಣದ ವಿಶಾಲಗೊಂಡ ಮನೋಭಾವವು ದಿನಗಳೆದಂತೆ ಮತ್ತಷ್ಟು ವಿಶಾಲಗೊಳ್ಳುತ್ತ ಸಾಗಿಬಂದಿದೆ. ಈಗಂತೂ ಮಗುವಿನ ಜೀವನಕ್ಕೆ ಸಂಬಂಧಿಸಿದ ಬೇಕಾದೊಂದು ಚಟುವಟಿಕೆಯನ್ನಿಟ್ಟು ಕೊಂಡು ಪಾಠಗಳನ್ನು ಸಾಗಿಸಬಹುದಾಗಿದೆ. ಈಗಿನ ಅಭ್ಯಾಸ ಪತ್ರಿಕೆಯಂತೆ ಮಗುವು ತನ್ನ ಮುಂದಿನ ಜೀವನದಲ್ಲಿ ಅನುಭವಿಸಬೇಕಾದ ಸಮಸ್ಯೆಗಳನ್ನೆಲ್ಲ ಸಾಲೆಯಲ್ಲಿಯೇ ಎದುರಿಸಿ ತನ್ನ ಶಿಕ್ಷಣದ, ಜ್ಞಾನದ ಮತ್ತು ಅನುಭವದ ಮಂದಿರವನ್ನು ತಾನೇ ರಚಿಸಿಕೊಳ್ಳಬಲ್ಲನು. ಆದುದರಿಂದಲೇ ಈ ಹೊಸ ಶಿಕ್ಷಣಕ್ಕೆ ಜೀವನ ಶಿಕ್ಷಣವೆಂಬ ನಾಮಕರಣವಾಗಿದೆ, ಮತ್ತು ಹಾಗೆ ಆದುದು ಅತ್ಯಂತ ಯೋಗ್ಯವೇ ಆಗಿದೆಯೆಂದು ನಮ್ಮ ಪ್ರಾಂಜಲ ಮತ. ಜೀವನ ಶಿಕ್ಷಣವೆಂದರೆ ಜೀವನಕ್ಕೆ ಹೊಂದಿಕೊಂಡು ಸಾಗುವ ಶಿಕ್ಷಣ. ಅದು ನಿಜಕ್ಕೂ ಮಗು ಪ್ರಧಾನವಾದ ಶಿಕ್ಷಣ. ಹಳೆಯ ಶಿಕ್ಷಣವು ಜೀವನಕ್ಕೆ ಅಷ್ಟೊಂದು ಹೊಂದಿಕೊಳ್ಳದೆ ಹೆಚ್ಚಾಗಿ ಪುಸ್ತಕೀಯವಾಗಿತ್ತು. ಈ ಹೊಸ ಶಿಕ್ಷಣದಲ್ಲಿ ಯೋಜನಾ (Project) ಮತ್ತು ಕೃತಿಪ್ರಧಾನ (Dynamic) ಪದ್ಧತಿಗಳು ಹಾಸುಹೊಕ್ಕಾಗಿ ಹೆಣೆಯಲ್ಪಟ್ಟಿರುವದರಿಂದ ಅದು ಅತ್ಯುತ್ತಮ ಶಿಕ್ಷಣವಿರುವದೆಂದು ಶಿಕ್ಷಣ ತಜ್ಞರಿಂದ ಮನ್ನಣೆಯನ್ನು ಹೊಂದಿದೆ. ಈಗಿನ ಪ್ರಜಾಪ್ರಭುತ್ವದ ವಾತಾವರಣಕ್ಕೆ ಒಗ್ಗುವ ಗುಣಗಳನ್ನು ಮಗುವಿನಲ್ಲಿ ಕುದುರಿಸಲು ಅವಶ್ಯವಾಗಿ ಬೇಕಾಗುವ ಎಲ್ಲ ವಿಷಯಗಳನ್ನು ಮಗುವಿನ ವಯೋಮಾನಕ್ಕೂ ಬುದ್ಧಿಮತ್ತೆಗೂ ಸರಿ ಹೋಗುವಂತೆ ಸುಗುಮವಾಗಿಯೂ ಸುಸಂಬದ್ಧವಾಗಿಯೂ ಈಗಿನ ಅಭ್ಯಾಸ ಪತ್ರಿಕೆಯಲ್ಲಿ ಹೆಣೆಯಲ್ಪಟ್ಟಿವೆ. ಮೂಲ ಶಿಕ್ಷಣವು ಜೀವನ ಶಿಕ್ಷಣಕ್ಕೆ ಪರಿವರ್ತನವನ್ನು ಹೊಂದುತ್ತ ನಡೆದಂತೆ ನಡುವೆ ಒಮ್ಮೆ ಕುಗ್ಗಿದ ಜನಾನುರಾಗವು ಈಗ ಹಿಗ್ಗುತ್ತ ಸಾಗಿದೆ. ಜನತೆಯ ಬೇಡಿಕೆಗಳಿಗೆ ತಕ್ಕಂತೆ ಅದು ತನ್ನ ಮನೋಭಾವವನ್ನು ವಿಶಾಲಗೊಳಿಸುತ್ತ ಸಾಗಿದರೆ, ಜನಾನುರಾಗವನ್ನು ಅದು ಇನ್ನೂ ಹೆಚ್ಚಿಚ್ಚು ಗಳಿಸುವದರಲ್ಲಿ ಎಳ್ಳನಿತು ಸಂದೇಹವಿಲ್ಲ.

ಜನಾನುರಾಗವನ್ನು ಪಡೆಯುವ ಬಗೆಗಳು

ನಿತ್ಯದ ಸಫಾಯಿ ಕ್ರಮಗಳಿಂದ ಸಾಲೆಯನ್ನೂ ಅದರ ಆವಾರವನ್ನೂ ದಿನಾಲು ತಪ್ಪದೆ ಸ್ವಚ್ಛವಾಗಿಟ್ಟುಕೊಂಡು ಹಳ್ಳಿಗರ ಮನವನ್ನು ಸಾಲೆಯು ತನ್ನತ್ತ ಆಕರ್ಷಿಸುವಂತೆ ಮಾಡಿಕೊಳ್ಳಬೇಕು. ಮಕ್ಕಳು ಸಫಾಯಿಯಿಂದ ತಮ್ಮ ತಮ್ಮ ಮನೆಯನ್ನೂ ಆವಾರವನ್ನೂ ಸ್ವಚ್ಛವಾಗಿಟ್ಟುಕೊಳ್ಳಲು ಅವರನ್ನು ಹುರಿದುಂಬಿಸಬೇಕು. ಸಾಲೆಯಲ್ಲಷ್ಟೇ ಸಫಾಯಿಯನ್ನು ಮಾಡಿದರೆ ಅವರ ಕೆಲಸವು ಮುಗಿದಂತಾಗಲಿಲ್ಲ. ಮನೆಯಲ್ಲಿಯೂ ಅವರು ಸಫಾಯಿಯನ್ನು ಮಾಡಲು ಕಲಿಯಬೇಕು. ಅದುವೇ ಸಫಾಯಿಯನ್ನು ಅಭ್ಯಾಸ ಪತ್ರಿಕೆಯಲ್ಲಿ ಸೇರಿಸಿದ ಮೂಲೋದ್ದೇಶವು. ಮಹಾತ್ಮರು ಇದಕ್ಕೆ ಹೆಚ್ಚಿನ ಮಹತ್ವವನ್ನು ಕೊಟ್ಟಿದ್ದಾರೆ. ಮುಂಜಾನೆಯ ಪ್ರಾರ್ಥನೆಯು ಮುಗಿದ ಕೂಡಲೇ ನಿತ್ಯದ ಪಂಚಾಂಗದ ಜ್ಞಾನವನ್ನು ಮಕ್ಕಳಿಗೆ ಮಾಡಿಕೊಟ್ಟು ಅವರು ಮನೆಗೆ ಹೋದ ಮೇಲೆ ಮನೆಯಲ್ಲಿ ಎಲ್ಲರಿಗೆ ತಪ್ಪದೆ ತಿಳಿಸಲು ಅವರನ್ನು ಕೇಳಿಕೊಳ್ಳಬೇಕು; ಮತ್ತು ಅವರವರ ತಂದೆ ತಾಯಿಗಳು ಇಲ್ಲವೆ ಪಾಲಕರು ಅಕಸ್ಮಾತ್ತಾಗಿ ಭೆಟ್ಟಿಯಾದಾಗ ಅವರು ಹಾಗೆ ಮಾಡುತ್ತಿದ್ದುದನ್ನು ಪರ್ಯಾಯದಿಂದ ಕೇಳಿಕೊಂಡು ಪರೀಕ್ಷಿಸುತ್ತಿರಬೇಕು. ಗಣಿತದಲ್ಲಿಯ ಉದಾಹರಣೆಗಳು ಮನೆತನದ ಪ್ರತಿಯೊಂದು ವ್ಯವಹಾರಕ್ಕೆ ಸಂಬಂಧಿಸಿದವುಗಳೇ ಇರಬೇಕು. ಉದಾಹರಣಾರ್ಥವಾಗಿ

ಬೆಣ್ಣೆ, ಹಾಲು, ಮೊಸರು, ಕಾಯಿಪಲ್ಯ, ಹೆಂಣುಹಂಪಲ, ಕಾಳುಕಡಿ, ಕಿರಾಣಿ ಮುಂತಾದವುಗಳ ಬಗೆಗೆ ಸಂಬಂಧಿಸಿದವುಗಳಿರಬೇಕು. ಸ್ಕಾಲರ್‌ಶಿಪ್ ಮತ್ತು ಸರ್ಟಿಫಿಕೇಟ ಪರೀಕ್ಷೆಗಳಲ್ಲಿ ಸಹ ಇಂತಹ ಪ್ರಶ್ನೆಗಳೇ ಇರಬೇಕು. ಮನೆಯಲ್ಲಿ ಇವುಗಳ ಲೆಕ್ಕವನ್ನು ಮಾಡಿ ಹೇಳಲು ಕೇಳಿದರೆ, ಅವರು ತಟ್ಟನೆ ಲೆಕ್ಕಮಾಡಿ ಹೇಳಲು ತಕ್ಕವರಾಗಬೇಕು. ನಾಲ್ಕನೆಯ ಇಯತ್ತೆಯನ್ನು ಸಾಸಾದ ಮಗುವು ಬೇರೆ ಊರಿಂದ ಬಂದ ಪತ್ರವನ್ನು ಓದಿಹೇಳಲು ಶಕ್ತನಾಗಬೇಕು. ಮತ್ತು ಬೇರೆ ಊರಿಗೆ ಪತ್ರವನ್ನು ಬರೆದು ಕಳುಹಲೂ ಶಕ್ತನಿರಬೇಕು. ಸಾಲೆಯಲ್ಲಿ ಮಕ್ಕಳಿಗೆ ವರ್ತಮಾನಪತ್ರವನ್ನೋದುವ ಚಟವನ್ನು ಹಚ್ಚಿ ಓದಿದ ಸುದ್ದಿ ಸಮಾಚಾರವನ್ನು ಬೇರೆಯವರಿಗೆ ಹೇಳಲು ಅವರಿಗೆ ಬರಬೇಕು. ಮತ್ತು ಅವರ ಕಡೆಯಿಂದಲೇ ಕರೇಹಲಿಗೆಯ ಮೇಲೆ ದೊಡ್ಡಕ್ಷರಗಳಿಂದ ಬರೆಯಿಸಿಡಬೇಕು. ಚಿಕ್ಕ ಮಕ್ಕಳು ಅವುಗಳನ್ನೋದಿಕೊಂಡು ತಮ್ಮ ತಮ್ಮ ಮನೆಗೆ ಹೋದ ಮೇಲೆ ಅಲ್ಲಿ ಎಲ್ಲರಿಗೆ ಅವುಗಳನ್ನು ಹೇಳದೆಬೀಡುವದಿಲ್ಲ. ಪರಸ್ಪರರಲ್ಲಿ ಪ್ರೇಮಾಂತಃಕರಣಗಳನ್ನೂ ಸಖ್ಯತ್ವವನ್ನೂ ಚಿಗುರಿಸಲು ಸದವಕಾಶವನ್ನು ಕಲ್ಪಿಸಿಕೊಟ್ಟ ದಸರೆ, ಮಕರಸಂಕ್ರಮಣಗಳಂತಹ ಹಬ್ಬಗಳಲ್ಲಿ ಪಾಲಕರನ್ನು ಸಾಲೆಗೆ ಬರಮಾಡಿಕೊಂಡು ಬನ್ನಿ ಮುಡಿಯುವ ಎಳ್ಳು-ಬೆಲ್ಲವನ್ನು ಕೊಡತಗೊಳ್ಳುವ ಸಾಮಾಜಿಕ ಕಾರ್ಯಗಳನ್ನು ಸಾಲೆಯಲ್ಲಿಯೇ ಜರುಗಿಸುವದು ಲೇಸು. ಸಾಲೆಯೆಂದರೆ ಅದೊಂದು ಸಮಾಜ ಮಂದಿರ ಇಲ್ಲವೆ ಸಾಮಾಜಿಕ ಕೇಂದ್ರವೆಂಬ ಮನೋಭಾವವು ಹಳ್ಳಿಗರಲ್ಲಿ ಮೂಡಿಬರುವಂತಾಗಬೇಕು. ಜಾತ್ರೆ ಅಥವಾ ಉರುಸು ಹಳ್ಳಿಯಲ್ಲಿ ಜರುಗುತ್ತಿದ್ದರೆ, ಅದರಲ್ಲಿ ಸುವ್ಯವಸ್ಥೆಯನ್ನುಂಟು ಮಾಡಲು ಉಮೇದವಾರರ ತಂಡವೊಂದನ್ನು ನಿರ್ಮಿಸಿ ಅದಕ್ಕೆ ಅವಶ್ಯವಿದ್ದ ತರಬೇತನ್ನು ಕೊಟ್ಟು ಸಜ್ಜುಗೊಳಿಸಬೇಕು. ಪಾಲಕರ ಇಲ್ಲವೆ ಮಕ್ಕಳ ದಿನಾಚರಣೆಯನ್ನು ವರ್ಷಂಪ್ರತಿ ತಪ್ಪದೆ ಆಚರಿಸಿ ಇಡಿಯ ವರ್ಷ ಮಕ್ಕಳು ಮಾಡಿದ ಕೈಕೆಲಸಗಳನ್ನೂ ಬರೆಹಗಳನ್ನೂ ಪ್ರದರ್ಶಿಸಿ ಮನೋರಂಜನದ ಕಾರ್ಯಕ್ರಮಗಳನ್ನೇರ್ಪಡಿಸಬೇಕು. ಸರತಿಯಂತೆ ಕೆಲಸ ಮಾಡುವದು, ತನ್ನ ಸರತಿಯು ಬರುವ ವರೆಗೆ ದಾರೀ ಕಾಯುವದು, ಸಾಲೆಗೆ ಬಂದ ಅತಿಥಿಗೆ ಗೌರವಿಸುವದು, ಚುನಾವಣೆಗಳನ್ನೇರ್ಪಡಿಸುವದು, ಮತವನ್ನು ಹಾಕುವದು, ಮಂತ್ರಿಮಂಡಳಗಳನ್ನು ರಚಿಸುವದು, ಕೊಟ್ಟ ಕೆಲಸವನ್ನು ಹೊಣೆ ಹೊತ್ತು ಮಾಡುವದು, ಕೌಟುಂಬಿಕ ಜೀವನ ಮುಂತಾದ ಪೌರನೀತಿಯ ಕಾರ್ಯಗಳನ್ನು ಮಗುವು ಸಾಲೆಯಲ್ಲಿ ಸ್ವತಃ ಮಾಡಿ ಅನುಭವಿಸಿ ಶಿಕ್ಷಣ ಪಡೆಯಬೇಕು. ಪುಸ್ತಕೀಯ ಜ್ಞಾನವು ನಿಜವಾದ ಜ್ಞಾನವಲ್ಲ. ಅದನ್ನು ಮಗುವು ಕೆಲ ವರ್ಷಗಳ ನಂತರ ಮರೆತುಬಿಡಬಹುದು. ಆದರೆ ಸ್ವತಃ ಮಾಡಿ ಅನುಭವಿಸಿ ಪಡೆದ ಶಿಕ್ಷಣವನ್ನು ಮಗುವು ತನ್ನ ಇಡಿಯ ಆಯುಷ್ಯದಲ್ಲಿ ಎಂದಿಗೂ ಮರೆಯಲಾರದು. ಇಂತಹ ಶಿಕ್ಷಣಕ್ಕೆ ಜನತೆಯ ಬೆಂಬಲವು ಸಿಗದೆಹೋದೀತೇ? ಇಂತಹ ಶಿಕ್ಷಣವನ್ನು ಜನಾನುರಾಗವು ಬೆಂಬತ್ತಿಬರುವದುಂಟು. ಆದುದರಿಂದ ಸರಕಾರದವರು ಈ ಹೊಸ ಶಿಕ್ಷಣವನ್ನು ಸಾರ್ವತ್ರಿಕವಾಗುವಂತೆ ಬೇಗನೆ ಕ್ರಮಗಳನ್ನು ಕೈಕೊಳ್ಳಬೇಕು. ಬೇಸಿಕ್ಕೇತರ (Non-basic) ಸಾಲೆಗಳಿಗೆಲ್ಲ ಮೂಲ ಕಾಯಕದ ಉಪಕರಣವನ್ನೊದಗಿಸುವದು ಸರಕಾರದವರಿಗೆ ಈಗಿನ ಆರ್ಥಿಕ ಪರಿಸ್ಥಿತಿಯಲ್ಲಿ ಶಕ್ಯವಾಗಲಿಕ್ಕಿಲ್ಲವೆಂಬ ಮಾತು ನಿಜವಿರಬಹುದು. ಆದರೆ, ಬೇಸಿಕ್ಕೇತರ ಸಾಲೆಗಳಲ್ಲಿ ಬೇಸಿಕ್ ಅಭ್ಯಾಸಪತ್ರಿಕೆಯಲ್ಲಿಯ ಮೂಲ ಕಾಯಕದ ಕಾರ್ಯವನ್ನಷ್ಟು ಬಿಟ್ಟು ಉಳಿದ ಕಾರ್ಯಕ್ರಮಗಳನ್ನೇಕೆ ಅಮಲಿನಲ್ಲಿ ತರಬಾರದು? ಮನವಿದ್ದಲ್ಲಿ ಮಾರ್ಗವಿದ್ದೇ ಇದೆ. ಆ ಕಾರ್ಯಕ್ರಮಗಳಿಗೆ ಉಪಕರಣಗಳೇ ಬೇಕಾಗಿಲ್ಲ. ಹೀಗೆ ಮಾಡಿದ್ದಾದರೆ ಬೇಸಿಕ್ಕೇತರ ಸಾಲೆಗಳೂ ಬೇಸಿಕ್ ಸಾಲೆಗಳಂತೆ ಜನಾನುರಾಗವನ್ನು ವೆಗ್ಗಳವಾಗಿ ಪಡೆಯಬಲ್ಲವು. ನಮ್ಮ ರಾಷ್ಟ್ರದ ಆರ್ಥಿಕ ಪರಿಸ್ಥಿತಿಯು ಸುಧಾರಿಸುವ ವರೆಗೆ ನಾವು ದಾರೀ ಕಾಯುತ್ತ ಕುಳಿತರೆ, ನಮ್ಮ ದೇಶದ ಶೈಕ್ಷಣಿಕ ಪ್ರಗತಿಯು ನಾವು ನಿರೀಕ್ಷಿಸಿದಷ್ಟು ಬೇಗನೆ ಆಗಲಾರದೆಂದು ನಮ್ಮ ಖಂಡಿತ ಮತ.

ಜಯ–ಹಿಂದ

ಸಾಂಸ್ಕೃತಿಕ ಚಟುವಟಿಕೆಗಳು

ಲೇಖಕರು: ಶ್ರೀ ಶ್ರೀ. ಯು. ಶೀಲವಂತ, ಬಿ.ಎ.,ಎಂ.ಈಡಿ.,ಡಿ.ಪಿ.ಇಡಿ.,ಡಿ.ಬಿ.ಇ., ರಾ.ಭಾ. ವಿಶಾರದ

ಮಗುವಿನ ಸರ್ವಾಂಗೀಣ ವಿಕಾಸದಲ್ಲಿ ಶೀಲಸಂವರ್ಧನೆಗೆ ಅತ್ಯಂತ ಮಹತ್ವದ ಸ್ಥಾನವಿದೆ. ಮಗುವು ಸಮಾಜ ಜೀವಿ. ಅದು ಸಮಾಜದಲ್ಲಿ ಹುಟ್ಟಿ ಬೆಳೆದು ತನ್ನ ಜೀವನದ ಗುರಿಯನ್ನು ಸಾಧಿಸಬೇಕಾಗುವದು. ತನ್ನ ಮುಂದೆ ಇಟ್ಟುಕೊಂಡ ಗುರಿಯನ್ನು ಸಾಧಿಸುವ ಮಾರ್ಗವು ಸುಗಮವಾಗಬೇಕಾದರೆ ಅದು ಸಮಾಜಕ್ಕೆ ಹೊಂದಿಕೊಂಡು, ಸಮಾಜದ ಅಗುಹೋಗುಗಳಲ್ಲಿ ಸಮರಸವಾಗಿ, ಅವಶ್ಯ ಬಿದ್ದಲ್ಲಿ ಸಮಾಜದ ಹಿತಕ್ಕಾಗಿ ತನ್ನ ಹಿತವನ್ನು ಬದಿಗೊತ್ತಿ ಬಾಳುವ ಕಲೆಯನ್ನು ಅದು ಕಲಿಯಬೇಕು.

ಪ್ರಜಾಪ್ರಭುತ್ವ ರಾಜ್ಯಪದ್ಧತಿಗೆ ಮೇಲೆ ಹೇಳಿದ ರೀತಿಯಲ್ಲಿ ಜೀವನವನ್ನು ಸಾಗಿಸುವ ಕಲೆಯೇ ತಳಹದಿ. ಒಂದು ರಾಷ್ಟ್ರದ ನಾಗರಿಕರು ಈ ಕಲೆಯನ್ನು ಸಾಧಿಸಿದಷ್ಟೂ ಪ್ರಜಾಪ್ರಭುತ್ವ ರಾಜ್ಯ ಪದ್ಧತಿಯ ದಾರಿಯು ಸುಗಮವಾಗುವದು. ಸಮಾಜವಾದೀ ಸಮಾಜ ರಚನೆಯ ಜೀವಾಳವೂ ಅದೇ. ಅಂದ ಮೇಲೆ ತನ್ನ ರಾಷ್ಟ್ರದ ಭವಿತವ್ಯವನ್ನು ಸರಿಯಾದ ರೀತಿಯಲ್ಲಿ ರೂಪುಗೊಳಿಸುವ ಸಾಮರ್ಥ್ಯ ಪ್ರತಿಯೊಬ್ಬ ಮಗುವಿನಲ್ಲಿಯೂ ಬರಬೇಕಾದರೆ ಅದು ಈ ತೆರನಾದ ಜೀವನ ಕಲೆಯನ್ನು ಆದಷ್ಟು ಬೇಗ ಅಂದರೆ ತನ್ನ ವಿದ್ಯಾರ್ಥಿ ದೆಸೆಯಲ್ಲಿಯೇ ಅಳವಡಿಸಿಕೊಳ್ಳುವದು ಎಷ್ಟು ಮಹತ್ವದ್ದೆಂಬುದನ್ನು ಬೇರೆ ಹೇಳಬೇಕಾಗಿಲ್ಲ.

ಅಂತೆಯೇ ಜೀವನ ಶಿಕ್ಷಣದ ಎಲ್ಲ ಅಂಗಗಳಲ್ಲಿ ಸಾಮುದಾಯಿಕ ಜೀವನಕ್ಕೆ ಅಗ್ರಸ್ಥಾನವಿದೆ. ಮಗುವು ತನ್ನ ಒಡನಾಡಿಗಳೊಡನೆ ಜೊತೆಗೂಡಿಕೊಂಡು ಗುರುಗಳ ಮಾರ್ಗದರ್ಶನದಲ್ಲಿ ವಿವಿಧ ಸಾಮುದಾಯಿಕ ಚಟುವಟಿಕೆಗಳಲ್ಲಿ ತೊಡಗಿದಾಗ ಸುಖಮಯವಾದ ಸೌಹಾರ್ದಮಯವಾದ ಸಮಾಜ ಜೀವನಕ್ಕೆ ಪೂರಕವಾದ ಪದ್ಧತಿಗಳು ಯಾವವು, ಅದಕ್ಕೆ ಘಾತಕವಾದ ದುರ್ಗುಣಗಳು ಯಾವವು ಎಂಬುದನ್ನು ಪ್ರತ್ಯಕ್ಷಾನುಭವದ ರೀತಿಯಲ್ಲಿ ಅರಿತುಕೊಂಡು, ಆ ಅರಿವಿನ ಬೆಳಕಿನಲ್ಲಿ ಅದು ತನ್ನ ಶೀಲವನ್ನು ರೂಪಿಸಲು ಸಮರ್ಥವಾಗುವದು.

'ಸಾಮುದಾಯಿಕ ಜೀವನ'ವೆಂದ ಕೂಡಲೆ 'ಸಾಮುದಾಯಿಕ' ಈ ಶಬ್ದದಲ್ಲಿ ಹುದುಗಿದ ಅರ್ಥವನ್ನು ಗಮನಿಸುವದು ಅವಶ್ಯವಾಗಿದೆ. ಯಾವ ಕಾರ್ಯಕ್ರಮಗಳಲ್ಲಿ ಮಕ್ಕಳು ಒಂದೆಡೆಗೆ ಸೇರಿ ಆತ್ಮಾವಿಷ್ಕಾರದ ಮುಖಾಂತರ ತಮ್ಮಲ್ಲಿ ಸುಪ್ತವಾಗಿದ್ದ ಶಕ್ತಿಗಳ, ಗುಣಗಳ ಮತ್ತು ಕಲೆಗಳ ವಿಕಾಸಕ್ಕೆ ಸಾಕಷ್ಟು ಆಸ್ಪದವು ಸಿಕ್ಕುಸಮಾಜೋಪಯುಕ್ತವಾದ ರೀತಿಯಲ್ಲಿ ಅವರ ವ್ಯಕ್ತಿತ್ವ ವಿಕಾಸದ ಮಹತ್ತರವಾದ ಕಾರ್ಯವು ನಡೆಯಬಹುದೋ ಅಂಥ ಎಲ್ಲ ಕಾರ್ಯಕ್ರಮಗಳು ಸಾಮುದಾಯಿಕ ಜೀವನದಲ್ಲಿ ಸಮಾವೇಶವಾಗುತ್ತವೆ. ಈ ದೃಷ್ಟಿಯಿಂದ ನೋಡಿದಾಗ ಮಕ್ಕಳು ಹಾಗೂ ಶಿಕ್ಷಕರು ಇಡೀ ದಿವಸ ಒಂದೆಡೆಗೆ ಇದ್ದು ಒಂದೇ ಮನೆಯವರಂತೆ ಜೀವನ ಸಾಗಿಸಿದರೆ ಸಾಮುದಾಯಿಕ ಜೀವನದ ಎಲ್ಲ ಉದ್ದೇಶಗಳು ಸಫಲವಾಗುವದರಲ್ಲಿ ಸಂದೇಹವಿಲ್ಲ. ಆದರೆ ಸಾಮಾನ್ಯ ಶಾಲೆಗಳಲ್ಲಿ ಇದು ಸಾಧ್ಯವಿಲ್ಲದ್ದರಿಂದ ಸಾಮುದಾಯಿಕ ಜೀವನದ ತತ್ವ ಮತ್ತು ಗುರಿಗಳನ್ನು ಗಮನಿಸಿ ಬಹು ವಿಧವಾದ ಕಾರ್ಯಕ್ರಮಗಳನ್ನು ಆಗಾಗ್ಗೆ ಜರುಗಿಸುವದು ಅನಿವಾರ್ಯವಾಗಿದೆ.

ಸಾಮುದಾಯಿಕ ಜೀವನವು ಅನೇಕ ಕಾರ್ಯಕ್ರಮಗಳಿಂದ ಕೂಡಿದುದಾಗಿದೆ. ಅವೆಲ್ಲವುಗಳಲ್ಲಿ ಸಾಂಸ್ಕೃತಿಕ ಕಾರ್ಯಕ್ರಮಗಳೇ ಅತ್ಯಂತ ಮಹತ್ವವುಳ್ಳವುಗಳಾಗಿವೆ. ಅಂತೆಯೇ ಇವುಗಳನ್ನು ಸಾದಾ ಶಾಲೆಗಳಲ್ಲಿ ಸಹ ಜರುಗಿಸುವ ಪರಿಪಾಠವು ಇತ್ತೀಚೆಗೆ ಬಿದ್ದುಬಿಟ್ಟಿದೆ. ಮತ್ತು ಅದು ಸ್ತುತ್ಯವೂ ಆಗಿದೆ. ಈ ಕಾರ್ಯಕ್ರಮಗಳನ್ನು ಜರುಗಿಸುವದರ ಉದ್ದೇಶಗಳೇನು? ಅವುಗಳನ್ನು ಸಂಘಟಿಸುವ ಮತ್ತು ಸಾಗಿಸುವ ರೀತಿ ಯಾವುದು? ಅವುಗಳ ಮೂಲಕ ಮಕ್ಕಳ ವ್ಯಕ್ತಿತ್ವ ವಿಕಾಸವನ್ನು ಸಾಧಿಸುವ ಬಗೆ ಹೇಗೆ? ಇವೇ ಮುಂತಾದ ಪ್ರಶ್ನೆಗಳನ್ನು ಚರ್ಚಿಸುವದೇ ಈ ಬರಹದ ಮುಖ್ಯೋದ್ದೇಶವಾಗಿದೆ.

ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಸ್ಥೂಲಮಾನದಿಂದ ನಾಲ್ಕು ಭಾಗಗಳನ್ನು ಮಾಡುವುದುಂಟು. ಅವು ಯಾವವೆಂದರೆ (೧) ಸಾಮಾಜಿಕ (೨) ಧಾರ್ಮಿಕ (೩) ರಾಷ್ಟ್ರೀಯ ಮತ್ತು (೪) ಶೈಕ್ಷಣಿಕ. ಈ ವಿಭಾಗಗಳನ್ನು

ಕೇವಲ ಚರ್ಚೆಯ ಸೌಕರ್ಯಕ್ಕಾಗಿ ಮಾಡಲಾಗಿದೆ. ಅವು ಪರಸ್ಪರರಿಂದ ಸಂಪೂರ್ಣವಾಗಿ ಭಿನ್ನವಾಗಿರುವದಿಲ್ಲ. ಕೆಲವು ಕಾರ್ಯಕ್ರಮಗಳಲ್ಲಿ ಇವುಗಳ ಪೈಕಿ ಎರಡು ಅಥವಾ ಮೂರು ಸಮಾವೇಶವಾಗಬಹುದು. ಮಹಾ ಪುರುಷರ ಜಯಂತಿ ಅಥವಾ ಪುಣ್ಯತಿಥಿಗಳ ಆಚರಣೆಯಲ್ಲಿ ಧಾರ್ಮಿಕ ಅಂಶವು ಕಂಡು ಬರಬಹುದು. ಉದಾ: ಬುದ್ಧ ಜಯಂತಿ ಮತ್ತು ಬಸವೇಶ್ವರ ಜಯಂತಿ ಪಂಡಿತ ನೆಹರು ಅಥವಾ ಮಹಾತ್ಮಾ ಗಾಂಧೀಜಿಯವರ ಜಯಂತಿಗಳು ರಾಷ್ಟ್ರೀಯ ದಿನಗಳಾಗಬಹುದು. ಮತ್ತು ಆಳವಾಗಿ ವಿಚಾರ ಮಾಡಿದರೆ ಪ್ರತಿಯೊಂದು ಸಾಂಸ್ಕೃತಿಕ ಕಾರ್ಯ ಕ್ರಮದಲ್ಲಿಯೂ ಶೈಕ್ಷಣಿಕ ಅಂಶವು ಅಡಕವಾಗಿರಬಹುದು.

ಜೀವನ ಶಿಕ್ಷಣದ ಗುರಿಯು ಚಿರಂತನವಾದ ಮಾನ ವೀಯ ಮೂಲ್ಯಗಳ ಆಧಾರಭೂತವಾದ 'ಹೊಸ ಸಮಾಜ'ವನ್ನು ಕಟ್ಟುವದಕ್ಕಾಗಿ ಚಿಕ್ಕಮಕ್ಕಳ ಮೇಲೆ ನಿರಂತರವಾಗಿ ಯೋಗ್ಯ ಸಂಸ್ಕಾರಗಳನ್ನು ಮಾಡುತ್ತಿರು ವದೇ ಆಗಿದೆ. ಸಹಕಾರ, ಸಮಭಾವ, ಸಮಾನ ಸುಸಂಧಿ, ಶೋಷಣ ರಾಹಿತ್ಯ ಇವು ಬರಲಿರುವ 'ಹೊಸ ಸಮಾಜ'ದ ವೈಶಿಷ್ಟ್ಯಗಳಾಗಿವೆ. ಇವುಗಳ ಮಹತ್ವವನ್ನು ಮಕ್ಕಳಿಗೆ ತಿಳಿಸಿಹೇಳಿ ಅವು ಅವರ ಚಾರಿತ್ರ್ಯದ ಸ್ಥಿರವಾದ ಅಂಗ ಗಳಾಗುವಂತೆ ಮಾಡಲು ಸಾಂಸ್ಕೃತಿಕ ಚಟುವಟಿಕೆಗಳು ಬಲವಾದ ಸಾಧನಗಳು. ಅಂದ ಮೇಲೆ ಈ ಚಟುವಟಿಕೆ ಗಳನ್ನು ಸಾಗಿಸುವದರಲ್ಲಿ ಕೆಳಗೆ ಕಾಣಿಸಿದ ಉದ್ದೇಶಗಳ ಅಡಕವಾಗಿವೆ ಎನ್ನಬಹುದು.

೧) ಮಕ್ಕಳ ಮನಸ್ಸಿನಲ್ಲಿ ಭಾರತೀಯ ಸಂಸ್ಕೃ ತಿಯ ಬಗ್ಗೆ ಆದರ ಮತ್ತು ಅಭಿಮಾನಗಳನ್ನು ಹುಟ್ಟಿಸು ವದು.

೨) ಮಹಾಪುರುಷರು— ಅವರು ಯಾವದೇ ದೇಶದವರಾಗಿರಲಿ—ಉಜ್ವಲವಾದ ಸಂಸ್ಕೃತಿಯ ಪ್ರತೀಕ ಗಳಾಗಿರುವದರಿಂದ ಅವರ ಜೀವನದಿಂದ ಸ್ಫೂರ್ತಿ ಯನ್ನು ಪಡೆದು ಅದರಿಂದ ತಮ್ಮ ವ್ಯಕ್ತಿತ್ವವನ್ನು ರೂಪು ಗೊಳಿಸುವ ಉತ್ಕಟೇಚ್ಛೆಯನ್ನು ಅವರಲ್ಲಿ ಹುಟ್ಟಿಸುವದು.

೩) ತಮ್ಮ ರಾಷ್ಟ್ರದ ಬಗ್ಗೆ ಮಕ್ಕಳ ಮನಸ್ಸಿನಲ್ಲಿ ಪ್ರೀತಿ, ಆದರ ಮತ್ತು ಅಭಿಮಾನಗಳನ್ನು ಹುಟ್ಟಿಸುವದು ಮತ್ತು ಅದರ ಉಜ್ವಲವಾದ ಇತಿಹಾಸಕ್ಕೆ ತಕ್ಕಂತೆ ತಮ್ಮ ನಡವಳಿಕೆಯನ್ನು ಇಟ್ಟುಕೊಳ್ಳುವಂತೆ ಮಾಡುವದು.

೪) ಸಮಾಜದಲ್ಲಿ ತಾವು ಹೇಗೆ ನಡೆದುಕೊಳ್ಳ ಬೇಕೆಂಬುದನ್ನು ಮಕ್ಕಳಿಗೆ ಕಲಿಸುವದು, ವ್ಯಕ್ತಿಗಿಂತ ಸಮಾಜವು ಶ್ರೇಷ್ಠವಾದದ್ದು, ಮತ್ತು ವ್ಯಕ್ತಿಹಿತಕ್ಕಿಂತ ಸಮಾಜ ಹಿತವು ಶ್ರೇಷ್ಠವಾದದ್ದು ಎಂಬ ಮಾತನ್ನು ಅವರ ಮನಸ್ಸಿನ ಮೇಲೆ ಬಿಂಬಿಸುವದು. ಸಮಾಜ ಸೇವೆಯ ಅಭಿರುಚಿಯನ್ನು ಅವರಲ್ಲಿ ಹುಟ್ಟಿಸಿ ಪೌರ ನೀತಿಯ ಮತ್ತು ಪ್ರಜಾಪ್ರಭುತ್ವದ ಪಾಠಗಳನ್ನು ಕಲಿಸುವದು.

೫) ಸಾಮುದಾಯಿಕ ಹೊಣೆಗಾರಿಕೆಯಿಂದ ಕಾರ್ಯ ಮಾಡುತ್ತಿರುವಾಗ ಪರಸ್ಪರ ಸಹಕಾರ್ಯ, ಸೇವಾಭಾವನೆ, ಸೋದರಭಾವ ಮುಂತಾದ ಗುಣಗಳನ್ನು ಮಕ್ಕಳಲ್ಲಿ ಹುಟ್ಟಿಸುವದು.

೬) ತಮ್ಮ ಧರ್ಮ ಮತ್ತು ಸಂಸ್ಕೃತಿಗಳ ಜೊತೆಗೆ ಬೇರೆಯವರ ಧರ್ಮ ಮತ್ತು ಸಂಸ್ಕೃತಿಗಳಿಗಿನ ಉತ್ತಮಾಂಶಗಳನ್ನು ಕಂಡುಕೊಳ್ಳಲು ಹಚ್ಚುವದು; ಮತ್ತು ಬೇರೆ ಬೇರೆ ಧರ್ಮಗಳ ಮತ್ತು ಸಂಸ್ಕೃತಿಗಳ ತುಲನಾತ್ಮಕ ಅಭ್ಯಾಸದಿಂದ ಅವರಿಗೆ ಮಾನವೀಯತೆಯ ತಳಹದಿಯ ಮೇಲೆ ನಿಂತ ಮಾನವ ಧರ್ಮವನ್ನು ಬೋಧಿ ಸುವದು.

ಸಾಂಸ್ಕೃತಿಕ ಚಟುವಟಿಕೆಗಳ ಮುಖಾಂತರ ಮಕ್ಕ ಳಿಗೆ ಮೇಲಿಂದ ಮೇಲೆ ಒಂದಿಷ್ಟೆಗೆ ಸೇರುವ ಸಂದರ್ಭಗಳು ಸಿಕ್ಕುವದರಿಂದ ಅವರಿಗೆ ಸಮಾಜ ಜೀವನದ ಅನುಭವವು ಸಾಕಷ್ಟು ಲಭಿಸುವದು. ಅವರಿಗೆ ತಾವು ಸಮಾಜದಲ್ಲಿ ಹೇಗೆ ನಡೆದುಕೊಳ್ಳಬೇಕೆಂಬುದರ ಬಗ್ಗೆ ಪ್ರತ್ಯಕ್ಷ ಮತ್ತು ಅಪ್ರತ್ಯಕ್ಷ ರೀತಿಯಲ್ಲಿ ಜ್ಞಾನವಾಗುವದು. ಆದರೆ ಇಲ್ಲಿ ನೆನಪಿಡಬೇಕಾದ ಮಹತ್ವದ ಸಂಗತಿಯೆಂದರೆ ಇಂಥ ಕಾರ್ಯಕ್ರಮಗಳಲ್ಲಿ ಮಕ್ಕಳು ಉದಾಸೀನರಾಗಿ ಕೇವಲ ನಿಷ್ಕ್ರಿಯರಾದ ಪ್ರೇಕ್ಷಕರಾಗದೆ ಅವುಗಳಲ್ಲಿ ಪ್ರತ್ಯಕ್ಷ ಭಾಗವಹಿಸಬೇಕು; ಮತ್ತು ಶಿಕ್ಷಕರ ನೇತೃತ್ವದಲ್ಲಿ ಅವನ್ನು ಸಾಂಗಗೊಳಿಸಬೇಕು.

ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಜರುಗಿಸು ವಾಗ ಮುಖ್ಯವಾಗಿ ಮೂರು ಸಂಗತಿಗಳ ಕಡೆಗೆ ಲಕ್ಷ ಕೊಡಬೇಕಾಗುವದು. ೧) ಕಾರ್ಯಕ್ರಮದ ರೂಪುರೇಷೆ ಯನ್ನು ತಯಾರಿಸುವದು. ೨) ಅದನ್ನು ಕಾರ್ಯರೂಪಕ್ಕೆ ತರುವದು. ಮತ್ತು ೩) ಕಾರ್ಯಕ್ರಮ ಮುಗಿದ ನಂತರ ಅದರ ಗುಣದೋಷಗಳನ್ನು ವಿಮರ್ಶಿಸುವದ

ಇವೆಲ್ಲವುಗಳನ್ನು ನೆರವೇರಿಸಲು ಮಂತ್ರಿಮಂಡಳವನ್ನು ರಚಿಸಿ ಪ್ರತಿಯೊಬ್ಬ ಮಂತ್ರಿಗೆ ಕಾರ್ಯಕ್ರಮದ ಒಂದು ಅಂಗವನ್ನು ಒಪ್ಪಿಸಬೇಕು. ಮತ್ತು ಅವನ ಸಹಾಯಕ್ಕೆ ಒಂದು ಸಮಿತಿಯನ್ನು ಕೊಡಬೇಕು.

ಯಾವದೇ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಅನೇಕ ಚಟುವಟಿಕೆಗಳು ಸಮಾವೇಶವಾಗುತ್ತವೆ. ಉದಾ:— ಆಮಂತ್ರಣ ಪತ್ರಿಕೆಗಳನ್ನು ತಯಾರಿಸುವದು, ವರ್ತಮಾನ ಪತ್ರಗಳಲ್ಲಿ ವಿವರಗಳನ್ನು ಪ್ರಸಿದ್ಧಿಸುವದು, ಸಭಾಸ್ಥಾನದ ವ್ಯವಸ್ಥೆಯನ್ನು ಮಾಡುವದು, ಸಭಾಸ್ಥಾನವನ್ನು ಸಿಂಗರಿಸುವದು, ಬಂದ ಅತಿಥಿಗಳನ್ನು ಸ್ವಾಗತಿಸುವದು, ಹೊರಗಿನಿಂದ ಬಂದ ಅತಿಥಿಗಳ ಊಟ ಮತ್ತು ವಸತಿಯ ವ್ಯವಸ್ಥೆಯನ್ನು ಮಾಡುವದು, ಎಲ್ಲ ಕಾರ್ಯಕಲಾಪಗಳನ್ನು ವೇಳೆಗೆ ಸರಿಯಾಗಿ ಸಾಗಿಸುವದು, ಅತಿಥಿಗಳಿಗಾಗಿ ಹೂಮಾಲೆ ಮತ್ತು ಗುಚ್ಛಗಳನ್ನು ತಯಾರಿಸುವದು, ವೆಚ್ಚಮಾಡಿದ ಹಣದ ಲೆಕ್ಕಪತ್ರಗಳನ್ನು ಇಡುವದು, ಮನರಂಜನೆಯ ಕಾರ್ಯಕ್ರಮವನ್ನು ಜರುಗಿಸುವದು, ಕಾರ್ಯಕ್ರಮವು ಮುಗಿದ ನಂತರ ಅದರ ಸಮಗ್ರ ಪರಿಶೀಲನೆಯನ್ನು ಮಾಡಿ ಗುಣದೋಷಗಳನ್ನು ವಿವೇಚಿಸುವದು, ಇತ್ಯಾದಿ.

ಈ ಎಲ್ಲ ಚಟುವಟಿಕೆಗಳನ್ನು ಕ್ರಮಬದ್ಧವಾದ ಸುವ್ಯವಸ್ಥಿತವಾದ ರೀತಿಯಲ್ಲಿ ಸಾಗಿಸಲು ಕೆಳಗೆ ಕಾಣಿಸಿದಂತೆ ಸಮಿತಿಗಳನ್ನು ರಚಿಸಬಹುದು:— (೧) ಪ್ರಚಾರ ಸಮಿತಿ, (೨) ವ್ಯವಸ್ಥಾಪಕ ಸಮಿತಿ, (೩) ಶೃಂಗಾರ ಸಮಿತಿ, (೪) ಸ್ವಾಗತ ಸಮಿತಿ, (೫) ಸ್ವಯಂಸೇವಕರ ಸಮಿತಿ, (೬) ಆರ್ಥಿಕ ಸಮಿತಿ, (೭) ಮನೋರಂಜನ ಸಮಿತಿ, (೮) ಪರಿಶೀಲನಾ ಸಮಿತಿ. ಕಾರ್ಯಕ್ರಮದ ಸ್ವರೂಪ ಮತ್ತು ಅದರ ವ್ಯಾಪಕತೆಗೆ ತಕ್ಕಂತೆ ಸಮಿತಿಗಳ ಸಂಖ್ಯೆಯನ್ನು ಹೆಚ್ಚು ಕಡಿಮೆ ಮಾಡಬಹುದು.

ಆದರೆ ಈ ಸಮಿತಿಗಳನ್ನು ರಚಿಸುವಾಗ ಬಾಲಕರ ಒಲವು ಹಾಗೂ ಅಭಿರುಚಿಗಳನ್ನು ಗಮನಿಸಬೇಕು. ಮತದಾನ ಪದ್ಧತಿಯಿಂದ ಸಮಿತಿಗಳ ಸದಸ್ಯರನ್ನು ಆರಿಸಿದರೂ ಯೋಗ್ಯ ಜವಾಬದಾರಿಗಳನ್ನು ಆರಿಸುವಲ್ಲಿ ಸೂಕ್ತ ಸಲಹೆ ಸೂಚನೆಗಳನ್ನು ಶಿಕ್ಷಕರು ಕೊಡಬಹುದು. ಬಾಲಕರಲ್ಲಿದ್ದ ಕಲಾಭಿರುಚಿ, ನಯನಿಪುಣತೆ, ಚುರುಕುಬುದ್ಧಿ, ವ್ಯವಹಾರ ಕುಶಲತೆ, ಚಿತ್ರಕಲೆ ಮತ್ತು ಏಕಾಗ್ರತ್ಮಕ ಬುದ್ಧಿ ಇವುಗಳಿಗೆ ತಕ್ಕಂತೆ ಅವರನ್ನು ಆಯಾ ಸಮಿತಿಗಳಲ್ಲಿ ಸೇರಿಸಬೇಕು. ಒಬ್ಬ ಬಾಲಕನು ಯಾವಾಗಲೂ ಒಂದೇ ಸಮಿತಿಯ ಸದಸ್ಯನಾಗಿ ಕಾರ್ಯಮಾಡಬೇಕೆಂದು ಇದರ ಅರ್ಥವಲ್ಲ. ಆದರೆ ನಾಚುಬುರುಕ ಸ್ವಭಾವದ ಮತ್ತು ಸಮಾಜದಲ್ಲಿ ಮುಂದೆ ಬಂದು ಕಾರ್ಯ ಮಾಡಲು ಹಿಂಜರಿಯುವ ಬಾಲಕರನ್ನು ಪ್ರೋತ್ಸಾಹಿಸಲು ಮೊದ ಮೊದಲು ಅವರ ಅಭಿರುಚಿಗೆ ತಕ್ಕಂತೆ ಕಾರ್ಯವನ್ನು ಒಪ್ಪಿಸುವದು ವಿಹಿತವು. ಬರುಬರುತ್ತ ಅವರಲ್ಲಿ ಧೈರ್ಯ, ಆತ್ಮವಿಶ್ವಾಸಗಳು ಉಂಟಾದಂತೆ ಅವರಿಗೆ ಹೆಚ್ಚು ಹೆಚ್ಚು ಹೊಣೆಗಾರಿಕೆಯ ಕೆಲಸಗಳನ್ನು ಒಪ್ಪಿಸಬೇಕು; ಅಪರಿಚಿತ ವ್ಯಕ್ತಿಗಳ ಕೂಡ ಸಂಪರ್ಕ ಬೆಳೆಯಿಸುವ ಸಂದರ್ಭಗಳನ್ನು ಒದಗಿಸಬೇಕು. ಆದರೆ ಎಲ್ಲಕ್ಕೂ ಮುಖ್ಯ ಮಾತೆಂದರೆ ಪ್ರತಿಯೊಬ್ಬ ಮಗುವು ಆದರ್ಶ ನಾಗರಿಕನಾಗಬೇಕೆಂದು ನಾವು ಬಯಸುವದರಿಂದ ಶಾಲೆಗೆ ಬರುವ ಪ್ರತಿಯೊಬ್ಬ ಮಗುವಿಗೆ ಅದರ ಶಿಕ್ಷಣ ಮುಗಿಯುವದರೊಳಗೆ ಇಂಥ ಹಲವು ಕಾರ್ಯಕ್ರಮಗಳಲ್ಲಿಯಾದರೂ ಹೊಣೆಗಾರಿಕೆಯ ಪಾತ್ರ ವಹಿಸಲು ಅನುವು ಮಾಡಿಕೊಡಬೇಕು. ಪ್ರತಿಯೊಂದು ಮಗುವು ಹಿರಿಯರೊಡನೆ ವಿನಯಾದರದಿಂದ ನಡೆದುಕೊಳ್ಳಲಿಕ್ಕೂ ತನ್ನ ಪಾಲಿನ ಕೆಲಸವನ್ನು ಪ್ರಾಮಾಣಿಕತನದಿಂದ ಪಾಗೂ ಜೊಕ್ಕಟತನದಿಂದ ಮಾಡಲಿಕ್ಕೂ, ಸಾರ್ವಜನಿಕ ಸಭೆ–ಸಮ್ಮೇಲನಗಳಲ್ಲಿ ಶಿಸ್ತಿನಿಂದ ವರ್ತಿಸಲಿಕ್ಕೂ, ಮುಂದಾಳುವಿನ ಆಜ್ಞೆಗಳನ್ನು ಪಾಲಿಸಲಿಕ್ಕೂ, ಎಲ್ಲರೊಡನೆ ಉತ್ಸಾಹದಿಂದ ಸಹಕರಿಸಲಿಕ್ಕೂ, ವಯನಾದ ಪಾಸ್ಯ ವಿನೋದಗಳಿಂದ ಸಾತ್ವಿಕ ಆನಂದವನ್ನು ಪಡೆಯಲಿಕ್ಕೂ, ಸಾರ್ವಜನಿಕ ಹಣವನ್ನು ಪ್ರಾಮಾಣಿಕತನದಿಂದ ಬಳಸಲಿಕ್ಕೂ, ಹೆರವರಿಂದ ತಂದ ಸಾಮಾನುಗಳನ್ನು ಸರಿಯಾಗಿ ಉಪಯೋಗಿಸಿ ಕಾರ್ಯಕ್ರಮ ಮುಗಿದೊಡನೆ ಅವನ್ನು ಕೂಡಲೆ ತಿರುಗಿ ಮುಟ್ಟಿಸಲೂ, ನಿರ್ವಿಕಾರ ಮತ್ತು ಸಮತೋಲ ಮನಸ್ಸಿನಿಂದ ಕಾರ್ಯದ ಪರಿಶೀಲನೆ ಮಾಡಲಿಕ್ಕೂ ಕಲಿತುಕೊಳ್ಳಬೇಕು. ಪ್ರತಿಯೊಂದು ಕಾರ್ಯವು ನೂರಕ್ಕೆ ನೂರರಷ್ಟು ಯಶಸ್ವಿಯಾಗಬೇಕೆಂಬ ಹಂಬಲದಿಂದ ಸಮರ್ಥರೆಂದು ಕಂಡು ಬಂದ ಹಲವೇ ಹಲವು ಬಾಲಕರ ಮೇಲೆ ಪುನಃ ಪುನಃ ಹೊಣೆಗಾರಿಕೆಯನ್ನು ಹೊರಿಸುವದು ಸರ್ವಥಾ ತ್ಯಾಜ್ಯವಾದದ್ದು. ಇದರಿಂದ ಅವರು ಆದರ್ಶ ನಾಗರಿಕನ ಗುಣಗಳನ್ನು ಅಳವಡಿಸಿಕೊಳ್ಳುವದರ ಜೊತೆಗೆ ಮುಂದಾಳುಗಳಾಗುವ ಅರ್ಹತೆಯು ತಮ್ಮಲ್ಲಿಯೇ ಅದೆ ಎಂಬ

ಭಾವನೆಯು ಅವರಲ್ಲಿ ಬಳಿದುಬಂದು ಅವರು 'ಜಂಭದ ಕೋಳಿ'ಗಳಾಗಿ ಪೆರೆಯುವ ಸಂಭವವೂ ಇದೆ. ಹಾಗೆಯೇ ಹೊಣೆಗಾರಿಕೆಯ ಪಾತ್ರವನ್ನು ವಹಿಸಲು ಆಸ್ಪದವು ಸಿಗದೆ ಇದ್ದ ಬಾಲಕರಿಗೆ ತಮ್ಮಲ್ಲಿಯ ಸುಪ್ತ ಶಕ್ತಿಗಳ ಅರಿವು ಆಗದೆ ಇರುವದರಿಂದ ಅವರು ಯಾವಾಗಲೂ ಹುದುಗಿ ಕೊಂಡು ಹೋಗುವ ಸ್ವಭಾವದವರಾಗಬಹುದು. ಮಗುವಿನ ಸಮತೋಲ ವಿಕಾಸದ ದೃಷ್ಟಿಯಿಂದ ಇವೆರಡೂ ಸಂಗತಿ ಗಳು ಅನಿಷ್ಟವಾದವುಗಳೇ. ಪ್ರತಿಯೊಂದು ಮಗುವೂ ಪ್ರಸಂಗಕ್ಕೆ ತಕ್ಕಂತೆ ಮುಂದಾಳುವಾಗಲು ಇಲ್ಲವೆ ಅನುಯಾಯಿಯಾಗಲು ಕಲಿತುಕೊಳ್ಳಬೇಕು. ಹಲವು ಸಲ ಎರಡೂ ಪಾತ್ರಗಳನ್ನು ಏಕಕಾಲಕ್ಕೆ ವಹಿಸುವ ಪ್ರಸಂಗ ಬಂದರೂ ಬರಬಹುದು. **ಪ್ರಜಾಪ್ರಭುತ್ವ ಪದ್ಧತಿಯ ಯಶಸ್ಸು ಸಮರ್ಥ ಮುಂದಾಳುಗಳಷ್ಟೇ, ಪ್ರಾಮಾಣಿಕ ಮತ್ತು ನಿಷ್ಠಾವಂತ ಅನುಯಾಯಿಗಳನ್ನೂ ಅವಲಂಬಿಸಿದೆ** ಎಂಬ ಮಾತು ನಿರ್ವಿವಾದವಾದದ್ದು. ಕಾರ್ಯಕುಶಲತೆಯ ಜೊತೆಗೆ ಇಬ್ಬರ ಹೃದಯಗಳೂ ದೇಶಪ್ರೇಮ, ನಿಃಸ್ವಾರ್ಥ ಸೇವಾಭಾವಗಳಿಂದ ಓತ-ಪ್ರೋತವಾಗಿರಬೇಕು.

ಒಟ್ಟಿನಲ್ಲಿ ಹೇಳುವದಾದರೆ ಜೀವನ ಶಿಕ್ಷಣದ ಅತ್ಯಂತ ಮಹತ್ವದ ಅಂಗವಾದ **ಸಾಂಸ್ಕೃತಿಕ ಚಟುವಟಿಕೆ**ಗಳು ಮಕ್ಕಳನ್ನು **ಸುಸಂಸ್ಕೃತರನ್ನಾಗಿ** ಮಾಡುವ ಬಲ ವಾದ ಸಾಧನಗಳು. ಚುರುಕು ಬುದ್ಧಿಯ ಶಿಕ್ಷಕನು ತನ್ನ ಕಲ್ಪನಾ ಶಕ್ತಿ ಹಾಗೂ ವಿಚಾರ ಶಕ್ತಿಗಳ ಬಲದಿಂದ ಈ ಚಟುವಟಿಕೆಗಳನ್ನು ಅಸಂಖ್ಯ ರೀತಿಯಲ್ಲಿ ಉಪಯೋಗಿಸಿ ಕೊಂಡು ಅವುಗಳ ಸಂಘಟನೆ ಮತ್ತು ಕಾರ್ಯಾಚರಣೆಯಲ್ಲಿ ಮಕ್ಕಳಿಗೆ ಸಕ್ರಿಯವಾಗಿ ಭಾಗವಹಿಸಲು ಅನುವು ಮಾಡಿ ಕೊಟ್ಟು ಅವರು ಉಜ್ವಲವಾದ ಭಾರತೀಯ ಸಂಸ್ಕೃತಿಯ ಮೂರ್ತಿಮಂತ ಪ್ರತೀಕಗಳಾಗುವಂತೆ ಮಾಡಬಲ್ಲನು. ಮಕ್ಕಳ ಬೌದ್ಧಿಕ ಬೆಳವಣಿಗೆಗೆ ಅಡ್ಡಿಯಾಗುವಷ್ಟು ಸಾಂಸ್ಕೃತಿಕ ಚಟುವಟಿಕೆಗಳ ಸಂಖ್ಯೆಯು ಇತ್ತೀಚೆಗೆ ಬೆಳೆದು ಬಿಟ್ಟಿದೆ ಎಂಬ ಕೂಗು ಎಲ್ಲಿಡೆಗೆ ಕೇಳಬರುತ್ತಿದೆ. ಇದಕ್ಕೆ ಒಂದು ಕಾರಣವೆಂದರೆ ಎಲ್ಲ ಸಾಂಸ್ಕೃತಿಕ ಚಟುವಟಿಕೆಗಳು ಒಂದು ತೆರನಾದ ಯಾಂತ್ರಿಕ ರೀತಿಯಲ್ಲಿ ನಡೆಯುತ್ತಿವೆ. ಅವು ಹೆಚ್ಚಾಗಿ ಅಧಿಕಾರಿಗಳ ಹುಕುಮು ಗಳನ್ನು 'ಬಿಡಲಾರದ ಕರ್ಮ' ಎಂಬ ಭಾವನೆಯಿಂದ ಪಾಲಿಸುವದಕ್ಕಾಗಿಯೇ ಸಾಂಗಗೊಳಿಸಲ್ಪಡುತ್ತವೆಯೇ ಹೊರತು ಮಕ್ಕಳ ನಡೆನುಡಿಗಳ ಮೇಲೆ ಸಮಾಜೋಪ ಯೋಗೀ ಸಂಸ್ಕಾರಗಳನ್ನು ಮಾಡುವದಕ್ಕಾಗಿ ಅಲ್ಲ. ಎರಡನೆಯ ಕಾರಣವೆಂದರೆ ಅನೇಕ ಪುಸ್ತಕಗಳನ್ನು ಓದಿ ಸ್ಮರಣ ಶಕ್ತಿಯ ಬಲದಿಂದ ಅಸಂಖ್ಯ ಸಂಗತಿಗಳ ಸಂಗ್ರಹ ವನ್ನು ಮೆದುಳಿನಲ್ಲಿ ಮಾಡಿಕೊಳ್ಳುವದೇ ಬೌದ್ಧಿಕ ವಿಕಾಸದ ಹೆಗ್ಗುರುತು ಎಂಬ ತಪ್ಪು ಕಲ್ಪನೆಯು ಇನ್ನೂ ನಮ್ಮಲ್ಲನೇಕರ ತಲೆಯಲ್ಲಿ ಮನೆಮಾಡಿಕೊಂಡಿದೆ. ಆದರೆ ನಮ್ಮ ಮಕ್ಕಳು ಸಂಗ್ರಹಿಸಬೇಕಾದುದು ಕೇವಲ ಪುಸ್ತಕ ಗಳಿಂದ ಬರುವ ಜ್ಞಾನವನ್ನಲ್ಲ. ಅದರ ಜೊತೆಗೆ ಅವರು ಲೋಕ ವ್ಯವಹಾರ ಜ್ಞಾನವನ್ನೂ ಸಂಗ್ರಹಿಸಬೇಕು. ಸಮಾಜದ ಇತರ ಜೀವಿಗಳೊಡನೆ ನಡೆಯುವ ನಮ್ಮ ನಿರಂತರವಾದ ಒಡನಾಟದಿಂದ ನಾವು ಹೊಂದುವ ಅಗಣಿತ ಹಾಗೂ ಅಮೂಲ್ಯವಾದ ಅನುಭವಗಳಿಂದಲೇ ಈ ಜ್ಞಾನವನ್ನು ಸಂಗ್ರಹಿಸುವದು ಸಾಧ್ಯವು. ಪುಸ್ತಕೀಯ ಜ್ಞಾನವು ಲೋಕ ವ್ಯವಹಾರ ಜ್ಞಾನಕ್ಕೆ ಪೂರಕವಾಗ ಬೇಕು. ಇವೆರಡರ ಸಮುಚಿತವಾದ ಸಮನ್ವಯವೇ ಸಂಸ್ಕೃತಿ ಎಂದರೆ ತಪ್ಪಾಗದು. ಶ್ರೀ ಡಿ. ವ್ಹಿ. ಗುಂಡಪ್ಪ ನವರು ಹೇಳಿದ ಮಾತುಗಳಿಂದ ನಿಜವಾದ ಸಂಸ್ಕೃತಿಯು-ಭಾರತೀಯ ಸಂಸ್ಕೃತಿಯು-ತಿರುಳು ಇನ್ನಷ್ಟು ಸ್ಪಷ್ಟವಾಗು ವದು. ತಮ್ಮದೇ ಆದ ಅನನುಕರಣೀಯವಾದ ಶೈಲಿ ಯಲ್ಲಿ ಅವರು ಸಂಸ್ಕೃತಿಯ ಲಕ್ಷಣಗಳನ್ನು ಹೀಗೆ ವಿವರಿಸಿ ದ್ದಾರೆ. "ಸಂಸ್ಕೃತಿಯೆಂಬುದು ಬರಿಯ ವಿದ್ಯೆಯಲ್ಲ; ಅದು ವಿದ್ಯಾಕುಸುಮಪರಾಗ. ಅದು ಸಾಹಿತ್ಯ ಪರಾಮರ್ಶೆಯ ಮತ್ತು ಜೀವಾನುಭವ ವಿವೇಕದ ದಾಂಪತ್ಯದಿಂದ ಜನಿಸುವ ಒಂದಾನೊಂದು ಲೋಕಸಮಾಧಾನಕಾರಕವಾದ ಶೀಲಸೌಭಾಗ್ಯ. .... ನಮ್ಮ ಜೀವನವನ್ನು ಸಾಧುವನ್ನಾಗಿ ಮಾಡಿಕೊಳ್ಳುವ ವಿಧಾನವೇ ಸಂಸ್ಕೃತಿ. ಲೋಕದೊಡನೆ ನಮಗಾಗುವ ನಾನಾ ಸಂಪರ್ಕಗಳಲ್ಲಿ ನಾವು ಸಂಪಾದಿಸುವ ಔಚಿತ್ಯವೇ ಸಂಸ್ಕೃತಿ. ನಮ್ಮ ಲೋಕ ಸಂಬಂಧಗಳಲ್ಲಿ ಒಂದು ಇಂಪು ಬೇಡವೆ? ಆ ನಡೆನುಡಿಗಳ ಸೊಗಸೇ ಸಂಸ್ಕೃತಿ. ಅದು ಭಾವಸೌಂದರ್ಯ ಮತ್ತು ಶೀಲ ಸೌಂದರ್ಯ. .... ಯಾವ ಒಂದು ಲೋಕ ವರ್ತನೆಯ ಸೌಂದರ್ಯವನ್ನು ಸಾತ್ವಿಕತೆ, ಸಭ್ಯತೆ, ಸೌಜನ್ಯ, ವಿನಯ, ಮರ್ಯಾದೆ, ದೊಡ್ಡತನ ಎಂದು ಕರೆಯುವದು ನಮ್ಮಲ್ಲಿ ಹಿಂದಿನಿಂದ ವಾಡಿಕೆಯಾಗಿ ಬಂದಿದೆಯೋ ಅದೇ ಸಂಸ್ಕೃತಿಯ ಜೀವಾಳ. .... ವಿದ್ಯೆ, ವಿನಯ, ಚಮತ್ಕಾರ, ಧೈರ್ಯ, ಕಾರುಣ್ಯ, ಹಾಸ್ಯ, ಶೌರ್ಯ, ಸಾಹಸ,

ಗಾಂಭೀರ್ಯ— ಈ ನಾನಾ ಗುಣಗಳು ಸೇರಿದ್ದ ಕಡೆ ಅವೆಲ್ಲವುಗಳ ಸಮ್ಮೇಳನದ ಫಲಿತಾಂಶವಾಗಿ ಹತ್ತನೆಯ ದೊಂದು 'ಶೀಲಸೌಂದರ್ಯ' ತೋರುತ್ತದೆ..... ಅದು (ಸಂಸ್ಕೃತಿ) ಮನೋಬುದ್ಧಿ ಪರಿಪಾಕದ ಫಲವಾಗಿ ಆತ್ಮವು ತನ್ನೊಳಗಿಂದ ಸರ್ವದಾ ಹೊರಸೂಸುತ್ತಿರುವ ಒಂದು ದಿವ್ಯಕಾಂತಿ ಮಾಧುರ್ಯ.'' ಇಲ್ಲಿ ಸಂಸ್ಕೃತಿಯ ವೈಶಿಷ್ಟ್ಯ ಗಳನ್ನು ಸೊಗಸಾಗಿ, ಸುರಸ್ಯವಾಗಿ, ಸಂಗ್ರಹವಾಗಿ ವಿವರಿಸಲಾಗಿದೆ.

ಸಾಂಸ್ಕೃತಿಕ ಚಟುವಟಿಕೆಗಳ ಮೂಲಕ ನಮ್ಮ ಬಾಲಕ ಬಾಲಿಕೆಯರು ಇಂಥ ಸಂಸ್ಕೃತಿಗಳನ್ನು ಪೋಷಿಸಿ ಬೆಳೆಸಿದಾಗಲೇ ಅವನ್ನು ಅಧ್ಯಾಪಕ ಪತ್ರಿಕೆಯಲ್ಲಿ ಸೇರಿಸಿದ್ದರಿಂದ ಸಾರ್ಥಕವಾಗುವದು ಎಂದು ಹೇಳಬೇಕೆ ತಾತ್ಪರ್ಯವೇನು?

ನಾನು ಕಂಡ ಚಿಕ್ಕದೊಂದು ಆದರ್ಶ ಕನ್ನಡ ಶಾಲೆ

ಹಿಂಚಕಡ

ಲೇಖಕರು:— ಶ್ರೀ ಸ. ಪ. ಗಾಂವಕರ

ಪ್ರಾಥಮಿಕ ಶಾಲಾ ಶಿಕ್ಷಣ ಪ್ರಸಂಗವನ್ನು ಕಳೆದು ಹಂ ವರುಷಗಳ ಕಾಲದಿಂದಲೂ ನೋಡುತ್ತ ಬಂದಿರುವೆನು. ನಾನೆಲ್ಲಿ ಹೋದರೂ ನಾಡಿಯಲ್ಲಿ ಕಂಡ ಶಾಲೆಗಳಿಗೆ ಹೋಗಿ ನಮ್ಮಕಡೆಗೆ ನಾಲ್ಕು ಮಾತು ಹೇಳುವುದು ನನ್ನ ಅಭ್ಯಾಸ. ಅಂಕೋಲೆ ತಾಲೂಕಿನಲ್ಲಾದ ರಾಜಕೀಯ ಆಂದೋಲನದಲ್ಲಿ ಪೆಸರಾಂತ ಹಳ್ಳಿ ಹಿಂಚಕಡ. ಮೂರು ವರುಷಗಳ ಹಿಂದೆ ಆ ಊರ ಶಾಲೆಯ ವಾರ್ಷಿಕೋತ್ಸವಕ್ಕೆ ನಾನು ಹೋಗಿದ್ದೆ. ಆಗ ಜಿಲ್ಲೆಯ ಶಿಕ್ಷಣದ ಮುಖ್ಯ ಅಧಿಕಾರಿಗಳೂ ಉಪಸ್ಥಿತರಿದ್ದರು. ಅಂದು ಅಲ್ಲಿ ಜರುಗಿದ ಎಲ್ಲ ಬಗೆಯ ಚಟುವಟಿಕೆಗಳನ್ನು ನೋಡಿ ನಾವು ಆನಂದಪಟ್ಟೆವು. ಆಗ ಶಾಲೆಯಿದ್ದ ಸ್ಥಳವಾ ನರೋ ಗಿದ–ಮುರ, ಕಲ್ಲು–ಮುಳ್ಳು. ತಗ್ಗು–ದಿನ್ನೆ ಬಾಗು ಎಲ್ಲಿಯೂ ಸಮಪಾತಳಿ ಇಲ್ಲದ ಇಳಿಜಾರಾಗಿದ್ದ ಪ್ರದೇಶ ವಾಗಿತ್ತು. ಈ ಸಾರಿ ಕೂಡಾ ಶಾಲೆಯ ವಾರ್ಷಿಕೋತ್ಸವಕ್ಕೆ ಜಿಲ್ಲೆಯ ಮುಖ್ಯ ಶಿಕ್ಷಣಾಧಿಕಾರಿಗಳನ್ನು ಬರಮಾಡಿಕೊಂಡಿದ್ದರು. ತಾಲೂಕಿನ ಬಿ. ಡಿ. ಅಧಿಕಾರಿಗಳು ಅದೇ ಕಾಲಕ್ಕೆ ಈ ಶಾಲೆಯಲ್ಲಿ ವಿಶ್ವಕರ ತಿಬಿರವನ್ನು ಏರ್ಪಡಿಸಿದ್ದರು. ಆದ್ದರಿಂದ ಜಿಲ್ಲೆಯ ಒಕ್ಕಲತನದ ಮುಖ್ಯ ಅಧಿಕಾರಿಗಳು ಕೂಡಾ ಉಪಸ್ಥಿತರಿದ್ದರು. ಹಿಂದೆ ಪರ್ವೋನಿಯ ಸಂಚಾಲಕರಾದ ಶ್ರೀ ಹೊದಿಕೆಯವರೂ ಬಂದಿದ್ದರು. ಅವರ ಜೊತೆಗೆ ನಾನೂ ಕೂಡಾ ಇದ್ದೆ.

ನಾನು ನೋಡಿದ ಈ ಶಾಲೆಯು ಅಂದೀ ನುಕ್ಕು ಮುತ್ತಲಿನ ನೋಟ ಮುಕ್ತು ಶಾಲೆಯ ಇಂದಿನ ಸುತ್ತಲಿನ ನೋಟ ತಾಳಿ ನೋಡಿದಲ್ಲಿ ಕಲ್ಪನೆಗೆ ಬಾರದಂತೆ ಬಲು ಚೆಂದವಾಗಿ ನಮೂರ್ ಬದಲಾಗಿ ಹೋಗಿದೆ. ಇದಕ್ಕೆಲ್ಲ ಮುಖ್ಯವಾಗಿ ಮಕ್ಕಳ, ಶಿಕ್ಷಕರ ಮುತ್ತು ಊರಿನವರ ಶ್ರಮವೇ ಕಾರಣವಾಗಿದೆ.

ಶಾಲೆಯ ಒಳಹೊರಗಿನವರೂ ಒಗೆಬಗೆಯ ಚಿಟ್ಟು ವಟಿಕೆಗಳ ಪಾತಿಯಿಂದಲೂ ಸೊಬಗಾಗಿರುವ ಹಾಗೆ ಸ್ವತಃ ತಯಾರಿಸಿದ ಸಾಮಗ್ರಿ ಹೊರ್ತು ಉಪಕರಣಗಳಿಂದಲೂ, ವಿದ್ಯಾ ಸ್ವಚ್ಛತೆಗಳಿಂದಲೂ ಆಕರ್ಷಕವಾಗಿ ಅವರಣೀಯವಾಗಿತ್ತು. ಪರಿವೀಕ್ಷಣೆಗೆ ಬಂದ ಅಧಿಕಾರಿಗಳು ಮಾಡಿದ ಅಭಿಪ್ರಾಯವೂ ಇದೇ ಶಾಲೆಯು ಇಡೀ ತಾಲ್ಲೂಕಿನಲ್ಲಿ ಕ್ರಮಿತ್ವಾಗಿಯೂ ಕಾರ್ಯಾಚರಣೆಯಲ್ಲಿ ಕ್ರಮಿತ್ವಾಗಿ ಕಾಯ್ದುಕೊಂಡಿರುವ ಅಪರೂಪದ ಜೀವನ ಶಿಕ್ಷಣ ಶಾಲೆ ಎಂದು ಮುಕ್ತ ಕಂಠದಿಂದ ಹೊಗಳಿದರು. ನಾವೆಂತೂ ಇನ್ನೆ ಜೀವನದಲ್ಲಿ ಇಂತಹದೊಂದು ಶಾಲೆ ಕಂಡಿಲ್ಲ.

ಇಂತಹದೊಂದು ಶಾಲೆಯು ನಾಡಿಗೆ ಹರಿಯು ಸಂಕ್ಷಿಪ್ತ ನಿವರಣೆಯನ್ನು ಕೊಟ್ಟಲ್ಲಿ ಇತರ ಶಾಲೆಗಳಿಗೂ ಮಾರ್ಗದರ್ಶನವಾದೀತೆಂದು ತಿಳಿದು ಅದನ್ನು ಸ್ಥಲಪರಿಚಯ ಕೊಡುತ್ತಿದ್ದೇನೆ.

ಈ ಸಾಲೆ ಆರಂಭವಾಗಿ ೩೭ ವರ್ಷಗಳಾದವು. ಸುಮಾರು ೩೧ ವರ್ಷಗಳ ವರೆಗೆ ಈಗಿನ ಪ್ರಾಥಮಿಕ ಸಾಲೆ ಇದ್ದು ಈಗ ಈ ಶಿಕ್ಷಕರ ಪ್ರಯತ್ನದಿಂದ ಪೂರ್ಣ ಪ್ರಾಥಮಿಕ ಸಾಲೆ ಆಗಿದೆ. ಮೊದಲು ಇಬ್ಬರು ಶಿಕ್ಷಕರು ಇದ್ದರು; ಈಗ ವಿದ್ಯಾರ್ಥಿಗಳ ಸಂಖ್ಯೆ ೧೬೦ಕ್ಕೆ ಏರಿದ್ದರಿಂದ ೪ ಮಂದಿ ಶಿಕ್ಷಕರಾಗಿರುವರು. ಈ ಸಾಲೆಯಲ್ಲಿ ಕೆಲವು ವೈಕ್ಷಣಿಕ ಚಟುವಟಿಕೆಗಳು ನಡೆಯುತ್ತಿದ್ದು ಅವುಗಳನ್ನು ನಡೆಸುವ ರೀತಿ ಹಾಗೂ ಅವುಗಳಿಂದ ಮಕ್ಕಳ ಕಲ್ಯಾಣವಾಗುವ ಬಗೆ ಇವುಗಳನ್ನು ವಿವರಿಸಲಾಗಿದೆ.

ಈ ಸಾಲೆಯಲ್ಲಿ ನಡೆಯುವ ಚಟುವಟಿಕೆಗಳು:—

೧) ಮೂಲೋದ್ಯೋಗ. ೨) ಸಹಕಾರಿ ಅಂಗಡಿ. ೩) ವಾಚನಾಲಯ. ೪) ಕೈಬರೆಹದ ಪತ್ರಿಕೆಗಳು. ೫) ವಸ್ತುಸಂಗ್ರಹಾಲಯ. ೬) ರೋಗಿಗಳಿಗೆ ಔಷಧೋಪಚಾರ. ೭) ಶಿಸ್ತು ಸ್ವಚ್ಛತೆಯ ಪರೀಕ್ಷೆ. ೮) ಗುಂಪುವಾರ ಸ್ಪರ್ಧೆ. ೯) ಸುದ್ದಿ ಸಂಗ್ರಹ. ೧೦) ವೈಕ್ಷಣಿಕ ಉಪಕರಣಗಳನ್ನು ತಯಾರಿಸುವದು. ೧೧) ಶಾರೀರಿಕ ಶಿಕ್ಷಣ. ೧೨) ಶ್ರಮದಾನ. ೧೩) ಫ್ಲೇಮನಿಫಿ ಸಂಗ್ರಹ ಹಾಗೂ ಬಳಕೆ. ೧೪) ಪ್ರವಾಸಗಳು. ೧೫) ಹಬ್ಬಗಳ ಆಚರಣೆ. ೧೬) ಚುರ್ಕಾ ಕೂಟ. ೧೭) ಅವ್ಯತವಾಣಿಗಳ ಸಂಗ್ರಹ ಮೊದಲಾದವುಗಳು.

[ಸೂಚನೆ:— ಅನುಭವಿಸ್ತಾರವಾದ ವರದಿಯು ಮಹತ್ವದ ಹಾಗೂ ಅನುಕರಣೀಯವಾದ ಸಂಗತಿಗಳನ್ನಷ್ಟೇ ಸಂಗ್ರಹಿಸಿ ಸ್ವಲ್ಪವರಲ್ಲಿ ಬರೆಯಲಾಗಿದೆ.]

೧. ಮೂಲೋದ್ಯೋಗ:— ೧) ಸ್ಥಾಲ ಬೋರ್ಡಿನಿಂದ ಸಹಾಯಧನವನ್ನು ಪಡೆಯದೆ ಸ್ವಾವಲಂಬಿಗಳಾಗಿ ಒಕ್ಕಲತನ ನಡೆಸುತ್ತಿರುವರು. ೨) ಈಗ ೩ನೆಯ ವರ್ಷ ಅವಧಿಯಲ್ಲಿ ೧ ಎಕರೆ ಕ್ಷೇತ್ರದಲ್ಲಿಯ ಅಡವಿ ಕಡಿದು, ಬೇರು ಅಗೆದು, ಲಾಗಾಯಿತು ಮಾಡಿ (ವಿದ್ಯಾರ್ಥಿಗಳು ಹಾಗೂ ಶಿಕ್ಷಕರು ಕೂಡಿ) ಒಕ್ಕಲತನಕ್ಕೆ ಯೋಗ್ಯವಾದ ಹೊಲ ತಯಾರಿಸಿಕೊಂಡು ಬೆಳೆ ಬೆಳೆಯುತ್ತಿರುವರು. ಈ ವರ್ಷ ೧೪೧.೮೭ ರೂ. ಖರ್ಚಾಗಿದೆ. ೩) ಪ್ರತಿ ವರ್ಷ ೫೦ ಕೊಯ್ಲಿ ಕುಣಿ ಮತ್ತು ೪-೫ ಮೊತ್ತ ಕುಣಿಗಳನ್ನು ತೋಡಿ ಗೊಬ್ಬರ ಹೊಯ್ದು ಕೊಳ್ಳುವರು. ೪) ಮೊದಲನೆ ವರ್ಷ ಈ ಸಾಲೆಯ ವರು ಬೆಳೆಯಿಸಿದ ಬೆಳೆಗಳನ್ನು ಜಿಲ್ಲಾ ಒಕ್ಕಲತನ ಪ್ರದರ್ಶನದಲ್ಲಿ ಪ್ರದರ್ಶಿಸಿದ್ದರು. ಆಗ ಈ ಸಾಲೆಗೆ ಮೊದಲ ತಪ್ಪು ಪ್ರಥಮ ಬಹುಮಾನಗಳು ಆ ಪ್ರದರ್ಶನದಲ್ಲಿ ಇನ್ನಾವಿಗೂ ದೊರೆತಿರುವದಿಲ್ಲ. ೫) ಜಮೀನಿ ಪದ್ಧತಿಯಿಂದ ಭತ್ತ ಬೆಳೆಯುವದು, ಸಿ. ಆರ್. ಬಾಂಡ ಪದ್ಧತಿ ಬೆಳೆಯುವದು ಮುಂತಾದ ಹೊಸ ಪ್ರಯೋಗಗಳನ್ನು ಮಾಡಿ ಜೀವನ್ನು ನಡೆದಿರುವರು. ಮತ್ತು ಈ ವಿಷಯದಲ್ಲಿ ಮಕ್ಕಳಿಗೆ ಶಿಕ್ಷಕರಿಗೆ ಮಾರ್ಗದರ್ಶಿಯಾಗಿರುವರು.

೨. ಸಹಕಾರಿ ಅಂಗಡಿ:— ಈ ಸಾಲೆಯ ವಿದ್ಯಾರ್ಥಿಗಳು ೬ ವರ್ಷಗಳಿಂದ ಒಂದು ಸಹಕಾರಿ ಅಂಗಡಿ ನಡೆಸುತ್ತ ಬಂದಿರುವರು. ಅದರಲ್ಲಿ ರಾಜೋಪಾಧ್ಯೆ ಮೊಗೀ ಸಾಮಾನುಗಳನ್ನು ಮೇಟಿಯ ಧಾರಣೆಯಲ್ಲಿ ಮಾರಲ್ಪಡುತ್ತವೆ. ತಮಗೆ ಬೇಕಾದ ಎಲ್ಲಿ ಎಕ್ಕಸಕ್ಕಾಯಿ ಮಿಗಳನ್ನು ಮಕ್ಕಳು ತಾವೇ ಈ ಅಂಗಡಿಯ ಮತಿಯಿಂದ ತಯಾರಿಸಿಕೊಳ್ಳುವರು. ಈ ಅಂಗಡಿಯಲ್ಲಿ ವಿದ್ಯಾರ್ಥಿಗಳ ೪೬ ಸೇರಿಗಳು ರಿಯಾದವೆ. ಪ್ರತಿ ವರ್ಷ ಈ ಅಂಗಡಿಯ ಲಾಭದ ಹಣದಲ್ಲಿ ಕೆಲವು ಸಲಿನ ರಾಜೋಪಾಧ್ಯೆ ಮೊಗಿ ಸಾಮಾನುಗಳನ್ನು ಸಾಲೆಯ ಬಡಮಕ್ಕಳಿಗೆ ಹಂಚುವ ವಲ್ಲದೇ ಈ ಸಲಿಗೆ ೬೦ ಜನ ವಿದ್ಯಾರ್ಥಿಗಳಿಗೆ ೧೦೦ಕ್ಕೆ ೨೫ರಂತೆ ಲಾಭ ಹಂಚುತ್ತ ಬಂದಿರುವರು. ಈ ವರ್ಷ ಇವರ ಅಂಗಡಿಯಲ್ಲಿ ೪೩೫.೫೬ ರೂ. ಸೈಗಳ ವ್ಯವಹಾರ ನಡೆದಿರುವದು. ಈ ಅಂಗಡಿಯ ಬಹಳಷ್ಟು ಸಾಮಾನುಗಳ ಮಾರಾಟ ಈ ಕೆಳಗಿನಂತೆ ಆಗುವದು. ಬೇಗನೆಲ್ಲವ ಪೆಟ್ಟಿಗೆಯಲ್ಲಿ ಮಾರಾಟದ ಮಾಲನ್ನು ಇಟ್ಟು ಅವುಗಳ ಮಾರಾಟದ ಬೆಲೆ ಪಟ್ಟಿಯನ್ನು ಆ ಪೆಟ್ಟಿಗೆಗೆ ಅಂಟಿಸಿರುವರು. ಮಕ್ಕಳು ತಮಗೆ ಬೇಕಾದ ಸಾಮಾನುಗಳನ್ನು ತಾವೇ ತೆಗೆದುಕೊಂಡು ಅವುಗಳ ಬೆಲೆಯನ್ನು ಪೆಟ್ಟಿಗೆಯಲ್ಲಿ ಇಟ್ಟುಹೋಗುವರು. ಈಗ ೪ ವರ್ಷಗಳಿಂದ ಮಾಲಿನ ಮಾರಾಟದ ಬೆಲೆ ಹಾಗೂ ಪೆಟ್ಟಿಗೆಯಲ್ಲಿ ನಂಗ್ರಹವಾದ ಹಣ ಇವುಗಳಲ್ಲಿ ಒಂದು ಪೈ ಕೂಡಾ ಅಂತರ ವಾಗಿರುವದಿಲ್ಲ.

೩. ವಾಚನಾಲಯ:— ಈಗ ೩-೪ ವರ್ಷಗಳಿಂದ ಒಂದು ವಾಚನಾಲಯವನ್ನು ತೆರೆದು ನಡೆಸುತ್ತಿರುವರು. ಇದರಲ್ಲಿ ೫೦೦ ಉತ್ತಮೋತ್ತಮವಾದ ಪುಸ್ತಕಗಳಿವೆ. ೬ ಪತ್ರಿಕೆಗಳು ಬರುತ್ತಿವೆ. ೧೮೯೦ರ. ಬೆಲೆಯ ಪೆಡೋಸ್ಕೋಪ್ ಸಾಮಾನುಗಳಿವೆ. ಈ ವರ್ಷ ವಿದ್ಯಾರ್ಥಿ

ಗಳು ೧೩೭೨ ಪುಸ್ತಕಗಳನ್ನು ಓದಿರುವರು. ಈ ವಾಚನಾಲಯದ ಬಗ್ಗೆ ಈ ವರೆಗೆ ೬೯೩ ರೂ.ಗಳನ್ನು ಖರ್ಚು ಮಾಡಿರುವರು. ಈ ವರ್ಷ ೭೫ ರೂ. ಸಹಾಯ ಧನವು ಸರಕಾರದಿಂದ ದೊರೆಯುವದು. ಮಕ್ಕಳು ಈ ವಾಚನಾಲಯದ ಲಾಭ ಯೋಗ್ಯ ರೀತಿಯಿಂದ ಪಡೆಯುತ್ತಿರುವರು.

೪. **ಕೈ ಬರಿಹದ ಪತ್ರಿಕೆಗಳು**— ಕಳೆದ ೬ ವರ್ಷಗಳಿಂದ ಈ ಸಾಲೆಯ ಮಕ್ಕಳು ಒಂದು ಮಾಸಿಕ ಹಾಗೂ ಇನ್ನೊಂದು ತ್ರೈಮಾಸಿಕ ಹೀಗೆ ಎರಡು ಕೈಬರಿಹದ ಪತ್ರಿಕೆಗಳನ್ನು ನಡೆಸಿಕೊಂಡು ಬಂದಿರುವರು. ಮಾಸಿಕ ಪತ್ರಿಕೆಯ ೭೨ ಸಂಚಿಕೆಗಳು ಹಾಗೂ ತ್ರೈಮಾಸಿಕದ ೨೪ ಸಂಚಿಕೆಗಳನ್ನು ನಾನು ಅವರ ಪ್ರದರ್ಶನ ಕೋಣೆಯಲ್ಲಿ ನೋಡಿದೆನು. ಒಂದೊಂದು ಸಂಚಿಕೆಯು ಒಂದೊಂದು ಬಗೆಯಿಂದ ಶೈಕ್ಷಣಿಕ ಉಪಯುಕ್ತತೆಯನ್ನು ಕೊಡುವಂತಹವು ಇರುವವು.

೫. **ವಸ್ತು ಸಂಗ್ರಹ**— ಈ ಸಾಲೆಯಲ್ಲಿ ಶೈಕ್ಷಣಿಕ ವಸ್ತುಗಳ ಹಾಗೂ ಕೈಕೆಲಸದ ಸಾಮಾನುಗಳ ಒಂದು ಸಂಗ್ರಹವಿದೆ. ಇದನ್ನು ಶಿಕ್ಷಣಕ್ಕೆ ಉಪಯೋಗವಾಗುವಂತೆ ಬಳಸಿಕೊಳ್ಳುವರು. ತಾಲೂಕಾ ಮಟ್ಟದ ಸ್ಪರ್ಧೆಗಳಲ್ಲಿ ಶಿಕ್ಷಣ ಸಾಖೆಯವರು ವಸ್ತುಸಂಗ್ರಹ ಮತ್ತು ಕೈಕೆಲಸಗಳ ಬಗ್ಗೆ ಇಟ್ಟಿದ್ದ ೪ ಬಹುಮಾನಗಳಲ್ಲಿ ನಾಲ್ಕೂ ಪ್ರಥಮ ಬಹುಮಾನಗಳು ಕಳೆದ ವರ್ಷ ಈ ಸಾಲೆಗೇ ದೊರೆತಿವೆ.

೬. **ಔಷಧೋಪಚಾರ**— ಈ ಸಾಲೆಯ ವಿದ್ಯಾರ್ಥಿ ಮಂತ್ರಿಮಂಡಳದಲ್ಲಿಯ ಆರೋಗ್ಯ ಮಂತ್ರಿಯು ಊರೊಳಗಿನ ಹಾಗೂ ಸಾಲೆಯಲ್ಲಿಯ ರೋಗಿಗಳಿಗೆ ಪ್ರಥಮೋಪಚಾರ ಹಾಗೂ ಔಷಧೋಪಚಾರ ನಡೆಸುವನು. ಈ ವರ್ಷ ಔಷಧ ಪಡೆದವರ ಸಂಖ್ಯೆ ೨೩೬ ಇರುವದು.

೭. **ಶಿಸ್ತು ಸ್ವಚ್ಛತೆಯ ಪರೀಕ್ಷೆ**— ತಿಂಗಳಿಗೆ ೨ ಸರತಿ ಅಕಸ್ಮಾತ್ತಾಗಿ ಗುಂಪುವಾರ ಮತ್ತು ಇಯತ್ತೆವಾರ ಸಾಮೂಹಿಕ ಶಿಸ್ತು ಸ್ವಚ್ಛತೆಯ ಪರೀಕ್ಷೆ ನಡೆಸುವರು. ಆಗ ಮಕ್ಕಳ ವೈಯಕ್ತಿಕ ಸ್ವಚ್ಛತೆ, ಅವರ ಪಾಟಿಪುಸ್ತಕ ಮುಂತಾದ ಎಲ್ಲ ಬಗೆಯ ಶೈಕ್ಷಣಿಕ ಸಾಧನಗಳ ನಿರೀಕ್ಷಣೆ ಮಾಡಿ ಗುಣಗಳನ್ನು ಕೊಡುವರು.

೮. **ಗುಂಪುವಾರ ಸ್ಪರ್ಧೆ**— ೫, ೬, ೭ನೇ ಇಯತ್ತೆಗಳ ಮಕ್ಕಳನ್ನು ಕೂಡಿಸಿ ಅವರಲ್ಲಿ ಸರಿ ಬಲವಾಗುವಂತೆ ಎರಡು ಗುಂಪುಗಳನ್ನು ಮಾಡಿ ಒಂದೊಂದು ಗುಂಪಿಗೆ ಒಂದೊಂದು ಹೆಸರು ಕೊಟ್ಟಿರುವರು. ಆ ಗುಂಪುಗಳು ವಾರ ಪರೀಕ್ಷೆಯ ಗುಣ, ದಿನದ ಹಾಜರಿ, ಚರ್ಚಾಕೂಟ, ಶಿಸ್ತು ಸ್ವಚ್ಛತೆ, ಸಾಂಘಿಕ ವರ್ತನೆ, ಶ್ರಮದಾನ, ಕೈಬರಿಹ, ವಸ್ತುಸಂಗ್ರಹ ಮುಂತಾದ ವಿಷಯಗಳಲ್ಲಿ ಸ್ಪರ್ಧಿಸುವರು. ಇದರಲ್ಲಿ ಮಕ್ಕಳು ತನಗಾಗಿ ಎನ್ನದೇ ತನ್ನ ಗುಂಪಿಗಾಗಿ ಎಂದು ದುಡಿಯುವರು. ಮಕ್ಕಳ ಸರ್ವಾಂಗೀಣ ಉನ್ನತಿ ಸಾಧಿಸಲು ಇದೊಂದು ಒಳ್ಳೇ ಮಾರ್ಗವು.

೯. **ಸುದ್ದಿ ಸಂಗ್ರಹ**:— ವೃತ್ತ ಪತ್ರಿಕೆಗಳಲ್ಲಿಯ ಒಂದೆರಡು ಮಹತ್ವದ ಸುದ್ದಿಗಳನ್ನು ಆರಿಸಿ ಪ್ರತಿದಿನ ಸಂಗ್ರಹಿಸುತ್ತ ಹೋಗುವ ಒಂದು ಒಳ್ಳೇ ರೂಢಿಯನ್ನು ಇಟ್ಟುಕೊಂಡಿರುವರು. ಈ ಸಂಗ್ರಹವೆಂದರೆ ವಾರ್ಷಿಕ ಇತಿಹಾಸವೇ ಆಗುವದು.

೧೦. **ಶೈಕ್ಷಣಿಕ ಉಪಕರಣಗಳು**:— ಕಣ್ಣಿನಿಂದ ನೋಡಿ, ಕಿವಿಯಿಂದ ಕೇಳಿ, ಪ್ರತ್ಯಕ್ಷ ಕೃತಿ ಮಾಡಿ ಕಲಿಯುವ ಈ ಕಾಲದಲ್ಲಿ ಶೈಕ್ಷಣಿಕ ಉಪಕರಣಗಳಿಗೆ ಶಿಕ್ಷಣ ಕ್ಷೇತ್ರದಲ್ಲಿ ಬಹಳ ಮಹತ್ವದ ಸ್ಥಾನವಿದೆ. ಈ ಶಾಲೆಯ ಶಿಕ್ಷಕರು ಈ ಕೆಳಗೆ ಬರೆದಂತೆ ಶೈಕ್ಷಣಿಕ ಉಪಕರಣಗಳನ್ನು ತಯಾರಿಸಿಕೊಂಡಿರುವರು. ಅವುಗಳನ್ನೆಲ್ಲ ಅವರ ಪ್ರದರ್ಶನ ಕೋಣೆಯಲ್ಲಿ ನಾನು ನೋಡಿರುವೆನು.

೧)	ಖಗೋಲ ಶಾಸ್ತ್ರಕ್ಕೆ	ಸಂಬಂಧಿಸಿದವು	೩೪
೨)	ಭೂಗೋಲ	,, ,,	೪೯
೩)	ಇತಿಹಾಸಕ್ಕೆ	,, ,,	೧೮
೪)	ರೇಖಾ ಗಣಿತಕ್ಕೆ	,,	೨೦೧
೫)	ಚಿತ್ರಕಲೆಗೆ	,,	೫೫
೬)	ಶರೀರ ಶಾಸ್ತ್ರಕ್ಕೆ	ಸಂಬಂಧಿಸಿದವು	೧೩೭
೭)	ಪ್ರಾಣಿ	,, ,,	೪೦೭
೮)	ಅಂಕಗಣಿತಕ್ಕೆ	,,	೨೦
೯)	ವಿವಿಧ ವಿಷಯಗಳಿಗೆ	,,	೮೫
೧೦)	ಒಟ್ಟು ಉಪಕರಣಗಳು		೧೦೦೬

ಕಳೆದ ವರ್ಷ ಈ ಜಿಲ್ಲೆಯ ಶಿಕ್ಷಣ ಖಾತೆಯವರು ತಾಲೂಕಾ ಮಟ್ಟದ ವರೆಗೆ ಏರ್ಪಡಿಸಿದ ವಿವಿಧ ಸ್ಪರ್ಧೆಗಳಲ್ಲಿ ಶೈಕ್ಷಣಿಕ ಉಪಕರಣಗಳನ್ನು ತಯಾರಿಸುವ ಬಗೆಗೆ ಶಿಕ್ಷಕರ ಸಲುವಾಗಿ ೩ ಮತ್ತು ವಿದ್ಯಾರ್ಥಿಗಳಿಗಾಗಿ ೨. ಹೀಗೆ ಐದು ಬಹುಮಾನಗಳನ್ನು ಇಡಲಾಗಿತ್ತು. ಈ ಐದೂ ಪ್ರಥಮ ಬಹುಮಾನಗಳು ಈ ಶಾಲೆಗೇ ದೊರೆತಿರುವವು.

೧೧. **ಶಾರೀರಿಕ ಶಿಕ್ಷಣ**:— ಈ ಶಾಲೆಯ ವಾರ್ಷಿಕೋತ್ಸವದ ದಿನ ಈ ಶಾಲಾ ಬಾಲಕರ ಶಾರೀರಿಕ ಚಟುವಟಿಕೆಗಳನ್ನು ನಿರೀಕ್ಷಿಸಿದೆನು. ಅದು ಎಲ್ಲ ಬಗೆಯಿಂದಲೂ ಪ್ರೇಕ್ಷಣೀಯವೂ, ಆದರ್ಶಪ್ರಾಯವೂ ಆಗಿತ್ತು. ನೆರೆದ ಶಿಕ್ಷಣಾಧಿಕಾರಿಗಳು, ಅತಿಥಿಗಳು ಹಾಗೂ ಇನ್ನಿತರ ಮಹನೀಯರೆಲ್ಲರೂ ಈ ಚಿಕ್ಕ ಮಕ್ಕಳ ಕೃತಿ ನೋಡಿ ತುಂಬಾ ಆನಂದಪಟ್ಟು ಹೊಗಳಿದರು.

ಈ ಶಾಲೆಯ ಮಕ್ಕಳು ಶ್ರಮದಾನ ಮಾಡಿ ಗಿಡ ಗಂಟಿಗಳನ್ನು ಕಡಿದು, ಅವುಗಳ ಬೇರು ಅಗಿದು ತಾವೇ ಆಟದ ಬೈಲು ತಯಾರಿಸಿಕೊಂಡಿರುವರು. ಅಲ್ಲದೇ ಎತ್ತರ ಜಿಗಿತದ ಸ್ತಂಭ, ಉದ್ದ ಜಿಗಿತಕ್ಕಾಗಿ ಉಸುಕಿನ ಕುಣಿ, ಕಾಠಿಗಳು, ಲಾಠಿಗಳು. ಸ್ಕಿಪಿಂಗ್ ದಾರ ಮುಂತಾದವುಗಳನ್ನೆಲ್ಲ ತಾವೇ ಸ್ವತಃ ತಯಾರಿಸಿಕೊಂಡಿರುವರು. ಈಗೆರಡು ವರ್ಷಗಳಿಂದ ತಾಲೂಕಾ ಮಟ್ಟದ ಕ್ರೀಡಾ ಸ್ಪರ್ಧೆಯಲ್ಲಿ ಹಾಗೂ ಇನ್ನಿತರ ಸ್ಪರ್ಧೆಗಳಲ್ಲಿ ತಾಲೂಕಿನೊಳಗಿನ ಎಲ್ಲ ಶಾಲೆಗಳಿಗಿಂತ ಹೆಚ್ಚು ಗುಣಗಳನ್ನು ದೊರಕಿಸಿ ಪ್ರಥಮ ಸ್ಥಾನವನ್ನು ಪಡೆದಿರುವರು.

೧೨. **ಶ್ರಮದಾನ**:— ಈ ಶಾಲೆಯಲ್ಲಿ ನಡೆದ ಶ್ರಮದಾನದ ಕಲ್ಪನೆ ಬರಬೇಕಾದರೆ 'ಕಿರಿಗುಡ್ಡದ ಮೇಲೆ ಕಟ್ಟಿದ ಈ ಶಾಲೆಯ ಆವಾರದಲ್ಲಿ ನಿಂತು ನೋಡಬೇಕು. ಸುಮಾರು ೬ ಚಕ್ಕಡಿ ಗಿಡಗಂಟಿಗಳನ್ನು ಕಡಿದಿರುವರು. ೧೧ ಚಕ್ಕಡಿ ಬೇರುಗಳನ್ನು ಅಗಿದಿರುವರು. ಸುಮಾರು ೨೩೦ ಬರಾಸು ಮಣ್ಣಿನ ಕೆಲಸ ಮಾಡಿರುವರು. ಅಲ್ಲದೇ ಇನ್ನೆಷ್ಟೋ ಶ್ರಮದಾನದ ಕೆಲಸಗಳನ್ನು ಮಾಡಿರುವರು. ಒಟ್ಟಿನಲ್ಲಿ ಅಧಿಕೃತ ವ್ಯಕ್ತಿಗಳ ಅಳತೆಯ ಮೇರೆಗೆ ೧೩೨೦ ರೂ. ಗಳ ಶ್ರಮದಾನವಾಗಿದೆ. ೨೧ ವರ್ಷಗಳ ಅವಧಿಯಲ್ಲಿ ಮಾಡಿದ ಈ ಶ್ರಮದಾನದೊಳಗೆ ಊರ ನಾಗರಿಕರ ಪಾಲು ೩೬೩ ರೂ. ಗಳದಿದ್ದು, ಶಾಲೆಯ ವಿದ್ಯಾರ್ಥಿಗಳು ಹಾಗೂ ಶಿಕ್ಷಕರು ಕೂಡಿ ೧೧೬೦ ರೂ. ಗಳ ಶ್ರಮದಾನ ಮಾಡಿರುವರು. ಅಲ್ಲದೇ ಈ ೨೧ ವರ್ಷಗಳ ಅವಧಿಯಲ್ಲಿಯೇ ಅಂಗಳದ ಸುತ್ತುಗೋಡೆ, ಶಾಲೆಯ ಹಿಂದೆ ಮತ್ತು ಮುಂದೆ ಗೇಟು, ಶಾಲೆಯ ನೆಲಕ್ಕೆ ಫರಸಿ, ಗಡಿಯಾರ ಹಾಗೂ ಘಂಟೆಗಳ ಖರೀದಿ ಇವೇ ಮೊದಲಾದವುಗಳಿಗೆ ರೋಖ ೨೧೯೯.೫೩ ನ. ಪೈ.ಗಳನ್ನು ಖರ್ಚು ಮಾಡಿರುವರು. ಈ ಹಣದಲ್ಲಿ ೯೪೮.೫೬ ನ. ಪೈಗಳು ಸ್ಕೂಲ ಬೋರ್ಡು, ಗ್ರಾಮ ಪಂಚಾಯತಿ ಮುಂತಾದ ವಿವಿಧ ಸಂಘ ಸಂಸ್ಥೆಗಳಿಂದ ದೊರೆತ ಹಣವಿದ್ದು ೧೨೫೦.೯೭ ನ. ಪೈ.ಗಳನ್ನು ಶಾಲೆಯ ಕ್ಷೇಮ ನಿಧಿಯಿಂದ ಬಳಸಲಾಗಿದೆ.

೧೩. **ಶಾಲಾ ಕ್ಷೇಮ ನಿಧಿಯ ಸಂಗ್ರಹ ಹಾಗೂ ಬಳಕೆ**:— ಈ ಶಾಲೆಯಲ್ಲಿ ಶಾಲೆಯ ಕ್ಷೇಮ ನಿಧಿಯನ್ನು ಸಂಗ್ರಹಿಸಿ ಬಳಸುತ್ತ ಬಂದಿರುವರು. ಈ ಕ್ಷೇಮ ನಿಧಿಯಲ್ಲಿ ಸಹಕಾರಿ ಅಂಗಡಿಯ ೫ ವರ್ಷಗಳ ಲಾಭ, ಈ ಶಾಲೆಯ ಶೈಕ್ಷಣಿಕ ಸ್ಪೂರ್ತಿಗೆ ವಿವಿಧ ಪ್ರದರ್ಶನಗಳಲ್ಲಿ ಪ್ರಥಮಸ್ಥಾನ ಪಡೆದ ಬಗ್ಗೆ ರೋಖ ಕೊಟ್ಟ ಇನಾಮಿನ ಹಣ, ಶ್ರಮದಾನದ ಸಮಯದಲ್ಲಿ ಕಡಿದ ಗಿಡ ಗಂಟಿಗಳು ಹಾಗೂ ಬೇರುಗಳನ್ನು ಮಾರಿದ್ದು ಮುಂತಾದವುಗಳಿಂದ ದೊರೆತ ಹಣವಿರುವದು. (ಒಟ್ಟಿನಲ್ಲಿ ಇದರೊಳಗೆ ಮಕ್ಕಳ ಹಾಗೂ ಶಿಕ್ಷಕನ ಶ್ರಮದ ಫಲವೇ ಇರುವದು.) ಈ ಶಾಲೆಯ ಬಗ್ಗೆ ಈ ೨೧ ವರ್ಷಗಳ ಅವಧಿಯಲ್ಲಿ ಶಾಲೆಯ ಕ್ಷೇಮ ನಿಧಿಯಿಂದ ರೋಖ ೧೨೫೦.೯೭ ನ. ಪೈ.ಗಳನ್ನು ಮತ್ತು ಶ್ರಮದಾನದಿಂದ ೧೧೬೦ ರೂ.ಗಳನ್ನು ಹೀಗೆ ಒಟ್ಟು ೨೪೧೦.೯೭ ನ.ಪೈ.ಗಳ ಕೆಲಸವನ್ನು ಶಿಕ್ಷಕರು ಹಾಗೂ ವಿದ್ಯಾರ್ಥಿಗಳು ಕೂಡಿ ಮಾಡಿರುವರು. ದೊಡ್ಡ ದೊಡ್ಡ ಹಾಯಿಸ್ಕೂಲ ಹಾಗೂ ಕಾಲೇಜುಗಳಲ್ಲಿ ಸಾವಿರ ಗಟ್ಟಿ, ಲಕ್ಷಗಟ್ಟಿ ರೂ. ಗಳನ್ನು ಖರ್ಚು ಮಾಡಿ ಸುಂದರವಾದ ಕಟ್ಟಡಗಳನ್ನು ಕಟ್ಟಿಸಿದ ಉದಾಹರಣೆಗಳಿವೆ. ಆದರೆ ಚಿಕ್ಕ ಸಾಲೆಯ ಮುಂದೆ ನಿಂತಿರುವ ಎಲ್ಲ ಕೃತಿಯ ಬಹು ಭಾಗವು ಮಕ್ಕಳ ಹಾಗು ಶಿಕ್ಷಕರ ಬೆವರಿನ ಮೇಲೆ ನಿಂತಿದೆ. ಇದನ್ನು ನಿರೀಕ್ಷಿಸಿಯೇ ಮನಗಾಣಬೇಕು.

೧೪. **ಇನ್ನಿತರ ಚಟುವಟಿಕೆಗಳು**:— (೧) ಇನ್ನುಳಿದ ಶಾಲೆಗಳಲ್ಲಿ ನಡೆಯುವಂತೆ ಈ ಶಾಲೆಯಲ್ಲಿ ಕೂಡಾ ಪ್ರವಾಸಗಳು, ಚರ್ಚಾಕೂಟಗಳು, ದಿನಾಚರಣೆಗಳು ಮುಂತಾದವುಗಳೆಲ್ಲ ನಡೆಯುವವು. (೨) ಶಾಲೆಯ

ಜಗಲಿ, ಅಂಗಳ, ಆವಾರ ಮೊದಲಾದ ಸ್ಥಳಗಳಲ್ಲೆಲ್ಲ ಸುಂದರವಾದ ಮತ್ತು ಆಕರ್ಷಕವಾದ ವಾತಾವರಣವು ನಿರ್ಮಾಣವಾಗುವಂತೆ ಹೂದೋಟ ಮುಂತಾದವುಗಳನ್ನು ನಿರ್ಮಿಸಲಾಗಿದೆ. (೩) ಹಿಚಕಡ ಮತ್ತು ಕಣಗೀಲ ಗ್ರಾಮಗಳ ಸರ್ವೋದಯ ಪಾತ್ರೆಗಳ ಅಕ್ಕಿಯನ್ನು ಸಂಗ್ರಹಿಸಿ ಮಾರಿ ಬಂದ ಬೆಲೆ ೬೨.೭೯ ನ. ಪೈಸೆಗಳನ್ನು ಸರ್ವೋದಯ ಪಾತ್ರೆಯ ಮುಖ್ಯ ಸಂಚಾಲಕರಿಗೆ ಕಳಿಸಿರುವರು. (೪) ಈ ಶಾಲೆಗೆ ಬರಬೇಕಾದ ಸಕ್ತಿಗೊಳಪಟ್ಟ ಎಲ್ಲ ಮಕ್ಕಳೂ ಶಾಲೆಗೆ ದಾಖಲಾಗಿ ಸಾಮಾನ್ಯ ಎಲ್ಲರೂ ಸರಿಯಾಗಿ ಶಾಲೆಗೆ ಬರುತ್ತಿರುವರು. (೫) ಸಾಮಾನ್ಯ ೧೦೦ಕ್ಕೆ ಆಜರಪ್ಪು ವಿದ್ಯಾರ್ಥಿಗಳು ಈ ಶಾಲೆಗೆ ಸೇರಿದ ಮೇಲೆ ೭ ವರ್ಷಗಳಲ್ಲಿಯೇ ತಮ್ಮ ೭ನೆಯ ಇಯತ್ತೆ ಕಲಿತು ಮುಗಿಸಿ ಪ್ರಾಥಮಿಕ ಶಾಲಾ ಪ್ರ. ಪ. ಪರೀಕ್ಷೆ ಪಾಸಾಗಿ ಹೊರ ಬೀಳುತ್ತಿರುವರು. (೬) ಈಗ ೩-೪ ವರ್ಷಗಳಿಂದ ಈ ಶಾಲೆಯ ಮುಲ್ಕೀ ಪರೀಕ್ಷೆಯ ಪರಿಣಾಮವು ಒಳ್ಳೇ ರೀತಿಯಿಂದ ಆಗುತ್ತಾ ಬಂದಿದ್ದು ಈ ವರ್ಷ ಕೂಡಾ ತನ್ನ ಪರಂಪರೆಯನ್ನು ಕಾಯ್ದುಕೊಂಡಿದೆ. ಈ ವರ್ಷವೂ ನೂರಕ್ಕೆ ೯೨ ರಂತೆ ಪಾಸಾಗಿ ಈ ಶಾಲೆಯು ಅಂಕೋಲಾ ಕೇಂದ್ರಕ್ಕೆ ಪ್ರಥಮ ಸ್ಥಾನವನ್ನು ಪಡೆದಿದೆ. ಈಗ ಎರಡು ವರ್ಷಗಳಿಂದ ಮುಲ್ಕೀ ಪಾಸಾಗುತ್ತಿರುವ ಮಕ್ಕಳು ೧೦೦ಕ್ಕೆ ೫೦ ಕ್ಕಿಂತಲೂ ಹೆಚ್ಚು ಗುಣಗಳನ್ನು ಸಾಮಾನ್ಯವಾಗಿ ಪಡೆಯುತ್ತಿರುವರು. ಕಳೆದ ವರ್ಷ ಈ ಶಾಲೆಯ ಒಬ್ಬ ವಿದ್ಯಾರ್ಥಿನಿ ಅಂಕೋಲಾ ಕೇಂದ್ರಕ್ಕೆ ಪ್ರಥಮ ಸ್ಥಾನ ಪಡೆದಳು. ಈ ವರ್ಷ ಒಬ್ಬ ವಿದ್ಯಾರ್ಥಿ ಕೇಂದ್ರಕ್ಕೆ ತೃತೀಯ ಸ್ಥಾನ ಪಡೆದಿರುವನು. ಈ ರೀತಿ ಸರ್ವಾಂಗ ಸುಂದರವಾದ ಈ ಚಿಕ್ಕ ಶಾಲೆಯು ಜಿಲ್ಲೆಗೂ, ರಾಜ್ಯಕ್ಕೂ ಭೂಷಣವು.

ಜೀವನ ಶಿಕ್ಷಣವೂ, ಒಕ್ಕಲುತನವೂ

ಲೇಖಕರು:— **ಶ್ರೀ ಎನ್. ಬಿ. ಕಡೇಮನಿ**

ಜೀವನ ಶಿಕ್ಷಣವು ನಮಾತ್ಮಾ ಗಾಂಧೀಜಿಯವರಿಂದ ನಮ್ಮ ದೇಶದಲ್ಲಿ ಪ್ರಾರಂಭವಾಯಿತು. ಅನೇಕ ತರದ ಕಾರ್ಯಗಳಲ್ಲಿ ಅವರಿಗೆ ಇದೂ ಒಂದು. ನಮ್ಮ ದೇಶದ ಸ್ವಾತಂತ್ರ್ಯಕ್ಕೆ ಇದೂ ಒಂದು ಮುಖ್ಯ ಕಾರ್ಯವೆಂದು ಹೇಳಬಹುದು. ಸ್ವಾತಂತ್ರ್ಯವನ್ನು ಪಡೆದ ನಂತರ ದೇಶದ ಉದ್ಧಾರಕ್ಕೆ ಶಿಕ್ಷಣದ ಪ್ರಗತಿಯೇ ಮುಖ್ಯವೆಂಬುದು ಬೇರೆ ಹೇಳಬೇಕಾಗಿಲ್ಲ. ಪ್ರತಿಯೊಂದು ದೇಶದ ಪ್ರಗತಿ, ಶಿಕ್ಷಣದ ಪ್ರಗತಿಯು ಮೇಲೆಯೇ ಅವಲಂಬಿಸಿರುವುದು. ಪ್ರಗತಿಯನ್ನು ಹೊಂದಿದ ದಾಗೂ ಸುಧಾರಿಸಿದ ದೇಶವೆಂದು ಹೇಳಿಸಿಕೊಳ್ಳುವ ಅಮೆರಿಕಾ, ರಷಿಯಾ ಮುಂತಾದ ದೇಶಗಳ ಪ್ರಗತಿಯು, ಶಿಕ್ಷಣದ ಪ್ರಗತಿಯು ಮೇಲೆ ಅವಲಂಬಿಸಿರುವುದೆಂಬುದು. ಈಗ ಪ್ರತ್ಯಕ್ಷವಾಗಿ ಕಂಡು ಬರುವುದು. ಈ ಯಾಂತ್ರಿಕ ಯುಗದಲ್ಲಿ ಶಿಕ್ಷಣದ ಪ್ರಾಮುಖ್ಯತೆಯಿಂದ ಮನುಷ್ಯನ ಶ್ರಮಗಳು, ಆಗುಹೋಗು ಸಾಧ್ಯವೇ ಇಲ್ಲ. ಬಿಳಿಯರ ಕಾಲದಲ್ಲಿ ನಮ್ಮ ದೇಶದ ಬಗ್ಗೆಗಿನ ಆಸ್ತಿಯನ್ನು ಹೊರಕ್ಕೆ ತೆಗೆದುಕೊಂಡು ಹೋಗಲು ಅನುಕೂಲವಾಗಲೆಂದು ಅವರಿಂದ ಹೇಳಬಹುದು. ಅದಕ್ಕೆ ಮುಖ್ಯ ಕಾರಣವೆಂದರೆ ನಮ್ಮಲ್ಲಿ ಇದ್ದಂಥ ಆಗಿನ ಶಿಕ್ಷಣವೇ ಎಂದು ಹೇಳಿದರೆ ತಪ್ಪಾಗಲಿಕ್ಕಿಲ್ಲ. ಆಗ ಶಿಕ್ಷಣವನ್ನು ಪಡೆಯಲು ಜಗತ್ತಿನ ಎಲ್ಲ ಭಾಗಗಳಿಂದ ಶಿಕ್ಷಕರು, ಈಗ ಸುಧಾರಿಸಿದ ದೇಶಗಳಿಗೆ ಹೆಚ್ಚಿನ ವಿದ್ಯಾಭ್ಯಾಸ ಪಡೆಯಲಿಕ್ಕೆ ಹೋಗುವಂತೆ, ಬರುತ್ತಿದ್ದರೆಂಬುದು ಎಲ್ಲರಿಗೂ ಗೊತ್ತಿದ್ದ ವಿಷಯವಾಗಿರುವುದು.

ನಮ್ಮ ದೇಶದ ದಾರಿದ್ರ್ಯವನ್ನು ಹೋಗಲಾಡಿಸುವ ದರ ಸಲುವಾಗಿ ಮತ್ತು ಅಗ್ರಸ್ಥಾನವನ್ನು ದೊರಕಿಸುವ ದರ ಸಲುವಾಗಿ ಮಹಾತ್ಮಾ ಗಾಂಧೀಜಿಯವರು ಜೀವನ ಶಿಕ್ಷಣವನ್ನು ಪ್ರಾರಂಭಿಸಿದರು. ಜೀವನ ಶಿಕ್ಷಣ ವೆಂದರೆ ಜೀವನಕ್ಕೆ ಆಧಾರವಾದದ್ದೆಂದು ಹೇಳಬಹುದು. ಪ್ರತಿಯೊಬ್ಬ ಮನುಷ್ಯನು ಅಂಥ ಶಿಕ್ಷಣದಿಂದ ತನ್ನ ಕಾಲ ಮೇಲೆ ತಾನೇ ನಿಲ್ಲಲು ಸಾಧ್ಯವಾಗುವುದೆಂದು ಹೇಳಬಹುದು. ಇದಕ್ಕಿಂತಲೂ ಮೊದಲಿಗೆ ತಾವು ಶಿಕ್ಷಣವನ್ನು ಪಡೆಯುವುದು ಕೇವಲ ಓದು ಬರೆಹದ ಸಲುವಾಗಿ ಆಗತ್ಯವೆಂದು ಬೇರೆ ಹೇಳಬೇಕಾಗಿಲ್ಲ. ಏಕೆಂದರೆ ನಾವು

ನೂರಾರು ವರ್ಷಗಳಿಂದ ಪರಕೀಯರ ಆಡಳಿತದಲ್ಲಿಯೇ ಉಳಿದಿದ್ದೆವು. ಪರಕೀಯರು ತಮ್ಮ ಆಡಳಿತ ಸುಲಭವಾಗುವದರ ಸಲುವಾಗಿ ನಮ್ಮ ಜನರಿಗೆ ತಮ್ಮ ಕೆಲಸಕ್ಕೆ ಎಷ್ಟು ಅವಶ್ಯವೋ ಅಷ್ಟು ವಿದ್ಯೆಯನ್ನು ಕೊಟ್ಟು, ಏನೋ ಆಶೆಯನ್ನು ತೋರಿಸಿ ತಮ್ಮ ಅಧೀನದಲ್ಲಿಟ್ಟುಕೊಂಡು, ತಮ್ಮ ಕಾರ್ಯವನ್ನು ಸುಲಭ ರೀತಿಯಿಂದ ಸಾಗಿಸಲು ಅವಶ್ಯವಾದ ಶಿಕ್ಷಣವನ್ನಷ್ಟೇ ಕೊಡುತ್ತಿದ್ದರು. ಅಂಥ ಶಿಕ್ಷಣದಿಂದ ಮನುಷ್ಯನು ನೌಕರಿಯ ವಿನಃ ಯಾವ ಉದ್ಯೋಗವನ್ನೂ ಮಾಡಲಿಕ್ಕೆ ಬರದಂತಾಗಿತ್ತು. ಏಕೆಂದರೆ ಕಲಿಯದವರು ಹಾಗೂ ಕಲಿತವರು_ಇವರಿಬ್ಬರಲ್ಲಿ ನೌಕರಿಯ ವಿನಃ ಇತರ ಉದ್ಯೋಗದಲ್ಲಿ ಯಾವ ಭಿನ್ನತೆಯೂ ಕಂಡು ಬರುತ್ತಿದ್ದಿಲ್ಲ. ಇಷ್ಟೇ ಅಲ್ಲದೆ ಒಂದು ವೇಳೆ ಕಲಿಯದಂಥ ಮನುಷ್ಯನೇ ಸ್ವತಂತ್ರ ಉದ್ಯೋಗದಲ್ಲಿ ಹೆಚ್ಚು ನಿಪುಣನಿರುತ್ತಿದ್ದನೆಂಬುದಕ್ಕೆ ಎಷ್ಟೋ ಉದಾಹರಣೆಗಳುಂಟು. ಇದನ್ನೇ ನಮ್ಮ ಹಿರಿಯರು ಪ್ರತ್ಯಕ್ಷ ನೋಡಿ ಹೇಳುತ್ತಿರುವರು. ಆದ್ದರಿಂದ ಸ್ವಾತಂತ್ರ್ಯವನ್ನು ದೊರಕಿಸುವ ಅಂತ್ಯ ಕಾಲದಲ್ಲಿ ನಮ್ಮ ಜನರಿಗೆ ಅವಶ್ಯವಾದ ಶಿಕ್ಷಣದಲ್ಲಿ ಮಹಾತ್ಮಾ ಗಾಂಧೀಜಿಯವರು ಜೀವನ ಶಿಕ್ಷಣವನ್ನು ಪ್ರಾರಂಭಿಸಿದರು. ಯುರೋಪಿಯನ್ನರು ಶಿಕ್ಷಣದಲ್ಲಿ ಪ್ರಗತಿಯು ಆದ ಮೇಲೆ ನಮ್ಮ ಆಡಳಿತೆಯು ಬಹು ದಿವಸ ಉಳಿಯಲಿಕ್ಕಿಲ್ಲವೆಂದು ತಾವಾಗಿಯೇ ಕೊಟ್ಟು ಒಳ್ಳೆಯವರಾಗಿ ಹೋಗುವ ಪ್ರಸಂಗ ಬಂದಿತು. ಮಹಾತ್ಮಾ ಗಾಂಧೀಜಿಯವರು ಈ ಶಿಕ್ಷಣವನ್ನು ೧೯೩೭ರಲ್ಲಿ ಪ್ರಾರಂಭಿಸಿದರು. ಮುಂದೆ ಅದನ್ನು ಒಂದೆರಡು ವರ್ಷ ತಮ್ಮ ಆಶ್ರಮವ ಸುತ್ತ ಮುತ್ತಲಿನ ಸಾಲೆಗಳಲ್ಲಿ ಪ್ರಯೋಗ ಮಾಡಿ ಉಳಿದ ಕಡೆಗೆ ನೋಡಿರಿ ನನ್ನದು ಹೀಗೆ ಕಲ್ಪನೆ ಇರುವದು. ಅದನ್ನು ನೀವು ಪ್ರಯೋಗ ಮಾಡಿ ನೋಡಿ. ಅದರಲ್ಲಿ ಏನಾದರೂ ದೋಷಗಳಿದ್ದರೆ ಅವನ್ನು ತಿಳಿಸಿರೆಂದು ಎಲ್ಲ ರಾಜ್ಯದ ಮಂತ್ರಿಗಳಿಗೆ ಒಪ್ಪಿಸಿದರು. ಅಂದಿನಿಂದಲೇ ಅಂದರೆ ೧೯೩೭ನೇ ಇಸ್ವಿಯಿಂದ ರಾಜ್ಯಗಳಲ್ಲಿ ಈ ಶಿಕ್ಷಣವು, ಪ್ರಾರಂಭವಾಯಿತೆಂದು ಹೇಳಬಹುದು.

ಜೀವನ ಶಿಕ್ಷಣವೆಂದರೆ ಈ ಮೊದಲೇ ಹೇಳಿದಂತೆ ಜೀವನಕ್ಕೆ ಅವಶ್ಯಕವಾದ ಶಿಕ್ಷಣವು. ಜೀವನಕ್ಕೆ ಅವಶ್ಯವಾದ ಶಿಕ್ಷಣವೆಂದರೆ, ಮನುಷ್ಯನು ಜೀವಿಸಿರಲಿಕ್ಕೆ ಅವಶ್ಯವಾದ ವಸ್ತುಗಳನ್ನು ಪೊರಕಿಸಿಕೊಡುವದು. ಹಾಗೂ ಬೇರೆ ದೇಶಗಳ ಕೂಡ ಸಮನ್ವಯವಾದ ವಸ್ತುಗಳನ್ನು ಹುಟ್ಟಿಸಿ ಅಗ್ರಸ್ಥಾನವನ್ನು ಪಡೆಯುವದು ಎಂದು ಹೇಳಿದರೆ ಅತಿಶಯೋಕ್ತಿಯಾಗಲಿಕ್ಕಿಲ್ಲ. ಆದ್ದರಿಂದ ಜೀವನ ಶಿಕ್ಷಣದಲ್ಲಿ ಚಟುವಟಿಕೆಯು ಮುಖಾಂತರ ವಿಷಯಗಳ ಜ್ಞಾನ ಆಗಬೇಕೆಂಬ ತತ್ವವೂ ಇದರಲ್ಲಿ ಅಡಕವಾಗಿರುವದು. ಚಟುವಟಿಕೆ ಅಂದರೆ ಕೇವಲ ಕೆಲಸದ್ದಾಗಿರದೆ ಜ್ಞಾನಕ್ಕೆ ಅವಶ್ಯವಾದದ್ದೂ, ಉತ್ಪಾದನೆಯುಳ್ಳದ್ದೂ ಆಗಿರಬೇಕೆಂದು ಹೇಳಿರುವರು. ಅವುಗಳಲ್ಲಿ ಮುಖ್ಯವಾದವುಗಳು ಅಂದರೆ--

೧) ಒಕ್ಕಲತನ.
೨) ನೂಲುವದು ಹಾಗೂ ನೇಯುವದು.
೩) ಬಡಿಗತನ.
೪) ಕೈಗಾರಿಕೆಯ ಕೆಲಸ.

ಹೀಗೆ ಆಯಾ ಪರಿಸ್ಥಿತಿಗೆ ಅನುಸರಿಸಿದ ಚಟುವಟಿಕೆಗಳಾಗಿರುವವು. ಅವುಗಳಲ್ಲಿ ಒಕ್ಕಲತನವು ಯಾವ ರೀತಿಯಿಂದ ಚಟುವಟಿಕೆಗಳಲ್ಲಿ ಹಿಂಮುಸ್ಥಾನದಲ್ಲಿ ಅವಶ್ಯವಿರುವದೆಂಬುದನ್ನು ನೋಡೋಣ.

ಪ್ರತಿಯೊಬ್ಬ ಮಾನವನಿಗೆ ಆಹಾರ, ಆಚ್ಛಾದನ, ಆಶ್ರಯ ಇವು ಅತಿ ಅವಶ್ಯವಾದವುಗಳು ಆಗಿರುವವು. ಈ ಮೂರನ್ನು ಒದಗಿಸಿ ಕೊಡುವಂತಹದು, ಪ್ರತ್ಯಕ್ಷ ಇಲ್ಲವೆ ಅಪ್ರತ್ಯಕ್ಷ ರೀತಿಯಿಂದ ಒಕ್ಕಲುತನವೇ ಎಂದು ಹೇಳಿದರೆ ಅತಿಶಯೋಕ್ತಿಯಾಗಲಾರದು. ಅನೇಕ ತರದ ಉದ್ಯೋಗಗಳಿಗೆ ಕಚ್ಚಾವಸ್ತುಗಳು ಇದರಿಂದಲೇ ಒದಗುವದು. ಪ್ರಾಚೀನ ಕಾಲದಿಂದಲೂ ಒಕ್ಕಲತನವು ನಮ್ಮ ದೇಶದ ಮುಖ್ಯ ಉದ್ಯೋಗವಾಗಿರುವದು. ಮೇಲಿನ ಎಲ್ಲ ಕಾರಣಗಳಿಂದ ಒಕ್ಕಲತನದ ಚಟುವಟಿಕೆಯು ಸಣ್ಣ ಬಾಲಕರಿಂದ ಉಚ್ಚತರದ ಶಿಕ್ಷಣದ ವಿದ್ಯಾರ್ಥಿಗಳ ವರೆಗೆ ಕಲಿಯಲಿಕ್ಕೆ ಅತಿ ಅವಶ್ಯವಾದ ವಿದ್ಯೆಯೆಂದು ಹೇಳಬಹುದು. ಇತ್ತೀಚೆಗಂತೂ ಇದಕ್ಕೆ ಜಗತ್ತಿನಲ್ಲಿಯೂ ಕೂಡ ಮಹತ್ವ ಬಂದಿರುವದು. ಗಾಂಧೀಜಿಯವರು ಉಗಮ ಮಾಡಿದ ಜೀವನ ಶಿಕ್ಷಣಕ್ಕೆ ಒಕ್ಕಲತನವು ಒಂದು ಮಹತ್ವವಾದ ಸ್ಥಾನವನ್ನು ದೊರಕಿಸಿರುವದೆಂದು ಬೇರೆ ಹೇಳಬೇಕಾಗಿಲ್ಲ.

ಸಣ್ಣ ಬಾಲಕರಿಗೆ ಅಂದರೆ ೬ರಿಂದ ೧೫ ವರ್ಷದ ವರೆಗೆ ಒಕ್ಕಲುತನವು ವಿದ್ಯೆ ಕೊಡುವದರಲ್ಲಿ ಮುಖ್ಯವಾದ ಚಟುವಟಿಕೆಯನ್ನು ಮಾಡಿಕೊಳ್ಳಲು ಅತಿ ಅವಶ್ಯ.

ಸುಲಭ ಹಾಗೂ ಅವರ ಒಲವಿಗೆ ಯೋಗ್ಯವಾದಂತಾಗಿದೆ. ಎಂದು ಹೇಳಬಹುದು. ಸೃಷ್ಟಿಸೌಂದರ್ಯದ ಪ್ರತಿಯೊಂದು ವಿಷಯವನ್ನು ತಿಳಿದುಕೊಳ್ಳಲಿಕ್ಕೆ ಬಾಲಕ–ಬಾಲಿಕೆಯರು ಅತಿ ಆತುರವುಳ್ಳವರಾಗಿರುವರು. ಪ್ರತಿಯೊಂದಕ್ಕೆ ಅವರು ಮಾಡುವಂಥ ಹಾಗೂ ಕೇಳುವಂಥ ಅದು ಏನು? ಅದು ಏಕೆ? ಹೇಗೆ ಇರುವದು ಮುಂತಾದ ಪ್ರಶ್ನೆಗಳಿಂದ ನಾವು ಕಂಡುಕೊಳ್ಳಬಹುದು. ಆದ್ದರಿಂದ ಒಕ್ಕಲತನವು ಸೃಷ್ಟಿಸೌಂದರ್ಯದ ಒಂದು ಮುಖ್ಯ ಅಂಗವೆಂದು ಹೇಳಿದರೆ ಏನೂ ತಪ್ಪಾಗಲಿಕ್ಕಿಲ್ಲ. ಬಾಲಕ ಬಾಲಿಕೆಯರಿಗೆ ಪ್ರತಿಯೊಂದು ಒಕ್ಕಲತನದ ಕಾರ್ಯದಲ್ಲಿ ಕೆಲಸ ಮಾಡಲು ಮೊದಲಿನಿಂದ ಮುಂದೆ ಬರಲಿಕ್ಕೆ ಪ್ರಯತ್ನವನ್ನು ಮಾಡುತ್ತಿರುವರು. ಆದ ಕಾರಣ ಶಿಕ್ಷಕರು ಬಾಲಕರ ಪಾಲಕರ ಮೇಲಿಂದ ಆ ಬಾಲಕರ ಬಾಲಿಕೆಯರ ಶಿಕ್ಷಣ ಅವಲಂಬಿಸಿರುವದೆಂದು ಹೇಳಬಹುದು. ಈಗ ಶಿಕ್ಷಣದ ತತ್ವದಲ್ಲಿ ಶಿಕ್ಷಕನು ಮಾರ್ಗದರ್ಶಕನಾಗಿರಬೇಕೆಂದು ಇದ್ದರೂ ಕೂಡ ಅವನ ಪಾತ್ರವು ಅತಿ ಮಹತ್ವದ್ದಾಗಿರುವದು. ಅದರಂತೆ ಒಕ್ಕಲತನ ಶಿಕ್ಷಣದಲ್ಲಿಯೂ ಕೂಡ ಇದು ಅತಿ ಮಹತ್ವದೆಂದು ಹೇಳಿದರೆ ಏನೂ ತಪ್ಪಾಗಲಿಕ್ಕಿಲ್ಲ.

ಮಗುವು ಶಾಲೆಗೆ ಬಂದ ಕೂಡಲೇ ಅವನು ಅನೇಕ ಸಂಗತಿಗಳನ್ನು ನೋಡಬೇಕೆಂಬ ಇಚ್ಛೆಯನ್ನು ಪಡುತ್ತಿರುತ್ತಾನೆ. ಅವನ ಇಚ್ಛೆಯಂತೆ ಶಿಕ್ಷಕರು ಬಾಲಕ ಬಾಲಿಕೆಯರನ್ನೂ ಅವರ ಆತುರದ ಹಸಿವನ್ನೂ, ದೊಡ್ಡ ವಿದ್ಯಾರ್ಥಿಗಳಿಗೆ ಮಾಡುತ್ತಿರುವ ಕಾರ್ಯವನ್ನೂ ತೋರಿಸುತ್ತ ಸಾಗಬೇಕು. ಕ್ರಮೇಣ ತಾವೇ ಸ್ವತಃ ಮಾಡಬೇಕೆಂಬ ಕಲ್ಪನೆಯಿಂದ ಅವರು ಅನೇಕ ಪ್ರಶ್ನೆಗಳನ್ನು ಶಿಕ್ಷಕರಿಗೆ ಕೇಳಲು ಪ್ರಾರಂಭಿಸುವರು. ಆದ್ದರಿಂದ ಅವರ ಹಸಿವಿನ ಪ್ರಕಾರ ಅವರಿಗೆ ಕೆಲವು ಸಣ್ಣ ಸಣ್ಣ ಚಟುವಟಿಕೆಗಳನ್ನು ಕೊಡುತ್ತ ಅವರ ಇಚ್ಛೆಯನ್ನು ಪೂರ್ಣ ಮಾಡುತ್ತ ಹೋಗಬೇಕು. ಅವರು ಬರುವಾಗುತ್ತ ಪ್ರತಿಯೊಂದನ್ನು ತಿಳಿಯುವದರ ಕಡೆಗೆ ಮನಸ್ಸು ಮಾಡುವರು. ಆದೇ ಪ್ರಕಾರ ಅವರಿಗೆ ಅನುಕೂಲವಾಗುವಂತೆ ಅನುಕೂಲತೆಗಳನ್ನು ಒದಗಿಸಿ ಶಿಕ್ಷಕರು ಸಹಾಯ ಮಾಡುತ್ತ ಹೋಗಬೇಕು. ಶಿಕ್ಷಕರು ಒಕ್ಕಲತನದ ಕಾರ್ಯಗಳ ಪರೀಕ್ಷಣೆ ಹಾಗೂ ಸಣ್ಣ ಸಣ್ಣ ಚಟುವಟಿಕೆಗಳಿಗೆ ಸಮಸ್ಥಿತವಾಗಿ, ಭಾಷೆ, ಗಣಿತ, ಸಾಮಾನ್ಯ ಜ್ಞಾನ, ಚಿತ್ರಕಲೆ ಮುಂತಾದವುಗಳ ಜ್ಞಾನವನ್ನು ಮಾಡಿಕೊಡಲು ಅತಿ ಸುಲಭವಾಗುವದು. ಆಯಾ ಸಮಯಕ್ಕೆ ಅನುಸರಿಸಿ ಅವುಗಳನ್ನು ಜೋಡಿಸಿ, ಬಾಲಕರಿಗೆ ಜ್ಞಾನ ಮಾಡಿಕೊಡಬೇಕು. ದೊಡ್ಡ ದೊಡ್ಡ ಬಾಲಕರಿಗೆ ಅಂದರೆ ೫, ೬, ೭ನೆಯ ಇಯತ್ತೆಯ ಬಾಲ ಬಾಲಿಕೆಯರಿಗಂತೂ ಇದು ಒಂದು ಮುಖ್ಯ ಉದ್ಯೋಗವೆಂದು ತಿಳಿದು ಇದಕ್ಕೆ ಮೇಲೆ ಹೇಳಿದಂತೆ ಎಲ್ಲ ವಿಷಯಗಳನ್ನು ಕಲಿಸಲು ಅತಿ ಸುಲಭವೆಂದು ಹೇಳಬಹುದು. ಕೇವಲ ವಿದ್ಯೆಯ ಸಲುವಾಗಿ ಈ ಚಟುವಟಿಕೆಯಾಗಿರದೆ ಗಾಂಧೀಜಿಯವರು ಹೇಳಿದಂತೆ ಇದು ಉತ್ಪಾದಕವುಳ್ಳ ಚಟುವಟಿಕೆಯೆಂದು ಎಲ್ಲರೂ ಒಪ್ಪುವ ಮಾತಾಗಿರುವದು. ಏಕೆಂದರೆ ಈ ಕಾರ್ಯವು ಉತ್ಪಾದಕವಾದದ್ದಾಗಿರದಿದ್ದರೆ ನಮ್ಮ ದೇಶದ ಮುಖ್ಯ ಉದ್ಯೋಗವಾಗುತ್ತಿದ್ದಿಲ್ಲ. ಅಷ್ಟೇ ಅಲ್ಲದೆ ಪ್ರತಿಯೊಂದು ದೇಶದವರು ಇದಕ್ಕೆ ಇಷ್ಟು ಮಹತ್ವ ಕೊಡುತ್ತಿದ್ದಿಲ್ಲ. ಉತ್ಪಾದಕವಾದ ಚಟುವಟಿಕೆ ಅಷ್ಟೇ ಅಲ್ಲದೆ ಲಾಭದಾಯಕವಾಗಿರುವದೆಂದು ಹೇಳಿದರೆ ತಪ್ಪಾಗಲಿಕ್ಕಿಲ್ಲ. ಒಕ್ಕಲಿಗರಲ್ಲಿಯೂ ಒಕ್ಕಲತನವು ಲಾಭದಾಯಕವಾಗಿ ಎಲ್ಲರಲ್ಲಿಯೂ ಕಂಡುಬರದಿದ್ದರೂ ಹೆಚ್ಚು ಜನರಲ್ಲಿ ಲಾಭದಾಯಕವಾಗಿರುವದರಿಂದಲೇ ನಮ್ಮ ಜನರು ವಿಶೇಷವಾಗಿ ಈ ಉದ್ಯೋಗದಲ್ಲಿ ತೊಡಗಿರುವರು.

ಶಾಲೆಗಳಲ್ಲಿ ಒಕ್ಕಲತನವು ತೃಪ್ತಿಕರವಾದ ಚಟುವಟಿಕೆಯಾಗಬೇಕಾದರೆ ಅಲ್ಲಿಯ ಅನುಕೂಲ ಪರಿಸ್ಥಿತಿಗಳ ಶಿಕ್ಷಕರ ಹಾಗೂ ಪಾಲಕರ ಒಲವಿನ ಮೇಲೆ ಅವಲಂಬಿಸಿರುತ್ತದೆ. ಅಲ್ಲಿಯ ಅನುಕೂಲ ಪರಿಸ್ಥಿತಿಗಳೆಂದರೆ ಸಾಕಷ್ಟು ಜಮೀನು ಹಾಗೂ ನೀರಿನ ಸೌಕರ್ಯಗಳೆಂದು ಹೇಳಬಹುದು. ಶಿಕ್ಷಕರ ಒಲವಿನ ಮೇಲೆ ಅಂದರೆ ಆ ಕೆಲಸದಲ್ಲಿ ಅವರಲ್ಲಿ ಆಸ್ಥೆ, ಧುರೀಣತ್ವ, ಹಾಗೂ ದೂರದೃಷ್ಟಿ ಇವುಗಳ ಮೇಲೆ ಅವಲಂಬಿಸಿರುತ್ತದೆ. ಶಿಕ್ಷಕರು ವಿಷಯಗಳಲ್ಲಿ ನಿಪುಣರಿರಬಹುದು. ಆದರೆ ಆ ಚಟುವಟಿಕೆಯ ಬಗ್ಗೆ ತಕ್ಕ ಜ್ಞಾನ ಹಾಗೂ ಕಾರ್ಯನಿಷ್ಠುರತೆ ಇಲ್ಲದಿದ್ದರೆ ಅದು ಹೇಗೆ ಸುಲಭವಾಗಿ ಸಾಗಬಹುದು? ಬಾಲಕರ ಆಸಕ್ತಿಯ ಆತುರತೆಯನ್ನು ತಿಳಿದುಕೊಳ್ಳಲಿಕ್ಕೆ ಯೋಗ್ಯತೆಯುಳ್ಳವರಾಗಿರಬೇಕು. ಸಣ್ಣ ಸಣ್ಣ ಕೊರತೆಗಳನ್ನು ಮುಂದೆ ಮಾಡದೆ ಕಾರ್ಯದಲ್ಲಿ ಸಾಕಷ್ಟು ಪ್ರಗತಿಯನ್ನು ತೋರಿಸುವಂಥವರಾಗಿರಬೇಕು. ಪಾಲಕರ ಬಗ್ಗೆ ವಿಚಾರ ಮಾಡಿದರೆ ತಮ್ಮ ಬಾಲಕರ ಪ್ರತಿಯೊಂದು

ಕಾರ್ಯದಲ್ಲಿ ಪ್ರೋತ್ಸಾಹವನ್ನು ಕೊಡುವಂಥವರಾಗಿರಬೇಕು. ಕೇವಲ ಒಕ್ಕಲುತನದ ಕೆಲಸವು ಉತ್ಪನ್ನದ ಸಲುವಾಗಿ ಇರುವದೆಂಬ ಕಲ್ಪನೆಯು ಇರದೆ, ಬಾಲಕ-ಬಾಲಿಕೆಯರ ಶಿಕ್ಷಣದ ಸಲುವಾಗಿ ಇರುವದೆಂಬ ಕಲ್ಪನೆಯನ್ನು ಮರೆಯಬಾರದು. ಮತ್ತು ಯಾವಾಗಲೂ ಅವರ ಏಳಿಗೆಯ ಸಹಾಯವನ್ನು ತೋರುವಂಥವರೇ ಆಗಿರಬೇಕು. ಶಿಕ್ಷಕರಾದರೂ ತಾವು ಅದರಲ್ಲಿ ಪ್ರವೀಣರೆಂಬ ಕಲ್ಪನೆಯನ್ನು ಮಾಡಿಕೊಂಡು ಪಾಲಕರ ವಿರುದ್ಧ ಹೋಗದೆ, ಪಾಲಕರ ಕೂಡ ಸಹಕರಿಸಿ ಅವರಲ್ಲಿ ಪ್ರಾಯೋಗಿಕ ದೃಷ್ಟಿಯಿಂದ ಇರತಕ್ಕ ಹೆಚ್ಚಿನ ಜ್ಞಾನವನ್ನು ತಾವು ತೆಗೆದುಕೊಂಡು ಅದರ ಉಪಯೋಗವನ್ನು ಬಾಲಕರಿಗೆ ಮಾಡಿಕೊಡಬೇಕು. ಹಳ್ಳಿಯ ಪ್ರತಿಯೊಬ್ಬ ಮಾನವನ ಉದ್ಯೋಗ ಒಕ್ಕಲುತನವೇ ಇರುವದರಿಂದ ಶಾಲೆಯಲ್ಲಿ ಏನು ಕಲಿಯುವರೋ ಎಂಬ ಭಾವನೆಯು ಅವರಲ್ಲಿ ಬರದೆ ಹಾಗೆ ಶಿಕ್ಷಕರು ಬಾಲಕ ಬಾಲಿಕೆಯರಲ್ಲಿ ಹೆಚ್ಚಿನ ಜ್ಞಾನವನ್ನು ಮಾಡಿಕೊಟ್ಟರೆ ಪಾಲಕರ ಆಕರ್ಷಣೆಯು ಸ್ವಾಭಾವಿಕವಾಗಿ ಆಗುವದು. ಮೇಲಿನ ಎಲ್ಲ ಕಾರಣಗಳಿಂದ ಶಿಕ್ಷಕನ ಭಾರವು ಈಗಿನ ಜೀವನ ಶಿಕ್ಷಣದಲ್ಲಿ ಅತಿ ಮುಖ್ಯವಾದ ಪಾತ್ರವಾಗಿರುವದೆಂದು ಹೇಳಿದರೆ ಏನೂ ತಪ್ಪಾಗಲಿಕ್ಕಿಲ್ಲ.

ಮಹಾತ್ಮಾ ಗಾಂಧೀಜಿಯವರಿಂದ ಉಗಮವಾದ ಜೀವನ ಶಿಕ್ಷಣಕ್ಕೆ ಒಕ್ಕಲುತನವು ಒಂದು ಮುಖ್ಯ ಆಧಾರವಾಗಿರುವದೆಂದು ಹೇಳಬಹುದು, ಜೀವನ ಶಿಕ್ಷಣದಲ್ಲಿ ಎಲ್ಲ ತತ್ವಗಳು ಒಕ್ಕಲುತನದಲ್ಲಿ ಅಡಗಿಕೊಂಡಿರುವವು. ಏಕೆಂದರೆ ಜೀವನದ ಮೂಲಾಧಾರವಾದ ಒಂದು ಉದ್ಯೋಗವಾಗಿರುವದು. ಜೀವನ ಶಿಕ್ಷಣದ ಮೂಲ ತತ್ವವಾದ ಮಕ್ಕಳ ಸರ್ವಾಂಗೀಣ ಉನ್ನತಿಯ ಕಾರ್ಯವು, ಸುಲಭ ರೀತಿಯಿಂದ ಆಗಬೇಕೆಂದರೆ ಒಕ್ಕಲುತನದ ಚಟುವಟಿಕೆಯೇ ಎಂದು ಕೈಬಿಟ್ಟು ಹೇಳಬಹುದು. ಅಂದರೆ ದೈಹಿಕ, ಮಾನಸಿಕ, ಸಾಮಾಜಿಕ, ಇತ್ಯಾದಿ ಎಲ್ಲ ದೃಷ್ಟಿಯಿಂದಲೂ ಶಿಕ್ಷಣದಲ್ಲಿ ಸಹಾಯಕವಾದ ಉದ್ಯೋಗವಾಗಿರುವದು. —: ಜೈ ಹಿಂದ :—

ಜೀವನ ಶಿಕ್ಷಣ ತರಬೇತಿಯಲ್ಲಿ ಗ್ರಾಮ ವಾಸ್ತವ್ಯದ ಮಹತ್ವ

ಲೇಖಕರು: **ಶ್ರೀ ಎಸ್. ಆರ್. ಮಕರಿ,** ಗಂ. ಸ. ಟ್ರೇ. ಕಾ. ಧಾರವಾಡ

ಪ್ರಾಥಮಿಕ ಶಿಕ್ಷಕರಿಗೆ ಕಡ್ಡಾಯದ ತರಬೇತಿಯನ್ನು ಕೊಡುತ್ತಿರುವದು ಸರ್ವರಿಗೂ ತಿಳಿದ ವಿಷಯ. ಶಿಕ್ಷಕರಿಗೆ ತರಬೇತಿ ಎಂದರೆ "ಕಲಿಸುವ ಕ್ರಮವನ್ನು ಕಲಿಸುವದು." ಎಂಬುದು ಸಾಮಾನ್ಯ ತಿಳುವಳಿಕೆ ಇದು ನಿಜ. ಆದರೆ ಹೊಸ ಅಭ್ಯಾಸ ಕ್ರಮದಂತೆ ತರಬೇತಿಯು ಮೂಲ ಶಿಕ್ಷಣ ತರಬೇತಿಯಾಗಿದ್ದು ಅದರಲ್ಲಿ ರಚನಾತ್ಮಕ ಹಾಗೂ ವಿಧಾಯಕ ಕಾರ್ಯಕ್ರಮಗಳೂ ಒಳಗೊಂಡಿರುವವು. ವಿಧಾಯಕ ಕಾರ್ಯಕ್ರಮಗಳನ್ನು ಕೈಕೊಳ್ಳಲು ಅವಕಾಶ ಮಾಡಿ ಕೊಡುವದಕ್ಕಾಗಿ ಒಂದು ವಾರದ ಹಳ್ಳಿಯ ವಾಸ್ತವ್ಯವನ್ನು ಟ್ರೇನಿಂಗ ಕಾಲೇಜುಗಳ ಅಭ್ಯಾಸ ಪತ್ರಿಕೆಯಲ್ಲಿ ನಿರ್ದೇಶಿಸಿರುತ್ತಾರೆ.

ಶಿಕ್ಷಕ ವಿದ್ಯಾರ್ಥಿಗಳು ತಮ್ಮ ತರಬೇತಿಯ ಅವಧಿಯಲ್ಲಿ ಕಾಲೇಜಿನ ಆಡಳಿತಗಾರರು ನಿರ್ಧರಿಸಿದ ದಿನಗಳಲ್ಲಿ ಒಂದು ವಾರ ಹಳ್ಳಿಯ ವಾಸ್ತವ್ಯವನ್ನು ಕೈಕೊಳ್ಳುವರು. ಶಿಕ್ಷಕ ವಿದ್ಯಾರ್ಥಿಗಳ ಒಂದು ಗುಂಪು ಇಲ್ಲವೆ ಒಂದು ವರ್ಗ ಈ ಗ್ರಾಮ ವಾಸ್ತವ್ಯದಲ್ಲಿ ಭಾಗವಹಿಸಬಹುದಾಗಿದೆ. "ಶಿಕ್ಷಕ ವಿದ್ಯಾರ್ಥಿಗಳು ಸಾಮಾನ್ಯವಾಗಿ ಹಳ್ಳಿಯಲ್ಲಿಯೇ-ಹುಟ್ಟಿ ಬೆಳೆದವರಾಗಿದ್ದು ಮತ್ತು ಕೆಲ ಕಾಲ ಆ ಪ್ರದೇಶದಲ್ಲಿಯೇ ಶಿಕ್ಷಕರಾಗಿ ಕೆಲಸ ಮಾಡಿದವರಾಗಿರುತ್ತಾರೆ. ಇಂಥವರಿಗೆ ಒಂದು ವಾರದ ಹಳ್ಳಿಯ ವಾಸ್ತವ್ಯವನ್ನು ಏರ್ಪಡಿಸುವದರಿಂದ ಯಾವ ಹೊಸತನವನ್ನು ಸಾಧಿಸಿದಂತಾಗುತ್ತದೆ?" ಎಂದು ಕೆಲವರು ಪ್ರಶ್ನೆ ಕೇಳಬಹುದು.

ಗ್ರಾಮ ವಾಸ್ತವ್ಯದಲ್ಲಿ ನಾಲ್ವತ್ತು ವಿದ್ಯಾರ್ಥಿಗಳು ಒಂದೇ ಪರಿಸ್ಥಿತಿಯಲ್ಲಿ ಒಂದೇ ಸ್ಥಳದಲ್ಲಿ ಕೂಡಿ ಕೆಲಸ ಮಾಡಬೇಕಾಗುತ್ತದೆ. ಇದರಿಂದ ಅವರಲ್ಲಿ ಸಹನಶೀಲತೆ, ಸಹಕಾರ ಮನೋಧರ್ಮ ಮತ್ತು ದಕ್ಷ ಕಾರ್ಯ ಸಂಘಟನೆ ಮೊದಲಾದ ಉದಾತ್ತ ಗುಣಗಳು ವೃದ್ಧಿಸುವವು. ಹಳ್ಳಿಯ ಪರಿಸ್ಥಿತಿಗೆ ಪಡೆದ ತರಬೇತಿಯ ಪೂರ್ಣ ಉಪಯೋಗವನ್ನು ಹೇಗೆ ಮಾಡಿಕೊಳ್ಳಬೇಕೆಂಬುದಕ್ಕೆ ಹಳ್ಳಿಯ ವಾಸ್ತವ್ಯವು ಒಂದು ಪ್ರಾಯೋಗಿಕ ಕೇಂದ್ರವೆಂದೇ ಹೇಳಬೇಕು. ಅಶಿಕ್ಷಿತ ಜನಾಂಗ, ಅಸಭ್ಯರೂಢಿ ಸಂಪ್ರದಾಯಗಳು

ಶಾಲಾ ಇಮಾರತಿಯ ಅಭಾವ ಮುಂತಾದ ಪ್ರತಿಕೂಲ ವಾತಾವರಣದಲ್ಲಿಯೂ ಶಿಕ್ಷಕ ತನ್ನ ಕಾರ್ಯದಲ್ಲಿ ಹೇಗೆ ಯಶಸ್ಸನ್ನು ಗಳಿಸಬಲ್ಲನೆಂಬುದನ್ನು ಹಳ್ಳಿಯ ವಾಸ್ತವ್ಯದ ಅನುಭವವು ಶಿಕ್ಷಕ ವಿದ್ಯಾರ್ಥಿಗಳಿಗೆ ಮಾಡಿಕೊಡುವದು.

ಸಾಮಾನ್ಯವಾಗಿ ಹಳ್ಳಿಗಳಲ್ಲಿ ಸಾಕ್ಷರರ ಹಾಗೂ ನಿರಕ್ಷರಿಗಳ ಎರಡು ಪ್ರತಿಕೂಲ ಗುಂಪುಗಳು ಕಾಣ ಬರುವವು. ಸುಶಿಕ್ಷಿತರನ್ನು ನಿರಕ್ಷರಿಗಳು ಅಥವಾ ಅವಿದ್ಯಾವಂತರು ಸಂಶಯ ದೃಷ್ಟಿಯಿಂದ ಕಾಣುತ್ತಾರೆ. ಹಳ್ಳಿಗಳಲ್ಲಿ ಕೆಲಸ ಮಾಡುವ ಶಿಕ್ಷಕನು ಈ ಮನೋಭಾವನೆಯನ್ನು ಪ್ರಥಮತಃ ಕಿತ್ತೊಗೆಯಲು ಯತ್ನಿಸಬೇಕಾಗುತ್ತದೆ. ಸ್ವತಃ ಶಿಕ್ಷಕರು ಜನಸಾಮಾನ್ಯರ ಉದ್ಯೋಗ ವ್ಯವಸಾಯಗಳಲ್ಲಿ ಸಕ್ರಿಯವಾಗಿ ಸಹಕರಿಸಿ ಹೆಗಲಿಗೆ ಹೆಗಲು ಕೊಟ್ಟು ಮುಡಿದರೇನೆ ಹಳ್ಳಿಗರ ಮನೋಧರ್ಮ ಬದಲಾಗಲು ಸಾಧ್ಯವಿದೆ. ಆದಕಾರಣ ಶಿಕ್ಷಕ ವಿದ್ಯಾರ್ಥಿಗಳು ಗ್ರಾಮ ವಾಸ್ತವ್ಯದಲ್ಲಿ ತಮಗಿರುವ ಶ್ರಮಗೌರವವನ್ನು ವ್ಯಕ್ತಪಡಿಸುವದರ ಸಲುವಾಗಿ ಸಾರ್ವಜನಿಕೋಪಯೋಗಿ ಶ್ರಮ ವಿಭಾಗದ ಕಾರ್ಯವೊಂದನ್ನು ಹಳ್ಳಿಗರ ಸಹಕಾರದೊಂದಿಗೆ ಕೈಕೊಳ್ಳುವರು.

ಸರಕಾರವು ಜನತೆಗಾಗಿ ಕೈಕೊಳ್ಳುವ ಯೋಜನೆಗಳನ್ನೂ ಅದರ ಲಾಭಗಳನ್ನೂ ತಿಳಿಯಪಡಿಸುವದು ಪ್ರತಿಯೊಬ್ಬ ವಿದ್ಯಾವಂತನ ಕರ್ತವ್ಯ. ಮಕ್ಕಳನ್ನು ಪ್ರತಿ ದಿನ ಸಾಲೆಗೆ ಕಳಿಸುವದು, ಅಶಿಕ್ಷಿತ ಪ್ರೌಢರು ಸಮಾಜ ಶಿಕ್ಷಣ ವರ್ಗಗಳನ್ನು ನೇರುವದು ಮುಂತಾದ ಪ್ರಚಾರವನ್ನು ಶಿಕ್ಷಕ ವಿದ್ಯಾರ್ಥಿಗಳು ಹಳ್ಳಿಯ ವಾಸ್ತವ್ಯದ ಸಂದರ್ಭದಲ್ಲಿ ಕೈಕೊಳ್ಳುವರು. ಪ್ರಚಾರಕ್ಕಾಗಿ ಪ್ರಚಾರವನ್ನು ಕೈಕೊಳ್ಳದೇ ಜನಸಾಮಾನ್ಯರಿಗೆ ಉಪಯುಕ್ತವಾಗಿ ಜ್ಞಾನವನ್ನು ಮನರಂಜನೆಯ ಸಲುವಾಗಿ ಬಿಡಿಸಿ ಮನರಂಜನೆ ಕಾರ್ಯಕ್ರಮಗಳಾಗಿ ಮತ್ತು ನಾಟಕಗಳ ಪ್ರದರ್ಶನವನ್ನಾಗಿ ಶಿಕ್ಷಕ ವಿದ್ಯಾರ್ಥಿಗಳು ಈ ಗುರಿಯನ್ನು ಸಾಧಿಸುವರು.

ಗ್ರಾಮ ವಾಸ್ತವ್ಯದಲ್ಲಿ ಹಳ್ಳಿಯ ಸಮಗ್ರ ಪರಿಶೀಲನೆಯನ್ನು ಶಿಕ್ಷಕ ವಿದ್ಯಾರ್ಥಿಗಳು ಮಾಡುವರು. ಗ್ರಾಮದ ವೈಶಿಷ್ಟ್ಯ, ಐತಿಹಾಸಿಕ ಹಿನ್ನೆಲೆ, ಸ್ಥಳೀಯ ರೂಢಿ ಪರಂಪರೆಗಳು, ಹಳ್ಳಿಯ ಸಾಂಸ್ಕೃತಿಕ ಗುಟ್ಟು, ಗುಡಿ ಗುಂಡಾರ, ಮಠ ಮಸೀದಿ, ಸಾಧುಸತ್ಪುರುಷರು, ನೈಸರ್ಗಿಕ ಸಂಪತ್ತು, ಜನತೆಯ ಆಶೆ ಆಕಾಂಕ್ಷೆಗಳು ಮುಂತಾದ ಗ್ರಾಮದ ಸಮಗ್ರ ವಿಷಯವನ್ನೇ ಕಲೆಹಾಕುವರು. ಈ ಎಲ್ಲ ಕಾರ್ಯಗಳಿಂದ ಆ ವಿಭಾಗದ ಸಮಗ್ರಪರಿಚಯವೇ ಎಲ್ಲ ಶಿಕ್ಷಕರಿಗೂ ಹಾಗೂ ನಾಗರಿಕರಿಗೂ ಉಂಟಾಗುವದು. ಈ ಪರಿಶೀಲನೆಯಿಂದ ಗ್ರಾಮೀಣ ಸುಧಾರಣೆಯನ್ನು ಮಾಡಬಯಸುವ ಸರಕಾರಕ್ಕೆ ತುಂಬಾ ಸಹಾಯವಾಗುವದು. ಈ ಕಲೆಹಾಕಿದ ವಿಷಯವು ಸಮಾಜದ ನೈಜ ಸ್ವರೂಪದರ್ಶನವನ್ನು ಮಾಡಿಕೊಡುವದು.

ಹಳ್ಳಿಯ ವಾಸ್ತವ್ಯದ ಏಳು ದಿನಗಳ ಕಾಲಾವಧಿಯ ಕಾರ್ಯಕ್ರಮವನ್ನು ವ್ಯವಸ್ಥಿತ ರೀತಿಯಿಂದ ಸಂಘಟಿಸಲು ಸ್ವಯಂಶಾಸನ ಪದ್ಧತಿಯನ್ನೇ ಅನುಸರಿಸಲಾಗುತ್ತದೆ. ವಾಸ್ತವ್ಯಕ್ಕಾಗಿ ಮುಖ್ಯಮಂತ್ರಿ, ಆಹಾರ ಮಂತ್ರಿ ಹಾಗೂ ಸಾಂಸ್ಕೃತಿಕ ಮಂತ್ರಿಗಳು ಚುನಾಯಿಸಲ್ಪಡುತ್ತಾರೆ. ಈ ಚುನಾಯಿತ ಶಿಕ್ಷಕ ವಿದ್ಯಾರ್ಥಿಗಳು ಸಂಚಾಲಕ ಪ್ರಾಧ್ಯಾಪಕರ ನಿರ್ದೇಶನದ ಮೇರೆಗೆ ವ್ಯವಸ್ಥಿತ ರೀತಿಯಿಂದ ಕೆಲಸ ಮಾಡುವರು. ಈ ಪದ್ಧತಿಯಿಂದ ಶಾಲಾ ಸಂಘಟನೆಯ ಅಪ್ರತ್ಯಕ್ಷ ತರಬೇತಿಯು ಸಿಕ್ಕಂತಾಗುವದು. ನಾಯಕನಲ್ಲಿರಬೇಕಾದ ಗುಣಗಳು ಬೆಳೆದು ಬರುವವು.

ಗ್ರಾಮ ವಾಸ್ತವ್ಯದಲ್ಲಿ ಸ್ಥಳೀಯ ಶಿಕ್ಷಣ ಸಂಸ್ಥೆಗಳ ಸಹಕಾರದೊಂದಿಗೆ ಪ್ರಾರ್ಥನೆ, ಗ್ರಾಮ ನೈರ್ಮಲ್ಯ, ಶ್ರಮದಾನ, ಸೂತ್ರಯಜ್ಞ, ಗ್ರಾಮಪರಿಶೀಲನೆ (Village Survey) ಸಮಾಜ ಶಿಕ್ಷಣ ಕಾರ್ಯ, ಹಾಗೂ ಮನರಂಜನೆಯ ಕಾರ್ಯಕ್ರಮಗಳನ್ನು ಶಿಕ್ಷಕ ವಿದ್ಯಾರ್ಥಿಗಳು ಎಡೆಬಿಡದೆ ಕೈಕೊಳ್ಳುವರು.

ಗ್ರಾಮ ವಾಸ್ತವ್ಯವು ಅಸಂಖ್ಯ ಸದ್ಗುಣಗಳ ಬೆಳವಣಿಗೆಗೆ ಅನುಕೂಲ ಅವಕಾಶವನ್ನು ನೀಡುವ ಸಂದರ್ಭವಾಗಿರುವದರಿಂದ ಹಳ್ಳಿಗರ ಸೇವೆ ಮಾಡುವ ಕಾರ್ಯವನ್ನು ಸ್ನಾತಕೋತ್ತರ ಅಭ್ಯಾಸ ಕ್ರಮದಲ್ಲಿಯೂ ಕಡ್ಡಾಯವನ್ನಾಗಿ ಮಾಡುವ ಸೂಚನೆಯನ್ನು ಶಿಕ್ಷಣ ತಜ್ಞರು ಮಾಡಿರುತ್ತಾರೆ. ಅಂದ ಮೇಲೆ ಹಳ್ಳಿಯ ವಾಸ್ತವ್ಯವು ಜೀವನ ಶಿಕ್ಷಣದಲ್ಲಿ ಮುಡಿಯಲಿರುವ ಪ್ರಾಥಮಿಕ ಶಿಕ್ಷಕರಿಗೆ ಅತ್ಯುಪಯುಕ್ತವೆಂದು ಬೇರೆ ಹೇಳಬೇಕಾಗಿಲ್ಲ.

ಗ್ರಾಮ ರಾಜ್ಯವಾದ ಭಾರತದಲ್ಲಿ ಗ್ರಾಮೀಣ ಉನ್ನತಿಯನ್ನು ಸಾಧಿಸಬಯಸುವ ಸರಕಾರವಿರುವಾಗ ಕಾರ್ಯಾಂಗದ ಪ್ರತಿ ಶಾಸಕನೂ ಹಳ್ಳಿಯ ವಾಸ್ತವ್ಯದ ಅನುಭವವನ್ನು ಪಡೆದರೆ ಅದರಿಂದ ತುಂಬಾ ಲಾಭವಾಗುವದರಲ್ಲಿ ಸಂದೇಹವಿಲ್ಲ.

ಸಮವಾಯ ಪದ್ಧತಿಯ ಪಾಠದ ಟಿಪ್ಪಣಿ

ಶಿಕ್ಷಕನ ಹೆಸರು:— **ಶ್ರೀ ಹ. ಗ. ಜೋಶಿ,** ಬಿ. ಎ., (ಆನರ್ಸ) ಡಿ.ಬಿ.ಈ.

ಚಟುವಟಿಕೆ:— **ರಟ್ಟಿನಿಂದ ಎಳ್ಳು ಹಾಕಲು ಡಬ್ಬಿ ತಯಾರಿಸುವದು**

ಸಮನ್ವಿತ ವಿಷಯ:— **ಸಂಕ್ರಮಣ ಹಬ್ಬದಾಚರಣೆಯ ಕುರಿತು ಸಾಮಾನ್ಯಜ್ಞಾನ**

ವರ್ಗ : **೫**] ದಿನಾಂಕ : **೧೧—೧—೧೯೬೦ ಸೋಮವಾರ** [ವೇಳೆ : **೭೦** ನಿಮಿಷಗಳು

ಮೆಟ್ಟಿಲುಗಳು	ಆವಶ್ಯಕ ಜ್ಞಾನ	ಕಲಿಸುವ ವಿಧಾನ	ಕ. ಪ. ಉಪಯೋಗ
೧) ಯೋಜನೆ : **ಅ) ಪ್ರೇರಣೆ**	ನಾವು ಶಾಲೆಯಲ್ಲಿ ಗಜಾನನ ಹಬ್ಬ, ದಸರೆಯ ಹಬ್ಬ ಮೊದಲಾದವುಗಳನ್ನು ಆಚರಿಸುವೆವು. ಈಗ ಜನೇವರಿ ತಿಂಗಳು ಇದ್ದು ಈ ತಿಂಗಳಲ್ಲಿ 'ಮಕರ ಸಂಕ್ರಮಣ'ವು ಬರುವದು. ಇದು ಜನೇವರಿ ೧೪ನೆಯ ತಾರೀಖಿನ ದಿವಸ ಇದೆ. ಈ ಹಬ್ಬದಲ್ಲಿ ಜನರು ಒಬ್ಬರಿಗೊಬ್ಬರು ಎಳ್ಳು-ಬೆಲ್ಲವನ್ನು ಕೊಡುವರು. ನಾವು ಎಳ್ಳು-ಬೆಲ್ಲವನ್ನು ನಮ್ಮ ಹಿರಿಯರಿಗೂ, ಮಿತ್ರರಿಗೂ ಕೊಡುವೆವು. ಎಳ್ಳು-ಬೆಲ್ಲವನ್ನು ಬಟ್ಟಲು, ಕಾಗದದ ಪುಡಿಕೆ, ರಟ್ಟಿನ ಡಬ್ಬಿಗಳಲ್ಲಿ ಹಾಕಿ ಇಟ್ಟುಕೊಳ್ಳುವರು.	ನೀವು ಶಾಲೆಯಲ್ಲಿ ಯಾವ ಯಾವ ಹಬ್ಬಗಳನ್ನು ಆಚರಿಸುವಿರಿ? ಈಗ ಯಾವ ತಿಂಗಳು? ಈ ತಿಂಗಳಲ್ಲಿ ಬರುವ ಹಿಂದೂ ಹಬ್ಬವು ಯಾವುದು? ಅದು ಎಂದು ಇದೆ? ಜನರು ಅದನ್ನು ಹೇಗೆ ಆಚರಿಸುವರು? ನೀವು ಎಳ್ಳು-ಬೆಲ್ಲವನ್ನು ಯಾರಿಗೆ ಕೊಡುವಿರಿ? ಎಳ್ಳು ಬೆಲ್ಲವನ್ನು ಎತರಲ್ಲಿ ಇಡುವರು? ಎಂದು ಮುಂತಾಗಿ ಪ್ರಶ್ನಿಸುತ್ತ ಸುಲಭವಾದ ವಿಶೇಷ ಬೆಲೆ ಬೀಳದ ಒಂದು ರಟ್ಟಿನ ಡಬ್ಬಿಯನ್ನು ತಯಾರಿಸುವ ಆವಶ್ಯಕತೆಯನ್ನು ಮಕ್ಕಳಿಗೆ ಬಿಂಬಿಸುವದು.	
ಬ) ಆವಶ್ಯಕತೆ	ಹಾಗಾದರೆ ಇಂದು ನಾವು ಎಳ್ಳು-ಬೆಲ್ಲವನ್ನು ಹಾಕಿ ಇಟ್ಟುಕೊಳ್ಳಲು ಒಂದು ರಟ್ಟಿನ ಡಬ್ಬಿಯನ್ನು ತಯಾರಿಸೋಣ.		**ಚಟುವಟಿಕೆ** ರಟ್ಟಿನ ಡಬ್ಬಿಯನ್ನು ತಯಾರಿಸುವದು
ಕ) ಕೆಲಸದ ವಿವರ	ಅ) ೬ ಇಂಚಿನ ಹಾಗು ೬½ಇಂಚಿನ ಚೌರಸ ಆಕಾರದ ಎರಡು ರಟ್ಟಿನ ತುಂಡುಗಳನ್ನು ತೆಗೆದುಕೊಳ್ಳುವದು. ಬ) ಎರಡೂ ರಟ್ಟುಗಳ ಮೇಲೆ ಬೇರೆ ಬೇರೆಯಾಗಿ ಪೆನ್ಸಿಲ್ಲಿನಿಂದ ಗೆರೆ ಕೊರೆದು ಉದ	ನಾವು ಎಂಥ ಡಬ್ಬಿಯನ್ನು ಮಾಡೋಣ? ಎಂದು ಪ್ರಶ್ನಿಸಿ ಶಿಕ್ಷಕರು ಒಂದು ಮಾದರಿಗಾಗಿ ಡಬ್ಬಿಯನ್ನು ಮಕ್ಕಳಿಗೆ ಪ್ರತ್ಯಕ್ಷ ತೋರಿಸಿ ಅದನ್ನು ಬಿಚ್ಚಿ ಪುನಃ ತೋರಿಸಿ, ಅದರ ಆಕಾರ ಮಾಡಬೇಕಾದ ವಿವರಗಳ ಕುರಿತು ಪ್ರಶ್ನೆಗಳಿಂ	ಉಪಕೃತಿಗಳನ್ನು ಒಂದೊಂದಾಗಿ ಕ. ಪ. ಮೇಲೆ ಬರೆಯುವದು.

ಮೆಟ್ಟಿಲುಗಳು	ಅವಶ್ಯಕ ಜ್ಞಾನ	ಕಲಿಸುವ ವಿಧಾನ	ಕ. ಹ. ಉಪಯೋಗ
	ಹಾಗು ಅಗಲಗಳಲ್ಲಿ ಸಮನಾದ ಳ ಭಾಗ ಮಾಡುವದು. ಕ) ನಾಲ್ಕೂ ಮೂಲೆಯ ತುದಿಗಳನ್ನು ಕತ್ತರಿಸಿ ಉಳಿದ ಭಾಗಗಳನ್ನು ಮಡಿಚುವದು. ಡ) ಮೇಲು ಹೊದಿಕೆಯನ್ನು ಹಾಕುವದು.	ಬ್ಬ ಬಾಲಕನಿಂದ ಒಂದೊಂದು ಉಪಕೃತಿಗಳನ್ನು ಹೊರಡಿಸಿಕೊಳ್ಳುವದು.	
೨) ಪೂರ್ವ ಸಿದ್ಧತೆ ಅ) ಸಾಧನ ಸಂಗ್ರಹ	ಸಾಧನ / ಸಂಖ್ಯೆ / ಉಪಯೋಗ ೧) ರಟ್ಟು / ೨ ಒಂದು ೬ ಇಂಚಿನದು ಇನ್ನೊಂದು ೬½ ಇಂಚಿನದು. / ಡಬ್ಬಿ ಮುಚ್ಚಳ ತಯಾರಿಸಲು ೨) ಪೆನ್ಸಿಲ್ಲು / ಪ್ರತಿಯೊಬ್ಬರಿಗೆ ಒಂದು / ಗೆರೆ ಹಾಕಲು ೩) ಚಾಕು / ,, / ಗೆರೆ ಕೊರೆಯಲು ಹಾಗು ಕತ್ತರಿಸಲು ೪) ರಂಗಿನ ಹಾಳೆ / ,, ೩ / ಹೊದಿಕೆ ಹಾಕಲು ೫) ಅಂಟು / ಸಾಲು ಪಸ್ಟು / ಪಾಳಿ ಹಚ್ಚಲು ೬) ಇಂಚು ಪಟ್ಟಿ / ಪ್ರತಿಯೊಬ್ಬರಿಗೆ ಒಂದು / ಅಳೆಯಲು	ಈ ಡಬ್ಬಿಯನ್ನು ಸಿದ್ಧಗೊಳಿಸಲು ಯಾವ ಯಾವ ಸಾಧನಗಳು ಬೇಕು? ಎಂದು ಪ್ರಶ್ನಿಸುತ್ತ ಒಂದೊಂದಾಗಿ ಮಕ್ಕಳಿಂದ ಹೊರಡಿಸಿಕೊಳ್ಳುವದು. ಹಾಗೆಯೇ ಅವು ಎಷ್ಟು ಬೇಕು? ಅವುಗಳ ಉಪಯೋಗವೇನು? ಎಂದು ಒಂದೊಂದನ್ನೇ ತೆಗೆದುಕೊಂಡು ಸಂಖ್ಯೆ, ಉಪಯೋಗಗಳನ್ನು ಗೊತ್ತು ಪಡಿಸುವದು. ಸಂದರ್ಭಾನುಸಾರವಾಗಿ ಅಳತೆ, ಆಕಾರಗಳನ್ನು ಚರ್ಚಿಸುವದು.	ಸಾಧನ, ಸಂಖ್ಯೆ, ಉಪಯೋಗಗಳನ್ನು ಕೋಷ್ಟಕದ ರೂಪದಲ್ಲಿ ಕ. ಹ. ಮೇಲೆ ಕಾಣಿಸುವದು.
ಬ) ಕಾರ್ಯ ಸಂಘಟನೆ	ಸಾಧನಗಳು / ಹಂಚುವವರು ೧) ರಟ್ಟು (೨) / ಗಣೇಶ ೨) ಚಾಕು / ಗಿರೀಶ ೩) ರಂಗಿನಹಾಳಿ / ಮಹಪತಿ ೪) ಅಂಟು / ಬಸವ ೫) ಇಂಚುಪಟ್ಟಿ / ಅಲ್ಲಾಉಪ್ಪಭು ಪೆನ್ಸಿಲ್ಲು ಎಲ್ಲರ ಹತ್ತರವಿರುವದರಿಂದ ವಿತರಣೆಯ ಆವಶ್ಯಕತೆಇರದು.	ಈ ಸಾಧನಗಳೆಲ್ಲವೂ ಪ್ರತಿಯೊಬ್ಬರಿಗೂ ಸರಿಯಾಗಿ ಮುಟ್ಟುವಂತೆ ನಾವು ಯಾವ ಪದ್ಧತಿಯನ್ನು ಅನುಸರಿಸೋಣ? ಹಂಚುವವರು ಯಾರು ಯಾರು? ಎಂದು ಪ್ರಶ್ನಿಸಿ ಬಾಲಕರ ಹೆಸರುಗಳನ್ನು (ಬರೆಯುವದು) ಗೊತ್ತುಪಡಿಸುವದು. ಯಾರ ಹತ್ತರವಾದರೂ ಇರದಿದ್ದರೆ ಶಿಕ್ಷಕನು ಪೂರೈಸುವದು.	ಸಾಧನಗಳನ್ನೂ, ಅವನ್ನು ಹಂಚುವವರ ಹೆಸರುಗಳನ್ನೂ ಬರೆಯುವದು.

ಮೆಟ್ಟಲುಗಳು	ಆವಶ್ಯಕ ಜ್ಞಾನ	ಕಲಿಸುವ ವಿಧಾನ	ಕ. ಹ. ಉಪಯೋಗ
೩) ಕಾರ್ಯನಿರ್ವಹಣೆ ಅ) ಶಿ. ಮಾ. ಕೃ.	ತಳದ ಡಬ್ಬಿ  ಮುಚ್ಚಳಿಕೆ 	ಶಿಕ್ಷಕರು ಎಲ್ಲ ಮಕ್ಕಳಿಗೆ ಕಾಣು ವಂತೆ ಕುಳಿತುಕೊಂಡು ಒಂದು ಡಬ್ಬಿ ಯನ್ನು ಅಳತೆಗನುಸರಿಸಿ ಪದ್ಧತಿಯ ಪ್ರಕಾರ ಮಾಡಿ ತೋರಿಸುವದು. ಹಾಗೆ ಮಾಡಿ ತೋರಿಸುವ ಮುಂದೆ ಮಕ್ಕಳ ಕೂಡ ಒಂದೊಂದೇ ಉಪ ಕೃತಿಗಳನ್ನು ಕ್ರಮದಲ್ಲಿ ತೋರಿಸು ವದು. ಅಳತೆ, ಮಡಿಚಬೇಕಾದ ಹಾಗು ಕತ್ತರಿಸಬೇಕಾದ ರೀತಿ ಪದ್ಧ ತಿಗಳನ್ನೂ ಕೂಡಾ ಅವರ ಎದುರಿ ನಲ್ಲಿ ಚರ್ಚಿಸುತ್ತಲೇ ಮಾಡಿತೋರಿ ಸುವದು. ಅದೇ ಸಂದರ್ಭದಲ್ಲಿ ಮಾಡುವ ಕಾಲದಲ್ಲಿ ಆವಶ್ಯಕವಾಗಿ ನೆನಪಿಡಬೇಕಾದ ಸಂಗತಿಗಳನ್ನು ಅವರ ಅವಗಾಹನೆಗೆ ತರುವದು. ಹಾಗು ಶಿಕ್ಷಕರು ತಾವು ಕೆಲಸ ಪ್ರಾರಂಭಿಸಿದ ವೇಳೆ ಹಾಗು ಕೆಲಸ ಮುಗಿಸಿದ ವೇಳೆಯನ್ನು ಗುರುತಿಸಿ ಡಲು ಮಕ್ಕಳಿಗೆ ತಿಳಿಸುವದು. ಕತ್ತರಿ ಸಬೇಕಾದ ಭಾಗ, ಮಡಿಕೆ ಹಾಕ ಬೇಕಾದ ಭಾಗಗಳನ್ನು ತೋರಿಸು ವದು. ಗುರುತಿಸುವದು.	
ಬ) ನೆನಪಿಡತಕ್ಕ ಸಂಗತಿಗಳು	೧) ಉದ್ದ ಹಾಗು ಅಗಲಳತೆ ಗಳಲ್ಲಿ ಸಮನಾಗಿ ಪೆನ್ಸಿಲ್ಲಿನಿಂದ ಗೆರೆ ಹಾಕಿ ೪ ಭಾಗ ಮಾಡಬೇಕು. ೨) × ಹೀಗೆ ಕತ್ತರಿಯ ಗುರುತು ಹಾಕಿದ ಭಾಗಗಳನ್ನು ಕತ್ತರಿಸ ಬೇಕು. ೩) ದಪ್ಪಾಗಿ ಗೆರೆ ಹಾಕಿದ ಮಧ್ಯದ ಚೌರಸ ಭಾಗವನ್ನು ಬಿಟ್ಟು ಸುತ್ತಲಿನ ನಾಲ್ಕೂ ಭಾಗಗಳನ್ನು ಮಡಿಚಬೇಕು.	ಈ ಕೆಲಸವನ್ನು ಮಾಡುವ ಮುಂದೆ ಯಾವ ಯಾವ ಸಂಗತಿ ಗಳನ್ನು ನೆನಪಿಡಬೇಕು? ಎಂದು ಕೇಳುತ್ತ ಒಬ್ಬೊಬ್ಬರಿಂದ ಒಂದೊಂ ದು ಹೊರಡಿಸಿಕೊಳ್ಳುವದು. ಶಿಕ್ಷ ಕರು ಬರೆದು ತಂದ ಮಾತುಗಳನ್ನು ಮಕ್ಕಳ ಅವಗಾಹನೆಗೆ ತಂದು ಆ ಬೋರ್ಡನ್ನು ತೂಗು ಹಾಕುವದು.	ನೆನಪಿಡತಕ್ಕ ಮಾತುಗಳನ್ನು ಬರೆಯುವದು.

ಮೆಟ್ಟಿಲುಗಳು	ಆವಶ್ಯಕ ಜ್ಞಾನ	ಕಲಿಸುವ ವಿಧಾನ	ಕ. ಹ. ಉಪಯೋಗ
	೪) ಇನ್ನೊಂದನ್ನೂ ಇದೇ ರೀತಿಯಾಗಿ ಮಾಡಿ ಮುಚ್ಚಳಿಕೆಯನ್ನು ಸಿದ್ಧಗೊಳಿಸಬೇಕು. ೫) ಮುಚ್ಚಳಿಕೆಗಾಗಿ ಉಪಯೋಗಿಸುವ ರಟ್ಟು ಮೊದಲಿನ ರಟ್ಟಿಗಿಂತಲೂ ೫ ಇಂಚು ದೊಡ್ಡದಿರಬೇಕು. ೬) ಚಂದ ಕಾಣಲು ರಂಗಿನ ಕಾಗದ ಹಚ್ಚಬೇಕು.		
ಕ) ವೇಳೆಯ ಕಲ್ಪನೆ	೩೦ ನಿಮಿಷಗಳು.	ಶಿಕ್ಷಕನು ತಾನು ಮಾದರಿಯ ಕೃತಿಯನ್ನು ಮಾಡಿ ತೋರಿಸಿದ್ದಕ್ಕೆ ಹತ್ತಿದ ವೇಳೆಯನ್ನು ಕೇಳಿಕೊಂಡು ನಿಮಗೆ ಎಷ್ಟು ವೇಳೆ ಹಿಡಿಯಬಹುದೆಂದು? ಕೇಳಿ— ಒಂದು ವೇಳೆಯನ್ನು ನಿರ್ದಿಷ್ಟ ಪಡಿಸುವದು.	೩೦ ನಿಮಿಷಗಳು
ಡ) ಬಾಲಕರ ಕೃತಿ		ಯೋಜಿಸಿದಂತೆ ಎಲ್ಲ ಸಾಧನಗಳನ್ನು ಹಂಚಿಸಿ ಮಕ್ಕಳನ್ನು ಕೆಲಸದಲ್ಲಿ ತೊಡಗಿಸುವದು. ಶಿಕ್ಷಕರು ಮಕ್ಕಳು ಮಾಡುವ ಮುಂದೆ ತಾವೂ ಕೆಲಸದಲ್ಲಿ ತೊಡಗುವದು. ಹಾಗೆ ಕೆಲಸ ಮಾಡುತ್ತಲೇ ಮಕ್ಕಳ ಕಡೆಗೆ ಗಮನವೀಯುತ್ತ ಅವಶ್ಯ ಕಂಡು ಬಂದರೆ ವೈಯಕ್ತಿಕ ನೆರವು ನೀಡುವದು. ಕೆಲಸವು ಮುಗಿದ ನಂತರ ಸ್ಥಲವನ್ನು ಸ್ವಚ್ಛಗೊಳಿಸುವಿಕೆ, ಸಾಧನ ಸಲಕರಣೆಗಳನ್ನು ಅಚ್ಚುಕಟ್ಟಾಗಿ ಆ ಆ ಸ್ಥಲಗಳಲ್ಲಿಇಡಿಸುವಿಕೆ ಮುಂತಾದ ಕಾರ್ಯಗಳನ್ನು ಮಕ್ಕಳಿಂದಲೇ ಮಾಡಿಸುವದು.	
೪) ಪರಿಶೀಲನೆ:— ಅ) ಯೋಜನೆಗೂ ಆದ ಕೃತಿಗೂ ತುಲನೆ		ನಾವು ಏನು ಮಾಡಬೇಕೆಂದು ಮಾಡಿದ್ದೆವು? ನಮ್ಮ ಯೋಜನೆಯಂತೆ ಕಾರ್ಯ ಸಾಗಿತೋ ಇಲ್ಲವೋ	

ಮೆಟ್ಟಲುಗಳು	ಆವಶ್ಯಕ ಜ್ಞಾನ	ಕಲಿಸುವ ವಿಧಾನ	ಕ. ಹ. ಉಪಯೋಗ
		ಎಂಬುದನ್ನು ಚರ್ಚಿಸುವದು. ಉತ್ತಮ ಕೃತಿ ಮಾಡಿದವರನ್ನು ಪ್ರೋತ್ಸಾಹಿಸುವದು. ಮುಂತ್ರಿಯ ಕಡೆಯಿಂದಲೇ ಉತ್ತಮ ಕೃತಿಯ ಆಯ್ಕೆ ಮಾಡಿಸುವದು.	
ಬ) ಕಾರ್ಮಿಕ ತಪ್ಪುಗಳು		ಕೆಲಸದಲ್ಲಿ ಏನಾದರೂ ತಪ್ಪುಗಳಾಗಿದ್ದರೆ ಆ ತಪ್ಪುಗಳು ಯಾವವ್ರ? ಏಕೆ ಆದವು? ಹಾಗಾಗದಂತೆ ಯಾವ ಉಪಾಯಗಳನ್ನು ಕೈಕೊಳ್ಳಬೇಕಾಗುವದು-ಎಂಬ ಎಲ್ಲ ಅಂಶಗಳನ್ನು ಮಕ್ಕಳ ಕೂಡ ಚರ್ಚಿಸುತ್ತ ನಿವಾರಣೋಪಾಯಗಳನ್ನು ಹೇಳಿ ಕೊಡುವುದು.	
ಕ) ಅನಿರೀಕ್ಷಿತ ಘಟನೆಗಳು		ಆಕಸ್ಮಿಕ ಘಟನೆಗಳೇನಾದರೂ ಸಂಭವಿಸಿದ್ದಲ್ಲಿ ಯಾಕೆ? ಎಂತು? ಎಂಬ ಅಂಶಗಳನ್ನು ಚರ್ಚಿಸಿ ಮಕ್ಕಳ ಗಮನಕ್ಕೆ ತರುವುದು.	
೫) ದೃಢೀಕರಣ ಅಥವಾ ಸಮನ್ವಿತ ವಿಷಯಗಳು	ಈಗ ನಾವು ರಟ್ಟಿನಿಂದ ಒಂದು ಚಿಕ್ಕ ಡಬ್ಬಿಯನ್ನು ತಯಾರಿಸಿದೆವು. ಮಕರ ಸಂಕ್ರಮಣದ ದಿವಸ ಎಳ್ಳು-ಬೆಲ್ಲವನ್ನು ಹಾಕಿಟ್ಟುಕೊಳ್ಳುವ ಉದ್ದೇಶದಿಂದ ಇದನ್ನು ಸಿದ್ಧಗೊಳಿಸಿದೆವು. ಜನೇವರಿ ೧೪ನೆಯ ತಾರೀಖಿನ ದಿವಸ ಮಕರ ಸಂಕ್ರಮಣ ಹಬ್ಬವಿರುವದು. ಅಂದು ಸೂರ್ಯನು ಮಕರ ರಾಶಿಯನ್ನು ಪ್ರವೇಶಿಸುವನು. ಅಂದಿಗೆ ದಕ್ಷಿಣಾಯನವು ಮುಗಿದು ಉತ್ತರಾಯಣವು ಪ್ರಾರಂಭವಾಗುವದು. ಸಂಕ್ರಮಣ ಹಬ್ಬದ ದಿವಸ ಜನರೆಲ್ಲರೂ ಒಬ್ಬರಿಗೊಬ್ಬರು ಎಳ್ಳು-ಬೆಲ್ಲವನ್ನು ಕೊಟ್ಟು 'ನಾವು-ನೀವು ಎಳ್ಳು-ಬೆಲ್ಲದಂತಿರೋಣ'!	ಈಗ ನೀವು ಯಾವ ಕೆಲಸವನ್ನು ಮಾಡಿದಿರಿ? ಏತರಿಂದ ತಯಾರಿಸಿದಿರಿ? ಏತಕ್ಕಾಗಿ ತಯಾರಿಸಿದಿರಿ? ಅದರ ಉಪಯೋಗವನ್ನು ಎಂದು ಮಾಡಿಕೊಳ್ಳುವಿರಿ? ಹೇಗೆ ಮಾಡಿಕೊಳ್ಳುವಿರಿ? ಎಳ್ಳು-ಬೆಲ್ಲವನ್ನು ಏಕೆ ಕೊಡುವರು? ಉದ್ದೇಶವೇನು? ಎಂದು ಮುಂತಾಗಿ ಪ್ರಶ್ನಿಸುತ್ತ ಮಕ್ಕಳಿಗೆ ಮಕರ ಸಂಕ್ರಮಣ ಹಬ್ಬದ ಆಚರಣೆಯ ರೀತಿ, ಉದ್ದೇಶ ವಿಧಾನ ಮುಂತಾದ ಸಂಗತಿಗಳ ಬಗ್ಗೆ ಜ್ಞಾನವನ್ನುಂಟು ಮಾಡಿಕೊಡುವುದು.	ಮುಖ್ಯ ಅಂಶಗಳನ್ನು ಮಾತ್ರ ಕ. ಹ. ಮೇಲೆ ಬರೆಯುವದು.

ನಿಟ್ಟಲುಗಳು	ಆವಶ್ಯಕ ಜ್ಞಾನ	ಕಲಿಸುವ ಕ್ರಮ	ಕ. ಹ. ಉಪಯೋಗ
	ಎಂದು ಹಾರೈಸುವರು. ಎಳ್ಳು--ಬೆಲ್ಲವು ಸ್ನೇಹವ, ಪ್ರೀತಿಯ ದ್ಯೋತಕವಾಗಿದೆ. ಇಂಥ ಹಬ್ಬಗಳ ಆಚರಣೆಯ ಉದ್ದೇಶವು ವೈರವನ್ನು ಮರೆತು, ಪ್ರೀತಿಯಿಂದ ಇರುವದೇ ಆಗಿದೆ. ಪ್ರೀತಿಯಿಂದ ಬಾಳುವದೇ ಸುಖದ ಹಾದಿಯು. ಅಂಥ ಒಂದು ಹಾದಿಯನ್ನು ಜನರು ಅಂದು ತುಳಿಯಲು ಕಲಿಯುವರು.		

ಜೀವನ ಶಿಕ್ಷಣದಲ್ಲಿ ಪ್ರಾರ್ಥನೆಯ ಮಹತ್ವ

[ಬರೆದವರು: ಶ್ರೀ ಎನ್. ಬಿ. ಹೊಬ್ಬಿ, B. Sc. (HonS.), M. Ed. D. P. Ed., D. B. E.]
ಪ್ರಾಧ್ಯಾಪಕರು, ಜಿ. ಬಿ. ಟಿ. ಸಿ. ಧಾರವಾಡ.

ಶಿಕ್ಷಣದ ಸತ್ವವಸ್ತುವು ಮತ್ತು ಪೋಷಣಕ್ರಮವು, ಆ ಶಿಕ್ಷಣದ ಧ್ಯೇಯ ಸೋಪಾನಗಳನ್ನೇ ಅವಲಂಬಿಸಿರುವದು. ಮನೋದೈಹಿಕ ಸಮತೋಲ, ಕೌಶಲ್ಯ, ಮತ್ತು ಸಾಂಘಿಕ ಜೀವನದ ಚಟುವಟಿಕೆಗಳು. ಜೀವನ ಶಿಕ್ಷಣದ ಧ್ಯೇಯ ಸೋಪಾನಗಳನ್ನು ಸಾಧಿಸುವ ಮೂಲ ಅಂಗಗಳಾಗಿವೆ. ಪ್ರಾರ್ಥನೆಯು ಸಾಂಘಿಕ ಜೀವನದ ಚಟುವಟಿಕೆಗಳಲ್ಲಿ ಒಂದಾಗಿದೆ. ಹಾಗಾದರೆ ಪ್ರಾರ್ಥನೆಯಿಂದ ಜೀವನ ಶಿಕ್ಷಣದ ಯಾವ ಧ್ಯೇಯವನ್ನು ಸಾಧಿಸಬಹುದು ಮತ್ತು ಎಷ್ಟರ ಮಟ್ಟಿಗೆ ಎಂಬುದನ್ನು ವಿಚಾರಿಸುವಾ.

ಜೀವನ ಶಿಕ್ಷಣದ ಗುರುತರವಾದ ಧ್ಯೇಯಗಳಲ್ಲಿ, "ನವ ಸಮಾಜವನ್ನು ರಚಿಸುವದು" ಒಂದಾಗಿದೆ. ಅಂದರೆ ಪರಸ್ಪರ ಭೇದಭಾವದಿಂದ ಕೂಡಿದ ಮತ್ತು ಶೋಷಣೆಯುಕ್ತವಾದ ಸದ್ಯದ ಸಮಾಜವು ಅಳಿದು ಹೋಗಿ ಸಮ ಮತ್ತು ವರ್ಗಭೇದರಹಿತವಾದ ಹೊಸ ಸಮಾಜವು ಉಂಟಾಗಬೇಕು. ಇಂಥ ನವ ಸಮಾಜವು ರಚಿಸಲ್ಪಡಬೇಕಾದರೆ, ಅದರ ಮುಹೂರ್ತದ ಘಟಕಗಳಾಗುವ ಇಂದಿನ ಸಾಲೆಯ ಮಕ್ಕಳು ಚಿಕ್ಕಂದಿನಿಂದಲೇ ಶಿಕ್ಷಣ ಹೊಂದಬೇಕು. ಅಂದರೆ ಅವರ ವ್ಯಕ್ತಿತ್ವವು ಧಾರ್ಮಿಕ, ಸಾಮಾಜಿಕ, ಸಾಂಸ್ಕೃತಿಕ, ಶೈಕ್ಷಣಿಕ, ಮಾನಸಿಕ ಮತ್ತು ಶಾರೀರಿಕ— ಹೀಗೆ ಸರ್ವಮುಖಗಳಲ್ಲಿಯೂ ವಿಕಾಸಹೊಂದಬೇಕು. ಇಂಥದೊಂದು ವಿಕಾಸಗೊಳಿಸುವ ಮತ್ತು ಪರಿಣಾಮಕಾರಿಯಾದ ಸಾಧನಗಳಲ್ಲಿ ಪ್ರಾರ್ಥನೆಯೂ ಒಂದಾಗಿದೆಯೆಂದರೆ ತಪ್ಪಾಗದು. ಮಕ್ಕಳ ವಿಕಾಸವು ಈ ವಿವಿಧ ಮುಖಗಳಲ್ಲಿ ಆಗುವದಕ್ಕೆ ಪ್ರಾರ್ಥನೆಯು ಎಷ್ಟರ ಮಟ್ಟಿಗೆ ಸಹಾಯಕಾರಿಯಾಗಿದೆಯೆಂಬುದನ್ನು ನೋಡುವಾ.

ಧಾರ್ಮಿಕ ವಿಕಾಸದಲ್ಲಿ ಪ್ರಾರ್ಥನೆ:— ವಿಶೇಷತಃ ನಮ್ಮ ರಾಷ್ಟ್ರದಲ್ಲಿ ಅನೇಕ ಧರ್ಮಗಳಿರುವವು. ದೇವರನ್ನು ಪ್ರಾರ್ಥಿಸುವ ಉದ್ದೇಶವು ಎಲ್ಲ ಧರ್ಮಗಳಲ್ಲಿದ್ದರೂ ಬೇರೆ ಬೇರೆ ಧರ್ಮಗಳಲ್ಲಿ ಬೇರೆ ಬೇರೆ ಆಚರಣೆಗಳನ್ನು (Rituals) ಹಾಕಿ ಕೊಡಲಾಗಿದೆ. ಒಂದು ಧರ್ಮದವರು ಮೂರ್ತಿಪೂಜಕರಾಗಿದ್ದರೆ, ಮತ್ತೊಂದು ಧರ್ಮದವರು ಶಕ್ತಿಪೂಜಕರಾಗಿರುವರು. ಒಬ್ಬರು ಕೂಗಿ ಪ್ರಾರ್ಥಿಸಿದರೆ, ಮತ್ತೊಬ್ಬರು ಮೌನವಾಗಿ

ಪ್ರಾರ್ಥಿಸುವರು. ಒಬ್ಬರು ಎದ್ದು ನಿಂತು ಪ್ರಾರ್ಥಿಸಿದರೆ, ಮತ್ತೊಬ್ಬರು ಕುಳಿತು ಪ್ರಾರ್ಥಿಸುವರು. ಒಬ್ಬರು "ರಾಮ", ಎಂದರೆ ಮತ್ತೊಬ್ಬರು "ರಹಿಮ" ಎಂದೂ, ಇನ್ನೊಬ್ಬರು "ಕ್ರೈಸ್ತ" ಎಂದೂ ಮುಂತಾಗಿ ಉಚ್ಚರಿಸುವರು. ಇಂಥ ಭಿನ್ನತೆಗಳು "ನವ ಸಮಾಜ ರಚನೆಯಲ್ಲಿ" ಕೆಲವು ಕಡೆಗೆ ಆತಂಕಗಳಾಗಿ ಪರಿಣಮಿಸದೆ ಇರಲಾರವು. ಯಾಕಂದರೆ ನವ ಸಮಾಜದ ಧರ್ಮವು ಒಂದೇ. ಅದು ಮಾನವ ಧರ್ಮ. ಸರ್ವ ಧರ್ಮಗಳು ಸಮಾವೇಶವಾಗಿ ಈ ಮಾನವ ಧರ್ಮವು ಸ್ಥಾಪಿಸಲ್ಪಡಬೇಕು. ಆದರೆ ವಿವಿಧ ಧರ್ಮಗಳಿಂದ ಕೂಡಿದ ಮತ್ತು ಅನೇಕ ವರ್ಷಗಳಿಂದ ಸಾಂಪ್ರದಾಯಕವಾಗಿ ನಡೆದು ಬಂದ ನಮ್ಮ ರಾಷ್ಟ್ರದಲ್ಲಿಯ ಸಮಾಜಗಳನ್ನು ಏಮೂಲಾಗ್ರವಾಗಿ ಒಮ್ಮೆಲೇ ಬದಲಿಸಿ ಮೇಲೆ ವಿವರಿಸಿದ ನವ ಸಮಾಜವನ್ನು ರಚಿಸುವದು ಅತ್ಯಂತ ಸಾಹಸದ ಸಂಗತಿ. ಒತ್ತಾಯವಂತೂ ಎಳ್ಳಷ್ಟೂ ಫಲಕಾರಿಯಾಗದು. ಇದು ಸರ್ವಧರ್ಮ ಸಮನ್ವಯದಿಂದಲೇ ಸಾವಕಾಶವಾಗಿ ಸಾಧ್ಯವಾಗುವಂತಹದು. ಈ ಸರ್ವಧರ್ಮ ಸಮನ್ವಯ ಕಾರ್ಯಸಿದ್ಧಿಗೆ ಎಲ್ಲ ಧರ್ಮಗಳಿಗೂ ಮೂಲ ಭೂತವಾಗಿರುವ ಧ್ಯೇಯಗಳೇ ಆಧಾರಸ್ತಂಭಗಳಾಗಿರುವವು. ದೇವರನ್ನು ಪ್ರಾರ್ಥಿಸಬೇಕೆಂಬುವದು ಎಲ್ಲ ಧರ್ಮಗಳಲ್ಲಿಯೂ ಹೇಳಿ ಕೊಟ್ಟ ಸಂಗತಿಯಿದೆ. ಆದರೆ ಈ ಪ್ರಾರ್ಥನೆಯನ್ನು ಸಲ್ಲಿಸುವ ರೀತಿಗಳು ಬೇರೆಯಾಗಿವೆ. ಜೀವನ ಶಿಕ್ಷಣದ ತತ್ತ್ವದ ಪ್ರಕಾರ ಎಲ್ಲ ಧರ್ಮಗಳ ಈ ಮೂಲಭೂತವಾದ ಹೇಳಿಕೆಯನ್ನು ತಳಹದಿಯಾಗಿಟ್ಟು ಕೊಂಡು ಪ್ರಾರ್ಥನೆಯೆಂಬ ಚಟುವಟಿಕೆಯನ್ನು ಅದರ ಪಠ್ಯವಸ್ತುವಿನಲ್ಲಿಯ ಒಂದು ಅಂಶ ಎಂದು ಇಟ್ಟು ಕೊಂಡಿದೆ. ಭಿನ್ನ ಭಿನ್ನ ಧರ್ಮಾಚರಣೆಗೆ ತಕ್ಕ ಸ್ವಾತಂತ್ರ್ಯವನ್ನು ಕೊಟ್ಟಿದೆ. ಅಂದರೆ ಪ್ರಾರ್ಥನೆಯ ಕಾಲಕ್ಕೆ ಆಯಾ ಧರ್ಮದವರು ತಮ್ಮ ಆಯಾ ಧರ್ಮ ಗ್ರಂಥಗಳನ್ನು ಪಠಿಸಬಹುದು. ತಮ್ಮ ಆಚರಣೆಗಳನ್ನು ಕೈಕೊಳ್ಳಬಹುದು. ಆದರೆ ಈ ಆಚರಣೆಗಳು ಸರ್ವ ಧರ್ಮಗಳಿಗೂ ಸಮ್ಮತವಾಗುವ ಅಂಶಗಳಿಂದ ಕೂಡಿ ಕೊಂಡಿರಬೇಕು. ಉದಾಹರಣಾರ್ಥವಾಗಿ ನಿಸರ್ಗವನ್ನು ಕುರಿತು ಪ್ರಾರ್ಥಿಸುವ ಪದ್ಯಗಳು ಎಲ್ಲರಿಗೂ ಒಪ್ಪಿತವಾಗುವವು. ಹೀಗಿದ್ದರೆ ಮಾತ್ರ ಒಂದು ಧರ್ಮದವರು ಪ್ರಾರ್ಥನೆಯನ್ನು ಮಾಡುತ್ತಿರುವಾಗ ಮತ್ತೊಂದು ಧರ್ಮದವರು ಸಹಾನುಭೂತಿಯನ್ನು ನೀಡಲು ಮತ್ತು ಸಾಧ್ಯವಾದಲ್ಲಿ ಪ್ರತ್ಯಕ್ಷ ಭಾಗವಹಿಸಲು ಪ್ರೇರಣೆ ಹೊಂದುವರು. ಇಂಥದೊಂದು ಸಾಂಪ್ರದಾಯವನ್ನು ನಿತ್ಯವೂ ಪ್ರಾರ್ಥನೆಯಲ್ಲಿ ಅನುಸರಿಸಿದರೆ ಭಿನ್ನ ಭಿನ್ನ ಧರ್ಮಗಳ ಬಗ್ಗೆ ಇರುವ ಅನೇಕ ತಪ್ಪು ಕಲ್ಪನೆಗಳೂ, ಭಯಭೀತಿಗಳೂ, ಕಡಿಮೆಯಾಗಿ ಎಲ್ಲ ಧರ್ಮಗಳ ಮೂಲ ಅಂಶಗಳು ಸಮಾವೇಶ ಹೊಂದಲು ಸಾಧ್ಯವಾಗುವದು. ಆಗ ಜೀವನ ಶಿಕ್ಷಣದ, "ಸರ್ವ ಧರ್ಮ ಸಮನ್ವಯ" ಗುರಿಯನ್ನು ಸಾಧಿಸಲು ಪ್ರಾರ್ಥನೆಯು ಒಂದು ಯೋಗ್ಯ ಉಪಾಯವಾಗಿ ಪರಿಣಮಿಸುವದು. ಜೀವನ ಶಿಕ್ಷಣ ಕ್ಷೇತ್ರದಲ್ಲಿ ನಡೆಯುತ್ತಿರುವ ಪ್ರಾರ್ಥನೆಯಲ್ಲಿ ಇಂಥ ದೊಂದು ಮೂರ್ತಿಯನ್ನೇ ಪೂಜಿಸಬೇಕು, ಇಂಥ ಧರ್ಮ ಗ್ರಂಥದ ಪದ್ಯವನ್ನೇ ಹೇಳಬೇಕು, ಮುಂತಾಗಿ ನಿರ್ಬಂಧಗಳೇನೂ ಇಲ್ಲ. ಹಿಂದುಗಳು ಉಪನಿಷತ್ತಿನ ಶ್ಲೋಕಗಳನ್ನು ಹೇಳಬಹುದು. ಮುಸಲ್ಮಾನರು ಕುರಾನನ್ನು ಪಠಿಸಬಹುದು. ಕ್ರಿಶ್ಚಿಯನ್ನರು ಬೈಬಲನ್ನು ಓದಬಹುದು. ಈ ದಿಶೆಯಲ್ಲಿ ಸಂಪೂರ್ಣ ವ್ಯಕ್ತಿ ಮತ್ತು ಧರ್ಮ ಸ್ವಾತಂತ್ರ್ಯಗಳನ್ನು ಕೊಡಲಾಗಿದೆ. ಆದರೆ ಕೇವಲ ನಿರ್ದಿಷ್ಟ ಧರ್ಮಕ್ಕೆ ಅನ್ವಯಿಸುವ ಆಚರಣೆಗಳನ್ನು ಮಾತ್ರ ಜೀವನ ಶಿಕ್ಷಣವು ಸ್ವೀಕರಿಸುವದಿಲ್ಲ. ಪೂರ್ಣ ಧರ್ಮ ಸ್ವಾತಂತ್ರ್ಯವನ್ನು ಕೊಟ್ಟಿದೆ ಹೊರತು ಜಾತೀಯತೆಗೆ ಎಡೆಯಿಲ್ಲ. ಪ್ರಾರ್ಥನೆಯು ಸರ್ವಧರ್ಮಗಳ ಮೂಲಭೂತ ತತ್ತ್ವಗಳನ್ನೊಳಗೊಂಡಿದೆ. ಆದರೆ ಅದು ಆಯಾ ಧರ್ಮಗಳಲ್ಲಿ ಹಾಕಿ ಕೊಟ್ಟ ಮೂಢ ಶಿಷ್ಟಾಚಾರಗಳನ್ನು ಪರಿಗಣಿಸುವದಿಲ್ಲ. ಒಟ್ಟಾರೆ ಈ ಪ್ರಾರ್ಥನೆಯು ಸರ್ವಧರ್ಮಗಳಲ್ಲಿಯ ಸಾತ್ವಿಕ ಅಂಶಗಳನ್ನು ಒಂದುಗೂಡಿಸಿ, ಮಾನವಕೋಟಿಯ ಹಿತಸಾಧನೆಗೆ ಸಹಾಯವಾಗುವ ಧರ್ಮವೊಂದನ್ನು ಸ್ಥಾಪಿಸಲು, ಜೀವನ ಶಿಕ್ಷಣದಲ್ಲಿ ಸಹಾಯವಾಗುವದೆಂದು ಹೇಳಿದರೆ ಅತಿಶಯೋಕ್ತಿಯೆನಿಸಲಾರದು.

ಸಾಮಾಜಿಕ ಮತ್ತು ಸಾಂಸ್ಕೃತಿಕ ವಿಕಾಸದಲ್ಲಿ ಪ್ರಾರ್ಥನೆ:— ವ್ಯಕ್ತಿಯ ಸಾಮಾಜಿಕ ವಿಕಾಸವಾಗ ಬೇಕಾದರೆ ಅವನಲ್ಲಿ ಪ್ರೇಮ, ಸಹಕಾರ, ಸಹಾನುಭೂತಿ, ಇತ್ಯಾದಿ ಗುಣಗಳು ರಕ್ತಗತವಾಗಬೇಕಲ್ಲದೆ ಅವು ಬೆಳೆಯುತ್ತ ಹೋಗಬೇಕು. ಇಂಥ ಗುಣಗಳಿಂದ ಉಂಟಾಗುವ ಕ್ರಿಯೆ, ಪ್ರತಿಕ್ರಿಯೆಗಳು ಸಂಕುಚಿತವಾಗಿರದೆ ವಿಶಾಲವಾಗುತ್ತ ಹೋಗಬೇಕು. ಅಂದರೆ ಮನೆ, ಸಾಲೆ, ಊರು, ರಾಷ್ಟ್ರ, ವಿಶ್ವ ಮೊದಲಾದ ಎಲ್ಲ

ಸಾಮಾಜಿಕ ಸಂಸ್ಥೆಗಳಲ್ಲಿಯೂ ಯೋಗ್ಯ ಸಮಾಜ ಘಟಕನಾಗಬೇಕು. ಇವಕ್ಕಾಗಿ ಬೇರೆ ಬೇರೆ ಹಂತಗಳಲ್ಲಿ ಬೇಕಾಗುವ ಸಾಮಾಜಿಕ ವೃತ್ತಿಗಳ ವೈಶಾಲ್ಯತೆಯನ್ನು ಪಡೆದುಕೊಳ್ಳಬೇಕಾಗುವದು. ಭಾಷೆಯ ಭಿನ್ನತೆಗಳು, ಧರ್ಮದ ವೈವಿಧ್ಯತೆಗಳು, ಊಟ ಉಡಿಗೆಗಳ ಅಭಿರುಚಿಗಳು, ಇಂಥ ಯಾವ ಸಂಗತಿಗಳೂ ಅವನ ಸಾಮಾಜಿಕ ವೃತ್ತಿಗಳ ಬೆಳವಣಿಗೆಗೆ ಅತಂಕಗಳಾಗಬಾರದು. ಇಡೀ ಮಾನವ ಕೋಟಿಯೇ ಅವನ ಬಳಗವಾಗಬೇಕು. ಗಾಂಧೀಜಿ, ವಿನೋಬಾಜಿಯಂಥ ಮಹಾಪುರುಷರು ನಿಶ್ಪಾಂಧನ್ಯವನ್ನು ಪ್ರತಿಪಾದಿಸಿದ್ದರ ಇಂಗಿತಾರ್ಥವು ಇದುವೇ ಎಂದು ಹೇಳಬಹುದು. ಅವರು ಈ ತತ್ವವನ್ನು ಕೇವಲ ಶಬ್ದಗಳಿಂದ ಉಪದೇಶಿಸದೆ, ಅದನ್ನು ಪ್ರತ್ಯಕ್ಷ ಕಾರ್ಯರೂಪಕ್ಕಿಳಿಸಲು ಪ್ರಾರ್ಥನೆಯೆಂಬುದನ್ನು ಒಂದು ಸಾಧನವಾಗಿ ಉಪಯೋಗಿಸಿರುವರು. ಅವರು ಕೈಕೊಳ್ಳುತ್ತಿರುವ ಪ್ರಾರ್ಥನೆಯ ಕಾರ್ಯಕ್ರಮವು, ವೈಯಕ್ತಿಕವಾಗಿರಲಿಲ್ಲ. ಅತ್ಯಂತ ವಿಶಾಲವಾದ ಬಯಲಿನಲ್ಲಿ, ಎಲ್ಲ ಪ್ರಕಾರದ ಜನರು ಯಾವ ತರದ ಭೇದ ಭಾವನೆಗಳನ್ನು ಇಟ್ಟುಕೊಳ್ಳದೆ ಒಂದೆಡೆ ಸೇರಿ ಒಮ್ಮನಸ್ಸಿನಿಂದ ದೇವರನ್ನು ಪ್ರಾರ್ಥಿಸುವಂತೆ ಯೋಜನೆಯನ್ನು ಹಾಕಿಕೊಟ್ಟಿರುವರು. ಸ್ಥಳ, ವೇಳೆ, ಜನಾಂಗ ಮೊದಲಾದ ಅಂಶಗಳ ಯಾವ ನಿರ್ಬಂಧಗಳೂ ಸಮಾವೇಶಗೊಂಡಿರುವದಿಲ್ಲ. ಪ್ರಾರ್ಥನೆಯ ಅಂಶಗಳು ಸಂಕುಚಿತವಾಗಿರದೆ ಇಡೀ ಮಾನವಕೋಟಿಗೆ ಅನ್ವಯಿಸುವಂಥವುಗಳಿರುವವು. ವಿನೋಬಾಜಿಯವರು ಕೈಕೊಳ್ಳುತ್ತಿರುವ ಮೌನ ಪ್ರಾರ್ಥನೆಯು ಸರ್ವರಿಗೂ ಬಾಗವಹಿಸುವಂತಹುದಿರುತ್ತದೆ. ಪ್ರಾರ್ಥನೆಯ ಕಾಲಕ್ಕೆ ಹೆಚ್ಚೆಚ್ಚು ಜನರನ್ನು ಸೇರಿಸುವ ನೆವದಿಂದ, ಇವರ ಸಂತೋಷವನ್ನು ಹೆಚ್ಚುವದು. ಇಂಥ ಸಾಮೂಹಿಕ ಪ್ರಾರ್ಥನೆಯಿಂದ, ವ್ಯಕ್ತಿಯು ಸಾಮಾಜಿಕ ಕ್ಷೇತ್ರವು ವಿಶಾಲವಾಗುವದು. ಮತ್ತು ಸ್ನೇಹ, ಸಹಕಾರ, ಸಹಾನುಭೂತಿಗಳಂಥ ಸಾಮಾಜಿಕ ವೃತ್ತಿಗಳು ಕ್ರಮವಾಗಿ ವಿಶಾಲವಟ್ಟದಲ್ಲಿ ವಿಕಾಸ ಹೊಂದುವದಕ್ಕೆ ತಕ್ಕ ಅವಕಾಶ ದೊರೆಯುವದು ಎಂಬ ಸಂಗತಿಯು ಸಾಮಾನ್ಯರಿಗೆ ಮನವರಿಕೆಯಾಗುವಂತಿದೆ. ಈ ದೃಷ್ಟಿಯಿಂದ ವಿಚಾರಿಸಲಾಗಿ ಶಿಕ್ಷಣದಲ್ಲಿ ಸಾಮೂಹಿಕ ಪ್ರಾರ್ಥನೆಯು ಅತ್ಯಂತ ಸಹಾಯಕಾರಿಯಾಗಿದೆ ಎನ್ನಬಹುದು. ಮಗುವು ಚಿಕ್ಕಂದಿನಲ್ಲಿ ತನ್ನ ಕುಟುಂಬ ಎಂಬ ಸಾಮಾಜಿಕ ಸಂಸ್ಥೆಗೆ ಮರ್ಯಾದಿತವಾಗಿದ್ದರೆ, ಶಾಲೆಯಲ್ಲಿ ಕಾಲಿಟ್ಟಾಗ ಅವನ ಸಮಾಜ ಕ್ಷೇತ್ರವು ವಿಸ್ತೃತವಾಗುವದು. ಅದಕ್ಕನುಗುಣವಾಗುವ ಸಾಮಾಜಿಕಗುಣಗಳನ್ನು ವಿಶಾಲಗೊಳಿಸುವದಕ್ಕೆ ಪ್ರತಿನಿತ್ಯವೂ ಶಾಲೆಯ ಸಮಾಜದಲ್ಲಿ ಸಾಮೂಹಿಕವಾಗಿ ಪಾರ್ಥನೆಯನ್ನು ಕೈಕೊಳ್ಳುವದರಿಂದ ಅವಕಾಶ ದೊರೆಯದೇ ಇರದು. ಇದರಂತೆ ತನ್ನ ಊರು, ರಾಷ್ಟ್ರ ಕೊನೆಗೆ ವಿಶ್ವ ಎಂಬ ಸಮಾಜಗಳಲ್ಲಿ ಹೊಂದಿಕೆಯಾಗುವಂತೆ ತನ್ನ ಸಾಮಾಜಿಕ ಗುಣಗಳನ್ನು ಅಳವಡಿಸಿಕೊಳ್ಳಬಹುದು.

ಶಾಲೆಯು ಒಂದು ಪುಟ್ಟ ಸಮಾಜವು. ಮಕ್ಕಳಲ್ಲಿ ಭೇದಭಾವಗಳು ಅಷ್ಟೊಂದು ಬಲಪಟ್ಟಿರುವದಿಲ್ಲ. ದಿನಾಲು ಎಲ್ಲ ಮಕ್ಕಳು ಒಂದೆಡೆ ಸೇರುವಂತೆ ಮಾಡಿ, ಅವರಲ್ಲಿ ಪರಸ್ಪರ ಪ್ರೇಮ, ಆದರ, ವಿಶ್ವಾಸ, ಸಹಕಾರ ಮೊದಲಾದ ಸಾಮಾಜಿಕ ವೃತ್ತಿಗಳು ಬೇರೂರುವಂತೆ ಮಾಡುವದು ಸುಲಭಸಾಧ್ಯ. ಒಂದೆಡೆ ಸೇರುವದಕ್ಕೆ ಪ್ರಾರ್ಥನೆಯು ಅತ್ಯಂತ ಯೋಗ್ಯ ಸಾಧನವಾಗಿದೆ. ವ್ಯಕ್ತಿಯಲ್ಲಿ ಸಾಮಾಜಿಕ ವೃತ್ತಿಗಳು ಬಲಪಟ್ಟಂತೆ ಅವನ ಶೀಲ ಸಂಸ್ಕೃತಿಗಳು ಬೆಳೆಯುವವು. ವಿವೇಕ ಹಿತಾಹಿತ, ಯೋಗ್ಯಾಯೋಗ್ಯ ಮೊದಲಾದವುಗಳನ್ನು ಚಿಕಿತ್ಸಾತ್ಮಕ ದೃಷ್ಟಿಯಿಂದ ನೋಡಿ ಅಳೆಯುವ ಸಾಮರ್ಥ್ಯಗಳೂ ಕೂಡ ಬೆಳೆಯುವದಕ್ಕೆ ಈ ಸಾಂಘಿಕ ಜೀವನವು ಸಹಾಯವಾಗುವದು.

ಶೈಕ್ಷಣಿಕ ವಿಕಾಸದಲ್ಲಿ ಪ್ರಾರ್ಥನೆ:— ಪ್ರಾರ್ಥನೆಯು ಮಕ್ಕಳ ಮನೋವಿಜ್ಞಾನದ ದೃಷ್ಟಿಯಿಂದಲೂ, ಶಿಕ್ಷಣದಲ್ಲಿ ವಿಶೇಷ ಸ್ಥಾನವನ್ನು ಪಡೆದಿದೆ. ಶಿಕ್ಷಣದ ಬೋಧನ ಕ್ರಮವು, ಪಠ್ಯವಸ್ತುವು ಮತ್ತು ಚಟುವಟಿಕೆಗಳು, ಮಕ್ಕಳ ಮನೋವಿಜ್ಞಾನದ ಮೇಲೆ ಅವಲಂಬಿಸಿರಬೇಕೆಂಬುದು ಸರ್ವ ಸಮ್ಮತವಾಗಿದೆ. ಅಂದರೆ ಮಕ್ಕಳ ಅವಧಾನ, ಆಸ್ಥೆ, ಸ್ಮರಣೆ, ವಿವೇಕ ಮೊದಲಾದ ಮನಸ್ಸಿನ ಶಕ್ತಿಗಳು ಚಟುವಟಿಕೆಗಳಲ್ಲಿ ಸ್ವಾಭಾವಿಕವಾಗಿ ತೊಡಗಿ ಮಕ್ಕಳು ಪರಮಾವಧಿ ಸಾಮರ್ಥ್ಯದಿಂದ ಆ ಚಟುವಟಿಕೆಗಳನ್ನು ಕೊನೆಗಾಣಿಸುವಂತೆ ವಾತಾವರಣ ಉಂಟಾಗಬೇಕೆಂಬುದು ಶಿಕ್ಷಣದ ತತ್ತ್ವವಾಗಿದೆ. ಮತ್ತು ಇಂಥ ಚಟುವಟಿಕೆಗಳಲ್ಲಿ ತೊಡಗಿದಾಗ ಮಕ್ಕಳ ಮೂಲ ಪ್ರವೃತ್ತಿಗಳು ಉದಾತ್ತೀಕರಣ ಹೊಂದಿ ಅವರ ನೈತಿಕ, ಸಾಂಸ್ಕೃತಿಕ ಮತ್ತು ಸಾಮಾಜಿಕ ಮಟ್ಟಗಳು ಬೆಳೆಯುವಂತಿರಬೇಕು. ಈ ಶೈಕ್ಷಣಿಕ ತತ್ತ್ವವನ್ನು ಕಾರ್ಯಾಚರ

ಣೆಗೆ ತರುವದಕ್ಕಾಗಿ ಪ್ರಾರ್ಥನೆಯು ಒಂದು ಸೂತ್ರವಾಗಿ ಪರಿಣಮಿಸುವದೆನ್ನಬಹುದು. ಎಷ್ಟೇ ಚಿಕ್ಕವುಕ್ಕಳಿದ್ದರೂ ಪ್ರಾರ್ಥನೆಯು ಮುಗಿಯುವವರೆಗೆ ಅವರ ಆಸ್ಪಿ ಅವಧಾನ ಗಳು ಕುಂದುವದಿಲ್ಲವೆಂಬುದು ಅನೇಕರು ಅನುಭವಿಸಿದ ಮಾತಾಗಿದೆ. ಯಾವದೇ ಶ್ಲೋಕ ಇಲ್ಲವೆ ಪದ್ಯವನ್ನು ತಾನೂ ಕಂಠಪಾಠ ಮಾಡಿ ಇತರರೊಡನೆ ಧ್ವನಿಗೂಡಿ ಸುವ ಹಂಬಲವು ಪ್ರತಿಯೊಂದು ಚಿಕ್ಕ ಮಗುವಿನಲ್ಲಿ ಬಲ ವಾಗಿದ್ದದ್ದು ಕಂಡು ಬರುವದು. ಇಂಥ ಅನುಕರಣ ವೃತ್ತಿಗೆ ಪ್ರಾರ್ಥನೆಯು ತಕ್ಕ ಆಸ್ಪದವನ್ನು ಕೊಡುವ ದೆಂದು ಧಾರಾಳವಾಗಿ ಹೇಳಬಹುದು. ತನ್ಮೂಲಕ ಮಕ್ಕಳಲ್ಲಿ ನಿಯಮಿತತನ, ಸ್ವಯಂಶಿಸ್ತು, ದೈವಿಕ ಭಾವನೆ ಮೊದಲಾದವುಗಳು ನೆಲೆಯೂರುವಂತೆ ಮಾಡಲು ಪ್ರಾರ್ಥನೆಯು ಆಕರ್ಷಕವಾದ ನೈಜ ಚಟುವಟಿಕೆಯಾಗಿ ಪರಿಣಮಿಸುವದೆಂಬುದರಲ್ಲಿ ಸಂದೇಹವಿಲ್ಲ. ಇದಲ್ಲದೆ ಪ್ರಾರ್ಥನೆಯಲ್ಲಿ ಅನೇಕ ಸಾಂಪ್ರದಾಯಿಕ ವಿಷಯಗಳು ಸಮವಾಯಗೊಳ್ಳುವದರಿಂದ, ಅಂಥ ವಿಷಯಗಳ ಜ್ಞಾನವು ಕೂಡ ಮಕ್ಕಳಿಗೆ ಸುಲಭ ಸಾಧ್ಯವಾಗುವದು.

ಶಾರೀರಿಕ ಹಾಗೂ ಮಾನಸಿಕ ವಿಕಾಸದಲ್ಲಿ ಪ್ರಾರ್ಥನೆ:— ತೀರ ಕಡಿಮೆಯೆಂದರೆ ಪ್ರಾರ್ಥನೆಯು ಸಾಮಾನ್ಯವಾಗಿ ಹತ್ತು ನಿಮಿಷಗಳಾದರೂ ನಡೆಯುವದು. ಗಾಂಧೀಜಿಯವರು ತಮ್ಮ ಪ್ರಾರ್ಥನೆಯನ್ನು ಸುಮಾರು ಅರ್ಧ ಘಂಟೆಯ ವರೆಗೆ ನಡೆಯಿಸುತ್ತಿದ್ದರು. ಪ್ರಾರ್ಥನೆಯ ಕಾಲದಲ್ಲಿ ಅವರು ವಿಶಿಷ್ಟ ಆಸನವನ್ನು ಕೈಕೊಳ್ಳುತ್ತಿದ್ದರು. ವಿನೋಬಾಜಿಯವರು ಪ್ರಾರ್ಥನೆಯನ್ನು ನಲ್ಲಿಸುವಾಗ ಈ ವಿಶಿಷ್ಟ ಆಸನದ ಮಹತ್ವವನ್ನೂ ಕೂಡ ಅನೇಕ ಸಲ ಹೇಳಿದ್ದುಂಟು. ಪ್ರಾರ್ಥನೆಯ ಕಾಲಕ್ಕೆ ಸಾಮಾನ್ಯವಾಗಿ ಕೈಕೊಳ್ಳುವ ಆಸನವೆಂದರೆ ಪದ್ಮಾಸನ. ಆಸನಗಳಿಂದ ಶರೀರದ ಅಂಗಾಂಗಗಳಿಗೆ ಯೋಗ್ಯ ವ್ಯಾಯಾಮ ದೊರೆಯುವದು. ಆದರೆ ಆಸನಗಳನ್ನು ಕೇವಲ ಕಸರತ್ತಿಗಾಗಿ ಕೈಕೊಳ್ಳದೆ ಅವುಗಳನ್ನು ನಿಯಮಿತತನದಿಂದ ಸಾಕಷ್ಟು ದೀರ್ಘಾವಧಿಯ ವರೆಗೆ ಕೈಕೊಳ್ಳಬೇಕು. ಪ್ರಾರ್ಥನೆಯು ನಿತ್ಯವೂ ನಡೆಯುವದು. ಸುತ್ತು ೧೦ ನಿಮಿಷಗಳಿಂದ ೩೦ ನಿಮಿಷಗಳ ವರೆಗೆ ನಡೆಯುವಂತಹದು. ಹೀಗಿದ್ದಾಗ ಪ್ರಾರ್ಥನೆಯ ಕಾಲಕ್ಕೆ ಪದ್ಮಾಸನವನ್ನು ಕೈಕೊಂಡರೆ ಆ ಆಸನದ ಪರಮಾವಧಿ ಲಾಭವು ಶರೀರಕ್ಕೆ ಅನಾಯಾಸವಾಗಿ ದೊರೆಯುವದೆಂದು ಸ್ಪಷ್ಟವಾಗುವದು. ಪದ್ಮಾಸನದಿಂದ ದೀರ್ಘ ಶ್ವಾಸೋಚ್ಛ್ವಾಸದ ರೂಢಿಯಾಗುವದು. ಬೆನ್ನೆಲುಬುಗಳು ಬಾಗದೆ ನೇರವಾಗಿ ನಿಲ್ಲುವಂತೆ ಶಕ್ತಿಯುಂಟಾಗುವದು. ಎಲ್ಲ ಅವಯವಗಳಲ್ಲಿ ರಕ್ತಾಭಿಸರಣವು ಸುಲಭವಾಗಿ ಸಾಗುವದು. ಇಂಥ ಬೆಲೆ ಬಾಳುವ ಆಸನವನ್ನು ಪ್ರಾರ್ಥನೆಯ ಕಾಲಕ್ಕೆ ಅನಾಯಾಸವಾಗಿ ಕೈಕೊಳ್ಳುವದರಿಂದ ಶರೀರಕ್ಕೆ ವ್ಯಾಯಾಮ ಮಾಡುವದರಿಂದಾಗುವ ಲಾಭವನ್ನೂ ಒದಗಿಸಿಕೊಟ್ಟಂತಾಗುವದು. ಪ್ರಾರ್ಥನೆಯಲ್ಲಿ ಶಾಂತಿ ಸಾಧನೆಗೆ ಆಸ್ಪದ ನಿದೆ. "ಶಾಂತಿಃ" ಎಂದು ಆದೇಶವಿತ್ತಾಗ ೨–೩ ನಿಮಿಷ ಗಳ ವರೆಗೆ ಪ್ರತಿಯೊಂದು ವ್ಯಕ್ತಿಯು ತನ್ನ ಇಷ್ಟದೇವರಲ್ಲಿ ಮನಸ್ಸನ್ನು ತೊಡಗಿಸುವ ಪ್ರಯತ್ನ ಮಾಡಬೇಕೆಂದು ಆವೇಕ್ಷಿಸಲಾಗಿದೆ. ಪ್ರತಿನಿತ್ಯವೂ ಹೀಗೆ ೨–೩ ನಿಮಿಷ ಗಳ ವರೆಗೆ ಏಕಾಗ್ರಚಿತ್ತವುಳ್ಳವನಾಗುವದರಿಂದ, ಆ ವ್ಯಕ್ತಿಯ ಮನಸ್ಸಿನ ಏಕಾಗ್ರತೆಯ (Concentration) ಬೆಳೆಯುವದೆನ್ನವದರಲ್ಲಿ ಸಂದೇಹವಿಲ್ಲ. ಈ ಅಂಶವು ಪ್ರಾರ್ಥನೆಯಿಂದ ಎಷ್ಟೇ ಚಿಕ್ಕ ಪ್ರಮಾಣದಲ್ಲಿದ್ದರೂ ಅದು ನಿಯಮಿತತನದಿಂದ ನಡೆಯುವಂತೆ ಮಾಡಲು ಪ್ರಾರ್ಥನೆಯು ಅತ್ಯಂತ ಸಹಾಯಕಾರಿಯಾಗುವದು. ಈ ನಿಯಮಿತತನವೇ ಏಕಾಗ್ರಚಿತ್ತ ಸಾಧನೆಗೆ ಫಲಕಾರಿಯಾಗುವದು. ಈ ಮಹತ್ವವನ್ನು ಕಂಡು ಹಿಡಿದು ಗಾಂಧೀಜಿಯಂಥವರು ಊಟ, ನಿದ್ರೆಗಳನ್ನು ತ್ಯಜಿಸಿದರೂ ಪ್ರಾರ್ಥನೆಯನ್ನು ತ್ಯಜಿಸಲು ಸಾಧ್ಯವಿಲ್ಲವೆಂಬುವಂಥ ಮನೋಭಾವನೆಯನ್ನು ತಾಳಿರಬಹುದು.

ಪ್ರಾರ್ಥನೆಯು ಯಾವದೊಂದು ತಂತ್ರವಲ್ಲ. ಪದ್ಧತಿಯಲ್ಲ. ಗೂಢವಾದ ಕಾಯದೆ ಕಾನೂನುಗಳಿಗೆ ಒಳಪಟ್ಟದ್ದಲ್ಲ. ನರ್ವ ಪ್ರಾಣಿಗಳಿಗೂ ಬೇಕು ಎಂದೆನಿಸಿ ದೇವರನ್ನು ಭಜಿಸುವ ಒಂದು ಚಟುವಟಿಕೆ. ಈ ಚಟುವಟಿಕೆಯನ್ನು ವ್ಯಕ್ತಿಯ ಸರ್ವತೋಮುಖ ಉನ್ನತಿಗೆ ಸಹಾಯವಾಗುವಂತೆ ಕೈಕೊಳ್ಳುವದು ಅವಶ್ಯ. ಗಾಂಧೀಜಿಯವರು ಹೇಳಿದಂತೆ, "ದೇವರ ಪೂಜೆಯೆಂದರೆ ದೇವರನ್ನು ಹೊಗಳುವದು, ಅವನ ಗುಣಗಾನ ಮಾಡುವದು, ಅವನೆದುರಿಗೆ ನಮ್ಮ ಎಲ್ಲ ಕುಂದು ಕೊರತೆಗಳನ್ನು, ನಮ್ಮ ತಪ್ಪುಗಳನ್ನು, ತಮ್ಮ ಮನೋದೌರ್ಬಲ್ಯವನ್ನು ಒಪ್ಪಿಕೊಳ್ಳುವದು. ದೇವನೆಂಬುವನು ಒಬ್ಬನೇ. ನಾವು ನಮಗೆ ಸರಿಹೋರಿದಂತೆ ರಾಮನೆಂದಾಗಲಿ, ಕೃಷ್ಣನೆಂದಾಗಲಿ, ರಹಿಮನೆಂದಾಗಲಿ ಅಥವಾ ಬೇರಿನ್ನಾವ ಹೆಸರಿನಿಂದಾಗಲಿ,

ಕರೆನು ಪೂಜಿಸಬಹುದು. ಆದರೆ ನಾನೆಲ್ಲ ಪೂಜಿಸುವನು ಒಂದೇ ಒಂದು ಚಿರಂತನನಾವ, ನಿರಾಕಾರನಾದ ಶಕ್ತಿಯನ್ನು; ಚೈತನ್ಯವನ್ನು" ಪ್ರಾರ್ಥನೆಯ ವಿಚಾರವು ಹೀಗಿದ್ದಾಗ ಇದು ಸರ್ವರಿಗೂ ಸುಲಭವಾಗಿ ಕೈಕೊಳ್ಳಲು ಸಾಧ್ಯವಾದದ್ದು. ಈ ಮೊದಲೇ ಹೇಳಿದಂತೆ ಇದರಲ್ಲಿ ವ್ಯಕ್ತಿ ಸ್ವಾತಂತ್ರ್ಯವಿದೆ. ಧರ್ಮ ಸ್ವಾತಂತ್ರ್ಯವಿದೆ. ಚಿಕ್ಕ ಮಗುವಿನಿಂದ ಇಳಿ ವಯಸ್ಸಿನ ವೃದ್ಧನ ವರೆಗೂ ತಮ್ಮ ತಮ್ಮ ಯೋಗ್ಯತೆ ಮತ್ತು ಪಾತಾವರಣಕ್ಕನುಸರಿಸಿ ಪ್ರಾರ್ಥನೆಯನ್ನು ಕೈಕೊಂಡು ತಮ್ಮ ಮಟ್ಟದಲ್ಲಿ ಮನಸ್ಸಿನ ಶಾಂತಿಯನ್ನು ತಂದುಕೊಳ್ಳಲು ಸಾಧ್ಯವಿದೆ. ತನ್ಮೂಲಕ ಸರ್ವಾಂಗೀಣ ಉನ್ನತಿಯನ್ನು ಪಡೆದು ವರ್ಗಭೇದ ವರ್ಣಭೇದಗಳಿಂದ ನಿರ್ಲಿಪ್ತವಾದ ನವ ಸಮಾಜದ ಯೋಗ್ಯ ಘಟಕಗಳಾಗಬಹುದು. ಆದರೆ ತಕ್ಕ ಆಚರಣೆಯನ್ನು ಮಾತ್ರ ಬಿಡಕೂಡದು. ಪ್ರಾರ್ಥನೆಯ ಮಹತ್ವವು ಅದರ ತತ್ತ್ವದಲ್ಲಿರದೆ ತಾತ್ಪರ್ಯವರಿತು, ಅದನ್ನು ಆಚರಿಸುವದಲ್ಲಿದೆ.

—: ಜೈ ಜಗತ್ :—

ರಾಷ್ಟ್ರೀಯ ಶಿಕ್ಷಣ ಮತ್ತು ಹಿಂದಿ

ಲೇಖಕರು : ಶ್ರೀ ಬಿ. ಜಿ. ಚಿಟಣೀಸ

ಜೀವನದ ಮುಖಾಂತರ, ಜೀವನಕ್ಕಾಗಿ, ಜೀವನದ ಶಿಕ್ಷಣ— ಇದು ಜೀವನ ಶಿಕ್ಷಣದ ಧ್ಯೇಯವಾಕ್ಯ. ಈ ವಾಕ್ಯದ ಮೂರು ಭಾಗಗಳಲ್ಲಿ ಪ್ರತಿಯೊಂದೂ ಅರ್ಥಗರ್ಭಿತವಾಗಿದೆ. ಅದರಲ್ಲಿ ಅಡಕವಾದ ವಿಚಾರಗಳನ್ನು ವ್ಯಕ್ತಗೊಳಿಸಲಿಕ್ಕೆ ಮಹಾಗಟ್ಟಿ ಬೇಕೆ ಬಿಕ್ಷಣಗಳನ್ನು ಬರೆಯಬಹುದು. ಹೇಳಿದ ಧ್ಯೇಯವಾಕ್ಯದಲ್ಲಿಯ ಎರಡನೆಯ ವಾಕ್ಯವನ್ನು ಹೇಳಿದರೆ ವಿಷಯವನ್ನು ವಿಶದಪಡಿಸಲು ಅನುಕೂಲವಾಗುವದು; ಎರಡನೆಯ ಮಾತು "ಜೀವನಕ್ಕಾಗಿ" ಎಂದಿದೆ. ಎಂಥ ಜೀವನ? ಯಾರ ಜೀವನ? ನಮ್ಮ ಈ ವಿಶಾಲವಾದ ರಾಷ್ಟ್ರದಲ್ಲಿರುವ ಪ್ರತಿಯೊಂದು ವ್ಯಕ್ತಿಯ ಜೀವನವಾನೇ ಇಲ್ಲಿ ಸೂಚಿತವಾಗಿದೆ. ರಾಷ್ಟ್ರದ ಪ್ರತಿಯೊಬ್ಬ ವ್ಯಕ್ತಿಯು ರಾಷ್ಟ್ರದ ಪೌಷ್ಟಿಕಕ್ಕೆ ಸಹಾಯಕಾರಿಯಾಗುವಂತೆ ತನ್ನ ಜೀವನಕ್ರಮವನ್ನು ಸಾಗಿಸಬೇಕು; ಹಾಗೆ ಸಾಗಿಸಲು ಬೇಕಾಗುವ ದಾರಿಬುತ್ತಿಕಟ್ಟಿಕೊಡುವುದೇ ಜೀವನ ಶಿಕ್ಷಣ; ಪರಿಪೂರ್ಣವಾದ ರಾಷ್ಟ್ರೀಯ ಜೀವನದತ್ತ ಕರೆದೊಯ್ಯುವದೇ ಜೀವನ ಶಿಕ್ಷಣದ ಗುರಿ. ಪರ್ಯಾಯ ಶಿಕ್ಷಣಪದ್ಧತಿ, ಮೂಲಶಿಕ್ಷಣ ಪದ್ಧತಿ ಮುಂತಾದ ಬೇರೆ ಬೇರೆ ಹೆಸರುಗಳನ್ನು ಪಡೆದ ಗಾಂಧೀ ಪ್ರಣೀತ ಶಿಕ್ಷಣದ ಪದ್ಧತಿಯೇ ಜೀವನ ಶಿಕ್ಷಣ. ರಾಷ್ಟ್ರದ ಉನ್ನತಿಗೆ ಬೇಕಾಗುವ ರಾಷ್ಟ್ರೀಯ ಶಿಕ್ಷಣ ಪದ್ಧತಿಯನ್ನು ಗಾಂಧೀಜಿಯವರು ಭಾರತಕ್ಕೆ ಕಾಣಿಕೆಯಾಗಿ ಇತ್ತಿದ್ದಾರೆ.

ಭಾರತಕ್ಕೆ ಭಾರತದ್ದೇ ಆದ ಒಂದು ಶಿಕ್ಷಣ ಪದ್ಧತಿ ಇದೆ ಎಂದು ಶಿಕ್ಷಣ ತಜ್ಞರು ಪ್ರತಿಪಾದಿಸುವಂತಾಗಿದೆ ಇಂದು. ಪರ್ಯಾಯಶಿಕ್ಷಣವು ಪ್ರಯೋಗಾವಸ್ಥೆಯನ್ನು ದಾಟಿ ಜೀವನ ಶಿಕ್ಷಣವೆಂಬ ಹೆಸರಿನಿಂದ ಸ್ಥಿರವಾದ ಸ್ಥಾನವನ್ನು ಪಡೆದುನಿಂತಿದೆ. ರಾಷ್ಟ್ರೀಯ ಜೀವನದತ್ತ ಪ್ರತಿಯೊಬ್ಬನನ್ನೂ ಕರೆದೊಯ್ಯಲೆತ್ನಿಸುವ ಈ ಶಿಕ್ಷಣ ಕ್ರಮವನ್ನು ಮುಗಿಸಿ ಹೊರಬೀಳುವ ಪ್ರತಿಯೊಬ್ಬನಲ್ಲಿ ರಾಷ್ಟ್ರೀಯ ಭಾವನೆಯ ಕಿಡಿ ಕಾಣಬೇಕೆಂದಪೇಕ್ಷಿಸುವದು ಸಹಜವಾದುದು. ರಾಷ್ಟ್ರೀಯತೆಯ ಕಟ್ಟಿನಲ್ಲಿ ಏಕಭಾವದಿಂದ, ಏಕಹೃದಯದಿಂದ ವಿಶಾಲವಾದ ಈ ರಾಷ್ಟ್ರದ ಜನತೆಯಲ್ಲಿ ಬರಬೇಕಾದರೆ ಎಲ್ಲರಿಗೂ ಪರಿಚಿತವಾದ ಒಂದು ಭಾಷೆ ಬೇಕು. ಈ ಭಾಷೆಯನ್ನು ನಾವು ಲೋಕ ಭಾಷೆಯೆಂದು ಕರೆಯೋಣ. ಈ ಲೋಕಭಾಷೆಯನ್ನು ಅರಿತವನು ಕಟಕದಿಂದ ಅಟಕದ ವರೆಗೆ, ಕಾಶ್ಮೀರದಿಂದ ಕನ್ಯಾಕುಮಾರಿಯ ವರೆಗೆ ಯಾವ ಅಡೆತಡೆಗಳೂ ಇಲ್ಲದೆ ಅಲೆದಾಡಬಹುದು. ಭಾರತದ ಬೇಕಾದ ಪ್ರದೇಶದಲ್ಲಿ ಇದ್ದುಕೊಂಡು ಬೇಕಾದ ಪ್ರದೇಶದೊಡನೆ ವ್ಯವಹಾರವನ್ನು

ಸಾಗಿಸಬಹುದು. ಇದರಿಂದ ಇಡೀ ಈ ಮಾತು ನಡೆಯುವ ಪ್ರದೇಶನೆಲ್ಲ ತನ್ನದು ಎಂಬುವ ಭಾವನೆ ಅವನಲ್ಲಿ ಪುಷ್ಟಗೊಳ್ಳುವದು.

ಭಾರತದ ಲೋಕಭಾಷೆಯ ಸ್ಥಾನವನ್ನಲಂಕರಿಸಲಿಕ್ಕೆ, ರಾಷ್ಟ್ರಭಾಷೆಯಾಗಲಿಕ್ಕೆ ಹಿಂದಿಯೇ ಯೋಗ್ಯವಾದುದೆಂದು ನಮ್ಮ ಮುಂದಾಳುಗಳು ತೀರ್ಮಾನಿಸಿದ್ದಾರೆ. ಭಾರತದ ಸಂವಿಧಾನದಲ್ಲಿ ಹಿಂದಿಯು ರಾಷ್ಟ್ರಭಾಷೆಯ ಗೌರವದ ಸ್ಥಾನವನ್ನು ಪಡೆದಿದೆ. ರಾಜಭಾಷೆಯೆಂದು ಅದರ ಮಹತ್ವ ಬೆಳೆಯತೊಡಗಿದೆ, ಎಲ್ಲೆಡೆಗಳಿಂದಲೂ ಹಿಂದಿಯ ಪ್ರಚಾರ ಕುರುಸಿನಿಂದ ಸಾಗತೊಡಗಿದೆ. ಭಾರತದ ಸುಸಮೃದ್ಧವಾದ ಜೀವನಕ್ಕೆ ಈ ರಾಷ್ಟ್ರಭಾಷೆಯ ಪ್ರಚಾರ. ಬೆಳವಣಿಗೆ ಅತ್ಯಂತ ಅವಶ್ಯವೆಂದು ಭಾರತೀಯರೆಲ್ಲ ಮನಗಂಡಿದ್ದಾರೆ. ಅಂತೆಯೇ ಜೀವನ ಶಿಕ್ಷಣ ಕ್ರಮದಲ್ಲಿ ಮಾತೃಭಾಷೆಯ ಜೊತೆಗೆ ರಾಷ್ಟ್ರಭಾಷೆಯನ್ನೂ ಸೇರಿಸುವದು ಕ್ರಮಪ್ರಾಪ್ತವಾಗಿದೆ.

ಹಿಂದಿಯನ್ನೇ ಏಕೆ ರಾಷ್ಟ್ರೀಯ ಭಾಷೆಯನ್ನಾಗಿ ಆರಿಸಿಕೊಂಡರು ಎನ್ನುವ ಪ್ರಶ್ನೆ ತಲೆ ಎತ್ತುತ್ತದೆ. ಈ ಪ್ರಶ್ನೆಗೆ ಸಮಾಧಾನಕರವಾದ ಉತ್ತರವನ್ನು ಕೊಡಬೇಕಾದರೆ ರಾಷ್ಟ್ರ ಭಾಷೆಯ ಸ್ಥಾನವನ್ನು ಪಡೆಯಲು ಆ ಭಾಷೆಯಲ್ಲಿ ಯಾವ ಲಕ್ಷಣಗಳಿರಬೇಕು ಎಂಬುದನ್ನು ನೋಡಿಕೊಳ್ಳಬೇಕು. " ನಮ್ಮ ರಾಷ್ಟ್ರ ಭಾಷೆ ನಮ್ಮ ರಾಷ್ಟ್ರದಲ್ಲಿಯದೇ ಇರಬೇಕು, ನಮ್ಮ ಸಂಸ್ಕೃತಿ ಪರಂಪರೆಯಲ್ಲಿಯ ವಿಚಾರಗಳನ್ನೆಲ್ಲ ವ್ಯಕ್ತಗೊಳಿಸುವ ಸಾಮರ್ಥ್ಯ ವುಳ್ಳದ್ದಿರಬೇಕು, ರಾಷ್ಟ್ರದ ಬಹು ಸಂಖ್ಯ ಜನರಲ್ಲಿ ಬಳಕೆಯಲ್ಲಿರಬೇಕು, ಅಲ್ಪ ಸಂಖ್ಯ ಜನರಲ್ಲಿ ಅದು ಬಳಕೆಯಲ್ಲಿಲ್ಲದಿದ್ದರೂ ಅವರಿಗೆ ಪರಿಚಿತವಿರಬೇಕು, ರಾಷ್ಟ್ರದ ಜನರಿಗೆಲ್ಲ ಸಮೀಪದ್ದೆನಿಸಬೇಕು, ಸುಬೋಧವಾಗಿರಬೇಕು, ಕಲಿಯಲು ಸುಲಭವಿರಬೇಕು " ರಾಷ್ಟ್ರ ಭಾಷೆಯ ಈ ಲಕ್ಷಣಗಳೆಲ್ಲ ಹಿಂದಿಯಲ್ಲಿ ಇವೆ. ಸುಮಾರು ೧೫ ಕೋಟಿ ಭಾರತೀಯರ ಮಾತೃಭಾಷೆ ಹಿಂದೀ ಇವೆ, (ಲಿಪಿ ಭೇದವೊಂದನ್ನುಳಿದರೆ) ಹಿಂದಿಗೆ ನಿಕಟತಮವಾದ ಉರ್ದು ಮಾತೃಭಾಷೆಯುಳ್ಳವರು ಸುಮಾರು ೮ರು ಕೋಟಿ ಜನರಿದ್ದಾರೆ. ಸಂಸ್ಕೃತ ಜನ್ಯವಾದ ಮರಾಠೀ ಬಂಗಾಲೀ ಮುಂತಾದ ಮಾತೃಭಾಷೆಗಳುಳ್ಳವರು ಹಿಂದಿಯ ಜೊತೆಗೆ ಸಹಜವಾಗಿ ಹೊಂದಿಕೊಳ್ಳಬಲ್ಲರು; ಇವಕ್ಕೆ ಲಿಪಿ ಸಾಮೀಪ್ಯವೂ ಸಹಕಾರಿಯಾಗುತ್ತದೆ. ದ್ರವಿಡ ಜನ್ಯ ಭಾಷೆಗಳನ್ನಾಡುವ ದಕ್ಷಿಣ ಭಾರತದಲ್ಲೂ ವ್ಯವಹಾರದಲ್ಲಿ ಸಾಕಷ್ಟು ಹಿಂದಿಯ ಬಳಕೆಯಾಗುತ್ತಿದೆ. ಹೀಗೆ ಹಿಂದಿಯು ಭಾರತದ ಜನಜೀವನದ ಆವಶ್ಯಕ ಭಾಗವಾಗಿ ಬಿಟ್ಟಿದೆ. ಆದ್ದರಿಂದ ಅದರ ಪರಿಚಯ, ಅಭ್ಯಾಸ ನಮ್ಮ ರಾಷ್ಟ್ರೀಯ ಜೀವನಕ್ಕೆ ಅವಶ್ಯವಾಪದ್ದು. ನಮ್ಮ ರಾಷ್ಟ್ರೀಯ ಶಿಕ್ಷಣದಲ್ಲಿ ಅದಕ್ಕೆ ಗೌರವದ ಸ್ಥಾನವಿದೆ.

ಪ್ರಚಾರ ಸಭೆಗಳ ಪರೀಕ್ಷೆಗೆ ಕೂಡುವವರ ಸಂಖ್ಯೆಯನ್ನು ನೋಡಿದಾಗ ಜನತೆಯಲ್ಲಿ ಹಿಂದಿಯ ಮಹತ್ವದ ಅರಿವುಂಟಾದಂತೆ ತೋರುತ್ತದೆ. ಮಾಧ್ಯಮಿಕ ಮತ್ತು ವಿಶ್ವವಿದ್ಯಾಲಯದ ಉಚ್ಚ ಶಿಕ್ಷಣಗಳಲ್ಲಿ ಹಿಂದಿಯು ಕಡ್ಡಾಯದ ವಿಷಯವಾಗಬೇಕಿದೆ. ಆದರೆ ಸಧ್ಯದ ಈ ವೇಗದಿಂದ ರಾಷ್ಟ್ರಭಾಷೆ ತನ್ನ ರಾಷ್ಟ್ರೀಯ ಭಾರವನ್ನು ನಿರ್ವಹಿಸುವಷ್ಟು ಹೆಚ್ಚಳವನ್ನು ಹೊಂದಬೇಕಾದರೆ ದೀರ್ಘ ಕಾಲಬೇಕು. ಕಡ್ಡಾಯದ ಪ್ರಾಥಮಿಕ ಶಿಕ್ಷಣ ಕ್ರಮದಲ್ಲಿ ಹಿಂದಿಯ ಶಿಕ್ಷಣವೂ ಕಡ್ಡಾಯದ್ದಾದರೆ ಆ ಹಿಂದೀ ಪ್ರಾಂತಗಳಲ್ಲಿ ಒಹು ಸಂಖ್ಯಾಕರ ಪರಿಣಿತಿಗೆ ರಾಷ್ಟ್ರಭಾಷೆಯನ್ನು ಮತ್ತು ಅದರೊಡನೆ ರಾಷ್ಟ್ರೀಯ ಏಕತೆಯ ಭಾವನೆಯನ್ನೂ ಒಯ್ಯಲು ಸಾಧ್ಯವಾಗುವದು. ಅಂತೆಯೇ ಜೀವನಕ್ಕಾಗಿ ಕೊಡುವ ನಮ್ಮ (ರಾಷ್ಟ್ರೀಯ) ಜೀವನ ಶಿಕ್ಷಣ ಕ್ರಮದಲ್ಲಿ ನಮ್ಮ ರಾಷ್ಟ್ರೀಯ ಜೀವನಕ್ಕೆ ಆವಶ್ಯಕವಾದ ಹಿಂದಿಗೆ ಅತ್ಯಂತ ಮಹತ್ವದ ಸ್ಥಾನವಿದೆ.

ಪ್ರಾಥಮಿಕ ಶಿಕ್ಷಣ ಕ್ರಮದಲ್ಲಿ ಅದರ ಸೇರ್ಪಡೆಯಾದಾಗ ಮತ್ತೆ ಕೆಲವು ತೊಂದರೆಗಳು ತಲೆಯೆತ್ತಬಹುದು. ಅವುಗಳಲ್ಲಿ ಮುಖ್ಯವಾವುವೆಂದು ಹಿಂದಿಯ ಸರಿಯಾದ ಜ್ಞಾನವನ್ನು ಪಡೆದಿರುವ ಶಿಕ್ಷಕರು, ನಮ್ಮ ಪ್ರಾಂತದ ಮಕ್ಕಳ ಮಟ್ಟಕ್ಕೆ ಯೋಗ್ಯವಾದ ಪಠ್ಯಪುಸ್ತಕಗಳು. ಈ ಎರಡೂ ಸಮಸ್ಯೆಗಳನ್ನು ಸಮಾಧಾನಕರವಾಗಿ ಬಿಡಿಸುವ ಹೊಣೆಗಾರಿಕೆ ನಮ್ಮದೇ ಆಗಿದೆ. ನಮ್ಮ ಆ ಹಿಂದೀ ಪ್ರಾಂತಗಳಲ್ಲಿಯ ಶಿಕ್ಷಣ ಖಾತೆಗಳ ಯೋಜನಾ ವಿಭಾಗಗಳು ಮನಸ್ಸು ಮಾಡಿದರೆ ಈ ಕೆಲಸವೇನೂ ದೊಡ್ಡದಲ್ಲ. ಕೇಂದ್ರ ಸರಕಾರವು ರಾಷ್ಟ್ರಭಾಷಾ ಶಿಕ್ಷಣಕ್ಕಾಗಿ ಹಣವನ್ನು ಒದಗಿಸಲು ಯಾವಾಗಲೂ ಸಿದ್ಧವಾಗಿದೆ. ಈ ಹಣದ ಸದ್ವಿನಿಯೋಗವಾಗುವಂತೆ ನಮ್ಮ ಯೋಜನಾ ವಿಭಾಗಗಳು ನೋಡಿಕೊಂಡರೆ ಜೀವನ

ಶಿಕ್ಷಣದ ಜೊತೆಗೆ ಹಿಂದಿ ಶಿಕ್ಷಣದ ತಳುಕುಹಾಕುವ ಕಾರ್ಯ ಸಾಗ್ಯವಾದೀತು. ಪ್ರಥಮಿಕ ಶಾಲಾ ಅಧ್ಯಾಪಕರುಗಳಿಗಾಗಿ ಎರಡು ಅಥವಾ ಮೂರು ವಾರಗಳ ಅಲ್ಪಾವಧಿ ತರಬೇತಿ ಕೇಂದ್ರವೊಂದನ್ನು ತೆರೆದು ಹಿಂದೀ ಭಾಷೆಯ ಪ್ರಾರಂಭಿಕ ಜ್ಞಾನವನ್ನು ಮಾಡಿಸುವ ವ್ಯವಸ್ಥೆಯಾಗಬೇಕು. ಇಂಥ ಕೇಂದ್ರದ ಸಂಚಾಲಕರೂ ಶಿಕ್ಷಕರೂ ಹಿಂದಿಯ ಬಗ್ಗೆ ಅಭಿಮಾನವುಳ್ಳವರೂ ರಾಷ್ಟ್ರ ಭಾಷೆಯ ಗೌರವವನ್ನರಿತವರೂ ಬೇಕು. ಬರೀ ಸಿನಿಯಾರಿಟಿಯ ಮೇಲಿಂದಾಗಲಿ, ಆರ್ಥಿಕಲಾಭವನ್ನು ಮಾಡಿಕೊಳ್ಳವದಕ್ಕಾಗಲಿ ನೇಮಿಸಲ್ಪಟ್ಟ ಶಿಕ್ಷಕರಿಂದ ಈ ಕಾರ್ಯ ಸಾಗದು. ಪ್ರಚಾರ ಪರೀಕ್ಷೆಗಳ ಉಚ್ಚ ಪರೀಕ್ಷೆಗಳನ್ನು ದಾಟಿದವರೂ ಬಿ. ಟಿ. ಪರೀಕ್ಷೆಗೆ ಹಿಂದಿಯನ್ನೇ ವಿಶೇಷ ವಿಷಯವನ್ನಾಗಿ ತೆಗೆದುಕೊಂಡವರೂ ಅನೇಕರಿದ್ದಾರೆ. ಆದರೆ ಅವರ ಹಿಂದಿಯ ಪ್ರಾಥಮಿಕಜ್ಞಾನ ಕೂಡ ಶೂನ್ಯಕ್ಕೆ ಸರಿಯಾಗಿದೆ. ಆದ್ದರಿಂದ ಹುರುಪಿನ ಶಿಕ್ಷಕರು ಮಾತ್ರ ಅವರು ಅತಿ ಉಚ್ಚಪರೀಕ್ಷೆಗಳನ್ನು ದಾಟಿರದಿದ್ದರೂ ಈ ಹಿಂದಿ ವರ್ಗಗಳಿಗೆ ಯೋಗ್ಯರೆಂಬುದನ್ನು ಮತ್ತೆ ಮತ್ತೆ ಹೇಳಬೇಕಾಗುತ್ತದೆ.

ಎರಡನೆಯದಾಗಿ ಪಠ್ಯಪುಸ್ತಕಗಳ ಪ್ರಶ್ನೆ ನಮ್ಮ ಜೀವನ ಶಿಕ್ಷಣ ಶಾಲೆಗಳಲ್ಲಿ ಹಿಂದಿಯು ಐದನೇ ಇಯತ್ತೆಯಿಂದ ಪ್ರಾರಂಭವಾಗುವದು. ನಾಲ್ಕು ವರ್ಷಗಳವರೆಗೆ ಮಾತೃ ಭಾಷೆಯು ಅಧ್ಯಾಪನ ಮಾಡಿದವರು ಸುಮಾರು ಹತ್ತು ತರಹದ ಮಾತೃಭಾಷೆಯನ್ನು ಬಳಸುತ್ತಿರುವವರು ಈ ವರ್ಗಗಳ ವಿದ್ಯಾರ್ಥಿಗಳಿರುತ್ತಾರೆ. ಅವರಿಗೆ ಅಂಕಲಿಪಿಯಂತ ಜೊಸಭಾಷೆಯ ಪರಿಚಯವನ್ನು ಮಾಡಿಸಿಕೊಡುವ ಸಮಸ್ಯೆಯಾಗುವದು. ಈ ಪರಿಚಯವನ್ನು ನಾಲ್ಕನೇ ಇಯತ್ತೆಯಲ್ಲೇ ಮಾಡಿಕೊಂಡರು ಅವಧಿಯನ್ನಿಟ್ಟು ಮಾಡಿಸಿಕೊಟ್ಟರೆ ಮುಂದಿನ ಅಭ್ಯಾಸಕ್ಕೆ ಅನುಕೂಲವಾಗುವದು. ಐದನೇ ಇಯತ್ತೆಯಿಂದ ಮುಂದೆ ಬೇಕಾಗುವ ಪಠ್ಯಪುಸ್ತಕಗಳನ್ನು ನಮ್ಮ ಮಕ್ಕಳ ಅಭಿರುಚಿಗೆ ಒಗ್ಗುವ ವಿಷಯಗಳನ್ನು ಒಳಗೊಂಡು ನಮ್ಮ ಪ್ರಾದೇಶಿಕ ಸಂಸ್ಕೃತಿಯನ್ನು ಎತ್ತಿ ತೋರಿಸುವಂತೆ ರಚಿಸಬೇಕಾದೀತು. ಈ ಕಾರ್ಯಕ್ಕೆ ತಜ್ಞರ ಸಮಿತಿಗಳನ್ನು ನೇಮಿಸುವದರ ಬದಲು ಪ್ರತ್ಯಕ್ಷವಾಗಿ ಈ ವರ್ಗಗಳ ಶಿಕ್ಷಣ ಕಾರ್ಯದಲ್ಲಿ ತೊಡಗಿದ ಶಿಕ್ಷಕರನ್ನೇ ಆಣಿಗೊಳಿಸಿದ್ದಾದರೆ ಪ್ರತ್ಯಕ್ಷ ಅಡೆತಡೆಗಳನ್ನರಿತ ಅವರು ಯೋಗ್ಯ ಪುಸ್ತಕಗಳನ್ನು ಸಿದ್ಧಪಡಿಸಿಕೊಡುವರು. ಅನಂತರ ಅವುಗಳನ್ನು ತಜ್ಞರು ಪರಿಷ್ಕರಿಸಿ ಮಕ್ಕಳ ಕೈಗೆ ಕೊಡಲು ಯೋಗ್ಯವಾದ ರೂಪದಲ್ಲಿ ಅವನ್ನು ಒದಗಿಸಬೇಕು.

ನಮ್ಮ ಪ್ರಾಂತದ ರಾಷ್ಟ್ರೀಯ ಶಿಕ್ಷಣ ಕ್ರಮದಲ್ಲಿ ಹಿಂದಿಯು ಯೋಗ್ಯ ಸ್ಥಾನವನ್ನು ಪಡೆದು ನಾವು ಭಾರತದ ಅವಿಚ್ಛಿನ್ನವಾದ ಒಂದು ಅಂಗ ಎಂದೆನಿಸಬೇಕಾದರೆ ಒಂದು ನಿರ್ದಿಷ್ಟವಾದ ಯೋಜನೆಯನ್ನಿಟ್ಟುಕೊಂಡು ಆ ಯೋಜನೆಯ ಅವಧಿಯಲ್ಲಿ ನಮ್ಮ ವಿಚಾರಗಳನ್ನು ಕಾರ್ಯಗತಗೊಳಿಸಬೇಕು. ಈ ಕಾರ್ಯದಲ್ಲಿ ಮೇಲ್ಕಾಣಿಸಿದ ಎರಡೂ ಸೂಚನೆಗಳು ಅತ್ಯಂತ ಮಹತ್ವದವು. ಇನ್ನುಳಿದ ವಿಚಾರಗಳೂ ಇರಬಹುದು. ಆದರೆ ಕೊನೆಯವರೆಗೆ ನೆನಪಿಡುವ ಮಾತೆಂದರೆ ನಮ್ಮದು ಸ್ವತಂತ್ರ ರಾಷ್ಟ್ರವಿದೆ; ನಮ್ಮದೇ ಒಂದು ರಾಷ್ಟ್ರೀಯ ಶಿಕ್ಷಣ ಪ್ರಣಾಲಿ ರೂಪುಗೊಳ್ಳುತ್ತಿದೆ. ರಾಷ್ಟ್ರೀಯ ಶಿಕ್ಷಣ ಪ್ರಣಾಲಿಯಲ್ಲಿ ರಾಷ್ಟ್ರ ಭಾಷೆಯಾದ ಹಿಂದಿಗೆ ಅದರ ಯೋಗ್ಯಸ್ಥಾನವನ್ನು ಕೊಟ್ಟು ನಾವು ರಾಷ್ಟ್ರೀಯ ಐಕ್ಯವನ್ನು ದೃಢಗೊಳಿಸಬಲ್ಲೆವು; ರಾಷ್ಟ್ರದ ಸ್ವಾತಂತ್ರ್ಯವನ್ನು ಕಾಯ್ದುಕೊಳ್ಳಬಲ್ಲೆವು.

———

— ಜನ್ಮಡ —

ಪ್ರತಿ ತಿಂಗಳ ೧೫ನೆಯ ತಾರೀಕಿಗೆ "ಜೀವನ ಶಿಕ್ಷಣ" ಪತ್ರಿಕೆಯ ಸಂಚಿಕೆಗಳನ್ನು ನಿಮ್ಮ ನಿಮ್ಮ ವಿಳಾಸಕ್ಕೆ ಕಳುಹಿಸಲಾಗುತ್ತಿದೆ. ಇದರಲ್ಲಿ ಸಮಸ್ಯೆಯ ಒದಲಾವಣೆ ಬೇಡ. ಹೀಗಿದ್ದೂ ಪತ್ರಿಕೆಗಳು ನಿಮಗೆ ತಲುಪದಿದ್ದಲ್ಲಿ ಸ್ಥಳಿಕ ಅಂಚೆ ಅಧಿಕಾರಿಗಳಿಗೆ ತಪ್ಪದೇ ಬರೆದುಕೊಳ್ಳಬೇಕು. —ಪ್ರಧಾನ ಸಂಪಾದಕರು.

— ವಿನಂತಿ —

ಲೇಖಕರಲ್ಲಿ :— ಸರಿಯಾಗಿ ಒದಲಿಕ್ಕೆ ಬರುವಂತೆ ಸ್ಪಷ್ಟವಾಗಿ ಮಸಿಯಿಂದ ಬರೆದು ಲೇಖನಗಳನ್ನು ಕಳುಹಿಸಬೇಕು. ಕಾಗದದ ಒಂದೇ ಮುಗ್ಗಲು ಬರೆಯಬೇಕು.

ಕಾರ್ಬನ್ ಪ್ರತಿಗಳನ್ನು ಕಳಿಸುವದಿದ್ದಲ್ಲಿ ಮೊದಲನೆಯ ಪ್ರತಿಯನ್ನು ಮಾತ್ರ ಕಳಿಸಬೇಕು.

ಪ್ರ್ಯಾಕ್ಟಿಸಿಂಗ್ ಸ್ಕೂಲ ಗಂಡು ಮಕ್ಕಳ ಸರಕಾರಿ ಟ್ರೇನಿಂಗ ಕಾಲೇಜ, ಧಾರವಾಡ.



ಚಿತ್ರ ಪರಿಚಯ: ೧. ಹಂಪಯ ಪ್ರವಾಸದಲ್ಲಿ ಕಲ್ಲಿನ ತೇರಿನ ದೃಶ್ಯ. ೨. ಮಡಿಗಳಿಗ ನೀರುಣಿಸುವದು. ೩. ಚರಕದಿಂದ ನೂಲುವದು.
೪. ಹಾಸು ಹಾಕುವದು. ೫. [illegible]

ನಮ್ಮ ಮಾದರಿಯ ಸಾಲೆ

(ಪ್ರಾಕ್ಟೀಸಿಂಗ ಸ್ಕೂಲ, ಗಂಡು ಮಕ್ಕಳ ಸರಕಾರಿ ಟ್ರೇನಿಂಗ ಕಾಲೇಜ ಧಾರವಾಡ.)

ಲೇಖಕರು :— ಶ್ರೀ ಆರ್. ಬಿ. ಸೊನಗಾರ, ಅಸಿ. ಮಾ. ಪ್ರಾ. ಸ್ಕೂ. ಗ. ಸ. ಟ್ರೇ. ಕಾ. ಧಾರವಾಡ.

ಉತ್ತರ ಕರ್ನಾಟಕದ ವಿದ್ಯಾ ಕೇಂದ್ರವಾದ ಧಾರವಾಡ ನಗರದಲ್ಲಿ ಗಂಡು ಮಕ್ಕಳ ಸರಕಾರಿ ಟ್ರೇನಿಂಗ ಕಾಲೇಜಕ್ಕೆ ಜೋಡಿಸಲ್ಪಟ್ಟ ಈ ಪ್ರಾಥಮಿಕ ಶಾಲೆಯು ಕ್ರಿ. ಶ. ೧೮೭೫ನೆಯ ಇಸವಿಯ ಜನೆವರಿ ೧೦ನೆಯ ದಿನ ಸ್ಥಾಪಿತವಾಯಿತು. ಟ್ರೇನಿಂಗ ಕಾಲೇಜದ ಶಿಕ್ಷಕ ವಿದ್ಯಾರ್ಥಿಗಳು ಕಲಿಸುವ ಕಲೆಯಲ್ಲಿ ತರಬೇತಿಯನ್ನು ಹೊಂದಲು ಒಂದು ಆದರ್ಶ ಪಾಠಶಾಲೆಯು ಇರುವದು ಉಚಿತವೆಂಬ ದೃಷ್ಟಿಯಿಂದ ಸರಕಾರವು ಈ ಶಾಲೆಯನ್ನು ಸ್ಥಾಪಿಸಿ, ಅದರ ಆಡಳಿತೆಯನ್ನು ತಾನೇ ವಹಿಸಿಕೊಂಡು ಈ ವರೆಗೂ ನಡೆಸುತ್ತ ಬಂದಿದೆ. ಕಾಲ ಕಾಲಕ್ಕೆ ಶಿಕ್ಷಣ ದಲ್ಲಾದ ಮಾರ್ಪಾಟುಗಳಿಗನುಗುಣವಾಗಿ ಕೆಲಸ ಮಾಡುತ್ತ ಈ ಸಂಸ್ಥೆಯು ಸದ್ಯಕ್ಕೆ ಆದರ್ಶ ಜೀವನ ಶಿಕ್ಷಣ ಸಂಸ್ಥೆಯಾಗಿ ಮಕ್ಕಳಿಗೆ ಜೀವನೋಪಯುಕ್ತ ಶಿಕ್ಷಣವನ್ನು ನೀಡುವದಲ್ಲದೆ ಶಿಕ್ಷಕ ವಿದ್ಯಾರ್ಥಿಗಳಿಗೂ ಶಿಕ್ಷಣ ಕಾರ್ಯಗಳಲ್ಲಿ ಸನ್ಮಾರ್ಗದರ್ಶಕವಾಗಿದೆ.

ಪ್ರಪಂಚದಲ್ಲಿಯ ಯಾವದೇ ವ್ಯಕ್ತಿಯನ್ನು ತೆಗೆದು ಕೊಂಡರೂ ಅವನು ತನ್ನ ಚರಿತಾರ್ಥದ ಸಲುವಾಗಿ ಒಂದಿಲ್ಲೊಂದು ಉದ್ಯೋಗವನ್ನು ಮಾಡುತ್ತಿರುವದು ಕಂಡು ಬರುತ್ತದೆ. ಅಂಥ ಉದ್ಯೋಗಗಳಲ್ಲಿ ಮಾನವನ ಮೂಲ ಹಾಗೂ ಮುಖ್ಯ ಬೇಡಿಕೆಗಳಾವ ಆಹಾರ, ಆಶ್ರಯ, ಆಚ್ಛಾದನ ಇವುಗಳಿಗೆ ಸಂಬಂಧಿಸಿದ ವ್ಯವಸಾಯಗಳೇ ತಳಹದಿಯಾಗಿವೆ. ಆದ್ದರಿಂದ ಈ ಮೂಲ ಬೇಡಿಕೆಗಳಿಗೆ ಸಂಬಂಧಿಸಿದ ಒಕ್ಕಲುತನ, ಬಡಿಗ ತನ, ನೂಲು-ನೇಯಿಗೆ ಈ ಕಸಬುಗಳ ಜ್ಞಾನವು ಮಕ್ಕಳಿಗೆ ಅವಶ್ಯಕವೆಂಬುದನ್ನು ಕಂಡು ಹಿಡಿದು ಮ. ಗಾಂಧಿಯವರು ಶಿಕ್ಷಣದಲ್ಲಿ ಮೂಲ ಶಿಕ್ಷಣ (Basic Education) ವೆಂಬ ಹೊಸ ಕ್ರಮವನ್ನು ಶೋಧಿಸಿದರು. ಅದೇ ಈಗ ಜೀವನ ಶಿಕ್ಷಣವೆಂಬ ಹೆಸರಿನಿಂದ ಸಾರ್ವತ್ರಿಕವಾಗತೊಡಗಿದೆ. ಈ ಜೀವನ ಶಿಕ್ಷಣದ ಮೇರೆಗೆ ನಮ್ಮ ಮಕ್ಕಳ ಶಾಲಾ ಜೀವನದ ಪರಿಚಯವನ್ನು ಓದುಗರಿಗೆ ಈ ಕೆಳಗೆ ಮಾಡಿ ಕೊಡುತ್ತೇವೆ.

ಈ ಶಾಲೆಯಲ್ಲಿ ೧ ರಿಂದ ೭ ವರ್ಗಗಳು ಕಲಿಸಲ್ಪಡುತ್ತಿದ್ದು ಪ್ರತಿಯೊಂದು ವರ್ಗದಲ್ಲಿ ಎರಡೆರಡು ವಿಭಾಗಗಳಿವೆ. ೧ ರಿಂದ ೪ ವರ್ಗಗಳಲ್ಲಿ ಎರಡೂ ವಿಭಾಗಗಳಲ್ಲಿ ನೂಲುವದು ಮತ್ತು ಕೈತೋಟದ ವ್ಯವಸಾಯ ಇವು ಮುಖ್ಯ ಕಸಬು ಗಳಾಗಿವೆ. ೫-೬-೭ ನೆಯ ವರ್ಗಗಳಲ್ಲಿ ಅ ವಿಭಾಗಗಳಲ್ಲಿ ನೇಯಿಗೆಯೂ ಬ ವಿಭಾಗಗಳಲ್ಲಿ ಒಕ್ಕಲುತನವೂ ಮುಖ್ಯ ಕಸಬುಗಳಾಗಿವೆ. ಈ ಕಸಬುಗಳಲ್ಲದೆ ಪ್ರವಾಸ, ನಿರೀಕ್ಷಣೆ, ಕೈಕೆಲಸ, ಧಾರ್ಮಿಕ ಹಾಗೂ ರಾಷ್ಟ್ರೀಯ ಉತ್ಸವಗಳ ಮಹಾಪುರುಷರ ಜಯಂತಿ ಮತ್ತು ಪುಣ್ಯತಿಥಿಗಳ ಆಚರಣೆ ಮುಂತಾದ ಅನೇಕ ಚಟುವಟಿಕೆಗಳ ಮುಖಾಂತರ ಪಠ್ಯ ಮತ್ತು ಪಠ್ಯೇತರ ವಿಷಯಗಳ ಜ್ಞಾನವು ಮಕ್ಕಳಿಗೆ ಕೊಡಲ್ಪಡುವದು.

ವಾರದಲ್ಲಿ ಕೆಲಸದ ಪೂರ್ಣ ದಿನಗಳಲ್ಲಿ ಶಾಲೆಯು ೧೧-೧೫ ರಿಂದ ೫-೪೫ರ ವರೆಗೆ ೧೦ ಅವಧಿಗಳಲ್ಲಿ ನಡೆಯುವದು. ಶನಿವಾರ ಮಾತ್ರ ೭-೪೫ ರಿಂದ ೧೦-೫೫ರ ವರೆಗೆ ೫ ಅವಧಿಗಳಲ್ಲಿ ನಡೆಯುವದು. ಮಕ್ಕಳ ದೈನಂದಿನ ಜೀವನ ಕ್ರಮವು ಪೊದಲನೆಯ ಅವಧಿಯಲ್ಲಿ ಎಲ್ಲ ಮಕ್ಕಳ ಸಾಮಾನ್ಯ ಸಭೆಯೊಂದಿಗೆ ಪ್ರಾರಂಭವಾಗುವದು. ಸಭೆಯ ಆರಂಭದಲ್ಲಿ ಎಲ್ಲ ಮಕ್ಕಳು ಒಟ್ಟಾಗಿ ದೇವರ ಪ್ರಾರ್ಥನೆಯನ್ನು ಮಾಡುವರು. ಬಳಿಕ ಅಂದಿನ ಪಂಚಾಂಗವನ್ನು ಅಮರವಾಣಿಯನ್ನು ಮಕ್ಕಳು ಹೇಳುವರು. ಮುಂದೆ ಶಾಲೆಯ ನತಿಯಿಂದ ಪ್ರಕಟವಾಗುತ್ತಿರುವ ಸುದ್ದಿ ಪತ್ರಿಕೆಯನ್ನು ಓದುವದು. ವಿಶೇಷ ಕಾರ್ಯ ಕ್ರಮಗಳೇನಾದರೂ ಇದ್ದಲ್ಲಿ ಶಾಲೆಯ ಮುಖ್ಯಮಂತ್ರಿಯು ಅದರ ಬಗ್ಗೆ ಎಲ್ಲ ಮಕ್ಕಳಿಗೂ ತಿಳಿಸಿ ಹೇಳುವನು. ಒಮ್ಮೊಮ್ಮೆ ಗುರುಗಳೂ ಸಹ ಇದೇ ವೇಳೆಯಲ್ಲಿ ನೀತಿ ಬೋಧೆಯನ್ನು ಮಾಡುವರು.

ಇಷ್ಟಾದ ಬಳಿಕ ಎಲ್ಲ ಮಕ್ಕಳು ತನ್ನು ತಮ್ಮ ವರ್ಗಗಳಿಗೆ ಹೋಗುವರು. ಪ್ರತಿಯೊಂದು ವರ್ಗದಲ್ಲಿಯೂ ಒಂದು ಮಂತ್ರಿ ಮಂಡಳವಿರುವದು. ಸ್ವಚ್ಛತಾ ಮಂತ್ರಿಯು ವರ್ಗದ ಸ್ವಚ್ಛತೆಯ ಕೆಲಸವನ್ನು ಪ್ರಾರಂಭಿಸುವನು. ಆಗ ಕೆಲವರು ವರ್ಗದ ಸಾಮಾನುಗಳನ್ನು ಸ್ವಚ್ಛ ಮಾಡುವರು. ಕೆಲವರು ವರ್ಗದ ಒಳಗೂ, ಹೊರಗೂ ಕಸಗೂಡಿಸುವರು. ಕೆಲವರು ಆಸನಗಳನ್ನು ಸ್ವಚ್ಛ ಮಾಡಿಕೊಂಡು ಬಂದು ಸಾಲಾಗಿ ಹಾಸುವರು. ಆ ಮೇಲೆ ಸಾಂಸ್ಕೃತಿಕ ಮಂತ್ರಿಯು ವರ್ಗದ ಕೋಣೆಯ ಬಾಗಿಲ ಮುಂದೆ ರಂಗೋಲಿ ಹಾಕಿಸುವನು. ಆರೋಗ್ಯ ಮಂತ್ರಿಯು ಎಲ್ಲರ ಆರೋಗ್ಯ ಪರೀಕ್ಷೆ ಮಾಡುವನು. ಹಲ್ಲುಗಳು ಸ್ವಚ್ಛವಿಲ್ಲದ ಮಕ್ಕಳಿಗೆ ಹಲ್ಲುಪುಡಿ ಕೊಟ್ಟು ಹೌದಿಗೆ ಕರೆದುಕೊಂಡು ಹೋಗಿ ಹಲ್ಲು ತಿಕ್ಕಿಸುವನು. ಉಗುರು ಬೆಳೆದಿದ್ದರೆ ಕತ್ತರಿಯಿಂದ ತೆಗೆಯಿಸುವನು. ದೇಹ ಹಾಗೂ ಬಟ್ಟೆಗಳು ಸ್ವಚ್ಛವಿಲ್ಲದಿದ್ದರೆ, ಸ್ವಚ್ಛತೆಯ ಕಡೆಗೆ ಲಕ್ಷ್ಯಗೊಡಲು ಉಪದೇಶಿಸುವನು. ಇಲ್ಲಿಗೆ ೧ನೆಯ ಅವಧಿಯು ಮುಗಿಯುವದು.

ಮುಂದಿನ ೬ ಅವಧಿಗಳಲ್ಲಿ ಮಕ್ಕಳು ತಮ್ಮ ವರ್ಗಗಳ ಕಸಬುಗಳಲ್ಲಿಯೂ, ಅವುಗಳ ಮುಖಾಂತರ ಜ್ಞಾನಾರ್ಜನೆಯಲ್ಲಿ ತೊಡಗುವರು. ಯೋಜನೆಯ ಮೇರೆಗೆ ಪ್ರವಾಸ, ನಿರೀಕ್ಷಣೆಗಾಗಿ ಶಾಲೆಯ ಹೊರಗೂ ಹೋಗುವದುಂಟು. ಸಾಮಾನ್ಯವಾಗಿ ಮೊದಲಿನ ೫ ಅವಧಿಗಳಲ್ಲಿ ಪ್ರಾಕ್ಟೆಸಿಂಗ ಸ್ಕೂಲಿನ ಶಿಕ್ಷಕರೇ ಪಾಠಗಳನ್ನು ಸಾಗಿಸುವರು. ಮುಂದಿನ ೫ ಅವಧಿಗಳಲ್ಲಿ ಟ್ರೇನಿಂಗ ಕಾಲೇಜಿನ ಶಿಕ್ಷಕ–ವಿದ್ಯಾರ್ಥಿಗಳು ಕಾಲೇಜಿನ ಪ್ರಾಧ್ಯಾಪಕ ಇಲ್ಲವೆ ಪ್ರಾಕ್ಟೆಸಿಂಗ ಸ್ಕೂಲಿನ ಶಿಕ್ಷಕರ ನೇತೃತ್ವದಲ್ಲಿ ಪಾಠಗಳನ್ನು ಕಲಿಸುವರು. ಬೋಧನೆಯ ಚಟುವಟಿಕೆಯಲ್ಲಿ ಮಕ್ಕಳು ಜೊಪಗಿರಲಿ, ಅವುಗಳಲ್ಲಿ ಕಾರ್ಯಕುಶಲತೆ, ಮಕ್ಕಳಲ್ಲಿ ಪರಸ್ಪರ ಪ್ರೀತಿ ಸಹಕಾರಭಾವನೆ, ಸತ್ಯ, ಪ್ರಾಮಾಣಿಕತನ ಮುಂತಾದ ಸದ್ಗುಣಗಳು ಬೆಳೆಸಿಕೊಳ್ಳುವಂತೆ ಯೋಜನೆ ಇರುತ್ತದೆ. ಬಿಡುವು ಜ್ಞಾನದಪ್ಪ ದೈಹಿಕ ಶಿಕ್ಷಣದ್ದೂ ಮಹತ್ವವನ್ನು ಕೊಡಲಾಗುವದು.

೧೦ನೆಯ ಅವಧಿಯಲ್ಲಿ ಮಕ್ಕಳಿಗೆ ಶಾರೀರಿಕ ಶಿಕ್ಷಣವು ಕೊಡಲ್ಪಡುವದು. ಬೇರೆ ಬೇರೆ ವರ್ಗಗಳ ಮಕ್ಕಳು ಬೇರೆಬೇರೆ ಸಮಯಕ್ಕೆ ಮೈದಾನಕ್ಕೆ ಬಂದು ತಮಗಾದ ಕಸರತ್ತು ಗಳನ್ನು ಮಾಡುವರು. ಖೋ, ಹುತುತು, ತಿಳ್ಳಿ ಇತ್ಯಾದಿ ಆಟಗಳನ್ನು ಆಡುವರು. ಕೆಳಗಿನ ವರ್ಗಗಳ ಮಕ್ಕಳು ವಿಶೇಷವಾಗಿ ಮನರಂಜನೆಯ ಆಟಗಳನ್ನು ಆಡುವರು. ಒಮ್ಮೊಮ್ಮೆ ಅಂತರ್‌ವರ್ಗಗಳ ಪಂದ್ಯಾಟಗಳೂ ನೆರವೇರುವವು. ವಾರಕ್ಕೊಮ್ಮೆ ಎಲ್ಲ ಮಕ್ಕಳ ಸಾಮೂಹಿಕ ಕವಾಯಿತು ನಡೆಯುವದು.

೧೧ನೆಯ ಅವಧಿಯಾದ ಕೂಡಲೆ ಮಕ್ಕಳು ವರ್ಗದ ಕೋಣೆಗೆ ಬಂದು ಗೃಹಪಾಠವನ್ನು ಬರೆದು ಕೊಳ್ಳುವರು. ಮುಂದೆ 'ವಂದೇ ಮಾತರಂ' ಗೀತೆಯೊಡನೆ ಅಂದಿನ ಕಾರ್ಯಕಲಾಪಗಳು ಸಮಾಪ್ತವಾಗುವವು.

(೪ನೆಯ ಪುಟದಿಂದ ಬಂದುದು)

ಪ್ರಶ್ನೆ :— ಸಮಾಜದ ಕೂಡ ಸಂಬಂಧ ಇಟ್ಟು ಕೊಳ್ಳಲು ಸಹಾಯ ಮಾಡುವ ಚಟುವಟಿಕೆಗಳು ಯಾವವು ?

ಉತ್ತರ:— ಶಾಲೆಯ ಸುತ್ತಲೂ ಇರುವಂಥ ಸಂಗತಿಗಳಬಗ್ಗೆ ಪೂರ್ಣಜ್ಞಾನ ಮಾಡಿಕೊಳ್ಳುವದು. ಊರೊಳಗಿನ ತೋಟಗಳು, ಗಿಡಮರಗಳು, ಪಶುಪಕ್ಷಿಗಳು. ಭಾವಿಗಳು, ಕೆರೆ, ಕಾಲುವೆಗಳು, ಗುಡಿ ಮಸೀದೆಗಳು ಮುಂತಾದವುಗಳನ್ನು ನೀರಿಕ್ಷಿಸುವದು. ಊರೊಳಗಿನ ಬೇರೆ ಬೇರೆ ಉದ್ಯೋಗಗಳ ಮತ್ತು ಉದ್ಯೋಗಸ್ಥರ ಪರಿಚಯ ಮಾಡಿಕೊಳ್ಳುವದು ಅಂದರೆ ಬಡಿಗರ ಮನೆ, ಕುಂಬಾರರ ಮನೆ, ಸುಣ್ಣದ ಭಟ್ಟಗಳು, ನೇಕಾರರ ಮನೆ, ಛಾಪಖಾನೆ, ಶಿಂಪಿಗರ ಅಂಗಡಿಗಳು ಮುಂತಾದವುಗಳಿಗೆ ಮಕ್ಕಳಿಂದ ಭೆಟ್ಟಿಕೊಡಿಸಿ ಅವುಗಳ ಪೂರ್ಣಜ್ಞಾನ ಮಾಡಿಕೊಡುವದು. ಊರೊಳಗಿನ ದವಾಖಾನೆ, ಪೋಷ್ಟ ಆಫೀಸು ರೇಲ್ವೆ ಸ್ಟೇಶನ್, ಬ್ಯಾಂಕು, ಪೋಲಿಸ ಸ್ಟೇಶನ್, ಗ್ರಾಮ ಪಂಚಾಯತಿಯ ಆಫೀಸು ಮುಂತಾದವುಗಳಿಗೆ ಕರೆದು ಕೊಂಡುಹೋಗಿ ಅಲ್ಲಿಯ ಕೆಲಸದ ಪರಿಚಯ ಮಾಡಿಕೊಡುವದು ಮುಂತಾದವುಗಳನ್ನು ಮಾಡಬೇಕು. ಅಲ್ಲದೆ ಬೇರೆ ಬೇರೆ ಸಂದರ್ಭಗಳಲ್ಲಿ ಊರೊಳಗಿನ ನಾಗರಿಕರನ್ನು ಶಾಲೆಗೆ ಬರಮಾಡಿಕೊಂಡು ಅವರ ಭಾಷಣಗಳನ್ನು ಇಡಿಸಬೇಕು. ಮಕ್ಕಳಿಗೆ ಅವರ ಪರಿಚಯವನ್ನು ಮಾಡಿಸಬೇಕು. ಶಾಲೆಯ ಪತ್ರಿಕೆಯ ಸಲುವಾಗಿ ಊರೊಳಗಿನ ಪ್ರಚಲಿತವಿರುವ ಗಾದೆಯ ಮಾತುಗಳು, ಜಾನಪದ ಗೀತೆಗಳು, ಪದ್ಯಗಳನ್ನು ಕಲೆಹಾಕಿಸಬೇಕು

ವದು. ಅಲ್ಲದೆ ಊರೊಳಗಿನ ಗ್ರಾಮಪರಿಶೀಲನೆಯನ್ನು ಮಕ್ಕಳಿಂದ ಮಾಡಿಸಬೇಕು. ಇಂಥ ಚಟುವಟಿಕೆಗಳಿಂದ ಸಮಾಜದಕೂಡ ಮಕ್ಕಳ ಸಂಬಂಧವು ಬರುವದು.

ಪ್ರಶ್ನೆ:— ಸಮಾಜ ಸೇವೆಯನ್ನು ಮಕ್ಕಳಿಂದ ಮಾಡಿಸುವ ಚಟುವಟಿಕೆಗಳು ಯಾವವು ?

ಉತ್ತರ:— ಹರಿಜನರಕೇರಿ ಮುಂತಾದ ಓಣಿಗಳಿಗೆ ಹೋಗಿ ಸ್ವಚ್ಛಮಾಡುವದು. ಊರೊಳಗಿನ ರಸ್ತೆಗಳು, ಗಟಾರುಗಳು, ಭಾವಿಗಳು ಮುಂತಾದವುಗಳನ್ನು ಸ್ವಚ್ಛವಾಗಿರಿಸುವದು. ಹಬ್ಬ ಹುಣ್ಣಿವೆಗಳಲ್ಲಿ ಊರೊಳಗಿನ ಗುಡಿ, ಮಠ ಮುಂತಾದವುಗಳನ್ನು ಶೃಂಗಾರ ಮಾಡುವದು, ಜಾತ್ರೆ–ಪಾತ್ರೆಗಳ ವೇಳೆಯಲ್ಲಿ ಮಕ್ಕಳಿಂದ ಕುಡಿಯುವ ನೀರಿನ ಪೂರೈಕೆ ಮಾಡಿಸುವದು, ಜಾತ್ರೆಗಳಲ್ಲಿ ಶಾಂತತೆಕಾಯುವದು, ರಸ್ತೆ ಕಟ್ಟುವದು, ಕೆರೆಗೆ ಒಡ್ಡು ಹಾಕುವದು, ಮುಂತಾದ ಶ್ರಮದಾನದ ಕೆಲಸಗಳನ್ನು ಮಾಡಬಹುದು. ಊರೊಳಗಿನ ಮುಖ್ಯ ರಸ್ತೆಗಳ ಬದಿಯಲ್ಲಿ ಗಿಡಗಳನ್ನು ನೆಡಿಸಿ ಅವುಗಳ ಆರೈಕೆಯನ್ನು ಮಕ್ಕಳಿಂದಲೇ ಮಾಡಿಸಬೇಕು. ಸಾರ್ವಜನಿಕ ಸ್ಥಳಗಳಲ್ಲಿ ಇಂಗುಬಚ್ಚಲು, ಮೂತ್ರಿಗಳು ಮುಂತಾದವುಗಳನ್ನು ಮಕ್ಕಳಿಂದಲೇ ಮಾಡಿಸಬೇಕು. ಕಾಲರಾ, ಪ್ಲೇಗ, ನಾರುಹುಣ್ಣು, ದನ-ಕರು, ಕೋಳಿಗಳಿಗೆ ಬರುವ ಬೇನೆಗಳು ಊರಲ್ಲಿ ಹಬ್ಬಿದರೆ ಅವುಗಳ ನಿವಾರಣೋಪಾಯದಲ್ಲಿ ಮಕ್ಕಳು ಭಾಗವಹಿಸುವಂತೆ ಮಾಡಬೇಕು. ಇಂಥ ಕೆಲಸಗಳಿಂದ ಮಕ್ಕಳು ಅತ್ಯುತ್ತಮವಾಗಿ ಸಮಾಜ ಸೇವೆ ಮಾಡಿದಂತಾಗುವದು.

ಸ್ವಾತಂತ್ರ್ಯದಿನಾಚರಣೆ,ಗಾಂಧಿಜಯಂತಿ, ಮಕ್ಕಳ ದಿನಾಚರಣೆ ಮುಂತಾದ ರಾಷ್ಟ್ರೀಯ ಹಬ್ಬಗಳನ್ನು ಶಾಲೆಗಳಲ್ಲಿ ವಿಜೃಂಭಣೆಯಿಂದ ಆಚರಿಸಬೇಕು. ಅಲ್ಲದೆ ಎಲ್ಲ ಜಾತಿ, ಪಂಥದವರ ಹಬ್ಬಗಳನ್ನು ಆಚರಿಸಬೇಕು. ಪಂದ್ಯಾಟಗಳನ್ನು ಏರ್ಪಡಿಸುವದು. ನಾಟಕಗಳನ್ನು ಆಡಿಸುವದು, ಊರ ಜನರ ಹಾಗು ವಿದ್ಯಾರ್ಥಿಗಳ ಭಾಷಣ, ಸಂಗೀತ, ಸ್ಪರ್ಧೆಗಳನ್ನು ಶಾಲೆಯಲ್ಲಿ ಏರ್ಪಡಿಸಬೇಕು. ಮಕ್ಕಳಿಂದ ಪೋಸ್ಟಆಫೀಸ, ರೇಲ್ವೆಸ್ಟೇಶನ್, ದವಾಖಾನೆ ಮುಂತಾದ ಸಣ್ಣ ಸಣ್ಣ ಅಣಕು ಯೋಜನೆಗಳನ್ನು ಮಾಡಿಸಬೇಕು. ಸಹಕಾರಿ ಪದ್ಧತಿಯನ್ನು ಮತ್ತು ಇತರ ವ್ಯವಹಾರವನ್ನು ಕಲಿಯಲು ಅನುಕೂಲವಾಗುವಂತೆ ಶಾಲೆಗಳಲ್ಲಿ ಸಹಕಾರಿ ಭಾಂಡಾರ, ಮಕ್ಕಳ ಬ್ಯಾಂಕು, ಮುಂತಾದವುಗಳನ್ನು ಶಾಲೆಯಲ್ಲಿ ನಡೆಯಿಸಬೇಕು. ಅಂತೂ ಆಯಾ ಶಾಲೆಯ ಪರಿಸ್ಥಿತಿಗನುಸಾರವಾಗಿ ಆದಷ್ಟು ಚಟುವಟಿಕೆಗಳನ್ನು ಯೋಜಿಸಿಕೊಂಡು ಅವುಗಳ ಮೂಲಕ ಮಕ್ಕಳ ಜ್ಞಾನವನ್ನು ಬಳಿಸಿದರೆ ಜೀವನ ಶಿಕ್ಷಣದ ಉದ್ದೇಶಗಳು ಈಡೇರಿದಂತಾಗುವವು. ಅಲ್ಲದೇ ಈ ಶಾಲೆಗಳು ಜೀವನ ಶಿಕ್ಷಣದ ದೀಕ್ಷೆ ಪಡೆದಂತಾಗುವದು.

ಪುಸ್ತಕ ವಿಮರ್ಶೆ

ಹೊಸ ಶಿಕ್ಷಣ : (ನಾಟಕ) ಕ್ರೌನ ೧/೮

ಪುಟಗಳು ೨೦. ಬೆಲೆ ೩೭ ನಯೆಪೈಸೆ.

ನಾಟಕಕಾರರು : ಶ್ರೀ ಎಸ್. ಕೆ. ಜೋಶಿ. ಪ್ರಕಾಶಕರು : ಶ್ರೀ ಜಿ. ಬಿ. ಪಾಟೀಲ. ೨೪೪/೪೬, ಫುಲ್‌ಭಾಗಗಲ್ಲಿ ಬೆಳಗಾಂವ.

ಇದೊಂದು ಎರಡು ದೃಶ್ಯಗಳುಳ್ಳ, ಚಿಕ್ಕ ಏಕಾಂಕ ನಾಟಕವು. ಈ ನಾಟಕದಲ್ಲಿ ಮೂಲ ಶಿಕ್ಷಣದ ಬಗೆಗೆ ಸಾಮಾನ್ಯರಲ್ಲಿ ಇರುವ ಕೆಲವು ತಪ್ಪುಕಲ್ಪನೆಗಳನ್ನೂ ದೂರೀಕರಿಸಿ, ಅದರ ನಿಜವಾದ ತಿಳುವಳಿಕೆಯನ್ನುಂಟು ಮಾಡಲು ಪ್ರಯತ್ನಿಸಲಾಗಿದೆ. ಹಳ್ಳಿಯಲ್ಲಿ ಶಿಕ್ಷಕನೇ ಪ್ರಧಾನ ಪಾತ್ರ. ಆತನು ಇಂದಿನ ಸಾಮಾಜಿಕ ಪರಿಸ್ಥಿತಿಯಲ್ಲಿ ತನ್ನ ಶಿಕ್ಷಣ ಕಾರ್ಯದೊಡನೆ ಹತ್ತಾರು ಪಾತ್ರಗಳನ್ನಾಡಬೇಕಾಗುತ್ತದೆ. ಸಾಮಾಜಿಕರಿಂದ ಬರುವ ತೊಡಕುಗಳನ್ನು ಸಹನೆಯಿಂದ ಎದುರಿಸಿ, ಅವುಗಳನ್ನು ತಾಳ್ಮೆಯಿಂದ ಬಿಡಿಸಬೇಕಾಗುತ್ತದೆ. ಜೀವನ ಶಿಕ್ಷಣದ ಬಗೆಗೆ ಗೌಪರ ಮನಸ್ಸಿನಲ್ಲಿ ಮೂಡಿದ ತಪ್ಪು ಭಾವನೆಯನ್ನು ಶಿಕ್ಷಕರು ಬಿಡಿಸಿ ತೋರಿಸಿದ ಒಂದು ರೀತಿಯನ್ನಿಲ್ಲಿ ನಾವು ಕಾಣುತ್ತೇವೆ. ನಾವು ಕಲಿತವರೆಂದು ತಿಳಿದುಕೊಂಡವರಲ್ಲಿಯೂ ಕೂಡಾ ಪೂರ್ವಗ್ರಹ ದೂಷಿತ ದೃಷ್ಟಿಯಿಂದ-ತಪ್ಪು ತಿಳುವಳಿಕೆ ನೂಡಿರುವದುಂಟು. ಅದನ್ನು ತೊಡೆದು ಹಾಕುವ ಪ್ರಯತ್ನವನ್ನು ನಾಟಕಕಾರರು ಮಾಡಿದ್ದಾರೆ. ಒಟ್ಟಿನಲ್ಲಿ ಜೀವನ ಶಿಕ್ಷಣದ ಬಗೆಗೆ ಸರಿಯಾದ ತಿಳುವಳಿಕೆಯನ್ನು ಉಂಟು ಮಾಡಿಕೊಡುವದೆನ್ನುವದರಲ್ಲಿ ಸಂದೇಹವಿಂದು ಜೀವನ ಶಿಕ್ಷಣ ಸಪ್ತಾಹದ ಆಚರಣೆಯಂಥ ಸಂದರ್ಭಗಳಲ್ಲಿ ಶಾಲೆಯ ಬಾಲಕರು ನೂಡಿ ತೋರಿಸಲು ಒಳ್ಳೆ ನಾಟಕವಾಗಿದೆ. ಇಂಗ್ಲೀಷ ಪದಗಳ ಬಳಕೆ ಹೆಚ್ಚಾಗಿ ಬಂದುದರಿಂದ ಪ್ರಾಥಮಿಕ ಶಾಲೆಯಲ್ಲಿಯ ಮಕ್ಕಳಿಗೆ ತುಸು ಕಠಿಣವೆನಿಸಬಹುದಾಗಿದೆ. ಅದರಂತೆ ಹಳ್ಳಿಯ ಜನತೆಗೂ ಅರ್ಥವಾಗದೇ ಹೋಗಬಹುದು. ಆದರೂ ಇಂಥ ಶಾಲೆಯ ವರ್ಗದಿಂದಲೇ ಇಂಗ್ಲೀಷ ಅಭ್ಯಾಸವು ಪ್ರಾರಂಭವಾಗುವದರಿಂದ ಪ್ರಯೋಗಕ್ಕೆ ಅಷ್ಟೊಂದು ಪ್ರಯಾಸವೆನಿಸಲಿಕ್ಕಿಲ್ಲ. ಒಟ್ಟಿನಲ್ಲಿ ಜೀವನ ಶಿಕ್ಷಣ ಕ್ಷೇತ್ರದಲ್ಲಿ ದುಡಿಯುತ್ತಿರುವವರೆಲ್ಲರೂ ಸಂಗ್ರಹಿಸಬೇಕಾದ ನಾಟಕವು.

ಪಾವನವಾದ ಜೀವನ ಶಿಕ್ಷಣ

— ಸೋಬಾನದ ಪದ —

ರಚಿಸಿದವರು : **ಎಸ್. ಡಿ. ಉಡಿಕೇರಿ,** ಗುರುಗಳು ಕ. ಗಂ. ಜೀ. ಶಿ. ಗುರ್ಲಹೊಸೂರ.

ಏಳುತಲಿ ನಾನು ಯಾರನ್ನ ನೆನೆಯಲಿಕ ಏಳು ಖಂಡಕ್ಕ ಹೆಸರಾದ ..... || ಸೋ ||
ಏಳು ಖಂಡಕ್ಕ ಹೆಸರಾದ ಭಾರತಿಕ ನಾ ನಿನ್ನ ಮೊದಲ ನೆನದೇನ..... || ಸೋ || ೧ ||

ಪುಣ್ಯ ಭೂಮಿಯೆ ಕೊಟ್ಟ ಪವಿತ್ರ ನದಿಗಳ ಕೊಟ್ಟಕ ಮೇಲೆ ಮಿಗಲಾದ ಸಂಪತ್ತ .... || ಸೋ ||
ಮೇಲೆ ಮಿಗಿಲಾದ ಸಂಪತ್ತೆಲ್ಲ ಕೊಟ್ಟಕ ನೀನು ನಮ್ಮನ್ನ ಸಲುಹಿದೆ ..... || ಸೋ || ೨ ||

ಜಾತಿಭೇದದಿಂದ ಸ್ವಾರ್ಥಸಾಧನದಿಂದಕ ಸ್ವಾತಂತ್ರ್ಯ ಸಿರಿಯು ಮರೆಯಾತ ..... || ಸೋ ||
ಸ್ವಾತಂತ್ರ್ಯ ಸಿರಿಯು ಮರೆಯಾಗಿ ಭಾರತಕ ಪಾರತಂತ್ರ್ಯದಿ ಬಳಲೀತ ..... || ಸೋ || ೩ ||

ಪರರ ಆಳಿಕೆಯಿಂದ ಪರದೇಶಿ ನಾವಾಗಿಕ ಪರಿಪರಿತಾಪ ಪಡೆದೇವ ..... || ಸೋ ||
ಪರಿಪರಿ ತಾಪ ಪಡಿಯುವದ ನೀ ಕಂಡುಕ ಶ್ರೀಷ್ಠ ನಿನ ಮಗನ ಕಳುಹಿದೆ ..... || ಸೋ || ೪ ||

ಕಾಲ ಕಾಲಕೆ ನಿನ್ನ ಶ್ರೀಷ್ಠ ಪುತ್ರರು ಬಂದುಕ ಕಷ್ಟದೊಳಗಿದ್ದ ಜನರನ್ನ ..... || ಸೋ ||
ಕಷ್ಟದೊಳಗಿದ್ದ ಜನರನ್ನು ಕಾಪಾಡಿಕ ಕೀರ್ತಿಯ ಉಳಿಸಿ ಹೋದಾರ ..... || ಸೋ || ೫ ||

ಮಹಾತ್ಮಾ ಗಾಂಧೀ ಬಂದ ಸತ್ಯ ಅಹಿಂಸೆ ತಂದಕ ಜಾತಿಭೇದವ ಬಿಡಿರೆಂದ ..... || ಸೋ ||
ಜಾತಿಭೇದವ ಬಿಟ್ಟು ಭಾರತಿಯರುಕ ಐಕ್ಯಭಾವದಲಿ ಬಾಳೆಂದ ..... || ಸೋ || ೬ ||

ಸತ್ಯ ಮಾರ್ಗದಿ ನಡೆದ ಸ್ವಾತಂತ್ರ್ಯ ತಾ ಪಡೆದಕ ನಾಡಿನೇಳ್ಗೆಗೆ ದುಡಿರೆಂದ ..... || ಸೋ ||
ನಾಡಿನೇಳ್ಗೆಗೆ ದುಡಿದು ನೀವೆಲ್ಲರುಕ ಶಾಂತಿ ಸುಖಗಳನು ಪಡಿರೆಂದ ..... || ಸೋ || ೭ ||

ಅನ್ನ ಅರಿವೆಯ ಕೊಡುವ ಉನ್ನತ ಜ್ಞಾನವಕೊಡು ಜೀವನ ಶಿಕ್ಷಣ ಪಡಿರೆಂದ.... || ಸೋ ||
ಜೀವನ ಶಿಕ್ಷಣ ಪಡೆದು ಭಾರತಿಯರುಕ ಪಾವನ ಜೀವಿಯಾಗೆಂದ ..... || ಸೋ || ೮ ||

ಗಳಿಸಿದ ಸ್ವಾತಂತ್ರ್ಯ ಉಳಿಸಿ ಬೆಳೆಸಲು ನಮಗಕ ಜೀವನ ಶಿಕ್ಷಣ ಗತಿಯವ್ವಾ ... . || ಸೋ ||
ಜೀವನ ಶಿಕ್ಷಣ ಕ್ಷೇತ್ರದಿ ದುಡಿಯುವಕ ದಿವ್ಯ ಆತ್ಮರಿಗೆ ಶರಣವ್ವಾ ..... || ಸೋ || ೯ ||

ಪ್ರಕಟನೆ

ಸಾರ್ವಜನಿಕ ಸರಕಾರಿ P. S. C. P., T. C. ಮುಂತಾದ ಪರೀಕ್ಷೆಗೆ ಕೂಡ್ಸಲಿರುವ ಪರಿಶಿಷ್ಟ ಜನಾಂಗ ಹಾಗೂ ಪರಿಶಿಷ್ಟ ವರ್ಗಕ್ಕೆ ಸೇರಿದ ಎಲ್ಲ ವಿದ್ಯಾರ್ಥಿಗಳಿಗೆ ಪರೀಕ್ಷೆಯ ಫೀ ಹಣವನ್ನು ಸರಕಾರಿ ಹುಕಂ ನಂ. Ed· 31 S. M. C. 59 ತಾರೀಖು ೧೯-೧೦-೧೯೫೯ರ ಮೇರೆಗೆ ಮಾರ್ಚ ೧೯೬೦ ರಿಂದ ಮಾಫಿ ಮಾಡಲಾಗಿದೆ.

ಮೇಲಿನ ಸವಲತ್ತನ್ನು ಪಡೆಯಬಯಸುವವರು ಅರ್ಜಿ ಫಾರ್ಮಿನೊಂದಿಗೆ ಈ ಕೆಳಗೆ ಕಾಣಿಸಿದ ಅಧಿಕಾರಿಗಳಲ್ಲಿ ಯಾರೊಬ್ಬರಿಂದ ವಿದ್ಯಾರ್ಥಿಯು ಪರಿಶಿಷ್ಟ ವರ್ಗ ಅಥವಾ ಪರಿಶಿಷ್ಟ ಜನಾಂಗಕ್ಕೆ ಸೇರಿದವನು ಎಂದು ಸರ್ಟಿಫೀಕೇಟನ್ನು ಹಚ್ಚತಕ್ಕದ್ದು.

(೧) ಜಿಲ್ಲೆಯ ಡೆಪ್ಯೂಟಿ ಕಮೀಶನರ.

(೨) ಜಿಲ್ಲೆಯ ಅಸಿಸ್ಟಂಟ ಕಮೀಶನರ.

(೩) ಫಸ್ಟಕ್ಲಾಸ ಮ್ಯಾಜಿಸ್ಟ್ರೇಟ.

(೪) ಅಸಿಸ್ಟಂಟ ಡಾಯರೆಕ್ಟರ ಆಫ್ ಸೊಸಿಯಲ್ ವೆಲ್‌ಫೇರ.

(೫) ಡಿಸ್ಟ್ರಿಕ್ಟ ಬ್ಯಾಕವರ್ಡ ಕ್ಲಾಸ ವೆಲ್‌ಫೇರ ಆಫೀಸರ. (ಗ್ಯಾಜಿಟೆಡ್ ಆಫೀಸರ ಇದ್ದರೆ ಮಾತ್ರ)

(೬) ತಹಶೀಲದಾರ.

(೭) ಬ್ಲಾಕ ಡೆವಲಪ್‌ಮೆಂಟ ಆಫೀಸರ.

(೮) ಮೆಂಬರ್ಸ ಆಫ್ ಪಾರ್ಲಮೆಂಟ, ಲೇಜಿಸ್ಲೇಟಿವ್ಹ ಅಸೆಂಬ್ಲಿ, ಮತ್ತು ಲೇಜಿಸ್ಲೇಟಿವ್ಹ ಕೌನ್ಸಿಲ್ಲ.

ಪರೀಕ್ಷೆಯ ಫೀ ಹಣವನ್ನು ಚಲನ ಮುಖಾಂತರ ಮಾತ್ರ ಸ್ವೀಕರಿಸಲಾಗುವದು ಕಾರಣ ಫೀ ಹಣವನ್ನು ಬ್ಯಾಂಕುಗಳಲ್ಲಾಗಲಿ ಅಥವಾ ಸಬ್‌ಟ್ರೇಜರಿಯಲ್ಲಾಗಲೀ "XXVI ಎಜ್ಯುಕೇಶನ್ ಎಕ್ಸಾಮಿನೇಶ್ ಫೀಜ" ಈ ಸದರಿನ ಅಕೌಂಟಿಗೆ ತುಂಬಿ ಅರ್ಜಿ ಫಾರ್ಮಿನೊಂದಿಗೆ ಚಲನ ಪ್ರತಿಯನ್ನು ಕಳಿಸಬೇಕು. ಅರ್ಜಿ ಫಾರ್ಮಿನೊಂದಿಗೆ ಚಲನ ಪ್ರತಿ ಇಲ್ಲದೆ ಹೋದರೆ ಅರ್ಜಿಗಳನ್ನು ಲೆಕ್ಕಕ್ಕೆ ಹಿಡಿಯಲಾಗುವದಿಲ್ಲ. ಒಂದು ವೇಳೆ ಪರಿಶಿಷ್ಟ ವರ್ಗ ಅಥವಾ ಪರಿಶಿಷ್ಟ ಜನಾಂಗಕ್ಕೆ ಸೇರಿದವರಿದ್ದರೆ ಅರ್ಜಿಯ ಮೇಲ್ಭಾಗದಲ್ಲಿ ಅದನ್ನು ಬರೆಯಬೇಕು. ಮತ್ತು ಅರ್ಜಿಗಳಿಗೆ ಮೇಲ್ಕಾಣಿಸಿದ ಅಧಿಕಾರಿಗಳ ಸರ್ಟಿಫೀಕೇಟ ಹಚ್ಚಿ ಕಳಿಸತಕ್ಕದ್ದು.

Regd. No. B. 5375

ಭಾಗ ೧ ಕವಿತಾ ಸಂಕಲನ ೧೫೦ **ನಾವು ನಮ್ಮವರು** ಭಾಗ ೨ ಕಥಾ ಸಂಕಲನ ೧೫೦

(ಪ್ರಾಥಮಿಕ ಶಿಕ್ಷಕ ಸಾಹಿತಿಗಳ ಫೋಟೊ ಪರಿಚಯ ಕಥೆ ಕವನಗಳು)

ಮಾನ್ಯ ಎ. ಸಿ. ಪೇನೇಗೌಡರು ಶಿಕ್ಷಣಾಧಿಕಾರಿಗಳು [D. P. I.] ಮೈಸೂರು ರಾಜ್ಯ ಅವರ ಮುನ್ನುಡಿ.

ಮಾನ್ಯ ಸಿದ್ಧಯ್ಯ ಪುರಾಣಿಕ 'ಕಾವ್ಯಾನಂದ'ರು ಡಿ. ಸೆಕ್ರೆಟರಿ ಶಿಕ್ಷಣ ವಿಭಾಗ ಇವರ ಹಿನ್ನುಡಿಗಳು.

- ಕೇವಲ ೩ ರೂಪಾಯಿ [ಅಂಚೆಸೇರಿ] ವಾರ್ಷಿಕ ಚಂದಾ ಹಣದಲ್ಲಿ ೩ನೆಯ ಮಾಲೆಯ ೧–೩ನೆಯ ಕುಸುಮ ಪಡೆಯಿರಿ.
- ಪ್ರಾಥಮಿಕ ಶಿಕ್ಷಕರ ಕಥೆ, ಕಾದಂಬರಿ, ಕವನ, ನಾಟಕಾದಿ ಕೃತಿಗಳು ೪೦೦ ಪುಟಗಳಲ್ಲಿ.
- ಆಗಷ್ಟ ದಿಂದ ಆಗಷ್ಟಕ್ಕೆ ಒಂದು ವರುಷ
- ಬಿಡಿ ಕುಸುಮ ಚಂದಾದಾರರಿಗೆ ೫ ಜೆಲಿಯಲ್ಲಿ [ಅಂಚೆಜೇರಿ]
- ವರ್ಷದ ಮಧ್ಯದಲ್ಲಿ ಚಂದಾದಾರರಾದರೂ ಆ ವರ್ಷದ ಎಲ್ಲ ಪುಸ್ತಕಗಳು ದೊರೆಯುವವು.
- ಇಂದೇ ಚಂದಾಹಣ ಕಳಿಸಿ ತಮ್ಮದೇ ಆದ ಶಿಕ್ಷಕರ ಬಳಗವು ಬೆಳೆವಂತೆ ನೆರವಾಗಿರಿ. ಈ ಅಲ್ಪ ಹಣ ತಮ್ಮ ಶಿಕ್ಷಕ ಮಿತ್ರರ ಏಳ್ಗೆಗೆ ಮೀಸಲು. ಗೆಳೆಯರನ್ನು, ವಾಚನಾಲಯಗಳನ್ನು ಚಂದಾದಾರರನ್ನು ಮಾಡಿ ನೆರವಾಗಿರಿ.

ವಿವರಗಳಿಗೆ: **ಭಾರತೀ ಸಾಹಿತ್ಯ ಭಂಡಾರ** ಅಂಚೆ: **ಯರನಾಳ** ಜಿಲ್ಲೆ: **ಬಿಜಾಪುರ**

ಕಲ್ಯಾಣ ಕನ್ನಡ ಗುಡಿಯ ಕಾಣಿಕೆ

ಸುವರ್ಣ ಸಂಧಿ! ಸಚಿತ್ರ ಗ್ರಂಥ!! ಸುಂದರ ಮುದ್ರಣ!!!

"ಶಿಕ್ಷಣ–ಶಿಕ್ಷಕ–ದರ್ಶನ"

ಶಿಕ್ಷಕರಿಗೂ, ಶಿಕ್ಷಕ ವಿದ್ಯಾರ್ಥಿಗಳಿಗೂ, ಶಿಕ್ಷಣಾಭಿಮಾನಿಗಳಿಗೂ, ಉಪಯುಕ್ತವಾಗುವಂಥ, ತನು–ಮನ ತಣಿಸುವಂಥ, **ಶಿಕ್ಷಣ ತಜ್ಞರಿಂದ ಪರಿಶೀಲಿಸಲ್ಪಟ್ಟಂಥ, ಭಾರತದಲ್ಲಿಯ ಮಾನ್ಯ ಮಂತ್ರಿವರ್ಯರಿಂದ, ರಾಜ್ಯಪಾಲರಿಂದ, ಶಿಕ್ಷಣಾಧಿಕಾರಿಗಳಿಂದ, ಪ್ರಿನ್ಸಿಪಾಲರಿಂದ, ಸಾಹಿತಿಗಳಿಂದ ಪ್ರಶಂಸೆ ಪಡೆದ ಅಭಿಪ್ರಾಯಗಳುಳ್ಳಂಥ, ಕರ್ನಾಟಕ ವಿಶ್ವವಿದ್ಯಾಲಯದ ಉಚ ಕುಲಪತಿಗಳಾದ ರ್ಯಾಂಗ್ಲರ್ ಶ್ರೀ ಡಿ. ಸಿ. ಪಾವಟೆಯವರು ಮುನ್ನುಡಿ ಬರೆದಂಥ, ಅನೋಘ ಗ್ರಂಥ.**

ಶ್ರೀ ನಿಂಬಾಳ ಶಿಕ್ಷಕ ದಂಪತಿಗಳಿಂದ ಸಂಗ್ರಹಿಸಲ್ಪಟ್ಟಿದೆ. ಅಖಿಲ ಕರ್ನಾಟಕದ ಗಣ್ಯ ಶಿಕ್ಷಕ–ಶಿಕ್ಷಕಿಯರ ಬಣ್ಣ ಬಣ್ಣಗಳಲ್ಲಿ ೪೧ ಫೋಟೊ ಬ್ಲಾಕ್, ಲೇಖನ, ಪರಿಚಯಗಳುಳ್ಳಂಥ ೪೭೫ ಪುಟಗಳ ಅಮರ ಸಾಹಿತ್ಯ ಗ್ರಂಥ **ಕನ್ನಡದಲ್ಲಿ ಒಂದು ಉತ್ತಮ ಮಾದರಿಯ ಶೈಕ್ಷಣಿಕ ಉದ್ಗ್ರಂಥ.**

ದಿ. ೧೫ ಆಗಸ್ಟ ಸ್ವಾತಂತ್ರ್ಯ ದಿನದಂದು ಮಾನ್ಯ ಶ್ರೀ ಎ. ಎಚ್. ದಳವಾಯಿ, ಎ. ಓ. ಸಾಹೇಬರ ಅಧ್ಯಕ್ಷತೆಯಲ್ಲಿ ಪ್ರೊ. ಬಿ. ಟಿ. ಸಾಸನೂರ ಇವರ ಅಮೃತಹಸ್ತದಿಂದ ಈ ಗ್ರಂಥ ಪ್ರಕಾಶನಗೊಂಡಿದೆ.

ವಿವರಗಳಿಗೆ ಇಂದೇ ಈಗಲೇ ಬರೆಯಿರಿ.

ಸಾದಾ ಪ್ರತಿ ೩ ರೂ.] ವ್ಯಾಪಾರಸ್ಥರಿಗೆ ಧಾರಾಳವಾದ ಕಮೀಷನ್. **[ಸುಂದರ ಪ್ರತಿ ೪ ರೂ**

ವಿಳಾಸ :– ಶ್ರೀ ನಿಂಬಾಳ ಕಲ್ಯಾಣಪ್ಪ, ಪೋಸ್ಟ:— ತಾಂಬಿ, ಜಿಲ್ಲಾ:— ವಿಜಾಪುರ.

Printed by Shri S. F. Kattimani, at Manohar Power Printing Press, Hubli.
Edited & Published by Sjts. G. M. Joshi, B. M. Shintri, S. R. Tatti & Smt. P. A. Bhaskar at the Kannada Jeevan Shikshan Office, Govt. Training College for Men, Dharwar

Completion of

Jeevana Shikshana

Completion of

Jeevana Shikshana

Completion of

Jeevana Shikshana

END

END

END

END

END

ಪಟ್ಟಿ ನಂ. 1ರ ಪ್ರತಿಯ ಅನುವಾದ.

ವಿಷಯ:- ಮಾ. ಹೆಚ್.ಕೃಷ್ಣಪ್ಪನವರಿಗೆ ಇನಾಮಾಗಿ ಜಮೀನು ಮಂಜೂರು ಮಾಡಿರುವ ಬಗ್ಗೆ.

ಲೆ. ನಂ. 1647 ದಿನಾಂಕ 22.4.90.

1) ಮೇಲಾಧಿಕಾರಿಯವರ ಸೂಚನೆಯಂತೆ ಈ ಕೆಳಕಂಡ ವಿವರಗಳನ್ನು ತಮಗೆ ತಿಳಿಸಲಾಗಿದೆ. ಸರ್ವೆ ನಂ. 1 ಹೊಸಕೋಟೆ ಹೋಬಳಿಯ ಸರ್ವೆ ನಂ. 1ರಲ್ಲಿ ಒಟ್ಟು 2 ಎಕರೆ 18 ಗುಂಟೆ ಜಮೀನು ಇರುತ್ತದೆ. ಇದನ್ನು ಮಾ. ಹೆಚ್.ಕೃಷ್ಣಪ್ಪನವರಿಗೆ ಇನಾಮಾಗಿ ಮಂಜೂರು ಮಾಡಲಾಗಿದೆ.

2) 1866ನೇ ಇಸವಿಯಲ್ಲಿ ಮಾ. ಹೆಚ್.ಕೃಷ್ಣಪ್ಪನವರಿಗೆ ಇನಾಮಾಗಿ ಮಂಜೂರು ಮಾಡಿದ್ದ ಜಮೀನಿಗೆ ಸಂಬಂಧಿಸಿದಂತೆ ಸರ್ಕಾರಕ್ಕೆ ಸಲ್ಲಿಸಿದ್ದ ಅರ್ಜಿಯ ಮೇರೆಗೆ ಈ ಜಮೀನಿನ ಸರ್ವೆ ಕಾರ್ಯವನ್ನು ಕೈಗೊಳ್ಳಲಾಗಿತ್ತು. ಈ ಸರ್ವೆಯಲ್ಲಿ ಒಟ್ಟು 125 ಪಟ್ಟೀದಾರರಲ್ಲಿ ಜಮೀನನ್ನು ಹಂಚಿಕೆ ಮಾಡಲಾಗಿದ್ದು, ಪ್ರಸ್ತುತ ಸರ್ವೆಯಲ್ಲಿ ಈ ಜಮೀನಿನ ಸರ್ವೆ ನಂ. 1ರಲ್ಲಿ ಒಟ್ಟು 125 ಪಟ್ಟೀದಾರರಿದ್ದು, ಅವರುಗಳಿಗೆ ಸೇರಿದ ಜಮೀನನ್ನು ಸರ್ವೆ ಮಾಡಲಾಗಿದೆ. ಈ ಪಟ್ಟೀದಾರರ ವಿವರಗಳನ್ನು ಪ್ರತ್ಯೇಕ ಪಟ್ಟಿಯಲ್ಲಿ ಮೇಲಧಿಕಾರಿಗಳ ಅವಲೋಕನಕ್ಕಾಗಿ ಸಲ್ಲಿಸಲಾಗಿದೆ.

3) ಹಾಗೂ ಈ ಜಮೀನಿನ ಸರ್ವೆ ನಂ. 1ರಲ್ಲಿ ಸೇರಿದ್ದ ಸರ್ಕಾರಿ ಬೀಳಿನ ಜಮೀನನ್ನು ಸಹ ಸರ್ವೆ ಮಾಡಲಾಗಿದೆ. ಇದರ ವಿವರಗಳನ್ನು

ಮಕ್ಕಳಿಗೆ ಸಂಪೂರ್ಣವಾಗಿ ಲಸಿಕೆ ಹಾಕಿಸಿರಬೇಕು. ಇಲ್ಲದಿದ್ದಲ್ಲಿ ಮಕ್ಕಳಿಗೆ ಲಸಿಕೆ ಹಾಕಿಸಿರುವ ಬಗ್ಗೆ ಸಂಬಂಧಪಟ್ಟ ವೈದ್ಯಾಧಿಕಾರಿಗಳಿಂದ ಪ್ರಮಾಣ ಪತ್ರವನ್ನು ಪಡೆದು ಹಾಜರುಪಡಿಸಬೇಕು. ಮಕ್ಕಳಿಗೆ ಲಸಿಕೆ ಹಾಕಿಸಿರುವ ಬಗ್ಗೆ ಪ್ರಮಾಣ ಪತ್ರವನ್ನು ಪಡೆಯಲು ಸಾಧ್ಯವಾಗದಿದ್ದಲ್ಲಿ ಮಕ್ಕಳಿಗೆ ಲಸಿಕೆ ಹಾಕಿಸಿರುವ ಬಗ್ಗೆ ಸಂಬಂಧಪಟ್ಟ ವೈದ್ಯಾಧಿಕಾರಿಗಳಿಂದ ಪ್ರಮಾಣ ಪತ್ರವನ್ನು ಪಡೆದು ಹಾಜರುಪಡಿಸಬೇಕು.

4) ಈಜು ಕಾರ್ಯಾಚರಣೆ ನಡೆಯುವ ಸ್ಥಳದಲ್ಲಿ ಅಗತ್ಯ ಸೌಲಭ್ಯಗಳನ್ನು ಕಲ್ಪಿಸಿಕೊಡಬೇಕು. ಮುಂದಿನ ಸೌಲಭ್ಯಗಳನ್ನು ಕಲ್ಪಿಸಿಕೊಡಲು ಸೂಚಿಸಲಾಗಿದೆ.

1) ಮಾನ್ಯ ಸಕ್ಷಮ ಪ್ರಾಧಿಕಾರ ಮತ್ತು ಪೊಲೀಸ್ ಇಲಾಖೆ ಅಧಿಕಾರಿಗಳನ್ನು ಮೆರವಣಿಗೆಯಲ್ಲಿ ಕರೆದುಕೊಂಡು ಬರಲು ಸೂಕ್ತ ವಾಹನ ವ್ಯವಸ್ಥೆ ಮಾಡಿಕೊಡಬೇಕು.

(2) ಮುಂದಿನ ಹಿರಿಯ ಮತ್ತು ಕಿರಿಯ ಈಜುಪಟುಗಳನ್ನು ಮತ್ತು ಮಕ್ಕಳನ್ನು ಕರೆತರಲು ಸೂಕ್ತ ವಾಹನಗಳನ್ನು ಮೆರವಣಿಗೆಯಲ್ಲಿ ಕರೆದುಕೊಂಡು ಬರಲು ಸೂಕ್ತ ವಾಹನ ವ್ಯವಸ್ಥೆ ಮಾಡಿಕೊಡಬೇಕು. ಅಲ್ಲದೆ ಈಜು ಕಾರ್ಯಾಚರಣೆ ನಡೆಯುವ ಸ್ಥಳದಲ್ಲಿ ಅಗತ್ಯ ಸೌಲಭ್ಯಗಳನ್ನು ಕಲ್ಪಿಸಿಕೊಡಬೇಕು. ಉದಾಹರಣೆಗೆ ಕುಡಿಯಲು 1000 ಲೀ/ಅವಶ್ಯಕ ನೀರನ್ನು ಪೂರೈಸಿಕೊಡಲು ಸೂಚಿಸಲಾಗಿದೆ.

ವಿಶ್ವಾಸದಿಂದ

ಸಹಿ/-

24/1

6) ನಗ್ರೇಯ ಬೀಜ ಪ್ರಮಾಣಪತ್ರವನ್ನು ಇಲಾಖೆಗೆ ಸಲ್ಲಿಸಿ ಕೊಪ್ಪ ರಿಜಿಸ್ಟ್ರಿಯ ವಿಶ್ವಸ್ಥ ಪತ್ರಗಳಿಂದ ರಿಜಿಸ್ಟ್ರಿ ಮಾಡಿಸಿ ಪ್ರಮಾಣ ಪತ್ರವನ್ನು ಪಡೆಯಲು ತಿಳಿಸಿದೆ.

7) ಕಾರ್ಯಕ್ರಮವನ್ನು ಸಿದ್ಧಪಡಿಸಲಾಯಿತು.

8) ಮುಂದಿನ ಮಾಹಿತಿಯನ್ನು ಪಡೆಯಲು ಕೋರಿದೆ.

ಮಾ.ಇ.ಸಂಖ್ಯೆ: 4421 ದಿನಾಂಕ 26/10/90

9) ಕೊಪ್ಪದಲ್ಲಿ ಪ್ರಾಯೋಗಿಕ ಕೇಂದ್ರ ಪ್ರಾರಂಭಿಸಲು ಸಿದ್ಧತೆಗಳನ್ನು ಕೈಗೊಳ್ಳಲಾಗಿದೆ.

ವಿ.ವಿ)